1. ಗಿರಿಜಾ ಕಲ್ಯಾಣಂ
2. ಭಿಕ್ಷಾಟನ ಚರಿತೆ
3. ಉದ್ಭಟ ಕಾವ್ಯಂ

ಗಿರಿಜಾಕಲ್ಯಾಣಂ.

॥ ಕಥಾಗರ್ಭಂ ॥

ಸ್ವಸ್ತಿ ಸಮಸ್ತಸಮುದ್ರಮುದ್ರಿತಧರಣೀಕಾಂತಾನಾಭೀಕಮಲಮಧ್ಯಸ್ಥಿತಕರ್ಣಿಕೆಯಂತಿರ್ಪ ಮೇರುವಿನ ದಕ್ಷಿಣದಿಕ್ಕಿನಲ್ಲಿ ಮೂಡಣ ಜಲಧಿಯಿಂ ಪಶ್ಚಿಮವಾರ್ಧಿಪರ್ಯಂತಂ ಪರ್ವಿದ ಪರ್ವತಾಧೀಶಂ ಗಿರಿರಾಜನೆಂಬ ನಾಮದಿಂದೋಷಧಿಪ್ರಸ್ಥಮೆಂಬ ಪುರದೊಳಿರ್ದು ಪಿತೃಗಳ ಮನದೊಳ್ ಪುಟ್ಟಿದ ಮೇನಾದೇವಿಯಂ ವಿವಾಹಮಾಗಿ ಮೈನಾಕನೆಂಬ ಪುತ್ರನಂ ಪಡೆದು, ಪಲವುದಿನಂ ಸುಖದೊಳಿರುತ್ತುಂ; ದಾಕ್ಷಾಯಿಣಿ ತನ್ನ ಬಸಿಱೊಳ್ ಬರ್ಪ ವರಮಂ ಬಯಸಿ ಮೇನೆ ತಪದೊಳಿರಲ್: ಇತ್ತಲ್ ದಾಕ್ಷಾಯಿಣಿ ದಕ್ಷಯಾಗಕ್ಕೆ ಬಿಜಯಂಗೆಯ್ದು ನಿಜೇಶನ ನಿಂದೆಯಂ ಕೇಳಲಾಱದೆ ನಿಜಯೋಗದೊಳ್ ಸಂದು ಮೇನೆಯ ಪುಣ್ಯೋದರದೊಳ್ ಪೊಕ್ಕು ಕರುಣದಿಂ ಬಂದಪೆನೆಂದು ಬೆಸಸೆ, ಮೇನೆಯುಱಿದು ಪರಮಹರ್ಷದಿಂ ತಿರಿಗಿ ಪುರಮಂ ಪೊಕ್ಕು ಗಿರಿರಾಜನ ಸಂಗಸುಖಮಂ ಸೂದುನ್ ಮಂಗಳಾಕಾರೆಯಾಗಿರೆ; ಕೆಲವು ದಿನಕ್ಕೆ ಗರ್ಭಮುದಯಿಸಿ ನವಮಾಸಂ ತೀವಿ ಕನ್ಯಾರತ್ನಮಂ ಪಡೆದು, ಜಾತಕರ್ಮಮನನುಕರಿಸಿ, ಪಾರ್ವತಿಯೆಂದು ನಾಮಕರಣಮಂ ಮಾಡಿ, ಪರಮಕಾರುಣಿಕೆಯೆಂದಱಿಯದೆ ಪುತ್ರಿಯೆಂಬ ಪ್ರೇಮದಿಂ ಮಂದಿವಾಳತನದಿಂ ಸಲಪುತ್ತಿರೆ, ಬಾಲಲೀಲೆಯಂ ಕಳೆದು ದಿವ್ಯಕನ್ಯಕೆಯಾಗಿರ್ಪಲ್ಲಿ ಗಿರಿರಾಜಂ ಹರ

ನರಸಿಯೆಂಬುದಂ ಮಱೆದು ಪುತ್ರೀವಿವಾಹಸದೃಶವರಾಪೇಕ್ಷಚಿತ್ತನಾಗಿರ್ಪ ಸಮಯದೊಳ್ ದೇವಲೋಕದಿಂ ನಾರದಮಹಾಮುನಿಯಿೞಿತಂದು ಗಿರಿಜಾತೆಯಂ ಕಂಡು ಚರಣಕ್ಕೆಱಗಿ,– ಈ ಮಹಾಮಹಿಮನಿಧಿಯಪ್ಪ ಪಾರ್ವತಿಯಂ ನಿಮ್ಮ ಮಗಳೆಂಬುದಾಸೀನಂಬ ಬೇಡ; ವಿರೂಪಾಕ್ಷನರ್ಧಾಂಗಿ ಸರ್ವಕಾರಣದಿಂ ಮೇನೆಯ ತಪಸ್ಸಿಂಗೆ ಕರುಣಿಸಿ ನಿಮ್ಮುದರದೊಳ್ ಬಂದಳ್. ಈ ಹೈಮವತಿಯಂ ಹೇಮಕೂಟದೊಳ್ ನಿಜಾವಲೋಕನಸಮಾಧಿಷ್ಠನಾಗಿರುತಿರ್ಪ ಸರ್ಪಾಭರಣನಲ್ಲಿಗೆ ಕಳಿಪುವುದೆಂದು ನಾರದಮುನಿ ಪೇೞ್ದು ಪೋಗೆ; ನಗಾಧೀಶಂ ಮಿಗೆ ವಿಸ್ಮಿತನಾಗಿ ಪಾರ್ವತಿಯಂ ಪುಷ್ಪಕಮನೇಱಿಸಿ ಜಯೆ ವಿಜಯೆಯೆಂಬ ವಿಳಾಸಿನಿಯರ್ ಸಹಿತಂ ಗಗನಮಾರ್ಗದೊಳೈತಂದು ಹೇಮಕೂಟದೊಳಿೞಿದು ಹರನಂ ತೋಱಿ ಗಿರಿರಾಜಂ ಮರಳ್ದು ಪೋಗೆ; ನಿತ್ಯಪೂಜಾಸಕ್ತೆಯಾಗಿ ಗಿರಿಜೆ ಶಿವಪ್ರಸಾದಮಂ ಬಯಸಿ ಭಕ್ತಿಯಿಂದರ್ಚಿಸುತ್ತುಮಿರಲಿತ್ತಲ್ ತಾರಕಾಸುರನ ಬಾಧೆಗಾಱದೆ ಹರಿಬ್ರಹ್ಮೇಂದ್ರಾದಿದೇವರ್ಕಳ್ ಕಾದಿ ಸೋಲ್ತು ಮಂತ್ರಾಲೋಚನೆಯೊಳಿರ್ದು ಸುರಗುರುವಂ ಕಳಿಪಿ ಕಾಮನಂ ಕರೆಯಿಸಿ– ಹರನ ಚಿತ್ತಮಂ ಚಲಿಯಿಸಿ ಕಡುತಪಮಂ ಕೆಡಿಸೆಂದು ಪೇೞೆ, ಪಸಾದಮೆಂದು ತನ್ನ ಚತುರಂಗಬಲಂ ಬೆರಸು ಬಂದು ಹೇಮಕೂಟಮಂ ಸುತ್ತಿ ಮುತ್ತೆ ನಂದೀಶ್ವರನ ನಸುಗೋಪದಿಂ ಬಲಮೆಲ್ಲಂ ಮಾಯಮಾಗೆ, ನಿತ್ಯಪೂಜೆಗೆ ಬರ್ಪ ಪಾರ್ವತೀದೇವಿಯರನುಮತಿಯಿಂ ಪುಷ್ಪಕದ ನೆೞಲೊಳಡಂಗುತ್ತೊಳಗಂ ಪೊಕ್ಕು ಮತಂಗಪರ್ವತಮನೇಱಿ ಪಂಚಮುಖನಂ ಪಂಚಬಾಣದಿಂದಿಸಲೊಡಂ ವಿಷಧರನೆೞ್ಚೆತ್ತು ಕಣ್ದೆಱೆದು ಮುಂದಿರ್ದ ಪಾರ್ವತಿಯಂ ಕಂಡು ಕೌತುಕಂಗೊಂಡು ತಿರಿಗಿ ನೋಡಿ ಕಾಮಂಗೆ ಕೋಪಿಸುವಲ್ಲಿಂ ಮುನ್ನ ಭಾಳಲೋಚನಾಗ್ನಿಯಿಂ ಪಂಚಶರನುರಿದು ನಿಲೆ ಪರಿತಂದು ಪದತಳದಿಂ ತುೞಿದು ಸ್ಮರಭಸ್ಮಮಯನಾಗಿ ದೇವಿಯ್ಯುರಿರವಂ ನೋಡಡೆ ಕಂತುಹರಂ ಅಂತರ್ಧಾನಕ್ಕೆ ಸಂದುದಂ ಗಿರಿಜೆಯಱಿದು ಶೋಕಿ

ಸುವ ರತಿಗಭಯಮನಿತ್ತು ಭರ್ಗನರಸಿಯುಗ್ರತಪದೊಳ್ ದಿವ್ಯಸಹಸ್ರಾಬ್ದಮಿರೆ ತಪಸ್ತೇಜಂ ಕಪರ್ದಿಯಂ ಮುಟ್ಟೆ ಶಂಕರನಱಿದು ಭೋಂಕನೆ ಬಂದು ಗಿರಿಜೆಯ ಚಿತ್ತಮಂ ಪರೀಕ್ಷಿಸಿ ನಿಜರೂಪಮಂ ತೋಱಿ ರತಿದೇವಿಗೆ ಕಾಮನನನಂಗನಂ ಮಾಡಿ ಕೊಟ್ಟು ಪಾರ್ವತಿಯಂ ಗಿರಿರಾಜನಲ್ಲಿಗೆ ಕಳುಹಿ ಕೈಲಾಸಕ್ಕೆ ಬಂದು ಹರಿಬ್ರಹ್ಮೇಂದ್ರಾದಿದೇವಗಣಂಗಳಂ ಸಕಲ ಋಷಿಯರ್ಗಂ ಕೂಡಿಕೊಂಡು ಶೂಲಧರಂ ಶೈಲರಾಜನಲ್ಲಿಗೆ ವಂದು ಪಾರ್ವತಿಯಂ ಮಹೋತ್ಸಾಹದಿಂ ವಿವಾಹವಾಗಿ ಕೈಲಾಸಕ್ಕೆ ನಡೆತಂದು ಸುಖದೊಳಿರ್ದು ಪುಟ್ಟಿದ ಷಡಾನನನಿಂ ತಾರಕಾಸುರನಂ ತೀರ್ಚಿಸಿ ಸಕಲಲೋಕಕ್ಕೆ ಸಂತಸಮನೊಡರ್ಚಿಸಿ ಕಂತುಮರ್ದನಂ ಪಂಪಾವಿರೂಪಾಕ್ಷಂ ಸುಖಸಂಕಥಾವಿನೋದದಿಂ ಸಕಲಭಕ್ತರ್ಗೆ ವರಮಂ ಕರುಣಿಸುತಿರ್ದನೆಂಬ ಗಿರಿಜಾಕಲ್ಯಾಣಕಥಾಕಾವ್ಯಮಂ ಹಂಪೆಯ ಮಾದರಸರ ಕಾರುಣ್ಯದ ಶಿಶುವಪ್ಪ ಹಂಪೆಯ ಹರಿಹರಂ ಬಿನ್ನಪಂಗೈದಂ.

ಈ ಪ್ರಬಂಧಮಂ ಸಕಲಭಕ್ತರ್ ಸುಚಿತ್ತದಿಂದವಧರಿಪ್ಪುದು. ಅದೆಂತೆಂದೊಡೆ:—

ಕಥಾಪ್ರಾರಂಭಂ

॥ ಪ್ರಥಮಾಶ್ವಾಸಂ ॥

—ಹೈಮಾಚಲವರ್ಣನಂ—

ಶ್ರೀಮಚ್ಛೈಲೇಂದ್ರಪುತ್ರೀಗುರುತರಸುರತಕ್ಷೀರವಾರಾಶಿಚಂದ್ರಂ ।
ವ್ಯೋಮಾರ್ಕೇಂದುಕ್ಷಮಾತ್ಮಾನಲಜಲತಪವಮಾನಾಷ್ಟಮೂರ್ತಿಪ್ರಸಿದ್ಧಂ ॥
ಪ್ರೇಮಂಬೆತ್ತೀಗೆ ಸದ್ಭಕ್ತಿಯನೆಮಗಮರಾನೀಕಮಾಣಿಕ್ಯಮೌಳಿ ।
ಸ್ತೋಮಾಂಘ್ರಿದ್ಯೋತಿ ಪಂಪಾಪುರದರಸ ವಿರೂಪಾಕ್ಷನಾನಂದದಿಂದಂ ॥೧॥

ಗೌರೀಪಾದಾಂಗುಲೀಕೋರಕಮೆಸೆವ ಕರಂ ಪಲ್ಲವಂ ಪುಷ್ಪವೃಂತಾ ।
ಕಾರಂ ಮಂದಸ್ಮಿತಂ ಶಾಖೆಗಳಮರ್ದ ಭುಜಾನೀಕಮಾಸ್ಯಂ ಫಲಂ ಶ್ರೀ ॥
ಸಾರಂ ತಾನಾದ ಪಂಪಾಪುರದರಸ ವಿರೂಪಾಕ್ಷಕಲ್ಪಾಘ್ರಿಪಂ ವಿ ।
ಸ್ತಾರಂಬೆತ್ತೀಗೆ ಸದ್ಭಕ್ತಿಯನೆಮಗಮೃತಪ್ರಾಯಮಂ ಪ್ರೀತಿಯಿಂದಂ ॥೨॥

ಶ್ರೀಹೇಮಾದ್ರೀಂದ್ರಚೂಡಸ್ಥಿರಕರಣಸಮಾರೂಢಪದ್ಮಾಸನಸ್ಥಂ ।
ಕೋಹಂಸೋಹಂಗಳೆಂಬಾಗಜಿಬಜಿ ಪುಗದಾನಂದಸಂವಿತ್ತು ಕಂದ ॥
ರ್ಪಾಹಂಕಾರಪ್ರವಿಧ್ವಂಸನಕರನಿಟಿಲಾಕ್ಷಂ ಶಿವಂ ಪಾರ್ವತೀಶಂ ।
ನೇಹಂ ಕೈಮುಕ್ಕು ಪಂಪಾಪುರಪತಿ ದಯೆಯಿಂ ನೋಡಿ ರಕ್ಷಿಕ್ಕೆಯೆಮ್ಮಂ ॥

ಮಂಗಳಮೂರ್ತಿ ಮಾನಿನಿ ಮಹೋಜ್ಜ್ವಳೆ ಮಾನ್ಯೆ ಮಹಾಮಹೇಶನ
ರ್ಧಾಂಗಿ ಮಹೋವಿರಾಜಿತೆ ಮಹಾಶಿವಭಕ್ತೆ ಮಹಾಪತಿವ್ರತೋ ॥
ತ್ತುಂಗೆ ಮಹಾತ್ರಿಲೋಚನೆ ಮಹಾನಿಧಿ ತನ್ನ ವಿವಾಹವರ್ಣನಾ ।
ಸಂಗತಿಯೆಂದು ಮತ್ಕೃತಿಗೆ ಪಾರ್ವತಿ ಮಾಳ್ಕೆ ಮಹೋತ್ಸವಂಗಳಂ ॥೪॥

ಎನ್ನೀಕಾವ್ಯಕ್ಕೆ ನಿರ್ವಿಘ್ನದಿನತುಳನವೀನಾರ್ಥವಾಕ್ಯಪ್ರಸನ್ನೋ ।
ತ್ಪನ್ನಾಲಂಕಾರಮಂ ಕೂಡುಗೆ ವಿಪುಳಕಪೋಳಸ್ಥಳಾಂತಸ್ಥಳೀಸಂ ॥
ಭಿನ್ನೋದ್ಯದ್ದಾನಧಾರಾಪ್ರಬಳಪರಿಮಳಾಸಕ್ತಭೃಂಗಾವಳೀಸಂ ।
ಪನ್ನಪ್ರೋದ್ಗೀತಝಂಕಾರಿತರವಮುದಿತಾನಂದವೇಶಂ ಗಣೇಶಂ ॥೫॥

ಪುಳಕವನುನೆಬ್ಬಿಸುತ್ತೆ ಹರನಂ ಪರಿವಸ್ಪ್ರತೆ ಸಂತಸಂಗಳಂ ।
ಬಳೆಯಿಸುತಂ ಭವಾನಿಯ ಪಯೋಧರವಂ ನಲಿದುಂಡು ವಕ್ತ್ರವಂ ॥
ದಳಮನಲರ್ಚುತುಂ ನಗುವ ಹೊಂಗುವ ಹಿಗ್ಗುವ ಪೋಣ್ಮುವುಣ್ಮುವ ।
ಗ್ಗಳಸುನ ಪಾಡುವಾಡುವ ಷಡಾನನನೀಕೃತಿಗೀಗೆ ರಾಗವಂ ॥ ೬
ಶಿವನ ಮನೋಹರಂ ಶಿವನ ಪುಣ್ಯಫಲಂ ಶಿವನಾಪ್ತಸಂಕುಳಂ ।
ಶಿವನ ವಿಲೋಚನಂ ಶಿವನ ಗೋತ್ರಬಲಂ ಶಿವನೂರ್ಜಿತೋಜ್ಜ್ವಲಂ ॥
ಶಿವನ ಸುಖಂ ಸದಾಶಿವನ ಸರ್ವಮುಖಂ ಶಿವಭಕ್ತರೆನ್ನ ಕಾ ।
ವ್ಯವನತಿಸಮ್ಮದಂಬೆರಸಿ ಪೊರ್ದುಗೆ ತಿರ್ದುಗೆ ತಾಬ್ಧಿದಬ್ಧಿಯಿಂ ॥ ೭
ಫನಕವಿತಾವಿಳಾಸದೊಳೆ ಸಂದ ಮಯೂರನ ರೇಖೆ ಕಾಳಿದಾ ।
ಸನ ರಸವೃತ್ತಿ ಬಾಣನ ಮೃದೂಕ್ತಿ ಹಲಾಯುಧನಾಶು ಕೇಶಿರಾ ॥
ಜನ ಬಗೆಯುದ್ಭಟಯ್ಯನ ಗಭೀರತೆ ಮಲ್ಲಣನೇಚ್ಗ ಭೋಜರಾ ।
ಜನ ಜಸಮೆನ್ನ ಕಾವ್ಯರಸದೊಳ್ ನಲವಿಂ ನೆಲಸಿರ್ಕೆ ಸಂತತಂ ॥ ೮
ಚತುರಚತುರ್ಮುಖನೆಲ್ಲಾ ।
ಶ್ರುತಿಗಳನೊಲವಿಂದೆ ಕಲ್ತ ಶಿವನ ವಿವಾಹೋ ॥
ನ್ನತಿಯಾಕೃತಿಯೆಂದೆನೆ ಭಾ ।
ರತಿಯೆನಗನುಕೂಲೆಯಾಗದಿರಲಣ್ಮುವಳೇ ॥ ೯
ಕೊಂಡಾಡುಗೆ ಕಲ್ತೋದುಗೆ ।
ಮುಂಡಾಡುಗೆ ಮುದ್ದಿಸುಗೆ ಮರಲ್ದಪ್ಪುಗೆ ಕೈ॥
ಕೊಂಡೀಕಾವ್ಯಮನಗಜೆಯು ।
ಗಂಡನಲಂಪಿಂದೆ ಹಂಪೆಯ ವಿರೂಪಾಕ್ಷಂ ॥ ೧೦
ಎಂದಿಂತು ಬೇಡಿಕೊಳ್ವಲ್ಲಿ,
ಅತುಳತರಾರ್ಥಮರ್ಥದನುವೃತ್ತಿ ಪದಂ ಪದದಿಚ್ಛೆ ಬಂಧಮೂ ।
ರ್ಜಿತಪದಬಂಧಸಂಧಿ ನವರೀತಿ ಸುರೀತಿ ಗುಣಂ ಸದೃಕ್ಕಲಂ ॥
ಕೃತಿ ಸದಲಂಕೃತಿಪ್ರತಿಮಮೊಪ್ಪುವ ಭಾವಮನೂನಭಾವದು ।
ನ್ನತರಸಮೆಂದು ಸತ್ಕವಿಗಳಾಲಿಸೆ ಪೇಳ್ದಪೆನೀಪ್ರಬಂಧಮಂ ॥ ೧೧
ಕಂದಂಗಳಮೃತಲತಿಕಾ ।
ಕಂದಂಗಳನೂನವಾಕ್ಯಫಲವಿಲಸನ್ಮಾ ॥

ಕಂದಂಗಳ್ ತನಿರಸದು ।
ಕ್ಕಂದಂಗಳ್ ಸೊಗಯಿಸಿರ್ಪುವೀನುತಕೃತಿಯೊಳ್ ॥ ೧೨
ಪದ್ಯಂಗಳ್ ನವರಸನಿರ ।
ವದ್ಯಂಗಳ್ ಸುಜನಸಂಕುಳಕ್ಕೆ ನಿತಾಂತಂ ॥
ಹೃದ್ಯಂಗಳ್ ಧಾರಿಣಿಗತಿ ।
ಚೋದ್ಯಂಗಳ್ ಮೆಱೆಯುತಿರ್ಪುವೀಸತ್ಕೃತಿಯೊಳ್ ॥ ೧೩
ಕಾವ್ಯಂ ತಾನಿದು ನವರಸ ।
ಸೇವ್ಯಂ ಗಿರಿಜಾದಿನಾಥನುರುತರಕರ್ಣ ॥
ಶ್ರಾವ್ಯಂ ವಸುಧಾತಳದೊಳ್ ।
ನವ್ಯಂ ಭೂತೇಶಭಕ್ತಜನತಾಭಾವ್ಯಂ ॥ ೧೪
ಪೊಸತಿದು ಪಾವನಮಿದು ರಂ ।
ಜಿಸುವ ಮಹಾನರ್ಘ್ಯಮಿಂತಿದೆಂಬೀಜಸದಿಂ ॥
ರಸವತ್ಕಾವ್ಯಂ ತಾಂ ರಾ ।
ಜಸಭೆ ಬ್ರಹ್ಮಸಭೆ ದೇವಸಭೆಗೆಸೆದಿರ್ಕುಂ ॥ ೧೫
ಅದುಕಾರಣದಿಂ
ಸೇವ್ಯಂ ಸೌಖ್ಯಂ ಪ್ರಸನ್ನಂ ನವರಸವಿಭವಂ ಪುಣ್ಯಪುಂಜಂ ಶುಭಂ ವಾ
ಗ್ದೇವ್ಯಾವಾಸಂ ವಿವೇಕೋನ್ನತಜಲನಿಧಿ ಸಂಸಾರವಿಶ್ರಾಮದೇಶಂ ॥
ದಿವ್ಯಜ್ಞಾನೋಕ್ತಿಮಾರ್ಗಂ ನಿರತಿಶಯಪದಂ ಕೂರ್ತು ಪೇಳ್ವುಕ್ತಿಯಿಂದಂ ।
ಕಾವ್ಯಂ ಕಲ್ಪಾಂತರಸ್ಥಾಯಿಯೆನಿಪ ನುಡಿ ಸತ್ಯಂ ಕವೀಶಾಧಿಪತ್ಯಂ ॥ ೧೬
ಸುರತರುವಿನಂತೆ ಸುಜನರ ।
ಸಿರಿಯಂತೆ ಸರೋಜದಂತೆ ಸುಧೆಯಂತೆ ಸುಧಾ ॥
ಕರಕಿರಣದಂತೆ ಹಂಪೆಯ ।
ಹರಿದೇವನ ಕಾವ್ಯಮಖಿಳಸೇವ್ಯಂ ನವ್ಯಂ ॥ ೧೭
ಪ್ರಿಯವಚದಂತೆ ಪುಣ್ಯತತಿಯಂತೆ ಸುಧಾಕರನಂತೆ ಕೂರ್ತ ಮು ।
ಗ್ಧೆಯ ಕಡುನೇಹದಂತಮೃತದಂತೆ ವಸಂತಕನಂತೆ ಪುಷ್ಪಮಾ ॥
ಲೆಯು ಪೊಸಗಂಪಿನಂತೆ ಮಲಯಾನಿಲನಂತೆ ಮರಾಳನಂತೆ ಹಂ ।
ಸೆಯು ಹರಿದೇವನೊಪ್ಪಿರೆ ನಿಮಿರ್ಚಿದ ಕಾವ್ಯಮಿಳಾಜನೋತ್ಸವಂ ॥ ೧೮

ನೆರೆಯೆ ಕುತರ್ಕದಿಂದರೆದು ಸಣ್ಣಿಸಿ ನುಣ್ಣಿಸಿಯಂತದಿಂದು ಪೋ ।
ದರ ಕೃತಿಯೊಳ್ಳತನ್ಯಕೃತಿ ಪೊಲ್ಲದಿದೆಣ್ಣೆಗೆ ಬೆಣ್ಣೆ ಸಣ್ಣನೆಂ ॥
ಬರ ನುಡಿ ಬೇಡ ಪೇೞ್ವೆನತಿಭಾವರಸಾರ್ಥದೊಳಾತ್ತಛಂದಮಂ ।
ಪರಸುಖನೃಂನನಮಂ ಸೊಗಯಿಪಂದವನೀಸುಕರಪ್ರಬಂಧನಂ ॥ ೧೯
ನವರಸನುತಿಭಾವಾರ್ಥಂ ।
ನವೀನಪದಭರಿತಮಿಂತಿದೆನೆ ಸತ್ಕೃತಿಯುಂ ॥
ತವೆ ಪೇೞ್ವುದು ಪೇೞಿದೊಡೇಂ ।
ಕವರ್*ಗೆ ಕೋಪಿಪರೆ ನಿಂದಿಪರೆ ನಂಡಿಪರೇ ॥ ೨೦
ಕೇಳಲೊಡಂ ಕಿವಿ ಸವಿಯೊಳ ।
ಗಾಳಿದೊಡಂ ತನ್ಮನಂ ಮುಳಿಂಗದೊಡಂ ಸೌ ॥
ಖ್ಯಾಲಂಬಿಯೆನಿಪ ಚಿತ್ತಂ ।
ಲೀಲೆಯೊಳವಗಾಹಮಿರದೊಡದು ಸತ್ಕೃತಿಯೇ ॥ ೨೧
ಅಂತುಮಲ್ಲದೆಯುಂ
ಓದಿದೊಡೆ ಕಲ್ಲ ಮಾಲೆಯ ।
ನಾದಂ ಕರ್ಣ್ನ ಕಡಲೆ ವಾದಿಸೆ ರಸಮಂ ॥
ಸೋದಿಸೆಯುರ್ಕಿನ ಪುಡಿಯೆನಿ ।
ಪಾಮುಷ್ಕವಿತೆಗಳನೆಣಿಸಲೇಕೀಕೃತಿಯೊಳ್ ॥ ೨೨
ಹೞಿಗವಿಗಳ ಕಬ್ಬಂಗಳ ।
ಪೊಱಗಱಿಯಕ್ಕರದ ಹೊಲಿಗೆ ಬಿರ್ಚಿದೊಡೆಲ್ಲಂ ॥
ಬೞಿ ತಾಱಿಗ ಬೀಱಿಗ ವೆ ।
ತ್ತಱ ತತ್ತಱ ವೆಕ್ಕಸಕ್ಕಮಸ್ತವ್ಯಸ್ತಂ ॥ ೨೩
ಪೆಂವನ ಕಣ್ಗಳಂಧಕನ ಕಾಲ್ಗಳವಿಂತೊಡಗೂಡಿ ಗಾವುದಂ ।
ದಳದೊರ್*ಡೆ ಬಲ್ಲಿದಂ ನಡೆದ ಮಾರ್ಕೆಯೆನಿಪ್ಪಬೆ ಬೇಡ ಮಾಣ್ಣೆಲೇ ॥
ಅಱಿಗವಿ ನಿನ್ನ ತನ್ನೆರವಿನೋದಿನ ಕಬ್ಬಮನೋದಿವರ್ ಸುಧಾ ।
ನಿಳಯದ ಮುಂದೆ ಸತ್ಕೃತಿಯ ಮುಂದೆ ಸುಖಾಬ್ಧಿಯ ಮುಂದದೊರ್ಮೆಯುಂ
ಅದು ಘೂಕಂ ದಿವದೊಳ್ ಕಾ ।
ಣದು ನಿಶ್ಚಯಮಂತೆ ದುರ್ಜನಂ ಕಾಣಂ ಕಾ ॥

ವ್ಯದೊಳತಿರಸಮನಸೂಯಾ ।
ಸವನಂ ಸುಖದೂರನವನ ಮಾತೇಕಿದಱೊಳ್ ॥ ೧೫

ಕ್ಷುದ್ರಂಗೆ ಸಕಲಸುಜನೋ ।
ಪದ್ರವರೂಪಂಗೆ ಪರರ ಕಾವ್ಯಾರ್ಥಮುಮಂ ॥
ಛಿದ್ರಿಸುವಂಗತಿಶಬ್ದದ ।
ರಿದ್ರಂಗೆಕ್ಕುಮೆ ನವೀನಕಾವ್ಯಾರಂಭಂ ॥ ೧೬

ಬಳಗೆಱೆಯದೆ ಸತ್ಕಾವ್ಯದ ।
ಕಳೆಯಱಿಯದೆ ಲಘುತರತ್ವದಿಂ ನಾಲ್ಕೆರಡಾ ॥
ಯ್ಯುಕ್ಕಳಮಾತನಾಡಿಯುಱೆ ಹೆ ।
ಕ್ಕಳಮಿಕ್ಕಿದೊಡೊಲ್ವರೇ ಕವೀಂದ್ರಾಭರಣರ್ ॥ ೧೭

ಬರೆದಾಹ! ಬರೆದೆ ಭಾಪುರೆ! ।
ಬರೆದಕ್ಕಟ! ಬರೆದೆ ಲೇಸು! ಬರೆದೆಯೆನುತ್ತುಂ ॥
ಬಱಿದೆ ತಲೆದೂಗುವುದಱಿಂ ।
ಬಱಿದಪ್ಪುದು ಕಾವ್ಯಮಱಿಯದರ ಜಾಣಿಂದಂ ॥ ೧೮

ತನಗೆ ಕವಿತ್ವಮಿಲ್ಲ ಪೆಱರಂ ಪೞಿದಲ್ಲದೆ ನಿಲ್ಲನಾತನೊಳ್ ।
ಮುನಿವುದನೀತಿ ಪಂದಿ ಡುಱುಕೆಂದೊಡೆ ತಾಂ ಡುಱುಕೆಂಬುದೇ ಮಹಾ ॥
ವನಕರಿಯುಂ ವಿದಾರಿಸುವ ಸಿಂಹಮದಂತತಿದೋಷಿಯಪ್ಪುದು ।
ರ್ಜನರ ಕಟೂಕ್ತಿಗಂಜದೆ ಲಸತ್ಕೃತಿಯಂ ಸಲೆ ಮಾಳ್ಕೆ ಸಜ್ಜನರ್ ॥ ೧೯

ಗೌರೀವರಕರ್ಣಾಲಂ ।
ಕಾರಂ ರಸಪೂರಮತಿಗಭೀರಂ ಕಾವ್ಯಂ ॥
ನೀರಸರಱಿವಂತೇನಿದು ।
ತಾರೆಲೆಯೊಳ್ ಬೀದಿಮಾಡೆ ನೆರವಿಯು ತಮುಕೇ ॥ ೨೦

ರಸಮಿದು ಭಾವಮಿದರ್ಥಮಿ ।
ದು ಸಮಾಸಮಿದುಚಿತಪದಮಿದುತ್ಪ್ರೇಕ್ಷೆಯಿದೆಂ ॥
ದು ಸವಿದು ಸವಿದು ಕರಂ ನವ ।
ಸದೊಳಗಾೞಿತ್ತುಮಿರ್ಪ ರಸಿಕರ್ ಬಲ್ಲರ್ ॥ ೨೧

ನೋಡುವೊಡೊಂದಕ್ಕರಮದು ।
ಮಾಡುವೊಡುಚ್ಚರಣೆಗರಿದು ಮೂಱುಂ ತೆಱನಂ ॥
ಕೂಡೆ ಕವಿತತಿ ವಿಚಾರಿಸ ।
ಬೇಡದಱಿಂ ಱಲಿಕುಳಕ್ಷಳಂಗಳನಿದಱೊಳ್ ॥ ೨೧

ಗಿರಿಜಾಕಲ್ಯಾಣಮಿಂತೀನುತಕೃತಿಯ ಪೆಸರ್ ಭಾಸುರೇ! ಕಾವ್ಯನಾಥಂ।
ಗಿರಿಜಾನಾಥಂ ಕಥಾಸಂಗತಿ ವರಗಿರಿಜೋದ್ವಾಹವಿವಾಕಾವ್ಯಮಂ ಬಿ ॥
ತ್ತರದಿಂ ತಾನೊಲ್ದು ಪೇಟ್ದಿಂ ಶಿವಕವಿ ಹರಿದೇವಂ ಮಹೋತ್ಸಾಹದಿಂದಂ ।
ಪರಮಾನಂದಾಬ್ಧಿಪಂಪಾಪುರದಸ ವಿರೂಪಾಕ್ಷಸಾಕ್ಷಾತ್ಸುಪುತ್ರಂ ॥ ೨೨

ಆತನ ಗುರುಕುಲಮತಿವಿ ।
ಖ್ಯಾತಂ ಘನಪೂತಮಿಂದುಧರಸಂಭೂತಂ ॥
ನೂತನಪುಣ್ಯಾವ್ರಾತಂ ।
ಪ್ರೀತಿಕರಂ ಭೂತಳಾತಿಶಯಸುಖಜಾತಂ ॥ ೨೩

ಸುರುಚಿರಮೂರ್ತಿ ಸತ್ಯತರಮೂರ್ತಿ ಕೃಪಾಕರಮೂರ್ತಿ ಪುಣ್ಯವಿ ।
ಸ್ತರಗುರುಮೂರ್ತಿ ಶಾಂತಿಮಯಮೂರ್ತಿ ಸುಧಾಕರಮೂರ್ತಿ ಯುತ್ತರೋ
ತ್ತರವರಮೂರ್ತಿ ಮುಕ್ತಿಸುಖಮೂರ್ತಿ ಮನೋಹರಮೂರ್ತಿ ಚಂದ್ರಶೇ
ಖರಗುರುಮೂರ್ತಿ ಕೀರ್ತಿಪತಿ ಹಂಪೆಯ ಶಂಕರದೇವರೊಪ್ಪುವರ್ ॥ ೨೪

ಆಶೈವಾಗಮಸಿದ್ಧರಪ್ಪ ಪರಮಶ್ರೀಶಂಕರಾಚಾರ್ಯರಿಂ ।
ಪಾಶಚ್ಛೇದಮನಿಂಬುಗೊಂಡು ಮೆಱೆವಂ ಶ್ರೀಶುದ್ಧಪಂಚಾಕ್ಷರೀ ॥
ವೇಶಾನಂದರಸಾದ್ರ್ರಚಿತ್ತಯುತಹೃದ್ರಾಜೀವಸಂಪೂರ್ಣಸಂ ।
ಕಾಶಪ್ರಜ್ವಲಮೂರ್ತಿ ಕೀರ್ತಿಭರಿತಂ ಶ್ರೀಮಾದಿರಾಜಾಹ್ವಯಂ ॥ ೨೫

ಇಂತಿಂತೊಪ್ಪುವ ಮಾದಿರಾಜನ ಮನೋದುಗ್ಧಾಬ್ಧಿಚಂದ್ರಂ ಶಿವಂ ।
ಶಾಂತಂ ಶಾಶ್ವತಮೂರ್ತಿ ಶೈವಸುಭಗಂ ಸಾಕಾರಸರ್ವೇಶ್ವರಂ ॥
ಸಂತೋಷಾಭರಣಂ ಪ್ರಸನ್ನಕರಣಂ ಪ್ರತ್ಯಕ್ಷಪಂಚಾನನಂ ।
ಸಂತಂ ಹಂಪೆಯ ಮಾಯಿದೇವನೆಸೆದಿರ್ಪಂ ಶೈವಸಾರೋದಯಂ ॥ ೨೬

ಶ್ರೀಗುರು ಪರಗುರು ಘನಮಹಿ ।
ಮಾಗುರು ಮಾಧುರ್ಯಗುರು ಮಹಾಗುರು ವರವಿ ॥

ದ್ಯಾಗುರು ಸುಖೈಕಗುರು ವಸು ।
ಧಾಗುರು ಶೈವಗುರು ಶಾಂತಗುರು ಮಾಯ್ದೇವಂ ॥ ೩೮

ಸಗಮುಳನೆಂಬುದುತ್ತಮಗುಣಾಶ್ರಯನೆಂಬುದು ಶೈವಸಿದ್ಧನೆಂ ।
ಬುದು ರವಿತೇಜನೆಂಬುದು ಕೃಪಾಂಬುಧಿಯೆಂಬುದು ಶಾಂತಮೂರ್ತಿಯೆಂ ॥
ಬುದು ಪರಮಾಗಮಪ್ರಕರನೆಂಬುದು ಹಂಪೆಯ ಮಾಯಿದೇವನೆಂ ।
ಬುದು ಶಿವನೆಂಬುದಪ್ರತಿಮನೆಂಬುದು ಸದ್ಗುರುವೆಂಬುದೀಜಗಂ ॥ ೩೯

ಧರೆಯೊಳಗಾವಮಾಯ್ದೇವರ ।
ವರಕರುಣಂಬಡೆದು ಮೆಱೆವನುನ್ನತತೇಜಂ ॥
ಗುರುಪದಭಕ್ತಂ ಹಂಪೆಯ ।
ಹರಿದೇವಂ ದೇವಕವಿ ಕಳಾವಿದರರಸಂ ॥ ೪೦

ಜಾಣಂ ರಸಿಕಂ ಸುಜನ ।
ಪ್ರಾಣಂ ಕವಿತಾನಿಧಾನನಧಿಕಂ ಪುಣ್ಯಾ ॥
ಕ್ಷೋಣಂ ವರಗಿರಿಜಾಕ ।
ಲ್ಯಾಣಮನೊರೆದಂ ವಿವೇಕಿ ಹರಿಹರದೇವಂ ॥ ೪೧

ಎಂದಿಂತೆಲ್ಲಾ ಕವೀಂದ್ರರ್ ಪೊಗೞೆ ಪರಸೆ ಭಕ್ತವ್ರಜಂ ಸಜ್ಜನರ್ ಸಾ।
ನಂದಂ ಮಜ್ಜ್ಯಯ್ಯ ಭಾಸ್ವನ್ನತಕೃತಿ ಭಲರೇ ಚಿತ್ರಮಾಹಾ ಎನುತಿರ್ಪ್ಪ ॥
ಳ್ಪಿಂದಂ ಕೊಂಡಾಡೆ ಲೋಕಂ ಸ್ತುತಿಯಿಸೆ ಪದೆಪಿಂ ಪೇೞ್ದಿಪೆಂ ರೀತಿಭಾವಂ
ಛಂದೋಲಂಕಾರಸಾರಂ ಪ್ರದಿದಿರೆ ಗಿರಿಜೋದ್ವಾಹಮಂ ಪ್ರೀತಿಯಿಂದಂ ॥

ಗಿರಿಜಾಕಲ್ಯಾಣಮನೊ ।
ಲ್ದೊರೆವೆಂ ಗುರುಕರುಣದಿಂದೆ ರಸಿಕರ್ ಕವಿಗಳ್ ॥
ಪಿರಿಯರ್ ಸುಜನರ್ ಭಕ್ತರ್ ।
ಪರಮಾರ್ಥದೆ ಕೇಳ್ವುದೀಪ್ರಬಂಧೋನ್ನತಿಯಂ ॥ ೪೨

ಎಂತೆನೆ ವಿಶಾಲಧಾತ್ರೀ ।
ಕಾಂತಾನಾಭೀಸರೋಜಸುರುಚಿರವರಮ ॥
ಧ್ಯಾಂತಸ್ಥಿತನುತಕರ್ಣಿಕೆ ।
ಯಂತಿರ್ಪ್ಪುದು ಮೇರುವದಱ ಮೂಡಣ ದೆಸೆಯೊಳ್ ॥ ೪೪

ಶಿವಶಿವ! ಪಂಚಾಶತ್ಕೋ ।
ಟಿವಿಸ್ತೃತಾನನಿಗೆ ನೀಲವೇಖಲೆಯಂತೆ ॥
ಪ್ಪವುದಾತ್ತಲೋಲಕಲ್ಲೋ ।
ಲವಿವಿಧಸಲಿಲಚರಪೂರಪಾರಾವಾರಂ ॥ ೪೫

ಅದೆಂತೆಂದೊಡೆ—

ವಿಳಸತ್ಕಲ್ಲೋಲಮಾಲಾಪ್ರತಿಹತವಿತತಪ್ರೋಚ್ಚಲಚ್ಛೈಲಕೋಳಾ ।
ಹಳತೋದ್ವೃತ್ತಫೇನನಾನಾಕರಿಮಕರವಿಪ್ರುಚ್ಛಿಪ್ರಹಾರಪ್ರತಾಪ್ರೋ ॥
ದ್ಗಳಿತಾನಂತಪ್ರರತ್ನಪ್ರಬಲಜಲಚರಾನೀಕಗಂಭೀರಭೀಮೋ ।
ಜ್ಜ್ವಳರಾವಪ್ರಾದ್ಭುತಪ್ರೋನ್ಮಿಳಿತಘುಳುಘುಳುಧ್ವಾನಮಂಭೋನಿಧಾನಂ॥

ಮತ್ತಮದಲ್ಲದೆ

ನೊರೆಯಿಂ ಬುದ್ಬುದದಿಂ ಕಣಾವಳಿಗಳಿಂದಾವರ್ತದಿಂ ತುಂತುಱಿಂ ।
ತೆರೆಯಿಂ ಪೆರ್ದೆರೆಯಿಂ ತಿಮಿಂಗಿಲಗಿಲಸ್ತೋಮಂಗಳಿಂ ಕಚ್ಛಪೋ ॥
ತ್ಕರದಿಂ ನಕ್ರನಿಕಾಯದಿಂ ಮಕರದಿಂ ನೀರಾನೆಯಿಂ ಕಂಬುವಿಂ ।
ಮಗರತ್ನವ್ರಜದಿಂ ಪ್ರವಾಳಲತೆಯಿಂದೊಪ್ಪಿತ್ತು ನೀರಾಕರಂ ॥ ೪೬

ಆವಿಸ್ತಾರಗಭೀರವಾರಿನಿಧಿಯಿಂದಂ ಪಶ್ಚಿಮಾಂಭೋಧಿಗಂ ।
ತೀವಿರ್ದೊಪ್ಪವುದಾತ್ತಗಹ್ವರಗುಹಾಸಂತಾನಪರ್ಯಂತಗೋ ॥
ತ್ರಾವಾಸೋಜ್ಜ್ವಲಗಂಡಶೈಲಶಿಖರಪ್ರೋದ್ಭೂತಭೂಜಾತಪ ।
ತ್ರಾವೇಶೋನ್ನತಭೀಮರೂಪಧರದೇವಾಗಮ್ಯಹೈಮಾಚಳಂ ॥ ೪೮

ಆರಾಜತ್ಕ್ಷಮಾದಿಸಂಗತಶಿಶಿರಶಿಲಾನೀಕನಿರ್ವೃದ್ಧಿಮಂ ಸ ।
ಸ್ಮೇರಾಬ್ಜಾಕ್ಷೀಕರೋತ್ಪಲ್ಲವನಖಕುಸುಮವ್ರಾತಚಂಚದ್ವಸಂತಂ ॥
ಸೂರಾಂಶುಸ್ಪರ್ಶತೀವ್ರಾನಳಕರರವಿಕಾಂತಾತಪ್ರೋದ್ಯನ್ನಿದಾಘಂ ।
ಕ್ರೂರಾಭೀಳದ್ವಿಪಪ್ರೋಚ್ಛಳಿತಮದಜಲಾಸಾರಸಾಂದ್ರಂ ನಗೇಂದ್ರಂ ॥

ಅಂತ ಮಲ್ಲದೆಯುಂ

ಪಾಱುವ ಸೋಗೆ ಸೀಗುರಿ ಚಲಚ್ಚಮರೀಮೃಗವೀಧಿ ಚಾಮರಂ ।
ಮೀಱುವ ಸಿಮ್ಮರ್ಕವೆತ್ತ ಕುಜಮೆತ್ತಿದ ಸತ್ತಿಗೆ ಸಿಂಹವಿಷ್ಟರಂ ॥
ತೋಱುವ ಚಂದ್ರಕಾಂತಶಿಲೆಯಾಗೆ ಸಮುನ್ನತರಾಜಲೀಲೆಯಂ ।
ಬೀಱುತೆ ಪೂರ್ವಪಶ್ಚಿಮಕೆ ಪರ್ವಿದ ಪರ್ವತರಾಜನೊಪ್ಪಗುಂ ॥ ೫೦

ಮತ್ತಮದಲ್ಲದೆಯುಂ

ಗಿರಿಶಿಖರಂ ಮುಖಂ ಮರದೊಳೊಪ್ಪುವ ಬೀಳಲೆ ತಜ್ಜಟಾಳಿ ವಿ ।
ಸ್ತರವರಗಂಡಶೈಲಮೆ ವಿಕೀರ್ಣಭುಜಾವಳಿ ವಾದ್ಯಸಂಕುಲಂ ॥
ಕರಿಕುಳಬೃಂಹಿತಂ ನೆಗಟ್ದಿ* ಸಿಂಹರವಂಗಳವಾಗೆ ಸಂತತಂ ।
ಸ್ಮರರಿಪುನಾಟ್ಯದೊಳ್ ನೆಲಸಿ ನಿಂದವೊಲೊಪ್ಪುತು ಭೂರಿಭೂಧರಂ ॥ ೫೧

ನಳನಳಿಸುತ್ತೆ ಸುತ್ತಿಡಿದು ತೋರ್ಪ ಕದಂಬಕದಂಬದಿಂ ಚಳ ।
ಜ್ಜಳದಮನೊತ್ತರಿಪ್ಪ ಘನದೀರ್ಘಸುಕೋಮಳವಂಶವಂಶದಿಂ ॥
ಬಳಸಿಗವೆತ್ತಲುಂ ತುಱುಗಿ ಪರ್ವಿದಗುರ್ವಿನ ಬಿಂಬಬಿಂಬದಿಂ ।
ಇಳೆಯೊಳಗೊಪ್ಪುತಿರ್ಪುದು ಹಿಮಾಚಳವಾಶ್ರಿತಗೋತ್ರಗೋತ್ರದಿಂ ॥

ಮತ್ತಮಲ್ಲದೆ

ಉರವಣಿಸಿ ನಡೆತರುತ್ತುಂ ।
ಗಿರಿಶಿಖರಮನೇಱಲಾಱದೆರಡುಂ ದೆಸೆಯೊಳ್ ॥
ಬರಲನಿವಂ ಕಂಡು ದಿವಾ ।
ಕರನಂದಿಂ ದಕ್ಷಿಣೋತ್ತರಾಯಣನಾದಂ ॥ ೫೩

ಹರಹರ! ಗಿರಿಯುದ್ದಮನಾ ।
ರೊರೆದಪರಗಚೂಡದಲ್ಲಿ ನಿಂದಿರ್ದು ಸಮಂ ॥
ತಿರೆ ತಾರಗೆಯುಂ ವಿದ್ಯಾ ।
ಧರಿಯರ್ ಮುತ್ತೆಂದು ತೆಗೆದು ತುಡಲವ್ವಳಿಪರ್ ॥ ೫೪

ಗಿರಿಯುದ್ದಮನೇನಂ ಬಿ ।
ತ್ತರಿಪೆನದಂ ಖೇಚರರ್ ಬಿಸಿಲ್ಗಂಜುತ್ತುಂ ॥
ಭರದೊಳ್ ಬಱಿಲ್ದು ಬಂದಾ ।
ಗಿರಿಶಿಖರದ ಮರದ ತುದಿಯ ನೆೞಲಂ ಸಾರ್ವರ್ ॥ ೫೫

ಕರಮೆಸೆದುದು ಗಿರಿಶಿಖರಂ ।
ಪರಮಸ್ವಚ್ಛಂದಲೀಲೆ ಪೆರ್ಚಿದ ಗಂಧ ॥
ರ್ವರ ಗರುಡರ ಸಿದ್ಧರ ಖೇ ।
ಚರರ ಮುನೀಶ್ವರರ ಸುರರ ನೆರವಿಗಳಿಂದಂ ॥ ೫೬

ಧರೆಯುೞಿಯೆ ಹೊನ್ನ ಮೆಯ್ಯಾಂ ।
ತಿರುತಿರ್ದಪಂ ಲಜ್ಜೆಯಿಲ್ಲ ತನಗೆಂದು ಕರಂ ॥
ಸುರುಚಿರಧವಳಿಮದಿಂ ಸುರ ।
ಗಿರಿಯುಮಂ ಹಿಮನಗದ ಚೆಲ್ವು ನಗದೇಕಿರ್ಕುಂ ॥ ೫೭

ಇಂತಿಂತು ಮೆಱೆಯುತಿರ್ಪ್ಪವ ।
ನಂತಂ ಘನತೇಜದಿಂದಯೋಗ್ರಾಹ್ಯತೆಯಿಂ ॥
ದಂ ತಣ್ಪಿಂದಾಹಾ! ರವಿ ।
ಕಾಂತಮಯಸ್ಕಾಂತಮಿಂದುಕಾಂತಂ ನಗದೊಳ್ ॥ ೫೮

ಆನಗದಲ್ಲಿ ಪುಣ್ಯತತಿಯೊ ಪ್ರಭೆಯೊಬರ್ಪುಳಿಯೊ ಮಹೇಶ್ವರ ।
ಶ್ರೀನಿಧಿಯೋ ಸುಧಾಕರವೊ ಸತ್ಯವೊ ನಿತ್ಯವೊ ಶೈವಪೂರಿತ ॥
ಸ್ಥಾನವೊ ಶಾಂತಿಯೋ ದಯೆಯೊ ಧರ್ಮವೊ ನಿರ್ಮಳನೀತಿಯೋ ಶಿವ ।
ಜ್ಞಾನವೊ ಮುಕ್ತಿಸಂಕುಳವೊ ಪೇೞೆನೆ ತಾಪಸವೀಧಿಯೊಪ್ಪುಗುಂ ॥ ೫೯

ಗುಹೆಗುಹೆಗಳೊಳಗೆ ಬಳಸಿದ ।
ಬಹುಗಹ್ವರಗಹ್ವರಂಗಳೊಳ್ ಪರಸೌಖ್ಯಾ ॥
ವಹನಿರ್ಝರನಿರ್ಝರದೊಳ ।
ಗಹರಹಮೊಪ್ಪಿರ್ಪುದಧಿಕಮನುಮುನಿವೃಂದಂ ॥ ೬೦

ಯಮನಿಯಮನಿತ್ಯಕರ್ಮಂ ।
ಸಮನಿಸೆ ವನಲತೆಯ ಗುಲ್ಮವೃಕ್ಷಾವಳಿಯಾ ॥
ವಿಮಳವ್ರತಿಗಳ್ ಸಲೆ ಕಂ ।
ದಮೂಲಫಲದಿಂದೆ ತಣಿದು ಪರಿಣಮಿಸಿರ್ಪರ್ ॥ ೬೧

ಭಾಸ್ಕರಕರಸಮವಿಮಳಮ ।
ನಸ್ಕರತಿವ್ರತಿಗಳಗ್ರಗಣ್ಯರ್ ಶಮೆಯಿಂ ॥
ತಸ್ಕರರತಿಮುದದಿಂದೆ ನ ।
ಮಸ್ಕರಿಸುವ ಮುನಿಗಳನಸರಿರ್ಪರ್ ನಗದೊಳ್ ॥ ೬೨

ಗಣ್ಯಾತೀತರ್ ಶಿವಲಾ ।
ವಣ್ಯಾಟೆ ಸರ್ವಾಂಗಭಸಿತದಿಂ ನರೆಯಿಂ ಕಾ ॥

ರುಣ್ಯದಿನತಿಧನಳತೆಯಿಂ ।
ಪುಣ್ಯಂ ಪಣ್ಣಾದ ತೆಱದೆ ತಾಪಸರಿರ್ಪರ್ ॥ ೬೩

ಅಂತುಮಲ್ಲದೆ

ಭಸಿತಮನೊಪ್ಪೆ ಪೂಸುವ ಶಿವಾಗಮಮೋದುವ ಶಾಸ್ತ್ರಮಂ ವಿಚಾ।
ರಿಸುವ ವಿನೂತನಾಕ್ಷಮಣಿಯಂ ಸರವೇಱಿಪ ನಾರ ಸೀರೆಯಂ ॥
ಪಸರಿಪ ಕಂದಮೂಲಫಲಮಂ ತರೆ ಪೋಪ ಲಸನ್ಮೃಗಾಜಿನ ।
ಪ್ರಸರಮನೆಯ್ದೆ ಪೊಲ್ವ ಮುನಿಮುಖ್ಯಕುಮಾರಸಮೂಹಮೊಪ್ಪುಗುಂ ॥

ಅಂತವರ ಶಾಂತಿಮುಮುಶ್ಚೈವತೇಜಸ್ಸಾಮರ್ಥ್ಯಮೆಂತೆಂದೊಡೆ—

ಮೈಗರೆದು ಮೆಲ್ಲಮೆಲ್ಲನೆ ।
ಕೈಗೊಟ್ಟೊಡನೈದಿ ಮತ್ತೆ ತಾದಿರಿಸಿ ಪಗಲ್ ॥
ಬೈಗಿರುಳೆನ್ನದೆ ಸಲೆ ಬೆಸ ।
ಕೈಗುಂ ಮುನಿಗಳ್ಗೆ ನಗದ ಮರ್ಕಟನಿಕರಂ ॥ ೬೪

ಓಸರಿಸಿ ಬಿರ್ಚಿ ಪಕ್ಕಮ ।
ನೋಸರಿಸದೆ ಮುನಿಗಳೊಡನೆ ಹೋಮಸ್ಥಳದೊಳ್ ॥
ಭಾಸಿಪಪೊಲಂತುಮಿಂತುಂ ।
ಬೀಸುತ್ತೆಚ್ಚಱಿಸಿ ಕುಡುವುದಾಶಿಖಿ ಶಿಖಿಯಂ ॥ ೬೬

ಅಂತೆಚ್ಚಱಿಸಿ ಕುಡುತ್ತಿರ್ಪನ್ನೆಗಮಲ್ಲಿ

ಇದು ಭೂಮಿಸ್ಥಾನದಿಂ ಮುಕ್ತಿಗೆ ನಡೆಯಿಪ ನೀಲಾಶ್ಮಸೋಪಾನಮಾಹಾ!
ಇದು ಸಂಸಾರಾತಪಶ್ರಾಂತರೊಳತಿಸುಖಮೀವಂಬುದಶ್ರೇಣಿ ಮೇಣಿಂ ॥
ತಿದು ದುಷ್ಕರ್ಮಾಬ್ಜಷಂಡಂಗಳನುಱೆ ಕೊರಗಿಪ್ಪೊಂದು ನೀಹಾರಮೆಂಬಂ।
ದದೆ ಹೋಮಸ್ತೋಮಧೂಮಂ ನೆಗದುದು ಮುನಿಗಳ್ ಬೇಳ್ವ ಮಂತ್ರಾ
ಗ್ನಿಯಿಂದಂ ॥ ೬೭

ಮತ್ತಮೊಂದೆಡೆಯೊಳ್

ಸುಲಿಪಲ್ ಕೆಂಜಡೆ ನಾರ ಸೀರೆಯಜಿನಂ ಯಜ್ಞೋಪವೀತಂ ಕಮಂ।
ಡಲುಮಾಧಾರಕಮಕ್ಷಮಾಲೆ ಭಸಿತಂ ಸ್ಮೇರಾನನಂ ಕರ್ಣಕಂ ॥
ಡಲವೊಪ್ಪಿತ್ತಿರೆ ಪ್ರಣ್ಯದಂತೆ ಶುಭದಂತಾನಂದದಂತಚ್ಛನಿ ।
ರ್ಮಳದಂತುಜ್ಜ್ವಳತೇಜದಂತೆ ಸುಖಿಾವರ್ ತಚ್ಛೈಲದೊಳ್ ತಾಪಸರ್ ॥

ಅಂತವರ ಶಾಂತ್ಯಾಚರಣಶೈವತೇಜಃಪ್ರತಾಪದಿಂದೋರಂತೆ ಕ್ರೂರಮೃಗಂಗಳ್ ನಿಜವೈರಮಂ ಬಿಟ್ಟಿರ್ಪುವದೆಂತೆಂದೊಡೆ-

ಪುಲ್ಲೆಯು ಕೋಡ ಮೇಲೆ ಪುಲಿಗಳ್ ತಲೆಯಿಟ್ಟು ಕುರಂಗಸಂಕುಳಂ ।
ಭಿಲ್ಲರ ಬಿಲ್ಲ ಮೇಲೆ ಮೊಗವಿಟ್ಟು ನವಿಲ್ಗಳ ಮೇಲೆ ಭೀತಿ ತಾ ॥
ನಿಲ್ಲದೆ ಸರ್ಪವೀಧಿ ಪೆಡೆಯಿಟ್ಟು ಗಜಂ ಶಿರವಿಟ್ಟು ಸಿಂಗದೊಳ್ ।
ನಿಲ್ಲದೆ ನೋಡುತಿರ್ಪುವು ನಗೇಂದ್ರಮುನೀಂದ್ರರ ಶಾಂತಮೂರ್ತಿಯಂ ॥

ಮತ್ತಮಾತಪಸ್ವಿಗಳ್ ರುಗ್ರನಂತೆ ಜಟಾಜೂಟರಂಜಿತಾಬ್ಜರುಂ, ದುರ್ಯೋಧನಾಸ್ಥಾನದಂತೆ ಕರ್ಣಾಲಂಕಾರಶೋಭಿತರುಂ, ಕುಬೇರನಂತೆ ವಿಭೂತಿವಿಲಸಿತಗಾತ್ರರುಂ, ಪುಣ್ಯವೃಕ್ಷದಂತೆ ಶಾಖಾವಲಂಬಿತಕರ್ಮನಿಷ್ಠರುಂ ವಲ್ಕಲಾಂತರ್ವಾಸರುಂ, ಕಮಲಕ್ಷೇತ್ರದಂತೆ ಪಂಕಜಗುಣೋಪವೀತರುಂ, ಭೂಮಿಜೆಯಂತೆ ಕುಶಲವಾಧಿಷ್ಠಿತರುಂ, ನವಗ್ರಹದಂತೆ ರವಿರಾಜವಕ್ರಸೌಮ್ಯಜೀವಕಾವ್ಯಶ್ರೇಷ್ಠರುಂ, ನಕ್ಷತ್ರಮಂಡಲದಂತೆ ಪುಣ್ಯಶ್ರವಣಚಿತ್ರಾನಂದಹೃದಯರುಂ ಮೂಲಹಸ್ತಸಂಯುಕ್ತರುಂ, ವಾರಾಣಸಿಯಂತೆ ದಿವ್ಯಕ್ಷೇತ್ರವಾಸಿಗಳುಮೆನಿಸಿರ್ದರ್. ಅಂತುಮಲ್ಲದೆಯುಂ

ತರತರದಿಂದೆ ತೋರ್ಪ ಸರುವಿಂ ದರುವಿಂ ಪರಿಪೂಜ್ಝರಂಗಳಿಂ ।
ತರುಕುಲದಿಂ ಲತಾವಿಸರದಿಂ ಮಡುವಿಂ ಗಿಡುವಿಂ ಗುಹಾಳಿಯಿಂ ॥
ಸರಸಿಗಳಿಂದೆ ಪೆರ್ಮೊಳೆಗಳಿಂ ಕೆರೆಯಿಂ ತೊಱೆಯಿಂ ನದಂಗಳಿಂ ।
ಪರಿಪೂನಲಿಂ ಬಿಲಂಗಳಿನರಣ್ಯದಿನಲ್ಲಿಯು ತಳ್ಪಲೊಪ್ಪುಗುಂ ॥

ಆಶೈಲನಿತಂಬವನಂ ಸುತ್ತಿ ಮುತ್ತಿ ಘೋರಗಭೀರಕಾಂತಾರಮಿರ್ಪುದು. ಅದೆಂತೆಂದೊಡೆ:—

ಎಳಸಿ ಗಿರಿಯುಟ್ಟ ಪಟ್ಟಾ ।
ವಳಿಯೆನಿಕುಂ ತದ್ವನಂ ಲತಾವಳಿ ಪತ್ರಾ ॥
ವಳಿ ಪುಷ್ಪಾವಳಿ ಹಂಸಾ ।
ವಳಿ ಸಿಂಹಾವಳಿ ಮೃಗಾವಳಿಯ ಪಙ್ಕ್ತಿಗಳಿಂ ॥ ೨೧

ಮತ್ತಮಲ್ಲದೆ

ಅರನೇಱಿಲ್ತ್ತಿಱಿ ತುಂಬುರ್ತದುಕಳಿಲೆಲವಂ ನೆಲ್ಲಿ ಬಿಲ್ವಾರ್ಜುನಂ ಕ ।
ಮ್ಮರನಾಲಂ ಜಾಲಬೇಲಂ ಬಿಳಲರಳಿಯೆರಂ ಕಕ್ಕೆ ಹೂರಂ ಬೆಳಲ್ ಮಾ ।

ಪರುಟಾಳಂ ಹಾರಿವಾಳಂ ತುಡು ತಡಸೊಡವಂ ಲೊಕ್ಕಿ ಗೊಟ್ಟೆಕ್ಕಿ ದಿಂಡಂ
ಚಿರಚಿಲ್ವಂ ಬ್ರಹ್ಮವೃಕ್ಷಂ ಕಱಿಕೆ ತಱಿಯದಿಂದೊಪ್ಪುತಿರ್ದತ್ತರಣ್ಯಂ ॥

ನರಿ ಶಶಕಂ ವೃಕಂ ಸರಟನೆಯ್ಯುಮಿಗಂ ಮರೆವಿಂಡು ಬೆಕ್ಕು ಮುಂ ।
ಗುರಿ ಮುಸಲಿವ್ರಜಂ ಕರಡಿಮುಂಡಲಿ ಬೆರ್ಬುಲಿ ಮರ್ಕಟಾಳಿ ಸೂ॥
ಕರನಿಕರಂ ಕುರಂಗತತಿಯುಷ್ಟ್ರಚಯಂ ಘನಖಡ್ಗಿ ಸೈರಿಭಂ ।
ಪುರುಷಮೃಗಂ ಗಜಂ ಶರಭಸಿಂಹದಿನೊಪ್ಪುವುದಲ್ಲಿ ಕಾನನಂ ॥ ೨೩

ಅರಗಿಳಿ ಪಾರಿವಂ ಕುರರಿ ಲಾವಗೆಯನ್ಯಭೃತಂ ಶರಾರಿ ಹೊಂ ।
ಗುರು ಚರಣಾಯುಧಂ ಶಕುನಿ ಚಂದನವಕ್ಕಿ ಚಕೋರಿ ಟಿಟ್ಟಿಭಂ ॥
ಹರಡೆ ಗವುಂಜು ಚಾದಗೆ ಬಕಂ ಶಿಖಿ ವಾಯಸಮಂಚೆ ಕೊಂಚೆ ತಿ ।
ತ್ತಿರಿ ಗಿಡುಗಂಗಳೆಂಬ ಖಗವೃಂದದಿನಲ್ಲಿಯರಣ್ಯವೊಪ್ಪುಗುಂ ॥ ೨೪

ಅತಿಘೋರಂ ಧ್ವಾಂತಪೂರಂ ಬಹುತರುಕುಲಸಾರಂ ಸಮುದ್ಯದ್ಗಭೀರಂ।
ಪ್ರತಿಶೂನ್ಯಂ ದಾವಮಾನ್ಯಂ ಮೃಗವಿತತಿಗನನ್ಯಂ ನಗೀವ್ರಾತಧನ್ಯಂ ।
ನುತಚೋದ್ಯಂ ವ್ಯಾಧವೇದ್ಯಂ ದಿನಕರಕಿರಣಾಭೇದ್ಯಮೀಭೂಮಿಗಾದ್ಯಂ ।
ನುತಪುಣ್ಯಂ ತಾನಗಣ್ಯಂ ಕಠಿನವಿಷಯಗುಣ್ಯಂ ವಿರಾಜಿಪ್ಪರಣ್ಯಂ ॥ ೨೫

ಹರಿಯಂತಿಂದುವಿನಂತೆ ಕೃಷ್ಣಮೃಗಸಂಶ್ಲೇಷಂ ಸುರಾವಾಸದಂ ।
ತುರಗಾಧೀಶ್ವರನಂತೆ ಕೌಶಿಕವಿಭೋಗಂ ಕಾಮನಂತಬ್ಧಿಯಂ ॥
ತಿರೆ ಚಂಚದ್ರತಿಸಂಯುತಾನಿಮಿಷವೃಂದಂ ವ್ಯೋಮದಂತಬ್ಜವಿ ।
ಷ್ಟರನಂತುಜ್ಜ್ವಳರಾಜಹಂಸವಿಭವಂ ರೌದ್ರಾನನಂ ಕಾನನಂ ॥ ೨೬

ಅದು ಸರುವ ದರುವಿನಾಗರ ।
ಮದು ಭೂಜವ್ರಜದ ತಾಣಮದು ಮೃಗಸಂತಾ ॥
ನದ ನೆಲೆಯದು ಶಬರಾನೀ ।
ಕದ ಜನ್ಮಸ್ಥಲಮೆನಿಪ್ಪುದೊಪ್ಪುವರಣ್ಯಂ ॥ ೨೭

ಅದಱೊಳ್ ಭೀಕರಕಾಲಕಿಂಕರನಿಭಂ ಭೀಷ್ಮಾನನಂ ರೌದ್ರಸಂ ।
ಮದನೇತ್ರಂ ಘನಕೃಷ್ಣಕಾಯನಿಕರಂ ಕಾಠಿನ್ಯಧರ್ಮಂ ಭಯ ॥
ಪ್ರದಬಾಣಾವಳಿನಿಷ್ಠುರಧ್ವನಿಚಯಂ ನಾನಾಮೃಗಾಯುಷ್ಯದಾ ।
ಪದಲಂಕಾರದಿನೊಪ್ಪಿ ಲುಬ್ಧಕಕುಲಂ ತೀವಿರ್ದುದಂತಾವಗಂ ॥ ೨೮

ಅಂತಿರ್ದ ಪುಳಿಂದಬಲಂ ಬೇಂಟೆಗೆಂದೊರ್ಬರ್ಗೊಂಡು ಮುರ್ಬ ಮಸಗಿದಂತೆ ಸಡಗರಿಸಿ ಸವುಕಟ್ಟೆ ಸನ್ನೆದೋಱೆ

ಬಡಿಕೋಲ್ ಕಿರ್ಗಟ್ಟಿ ಹಾಸಂ ಶುನಕವಿತತಿ ಹೇರಿಟ್ಟ ಕೂರಂಬುಗಳ್ ಕೈ । ಪೊಡೆ ಬಿಲ್ ಪುಲ್ದಂಡೆ ಬೆಳ್ಳಾರ್ಪರ್ ಟವೆರೆಬಲೆಗಳ್ ಸಾಳುವಂ ಕೂಳೆಗಾಳಂ॥ ಗಿಡುಗಂ ಬಲ್ಭಂಡಿಯೊಳ್ ದೀಹದ ಪುಲಿ ನಿಶಿತಾಸ್ತ್ರಂಗಳುಗ್ರತ್ವಮಂ ಸಂ । ಗಡಿಸುತ್ತಿರ್ದೊಪ್ಪೆ ವಿಂಧ್ಯಾಟವಿಗೆ ನಡೆದುದುದ್ಯತ್ಕಿರಾತಪ್ರಜಾತಂ ॥ ೭೯

ತಡಿಕೆವಲೆ ಕಣ್ಣಿವಲೆ ನಿ ।
ಟ್ಟೆಡುಕಿಲ್ವಲೆ ಗೂಂಟವಲೆ ಪೊಣರ್ಚುವ ಬಲೆ ಮುಂ ॥
ಬಿಡುವಲೆ ನಡುವಲೆ ತಡೆವಲೆ ।
ಸಿಡಿವಲೆ ನಿಡುವಲೆಗಳೊಪ್ಪಿದುವು ಲುಬ್ಧಕರೊಳ್ ॥ ೮೦

ಆಗಳ್

ಹರಿಣನ ಬೇಂಟೆ ಪೆರ್ಬುಲಿಯ ಬೇಂಟೆ ವರಾಹನ ವೀರಬೇಂಟೆ ಪೇ ।
ರ್ಗರಡಿಯ ಬೇಂಟೆ ಹೆಮ್ಮರೆಯ ಬೇಂಟೆ ವಿಹಂಗದ ವೊತ್ತವೇಂಟೆ ತ ॥
ತ್ಕರಿಗಳ ಬೇಂಟೆ ಸಿಂಹಶರಭಂಗಳ ಬೇಂಟೆಗಳಾಯಹಾದಿಯಾದ ಭೀ ।
ಕರಮೃಗಸಂಘಸಂಹನನಮುಣ್ಮಿತು ಪರ್ವಿದರಣ್ಯಮಧ್ಯದೊಳ್ ॥ ೮೧

ನಡೆಯೆಂಬಬ್ಬರಿಸೆಂಬ ಪರ್ವಿ ಪರಿಯೆಂಬಾರೆಂಬ ಸಾರೆಂಬ ಸಂ ।
ಗಡಿಸೆಂಬಸ್ತ್ರಮಿರೆಂಬ ಸಾರ್ದು ಸರುವಂ ಕಟ್ಟೆಂಬ ಮುಟ್ಟೆಂಬ ಪಿಂ ॥
ದಡಸೆಂಬೊತ್ತರಿಸೆಂಬ ಸುತ್ತಿ ನಿಲಿಸೆಂಬೈಯ್ದೆಂಬ ಮೊಯ್ದೇಱುತುಂ ।
ಪೊಡೆಯೆಂಬೊಂದು ಪುಳಿಂದವೃಂದನಿನದಂ ಪೊಣ್ಮಿತ್ತು ಕಾಂತಾರದೊಳ್ ॥

ಇಡು ವೊಲನಂ ತೆರಳ್ಚದಿಸು ಪುಲ್ಲೆಗಳಂ ಬಲೆಯೊತ್ತಿ ಖಡ್ಗಿಯಂ ।
ಪಿಡಿ ಮರೆವಿಂಡನೆಟ್ಟು ಪುಲಿಯಂ ಛಲದಿಂದಿಱಿ ಪಂದಿಯೊತ್ತುಗೊಂ ॥
ಡೊಡೆ ಬಿಡು ನಾಯ್ಗಳಂ ಸಮೆದ ಪೆರ್ಗುಱಿಯೊಳ್ ಕರಿಪೋತಕಂಗಳಂ ॥
ಕೆಡೆಪು ಮರಳ್ಚು ಸಿಂಹಮನೆನಿಪ್ಪ ಘನಧ್ವನಿಯಾಯ್ತರಣ್ಯದೊಳ್ ॥ ೮೩

ನಡುಗಿತ್ತು ವಿಹಗತತಿಯುಱ ।
ರ್ಕುಡುಗಿತ್ತು ಮೃಗಾಳಿ ತಮ್ಮ ನಿಜಪೋತಕಮಂ ॥

ಮುಡಗಿತ್ತು ಗೊಡುಗುಹೆಯೊಳ್ ।
ತೊಡಗಿತ್ತು ಕಿರಾತಭೀಕರಧ್ವನಿ ವನದೊಳ್ ॥ ೮೪

ಆಸಂಭ್ರಮದೊಳೊರ್ವ ಪುಳಿಂದಂ ತನ್ನ ನಚ್ಚಿನ ನಾಯಂ ಮೊಲನ ಸರುವಂ ತೋಱಿ ಕೀಱಿ ಬಿಟ್ಟಾಗಳ್

ನಡೆನಡೆದು ನಸುಬಳ್ಳುಂಕು ।
ತ್ತೆಡಬಲನಂ ನೋಡಿ ಕೂಡೆಯಾಘ್ರಾಣಿಸುತುಂ ॥
ಗಿಡುವಿನ ಸರುವಿನ ದಗುವಿನ ।
ಮುಡುವಿನ ಬೞಗೊಂಡು ಶುನಕನಟ್ಟಿತು ಮೊಲನಂ ॥ ೮೫

ಅಟ್ಟಿದೊಡೆ ತಿರುಗಿ ಮುರಿಮುರಿ ।
ದೊಟ್ಟೈಸುತೆ ಕೊಂಕಿ ಪರಿಯುತೆಡನಂ ಬಲನಂ ॥
ದಿಟ್ಟಿಸುತೆ ನಿಂದು ನಿಲ್ಲದೆ ।
ನಿಟ್ಟೋಟದೊಳೋಡಿತೆಸೆವ ಮುಸಕದ ಶಶಕಂ ॥ ೮೬

ಬಿಡದೋಡೆ ಕಂಡು ಶಬರಂ ।
ಕಡುಮುಳಿದಱೆಯಟ್ಟೆ ತಿರುಗೆ ತಿರುಗುತ್ತುಂ ಸಂ ॥
ಗಡಿಸಿ ಪರಿದುಬ್ಬುಬೆನುತ್ತುಂ ।
ಬಡಿಕೋಲಿಂದಿಟ್ಟನಧಿಕಬಲನಂ ಮೊಲನಂ ॥ ೮೭

ಇಡೆ ತಿರುಗುತ್ತೆ ಬರ್ಪ ಬಡಿಕೋಲೊಳೆ ಸಿಲ್ಕುತೆ ಸಿಲ್ಕದಾಮೊಲಂ ।
ಗಿಡುಗಳೊಳೋಡಿ ಪೊಕ್ಕು ಪದದೊಳ್ ಘನರಾಹುವ ಕೋಟೆ ಭೀತಿಗೊಂ॥
ಡುಡುಪತಿಬಿಂಬದಿಂದೆ ಸರಿದೋಡಿ ಮುಗಿಲ್ಗಳೊಳೆಯ್ದೆ ಪೊಕ್ಕ ಗಂ ।
ಡುಡುಗಿ ಸುರುಳ್ದು ತಚ್ಚಶಕನಂ ನೆರೆ ಪೋಲ್ತುದು ಕಾಡ ಪೆರ್ಮೊಲಂ ॥

ಮತ್ತೊಂದೆಡೆಯೊಳ್

ಪಸರಂಬೆತ್ತೆಡೆಯಾದ ನೀಡಡಿ ಪೊದಳ್ದಾಕರ್ಣಮಾಕುಂಚಿತಾ ।
ಸ್ತ್ರಸಮೇತೋಚ್ಚಕರಾಗ್ರಮಸ್ಖಲಿತಚಿತ್ತಂ ಸಂಸ್ಫುಟಾಲೋಕನಂ ॥
ಕುಸಿದಂಗಂ ಮಿಗೆ ದೃಷ್ಟಿಮುಷ್ಟಿಶರಸಂಧಾನಂಗಳೊಂದಾಗೆ ತಾ ।
ನಿಸಲೊಂದೊಂದು ಕುರಂಗಮಂ ಶಬರನೊಪ್ಪಿರ್ದಂ ಮಹಾರಣ್ಯದೊಳ್ ॥

ಕಂಡುದು ಮೃಗಮಲ್ಲಿ ಭಯಂ ।
ಗೊಂಡುದು ಪೆಪ್ಪಳಸುತೆದಿರುತೋಡಲ್ಕೆ ಕರಂ ॥

ದಂಡಿಸುತಿರ್ದುದದೆಂದುರು ।
ಚಂಡಾಸ್ತ್ರದಿನಚಲಶಬರನಿಸೆ ಕಾನನದೊಳ್ ॥ ೯೦
  ತಿರುಗುವ ತನು ಬೆಚ್ಚುವ ಕಣ್ ।
ಪರಿವ ಮನಂ ನಟ್ಟ ಕಿವಿಯುಡಂಗುವ ಸುಯ್ಯಿಂ ॥
ಸರಳಂ ಮೀಱುತೆ ಹರಿಣಂ ।
ಸರಳಸಿತ್ತೈದಾಱನೇೞನೆಂಟೊಂಬತ್ತುಂ ॥ ೯೧
  ಆಸಮಯದೊಳ್

  ಕುನಿಕುನಿದು ವನದ ಗಿಡುಗಿಡು ।
ವಿನ ಮಱೆಮಱೆಯಲ್ಲಿ ಸುೞಿದು ಸುೞಿದೋಡುವ ತ ।
ಕ್ಕಿನ ಹರಿಣನನತಿಭರದಿಂ ।
ತನತನಗೆ ಪುಳಿಂದರಟ್ಟಿ ಮುಟ್ಟುತ್ತೆಚ್ಚರ್ ॥ ೯೨
  ಸಿಲ್ಕಿ ಶಬರಾಳಿಯೆಚ್ಚ ಸ ।
ರಲ್ಕಿಕ್ಕಿಱಿಗಿಱಿದು ನಟ್ಟು ಗಱಿದೋಱುತ್ತುಂ ॥
ನಾಲ್ಕುಂ ಮೆಯ್ಯೊಳ್ತೀವಿರೆ ।
ಸಿಲ್ಕಿದ ಮೃಗಮೊಪ್ಪುಮೀಗಡ ಶಱನಾಯ್ತಾಗಳ್ ॥ ೯೩

ಮತ್ತಂ ಪೆಱತೊಂದೆಡೆಯೊರ್ವ ಕಿರಾತನಾಥನಳವಿಯೊಳೋಡುತ್ತಿರ್ದ ಮೃಗಸಮೂಹಮಂ ಕಂಡು

  ಭಂಡಿಯ ಹುಲಿಯುಂ ಮೆಲ್ಲನೆ ।
ಕೊಂಡಿಱಿವುತೆ ಸರಿದು ಕೊರಲ ಹಾಸದ ನೇಣಿಂ ॥
ಕಂಡಳವಿಗೆ ಸಿಲ್ಕಿದ ಮೃಗ ।
ಮಂಡಲಮನದರ್ಕೆ ತೋಱೆ ಶಬರಾಧೀಶಂ ॥ ೯೪

ನಿಮಿರ್ದಂಗಂ ನೀಳ್ದ ಮುಂಗಾಲುಡುಗಿ ನಡೆವ ಪಿಂಗಾಲ್ ಚಲತ್ವಾಲದಂಡಂ
ವಿಮಳೋಚ್ಚಂಡಾಕ್ಷಿ ಸೂಕ್ಷ್ಮಶ್ವಸಿತವದನಮತ್ಯೇಕಚಿತ್ತಂ ನಿರಸ್ತ ॥
ಕ್ರಮಗಾಢಂ ಕೂಡೆ ತನ್ನೊಳ್ ಬಗೆದಳವಿಗೆ ಮುಂ ಕೊಂಡು ಧಿಂಕಿಟ್ಟು
ಪಾಯ್ದು ॥ ತ್ತಮರುತ್ತಾಱುತ್ತೆ ಕೀಱುತ್ತಡಸಿ ಕೆಡಪಿತೊಂದೇಣನಂ ಚಿತ್ರ
ಕಾಯಂ ॥ ೯೫

ಪೊದಱೊಳಗತ್ಯುನ್ನತತರ ।
ಮದಾಂಧತಾನಂತಬಲವಿಭೂಷಣನಪ್ಪ ॥
ಗ್ಗದ ಪೆರ್ಬುಲಿಯಿರೆ ಶಬರರ್ ।
ಮುದದಿಂದಂ ನೋಡಿ ಕಂಡು ಮತ್ತೊಂದೆಡೆಯೊಳ್ ॥ ೯೬

ಮೆಳೆಯೊಳಗಿರ್ದ ಪೆರ್ಬುಲಿಯುಮನಾರ್ದು ಪುಳಿಂದನಿಕಾಯಮೆೞ್ಬಿ ಪಿಂ।
ಗಳತರಲೋಚನಂ ಬಹಳಸಂಹನನಂ ಪೃಥುಳಾಸ್ಯಗಹ್ವರೋ ॥
ದ್ಗಳಿತನಿಶಾತದಂಷ್ಟ್ರನತಿರೋಷಮನಂ ಘನಚಿತ್ರಕಾಯನು ।
ಜ್ಜ್ವಳಚರಣಂ ವಿಘೂರ್ಣಿತಗಳಂ ಪೊಱಮಟ್ಟುದುದಗ್ರವೃತ್ತಿಯಿಂ॥ ೯೭

ಪೊಱಮಡೆ ಕಂಡು ಗಂಡು ಮಿಗೆ ದಂಡೆಯನಿತ್ತು ಕಱುತ್ತು ಪತ್ತೆ ಸಾ ।
ರ್ದಱಿದೆ ನಿಲುತ್ತೆ ಸುತ್ತಿದ ಕಿರಾತಕುಲಂ ಮುರಝುಭಾಷೆನುತ್ತೆ ಬೊ ॥
ಬ್ಬಿಱಿಯೆ ಕುನುಂಗಿ ಕುಕ್ಕುಱಿಸಿ ಸಪ್ಪನೆ ಕಿಬ್ಬಲಗಿಂ ಕಡಂಗಿ ಕಾ ।
ಯ್ದಱಿದನದೊರ್ವ ಲುಬ್ಧಕನಗುರ್ವಿನ ಪೆರ್ಬುಲಿಯಂ ವನಾಂತದೊಳ್॥ ೯೮

ಮತ್ತವೊಂದೆಡೆಯೊಳ್ ಪುಳಿಂದನಾಥರೊಂದಾಗಿ
ತನತನಗೆ ಹಂದಿವೇಂಟೆಗೆ ।
ವನಚರರ್ಕೈತಂದು ನಿಂದು ನೀರ್ದಾಣದೊಳೆ ॥
ಗ್ಗಿನ ಮರದ ಮಱೆಯೊಳಿರೆ ಮೆ ।
ಲ್ಲನೆ ಬಂದತ್ತೊಂದು ಸೊರ್ಕಿದೆಕ್ಕಲನಾಗಳ್ ॥ ೯೯

ಧೀರಂ ಪಿಂಗಳಲೋಚನಂ ನಿಶಿತದಂಷ್ಟ್ರಂ ಭೀಷ್ಮವಕ್ತ್ರಂ ಘನ।
ಕ್ರೂರಂ ವಜ್ರಸಮಾನರೋಮನಿಚಯಂ ಸಂಪೂರ್ಣಕಾಯಂ ಸ್ಥಿರಂ ॥
ಶೂರಂ ರೌದ್ರಗಭೀರಚಿತ್ತನಸಮಾನಂ ಸ್ವಲ್ಪಪುಚ್ಛಾನ್ವಿತಂ ।
ಘೋರಾರಣ್ಯಚರಂ ವಿರಾಜಿಸಿದುದುದ್ಯದ್ಧ್ರೀಕರಂ ಸೂಕರಂ ॥ ೧೦೦

ಬರೆ ಕಾಣುತ್ತಲ್ಲಿ ಭಿಲ್ಲಪ್ರಕರಮಡಸಿ ಕೂರ್ಪಾಯ್ಗಳಂ ಬಿಟ್ಟು ಬೊಬ್ಬಿ
ಟ್ಟರರೇ ಕೈಕೊಂಡು ನಾಲ್ಕುಂ ದೆಸೆಗೆ ಮಸಗೆ ಕಂಡೆಕ್ಕಲಂ ದಾಡೆಗುಟ್ಟು ॥
ತ್ತೆರಡುಂ ಕಣ್ಣಿಂ ಸ್ಫುಲಿಂಗಂ ಸುರಿದುಪುದೆನೆ ನೋಡುತ್ತೆ ತೀಡುತ್ತೆ ಕಲ್ಲಿಂ।
ದಱುದಂಷ್ಟ್ರಾಗ್ರಂಗಳಂ ಭೂಮಿಯುಮನುಱೆ ಬೆದಂಟುತ್ತೆ ಮುಂಗಾಲ
ಳಿಂದಂ ॥ ೧೦೧

ನಟ್ಟಡವಿಯೊಳಗೆ ಮುಳಿಸಿಂ ।
ಮುಟ್ಟುವ ನಾಯ್ಗಳನೆ ತುಂಡಿಸಲ್ಕೆಂದುಱೆ ಕಿ ॥
ಗುರ್ಟಟ್ಟುತೆ ಮುಂದಟ್ಟಿ ಪಿಡಂ ।
ಮುಟ್ಟುತೆ ಸೂಕರನಡರ್ದು ಸಾರ್ದುದು ಮೆಳೆಯುಂ ॥ ೧೦೨

ಕುಪ್ಪಳಿಸಿ ತುಱುಗಿ ಪರ್ವಿದ ।
ಱೊಪ್ಪವಸಿರದಂಡುಗೊಂಡು ಪಂದಿಯು ಬೞಿಯೊಳ್ ॥
ನೊಪ್ಪ ನೆಗೆದ ಬೞ ಪಾಯುತೆ ।
ಚಪ್ಪರಿಸುತ್ತಗಿದು ಬಗಿದು ತೆಗೆದುವು ನಾಯ್ಗಳ್ ॥ ೧೦೩

ಮತ್ತಮುವಱೊಳಗೊಂದು ಜಾತಿಜಾಯಿಲಂ ಪ್ರೋಸದೆ ನಿಂದು,

ಮುಳಿದಟ್ಟಿ ತಿರುಗಿ ನೋಡು ।
ತ್ತೊಳಪ್ರೊಕ್ಕು ಮರುಳ್ದು ಮತ್ತೆ ಬೆನ್ನಟ್ಟಿ ಕರಂ ॥
ಕಳಿದು ಪಿಡಂಬಾಯ್ದಲಿಲಿಂ ।
ಬಳಸುತ್ತಿರೆ ನಿಂದ ಪಂದಿಯುಂ ಶುನಕೇಂದ್ರಂ ॥ ೧೦೪

ಮಿಕ್ಕು ಪುಗಲಿತ್ತು ಕಿರ್ಗ ।
ಣ್ಣಿಕ್ಕುತ್ತೊಳಪ್ರೊಕ್ಕ ಜಾಯಿಲನ ಬಡನಡುವಂ ॥
ಚಕ್ಕನೆ ತುಂಡಿಸಿ ಮಱೆಯುತೆ ।
ಧಿಕ್ಕರಿಸಿತ್ತತುಳಕೋಪನೀಡಂ ಕ್ರೋಡಂ ॥ ೧೦೫

ಆಗಳ್

ಅಳ್ಕಿ ಪುಳಿಂದಂ ಕಾಣುತೆ ।
ತಚ್ಕೈಸಿಯೆ ಕೊಂಡು ಶುನಕನೆರಡುಂ ಕಡಿಯುಂ ॥
ಕಾಲ್ಕೆರ್ದು ತಗುಳ್ದ* ತೆಱದಿಂ ।
ನಿಚ್ಕೈಸದೆ ನೊಂದು ಬೆಂದು ಬೞಲುತ್ತಿಂಪಂ ॥ ೧೦೬

ಪಾಸಿನ ಮೇಲೆ ಪಟ್ಟಿರಿಸಿ ಪಾಲೆಱೆದೆನ್ನೊಡಗೂಡಿ ಬಾಲಕಾ ।
ಭ್ಯಾಸದಿನೆತ್ತಿ ಸತ್ತಿಗೆಯ ತಣ್ಣೆಲೆಯೊಳ್ ಬಳೆವಂತು ಮಾಡಿದುದು ॥
ಚ್ಯಾಸನಪಲ್ಲಿ ಕುಳ್ಳಿರಿಸಿ ಸಾಕಿದ ಕುನ್ನಿಯುನೀವರಾಹನೀ ।
ಸಾಸಿಗನೀಕಘೋರನುನನೆನ್ನಯ ಮುಂಗೆ ಸಮಂತು ಕೊಲ್ವುದೇ ॥ ೧೦೭

ಒಡನೋಡುತ್ತೊಡವೆಳಸು ।
ತ್ತೊಡನಾಡಿಸಿದೆನ್ನ ಚೆನ್ನ ಕುನ್ನಿಯನೀಕ ॥
ಕ್ಕಡವಂದಿ ಕೊಂದುದಿನ್ನಿದ ।
ಱೊಡನಱವೆಂ ಕೊಲ್ಲದುೞಿಯೆನೀಸೂಕರನಂ ॥ ೧೦೮

ಎಂದು ಪುಳಿಂದನಾಥನುರಿದಾಱುತೆ ಕೂರಲಗಿಂ ಕಱುತ್ತು ಪೆ ।
ರ್ಗಂದಿಯನೆಯ್ದಿ ತೞ್ತೞಿದೊಡುಂಗುಟದಿಂದೆ ಶಿರಂಬರಂ ವರಾ ॥
ಹಂ ದಿಟವೆತ್ತೆ ಮತ್ತಿಱಿಯೆ ಮತ್ತು ಕರಂ ಸೆಳೆದೆತ್ತೆ ನೊಂದು ತಾ ।
ನೊಂದೆಸೆಯೊಳ್ ವರಾಹಪತಿಯೊಂದೆಸೆಯೊಳ್ ಕೆಡೆವತ್ತರಣ್ಯದೊಳ್ ॥ ೧೦೯

ಕೆಡೆದಿರ್ದ ಶಬರನಂ ಕ ।
ಕ್ಕಡವಂದಿಯನೀಕ್ಷಿಸುತ್ತೆ ಶಬರಸಮೂಹಂ ॥
ಬಿಡೆ ಕೊಂಡು ಕೊನೆದು ಬಲ್ಪಂ ।
ನುಡಿಯುತ್ತಿರ್ದನೆಗಮಿತ್ತ ಮತ್ತೊಂದೆಡೆಯೊಳ್ ॥ ೧೧೦

ಪ್ರಕುಪಿತದಿಂ ತೆಗೆದಿಸೆ ಮ ।
ಸ್ತಕಮಂ ಕರಿ ನೊಂದು ತಿರುಗೆ ಪರಿವ ಶರಂ ಪೇ ॥
ಚಕದಿಂದುರ್ಚಿ ಕರಂ ಲು ।
ಬ್ಧಕನಂ ತಾಗಿತ್ತು ಮಗುೞ್ದು ವನದೊಳ್ ಚಿತ್ರಂ ॥ ೧೧೧

ಮತ್ತಮೊಂದೆಡೆಯೊಳ್

ದರಿಯಂ ದಂತಾಗ್ರದಿಂದೀಡಿಱಿದು ಕೆಡೆವುತುಂ ಗುಲ್ಮವೃಕ್ಷಂಗಳಂ ತ ।
ತ್ಕರದಿಂದಂ ಸುತ್ತಿ ಕಿತ್ತೆತ್ತುತೆ ನಿಜನಿಪ್ರಳಚ್ಛಾಯೆಯಿಂ ಕುಂಭಿಗೆತ್ತು ॥
ದ್ಧುರಕೋಪಾಟೋಪದಿಂ ಕಂಡೆಱಗುತೆ ಮದಸಾರಭ್ಯಲೋಲುಪ್ತಭೃಂ
ಗೋ । ತ್ಕರನಂ ಕರ್ಣಾಗ್ರದಿಂ ಸೋವುತೆ ಕರಿಯಿರೆ ಸಿಂಗೊಂದವಭ್ರಾ
ಭ್ರಕಾಯಂ ॥ ೧೧೨

ಕಂಡು ಕಿರಾತನೊರ್ವನಿಭಮಸ್ತಕಮಂ ತಕಿ ಶಲೋಭದಿಂದೆ ಕೋ ।
ದಂಡಮನಾಪಿನಿಂ ತೆಗೆದು ಕೂರ್ಪಿನ ಬಾಣದಿ ಚೊಡುಚಿ ನೇ ॥
ದಂಡಲಲಾಟದಿಂ ಪೆಱಗೆ ಪೇೞಕಬೊಳ್ ಪಿಗೆ ಮೂಡೆ ತಲ್ಲಣಂ ।
ಗೊಂಡುದು ಕುರ್ಗಿಕ ಕ್ಕಱಿಸಿ ಭೀಕರ ತಿರುಗಿನು ಬಿಟ್ಟು ಭೂಮಿಯೊ

ಬೀಱೆ ಪರಿತಂದು ಶಬರಂ ।
ಸೀೞಿತ್ತುಂ ಕುಂಭದೊಳಗಣಲ್ಲಿಯ ಮುಕ್ತಾ ॥
ಜಾಳಕಮಂ ಕೊಂಡು ಸುಖಂ ।
ದಾಳುತ್ತುಂ ಬಂದನಬಲೆಗೀವತಿಭರದಿಂ ॥ ೧೧೪

ಅಂತು ಬಂದು

ಮತ್ತಗಜಮಸ್ತಕದ ಪೊಸ ।
ಮುತ್ತಂ ಬಲ್ಪಿಂದೆ ತಂದೆನೆಂದೊಲವಿಂದಂ ॥
ವೃತ್ತೋತ್ತುಂಗಪಯೋಧರೆ ।
ಗಿತ್ತಂ ಮತ್ತೊರ್ವ ಶಬರಿ ಮಿಗೆ ನಗೆ ವನದೊಳ್ ॥ ೧೧೫

ಮತ್ತಮದಲ್ಲದೆ ಘನಸುಖ ।
ಚಿತ್ತಂ ಚಿತ್ತಜನ ಪೋಲೆ ಮನ್ಮಥರಾಗೋ ॥
ನ್ಮತ್ತನದೊರ್ವಂ ಲುಬ್ಧಕ ।
ನತ್ತಿತ್ತಂ ಶಬರಿಯಿಲ್ಲದೊಂದಡಿಯುನಿಡಂ ॥ ೧೧೬

ಕೆಲದೊಳ್ ಪುಳಿಂದಿಯಿರೆ ಪೆ ।
ರ್ಬುಲಿ ಬಂದೊಡಮಂಜನಳ್ಕನೋಡಂ ನೋಡಂ ॥
ಚಲದಿಂ ಕಾಡಂ ಕಾಡಂ ।
ಸಲೆ ಪಸಿವಂ ಮಱೆದು ತಣಿದು ಬೇಡಂ ಬೇಡಂ ॥ ೧೧೭

ಪೆಱತೊಂದೆಡೆಯೊಳ್ ಮುತ್ತಿಂ ।
ತುಱುಗಿದ ಮಂಡನಚಯಂಗಳಂ ತೊಟ್ಟೊಲವಿಂ ॥
ದೆಱಗಿ ಕುಣಿದಾಡಿಸುತ್ತುಂ ।
ಮೆಱೆವ ಪುಳಿಂದಿಯರ ನಿಂದ ಮೊತ್ತದೊಳೊರ್ವಳ್ ॥ ೧೧೮

ಎಳನವಿಲ ಕಲಾಪಂಗಳ ।
ನಳವಡೆ ತಳೆದುಂ ಮದೇಭಮಸ್ತಕಮುಕ್ತಾ ॥
ಫಳವಿಲಸಿತಸಾಪತ್ನೀ ।
ಕುಳದೊಳ್ ಗರ್ವಿಸುವ ಶಬರಿಯಿರವತಿಚಿತ್ರಂ ॥ ೧೧೯

ನಡೆದು ಗಟಿಗಟಿನೆ ಮತ್ತೊಂ ।
ದೆಡೆಯೊಳ್ ಗಜವೈರಿದೆ ಪೊಕ್ಕು ನದಿಯೊಳ್ ಕಡುನೀ ॥

ರಡಸಿ ತೆಗೆದೀಂಟೆ ಜಲವಂ ।
ಬಿಡೆ ತವೆಮ್ಮೊಳ್ ತೀವಿಕೊಂಡು ಚೆಲ್ಲುವ ಪದದೊಳ್ ॥ ೧೨೦

ಇಳೆಯೊಳ್ ತಮ್ಮಂ ಕಾದಾ ॥
ಪುಳಿಂದನಾಯಕಿಯರಪ್ಪ ವರ್ಗರ್ಘ್ಯಮನಂ ॥
ತಳವಡೆ ಕುಡುವಂತಿರ್ದುದು ।
ಜಳಪೂರಿತಹಸ್ತದಿಂದೆ ಹಸ್ತಿಕದಂಬಂ ॥ ೧೨೧

ವಿಲಸನ್ಮತ್ತಗಜೇಂದ್ರೋ ।
ಜ್ಜ್ವಲನಿರ್ಮಳದಂತಮುಸಲಹಸ್ತಸಮೇತಂ ॥
ನಲಿನಪ್ಪಿಮ ಕಿರಾತಸ್ತ್ರೀ ।
ಕುಲಮೊಬ್ಬಗಳಿಗೊಂಡು ನಿಂದು ಮತ್ತೊಂದೆಡೆಯೊಳ್ ॥ ೧೨೨

ತಳಿರ್ಗಳ ಸೀರೆಯುಟ್ಟು ಗುಲುಗುಂಜೆಯ ಹಾರಮನಾಂತು ಮುಂಬಿಳಿ!
ತಳಪಲಿಕಾಂತದಿಂ ಸಮೆದೊರಲ್ಗಳೊಳಂ ಬಿದಿರಕ್ಕಿಯಿಕ್ಕಿ ನಿ ।
ಚ್ಚಳಮನ ಸುವ್ವಿ ಕಾತೊಡೆಯ ಸುವ್ವಿ ಮನೋಹರ ಸುವ್ವಿ ಸುವ್ವಿಯಂ॥
ದಳವಡೆ ರಾಗದಿಂ ತಳಿಸಿದರ್ ವನವಲ್ಲಿ ಪುಳಿಂದಕಾಂತೆಯರ್ ॥ ೧೨೩

ಅದಲ್ಲದೆ ಮತ್ತೊಂದೆಡೆಯೊಳ್ ಅತಿಬಳನೊರ್ವ ಪುಳಿಂದನಾಥಂ ಬಡನೆ
ಯ ಬೇಡರ ಮುಂದಾಸುರದಿಂ ಭಾಷೆಗುಡುತ್ತಿರ್ದನದೆಂತೆಂದೊಡೆ:—

ನಿಂದೆಂನಿಂದೆಂತುವೀವೀರದ ರದನಿ ಕರಂ ಬಂದೊಡಂಬಂದೊಡಂಗೊಂ ।
ಡಂದಾವಂದಾವನಂತಿರ್ಪ ಸರಪಸರನುಂ ಕಾಣ್ಬನಾನಾತದಿರ್ಕೆ ॥
ನ್ನಂದಂನಂದಂಕನಲ್ಲಿ ಪ್ರೌಢೆ ಪ್ರೌಢೆ ಪ್ರಲಿಯುಂ ಬೇಗದಿಂ ಬೇಗದಿಂದೆಂ ।
ಬಂದಂ ಬಂದಂತೆ ಕೊಂದಾರ್ಕುವ ಕುಮರನನಂ ಸೋಂಕಿರಾತಂ ಕಿರಾತಂ॥

ಬಿದಿರಂ ಬಿದಿರಂ ನಡೆ ನಡೆ ।
ಯುದಿಯುದೆ ಪಿಡಿ ಪಿಡಿಗೆ ಬಂದ ಕರಿಯುಂ ಕರಿಯಂ ॥
ಪದೆದೆಚ್ಚಂ ಕಲಿ ಕಲಿ ಪೇ ।
ಸದೆ ಸದೆದಪೆನೆಂದು ಬೇಡರೆನೆ ನಲಿದಿಸುವಂ ॥ ೧೨೪

ಇನಿಯುನೊಡಗೊಡಲೆಂದಿಂ ।
ಪಿನ ರಮ್ಯಸ್ಥಳಮನರಸಿ ಬರುತಂ ನನಯಾ ॥

ಪನೆ ಮುಗ್ಧ ತುಱುಗಿ ಪರ್ವಿದ |
ವನದೊಳಗಣ ಮೊಳೆಗಳೊಳಗೆ ಪುಗುವನ್ನೆವರಂ ॥ ೧೨೬
ಬೆಳಗಂ ಕತ್ತಲಿಸುವ ಮೊಳೆ |
ಯೊಳಗಂ ಪೊಕ್ಕಲ್ಲಿ ತನ್ನ ಕಣ್ಗಳ ಬೆಳಗಿಂ ॥
ಬೆಳಗಾಗಿರೆ ಬೆಳಗಿಲ್ಲದ |
ಮೊಳೆಯಿಲ್ಲೆಂದಬಲೆ ಶಬರಿ ಸೊಬಗುಱಿದಿರ್ದಳ್ ॥ ೧೨೭
ಇರೆ ಸುಪ್ರೌಢಕಿರಾತಂ |
ತರುಣಿಯ ಮುಗ್ಧತೆಗೆ ಮೆಚ್ಚಿ ತರಳೇಕ್ಷಣೆಯಂ ॥
ಬರೆ ಮುಚ್ಚಿಯಿಡಿದ ಕತ್ತಲೆ |
ದೊರೆಕೊಂಡತ್ತೆಂದು ನೆರೆದು ಸುಖಿಯಾಗಿರ್ದಂ ॥ ೧೨೮

ಮತ್ತಮತಿವಿಸ್ತಾರಮಾದ ಘೋರಾರಣ್ಯಂ ಕಡುನಿಡಿದುಗೊಂಡಂಬರಮಂ ಚುಂಬಿಸಿ ನಳನಳಿಸಿ ಕೊಬ್ಬಿ ಬೆಳೆದ ಪೆರ್ಬಿದಿರ ತುದಿ ತಾಗಿ ಪಱಿದ ಕಿಱುಮುಗಿಲ್ಗಳಿಂದವನಿತಳಕ್ಕಾಲಿಕಲ್ಲೊಕ್ಕು ಚೆಲ್ಲಿದಂತಿರ್ದ ಮುಕ್ತಾಫಲಂಗಳಂ ಪಂಶತಂಡುಲಂಗೆತ್ತು ಸುತ್ತಿ ಬಂದಾಡುಗುವ ಮುಗ್ಧಶಬರಿಯರಂ ನಗುವ ಕಾಮುಕಶಬರಸಂದೋಹದಿಂ; ಮತ್ತಂ ಪೆಱತೊಂದೆಡೆಯೊಳ್ ಪ್ರಿಯ ಬೇಂಟೆಯ ಕಾಳೆಗದ ಕೋಳಾಹಳದ ಮಲ್ಲಾಮಲ್ಲಿಯಿನಾದ ಕರನಖರನವವ್ರಣಕಳಂಕಾಂಕಿತಭುಜವಳಯನಾಗಿ ಬಂದ ಪುಳಿಂದನಂ ಕಂಡು ಕಡುಮುಳಿದು ಪ್ರಣಯಕಲಹಂ ಕೈಗಣ್ಮೆ ಪಲ್ಲವದಿಂ ಪೊಯ್ದುಪೊಯ್ದುತಿಕೋಪದಿಂದುತ್ಕಂಠೆಯಾದ ನಲ್ಲಳ್ಗೆ ಲಲ್ಲೆಗರೆದು ಬೆರಲಂ ಕಚ್ಚಿ ಕಾಲ್ಗೆಱಗಿ ವಿನಯದಿಂ ತಿಳಿಪಿ ಮುಳಿಸಂ ಕಳಿಚ್ಚಿ ಕತ್ತಲಿಪ ಮೊಳೆಗಳೊಳ್ ಉತ್ತಾನಲತೆ ಚಿತ್ತಜಂಗೆತ್ತಿದುಪ್ಪರವಟ್ಟಿನಾಗೆ ನಿರಂತರಂ ನೆರೆವ ಕಿರಾತಮಿಥುನಂಗಳಿಂ; ಮತ್ತಂ ಸಂಚಿತ ತಿಳಕಿತ ವರ್ಧಕ ಪ್ರೋಳಿತ ಪತಿವರ್ತಿತ ಮಧೋನುಬಂಧಿನಿ ಕ್ರೋಧಿಸಿ ಗಂಧಚಾರಿಣಿಯೆಂಬ ಸಪ್ತಾವಸ್ಥೆಯ ಮದದಿಂ ಮುಂದುಗಾಣದೆ ತನ್ನ ನೆೞಲಂ ಪ್ರತಿಗಜಮೆಂದುಱಿದೆ ಕಡುತ್ತೆಱಗಿ ಬೆಟ್ಟದ ತೋರದ ಪೆಂಟೆಗಳನೆತ್ತಿಯೆತ್ತಿ ಕೋಪಮಾಱದೆ ಮಿಱುಬಂದು ನೀಡುಂ ನೋಡಿ ಕೋಡುಂಗಲ್ಲಂ ಪರಿದು ಪೊಯ್ದು ಕೋಡುಡಿಯೆ ನಾಣೆ ನೊಂದು ನೋವಂ ಮಱೆದು ಚಂದ್ರಕಾಂತಶಿಲಾತಳದೊಳ್ ಪಾಪೊರಳಿವ ನಿಜಬಿಂ

ಬನಮಂ ಕಂಡು ಕರಿಣಿಗೆತ್ತಿಡಿಗಡಿಗೆ ಕರಮನಿಟ್ಟೊರಯ್ದು ಸೊಗುತಿರ್ಪ
ಮದಾಂಧಗಂಧಸಿಂಧುರಂಗಳುಂ; ಮತ್ತಮೊಂದೆಡೆಯೊಳ್ ಪಸಿವೆತ್ತು ಮುಸಗಿ
ಬಂದು ಬಿಲಂಗಳೊಳಗಣಿರುಂಪೆಗಳಂ ಮೊಗಮಿಟ್ಟೂದಿಯೂದಿ ತಿಂದು ತ
ಣಿಯದೆ ತವಕದಿಂ ನಡೆನಡೆದು ನಳನಳಿಸುವ ಬೇಲ ಮರನ ತಳದೊಳುದಿ
ರ್ದ ಪಕ್ವಫಲಂಗಳನಾಯ್ದುಕೊಂಡು ಗಜಿಗಜನೆ ಪರಿದು ಪಾಸಱೆಯು
ಮೇಲಾಸುರದಿಂದೊಡೆದೊಟ್ಟ ಜೇನ ಹುಟ್ಟಗಳನಿಟ್ಟೆಲಸದೆ ಕಲಸಿ ತ
ಣಿವಿನಂ ತಿಂದು ತೇಗಿ ತೇಗಿ ತೂಗಿ ಕಲೆಕೆಲೆದು ಕುಪ್ಪಿಕುಪ್ಪಿಯುಬ್ಬಿ ಕೊ
ಬ್ಬಿ ನಲಿನಲಿದಾಡುವ ಭಲ್ಲೂಕನಿಕಾಯದಿಂ; ಮತ್ತಮೊಂದೆಡೆಯೊಳ್ ಎಳ
ವುಲ್ಲುಗಳಂ ಮೇದು ತಿಳಿನೀರಸೀಂಟಿ ನೆೞಲೊಳ್ ಪಟ್ಟಿರ್ದ ಬೆಂಪೇೞ್ವೆ
ಲೋೞ್ ಹಿಂಡಿಲ್ಗಟ್ಟಿ ಮೇಸಂ ಮಗುಳ್ಚಿ ಕಟ್ಟಿದಿರ ಪುಲಿಯಂ ತೊಟ್ಟನೆ
ಕಂಡು ಭೋಂಕನೆೞ್ದು ಮೊಗಮನೆತ್ತಿ ಕಡುಮುಳಿಸು ಬಾತ್ತಿಗೊಂಡು ಚ
ಲದಿಂ ಮಲೆದು ಘಳಿಲನೈದೆ ಪಾಯ್ದು ಪ್ರಾಯ್ದು ಕೋಡಿಟ್ಟು ಜಲ್ಲಿಸಿ ಬಿಸು
ಟ್ಟು ನೊಸಲ ತೀಂಟೆ ತೀಱದೆ ಕೊಣಕಿಟ್ಟು ಮುರಿದು ಪರಿದು ಪಿರಿದಪ್ಪ
ಪುತ್ತಿನೊಳೊತ್ತಿ ಪ್ರೀದಿರ್ದ ಮೆತ್ತಿರ್ದ ಕರ್ದಮಂ ನಿಟಿಲತಟದೊಳ್ ಪತ್ತಿ
ರ್ದ ಧೂಳಿ ಮೆಯ್ಯೊಳ್ ಮೇಱೆಯೆ ಅತ್ಯುಗ್ರದಿಂ ಮಲ್ಲರೊಳ್ ಮಲೆದು ಪೂ
ಱಿಮಟ್ಟ ಕಾಳರಕ್ಕಸರಂತಿರ್ಪ ಕಾಟ್ಕೋಣಂಗಳುಂ; ಮತ್ತಮೊಂದೆಡೆಯೊ
ಳ್ ಮರದಿಂ ಮರಕ್ಕೆ ತಿರುಗಿ ಪಾಯ್ದೊಳಗೊಂಬಿನಲ್ಲಾಡಿ ತೂಗಿ ತೊನೆ
ದಳ್ಳಿಱಿದು ಕುಳ್ಳಿರ್ದು ಕಾಲ್ಗಳಂ ನೀಡಿ ಬಱಿಯುಂ ಬೆರಂಟಿ ಬಿಸಿಲ್ಗಾಯ್ದು
ಪಸಿವೆತ್ತಿ ಮೇಲಂ ನೋಡಿ ನೀಡಿ ನೆಗೆದು ತಿಣ್ಣಗೊಂಬಿನೊಳ್ ಬಣ್ಣವಱಿ
ಯದ ಪಣ್ಣಂ ತಿಂದು ದಣ್ಣನೆ ದಣಿದು ಕಣ್ಣಂ ಬಿಟ್ಟು ಪುಬ್ಬಿಕ್ಕಿ ಪಲ್ಗಿಱಿ
ದು ಹುಬ್ಬಿಂದು ಕಿರಾತಕಾಂತೆಯರಂ ಮಿಗೆ ನಗಿಸುತಿರ್ಪ ಮರ್ಕಟಪ್ರಕರ
ದಿಂ; ಮತ್ತಮೊಂದೆಡೆಯೊಳ್ ಚಿತ್ತಜಕೇಳಿಗೆಂದು ಮತ್ತಗಜಂ ಪರಿವ ಕರಿ
ಣಿಯು ಬೞಸಂದು ಬೋಳೈಸಿ ಕರಮಂ ನೆಗಪಿ ಕೂಡುವ ಪೇಚಕಚುಂಬ
ನಪ್ರಾರಂಭಸಮಯದೊಳ್ ತೊಟ್ಟನೆ ಕಂಠೀರವರವಮಂ ಕೇಳ್ದು ಬೆಳ್ಳಾ
ಗಿ ಬಿಗುತಿರ್ದ ರಾಗಮುಱಿದಗಿದು ಸುಗಿದು ಹಣುಗಿ ಹಂಮುದಂಬೋಗಿ ಪರಿ
ದೋಡಿ ಪಿರಿಯ ಗುಹೆಯೊಳಗಡಂಗಿ ಬೆಡಂಗೞಿದು ತಡಂಗೆಡೆದಿರ್ಪ ಮಾ
ತಂಗದಂಪತಿಗಳುಂ; ಮತ್ತಮೊಂದೆಡೆಯೊಳಾರ್ದ ಸಾರ್ದ ಪರಿತರ್ಪ

ಕಿರಾತನಿಕರದೊಳೊರ್ವ ಲುಬ್ಧಕಂ ಯಮಕಿಂಕರನಂತೆ ಮುಳಿದು ಪರಿತಂದು ಪಿರಿದಪ್ಪ ಪಕ್ಷಿಗಳ್ ನೆರೆದಿರ್ದ ಶಾಲ್ಮಲಿಯ ತುದಿಯನದಿರದೆ ನೋಡಿ ಮೀಱಿದ ಮರನನೇಱಲ್ ಸಾಲದೆ ಕಾಲಪಾಶದಂತೆ ಮುರಿದು ಪರಿದು ಪರ್ವಿದ ಪೆರ್ಬಳ್ಳಿಯನಡರ್ದೇಱಿ ಬಿಡದೆ ಬರ್ಪುದಂ ತಱಿಯದೆ ಕಂಡು, ನಡನಡಂ ನಡುಗಿ ತಲ್ಲಣಿಸಿ ಮಲ್ಲಳಿಗೊಂಡು ಪೋಟಿಲೊಳಗಣ ಬಾಲವಿಹಂಗಂಗಳನೆಱಂಕೆಯೊಳಿಱುಕಿಕೊಂಡು ಪಾಱಲನುವಾಗಿ ತೂಱಲ್ಗೊಂಬಿನೊಳಿರ್ದ ವಿಹಂಗಸಂಕುಳದಿಂ ಪತಿಸೌಂದರ್ಯಮನುರುತರವಿಕ್ರಮಮನುದ್ಯದ್ಭಯಾನಕಮನೂರ್ಜಿತಸಂಪದಮನಪಾರಗಭೀರತೆಯನನಂತಕೌತುಕಮನನೇಕರೌದ್ರರಸಮನೊಳಕೊಂಡಿರ್ದುದು. ಅಂತುಮಲ್ಲದೆಯುಂ

ಇಂತುದ್ಯನ್ಮೃಗಸಂಘದಿಂ ವನಚರಸ್ತೋಮಂಗಳಿಂ ಭೂಮಿಜಾ।
ನಂತಶ್ರೇಣಿಗಳಿಂ ವರಣ್ಯಕುಲದಿಂದಂ ತಾಪಸವ್ರಾತದಿಂ ॥
ಸಂತಂ ಸುತ್ತಿದ ಸೂಕ್ಷ್ಮಗೋತ್ರಚಯದಿಂ ಗಂಧರ್ವಸಿದ್ಧಾಮರೌ।
ಘಂ ತೀವಿರ್ದ ಮಹಾಗುಹಾವಳಿಗಳಿಂ ಬೊಪ್ಪಿರ್ದುದುದ್ಯನ್ನಗಂ॥ ೧೨೯

ಪರಮಸ್ವಾಮಿ ಜಟಾಧರಂ ಶಶಿಧರಂ ಗಂಗಾಧರಂ ಕಾಲಸಂ।
ಹರನಜ್ಞಾನಹರಂ ಪುರತ್ರಯಹರಂ ಸೌಖ್ಯಾಕರಂ ಶಂಭು ಶಂ ॥
ಕರನಾನಂದಕರಂ ಸಮಂತೆನಗೆ ಭಕ್ತಿಜ್ಞಾನವೈರಾಗ್ಯಮಂ ।
ಕರುಣಂಗೆಯ್ಗೊಲವಿಂದೆ ಹಂಪೆಯ ವಿರೂಪಾಕ್ಷಂ ಶಿವಾವಲ್ಲಭಂ ॥ ೧೩೦

॥ ಗದ್ಯ ॥

ಇದು ಸಮಸ್ತಸುರಾಸುರನಿಕರಮಕುಟಖಚಿತದಿನಕರಕರಾಧಿಕ್ಯಮಾಣಿಕ್ಯ
ಪ್ರಭಾಪುಂಜರಂಜಿತಚರಣನೆನಿಪ ಪಂಪಾವಿರೂಪಾಕ್ಷ ಶ್ರೀಪಾದಕಮಲ
ಮಕರಂದಮಧುಕರಾಯಮಾಣ ಸತ್ಕವೀಶ್ವರ
ಹಂಪೆಯ ಹರಿ ಹರದೇವ ವಿರಚಿತಮಪ್ಪ

ಗಿರಿಜಾಕಲ್ಯಾಣಮಹಾಪ್ರಬಂಧದೊಳ್

ಹೈಮಾಚಲವರ್ಣನಂ ಪ್ರಥಮಾಶ್ವಾಸಂ,

॥ ದ್ವಿತೀಯಾಶ್ವಾಸಂ ॥

— ಗಿರಿರಾಜದೇಶಪುರಾಸ್ಥಾನವರ್ಣನಂ —

ಶ್ರೀಮಚ್ಛರ್ವಂ ಪರಮ ।
ಸ್ವಾಮಿ ದಯಾವಾರ್ಧಿ ಭಕ್ತಿಯಿಂ ಕುಡುಗೆಮಗು ॥
ದ್ದಾಮಸುರರಾಜರಾಜಂ ।
ಸೋಮಧರಂ ಕೂರ್ತು ಪಂಪೆಯ ವಿರೂಪಾಕ್ಷಂ ॥ ೧

ಆಹಿಮಶೈಲನುತ್ತರವಿಭಾಗದೊಳೊಪ್ಪುವ ಪ್ರಪಾತ್ತನಂದನ ।
ವ್ಯೂಹ ತಟಾಕವೀಧಿ ಕಳಮಾವಳಿ ಕೈರವರಾಜಿಯುಜ್ಜಸಂ॥
ದೋಹ ವಿಶಾಲರಾಜನಗರೀವ್ರಜಚಾರುನದೀನದಾಳಿಯು ।
ತ್ಸಾಹಸಮಗ್ರದಿಂದೆ ಗಿರಿರಾಜನ ದೇಶಮಿಳಾವಿಭೂಷಣಂ ॥ ೨

ಸೊಗಯಿಪ ದೇಶಮಚ್ಚರಿಯ ದೇಶಮನುತ್ತಮದೇಶಮಾರ್ಗೆಯುಂ।
ಬಗೆದುದನೀವ ದೇಶಮತಿಮಂಗಳದೇಶಮನೂನದೇಶಮು ॥
ರ್ವಿಗೆ ಸುಖಮಪ್ಪ ದೇಶಮುದಿತೋದಯದೇಶಮಪಾರಪುಣ್ಯಕಾ ।
ರಿಗಳನುಕೂಲದೇಶಮಮೃತೋಪಮದೇಶಮದೆಂತು ಬಣ್ಣಿಪೆಂ ॥ ೩

ತೀವಿ ಬೆಳೆಯಿಲ್ಲದಿಳೆಯಿ ।
ಲ್ಲಾವೆಡೆ ಬೆಳೆಯಿಸದ ವನಮುದಿಲ್ಲನವರತಂ ॥
ಪೂವಿಲ್ಲದ ಕೊಳನಿಲ್ಲ ಫ ।
ಲಾವಳಿಯಿಲ್ಲದ ಮರಂಗಳಿಲ್ಲಾ ನಾಡೊಳ್ ॥ ೪

ಅಳಿಯಾಸೆ ಪುಷ್ಪವಾಟೀ ।
ಸ್ಥಳದೊಳ್ ರಾಜಭಯಮಬ್ಜಸಂಕುಳದೊಳ್ ಸಂ ॥
ಚಳತೆ ಪವಮಾನನೊಳ್ ವಿ ।
ಹ್ವಳತೆ ರಥಾಂಗದೊಳಮಲ್ಲದಿಲ್ಲಾ ನಾಡೊಳ್ ॥ ೫

ಸಕಲಂಕತೆ ಚಂದ್ರಮನೊಳ್ ।
ವಿಕಲಧ್ವನಿ ಪಕ್ಷಿಯಲ್ಲಿ ಭಂಗಂ ನದಿಯೊಳ್ ॥

ಸಕುಟಿಲತೆ ಲತೆಗಳೊಳ್ ಭುವ ।
ನಕಂಟಕಂ ಬಿಸದೊಳಲ್ಲದಿಲ್ಲಾ ನಾಡೊಳ್ ॥ ೬

ಕರವಿಚ್ಛೇದಂ ಗ್ರಾಮನಿ ।
ಕರಂಗಳೊಳ್ ಬಂಧನಂ ಕುಸುಮಮಾಲಿಕೆಯೊಳ್ ॥
ಪರವಶಮೆಂಬುದು ಯೋಗೀಂ ।
ದ್ರರೊಳಲ್ಲದೆ ಶೈಲಪತಿಯ ದೇಶದೊಳುಂಟೇ ॥ ೭

ಆಮಯಮಕ್ಷರಕುಲದೊಳ್ ।
ಸಾಮಂ ವೇದಂಗಳಲ್ಲಿ ಭೀಮಂ ಚಿತ್ರ ॥
ಸ್ತೋಮದೊಳಂ ಕ್ಷಾಮಂ ಲಲ ।
ನಾಮಧ್ಯದೊಳಲ್ಲದಾಸುದೇಶದೊಳುಂಟೇ ॥ ೮

ಆದೇಶಂ ಸಲೆ ಗಿರಿರಾ ।
ಜಾದೇಶಂ ಸಕಲಶಾಸ್ತ್ರವೇದೋಚ್ಚರಣಾ ॥
ನಾದಶಿವವಾಕ್ಯದೊಳ್ ಸಮ ।
ನಾದ ಶಿವಜ್ಞಾನಗಾನದಿಂದೆಸೆದಿರ್ಕುಂ ॥ ೯

ಗ್ರಾಮಂ ಜಿತಾಘಕುಲಸಂ ।
ಗ್ರಾಮಂ ಸದನಂ ಸುಖಕ್ಕೆ ಪಸದನಮೆಸೆವಾ ॥
ರಾಮಂ ರಾಮಂ ಜನಕುಲ ।
ಕಾಮಂ ಕಾಮಹರಪೂಜೆ ನೋಡಾನಾಡೊಳ್ ॥ ೧೦

ಕಲ್ಲೆಲ್ಲಂ ಪರುಷಂ ತರು ।
ವೆಲ್ಲಂ ಕಲ್ಪತರು ಗುಲ್ಮಮೆಲ್ಲೌಷಧಿ ಗೋ ॥
ವೆಲ್ಲಂ ಸುರಭಿಕುಲಂ ಮಡು ।
ವೆಲ್ಲಂ ಸಿದ್ಧರಸಮೆನಿಕುಮಂತಾನಾಡೊಳ್ ॥ ೧೧

ಆವಿಷಯದೊಳೊಪ್ಪುವ ಕಳ ।
ಮಾವಳಿ ನಳನಳಿಸಿ ಬೆಳೆದು ಪಸುರೇಱಿ ಲಸ ॥
ದ್ಭೂವನಿತೆಗೆ ಧಾತ್ರಂ ಪರಿ ।
ಭಾವಿಸಿ ಪೊದೆಯಿಸಿದ ಹರಿತಪಟದಂತಿರ್ಕುಂ ॥ ೧೨

ಸೊಂಪಾಗುತ್ತುಂಕುರಿಸು ।
ತ್ತುಂ ಪಸುರೇಱುತ್ತೆ ಕನಲಿಱಿದು ಪ್ರೌಢಿಯೊತ್ತು ॥
ತ್ತುಂ ಪಾಲೇಱುತ್ತುಂ ನೆರೆ ।
ದಿಂಪಿಂ ನಳನಳಿಸಿ ಶಾಲಿವನಮೆಸೆದಿರ್ಕುಂ॥ ೧೩

ಉಗುವೆಳನೀರಿಂದಂ ಕದ ।
ಳಿಗಳಾಕದಳಿಗಳ ಪಣ್ಣ ರಸದಿಂ ಪುಂಡ್ರೇ ॥
ಕ್ಷುಗಳಿಕ್ಷುರಸದಿನಾಕಟಿ ।
ವೆಗಳಾಕಟಿವೆಗಳ ಕಣಿಶದಿಂ ಗಿಳಿ ಬಳೆಗುಂ ॥ ೧೪

ಆಕಳಮಕ್ಷೇತ್ರಕುಲಮಂ ಬಳಸಿ ಬಂದು ತಾಮಂರಸಾಕ್ಷಿಯರಪ್ಪ ಪಾ ವರಿಯರ್ ಸಾದರದೆ ಕಾದಿರ್ಪಲ್ಲಿ

ತ್ವರಿತಗತಿಪ್ರಚಾರತೆ ಮರಾಳಲಸದ್ಗತಿ ಸಾರುತಿರ್ಪ್ಪಿಲ ।
ಬ್ಬರಿಸುವ ನಾದಮನ್ಯಭೃತನಾದಮುಮರ್ಚಿತಿಡಲ್ಕೆ ಮೆಚ್ಚಿ ಮ ॥
ಚ್ಚರಿಸುವ ತೋಳ್ ಮರುದ್ಗತಲತಾಕುಳಮೆಂಬುಜಿ ಪಕ್ಕಿ ಸೋಂಪ ಪಾ ।
ಮರಿಯರ ಜಂಕೆಗಲ್ಲಿ ಗಿಳಿಯಂಜದೆ ಬೆರ್ಚದೆ ನಿಲ್ಕುಮಾನಗಂ ॥ ೧೫

ಮತ್ತಮಲ್ಲಿ

ಮುಡಿ ಮೊಲೆ ನಿತಂಬಭಾರದಿ ।
ನಡಿಯಿಡಲಾಱದೆ ಶುಕಾಳಿಯಂ ಪಾಮರಿಯರ್ ॥
ಬಿಡೆ ಸೋನ್ರುತ್ತಿರ್ಪರ್ ಸಂ ।
ಗಡಮಿರ್ಪಲ್ಲಿನು ಬಱಿಯ ಗಬಬಿದಿಂನಂ ॥ ೧೬

ಗಿಳಿಯಂ ಸೋವೆಳೆಯಳ ನುಡಿ ।
ವೞಿಯಿಂದೆ ವಿಕಾಸಮಾದ ಬಾಯ್ದುಱಿಗಂಡಂ॥
ದೆಳಸುತ್ತಿರ್ಪ್ಪುದು ದಾಡಿಮ ।
ಫಲಬೀಜಂಗೆತ್ತು ದಂತಕುಳಮಂ ಗಿಳಿಗಳ್ ॥ ೧೭

ಮತ್ತಂ ಪೆಱತೊಂಬೆಡೆಯ ಕಳಮಕ್ಷೇತ್ರಮಂ ಕಾದಿರ್ಪ ಕಾಮಿನಿಯೊಳೊರ್ವ ಪಾಂಥಪಾಮರಿ ಪಾಂಥರೊಳಗೆ ಭಜಿಲ್ದು ಬರ್ಪ ಜವ್ವನಿಗನಂ ಕಂಡು ನಾಡೆ ಮನನೆಳಸಿ ಕೂಡಲೆಂದು

ಪತ್ತಿತು ಬಿಸಿಲುರಿ ಕಾಲಂ ।
ಮುತ್ತಿತು ನೋವ್ಪುದಕದೀಕ್ಷೆಯಿಂದಂ ಬೆಳ್ವರ್ಯ್ ॥
ಬತ್ತಿತ್ತಯ್ಯೋ ! ಶ್ರಮಮನಿ ।
ಮಿತ್ತಂ ಕಳೆವವನ ಜಾಣನೆನುತುಂ ನುಡಿವಳ್ ॥ ೧೯

ನುಡಿಯೆ ಬಳಲ್ದ ಪಾಂಥನೆರ್ದೆ ತಣ್ಪಿನ ಸೋನೆಯನಾಂತ ಮಾಳ್ಕೆಯಿಂ।
ಪೊಡಕರಿಸುತ್ತೆ ಪೆರ್ಚೆ ಮಿಗೆ ಸಾರ್ದು ನಿವಾತಸುಖಸ್ಥಳಕ್ಕೆ ಬಂ ॥
ದೆಡೆಗುಡದನ್ಯಚಿಂತೆಗೆ ಮನೋಜಸುಖಾರ್ಣವಮಧ್ಯದೊಳ್ ಮನಂ ।
ಗುಡುತುಮಮರ್ತಿಸುತೆ ಧುಡುಮ್ಮಿಳಿಯುತ್ತುಮೆ ಪಾಂಥನೊಪ್ಪಿದಂ॥

ನೆಱಿಲಾದುದು ಧಮ್ಮಿಲ್ಲಂ ।
ಪುಳಕಸ್ಥಳಮಾಯ್ತು ವೃತ್ತಜಘನಭರಂ ಕೀ ॥
ತಳೆತರಳಮಾದುದು ಕೋ ।
ಮಳೆಯಧರಮರೀಚಿ ಪಾಂಥನೇಂ ಬಯರ್ಕೆವನೋ ॥ ೨೦

ಮತ್ತಮಾದೇಶದೊಂದು ಪಾನೀಯಶಾಲೆಯುಲ್ಲಿ
ಕಳಕೇಕೀಕೇಶಪಾಶಂ ಶಶಿನಿಭವದನಂ ಭೃಂಗನೀಲಾಳಕಂ ಸಂ।
ಚಳಿತಪ್ರೋನ್ಮತ್ತನೇತ್ರಂ ಘಟಕುಚಯುಗಳಂ ಲೇಶಮಧ್ಯಂ ಗಭೀರೋ
ಜ್ಜ್ವಳಶೋಭಾನಾಭಿ ಕುಂಭಸ್ಥಳಸದೃಶನಿತಂಬಂ ಸರಂಭಾವಿಳಾಸಂ ।
ದಳೆದೊಪ್ಪಿದೂರುದಂಡಂ ತನಗೆಸೆಯೆ ನಿತಾಂತಂ ಪ್ರಪಾಕಾಂತೆಯಿರ್ದಳ್

ಪರನಾಭಿ ಸುಳಿಗಳಂ ತೋಳ್ ।
ತರಂಗಮಾಲೆಗಳನಂಬಕಂ ಮತ್ಸ್ಯಮನಂ ।
ಗರುಚಿ ರುಚಿರಾಂಬುವಂ ಪ್ರೋ ।
ಲೆ ರಮಣಿ ನದಿಯಂದದಿಂ ಪ್ರಪಾಂತದೊಳಿರ್ದಳ್ ॥ ೨೧

ಇರೆ ಬಂದ ಪಥಿಕನೊರ್ವಂ ।
ತರುಣಿಯ ಲಾವಣ್ಯರಸಮನಕ್ಷಿಗಳಿಂದಂ ॥
ಬರೆ ಪೀರ್ದು ದಣಿದು ಬಟ್ಟೆಯ ।
ಪರಿಶ್ರಮವ್ಯಥೆಯನಱಿಯದಿರ್ದಂ ಸುಖದೊಳ್ ॥ ೨೨

ಆಪ್ರಪಾಕಾಮಿನಿ ಪಥಿಕಗೆ ನೀರ್ಗುಡಿಯಲೆಱಿವಲ್ಲಿಯೊರ್ವವಿಟಂ ಜಲಪಾ
ನಂಮಾಡುತುಂ ತರುಣಿಯ ನಿರತಿಶಯ ಲಾವಣ್ಯಮಂ ಕಂಡು

ತೀರ್ದುದು ನೀರ್ ತೀರ್ದುದು ತೃಷೆ ।
ತೀರ್ದುದು ಕಡುಸೇದೆ ತೀರ್ದೊಡೇಂ ಪಥಿಕಂ ತಾ ॥
ನಿರ್ದಂತಿರ್ದಂ ಸ್ತ್ರೀಮುಖ ।
ಮಿರ್ದಿರವಂ ನೋಡುವಾಸೆ ತೀಱದೆ ಮನದೊಳ್ ॥ ೨೪

ನಡೆ ನುಡಿ ಬೞಲ್ಕೆ ಮುನ್ನಂ ।
ಕಡುಚೆಲ್ವೆಯ ರೂಪುಗಂಡ ಬೞಿಕಂ ನಡೆಯರ್ ॥
ನುಡಿಯರ್ ನೀರಂ ಕುಡಿಯರ್ ।
ನಡೆ ನೋಡುತ್ತಿರ್ದರತನುಶಿಥಿಲರ್ ಪಥಿಕರ್ ॥ ೨೫

ಮತ್ತಮೊಂದು ಪ್ರಪಾಶಾಲೆಯಲ್ಲಿ

ಅಂಬುವನೆಱೆವಾಗಳ್ ಪ್ರತಿ ।
ಬಿಂಬಿಸೆ ಕೆಯ್ನೀರೊಳವಳ ವದನಂ ಪಥಿಕಂ ॥
ನಂಬಿ ನಲಿದೀಂಟಿದಂ ಪ್ರತಿ ।
ಬಿಂಬಾಧರಮಧುರರಸಮನೀಂಟುವ ತೆಱದಿಂ ॥ ೨೬

ಮತ್ತಮಾದೇಶದಲ್ಲಿ

ಬಳಸಿಗಮೊಪ್ಪಿದುವು ಜೆನುಗಿ ।
ಗಳಪಿ ಕುಳಿಕೋರ್ಡಿ ಕಟ್ಟಿಲಿಸಿ ಮಳೆದುದ್ದಂ ॥
ದಳಿದು ಫಲವಾಗಿ ಪರಿವಡೆ ।
ದಳಿ ಗಿಳಿ ಮಾಡು ಗಿಸು ಕರಿ ಗಿರಿ ಚಕೂತಂ ಗೀತಂ ॥ ೨೭

ನಾನಾದೇವಾಯತನಾ ।
ನೂನವಿಭೋಗಾದಿಸಂಪದಪ್ರದಮೆನಿಸಿ ॥
ಪೆರ್ನಾಡಿಂಗೆ ಶಿರೋಮಣಿ ।
ತಾನೆನಿಕುಂ ಪೆಸರೊಳೋಷಧಿಪ್ರಸ್ಥಪುರಂ ॥ ೨೮

ಅದು ಗಿರಿರಾಜನ ರಾಜ್ಯಾ ।
ಸ್ಪದರಾಜಿತರಾಜಧಾನಿ ತಾನೆಂದೆನಿಸಿ ॥
ಪರ್ದು ಪುರಮಾಪುರಮುಂ ಸು ।
ತ್ತಿದ ಬಹಿರುದ್ಯಾನಚಯಮನಾರ್ ಬಣ್ಣಿಸುವರ್ ॥ ೨೯

ಕಂಮೆಸೆದಿರ್ದೆಳ್ ಬಾಳೆ ನವಪೂಗಚಯಂ ಪನಸಾಳಿ ತಾಳಿ ಭೂ ।
ಸುರಸಾರಪೊನ್ನೆ ಜಂಬು ಘನನಿಂಬಕುಳಂ ಬಕುಳಂ ಕದಂಗು ತಿಂ ॥
ಗುಣೋತ್ತರವಾತುಳಂಗತತಿ ಚೂತಕುಜಾತ ಸುಶೋಕೆ ಪುಗೊಳಂ ॥
ಕುರವಕನತ್ತಮಾಲಕೃತಮಾಲತಮಾಲದಿನೊಪ್ಪುಗುಂ ವನಂ ॥ ೩೦

ಸಿರಿ ತಂದಿಕ್ಕಿದಶೋಕೆ ವಾಗ್ದನಿತೆಯಿಟ್ಟಾಮ್ರಂ ಶಚೀದೇವಿಯಿ ।
ಟ್ಟರಸೇಚುಲ್ ಮಿಗೆ ರಂಭೆಯಿಟ್ಟ ಕದಳೀಷಂಡಂ ಸುರಸ್ತ್ರೀಯರಿ ॥
ಟ್ಟರವಿಂದಾಕರಮೂರ್ವಶೀವಧು ಸರಾಗಂ ತಂದ ಪೂಗದ್ರುಮಂ ।
ತರದಿಂ ನಂ ರತಿಯಿಟ್ಟ ದಾಡಿಮಕುಲಂ ಸಾರ್ದರ್ತು ಕೇಳೀದ್ಯಾನದೊಳ್ ॥

ಸುರುಚಿರಸಾರಪಕ್ವಫಲವಕ್ತ್ರ ಲಸಚ್ಛುಕಚುಂಬನಂ ಬನಂ ।
ಪರಮವಿರಕ್ತಸಂತತಿಗಿದೇತಜಿ ಮೋಹನಮೆಂಬಿನಂ ಬನಂ ॥
ಚರಿತದೆ ಸೋಲಿಕುಂ ಶುಕಪಿಕಾಳಿಕುಲಕ್ಕತಿಜಿಪ್ತನನ್ದನಂ ॥
ಧರೆಗೆ ವಿಚಿತ್ರಭಾಸುರಮುಬೇಚಿಸ್ರದಗ್ಗದ ಕಾನನಂ ವನಂ ॥ ೩೧

ಆಸಾರ್ವತುರ್ಕವೆಸಿಸಿದುದ್ಯಾನದಲ್ಲಿ

ಅಂಕುರದಿಂ ಪ್ರವಾಳಕುಳದಿಂ ನನೆಯಿಂ ಮುಗುಳಿಂ ಪ್ರಸೂನದಿಂ ।
ದಂ ಪಿಂದುಗಾಯ್ಗಳಿಂ ತೊರೆದ ದೋರೆಗಳಿಂ ತನಿವಣ್ಣ ಪಚ್ಚೆಯಿಂ ॥
ದಂ ಕಳಕಂಠಕೂಜಿತದಿನೊಪ್ಪುವ ಷಟ್ಪದಮಂದಗಾನದಿಂ ।
ದಂ ಕತುಕೆಂಬಿನ ಚಪ್ಪರಿಪ ರಾಜಶುಕಾಳಿಯಿನಾಮ್ರವೊಪ್ಪುಗುಂ ॥

ವೃತ್ತಂ

ಇದು ರತಿರಾಜಭದ್ರಗಜವೋ ಇದು ಚೈತ್ರನ ರಾಜಧಾನಿಯೋ ।
ಇದು ವನಲಕ್ಷ್ಮಿಗೆತ್ತಿಸಿದ ಪಿಲಿಸು ಸತ್ತಿಗೆಯೋ ವಸಂತನಿಂ ॥
ದಿದು ಸಿರಿಯುತ್ತಿಯಿಂ ಸಲಪಿದುರ್ಬಿದ ಪರ್ಬಿದ ಕಲ್ಪವೃಕ್ಷವೋ ।
ಇದು ಧರೆಯಿಂದೆ ಮೂಡಿದ ನವಾಂಬುದನೋ ಎನೆ ಚೂತವೊಪ್ಪುಗುಂ ॥

ತದದಿಂದಂಕುರಮಂಕುರಸ್ತರದಿಂದಂ ಪಲ್ಲವಂ ಪಲ್ಲವೋ ।
ತ್ಕರದಿಂದಂ ಕುಸುಮಂ ಲಸತ್ಕುಸುಮದಿಂ ಜಾಂಚತ್ಫಲಂ ತತ್ಫಲೋ ॥
ತ್ಕರದಿಂ ಚಾರುಶುಕಂ ಶುಕಾವಳಿಗಳಿಂ ಭೃಂಗಾಳಿ ಭೃಂಗಾಳಿಯಿಂ ।
ಪರಪುಷ್ಟಂ ಪರಪುಷ್ಟಪ್ರೋತಕಕುಲಂ ಪ್ರಾಕ್ಪ್ರರ್ದಿನಪ್ರಾವಿನೊಳ್ ॥ ೩೨

ಸಲೆ ಸಹಕಾರದಲ್ಲಿ ಕೆಲವಂಕುರವುಂ ಕೆಲವುಂ ಪ್ರಸೂನವುಂ ।
ಕೆಲವು ಫಲಂಗಳಂ ಮಿಸುಪ ಚಂಚುಗಳಂ ನವನಾಸಿಕಂಗಳಂ ॥
ತೊಲಗದೆ ಜಿಹ್ವೆಯಿಂ ಕದುರ್ಕಿ ವಾಸಿಸಿ ಪೀರ್ದುಱೆ ಸೊರ್ಕುತುಂ ಕರಂ
ನಲಿನಲಿದುರ್ವಿ ತೊಂಡುಗೆಡೆಯುತ್ತೆ ಪಿಕಾಳಿ ಶುಕಾಳಿಯೊಪ್ಪುಗುಂ ॥

ಕಾವಂಗೆಂದು ವಸಂತಂ ।
ಭಾವಿಸಿ ಸವೆದಿಟ್ಟ ನೀಲದರವುನೆಯೆಸಿಕುಂ ॥
ಮಾವಿನ ಹೂವಿನ ಕಾವಿನ ।
ತಾವಿನ ಮೊದಲಿಂದೆ ತಿವಿದಳಿಗಳ ಬಳಗಂ ॥ ೩೮

ಬಿರಿಯಲ್ ಪ್ರೆಂಗಿದ ಪಣ್ಗಳ ।
ಸಿರೆಯಱಿಸಲ್ಲಿರಿಸಿ ಚಂಚುಪುಟದಿಂ ಸವಿಯುಂ ॥
ಬರೆ ತೆಗೆದು ತಣಿದು ತವಕವು ।
ನರೆಳ್ಚುತುಱೆ ಮೆಱೆವುವಾಮ್ರದೊಳ್ ಶುಕಸಿಕಗಂ ॥ ೩೮

ಬಿಗಿಯುಪ್ಪಿ ಮೊಗವನಿಟ್ಟಾ ।
ಲಿಗಳಂ ನಸು ಮುಚ್ಚಿ ಪಕ್ಷಯುಗವೆಬಿಲೆ ರಸಂ ॥
ದೆಗೆವ ದನಿ ನಿಮಿರೆ ನಾಲಗೆ ।
ಚಿಗುರುತ್ತಿರೆ ಸವಿನುದೊಂದು ಗಿಳಿ ತನಿವಣ್ಣಂ ॥ ೩೯

ಎಳಸಿ ನೆಗೆತಂದು ಮಿಕ್ಕ ।
ಗ್ಗಳಿಸುತುಮಿರ್ಪಂತಿರಪ್ಪಿ ಮಧುರರಸಂ ಪೆ ॥
ಗ್ಗಳಿಸೆ ಲವಲವಿಸುತಂ ಪ ।
ಣ್ಗಳೊಳಬ್ಬಿದಬೊಂದು ರಾಜಶುಕನತಿಭರದಿಂ ॥ ೪೦

ಮತ್ತವಲ್ಲದೆ
ಅರಳೆಲೆ ಮೇಲಾಡುತ್ತಿರೆ ।
ಭರದಿಂ ಮಾಂಗಾಯ್ಗಳೊಲಯೆ ಕೆಲಬಲದೊಳ್ ನಿಂ ॥
ದರಗಿಳಿಯು ತೊದಳ್ನುಡಿ ಬಿ ।
ತ್ತರಿಸೆ ವಸಂತನ ಕುಮಾರನೆನಿಸಿತ್ತಾವ್ರಂ ॥ ೪೧

ಅಂತಂತು ನಲಿದು ನಾಲಗೆ ।
ತೀಂತೆ ಮಿಗಲ್ ಕಳಕೆಗೆಳಸಿ ಚಂಚುವನಿಟ್ಟೋ ॥

ರಂತೆ ಸವಿಸವಿದು ಸೊರ್ಕಿ ನಿ ।
ರಂತರಂ ಕರೆದತ್ತು ಮಾವಿನೊಳ್ ಪರಪುಟ್ಟಂ ॥ ೪೧
ಅಳಿಶುಕಪಿಕಕುಲರವದಿಂ ।
ನೆಳಲಿಂ ರೂಪಿಂ ಫಲಂಗಳಿಂ ಪೂವಿಂದಂ ॥
ಬಳಸಿ ತಣಿಪುವುದು ಪೊಸಮಾ ।
ವೆಳಸಿದ ಪಾಂಥಪ್ರತಾನಪಂಚೇಂದ್ರಿಯಮಂ ॥ ೪೨
ತಿಳಿನೀರಿಂ ತಾವರೆಯಿಂ ।
ಕಳಹಂಸೆಯಿನೆಸೆವುದಲ್ಲಿ ಸರಸೀಷಂಡಂ ॥
ತಳಿರಿಂ ನನೆಯಿಂ ಪೂವಿಂ ।
ಫಳದಿಂದಂತೆಸೆವುದಲ್ಲಿ ಚೂತಕುಜಾತಂ ॥ ೪೪
ಪಿಕಕುಲದ ಸೊರ್ಕುಮ ಮಧುಕರ ।
ನಿಕರದ ಮದಮುರಗಿಳಿಗಳ ಗರ್ವಂ ನನೆಚೂ ॥
ತಕುಜಂ ಮಲ್ಲಿಗೆದಾಡಿಮ ।
ನಿಕಾಯಮಂಕುರದೆ ಪುಷ್ಪದಿಂ ಫಲದಿಂದಂ ॥ ೪೫
ಮತ್ತಮ ಲ್ಲದೆಯುಂ
ಬೇರಿಂದಂ ನೀರುಂಡಾ ।
ಬೇರಿಂದಗ್ರಂಬರಂ ಫಲಂಗಳನೀವಂ ॥
ಧಾರಿಣಿಗೆಂಬಂತಿರೆ ಫಲ ।
ಪೂರಿತಪನಸದ್ರುಮಂಗಳೆಸೆದುವು ಬನದೊಳ್ ॥ ೪೬
ನೀರೆಯಿಮುಪಕಾರಕ್ಕೆಳ ।
ನೀರಿಂ ರುಚಿವೆರಸು ತೀವಿ ವನಪಾಲಕರಂ ॥
ಪೋರುತ್ತಿಪ್ಪಂತಿರ್ದುವು ।
ಸಾರಾಯುಫಲಾಳಿ ನಾಳಿಕೇರಂ ಬನದೊಳ್ ॥ ೪೭
ವನಲಕ್ಷ್ಮಿಗೆ ಸಕಲವಿಲಾ ।
ಸಿನಿಯರ್ ಬಳೆದೋಳ್ಗಳಿಂದೆ ಚಾಮರಮಿಕ್ಕಲ್ ॥
ತನತನಗೆ ನಿಂದರೆನೆ ತ ।
ದ್ವನದೊಳ್ ಪೊಂಬಾಳೆಯಿಂದೆ ಪೂಗಮದೆಸಗುಂ ॥ ೪೮

ಕುಸುಮಶರಂಗೆ ವಸಂತಂ ।
ಪೊಸಪೊಂಗಳಸಂಗಳಲ್ಲಿ ಸೌರಭ್ಯಸುಧಾ ॥
ರಸಮಂ ತೀವಿರಿಸಿದವೋಲ್ ।
ಎಸೆದುದು ಫಲಭರಿತನೂತುಳಂಗವ್ರಾತಂ ॥ ೪೯

ಬಾಗುತೆ ಬಲಿಯುತೆ ಪೊಳೆದಿನಿ ।
ದಾಗುತೆ ದಳವೆಳಿತ್ರಿಡಿಕಿಱಿದು ಹಿಗ್ಗುತೆ ಪ ॥
ಣ್ಣಾಗುತೆ ಕಾಯ್ಗಳ್ ಪೊಱಮಡೆ ।
ಬೀಗುತ್ತುಂ ಬೆಳೆದುವಲ್ಲಿ ಕದಳೀಷಂಡಂ ॥ ೫೦

ಅಂತುಮಲ್ಲದೆಯುಂ

ಅಳಿಗಿಳಿಗಳ ಕೋಗಿಲೆಗಳ ।
ಕಳಹಂಸಾಳಿಗಳ ಪಾರಿವಂಗಳ ಕೋಕಂ ॥
ಗಳ ಪುರುಳಿಗಳ ನವಿಲ್ಗಳ ।
ಕೊಳರ್ವಕ್ಕಿಗಳಿಸೆವ ಮನದ ಬಿನದಂ ಬನದೊಳ್ ॥ ೫೧

ನಲಿದು ಕೊರಲೆತ್ತಿ ಕುನಿದು ಕು ।
ಕಿಱಿಱಿದು ಸುಟಿದೆಳಸಿ ಬಳಸಿ ಬಱಿಸಂದು ಪಱಿಂ ॥
ಚಲೆದೊಲೆದು ಪಕ್ಕಮಂ ಬಿ ।
ಚ್ಚಲ್ಲಿಗೆಯ್ದುತ್ತು ಪಾರಿವಂ ಸಾರಿವದೊಲ್ ॥ ೫೨

ಚಾರುತರಂ ನಿರ್ಮಲಜಲ ।
ಪೂರಂ ಸೌರಭ್ಯಮುದಿತಮದಮಧುಕರರಂಬಂ ॥
ಕಾರಂ ಹಂಸಕುಲಕ್ರೀಂ ।
ಕಾರಂ ರಾಜೀವಭರಿತನವಕಾಸಾರಂ ॥ ೫೩

ಅಂತುಮಲ್ಲದೆಯುಂ

ಸುರರ ನಿವಾಸದಂತನಿಮಿಷಪ್ರಕರಂ ನಭದಂತಿರಬ್ಜಬಂ ।
ಧುರ ಮಧುಮಾಸದಂತೆ ಸಿತಪಕ್ಷಯುತಂ ರಥದಂತೆ ಚಕ್ರವಿ ॥
ಸ್ತರಮುರುಪದ್ಮಜಾಂಡದವೊಲತ್ತಲಸದ್ಭುವನಾಶ್ರಯಂ ಧನು ।
ರ್ಧರರ ಕಳಾಪದಂತೆ ರಮಣೀಯಶಿಲೀಮುಖಸಂಕುಳಂ ಕೊಳಂ ॥ ೫೪

ನಳಿನದ ಕರ್ಣಿಕೆಯೊತ್ತಿನೊ ।
ಳಳವಡೆ ಕಣ್ಮುಚ್ಚಿ ಮಗ್ಗುಲಿಕ್ಕಿಯಜಸ್ರಂ ॥
ತಳರದೆ ನಿದ್ರಾಸುಖದಿಂ ।
ಕಳಹಂಸೆಯು ಮುಱುಗಿರ್ದುದಂತಾಕೊಳನೊಳ್ ॥ ೫೫

ಇಂತೊಪ್ಪುವ ಸರೋವರದೊಳೊಂದು ಕಳಹಂಸಂ ಕಾಂತೆಯನಗಲ್ದು

ಅತಿಭರದಿಂ ನನೆಕುವಲಯ ।
ತತಿಯೊಳ್ ಕಾಸಾರದೊಳ್ ಕುಶೇಶಯಮುಖದೊಳ್ ॥
ಲತೆವನೆಯೊಳ್ ವನದೊಳ್ ಪುಳಿ ।
ನತಳದೊಳಱಸಿದುದು ಕಾಂತೆಯಂ ಕಳಹಂಸಂ ॥ ೫೬

ಪುಳಿನಮನಡಿಗಡಿಗೇಱುತೆ ।
ಕೊಳನೊಳಗಡಿಗಡಿಗೆ ಪೊಕ್ಕು ಪೊಱಮಡುತೆ ಲತಾ ॥
ವಳಿಗಳೊಳಡಿಗಡಿಗಾಲಿಸು ।
ತಳವಱದಡಿಗಡಿಗೆ ಬೞಲುತಿರ್ದುದು ಹಂಸಂ ॥ ೫೭

ಬೞಿದೆ ಗಱಿಗಱನೆ ನಡೆವುದು ।
ಪೆಱಸಾರ್ದುದು ಬೆರ್ಚುರ್ವುದು ಬೞಲ್ವುದು ಮತ್ತ ॥
ಬ್ಬೞಿಯೊಳಿರ್ದುದು ಕಣ್ಗಳನರೆ ।
ದೆಱೆವುದು ನೆನೆನೆನೆದು ಕಾಂತೆಯಂ ಕಳಹಂಸಂ ॥ ೫೮

ಇರೆ ಸಿರಿ ಬರ್ಪಂದದೆ ಸುಂ ।
ದರಿ ಬರೆ ಪರಿತಂದು ಚಂಚುಗೂಡುತೆ ಪಕ್ಷಾಂ ॥
ತರದೊಳ್ ಮುಸುಂಕಿ ಬಿಬ್ಬಿರ ।
ಬಿರಿನಂ ತಪ್ಪಿದುದು ದೇಹವೊಂದೆಂಬಿನೆಗಂ ॥ ೫೯

ಮತ್ತಮೊಂದೆಡೆಯೊಳ್

ಕಾಮನ ಬಾಣದಿರ್ಕೆವನೆಯೋ ಭ್ರಮರಾಳಿಯ ಸತ್ರಸಾಲೆಯೋ ।
ಭೂಮಿಯದೊಂದು ಗಂಧಗುಣಮಿರ್ಪೆಡೆಯೋ ವಿಲಸತ್ಸದಾಗತಿ ॥
ಪ್ರೇಮದೆ ಸೌರಭಂಗಳೆದ ತಾಣವೊ ಪೇೞಿಮಿದೆಂದು ಕಂಡವರ್ ।
ಕಾಮಿಸೆ ಮಾಳೆಗಾಱಿರೊಸೆದೋಱಿದ ಪೂವಿನ ತೋಂಟಮೊಪ್ಪುಗುಂ ॥ ೬೦

ಸುರಗಿಯ ಕಂಪು ಸಂಪಗೆಯ ಕಂಪದಿರ್ಗಂತಿಯ ಸೊರ್ಕುಗಂಪು ಪಾ|
ದರಿಯುಲರ್ಗಂಪು ಪತ್ತ್ರಿಯ ಕಂಪಿರುವಂತಿಯ ಕಂಪು ಮೊಲ್ಲೆಯೊಂ ‖
ದುರಸಣಿಗಂಪು ಮಲ್ಲಿಗೆಯ ಕಂಪು ಸರೋಜದ ಕಂಪು ನೀಲನೀ|
ರರುಹದ ಕಂಪು ಕೇತಕಿಯ ಕಂಪೆಸೆಗುಂ ಸಲೆ ಪುಷ್ಪವಾಟಿಯೊಳ್ ‖ ೬೧

ಆನನಗಂಧಕ್ಕೆಳಸಿಯು |
ನೂನಂ ಮಧುಕರನಿಕಾಯಮೊಲ್ದನವರತಂ ‖
ನಾನಾಮಂಜುಳನಿನದದೊ |
ಳಾನಂದಂ ಮಿಕ್ಕು ಕಂಪನೀಂಟುತ್ತಿರ್ಕುಂ ‖ ೬೨

ಬಿಗಿಯುಪ್ಪಿ ಪುಷ್ಪರಸಮಂ |
ತೆಗೆದೀಂಟಿ ತುಱುಂಕಿ ತೂಱಿ ತೇಂಕಾಡಿ ಮುದಂ ‖
ಮಿಗೆ ಸೊರ್ಕಿ ಜೆನುಗಿ ಜೀವಿಸಿ |
ಮಗಮಗಿಸಿತ್ತೊಂದು ಮಧುಕರಂ ಮಲ್ಲಿಗೆಯೊಳ್ ‖ ೬೩

ಅಂತುಮಲ್ಲದೆಯುಂ

ಧೃತಕಂಟಕಮಾದೊಡಮು |
ನ್ನತಿಯಿಂ ಕೇತಕಿಯೊಳೆಱಗಿದುದು ಮಧುಕರನಿಂ ‖
ತತಿರೂಕ್ಷರಾದೊಡಂ ಸ್ನೇ|
ಹಿತರಂ ಕಾಯಲ್ಕೆ ಬರ್ಪರದೇ ಧಾರಿಣಿಯೊಳ್ ‖ ೬೪

ಅದಲ್ಲದೆಯುಂ

ಭಮ್ರಮೆನಿಸಿರ್ದ ಕುಸುಮದ |
ಸದ್ಮವನುಂ ಪೀರ್ವ ಪದದೊಳೊಪ್ಪಿತು ಮುದನಂ ‖
ಮುದ್ರಿಸಿದಂಬಿನ ಲಾಕ್ಷಾ |
ಮುದ್ರೆಯಿದೆಂಬಂತೆ ತೀವಿದಳಿಕುರುಂಬಂ ‖ ೬೫

ಅದಲ್ಲದೆಯುಂ

ನನೆಯಂ ಮುಂಡಾಡುತೆ ಬ |
ಲ್ಲನೆಯುಂ ಬಲವಂದು ಮುಗುಳನಾಲಿಂಗಿಸಿ ಕಂ ‖
ಪಿನ ಬಿರಿಮುಗುಳಂ ಚುಂಬಿಸಿ |
ಯನುನಯದಿಂದಲರನಲೆದು ತೀವಿದುವಳಿಗಳ್ ‖ ೬೬

ಅಂಡಲೆದು ಜಾದಿಯುಂ ಬಂ ।
ಡುಂಡಳಿಯುಂ ಮಿಕ್ಕು ಮಧುಕರಂಗಳ್ ಭರದಿಂ ॥
ಬಂಡುಣ್ಬುವೆನೆ ಸುಗಂಧಮ ।
ಖಂಡಿತಮತಿನುತರಸೋದಯಮುಂ ಮಾಳತಿಯಾ ॥ ೭೭

ಅಂತುಮಲ್ಲದೆಯುಂ

ಆವನವ ಕೆಳೆಂ ಪೂಗೊಳ ।
ನೇವೆಟ್ಟೆಂ ಹಸೆ ರಾಜಹಂಸೆಗಳಹಾ ! ॥
ತಾವರೆ ಹೋದಾವರೆಗಳ್ ।
ಮಾವಿನ್ಮಾವಳ ಮದಾಳ ಗಿಳಿಯರಗಿಳಗಳ್ ॥ ೭೮

ಅಂತುಮಲ್ಲದೆಯುಂ

ತವೆ ಬೆಳೆದ ಪೊಸಪನಸು ಬ ।
ಕ್ಕೆವಲಸು ನಳನಳಸುವಿಕ್ಷು ಪುಂಡ್ರೇಕ್ಷು ಪಳಂ ॥
ಚುನ ತೆಂಗವು ಚೆಂಟೆಂಗೊ ।
ಪ್ಪುವ ದಾಳಿಂಬಂಗಳಿಲ್ಲ ರಸದಾಳಿಂಬಂ ॥ ೭೯

ಬನವಿದೆ ನೋಡು ಸರ್ವಸುಖಮಪ್ಪುದು ಕೇಳ್ ಪಡಿಯಿಲ್ಲ ತನ್ನೊಳರ್ ।
ಮನಬೊಲವಿಂದೆ ತೀಡುತಿದೆ ಚೆಲ್ವು ಮನೋಹರಮಿಪ್ಪುದಿಲ್ಲಿಯುಂ ॥
ದನುದಿನಮೊಪ್ಪಿ ಕಿಂಪುರುಷಕಿನ್ನರಖೇಚರಭೂಚರಾತ್ತಮಂ ।
ಜನಮಿಥುನಂ ರತೀಶ್ವರಸುಖಾಬ್ಧಿಯೊಳೊಪ್ಪುಗುಮಾವನಾಂತದೊಳ್ ॥ ೮೦

ಸುರತರುವೊಂದೆ ತತ್ಸುರಭಿಯೊಂದೆ ಸುರಾಪಗೆಯೊಂದೆ ನಿಶ್ಚಯಂ ।
ಸುರಪುರದಲ್ಲಿಯಿಲ್ಲಿ ಸುಮನಸ್ತರುಗೋಪಶುನಿರ್ಜರಾಪಗೇ ॥
ತ್ಕರಮುಮನಂತಮೊಂದು ಗಿರಿರಾಜಪುರೋಪವನಾವಳಿಯಲ್ಲಿ ಕಿ ।
ನ್ನರತತಿಯಪ್ಸರಃಪ್ರತತಿ ಕಿಂಪುರುಷವ್ರಜಮಿರ್ಪುದಾವಗಂ ॥ ೮೧

ಮತ್ತಮಾಪುರದ ಬಹಿರುದ್ಯಾನಂ ನಾನಾಪಿಕಚಂಚುಸಂಚಾರಿತಚೂತಾಂಕುರಪ್ರಕರದಿಂದೊಸರ್ವ ಮಂದಾನಿಲನಿಂ ಸೂಸಿ ಮಂಜುಮಸಗಿ ಬೀಳ್ವ ಪೊಸರಸದಿಂ, ವಿಕಸಿತಪ್ರಸೂನಕುಲದೊಳ್ ಕೂಡೆ ಬಂಡುಂಬ ಷಟ್ಪದಪದಘಾತದಿಂದುದಿರ್ದ ಪರಾಗದಿಂ, ಶುಕತುಂಡವಿದಾರಿತಪಕ್ವಫಲಗಳಿತರಸಾಸಾರದಿಂ, ಪೊನಲದ ಕೆಸರ್ಮಸಗಿದ ವನಸ್ಥಳದೊಳ್ ಬಿನದದಿಂ ನಡೆವಲ್ಲಿ

ನಲಿ ಜಗುಳ್ದು ಜೋಲ್ದು ಬಿೞ್ವ ಕಳಹಂಸಿಗಳಿಂ ನೆಗೆಸಂತಿರರೆವಿರಿದ ಸಿಗ್ಗುಗೆಳ್ವಿಂ ಕುಗ್ಗಿಸುವ ದಾಡಿಮದ್ರುಮಂಗಳಿಂ; ಮತ್ತಮೊಂದೆಡೆ ಯೊಳ್ ಮಿಳಿರ್ದು ಪಾಱುವ ಪಱಮೆಗಳ ಪಜ್ಜೆವಿಡಿದಱಿಸಿ ಗಂಧವಹನೊಡ ಗೂಡಿ ಬಂದೆಱೆದುಯ್ದು ಮಿಸುಗುವ ಕುಸುಮಕರ್ಣಿಕೆಯೊಳ್ ಕಡುಪಿಂ ಸಡಪಿ ಕೊಳ್ವುದಿದೆಂಬ ಶಂಕೆ ಭೋಂಕನೆ ಪುಟ್ಟೆ ಝಂಕಾರರವದಿಂ ಪರ್ಬ್ಬುರೆವಂತೆ ಸಲೆ ಮೊರೆವ ಸಂಪಗೆಯ ಕಂಪಿಂಗೆ ಕಂಪಿಸಿ ಮಲ್ಲಿಗೆಗೊಂದಲ್ಲದೆ ಮೊಗದಿರಿಪಿ ಪರಿತಂದು ಸಾದರದಿಂ ಪೂದೋಂಟದ ಪ್ರಸೂನಕುಲಮನಂಡಲೆದು ಬಂಡುಂಬಲ್ಲಿ ಬಾಯ 'ಕುಟುಕನೆಟಿಕುಟಿಗೊಂಡು ತೀಡುವ ಗಂಧವಹನ ಬೞಿವಿಡಿದು ಘುಮಿಲನೆಱ್ದು ಪರಿಮಳದ ಪಸಿವಿನುಱವಣೆಯ ಪಂಗಗೆ ಕಡಂಗಿ ಕಾಯ್ದು ವಸಂತರಾಜಂಗೆ ಪ್ರಯ್ಯಲಿಡುವಂತೆ ನೆರೆನೆರೆದು ಮೊರೆವ ಮಧುಕರಪ್ರಕರದಿಂ; ಮತ್ತಮೊಂದೆಡೆಯೊಳ್ ತೀವಿ ಪೂತ ಸೇವಂತಿಗೆಯ ತೋಂಟದೊಳ್ ಮಿಡಿಂಟುವರಿವ ಪರಿಮಳದ ಪನಿನೀರ ಪಳ್ಳಮಂ ನಾಂಟಲಾಱದ ಬಾಲಮರಾಳಂಗಳಂ ಪದ್ಮಪತ್ರದಿನೊಪ್ಪುವ ತೆಪ್ಪದೊಳಿಟ್ಟು ದಾಂಟಿಸುತಿರ್ಪ ರಾಜಹಂಸರಾಜಿಗಳಿಂ; ಮತ್ತಂ ಚಕ್ರವಾಕಚಕ್ರವಳಯಾನ್ತ್ರದೊಳೊಗ್ಗಿನ ಕಮಳದ ಮೊಗ್ಗೆಯ ಗುಂಡಿಗೆಯುಂ ತಂಡದೊಳಮುರ್ದ್ದು ಕೊಳ್ವರಕ್ಕಿಯುಂ ಹೂಡಿ ದ್ರಾಕ್ಷಾರಸಪೂರಿತಕಾಸಾರಜಲಮಂ ಕೇತಕೀದಳದ ದೋಣಿಯೊಳ್ ವಸಂತರಾಜಂ ಕತ್ತುರಿಯ ಮಡಿಯೊಳ್ ಕಪ್ಪುರದ ಗಿಡುವನಿಟ್ಟು ಉಮಿಳನೆತ್ತಿ ಬೆಳೆಸಿವನೆಂಬಂತಿರ್ಪ ಕರ್ಪೂರದ್ರುಮಂಗಳಿಂ; ಮತ್ತಮೊಂದೆಡೆಯೊಳ್ ಪಡೆದ ಮಱಿಗಿಳಿಯ ಮೊಗಮಂ ನೋಡಿ ಚಂಚುಗೂಡಿ ಕಿಸಲಯದೆಸಱಿ ಮಾಣಿಕ್ಯದ ಸಿಂಪಿಂ ಫಳರಸದ ಪಾಲನೆಱೆನು ತಳಿರ ತೊಟ್ಟಿಲೊಳಿಟ್ಟು ಸೊಣ್ಣ ನನೆಗಳ ನನೆಯಕ್ಕಿಯನಿಕ್ಕಿ ಪಣ್ಣ ಪಾಯಿಸನಮಂ ಬಣ್ಣನಱಿಯದೆ ಕೊಟ್ಟು ಚೂತವಲ್ಲಭನೆಂಬ ಪೆಸರಿಟ್ಟು ಸುಂದಾನಿಳಂ ತೂಗೆ ಮಧುಕರನಿಕರಂ ಪಾಡೆ ಸಹಕಾರಕುಲದೊಳ್ ಸಂತಸದಿಂ ಸಲುಪ್ತುತ್ತಿರ್ಪ ರಾಜಶುಕಪ್ರಕರದಿಂ; ಮತ್ತಮೊಂದು ಪೂಗೊಳದೊಳ್ ಪೆತ್ತ ಮಱಿದುಂಬಿಯುಂ ಕಂಡು ಮನಂಗೊಂಡು ಪುಂಡರೀಕದೆಸಱಿ ಬೆಳ್ಳಿಯ ಸಿಂಪಿಂ ಪರಿಮಳದ ರಸಮನೆಱೆದು ಪರಾಗದ ತಿಲಕಮನಿಕ್ಕಿ ಸೌರಭದ ತುಂತುರಿಂ ತೊಡಿಸಿಡಿದು ಎಸೞ ಸೆಂಗಿಲ ಹಸುಳೆಯುಂ ಝಂಕಾರರವದಿಂ

ಜೋಂಗುಳಂಬಾಡಿ ತರಂಗದಿಂ ತೂಗಿ ವಸಂತತಿಲಕನೊದು ನಾನುಕರಣಮಂ ಮಾಡಿ ಬಾಜಿಂತಿರ್ಪ ಬಾಣಂತಿದುಂಬಿಗಳ ಗೊಂದಣಂಗಳಂ; ಮತ್ತಮೊಂದೆಡೆಯೊಳ್ ಚಂದ್ರಕಾಂತನಿರ್ಮಿತಕೃತಕಾಚಳನಿತಂಬವಿಳಸಿತಲತಾಮಂಟಪವಳಯುಸ್ಥಿತಪುಳಿನಸ್ಥಳಕುಸುಮತಲ್ಪದೊಳ್ ಕುಸುಮಾಯುಧಸಕಳಸುಖಸಾಮ್ರಾಜ್ಯಭರದಿಂ ನೆರೆವ ಹಂಸಕೀರಪಾರಾವತಂಗಳಂ ನೋಡಿ ನಾಡೆ ನಲಿದು ಕಾಮಬಾಣಮನಿಕ್ಕಿ ಮೆಟ್ಟನಂತೆ ಹೂವಿನ ಹಸೆಯೊಳ್ ಮುಂ ಮುಟ್ಟ ಮಾಣದೆ ನೆರೆವ ವಿದ್ಯಾಧರಮಿಥುನಂಗಳಂ—ಇಂತು ತರುಕುಲದ ತೆಕ್ಕೆಯಿಂ, ಗುಲ್ಮಕುಳದಿಕ್ಕೆರ್ಯಿಂ, ನೆೞಲ ತಣ್ಪಿಂದಂಕುರದ ಸೊಂಪಿಂ, ಪಲ್ಲವದ ನುಣ್ಪಿಂ, ಕುಸುಮಾವಳಿಯ ಕಂಪಿಂ, ಪಣ್ಗೊನೆಯ ಬಿಣ್ಪಿಂ, ಪಕ್ವಫಲರಸದಿಂಪಿಂ, ಕೋಕಿಲಧ್ವಾನದಿಂದಳಿಕುಲದ ಗಾನದಿಂ, ಶುಕರವಪ್ರತಾನದಿಂ, ಫಲರಸಪಾನದಿಂ, ರಾಜಹಂಸಯಾನದಿಂ, ಲತಾಮಂಟಪಸ್ಥಾನದಿಂ, ಪರಿಕಾಲ ಪರ್ಬಿಂ, ಪೂದೋಂಟದ ಕೊರ್ಬಿಂ, ವಿಹಂಗಕುಲಮುರ್ಬಿಂ, ತಮಾಳವನದ ಮರ್ಬಿಂ ವಿದ್ಯಾಧರಿಯರ ಗರ್ಬಿಂ, ಪ್ರಸೂನಕುಲದ ಪರ್ಬಿಂ, ವಿಹಂಗಕುಲದುರ್ಬಿಂ ಚಕ್ರವಾಕದ ಪೆರ್ಮೆಯಿಂ, ಮಂದಾನಿಲನ ಕೂರ್ಮೆಯಿಂ, ಇಂತು ಪುರದ ಬಹಿರುದ್ಯಾನಂ ಸಕಲಸೌಂದರ್ಯಮನಧಿಕತರಸೌಕುಮಾರ್ಯಮನುರುತರಭೋಗಮಾನನ್ಯತಕ್ರೀಡೆಯುನತ್ಯುದಾರತೆಯುನತಿಪ್ರಸನ್ನತೆಯುನೊಳಕೊಂಡಿರ್ಪುದು. ಅಂತುಮಲ್ಲದೆಯುಂ

ಮೊಗಮಬ್ಜಂ ಲೋಚನಂಗಳ್ ಕುವಲಯಮಧರಂ ಬಿಂಬಮಾನಾಸಿಕಂ ಸಂ । ಪಗೆ ತೋಳ್ ಶಾಖಾನಿಕಾಯಂ ಘನಕುಚಯುಗಂ ಚಕ್ರವಾಕದ್ವಯಂ ನಾ ॥ ಭಿ ಗಭೀರೋದ್ಯತ್ಸರಂ ತೋರ್ಪುನ ತೊಡೆ ಕದಳೀಸ್ತಂಭಮಂಘ್ರಿ ಪ್ರವಾಳಂಸೊಗಸಿಂ ತಾನಾಗೆ ತನ್ನಂದನಮೆ ಘನವನಸ್ತ್ರೀಗೆ ರೂಪಾಗೆ ತೋರ್ಕುಂ ॥ ೩೦

ಆವನದ ಪುರದ ನಡುವೆ ಸು ।
ಖಾವಹಮತಿವಿಭ್ರಮಂ ವಿಶಾಲಂ ಸರ್ವೋ ॥
ರ್ವೀವರಶಸ್ತ್ರಾಭ್ಯಾಸನಿ ।
ಜಾವಾಸಂ ಸುಭಟಪಟಲಪಟುರವಭರಿತಂ ॥ ೩೧

ಹಯಶಿಕ್ಷಕರಿಂ ಗಜಶಿ ।
ಕ್ಷೆಯ ಭೀಕರದಿಂ ಪ್ಲವಂಗಡುವ ಜೋದರಸಂ ॥
ಚಯದಿಂ ನಯದಿಂ ವೈಹಾ ।
ಳಿಯ ಬಯಲೊಪ್ಪಿತ್ತು ಪತ್ತನದ ವನದೆಸೆಯೊಳ್ ॥ ೭೪

ಮತ್ತಮಲ್ಲಿ

ಕರಿಗಳ್ ಬಾಳ್ಗಂಬದೊಳಿ ।
ಪ್ಪಿರುತಿದುರ್ವ ಸುಱವ ನೀಲಮೇಘಾವಳಿಯಂ ॥
ತರದಿಂ ಸೆಱೆಯಿಟ್ಟಂತಾ ।
ಗಿರಿಪತಿ ಸುರಪತಿಯ ಹಗೆಯ ಹರಿಬದ ಚಲದೊಳ್ । ೭೫

ಸುರಿವ ಮದಂ ಮಱೆ ಗಂಭೀ ।
ರರವಂ ಮೊಳಗಿಂಗಮಂಬುದಂ ದಂತಂ ನಿ ॥
ಷ್ಠುರದಿಂದೆಱಗುವ ಸಿಡಿಲಾ ।
ಗಿರೆ ಕಾರ್ಗಾಲದವೊಲಿರ್ದುವಲ್ಲಿಯ ಕರಿಗಳ್ ॥ ೭೬

ಮತ್ತಮಾ ಪುರದ ಪೊಱಪೊಱಲ ವೈಹಾಳಿಯ ಬಯಲಿಂದೊಳಗೆ

ಧರೆಯಂ ಸುತ್ತಿದ ಜಲಧಿಗೆ ।
ಪುರುಡಿಸಿ ಪುರವರೆಯ ವಿಳಸಿತಪ್ರಾಕಾರಂ ॥
ತರವಂ ಸುತ್ತಿರ್ಪುದು ತ ।
ತ್ಪರಿಖಾತ್ತಜಲೌಘಮೌರ್ವ್ವವಿಹರಣದೂರಂ ॥ ೭೭

ಹರಿ ಮತ್ಸ್ಯಾಕಾರದೊಳು ।
ದ್ಧರತಮನಂ ಹತಿಸಲೆಂದು ಪಾತಾಳತಳ ॥
ಕ್ಕಿರಸಿೞಿದ ತಾಣಮೆಂಬಂ ।
ತಿರೆ ಪುರದಗೞ್ಪುರ್ದ್ದತುಳಮತಿಗಂಭೀರಂ ॥ ೭೮

ಮತ್ತಮನಂತರದಲ್ಲಿ

ಪಳಕಿನ ಕೋಂಟೆ ಬಟ್ಟದೆನೆ ಬೇವಿನ ದಂಡೆ ನಭಕ್ಕೆ ಮಿಾಱುವ ।
ಟ್ಟಳೆ ನಿಮಿರ್ದ್ದೆ*ಱೆ ಪಾಱುವ ಪತಾಕೆ ವಿರಾಜಿತಗೊಂಟುಗೊಂಟನೊಳ್ ॥
ಬಳಸಿದ ಕೊತ್ತಳಂ ಸೊಗಯಿಪಾಳ್ವರಿ ಡೆಂಕಣಿ ಸಾಲ್ಮಾಗಿಯು ।
ಗ್ಗಳಿಸುವ ಗೋಪುರಂ ಪುಲಿಮೊಗಂ ಮೊಱಗುಂ ಪುರದೊಳ್ ನಿರಂತರಂ ॥

ನೆಗೆದ ಪತಾಕಾಪಟಕೋ ।
ಟಿಗಳೊಪ್ಪಿದುವಾವಗಂ ತೋಱಿಲ್ದು ಬಱಿಲ್ದಾ ॥
ಖಗನ ತುರಂಗಪ್ರತತಿಗೆ ।
ಗಗನಾಂಗನೆ ಬೀಸುತಿರ್ಪ ವೀಜನತತಿವೋಲ್ ॥ ೮೦

ಅಂತುಮಲ್ಲದೆಯುಂ

ಬಗೆವೊಡಮರಾವತಿಗೆ ಮಿಥಿ ।
ಳೆಗೆಯುದಯನಗಕ್ಕೆಯುಜ್ಜಯಂತಿಗೆ ದಿಟಮಾ ॥
ನಗರಿ ಗುಣೋನ್ನತಿಯಿಂದಂ ।
ದ್ವಿಗುಣಂ ತ್ರಿಗುಣಂ ಚತುರ್ಗುಣಂ ಪಂಚಗುಣಂ ॥ ೮೧

ಪೊಸಸೊದೆ ಕೌಮುದಿಯಂ ಪಸ ।
ರಿಸೆ ಕನಕದ ಕಳಶಮಾಲೆ ಪೊಂಬಿಸಿಲಂ ಪೊ ॥
ಣ್ಮಿಸೆ ತರತರದಿಂದಂ ರಾ ।
ಜಿಸುತಿರ್ಪುವು ಸೋಮಸೂರ್ಯವೀಥಿಗಳವಱೊಳ್ ॥ ೮೨

ಆವೀಥಿಗಳೊಳಗೆ

ನಯದಿಂ ಮಾಱುಗುಡುವ ಕೊ ।
ಳ್ವ ಯತ್ನಪೂರ್ವಕದೊಳಿರ್ಪ ಘನಧನಿಕರ ಪ ॥
ಙ್ಕ್ತಿಯ ಮುಂದೆ ಸಂದಣಿಸಿ ವಿ ।
ಕ್ರಯನವಕಳಮಾದಿಧಾನ್ಯರಾಸಿಗಳೆಸೆಗುಂ ॥ ೮೩

ಅನಂತರಮಲ್ಲಿ

ಪರಿಮಳದಾಡುಂಬೊಲನಿದು ।
ವರವಿಟರ ವಿಶಾಲಲೋಲಲೀಲಾಸ್ಥಲಮಾ ॥
ತುರಿಸುವ ತುಂಬಿಗಳೌತಣ ।
ದರಮನೆಯೆನೆ ಪುಷ್ಪವಿಕ್ರಯಸ್ಥಲಮೆಸೆಗುಂ ॥ ೮೪

ಅಲ್ಲಿ

ಭರದಿಂ ಪೂಮಾಲೆಗಳಂ ।
ತರದಿಂ ಪಿಡಿದೆತ್ತಿ ಸಿಂದ ಶಶಿಮುಖಿಯರ್ ಬಂ ॥

ಧುರಶಶಿಕಳೆಗಳನೀವಂ ।
ತಿರುತಿದರ್ರೆ ವಿಟಚಕೋರಸಂತತಿಗಾಗಳ್ ॥ ೮೫

ಮತ್ತೊರ್ವಳ್
ವರಮಲ್ಲಿಗೆವೊಲ್ಲಿಗಳು ।
ಳ್ಪರಸಿದ ಮಧುಕರಕದಂಬದಿಂದಂ ನೀಲೋ ॥
ತ್ಕರಮಂ ಮಾಕ್ತಿಕಮಂ ಪೋ ।
ಲ್ತಿರೆ ಮೆಱೆದಳ್ ಮಾಲೆಗಾರ್ತಿ ಮಣಿಗಾರ್ತಿಯವೋಲ್ ॥ ೮೬

ಆಮಾಳೆಗಾರ್ತಿಯರ ನಡುವೆಯೊರ್ವ ಪಣ್ಯಾಂಗನೆಯಿರೆ ಕಂಡು
ನಗೆಗಣ್ಣಳ ಕಾಂತಿಯು ಸೆ ।
ಳ್ಳುಗುರ್ಗಳ ಕಾಂತಿಯು ಕರದ್ವಯದ ಕಾಂತಿಯು ಮಾ ॥
ಲೆಗಳಂ ಹೊಸಹೂವಿನ ಮಾ ।
ಲೆಗೆತ್ತು ಬೆಲೆಗೊಟ್ಟು ಕೊಂಡು ನಗಿಸಿದನೊರ್ವಂ । ೮೭

ಅಂತುಮಲ್ಲದೆ
ಎತ್ತಿದುದೊಂದು ಮಾಲೆ ಪೊಸಪೂವಿನ ಬಿಲ್ಲವೊಲಾಗೆ ಕೂಡೆ ಬೆಂ ।
ಬತ್ತುವ ನೋಟಮಂಗಜನ ಬಾಣದವೋಲಿರೆ ಕಾಮುಕಾಂತಿ ಸೈ ॥
ತೊತ್ತಿದ ಮಾರ್ಪಿಯಂತಿರಿಸಲೆಂದು ಯುವೋನ್ಮೃಗಮಂ ಕಱುತ್ತುಕೋ ।
ಲೆತ್ತುವ ಬೇಂಟೆಕಾರ್ತಿಯರವೋಲೆಸೆದರ್ ಮಿಗೆ ಮಾಲೆಗಾರ್ತಿಯರ್ ॥ ೮೮

ಮತ್ತಮದಲ್ಲದೆಯುಮಾಪುರದಲ್ಲಿ
ಎಸೆಯೆ ಪುರಂಧ್ರಿಯರ್ ಪದೆದು ಸಂಗಡಮಿರ್ದು ಮನೋನುರಾಗದಿಂ ।
ದಸುಮೆಯ ಕಲ್ಗಳಿಂ ತೊಳೆದು ಚಂದನಮಂ ಪನಿನೀರ್ಗಳಿಂದೆ ಚಾ ॥
ರಿಸಿ ಹಿಮಚೂರ್ಣಮಂ ತಳಿದು ಕಂದುಗಳಿಂ ಪಿಡಿದಾಂಕಿ ನೂಂಕಿದರ್ ।
ದೆಸೆದೆಸೆಗೆಲ್ಲ ಕಂಪೆಸಗೆ ಗಟ್ಟಮುಗುಳ್ಚುತೆ ಗಟ್ಟವಳ್ತಿಯರ್ ॥ ೮೯

ಸುಱಿಗುರುಳಾಡೆ ತೋಳ್ಗಳೆಡೆಯಾಡೆ ಬೆಮರ್ ಮಿಗೆ ಮೂಡೆ ಸುಯ್ಯೆಲರ್
ಮಿಳಿರೆ ಕುಚಂಗಳೊತ್ತರಿಸೆ ಕಕ್ಷಪುಟಂ ನಸುದೋಱೆ ಮೇಲುದಿಂ ॥
ಬಱಿಯೆ ಕರಂ ಕರಂ ಕೊರಗೆ ಸೋರ್ಮುಡಿ ಲಂಬಿಸೆ ಕರ್ಣಪೂರಿತೋ ।
ತ್ಪಲವೊಲೆದಾಡೆ ಗಟ್ಟಗಳನಂದು ಮಗುಳ್ಚಿದರಿಂದುವಕ್ತ್ರೆಯರ್ ॥ ೯೦

ಚಂದನಗಂಧಕ್ಕಂ ವದ ।
ನೇಂದೀವರಪರಿನುಳಕ್ಕವೆುಖಗುವ ಭೃಂಗೀ ॥
ವೃಂದಮನುಜಿ ಸೋವುತ್ತುಂ ।
ವುಂದಯಿಸ್ಸಿ ವುಗುಜ್ಜ್ ಗಟ್ಟವಳ್ಳಯುರೆಸಗುಂ ॥ ೯೧
ಬೆಳಗಿನ ಬಿಂಬಂಗಳನಂ ।
ತಳವಡೆ ತರತರದಿನಿಜೀಪಿದಂತಿರ್ದುವು ನಿ ॥
ರ್ಮಳಪಾತ್ರೋತ್ಕರದಿಂದಂ ।
ತೊಳತೊಳಗುತ್ತಿಪ ಕಂಚುಗಾಖಿರ ಪಸರಂ ॥ ೯೨
ಚಾರುತರವಿಮಳಮಾಕ್ತಿಕ ।
ಹಾರಾದಿಸಮಸ್ತರತ್ನರಾಶಿಗಳಿಂದಂ ॥
ನೀರೋಡಿದ ರತ್ನಾಕರ ।
ದೋರನ್ನಮದಾಯ್ತು ರನ್ನವಸರಂ ಪುರದೊಳ್ ॥ ೯೩
ತೀವಿರ್ಪಶ್ವಾವಳಿಯು ಗ ।
ಜಾವಳಿಯು ನರಾವಳಿಗಳ ವಿಕ್ರಯದಿಂದಂ ॥
ಭಾವಿಸೆ ದೂಸಿಗವಸರಂ ।
ಮೂವರ್ರಾಯರನೆ ಮಾಱುವಂತೆಸೆದಿರ್ಕುಂ ॥ ೯೪
ತನತನಗೆ ಪೊನ್ನರಾಸಿಯು ।
ನನವರತಂ ಮುಂದುಗೊಂಡನೇಕಕುಬೇರರ್ ॥
ಜನಿಯಿಸಿ ನಿಂದಂತಿರ್ದುದು ।
ಕನಕವ್ಯವಹಾರದಿಂದೆ ವೈಶ್ಯಕದಂಬಂ ॥ ೯೫
ಮತ್ತಮಾಪುರದಲ್ಲಿ
ನೀಲದ ಪಚ್ಚೆಯು ಪವಳದ ।
ಶಾಲೆಗಳ ಮರೀಚಿಯುಂ ಪುರಂದರಧನುಗೆ ॥
ತ್ತಾಲೋಕಿಸಿ ನವರತ್ನ ।
ಲೀಲೆಯನೊಳಕೊಳ್ವವಲ್ಲಿ ಪುರದ ನವಿಲ್ಗಳ್ ॥ ೯೬
ಬೆಳಬೆಳಪ ಸುಧಾಧವಳಿತ ।
ನಿಳಯಂಗಳ ಧವಳಕಾಂತಿಯುಂ ಕೌಮುದಿಯೆಂ ॥

ಡೆಳಸುತ್ತಿರ್ಪುವು ಪಗಲುಂ ।
ಬಳಸಿ ಚಕೋರಾಳಿ ಪುರದ ನಿಳಯದೊಳೆಲ್ಲಂ ॥ ೯೭

ಅಂತುಮಲ್ಲದೆ

ಒದವಿದ ಮುತ್ತಿನ ಮಾಣಿ ।
ಕ್ಯದ ಗೋಮೇಧಿಕದ ಪುಷ್ಯರಾಗದ ವೈಡೂ ॥
ರ್ಯದ ವಜ್ರದ ಪಚ್ಚೆಯ ಪವ ।
ಳದ ನೀಲದ ಕಳಶದಿಂ ಶಿವಾಲಯಮೆಸೆಗುಂ ॥ ೯೮

ಶ್ರುತಿಘೋಷಂ ಮಂತ್ರಘೋಷಂ ನತಜನಜಯಘೋಷಂ ಪುರಾಣಪ್ರಘೋಷಂ । ಸ್ಮೃತಿಘೋಷಂ ಗೀತಘೋಷಂ ಪರಶಿವವಿಮಳಜ್ಞಾನಸಂವಾದಘೋಷಂ ॥ ಕೃತಿಘೋಷಂ ಯಜ್ಞಘೋಷಂ ಪರಿಣಯನಮಹೋತ್ಸಾಹವಿಸ್ತಾರಘೋಷಂ । ಸತತಂ ತೀವಿರ್ಪುದಂತಾಪುರದೊಳಭವಗೇಹಾವಳೀವಾದ್ಯಘೋಷಂ ॥ ೯೯

ಮತ್ತಮಾಪುರದ ರಾಜವೀಧಿಯಲ್ಲಿ

ವಿಳಸತ್ಸೀಮಾಪುರಂಧ್ರೀಸಿಕರಚರಣಮಂಜೀರತನ್ಮುದ್ರಿಕಾಮಂ ।
ಜುಳನಾದಂ ರಾಜಪುತ್ರಪ್ರಕರಪರಿವೃತಾಶೇಷಗೀತಪ್ರಣಾದಂ ॥
ಜಳಪಾನಾಸಕ್ತಮುಕ್ತದ್ವಿಪಕುಲನಿಗಳವ್ರಾತಸಂಭೂತನೂತ್ನೋ ।
ಜ್ಜ್ವಳನಾದಂ ಪೂರ್ಣಮಾಗಿರ್ಕುಂ ನರಪಯುತಕವೀಂದ್ರಾಸ್ಯಸಂಸ್ತೋತ್ರನಾದಂ ॥ ೧೦೦

ತಿಂತಿಣಿಪ ನಿಳಯದಿಂ ಜನ ॥
ದಿಂ ತರದಿಂದೆಸೆವ ವೀಧಿಯಿಂ ನೃಪಕುಲದಿಂ ॥
ದಂ ತರುಣೀತತಿಯಿಂ ತಾ ।
ನಿಂತೊಪ್ಪುವುದಿಳೆಯೊಳೋಷಧಿಪ್ರಸ್ಥಪುರಂ ॥ ೧೦೧

ಶ್ರೀಪರಮೇಶ್ವರಾಂಘ್ರಿಸರಸೀಜಮಧುವ್ರತನುದ್ಧತೇಜನು ।
ರ್ವೀಪತಿ ಸರ್ವದಿಗ್ಭರಿತಕೀರ್ತಿಯುತಂ ನತಭೂಭುಜಂ ಜಗ ॥
ದ್ದೀಪಕನತ್ಯುದಾರನತಿಧೀರನತಿಸ್ತುತಿಪಾತ್ರಗೋತ್ರನಂ ।
ತಾಪುರನಾಥನೊಪ್ಪುವನುದಾತ್ತಗುಣಂ ಗಿರಿರಾಜನುರ್ವಿಯೊಳ್ ॥ ೧೦೨

ಪರಭೂಪಾಲವಿಶಾಲಮೌಳಿಮಣಿಸಂಘಾತಪ್ರಭಾಪ್ರಂಜವಿ ।
ಸ್ಫುರಪಾದಂ ನತಸರ್ವಲೋಕನಭಯಂ ತೀವ್ರಪ್ರತಾಪಂ ಮಹೀ ॥
ಧರರಾಜಂ ಮಹಿಮಾಂಬುರಾಶಿಯುಚಕಳಂ ಭರ್ಗಪ್ರಿಯಂ ಭೋಗಭಾ ।
ಸುರನುದ್ದಾಮಗುಣಂ ಪ್ರಚಂಡಭುಜನೊಪ್ಪಿರ್ಪಂ ನಗಾಧೀಶ್ವರಂ ॥ ೧೦೩

ಎಱಗದ ಭೂಪರಿಲ್ಲ ಬೆಸಕೆಯ್ಯದ ರಾಜಕುಮಾರರಿಲ್ಲ ಕೂ ।
ರ್ತೞಿಯದ ಪೆಣ್ಗಳಿಲ್ಲ ತಲೆವಾಗದ ಚಾಗಿಗಳಿಲ್ಲ ತಬ್ಬುಕು ॥
ಕ್ಕುಱಿಸದ ವೀರರಿಲ್ಲ ನತರಾಗದ ಬಲ್ಲಿವರಿಲ್ಲ ಕೀರ್ತಿಯಿಂ ।
ತುಱುಗದ ದಿಕ್ಪ್ರತಾನಮಣಮಿಲ್ಲೆನೆ ಬಾಳ್ವಿನಗಾಧಿನಾಯಕಂ ॥ ೧೦೪

ಆತನ ಪುಣ್ಯವಲ್ಲಭೆ ವಿರಾಜಿತೆ ಪೂಜ್ಯೆ ಪರಾಪರೈಕವಿ ।
ಖ್ಯಾತೆ ಪತಿವ್ರತಾಗುಣವಿಭೂಷಣೆ ಸಲ್ಲಲಿತಾಂಗಿ ಸತ್ಯೆ ಶೈ ॥
ವಾತುರೆ ಶಾಂತೆ ಶಾಶ್ವತೆ ಶುಭಾಚರಣಾನ್ವಿತೆ ಮಾನ್ಯೆ ಸದ್ಗುಣ ।
ವ್ರಾತೆ ವಿಳಾಸವಿಭ್ರಮಕಳಾನಿಧಿ ಮೇನೆಯೆನಿಪ್ಪಳುರ್ವಿಯೊಳ್ ॥ ೧೦೫

ಇಂತು ಪಿತೃಗಳ ಮನದೊಳ್ ಪುಟ್ಟಿದ ಸಕಳಗುಣಾಲಂಕೃತೆಯಪ್ಪ ಮೇನಾದೇವಿ ನಿಜವಲ್ಲಭೆಯಾಗೆ ನಿಶ್ಚಿಂತತೆಯಿಂದಿರ್ಪರುಂ ಪರ್ವಿದ ಹರ್ಷಕ್ಕಿಂಬುಗೊಟ್ಟು ನಲಿನಲಿದು ಕೆಲವು ದಿನಂ ಸಮಸುಖದೊಳಿರ್ದು, ಮೈನಾಕನೆಂಬ ಕುಮಾರನಂ ಪಡೆದು; ಸಕಳಸಾಮ್ರಾಜ್ಯಭರಿತದಿಗ್ವಳಯನಾಗಿ ಅಪ್ರತಿಹತಪ್ರತಾಪಭೂರಮಣನೆನಿಸಿಯೋಷಧಿಪ್ರಸ್ಥಪುರಕ್ಕೆ ಮಲಯಜತಿಲಕದಂತೆ ವಿರಾಜಿಸುವ ಅರಮನೆಯ ಸಭಾನಿಳಯದೊಳ್ ಪ್ರಭಾವಳಯಮೆನಿಸಿದ ನವಕನಕಮಣಿಗಣಭಾಸುರನಿವಾಸಭದ್ರಾಸನಮುಂ ದುಷ್ಟವಿದ್ವಿಷವಿದ್ರಾವಣನೆನಿಪ್ಪ ಶೈಲರಾಜನವಷ್ಟಂಭಿಸಲೊಡಂ; ಸಿಂಹಾಸನದಿಕ್ಕೆಲದೊಳ್ ನಿಂದ ವೀರಲಕ್ಷ್ಮಿ ವಿಜಯಲಕ್ಷ್ಮಿಯರ್ ಸಕಲಭೂಪಾಲರ ಸುಕೃತಬೀಜರಾಜಿಗಳಂ ಜಗದ್ವಿಜಯವಲ್ಲಭೈಕಪಟ್ಟಕ್ಕೆ ವೀರಸೇಸೆಯಿಕ್ಕುವಂತೆ ಬಿಂಕದಿಂ ಕೊಂಕಿ ನಿಂದು ಕಂಕಣರಭಣತ್ಕಾರಂ ಸಭೆಯ ಕಿವಿಗೆ ಸವಿಗಳಂ ಸಾಲಿಡೆ ಸೂಟಿಱಿದಿಕ್ಕುವ ಚಾಮರಗ್ರಾಹಿಣಿಯರೊಳಂ; ಮತ್ತಮಾಸ್ಥಾನಮೆಂಬ ನೀರ್ತೆಗೆದ ರತ್ನಾಕರದೊಳೆಲ್ಲಲ್ಲಿ ತರತರಂಬಿಡಿದು ಗುಂಪಿಸಿದ ರತ್ನರಾಸಿಗಳಿವೆಂಬಂತೆ ಮಣಿನಿಕರಖಚಿತಮಕುಟಕೋಟಿಗಳ್ ಮೆಱೆಯೆ ಬಹುರತ್ನಕಾಂತಿಕದಂಬಂ ಮಂಡಳಿಸಿ ಪರಿವೇಷಂಗೊಂಡ ರವಿಮಂಡಲದ ಹಿಂಡುಗಳಂತೆ

ತೆಕ್ಕನೆ ತೀವಿ ಕಿಕ್ಕಿಱಿಗಿಱಿದು ಕುಳ್ಳಿರ್ದ ಲಾಳಗೌಳಚೋಳಕೇರಳಪಾಂಡ್ಯಪಲ್ಲವಮಗಧಮಾಳವವಂಗಕಳಿಂಗಬಂಗಾಳತೆಲುಂಗಗುರ್ಜರತುರುಷ್ಕಹಮ್ಮೀರನೇಪಾಳಮೊದಲಾದ ರಾಜಪುತ್ರರ ಪಜ್ಜೆಗಳೊಳಂ; ಮತ್ತಮಾಭೈಳಪತಿಗೆ ನೆನೆವ ಮನಂ ನುಡಿವ ನಾಲಗೆ ನೋಡುವ ಕಣ್ ಕುಡುವ ಕೈ ಪಿಡಿವ ಕೈದುಗಳೆನಿಸಿ ಸುರಗುರುವಿನ ಬುದ್ಧಿಯೆಲ್ಲಂ ದೇವಲೋಕಮೆಲಸಿತಮೆಂದೇಱಿಸಿ ದೈತ್ಯಗುರುವಿನ ಮಂತ್ರಮಂ ನಭೋಭುವನವಿಳಸಿತಮೆಂದಧಃಕರಿಸಿ ನಿಜಮಂತ್ರಶಕ್ತಿಯಿಂ ಸರ್ವೋರ್ವೀಧರನಿಕಾಯಮಂ ಕಾಲ್ಗೆಱಗಿಸಿಕೊಳ್ವ ಮಂತ್ರಿಗಳ ಮಂತಣದೊಳಂ; ಮತ್ತಮೊತ್ತರದಿನೆತ್ತಿ ನಡೆವೆಡೆಯೊಳಮರಿರಾಯರ ಗುಹೆಗಹ್ವರಂ ಬೆಟ್ಟಗಟ್ಟ ಬಿದಿಬೆಟ್ಟದಿಂದೆತ್ತಲುಂ ಮುತ್ತಲರಿದೆನಿಸಿದತಿಬಿರುದಿನ ಗಿರಿದುರ್ಗಂಗಳಂ ವಜ್ರಧರನಂತಡಸಿ ಘುಡುಘುಡಿಸಿ ಪುಡಿಗುಟ್ಟುವ, ಮತ್ತಂ ಸಕಳತರುನಿಕರದಿಂದಿಡಿದಿಡಿದುರ್ವಿ ಕೊರ್ವಿ ಪರ್ವಿದ ಮರ್ವಿಂದೆ ಗರ್ವಿಸುತ್ತಪ್ರತಿಹತಮೆನಿಸಿ ದುಷ್ಪ್ರವೇಶಮಾದ ವನದುರ್ಗಂಗಳಂ ದಾವಾನಳನಂತಟ್ಟಿ ಮುಟ್ಟಿ ಸುಟ್ಟುರಿಸುವ, ಮತ್ತಮದಲ್ಲದೆಯುಂ ನಾಲ್ಕುಂ ದೆಸೆಯೊಳೊತ್ತರದಿಂ ಸುತ್ತಿ ಮುತ್ತಿ ನಿಬಿಡತರನಿರ್ಘೋಷಪ್ರಭೂಷಣಲೋಲಕಲ್ಲೋಲಮಾಲಾಸಂಘಟ್ಟನಸಮುದ್ಘೂತಸಲಿಲಪೂರ್ಣಮಾದ ಜಲದುರ್ಗಂಗಳಂ ಬಡಬಾನಳನಂತೆ ನಾಡೆ ಪೀರ್ವ, ನಿಜಭುಜಪ್ರತಾಪಂ ರೂಪುಗೊಂಡಂತೆ ತಂಡತಂಡದೊಳ್ ಕುಳ್ಳಿರ್ದ ದಂಡನಾಥಯೂಥದೊಳಂ; ಮತ್ತಂ ನಿಜಮಂದಿರದ ರಸಿಕರ ಗಾಯಕರ ಗೋಷ್ಠಿಯೊಳ್ ಪುಟ್ಟಿದ ರಸಕಾವ್ಯಗಾನಮನುಱೆ ಕೇಳ್ದು ಸವಿವ, ಮುಖಮಂಡಲದ ಲಲಿತಲಾವಣ್ಯಮಂ ಕಮನೀಯಕಾಂತಿಯುಮಂ ಕನ್ನಡಿಯೊಳ್ ಕಳ್ದು ನೋೞ್ಪ, ಸಖೀಜನಂ ಕಲಿಸಿದ ಸುಖಪ್ರತಿಕೂಲವಚನಮಂ ಮುಖದ ಮುನಿಸುಮಂ ಪ್ರಿಯದರ್ಶನಂಗಳಂ ಮುನ್ನಮೆ ಮಱೆದು ನಲ್ಲನೊಳ್ ಸಲ್ಲೀಲೆಯಿಂ ನೆರೆವ, ಕೇಳೀವನದ ಬಿನದಕ್ಕೆ ಇನಿಯಂ ಪೋದನಿತುಬೇಗಮಂ ಸೈರಿಸಲಾಱದೆ ಪರಿತಂದು ಸಜ್ಜೆವನೆಯ ಸಿರಿಮಂಚದೊಳ್ ಕುಳ್ಳಿರ್ದು ಬಳ್ಳಿವರಿವ ನೇಹಂ ಕುಡಿನಿಮಿರೆ ಸುರತಸಮಯದೊಳಿನಿಯನಾಡಿದ ಸವಿನುಡಿಗಳನುಸಿರ್ದುಸಿರ್ದು ಸವಿಸವಿದಾಲಿಸಿ ಪುಳಕಿಸುತುಂ ಕೆಲಬಲನಂ ನೋೞ್ಪ ಭಿತ್ತಿಯ ಚಿತ್ರಂ ಕಾಣ್ಗೆಮೆಂದು ನಾಣ್ಚಿ ನಿಲುತ್ತೆ ತಡೆದ ನಲ್ಲನಂ ಕಣ್ಮುಚ್ಚಿ ನೆನೆದು ಮನದ

ಕಣ್ಣೊಳ್ ಸನ್ನೆಗೆಯ್ದು ಬುದ್ಧಿಯಿಂ ಬರಿಸಿ ಅಹಂಕಾರದಿಂ ಪಿಡಿದು ಚಿತ್ತದೊಳ್ ನೆರೆದು, ಭಾವರತಿ ಬಲಿದು, ಬಂದಂತೆ ಬಗೆದು, ಕಣ್ದೆಱೆನು ಕಾಣದೆ ಬಯಲನಪ್ಪಿದ ತೋಳ್ ಬಂಜೆಯಾಗೆ ಬಾಡಿದ ಲತೆಯಂತೆ ಕಂದಿ ಕುಂದುವ, ಪೊತ್ತು ಮಱೆಯಿಲ್ಲದೆ ಪೊಸಂತಿಲಂ ಪೊಱಮಡಲಱಿಯದೋಲಗಕ್ಕೆ ಪೋಪಲ್ಲಿ ದಾದಿಯ ಸೆಱಗಂ ಪಿಡಿದು ನಡೆವಲ್ಲಿ ರಾಜವೀಧಿಯೊಳ್ ಸುೞಿವ ಜವ್ವನಿಗರಂ ಕಂಡು ಪೊಲಂಬುಗೆಟ್ಟ ಪುಲ್ಲೆಯಂತೆ ದೆಸೆದೆಸೆಗೆ ಬೆರ್ಚುವ, ನುಡಿಸಿದ ವಿಟಂಗೆ ಮೌನಮನುತ್ತರಂಗುಡುವ, ಸಮದೃಷ್ಟಿಯಾಗೆ ಮಿಂಚು ಪಳಂಚಿದಂತೆ ಕಣ್ಮುಚ್ಚುವ, ಎಸೆವ ಸಭೆಯೊಳ್ ನಸುಮುಸುಂಕು ನಾಡೆ ಮೆಱೆಯೆ ಮಱೆಗೊಂಡು ಕುಳ್ಳಿರ್ಪ, ರಾಜಪುತ್ರರ್ ನೆವದಿಂ ಸೋಂಕೆ ಭೀತಿಯಿಂ ಬೆಮರ್ವ, ಸಾತ್ವಿಕರಸಂ ಪುಟ್ಟೆ ಸನ್ನೆಯಱಿಯದ ಸರಸವಱಿಯದ ಜಾಣಱಿಯದ ಕೇಣವಱಿಯದ ನಿಲವು ನಿರ್ವಿಕಾರಸುಖಮನೀಯೆ ಕಾಮಸುಖಕ್ಕೆ ಕಣ್ ಬಂದಂತೆ ಸೋಂಕುಮಾರ್ಗಕ್ಕೆ ಸವಿಯೇಱಿದಂತೆ ಆಲಿಂಗನಕ್ಕೆ ಅವಯವಂ ಬಂದಂತೆ ಚೆಲ್ವಿಂಗೆ ಮೊಲೆಮೂಡಿದಂತೆ ಅಲ್ಲಲ್ಲಿ ಕುಳ್ಳಿರ್ದ ಬಚ್ಚಬಱಿಯಚ್ಚಸುಖದ ಪಚ್ಚಪಸಿಯ ಪೊಚ್ಚಪೊಸ ಹರಯದ ಮುಗ್ಧಾಂಗನೆಯರೊಳಂ; ಮತ್ತಂ ನಿಳಯಾಂಗಣದೊಳ್ ಸುೞಿವ ವಿಟನಂ ನೋಟದೊಳೊಳಪುಗಿಸಿ ಕೂಟದೊಳ್ ಕೊಸಱಿ ಬೇಟದೊಳ್ ಬಳಿಯಿಸಿ ನೆರೆವ, ಪರಿಮಿತದ ಮೋಡಾಮೋಡಿಯನುಭವದೊಳ್ ವಲ್ಲಭನ ಮನಂ ಪಲ್ಲಟಿಸುವ ಕಾಲಮನಱಿದು ಕಡುಮುಳಿದು ಖಾತಿಮಿಕ್ಕು ಪ್ರಣಯಕಲಹಂ ಕೈಗಣ್ಮೆ ಕಂಡಂಜಿ ಕಾಲ್ಗೆಱಗಿದ ಕಾಂತಂಗೆ ಕಾರುಣ್ಯಮಂ ನೀಡಿ ಕೂಡುವ ಸುರತಚಂದ್ರೋದಯದೊಳ್ ಕಾಮಸುಖಾಬ್ಧಿಯುರ್ಕಿ ಪರಿಯೆ ಗಾಢಾಲಿಂಗನಂ ತೆಱಪುಗುಡದಿರೆ ಸರ್ವಾಂಗಮಂ ಪ್ರತ್ಯಂಗದೊಳ್ ಮೇಳಯಿಸಿ ಕುಸುಮಾಯುಧಸುಖತರಂಗಿಣಿಯ ಸುೞಿಯೊಳ್ ಮನಂ ಮುೞುಂಗಿರ್ದ ಸುಖಸಮಯದೊಳರಮನೆಯ ಸೂೞಾಯ್ತರ ಸರವೆತ್ತಿ ಸಾಱುವ ದನಿಯಂ ಭೋಂಕನೆ ಕೇಳ್ದು ಮುಗಿಲ ದನಿಗೇಳ್ದ ಮರಾಳದಂತೆ ಮನಂಗುಂದಿ ಕೂಟದ ಕೇಡಿಂಗೆ ನಾಡೆ ನೊಂದು ಮನದಪ್ಪು ಸಡಿಲದೆ ತನುವಿನಪ್ಪು ಸಡಿಲ್ದು ಸಂಗಸುಖಮಂ ಪಿಂಗಲಾಱದೆ ಕಾಮನ ಬಾಣಕ್ಕೆ ಗುಱಿಯಾಗಿ ಮಱುಗಿ ಮಲ್ಲೞಿಗೊಂಡು ಮೆಲ್ಲನೆದ್ದು ಮುಂದುಗೆಟ್ಟಂತಂತೆ ಸಿಂಗರಿಸಿ ಸಿಡಿಮಿಡಿ

ಗೊಂಡು ನಡೆತರ್ಪರ್ಗಳ್ ಮುಡಿಯ ಭಾರಕ್ಕೆ ಕೊರಲ್ ಕೊಂಕೆ ನೆಲೆ ಮೊಲೆಯ ಬಿಣ್ಪಿಂಗೆ ಬಡನಡು ಬಳ್ಕೆ ನಿತಂಬಭಾರಕ್ಕೆ ಮೆಲ್ಲಡಿ ಮಲ್ಲಳಿಗೊಳುತ್ತಿರೆ ನೇವುರದ ನುಣ್ದನಿ ಗಾವಳಿಸುವ ವಿಟರ ನೋಟಮಂ ಜಡಿವಂತೆ ಪಾದಮುದ್ರಿಕೆ ಪಳಂಚೆ ಕಡೆಗಣ್ಗಳ ಕಾಂತಿಯೊಳೆಬಿಲ್ವ ನವಯುವ್ವನಿಗರಂ ನಗುವಂತೆ ಸೂಕ್ತಿಯೊಡನೆ ಸೂಸುನ್ನಸುಲಿಪಲ್ಲ ಬೆಳಗು ಬೀದಿವರಿಯೆ ನಡೆತಂದೊಡ್ಡೋಲಗಮನೊಟ್ಟಯಿಸಿ ಪೊಕ್ಕು ಮಕುಟವರ್ಧನರಂ ಮರುಳ್ಗೊಳಿಸುತುಂ ಮಲೆದು ಕುಳ್ಳಿರ್ದ ಮಧ್ಯಮನಾಯಕಿಯರ ನಿಕರದೊಳಂ; ಮತ್ತಮನುರಾಗಮೊಳೆ ಮನಂಡಂದು ಬಂದ ವಿಟರ್ಗುನ್ನತಾಸನಮನಿತ್ತು ಮನ್ನಿಸಿ ಮಣಿದು ಸಜ್ಜೆವನೆಗುಯ್ದು ಸಜ್ಜನಸ್ನೇಹದಿಂ ಸಾಗಿಸಿ ನೋಡಿ ಭೋಗದೊಳ್ ಬೋಳಯಿಸಿ ರಾಗದಿ ಮೇಳಯಿಸಿ ಮಂದೆವಾಳಂ ಮೆಯ್ಸಂದೊಂದೆರಡು ಚೆಂದದನುಭವದೊಳ್ ಮಂದಯಿಪ ಸುಖಮನಿತ್ತು ನೆತ್ತದೊಳ್ ಬಿತ್ತರಂ ಬಡೆದು ಚದುರಂಗದೊಳ್ ಚಾತುರ್ಯಂಗೊಟ್ಟು ಓದಿನೊಳ್ ಮಾಧುರ್ಯಂಬಡೆದು ಪಾಡಿನೊಳ್ ಪರಿವಡೆದು ನುಡಿಯೊಳ್ ನಯಂಬಡೆದು ವೀಣೆಯೊಳ್ ಜಾಣಂ ಮೆಱೆದು ಉಪಚಾರದೊಳೌಪ್ಯರಂಬಡೆದು ಇಚ್ಛೆಯೊಳ್ ಕೆಚ್ಚುಗಟ್ಟಿ ಸಿಂಗರದೊಳ್ ಸೊಬಗುವೆತ್ತು ವಿಳಾಸದೊಳ್ ವಿವೇಕಂಬಡೆದು ನಡೆದು ಬಂದರಮನೆಯಂ ಪುಗುವಾಗಳ್ ಮುಖಮಂಡಲಂ ಚಂದ್ರಮಂಡಲಮನಿಱಿಕೆಗೆಯ್ಯೆ, ತುರುಬಿನ ಕೊರ್ವು ಕರ್ವುರ್ವಿಲ್ಲಂ ಕೀೞ್ಮಾಡೆ, ಕಡೆಗಣ್ಣ ಕಾಂತಿ ಕುಸುಮಾಸ್ತ್ರಮಂ ಕೆದಱೆ, ಕರ್ಣಾಭರಣಂ ರವಿಕಿರಣಮನನುಕರಿಸೆ, ಉಟ್ಟ ಬಿಳಿದು ಬೆಳ್ದಿಂಗಳಂ ಬೀಱೆ, ಪಿಡಿದ ಲೀಲಾಬ್ಜಂ ನೂತನಂಬಡೆಯೆ, ನೇವುರದ ದನಿ ನೆಲನನುಗ್ಗಡಿಸೆ, ಕಂಕಣರಝಣತ್ಕಾರರವಂ ಅರಸುಮಕ್ಕಳಂ ಜಡಿಯೆ ವಿಳಾಸದಿಂ ಪೊಕ್ಕು ಮೆಯ್ಯೊಳ್ ಪೂಸಿದ ಶ್ರೀಗಂಧದ ಕಕ್ಷದೊಳಳವಟ್ಟ ಸಾದಿನ ಕಿವಿಯೊಳ್ ಮಗಮಗಿಪ ಮೃಗಮದದ ಮುಡಿದ ಕದಂಬಪ್ರಸೂನದ ಬೆರಕೆಗಂಪಿಂಗುರವಣಿಸಿ ಮುಸುಱಿ ಮೊರೆದು ಮಂಡಳಿಸಿ ಮಾಳಚಳನದೊಳೇಱುತೆಱಗುವ ಮಧುಕರನಿಕರಂ ಸೌರಭ್ಯಲಕ್ಷ್ಮಿಯುರಿಕ್ಕುವ ನೀಲದ ಸೀಗುರಿಯಂತಿರೆ ತರತರದಿಂ ಕುಳ್ಳಿರ್ದ ವಿದಗ್ಧವನಿತಾಸಮೂಹದೊಳಂ; ಮತ್ತಂ ಸೊರ್ಕಿನ ಸೊವಡಿಂಗೆಱಗಿ ತುಱುಗಿದ ಪಱಮೆಗಳ್ ಕರಿಮುರಿವೋಗಿ ಧರೆಯ ಮೇಲುದಿರಲಗ್ರಪಲ್ಲವದಿಂ ಬೀಸಿ

ಕೊಳ್ವ ನೆಗೆದ ತುಂತುರ್ವನಿಗಳುಂ ಮುಗಿಲ ಮೆಯ್ ಪುಗಲೇೞೆ ಪುಷ್ಕರದಿಂ ಫೂತ್ಕರಿಸುವ ಬಳಗುರ್ಕಿ ತೆರೆಮಸಗುವ ಮದಸಮುದ್ರದೊಡನೆ ಕ್ರೋಧವಡಬಾನಳನಂ ಬೆರಸಿ ಸುರಿದಪುದೆಂಬಂತೆ ನೆಗೆದ ಪೊಗೆವೆರಸಿ ಕೀೞ್ಮದಂಬಿಡುವ ಕಣ್ಣಿಂ ಕೋಡ ಮೊನೆಗನೇಕಕಾಲದೊಳ್ ಬಂದ ರೂಪಂ ಪ್ರತಿಮಾನದೊಳೊಟ್ಟಿ ಕೊಳ್ವ ಕಟ್ಟಣಕದ ದುಷ್ಟಗಜಮನಗ್ರಪಲ್ಲವಮಂ ಪಿಡಿದೇಱಿ ಭಂಗಿಸುತ್ತುಂ ಗುಟಕ್ಕಾಳ್ಮಡಿ ಬಿದುವನಪ್ಪಳಿಸಿ ಚಪ್ಪರಿಸುತ್ತಬ್ಬರಿಸುವ ಕೊಬ್ಬುರ್ನುಡಿಯೆ ಕೂರಂಕುಸಮಾಗೆ ತೋಱಿ ತ್ರೊಟ್ಟು ಕೀಱಿಬಿಟ್ಟಕ್ಕುವ ಬಲ್ಪಿನ ಕಟ್ಟೊಬ್ಬಟೆಯು ಬಿರುದಿನ ಹಾಹೆ ಕಾಲೊಳೆಱಲೆ ಕಡುಪಿಂ ಬಂದು ಪುರುಷಸಿಂಹಂಗಳಂತೆ ತರತರದಿಂ ಕುಳ್ಳಿರ್ದ ಗಜಾರೋಹಕರ ಗೊಂದಣದೊಳಂ; ಮತ್ತಂ ಮುಂದುರದೊಳ್ ನಟ್ಟ ಕಚ್ಚಿನ ಮುಂಡಿಗೆ ಮುಱಿಯೆ ಪೊಳಸಂ ಪರಿಯೆ ಪೊಱಿಮುಟ್ಟು ನೆರವಿಯನುರವಣಿಸಿ ಪಾಯ್ದು ಬೀದಿವರಿದಾಱಿಗೊಂಡು ಸಿಕ್ಕಿದ ರೂಪಿನ ತಲೆಯೊಳ್ ಸಿಳಿಲ್ ನಿಕ್ಕೆಂದು ತರ್ಗಿ ನುಗ್ಗಿ ಕರ್ಚಿ ಕೊಡಹುವ ನಚ್ಚಿನ ಗೋವಂದನಿಧೋಱಿ ಕತ್ತರಿಮೊನೆಗೊಂಡ ಕಿವಿಯಿಂ ಕೆಕ್ಕಳಿಸುವ ದೃಷ್ಟಿಯಿಂ ಕಂಗನೆ ಕನಲ್ದು ಮುಂಗಾಲಿಂ ನೆಲನಂ ಪೊಯ್ದೊದ್ದು ಪರಿಬೆಯುದ್ಧವ ಮುಂದೆ ಕಚ್ಚುವ ಹಿಂದೆ ಮೊಟ್ಟುವ ಕೆಲಕೆ ಚಿಮ್ಮುವ ದುಂಡಿಸಿ ನೆಗೆವ ಮಂಡಿಸಿ ನಿಲ್ವ ಮುರಿದುಪ್ಪರಿಸುವ ತರಹರಿಸಿ ಪೊಣ್ಮುವ ಪೊಱಕಾಲೊಳ್ ನಡೆವ ಸೂಕಳಾಶ್ವಮಂ ಬೇಗದಿಂ ಬೆಂಗೆವಾಯ್ದು ರಾಘೆಯೊಳಾಂಕೆ ವಾಘೆಯೊಳ್ ನಿಲಿಸಿ ಕೆಲಬಲಕ್ಕಿಕ್ಕಿ ಸರಿಸಬೀದಿಯೊಳೇಱಿ ತೋಱಿ ನಳನಂ ದತ್ತಿಳನನಿೞಿಕೆಗೆಯ್ವ ಬಿರುದಿನ ಬಿಂಕದಂಕಮಾಲೆ ಕಲಬಲದೊಳಂಕುರಿಸುತ್ತಮಿರೆ ನಡೆತಂದು ಸಮುಚಿತಾಸನದೊಳ್ ಕ್ರಮದಿಂ ಕುಳ್ಳಿರ್ದ ಪಟ್ಟಸಹಣಿಯರ ಪರಿವಿಡಿಯೊಳಂ; ಮತ್ತಂ ಮಲೆತು ನಿಂದು ಅಕ್ಕಡದೊಳ್ ಪೊಕ್ಕು ಬಾಹಪ್ಪಳಿಸಿ ಬಲ್ಪದೋಱಿ ಕೈಜೋಡಿಸಿದ ಮಲ್ಲನನುರ್ಬು ತೊಡ್ಯನೊಳ್ ಪೊಕ್ಕು ಮಿಕ್ಕು ಪಿದಿಕ್ಕಿ ಮುರಿವ ಅಡುಪಾಯದಳವಿಂಗೆ ಕಡಂಗುವ ಮಲ್ಲನನಡಸಿ ತಿವಿದು ಕಡುಪಿಂ ಕೆಡಪಿ ಕೊಪ್ಪರದೊಳ್ ಕುಮ್ಮಿ ಮಂಡಿಯೊಳ್ ಮಿದಿದು ಕುದಿದು ಸದೆದು ಸಂಣ್ಣಿಸುವ ಚೊಕ್ಕೆಯದಾಸೆಗೆ ಪೊಕ್ಕು ಮಲ್ಲನಿಕ್ಕಿ ಮೆಟ್ಟಿ ವಜ್ರದ ಬಳ್ಳಯಂತೆ ಛಡಿಕೆಯೊಳ್ ಬಿಗಿದು ಚಾಳಿಸಿ ನೂಂಕುವ, ನೂಂಕೆ ಪೋಗದೆ

ನಿಂದ ಸೆಳೆಹನಂ ಸೆಳೆದು ಕೆಡಪಿ ಪಿಡಿದೆತ್ತಿಯೊತ್ತಿ ಕುಸುಬಿ ಕುಸುಕಿ
ಱಿದು ಪೊಸೆದು ಪೊಟ್ವಿ ಸಾಹಸಿತನಕೆ ಬೆರಸಿದ ಮಲ್ಲನನೊರಸಿ ಬಿಡುವ
ಲವಣಿ ಸಾರದೊಳ್ ನುಣ್ಚುವ ಮಲ್ಲನನೆಂಕಿ ಪಿಡಿದು ಸುತ್ತಿ ಮುತ್ತಿ
ಸೆಳೆದಿಕ್ಕಿ ಸಿಂಸಕದೊಳ್ ಪೊಕ್ಕು ಭುಜದೊಳಣೆದುರದೊಳ್ ಕೇದು ಉತ್ತಾ
ನಕದೊಳ್ ನಿಂದು ಸಖಾಯರ್ ರಝಣರಝಣರಝಣರೆನೆ ಬಳಸಿ ಭಂಜಿ
ಸುವ ಐರಾವತಂ ಮಲ್ಲವೇಷದೊಳಿದಿರಾದೊಡಂ ತೋರಹತ್ತದೊಳಂ ತಿ
ವಿದು ತಿರಿಪುವ ಸಂಚಳಿಸುವ ಮಿಂಚಿ ನಿಂದು ಮೇಳವಿಸಿ ಚೊಕ್ಕೆಯದನು
ಮಾನದೊಳ್ ಡೊಕ್ಕರಿಸಿ ಪಿಡಿವರಿಬಿರುದಿನ ಕಲ್ಲ ಮಾನಸರಂತಿರ್ಪ ಮಲ್ಲರ
ನೆರವಿಗಳೊಳಂ; ಮತ್ತಂ ಕಳನೇಱಿದಂಕವುಂ ಗಳೆಯೋಸರಿಸದ ಮುನ್ನಂ
ಕುತ್ತಿ ಕೆಡಪ್ರವ ತಟ್ಟು ಗಂಟಿಕ್ಕಿ ಟೆಂಟಣಿಸುವಂಕವುಂ ಸೆಳೆದು ಕೆಡಪು
ವ ಮುಳಿದು ಮೆಟ್ಟುವ ಸುಱಿದು ಸುತ್ತಿ ಬಳಸಿ ಮೊನೆದೋಱುವ ಬಿರು
ದಿನಂಕವನುರವಣಿಸಿ ಪತ್ತಿ ಪೊರಚ್ಚಿ ಕೊಳ್ವ ಬಿನ್ನಣಂದೋರ್ಪ ಗನ್ನ
ದಂಕವುಂಬಿಡಿಸಿ ಬೆಂಬತ್ತಿ ಕುತ್ತಿ ಉರಚ್ಚಿ ಪ್ರಬ್ಬಟೆಯು ಬಿರುದಿನುಪ್ಪರ
ವಟ್ಟದುಭಯಛತ್ರದ ಪಗಲ ಕೈದೀವಿಗೆಯು ಕಾಲಹಾಹೆಯು ಮೊತ್ತದ ಬಾ
ಪ್ರಲಿಯು ಮೂಲೆದೊಡರ ಮಾಸಾಳ್ಗಳ ಮಂತಣದೊಳಂ; ಮತ್ತಂ ವಕ್ರೋ
ಕ್ತಿ ಸ್ವಭಾವೋಕ್ತಿ ಸರಸೋಕ್ತಿ ಪಾಕಲಾಲಿತ್ಯ ಗುಂಪು ಇಂಪು ರೀತಿ
ನೂತನವಾಗೆ ಗದ್ಯಪದ್ಯಕಾವ್ಯಕಳಾಪ್ರೌಢಿ ರೂಢಿವಡೆಯೆ ಮೆಱೆದಿರ್ಪ ಸರ
ಸಕವಿಗಳ ಸಂದಣಿಯೊಳಂ; ಮತ್ತಮಾರಭಟಿಯೊಳ್ ದಿಟ್ಟಾಳಂಮಿಕ್ಕು
ಸಾತ್ವತಿಯೊಳ್ ಸರಸಂಬಡೆದು ಕೈಶಿಕಿಯೊಳ್ ಪಜ್ಜಳಂಬೆತ್ತು ಭಾರತಿಯೊ
ಳ್ ಕಾಂತಿ ಕೈಗಣ್ಮಿ ಆಸ್ಥಾನವುಂ ಕೌತುಕರಸದೊಳ್ ಕರುವಿಟ್ಟಂತಿರಿ
ಸುವ ಸಾಮರ್ಥ್ಯಮನೊಳಕೊಂಡು ಕುಳ್ಳಿರ್ಪ ಗಮಕಿಗಳ ತಂಡದೊ
ಳಂ; ಮತ್ತಂ ಶಬ್ದಖಂಡನಮರ್ಥಖಂಡನಮನುಮಾನಖಂಡನವೆಂಬ ತರ್ಕ
ತಂತ್ರಕೋವಿದರಪ್ಪ ವಾದಿಗಳೊಳಂ; ಮತ್ತಂ ಮಧುರರಸಮೊಸರ್ವ ಪೊ
ಸನುಡಿಗಳಂ ಕೇಳ್ವ ಸಭೆಗೆ ಕರ್ಣರಸಾಯನಮನೀವ ಮಾಧುರ್ಯಗು
ಣಂ ಮೆಯ್ಯಿಕ್ಕಿದ ವಾಗ್ಮಿಗಳೊಳಂ; ಮತ್ತಂ ವಳವಕ್ರತೆಯನೀವ
ವಹಣಿ ತರಂಗಿಸುವ ತಿರುಪು ಸುಱಿಗೊಳ್ವ ಹೆಂಪು ಇಂಪಂ ಕಱೆವ ಸು
ಧಾರಸಗಾನಂ ನಾನಾರಸದ ಲಹಣಿಸು ರೂಪ್ರವಡೆಯೆ ಪಾಡುವ ಗಾಯಕ

ರೊಳಂ; ಮತ್ತಂ ಸುಗತಿಗಳಂ ಸೂಸುವ ಮದ್ದಳಿಗರಿಂ, ರೂಪುರೇಖೆರಸಂ ಬಡೆವ ನರ್ತನ ನಾಯಕಿಯರಿಂ, ನವೀನಗತಿಯುಂ ನೀಡುವ ನರ್ತಕರಿಂ, ಭಾವರಸಮನೀವ ಚಿತ್ರಕರಿಂ- ಇಂತು ಗಿರಿರಾಜನೊಡ್ಡೋಲಗಮನಂತಗಂಭೀರಮನತುಳಪ್ರತಾಪಮನುರುತರಸೌಂದರ್ಯಮನೂರ್ಜ್ಜಿತವಿಳಾಸಮನನುಪಮೌದಾರ್ಯಮನೊಳಕೊಂಡಿರ್ದುದು. ಆಪ್ರಸ್ತಾವದೊಳ್

ನುಡಿಯದಿರಂಧ್ರ ಕೈಮುಗಿ ಕಳಿಂಗ ಕುನುಂಗೆಲೆ ವಂಗ ಕೇರಳಂ ।
ಗೆಡೆಗುಡು ಚೋಳ ಲಾಳ ಪೆಱಸಾರ್ ಪುಗದಿರ್ ಮಗಧೇಶ ಕಾಣ್ಕೆಯಂ ॥
ಪಿಡಿದಿರು ಪಾಂಡ್ಯ ಬಿನ್ನವಿಸು ಮಾಳವ ಗೌಳನೆ ಪಿಂಗೆನುತ್ತಣಂ ।
ಜಡಿವರಿಳೇಶರಂ ಪಡಿಯಱರ್ ಗಿರಿರಾಜಸಭಾಂತರಾಳದೊಳ್ ॥ ೧೦೬

ಪರಮಸ್ವಾಮಿ ಜಟಾಧರಂ ಶಶಿಧರಂ ಗಂಗಾಧರಂ ಕಾಲಸಂ ।
ಹರನಜ್ಞಾನಹರಂ ಪುರತ್ರಯಹರಂ ಸೌಖ್ಯಾಕರಂ ಶಂಭು ಶಂ ॥
ಕರನಾನಂದಕರಂ ಸಮಂತೆನಗೆ ಭಕ್ತಿಜ್ಞಾನವೈರಾಗ್ಯಮಂ ।
ಕರುಣಂಗೆಯ್ಗೆ ಲವಿಂದೆ ಹಂಪೆಯ ವಿರೂಪಾಕ್ಷಂ ಶಿವಾವಲ್ಲಭಂ ॥ ೧೦೭

॥ ಗದ್ಯ ॥

ಇದು ಸಮಸ್ತಸುರಾಸುರನಿಕರಮಕುಟಖಚಿತದಿನಕರಕರಾಧಿಕ್ಯಮಾಣಿಕ್ಯ
ಪ್ರಭಾಪುಂಜರಂಜಿತಚರಣನೆನಿಪ ಪಂಪಾವಿರೂಪಾಕ್ಷ ಶ್ರೀಪಾದಕಮಲ
ಮಕರಂದಮಧುಕರಾಯಮಾಣ ಸತ್ಕವೀಶ್ವರ
ಹಂಪೆಯ ಹರಿಹರದೇವ ವಿರಚಿತಮಪ್ಪ

ಗಿರಿಜಾಕಲ್ಯಾಣ ಮಹಾಪ್ರಬಂಧದೊಳ್

ದೇಶಪುರಾಸ್ಥಾನವರ್ಣ್ಣನಂ ದ್ವಿತಿಯಾಶ್ವಾಸಂ.

॥ ತೃತೀಯಾಶ್ವಾಸಂ ॥

—ಹೈಮವತೀಶೈಶವವರ್ಣನಂ—

ಶ್ರೀಗೌರೀಕುಚಯುಗಳಪ ।
ರಾಗಯುತಾನರ್ಘ್ಯರತ್ನವಿಳಸದ್ವಕ್ಷೋ ॥
ಭಾಗಂ ಸದ್ಭಕ್ತಿಯನೀವು ।
ಗೀಗೆ ದಯಾವಾರ್ಧಿ ಹಂಪೆಯ ವಿರೂಪಾಕ್ಷಂ ॥ ೧

ಅಂತಿರ್ಪಾಸ್ಥಾನದೊಳ್ ಭೂಭುಜನಿಕರಕಿರೀಟಪ್ರರತ್ನಪ್ರಭೂತಾ ।
ನಂತಪ್ರದ್ಯೋತನೂತ್ನೋಪಕಜನಿತಪದಾಂಭೋಜನುದ್ಯದ್ಧರಿತ್ರೀ ॥
ಕಾಂತಾವಕ್ಷಸ್ಸ್ಥಲಾಲಿಂಗನಭರನಿಜದೋರ್ದಂಡಚಂಡಾಸಿಧಾರಾ ।
ಶ್ರಾಂತಪ್ರಾತರ್ಕ್ಯವೈರಿವ್ರಜಧರನೆನಿಸಿರ್ದಂ ಗಿರಿವ್ರಾತನಾಥಂ ॥ ೨

ಇರೆ ಮಧ್ಯಂದಿನಡಿಂಡಿಮ ।
ವರನಾದಂ ಕೇಳಲಾಗೆ ಗಿರಿಕುಲರಾಜಂ ॥
ತರದಿಂ ನೆರೆದೋಲಗಮಂ ।
ಪರೆಯಲ್ವೇಳ್ಕೆಂದು ನುಡಿದ ಸಮನಂತರದೊಳ್ ॥ ೩

ಕ್ವಣಿತಾನೇಕಪ್ರಧಾನಾಭರಣಭರಮಹಾಮಾತ್ಯಸಾಮಂತಯೂಥಂ ।
ಗಣಿಕಾಸಂತಾನನಾನಾನವಮಣಿಗಣವಿಸ್ತೀರ್ಣಮಂಜೀರನಾದಾ ॥
ರಣಿತಂ ತದ್ವೇತ್ರಹಸ್ತಪ್ರತಿಮುಖಮುಖರಪ್ರೋದ್ಗತಾಭೀಳಘೋಷಂ ।
ಪ್ರಣತಾಸಕ್ತಾವನೀಶಪ್ರಕಟಮಕುಟಯುಕ್ತಂ ಸಭಾವಾಸನಕ್ತ್ರಂ ॥ ೪

ಅಂತಿರ್ದ ಆಸ್ಥಾನಂ ಪರೆಯೆ

ಗಿರಿರಾಜಂ ಸಿಂಹಪೀಠಸ್ಥಿತಕರಭರನಾಗುತ್ತುಮೇಟ್ಟಿಂನು ಸೌಖ್ಯಾ ।
ಕರರೂಪಂ ಮಜ್ಜನಂ ಮಾಡುತೆ ಭಸಿತಲಲಾಟಂ ಸರುದ್ರಾಕ್ಷಕಂಠಂ ॥
ಸ್ಥಿರಚಿತ್ತಂ ಲಿಂಗಪೂಜಾವಿರಚನಪರಿತುಷ್ಟಂ ಪ್ರಸಾದಪ್ರಮೋದಂ ।
ಸ್ಮರಬಾಣವ್ರಾತನುಂ ಲೆಕ್ಕಿಸದತಿಸುಖದಿಂ ಮೇನೆಯುಂ ತಾನುಮಿರ್ದರ್ ॥ ೫

ಇಂತು ವಿಮಳಮನದಿಂ ಸಮಸುಖದೊಳಿರ್ಪಲ್ಲಿ

ಭರದಿಂ ಬಹುಸಂತಾನಾ ।

ತುರೆ ಸಾಧು ಸುಶೀಲೆ ಲೀಲೆ ವಿಕ್ರಾದರದಿಂ ॥
ಗಿರಿರಾಜಂಗೆ ವಿರಾಜಿಪ ।
ವರಜೀವಸಮಾನೆ ಮೇನೆ ನಯದಿಂ ನುಡಿದಳ್ ॥ ೬

ಮೊಲೆಯುಣುತಪ್ಪೞಿಂ ನಗುವ ನಿಂದಿರುತಪ್ಪುವ ಪೊಂಗಿ ಹಿಗ್ಗುತುಂ।
ಮಲೆವ ಮರಳ್ವ ಕಣ್ಗಳನಲರ್ಚುವ ಮುಚ್ಚುವ ನೋಡುತಾಡುತುಂ ॥
ನಲಿನಲಿದುರ್ಬುತಂತೊಲೆಯುತಿಂತೊಲೆನಲ್ಬಿಸು ಮುದ್ದಿನೊಪ್ಪದೊಳ್ ।
ನೆಲಸಿದ ಪುತ್ರಿಯುಂ ಬಯಸುತಿರ್ಪುದೆನ್ನ ಮನಂ ಮನಃಪ್ರಿಯಾ ॥ ೭

ಉಗ್ರತಪದಿಂಬೆಯುತುಳಸ ।
ಮಗ್ರೆಯನಭವಂಗೆ ವಧುವೆನಿಪ್ಪಳನಾನ ॥
ವ್ಯಗ್ರದೆ ಪೇಳ್ವೆಂ ಕುಧರ ।
ಪ್ರಾಗ್ರನೆ ಕಳಪೆಂದು ಮೇನೆ ನುಡಿನವಸರದೊಳ್ ॥ ೮

ಗಿರಿರಾಜನೊಡಂಬಟ್ಟು ।
ದರದಿಂದಂ ಪುಳಕಿಸುತ್ತೆ ಪುಟವೇೞುತ್ತುಂ ॥
ಪರಿಚಾರಪಟುಗಳೆನಿಸುವ ।
ತರುಣಿಯರಂ ಕೂಡಿಕೊಟ್ಟು ಸಂತಸದಿಂದಂ ॥ ೯

ವರಪುತ್ರೀಸ್ವಿರಭಾವಕಾಮ್ಯವಿಲಸತ್ಸನ್ಮಾನೆಯುಂ ಯಾನೆಯುಂ ।
ತರುಣೀಕುಂತಳಮಲ್ಲಿಕಾಮಧುಕರೀಸಂತಾನೆಯುಂ ಜ್ಞಾನೆಯುಂ ॥
ಪರಮಾನಂದತಪೋಭರೋತ್ಥಿತಮನಃಪ್ರಾಧೀನೆಯುಂ ಸ್ಥಾನೆಯುಂ ।
ಗಿರಿರಾಜಂ ಕಳಿಪುತ್ತುಮಿರ್ದನತಿಯೋಗಧ್ಯಾನೆಯುಂ ಮೇನೆಯುಂ ॥ ೧೦

ಕಳಿಪೆ ನಡೆತಂದು ರಮ್ಯ ।
ಸ್ಥಳದೊಳ್ ನಿಂದೇಕಪಾದದಿಂದಂ ಮೇನಾ ॥
ಲಳನೆ ಮಹಾದೇವಿಯ ನಿ ।
ರ್ಮಳರೂಪಂ ಹೃದಯಕಮಲದೊಳ್ ತಳೆದಿರ್ದಳ್ ॥ ೧೧

ಮುಗಿದುವು ನಯನಸರೋಜಂ ।
ಮಿಗೆಯಲ*ರ್ದುದು ಚಿತ್ತಕೈರವಂ ಮಿಕ್ಕೇೞು ॥
ತ್ತು ಗಭೀರತಪೋವಾರಿಧಿ ।
ಬಗೆಯೊಳಗಾಧ್ಯಾನಚಂದ್ರನುದಯಿಸುವಾಗಳ್ ॥ ೧೨

ಇಂತು ತಪೋಬೀಜಂ ಚಿತ್ತಭೂಮಿಯೊಳ್ ಬೇರೂಱಿಯಹಂಕಾರದೊಳಂಕುರಿಸಿ, ಬುದ್ಧಿಯೊಳ್ ಪಲ್ಲವಿಸಿ, ಮನದೊಳ್ ನಿಮಿರ್ದು, ನಿಷ್ಠೆಯೊಳ್ ಕುಡಿವರಿದು, ಪರಿದು ಪರ್ವಿ, ಪುರಹರನರಸಿಯ ಮೆಲ್ಲಡಿಗಳ್ಗೆ ನಿಲ್ಲದೆ ಧಿಂಕಿಡೆ ಭವಾನಿ ಭೋಂಕನಱಿದು, ಮೇನೆಯ ತಪಕ್ಕೆ ಮಿಗೆ ಮೆಚ್ಚಿ, ಕರುಣಿಸಿ ಹರನಂ ಬೀಳ್ಕೊಂಡು ತಂದೆ ಮಾಡುವ ಯಾಗಮಂ ನೋೞ್ಪ ನೆವದಿಂ ಕೈಲಾಸಮಂ ಪೊಱಮಟ್ಟು ದಕ್ಷನ ಪುರಕ್ಕಭಿಮುಖಿಯಾಗಿ

ತ್ರಿಣಯನ ವಿರಹಿತಯಾಗ ।
ಕ್ಷಣಿಯರಸಿಂ ಪೋಗಿ ಮುಂದೆ ನಿಲೆ ದಕ್ಷಂ ನಿ ॥
ರ್ಗ್ಗುಣನಂ ನಿಂದಿಸೆ ದಾಕ್ಷಾ ।
ಯಣಿ ಕೇಳದೆ ವಿಮಳಯೋಗದಿಂ ನಸೆತಂದಳ್ ॥ ೧೩

ಸುರತರುವಿಂ ಬೀಜಂ ದಿ ।
ವ್ಯರತ್ನದಿಂ ಕಾಂತಿ ಪೂರ್ಣ್ಣಶಶಿಯಿಂ ಕಿರಣಂ ॥
ವರಸುಧೆಯಿಂ ಮಧುರತೆ ಬಂ ।
ಧುರಕುಸುಮದೆ ಕಂಪು ಬರ್ಪ ತೆಱದಿಂ ಬಂದಳ್ ॥ ೧೪

ಬಂದು ನಿಜತಪದ ಮೇನೆಯ ।
ನಂದೀಕ್ಷಿಸಿ ಶಾಂತರವಿನಿಕಾಯಮರೀಚೀ ॥
ವೃಂದನಿಭಕಮಳವಿಮಳಾ ।
ನಂದವಿಕಾಶಪ್ರಕಾಶನಿಧಿ ನಿಂದಿರ್ದಳ್ ॥ ೧೫

ಅಂತು ನಿಂದು

ಉತ್ಕಟದ ತಪೋನಿಷ್ಠೆಗೆ ।
ತತ್ಕರುಣಮನಾಂತು ನಿನ್ನ ಬಸಿಱೊಳ್ ಬರ್ಪೆಂ ॥
ಸತ್ಕುಲಜೆಯೆನುತೆ ಮೇನೆಯ ।
ಹೃತ್ಕಮಲದ ಬೆಳಗಿನೊಳಗೆ ಬೆಳಗಾಗಿರ್ದಳ್ ॥ ೧೬

ಇರೆ ಮೇನೆಯುಱಿದು ಹರ್ಷದ ।
ಶರನಿಧಿಯೊಳ್ ಪೊಕ್ಕು ಲೀಲೆ ಮಿಕ್ಕೋಲಾಡು ॥
ತ್ತಿರಲುತ್ತೀಸಾಡುತ್ತುಂ ।
ಪೊರೆಯೇಱಿತೆ ಜಪದ ವಿಪುಳೆ ತಪಮಂ ಬಿಟ್ಟಳ್ ॥ ೧೭

ನಡೆತಂದಳ್ ಗಿರಿರಾಜವಲ್ಲಭೆ ಭವಾನೀಪ್ರೇಮದಿಂ ಕಾಮದಿಂ ।
ಬಿಡದ ಧೃತ್ಕಲಶಪ್ರಬದ್ಧಲಲನಾಸಂತಾನದಿಂ ಗಾನದಿಂ ॥
ಕಹಳಪಿಂ ಪ್ರಣ್ಮವ ವಾದ್ಯವಿಪ್ರವದನಪ್ರೋನ್ಮಾದದಿಂ ವೇದದಿಂ ।
ಗುಡಿಗಟ್ಟುತ್ತಿ ದಿಗೋರ್ಳ್ವ ಪೌರಜನತಾಸಂತೋಷದಿಂ ಘೋಷದಿಂ ॥ ೧೮

ಬಂಧುಗರಾಜರಾಜಗೃಹಮಂ ಪೊಗುತುಂ ಪರಮಾಪ್ರದೀಪೆ ಸಾ ।
ನಂದೆ ಸರೋಜನೇತ್ರೆ ವರವಕ್ತ್ರ ಮನೋಹರೆ ಮಾನ್ಯೆ ಮೇನೆ ಸಾ ॥
ರ್ತಂದು ನಿಜೇಶನಂ ಪ್ರಿಯದೊಳಪ್ಪಿ ಮನೋರಥಸಿದ್ಧಿಯಾದುದಂ ।
ನಿಂದುಸಿರ್ದಂತರಂಗಬಹಿರಂಗಸುಖಾನ್ವಿತೆ ತಾಗುತೊಪ್ಪಿದಳ್ ॥ ೧೯

ಇಂತು ತನ್ನ ಬಸಿಱೊಳ್ ಭವಾನಿ ಬಸರ್ ವರವ ಪಡೆದು ಮೇನಾ
ದೇವಿ ನಾನಾಸುಖದೊಳೊಪ್ಪಿದಳ್

ಮುಂದಾಸ್ತ್ರೀರತ್ನಮನೊಲ ।
ವಿಂದಂ ಪಡೆದಪ್ಪೆನೆಂಬುದಂ ಸೂಚಿಸುವಂ ॥
ತೊಂದೆರಡು ದಿನದೊಳತ್ಯಾ ।
ನಂದದೆ ಕಡುಜಾಣೆ ಮಾಣಿಕಂಗಂಡಿರ್ದಳ್ ॥ ೨೦

ಆಸಮಯದೊಳ್

ಎಸೆವ ಬಟಿಲ್ಮೊಗಮುಷ್ಣಮು ।
ನುಸಿರ್ವರ್ಸಿರನುರಾಗವೇಱುವಕ್ಷಿದ್ವಿತಯಂ ॥
ಪೊಸಕಂಪನುಗುಳ್ವ ಕಕ್ಷಂ ।
ನಸುಕರ್ಗುವ ತನು ಮನೋಹರಂ ಮಾನಿನಿಯಾ ॥ ೨೧

ಸೆಡೆವ ನಡೆ ತೊಡೆಯ ತಡೆಗಾಲ್ ।
ನಡುವಿಂಗತಿಗಾಢದುಡಿಗೆ ಬಡತನು ಸೋಂಕಿ ॥
ಗೆಡೆಗುಡದ ಮನಂ ಮಾತಂ ।
ಮುಡುಗುವ ಪರಿ ಸೊಗಯಿಸಿತ್ತು ಪಂಕಜಮುಖಿಯೊಳ್ ॥ ೨೨

ಮಾನಿನಿಯೀತೆಱದಿಂ ಸಂ ।
ದಾನಾಲ್ಕುಂ ದಿನಸಮಿರ್ದು ಬೞಿಯಿಂ ಶುದ್ಧ ॥
ಸ್ನಾನಾಂಗೀಕೃತವಿಮಳ ।
ಶ್ರೀನಿಧಿ ಮೇನಾಲತಾಂಗಿ ಕಣ್ಗೆಸೆದಿರ್ದಳ್ ॥ ೨೩

ಬೆಳಗಿದ ಮಣಿಮುಕುರದವೊಲ್ ।
ಜಳದಂಗಳನಗಲ್ದ* ಚಂದ್ರಕಳೆವೊಲ್ ಪುಟವಿ ॥
ಟ್ಟಳವಟ್ಟ ಮಿಸುನಿವೊಲ್ ಮಂ ।
ಗಳನಿರ್ಮಳರುಚಿರರೂಪೆ ಕಣ್ಗೆಸೆದಿರ್ದಳ್ ॥ ೨೫

ಸುಲಿಪಲ್ ಬಿಂಬಾಧರಂ ರಾಜಿಸ ನಯನಯುಗಂ ಚಂಪಕಾನಾಸಿಕಂ ನಿ
ರ್ಮಲವಕ್ತ್ರಂ ಶ್ರೀಲಲಾಮಂ ಸುರುಚಿರವರವಕ್ಷೋಜಯುಕ್ತಾಂಗರಾಗ
ವಿಲಸತ್ಕಕ್ಷಾಂತದೊಳ್ ಪೂಸಿದ ಮೃಗಮದಮುದ್ಯದ್ದುಕೂಲಂ ಪ್ರಸೂನೋ
ಜ್ಜ್ವಲಧಮ್ಮಿಲ್ಲಂ ಸರಾಗಂ ಮೆಱೆಯೆ ನಿಜಪತಿಧ್ಯಾನದೊಳ್ ಮೇನೆಯಿರ್ದಳ್

ಇರೆ ಕುಸುಮಮಾಲೆಯಲ್ಲಿಗೆ ।
ವರಮಧುಕರನೆಯ್ದೆ ಬರ್ಪ ತೆಱದಿಂ ಬಂದಂ ॥
ಗಿರಿರಾಜಂ ಸ್ಮರರಾಗಾ ।
ತುರತರಭರಿತಾಂತರಾರ್ತಿ ಮೂರ್ತಿ ವಿಳಾಸಂ ॥ ೨೬

ಅಂತು ಬಂದು ಸಜ್ಜನಸ್ನೇಹದಿಂ ಸಜ್ಜಿವನೆಯುಂ ಪೊಕ್ಕು ಹಂಸತೂಳ
ತಳ್ಪದ ಮೇಲೆ ಮೇನೆಯುಂ ತಾನುಂ ಕುಳ್ಳಿರ್ದು ಬಳ್ಳಿವರಿವ ನೇಹಂ ಕ
ಡಿವರಿದು ಸಿಮಿರೆ ಸುಖದ ಸೋಂಕು ವಿಕಾಸಮನೆಯ್ದೆ ಸಹಜಾಮೋದ
ಸೊಗಸಸೇಯೆ ನೀಡಾಗದೆ ಗಾಢಾಲಿಂಗನಕ್ಕೆ ಅತುರಿಸುವಲ್ಲಿ

ಲವಲವಿಸುವ ನೋಟಂ ಕೆ ।
ತ್ತುವ ತೋಳ್ ಕಂಪಿಸುವ ಹಸ್ತಮೊಗೆವ ಬೆಮರ್ ಪ್ರೇ ॥
ಣ್ಮುವ ಪುಳಕಮುಣ್ಮುವಶ್ರುಗ ।
ಳವತರಿಸುವ ಗದ್ಗದಂ ಮನೋಹರಮಾಗಲ್ ॥ ೨೭

ಬರೆತೆಗೆದಪ್ಪಿ ಸುಪ್ಪಿ ಮುದದಿಂ ಮೊಗದೊಳ್ ಮೊಗಮಿಕ್ಕಿಯಿಕ್ಕಿ ಸು
ಯ್ಯೆರಲೆಡೆಯಾಡೆ ಜಿಹ್ವೆ ನಲಿದಾಡೆ ಸುಖಂ ಸುಗಿದಾಡೆ ಲೀಲೆ ಮೋ ॥
ಹರಿಸೆ ಗಳಂ ಚಮತ್ಕರಿಸೆ ಗದ್ಗದಮಾಂತಿರೆ ಕಂಪನಂ ಕೊನ ।
ರ್ತಿರೆ ಪುಳಕಂಗಳೆಱ್ಱಿರೆ ಪರಸ್ಪರಮಾರ್ತದೊಳೊಲ್ದು ಕೂಡಿದರ್ ॥ ೨೮

ಪ್ರಿಯದಿಂದೆ ಮನಂ ಮನದೊಳ್ ।
ನಯನಂ ನಯನಂಗಳೊಳ್ ಮುಖಂ ಮುಖದೊಳಗಾ ॥

ಸುಯಿ ಸುಯ್ಯೊಳ್ ಕೆಯ್ ಕೆಯ್ಯೊಳ್ ।
ಮೆಯಿ ಮೆಯ್ಯೊಳ್ ಬೆರೆವು ಬೆರಸಿದರ್ ದಂಪತಿಗಳ್ ॥ ೨೯

ಅರಲುತಿರೆ ನನೆನನೆಕೊನೆಯುದಂ ।
ಪೊರೆಯೇಱುತ್ತಿರೆ ತನುಪ್ರಭಾಕಾಮುದಿ ಕಾ ॥
ಮರಸಾಬ್ಧಿ ಮಿಕ್ಕುಮಿಱು ।
ತ್ತಿರೆ ನೆರೆದರ್ ಭರದೆ ಸುರತಚಂದ್ರೋದಯದೊಳ್ ॥ ೩೦

ಸುರತಸುಖಂ ತವಿಲಱಿಯದೆ ।
ಭರದಿಂದಮರ್*ಪ್ಪಿದಪ್ಪು ಸಡಿಲದೆ ತಮ್ಮೊಳ್ ।
ಬೆರಸಿದ ಸುಯ್ ಬಿರ್ದದೆ ಬೇ ।
ವರಿದ ಮನಂ ಬೇಱೆ ಪರಿಯದಿರೆ ನೆರೆದಿರ್ದರ್ ॥ ೩೧

ಇಂತು ಸಮಾನಾನುರಾಗಭೋಗಭರಿತಪರಮಸುಖದಿಂ ಸಂತುಷ್ಟಪುಷ್ಟಹೃದಯರಾಗಿ

ತಿಳಿದು ಸುರತಾಂತದೊಳ್ ಕ ।
ಣ್ಗೊಳಿಸುವ ಗಿರಿಪತಿಯುಮೆಸೆವ ಮೇನಾಸತಿಯುಂ ॥
ಕಳೆಗೂಡಿದಿಂದು ಬಿಳ್ದಂ ।
ಗಳನಾಂತ ಚಕೋರಿಯೆಂಬಿನಂ ಮೆಱೆದಿರ್ದರ್ ॥ ೩೨

ಆಸಮಯದೊಳ್

ಪದೆಪಿಂ ಮೇನೆಯ ಹೃತ್ಕಮ ।
ಲದ ಬೆಳಗಿಱಿತಂದು ಮಿಕ್ಕ ಶಕ್ತಿಸುಖದ ಸಂ ॥
ಗದೊಳೊಂದಿ ಬೆಳೆಯುತಿರ್ದುದು ।
ಸದಮಳರೂಪಿಂ ಭವಾನಿಯ ಜ್ವಳತ್ತೇಜಂ ॥ ೩೩

ತೊಳಪ ಸರೋಜಗರ್ಭದೊಳಗೊಪ್ಪುವ ಬಾಲಮರಾಳಪಿಂಡವಂ ।
ತಳವಡೆ ಶಾರದಾಭ್ರದೊಳಗಿರ್ಪ ಲಸಚ್ಛಶಿರೇಖೆಯಂತೆಯು ॥
ಜ್ಜ್ವಳಿಸುವ ಬೀಜದೊಳ್ ಪೊಳೆವ ಪುಣ್ಯಸುಧಾಲತೆಯಂತೆ ನಾಡೆ ಕಂ ।
ಗೊಳಿಸಿತು †ಪ್ರಣ್ಯಗರ್ಭಮತಿಶೈವಸುಖೋದಯದಲ್ಲಿ ಮೇನೆಯಾ ॥ ೩೪

ಇಂತೊಪ್ಪುತ್ತುಮಿರ್ದು

---

† ಗರ್ಭಮೂರ್ಜಿತವಿಶಾಲಸುಖೋದರದಲ್ಲಿ. ಎಂದು ಪಾಠಾಂತರ.

ಒಂದೆರಡು ಮೂಱು ನಾಲ್ಕೈ |
ದೆಂದಾಱೇೞೆಂಬ ಮಾಸಮಾಗಿರೆ ಗರ್ಭಂ ||
ಚೆಂದಂಬಡೆದೊಳಗೆಸೆದಾ |
ನಂದಗೆ ಬಳೆಯುತ್ತಗಣ್ಯಪುಣ್ಯೋದರದೊಳ್ || ೩೫

ಅಱಿವಿನ ಕಣಿ ಮುಕ್ತಿಯ ಮಣಿ |
ಹೆಱೆಸೂಡಿದನಜ್ಜಸೊಗದ ಮೊಳೆ ಬೆಳೆಯುತ್ತುಂ ||
ತೆಱಪುಗೊಳುತ್ತುಂ ಮೋನೆಯು |
ಹೊಱಗೋರ್ದುದು ಗರ್ಭಸೂಚನಾಸೌಂದರ್ಯಂ || ೩೬

ಅದೆಂತೆಂದೊಡೆ—

ತ್ರಿವಳಿಯುಪಿನದ್ಧಮಾದುವು |
ನವನಾಭಿ ನಿವಾರಿಸಿತ್ತು ಗುಣ್ಪಂ ಕುಚವಾಂ ||
ತುವು ತುದಿಗಪ್ಪಂ ನೋಟಂ |
ತವೆ ತಳೆದುವು ನಸುಬಱಿಲ್ಕೆಯಂ ಮೇನಕೆಯಾ || ೩೭

ನಡೆ ನಾಡೆ ಮಾಂದ್ಯದೊಳ್ ಪುಗೆ |
ಮುಡಿ ಮೂಡೆ ಕವಲ್ತು ಕದಪು ಕಾಂತಿಯನುಗೆ ಮೆ ||
ಲ್ನುಡಿ ನೀಡೆ ಮೃದುಮಧುರಮುಂ |
ನಡು ನೀಡುಂ ಪೊಂಗೆ ಮೋಸೆಗೆಸೆದುದು ಗರ್ಭಂ || ೩೮

ಮಿಗೆ ಬಾಸೆ ಬಣ್ಣವೇಱಿತು |
ಸೊಗಯಿಸಿದುದು ಮೊಗರಸಂ ತುಱುಂಕಾಡುತೆ ಮೆ ||
ಲ್ನಗೆ ಸೂಸಿತ್ತು ಬಱಿಲ್ಕೆಯು |
ನೊಗೆದುವು ನವನವಮನೋರಥಂ ಮೇನಕೆಯಾ || ೩೯

ಇಂತು ತ್ರಿವಿಧ ಗರ್ಭದಿಂ ಭಾವಭರಿತಪರಮಹರ್ಷಂ ನೆಲೆಗೊಂಡು ನಾನಾಸುಖದೊಳಿರ್ಪ ಮೇನಾದೇವಿಯಿರವನಂತಃಪುರದೊಳ್ ಕಳಾಪಶ್ರೇಯರಪ್ಪ ವಿಳಾಸಿನಿಯರ್ ಗಿರಿರಾಜಂಗೆ ತೋಱುತ್ತುಮಿರ್ದರ್. ಅದೆಂತೆಂದೊಡೆ—

ಮುಡಿಯ ಭರಕ್ಕುರೋಜದ ಭರಕ್ಕೆ ನಿತಂಬಭರಕ್ಕೆ ನಾಡೆ ಮೆ |
ಲ್ಲಡಿಯಿಡಲೆತ್ತಲಾಱದಿವೆ ಮತ್ತಮದಲ್ಲದೆ ಪುಣ್ಯಗರ್ಭದಿಂ ||

ಕಡುಪಿರಿದಾವ ಭಾರದೊಳೆದೆಂತಡಿಯಿಟ್ಟಪಳೆಂತು ನಿಂದಪಳ್ ।
ನುಡಿದಪಳೆಂತು ನೋಡುವಳದೆಂತು ಗಿರೀಶ್ವರ ನೋಡು ಮೇನೆಯಂ ॥

ಎಂದು ಚಿನ್ನವಿಸುತ್ತಿರೆ ಕೆಲವ್ರಂ ದಿನದೊಳ್
ಆದುದು ನವಮಾಸಂ ಪು ।
ಣ್ಯೋದರದೊಳ್ ಪಕ್ವಸಮುಝುಮಲರ್ದುದು ಸುಪಥಂ ॥
ವೇದಿಸಿದುದು ಸುಮುಹೂರ್ತಂ ।
ಕಾದಿರ್ದವು ಭರದೊಳೆವಗೆ ತಮಗೆನುತಾಗಳ್ ॥ ೪೧

ಆಸಮಯದೊಳ್

ಅಲರ್ದ ಸರೋಜದಿಂದವೊಗೆತಪ್ಪ ಲಸತ್ಕಳಹಂಸಿಯಂತೆ ನಿ ।
ರ್ಮಲತರಮೇರುವಿಂದೆ ಪೊಱಪೊಣ್ಮುವ ತನ್ಮಣಿಮಾಲೆಯಂತೆ ನಿ ॥
ಶ್ಚಲಪುರುಹೂತದಿಙ್ಮುಖದಿನೇಱುತಿರ್ಪ ಮೃಗಾಂಕಬಿಂಬದಂ ।
ತಳವಡೆ ಗೌರಿ ಗರ್ಭದೊಳಗಿಂ ಬರುತೊಪ್ಪಿದಳಂದು ಮೇನೆಯಾ ॥ ೪೨

ಇಂದಿರೆ ಬಂದಿರೆ ಕೆಲದೊಳ್ ।
ನಿಂದಿರೆಯನಸೂಯೆ ಸಪ್ತಮಾತೃಕೆಯರ್ ತಾ ॥
ವೊಂದಿರೆ ರೋಹಿಣಿ ತಣ್ಪಂ ।
ತಂದಿರೆ ಗಿರಿಜಾತೆಯೋತು ಪೊಱಮಡುತಿರ್ದಳ್ ॥ ೪೩

ತೆರೆಮಸಗೆ ಕಾಂತಿ ನಾಭೀ ।
ಸರೋಜಮಲ್ಲಾಡೆ ಜೀವಹಂಸಿ ಬೆಸಱೆ ಬಂ ॥
ಧುರಕುಚಚಕ್ರಂ ನಡುಗು ।
ತ್ತಿರೆ ಮೇನೆಯ ಗರ್ಭಸರಸಿಯಂ ಪೊಱಮಟ್ಟಳ್ ॥ ೪೪

ರತಿ ನೆಲನುಗ್ಗಡಿಸೆಯುರುಂ ।
ಧೃತಿ ಕೆಯ್ಗುಡೆ ಸುಖಮನೆಯ್ದೆ ಸಾವಿತ್ರಿ ಸರ ॥
ಸ್ವತಿ ಪೊಗೞೆ ಶಚಿ ನಲಿಯೆ ಪಾ ।
ರ್ವತಿ ಮೇನೆಯ ಗರ್ಭಸಿಳೆಯನುಱ್ಪಿ ಪೊಱಮಟ್ಟಳ್ ॥ ೪೫

ಇಳೆಯೊಳ್ ಪಾರ್ವತಿ ಜನಿಯಿಸೆ ।
ಕಳೆಯೇ ವಸಿಂತು ಜೊನ್ನಮಲರ್ದುದು ಕಾಮಂ ॥

ತಳೆದಂ ನಿಜಭುಜಬಲಮಂ ।
ಪುಳಕಿತನಾಯ್ತಿಂದುಧರನ ವರವಾಮಾಂಗಂ ॥ ೪೬

ಮದನನ ಕರ್ಪುರವಿಲ್ಲ ಮದವೇಱೆ ವಸಂತನ ಸರ್ವಭಾಗ್ಯಸಂ ।
ಪದ ದಳವೇಱೆ ಲೋಕನಯನೋತ್ಪಳರಾಜಿ ವಿಕಾಸವೇಱೆ ಪೆ ॥
ರ್ಚಿದವಿದ ಮೇನೆ ತತ್ಪತಿಗಳುತ್ಸವವಾರಿಧಿ ಮೀಱೆ ಗೌರಿ ತಾ ।
ನುದಯಿಸಿದಳ್ ಸುಧಾಂಶುಕಳೆ ಪಶ್ಚಿಮಭಾಗದೆ ಪುಟ್ಟಿದಂದದಿಂ ॥ ೪೭

ಜಡೆ ಮುಡಿಯಿಂದು ಬಾಹುಬಳೆ ಭಾಳವಿಲೋಚನಮಕ್ಷಮಾಲೆಯೊ ।
ಳ್ಪುಡೆ ನನಕಾಂತಿ ಹಸ್ತಕಟಕಂ ಮೆಱೆಯುತ್ತಿರೆ ಪುಣ್ಯದಂತೆ ಕಂ ॥
ಪಿಡಿದ ಸುರದ್ರುಮಪ್ರಸನದಂತೆ ಪರಾಪರಮುಕ್ತಿಯಂತೆ ಸಾ ।
ಗಡಿಸಿದ ಕಾಮಧೇನುವಿನ ಸ್ರೋಲ್ ಗಿರಿರಾಜತನೂಜೆಯೊಪ್ಪಿದಳ್ ॥ ೪೮

ಇಂತೊಪ್ಪುತ್ತಿರ್ದು
ಶಿವಲಿಂಗೇಕ್ಷಣಲೋಲೆ ।
ಶಿವಪ್ರಸಾದಾತ್ತಚಿತ್ತೆ ಶಿವಶಕ್ತಿ ಶಿವೋ ॥
ತ್ಸವೆ ಶಿವಪುಣ್ಯಾಂಭೋನಿಧಿ ।
ಶಿವನಂ ನೆರೆ ನಚ್ಚಿ ಮಚ್ಚಿ ಕಣ್ಮುಚ್ಚಿರ್ದಳ್ ॥ ೪೯

ಇರೆ ಮೇನಾಮಾನಿನಿಯುಂ ।
ಗಿರಿರಾಜನುಮಱಿಯದಂಜಿ ಗುರುಶೈವಾಚಾ ॥
ರ್ಯರ ಕರೆದು ಕೇಳೆ ಶಿವಶಿವ ।
ಪರಮಶಿವಜ್ಞಾನದಿಂದಮವರಿಂತೆಂದರ್ ॥ ೫೦

ಅನುನಯದಿಂದೆ ಮುನ್ನಮವನೀತಳದೊಳ್ ಮಿಗೆ ಬಾಣನೆಂಬವಂ ।
ಜನಿಯಿಸಿ ಕಣ್ಗಳಂ ತೆಱೆಯದಿರ್ದೊಡೆ ಲಿಂಗಮನಂದು ತೋಱೆ ಭೋಂ ॥
ಕನೆ ನಯನಂಗಳಂ ತೆಱೆದು ಕಂಡೊಲವಿಂ ಮೊಲೆಯುಂಡನಂತೆ ಸ ।
ಜ್ಜನೆ ಗಿರಿಜಾತೆ ಕಣ್ದೆಱೆಯದಿರ್ಪುದು ತಪ್ಪದಿಮುತ್ತರೋತ್ತರಂ ॥ ೫೧

ಎನೆ ಗಿರಿರಾಜಂ ದೇವಾ ।
ರ್ಚನಾನಿಕೇತನಕೆ ಬಂದು ಶಶಿರವಿಶಿಖಿಲೋ ॥
ಚನಶಿವಲಿಂಗಮನುತ್ಸವ ।
ಜನಿತಮನಂ ತಂದು ಮುಂದೆ ನಿಂದೊಲವಿಂದಂ ॥ ೫೨

ಅಮಮ! ಪಯೋವಾರ್ಧಿಗೆ ಚಂ।
ದ್ರಮನಂ ಪುಣ್ಯಕ್ಕೆ ಮುಕ್ತಿಯಂ ತೋರ್ಪಂತಾ॥
ವಿಮಳೆಗೆ ಗಿರಿಜೆಗೆ ಶಿವಲಿಂ।
ಗಮನಧಿಕಮನಃಪ್ರಮೋದದಿಂ ತೆಱೆಯುವುದುಂ॥ ೫೩

ತೋಱಲೊಡಂ ಕಣ್ದೆಱೆದಳ್।
ಪೇಱುವಿವಳೆರಡುಂ ಕರಂಗಳಂ ನೊಸಲೊಳ್ ಸೊಂ॥
ಪೆಱುವಿವಳಭವನೊಳಗೆ ಬೇ।
ರೂಱುವಿದಳಂಕುರಿಸಿ ಪಲ್ಲವಿಸಿ ಫಲವಾದಳ್॥ ೫೪

ಆಕೆಯ್ಯೊಳ್ ಮೊಲೆಯುಂಡಳ್।
ಸಾಕಾರಶಿವಪ್ರಸಾದನವನೀತಮುಮಂ॥
ಕೈಕೊಂಡಳ್ ಗಿರಿಜಾವಧು।
ಲೋಕೈಕಾರಾಧ್ಯೆ ಮೇನೆಯೆಡೆನೊಪ್ಪಿರ್ದಳ್॥ ೫೫

ಆಸಮಯದೊಳ್

ಮೂಡಿದ ಶೀತದೀಧಿತಿಗೆ ಕಾಲಪಿತಂ ಪ್ರಸವೋತ್ಸವಂಗಳಂ।
ಮಾಡುವ ಮಾೞ್ಕೆಯಿಂದೆ ಸುರಭೂರುಹಮಂ ನೆಗೆದಂಕುರಕ್ಕೆ ಕೊಂ॥
ಡಾಡಿ ವಸಂತಕಂ ಜನನಕರ್ಮವನೊಪ್ಪಿರೆ ಮಾಡುವಂದದಿಂ॥
ಮಾಡಿದನಕ್ಕಱಿಂದೆ ಗಿರಿರಾಜನ ಜಾತೆಗೆ ಜಾತಕರ್ಮಮಂ॥ ೫೬

ಅಂತು ಮಾಡೆ

ಬೆಳಗುವ ನಯನದ್ಯುತಿಯಿಂ।
ಬೆಳಗುವ ಗಂಡಸ್ಥಳಂಗಳಿಂ ಬೆಳಗುವ ಕೋಂ॥
ಮಳತನುರುಚಿಯಿಂದಂ ತೊಳ।
ತೊಳಗುತೆ ನಳನಳಿಸಿ ಪೊಳೆಯುತಂಬಿಕೆಯೆಸೆದಳ್॥ ೫೭

ಮಂಗಳಮುಖಿ ಮಾನಿನಿ ಶಿವ।
ಲಿಂಗದ ಸುಖಲತೆ ಸಮಸ್ತಲಕ್ಷಣಯುತೆ ತಾ॥
ನಂಗೆಯ್ಯ ಪದ್ಮದಿಂ ಚರ।
ಣಂಗಳ ಪದ್ಮಂಗಳಿಂದೆ ಗಿರಿಸುತೆಯೆಸೆದಳ್॥ ೫೮

ಆಸಮಯದೊಳ್

ಜಯ ಜಯ ಜಯತು ! ಶುಭೋದಯೆ ।
ಜಯತು ! ಮಹಾಮಾಯೆ ಜಯತು ಶರ್ವಾಣಿ ಶಿವ ॥
ಪ್ರಿಯೆ ಶಾಶ್ವತೆ ಶಾಂತೆ ಜಗ ।
ತ್ರಯಹಿತೆ ಶರಣೆನುತುಮಿರ್ದುದಬಳಾನೀಕಂ ॥ ೫೯

ಎಂಬ ಪುಣ್ಯಕೀರ್ತಿಯಂ ತಳೆದಿರ್ಪ ಸಮಯದೊಳ್ ಸಕಳವಾದ್ಯಂಗಳ ಮಂಗಳಧ್ವನಿಗಳುಂ, ಪಿಂಗದೆ ಸುರಿವ ಸುರಕುಜದ ಸುಮನೋವೃಷ್ಟಿಯುಂ ಪುಟ್ಟಿದುದದೆಂತೆಂದೊಡೆ–

ವರಕಂಬುರವಂ ಕಹಳೆಗ ।
ಳ ರವಂ ಡಿಂಡಿಮುರವಂಗಳಾನಕದ ರವಂ ॥
ಕರಡೆಗಳ ರವಂ ನಿಸ್ಸಾ ।
ಳರವಂ ಭೇರೀರವಂ ಮೃದಂಗರವಂಗಳ್ ॥ ೬೦

ಎಳನನೆಗಳ ಮೆಲ್ಸರಿ ನನೆ ।
ಗಳ ಬಲ್ಸರಿ ಮುಗುಳ ತಂದಲಾವೊಗ್ಗಿಯ ಪೆ ॥
ಮುರ್ಚಿಮುಲಗರ್*ಗಳ ಬಿಜುನಟೆಯೆಸ ।
*ಟ್ಟಿಳ ಸೋನೆ ಪರಾಗಪರಿಮಳದ ತುಂತುರುಗಳ್ ॥ ೬೧

ಅಂತು ಪುಟ್ಟಿದ ವಾದ್ಯಧ್ವನಿಗಳುಮಂ ಪೂಮಳೆಗಳುಮಂ ಗಿರಿರಾಜಂ ಕಂಡು ಮನಂಗೊಂಡು

ಅಳಿಗತಿಶೀತಳಂ ಮಿಗೆ ಗಿರೀಶ್ವರನುತ್ಸವದಿಂದೆ ತುಪ್ಪದೋ ।
ಕುಳಿ ನವದುಗ್ಧದೋಕುಳಿ ಹಿಮದ್ರವದೋಕುಳಿ ಜೇನ ತುಪ್ಪದೋ ॥
ಕುಳಿ ದಧಿಯೋಕುಳಿ ಪ್ರಸನದೋಕುಳಿ ಕತ್ತುರಿಚಂದನಂಗಳೋ ।
ಕುಳಿ ಪನಿನೀರ್ಗಳೋಕುಳಿಯನಾಡಿದನುಬ್ಬಿದನೊಕ್ಕಲಿಕ್ಕಿದಂ ॥ ೬೨

ಅಂತೋಕುಳಿಯನಾಡಿ ನವೀನಶೃಂಗಾರಮಂ ಮಾಡಿ

ಆದರದಿಂ ಗೋದಾನಂ ।
ಸ್ತ್ರೀದಾನಂ ವಸ್ತ್ರದಾನಮಿಭಕುಲದಾನಂ ॥
ಭೂದಾನಂ ಧನದಾನಂ ।
ಶ್ರೀದಾನಂಗುಡುತುಮೊಪ್ಪಿದಂ ಗಿರಿರಾಜಂ ॥ ೬೩

ಗುಡಿಗಟ್ಟಿತು ನೆಱೆ ಪುರದೊಳ್ ।
ಮಡುಗಟ್ಟಿತ್ತಚಲನಾಥಸಂತೋಷರಸಂ ॥
ಕಿಡಿಯಿಟ್ಟುದು [1]ಧೀಂಕಿಟ್ಟಿ ।
ತ್ತಡಿಯಿಟ್ಟಿತ್ತಾಹ[1]! ಕೀರ್ತಿಲತೆ ಧಾರಿಣಿಯೊಳ್ ॥ ೬೪

ಎಂಬ ಪುಣ್ಯ[2]ಪರತೆಗೆ[2] ತಾವೆ ಭಾಜನರಾಗಿ ಗಿರಿರಾಜನುಂ ಮೇನಾದೇವಿಯುಂ ಪರಿಜನಮುಂ ಪುರಜನಮುಂ ಧರಾವಳಯಮುಂ ಪರಮಸುಖದಿಂದಿರ್ಪಲ್ಲಿ–

ತೊಲಗದ ಪುಣ್ಯವಾರಿಧಿಗಗಣ್ಯಮರೀಚಿಗೆ ಲೀಲೆಯಿಂದೆ ಬಂ ।
ದಿಳೆಯೊಳೆ ಪುಟ್ಟಿದಪ್ರತಿಮೆಗಾನತಲೋಕೆಗೆ ಶರ್ವನಾಮೆಗು ॥
ಜ್ಜ್ವಳಿಪ ನಿಜಕ್ಕೆ ನಾಮಕರಣಂ ಗಿರಿಜಾತೆಯೆನಿಪ್ಪುದಾಗೆ ತೊ ।
ಟ್ಟಿಲೊಳಿಡುತಿರ್ದರೊಪ್ಪವ ಸುವಾಸಿನಿಯರ್ ಮನದುತ್ಸವಂಗಳಿಂ ॥ ೬೪

ದಿಟದಿಂ ಜಗಕ್ಕೆ ತನ್ನಂ ।
ಗುಟಮೇ ತಾಯ್ತೊಟ್ಟಿಲಾದ ಗಿರಿಸುತೆಯನತಿ ॥
ಸ್ಫುಟಮಣಿಗಣಪ್ರಭಾಸಂ ।
ಪುಟಮೆನಿಸುವ ರನ್ನದೊಟ್ಟಿಲೊಳ್ ಗಿರಿಸುತ್ತುಂ ॥ ೬೬

ರಾಗಂ ಮಿಗೆ ಸಪ್ತರ್ಷಿ ।
ಸ್ತ್ರೀಗಣಮೊಲವಿಂದೆ ಲಳಿತೆ ಬಂಗಾಳಂ ಶ್ರೀ ॥
ರಾಗಂಗಳೊಗೆಯೆ ಪಾಡುತೆ ।
ತೂಗಿದರಖಿಳಪ್ರಪಂಚಮಾಡಿಪ ಶಿಶುವಂ ॥ ೬೭

ಜೋ ಸಕಳತತ್ವಮಯೆ ಜೋ ।
ಜೋ ಸತ್ವಾದಿಗುಣರಹಿತೆ ಜೋ ನಿರ್ಮಳೆ ಜೋ ॥
ಜೋ ಸದ್ಗುಣೆ ಜೋ ಶಾಶ್ವತೆ ।
ಜೋ ಸಂಪದೆ ಜೋ ವಿಶಾಲೆ ಜೋ ಶಿವೆ ಜೋಜೋ ॥ ೬೮

ಜೋಜೋ ಶಂಕರನರ್ಧಮಂ ಕನ*ದರ್ಕಕೋಟ್ಯತ್ಯಂತರೂಪಾನ್ವಿತೇ ।
ಜೋಜೋ ಸರ್ವಜಗಚ್ಛಿಶುಪ್ರಕರಮಂ ರಕ್ಷಿಪ್ಪ ಮಾತಾಮಹೇ ॥

1. ಧೀಂಕಿಟ್ಟುದು ನಡಿಗೆಟ್ಟುದು ಪುಣ್ಯ. 2. ಯಶಸ್ಸಂಗೆ.

ಜೋಜೋ ಶೈವಸಮುದ್ರವರ್ಧನಕರಪ್ರಖ್ಯಾತಚಂದ್ರಾನನೇ ।
ಜೋಜೋ ರಕ್ಷಿಸೆನುತ್ತೆ ತೂಗಿ ನಲಿದರ್ ಶರ್ವಾಣಿಯಂ ಜಾಣೆಯರ್ ॥ ೬೯

ಅಂತು ತೂಗುವರ ಜೋಗುಳದ ರಾಗದೊಳಂ, ಮೊಲೆಯೂಡುವ ಮೇನೆಯ ಮುಗ್ಗುಲೆಯೊಳಂ, ಸಾಗಿಸುವ ಸಾವಿತ್ರಿಯ ಸೋಗಿಲೊಳಂ, ಎತ್ತುವ ಅನಸೂಯೆಯ ಹಸ್ತದೊಳಂ, ಅಪ್ಪುವರುಂಧತಿಯುರದೊಳಂ, ನೆಗಪ್ಪುವ ಗಾಯತ್ರಿಯ ಸೊಗಸಿನೊಳಂ, ಮುಟ್ಟುವ ರೋಹಿಣಿಯ ತಣ್ಪಿನೊಳಂ, ಸೋಂಕುವ ಕಮಳೆಯ ಸಂಪದದೊಳಂ, ಮುದ್ದಾಡಿಸುವ ಸರಸ್ವತಿಯ ಮಧುರವಾಣಿಯೊಳಂ, ನೋಡುವ ಶಚಿಯ ಸಂತೋಷದೊಳಂ, ಪರಸುವ ಸಪ್ತಮಾತೃಕೆಯರ ಪರಕೆಯೊಳಂ, ಮಿಕ್ಕ ನಳಿನಚಳಪತಿಯುಟ್ಕಿರೊಳಂ, ಸಾಮರ್ಥ್ಯದ ಬಿತ್ತಿನಂತೆ ಸೌಂದರ್ಯದಂಕುರದಂತೆ ಸೌಕುಮಾರ್ಯದ ಪಲ್ಲವದಂತೆ ಸಾಹಿತ್ಯದ ಕುಸುಮದಂತೆ ಸತ್ಯದ ಫಲದಂತೆ ಭೂಮಿಯ ಬಿಣ್ಪಿನಂತೆ ಸಲಿಲದ ತಣ್ಪಿನಂತೆ ಗಗನದ ಪೆಂಪಿನಂತೆ ಪಯೋನಿಧಿಯ ಗುಣ್ಪಿನಂತೆ ಪವಮಾನನುಸಿರಂತೆ ಪಾವಕನ ತೇಜದಂತೆ ಚಂದ್ರನ ಬಲದಂತೆ ದಿನಸೇಂದ್ರನ ಕಿರಣದಂತೆ ಪರಮಾತ್ಮನ ಪರಿಣಾಮದಂತೆ ಲೋಕದಾಲೋಕದಂತೆ ಸಲ್ಲಕ್ಷಣದ ಲಾವಣ್ಯದಂತೆ ಬೆಳ್ದಿಂಗಳ ಬಣ್ಣದಂತೆ ವಸಂತನ ವಶ್ಯದಂತೆ ಮಲಯಾನಿಲನ ಮಹಿಮೆಯಂತೆ ಮಕರಧ್ವಜನ ಮದದಂತೆ ಕುಸುಮಬಾಣದ ಕುಶಲದಂತೆ ಪುಣ್ಯದ ಜೀವದಂತೆ ಶಿವಜ್ಞಾನದ ದೇಹದಂತೆ ಸಾಲೋಕ್ಯದ ಸವಿಯಂತೆ ಸಾಮೀಪ್ಯದ ಸೀಮೆಯಂತೆ ಸಾರೂಪ್ಯದ ಸುಧೆಯಂತೆ ಸಾಯುಜ್ಯದ ನಿಲವಿನಂತೆ ಶಿವನ ಸುಖದಂತೆ ಮುಕ್ತಿಯ ಮುಖದಂತೆ ಕಾಂತಿಯ ಲತೆಯಂತೆ ನಿರುಪಾಧಿಕಜ್ಯೋತಿಯಂತೆ ಸಕಲಜಗನ್ಮಾತೆಯಪ್ಪ ಗಿರಿಜಾತೆ ಶೈಶವಲೀಲೆಯನೊಳಕೊಂಡು ತೊಳತೊಳಗಿ ಬೆಳಬೆಳಗಿ ನಳನಳಸಿ ಬಳೆಯುತ್ತಿರ್ದಳ್. ಅಂತುಮಲ್ಲದೆಯುಂ,

ಸರಸಿಜಕುಟ್ಮಳಮುರಲ್ಪಂ ।
ತಿರೆ ಕರುಣಾನಿಳಯಮೃದುಕವಾಟಂದೆಗೆವಂ ॥
ತಿರೆ ನಗೆಮೊಗಮುಂ ಸವಿಮಂ ।
ತಿರೆ ಗಿರಿಸುತೆ ಕಲ್ತಳಮಂದ್ರನಗೆಯುಂ ನಗೆಯುಂ ॥ ೭೦

ಘನರಜತಗಿರಿಯ ಸಿಂಹಾ ।
ಸನದೊಳ್ ನಲಿದಿರ್ಪ ಪರಿಯನಭವನ ತೊಡೆಯೊಳ್ ॥
ಮನದೊಲವಿಂ ಕುಳ್ಳಿರ್ದ ।
ನನುಕರಿಸುವ ತೆಱದೊಳಗಜೆ ಕುಳ್ಳಿರೆ ಕಲ್ತಳ್ ॥ ೨೧
ತ್ರ್ಯಂಬಕನಂ ಬಲವರಲೆರ ।
ಡೆಂಬೀಪದವೆಯ್ದುವೆಂದು ನಾಲ್ಕುಂ ಕಾಲಿಂ ॥
ದಂ ಬಲವಂದಪಳೆಂಬಂ ।
ತಂಬಿಕೆಯಂಬೆಳಕಿಯಾಡುವಳ್ ಶೈಶವದೊಳ್ ॥ ೨೨
ಬೇರ್ಪಡದೆ ಕೂಡೆ ಶಾನೆಯ ।
ಡರ್ಪಖಿಳಕ್ಕೆಂಬ ನೈಜನಂ ಮೆಱೆಯಿಸುತಂ ॥
ದಾರ್ಪಿಂ ಭಿತ್ತಿಗಳಂ ನೆ ।
ಮ್ಮಿರ್ಪಳ್ ನಿಂದಗಜೆ ಬಾಲ್ಯಮಂ ನಟಿಯಿಸುತುಂ ॥ ೨೩
ಅಡಿಗಳ ಕೋಮಲತೆಗೆ ಧರೆ ।
ಬಿಡಲಾಱದೆ ಪೊಡೆಮಡುತ್ತೆ ಬಿಡದಿರೆ ನಯದಿಂ ॥
ಬಿಡಿಸಿಕೊಳುತ್ತುಂ ಮೆಲ್ಲನೆ ।
ನಡೆದಪಳೆನೆ ಮೆಱೆದುದಗಜೆಯೊಳ್ ದಟ್ಟಡಿಗಳ್ ॥ ೨೪
ಒಡನೆಯ ಸತಿಸುರ್ ನೆಲನು ।
ಗ್ಗಡಿಸೆ ಧರಾಕಾಂತೆ ಮೆಲ್ಲಡಿಗೆ ಮೃದುವಾಗು ॥
ತ್ತೆಡೆಗುಡುತುಂ ಪುಳಕಿಸುತಿರೆ ।
ನಡೆಗಲ್ತಳ್ ಗಿರಿಜೆ ಪರಮನರಮನೆಯುತ್ತಲ್ ॥ ೨೫
ರಸನೆಯ ಸುಧೆಯಂ ಮಿಗೆ ಸವಿ ।
ದು ಸವಿದು ಮುಗ್ಧತೆಯನೈದಿ ಮಧುರಾಕ್ಷರಮು ॥
ಬ್ಬಸದಿಂ ಪೊರಳುತ್ತಿರುಳು ।
ತ್ತೊಸರ್*ಪುದೆನೆ ಗಿರಿಜೆಯೊಳ್ತೊದಳ್ನುಡಿಯೆಸೆಗುಂ ॥ ೨೬
ಮನದೊಳಗೆ ಪುಟ್ಟಿ ಕಂಠದೊ ।
ಳನುನಯದಿಂ ಬಳೆದು ಜಿಹ್ವೆಯೊಳ್ ದಟ್ಟಡಿಯಿ ॥

ಟ್ಟಿನಸುಂ ಸುಱಿಗೊಳುತುಂ ಗಿರಿ ।
ತನಯುಳ ಮುಖದೊಳ್ ತೊದಳ್ನುಡಿಗಳೆಸೆದಿರ್ಕುಂ ॥ ೭೭
ಅಂತುಮಲ್ಲಬೆಯುಂ
ಮಂಗಳಮುಖಿಯರ್ ಸಖಿಯರ್ ।
ಸಂಗಡದಿಂ ಕೊಂಡುಕೊನೆಯುತಾಡಿಸುವೆಡೆಯೊಳ್ ॥
ಪಿಂಗದೆ ಭುಜಲತೆ ಶಿವನಾ ।
ಲಿಂಗನಮಂ ಪೇೞೆ ಬಾಲೆ ತ್ರೋಳಾಡಿಸುವಳ್ ॥ ೭೮
ಉಣ್ಮೆ ಶಶಿಧರನ ಬಗೆ ಮಿಗೆ ।
ಪ್ರೊಣ್ಮಿದ ಪ್ರುಳಕಂಗಳಿಂದೆಸುಂತಸ್ಥಲದೊಳೊ ॥
ಲ್ಪೊಣ್ಮಿನಸೀಕ್ಷಿಪ ತೆಱದಿಂ ।
ಕಣ್ಮಿಚ್ಚುಮಳಮಳೆ ಪಿಮಳಕಮಳಾಕೃತಿಯಿಂ ॥ ೭೯
ಗಿರಿಸುತೆ ಹರನಂಘ್ರಿಯುನಂ ।
ತರಂಗದೊಳ್ ಮುಚ್ಚಿ ಪೂಜೆಗೆ ನೋಟ್ಪಿಸಿದೊಳಾ ॥
ಚರಣಾರುಣೋದಯಕೆ ತಾ ।
ವರೆಯಲರ್ದ*ವೊಲಂದು ಮುಂದೆ ಕಣ್ದೆಱೆದಿರ್ದಳ್ ॥ ೮೦
ಮತ್ತಮಾಶ್ಚೈಶನದಲ್ಲಿ
ವರಭಾಳಾಕ್ಷಿಯ ಮೇಲೊಂ ।
ದುರುತರವಿನುಳಾಕ್ಷಿಯೊಗೆದುದೆಂಬಂತಿರೆ ಶಾಂ ॥
ಕರಿಗೆಸೆದುದು ಮುಂದಲೆಯೊಳ ।
ಗರಳಿಲೆ ಬಹುರತ್ನನೂತ್ನಕಾಂತಿಗಳಿಂದಂ ॥ ೮೧
ನೋಡಭವವಲ್ಲಭೆಯು ಕಿವಿ ।
ಗೂಡಿದೆನತಿಸಫಲವಾದೆವೆನುತುಂ ಕುಣಿವಂ ॥
ತಾಡುವ ಗಿರಿಜೆಯ ಮೊಗ ।
ದೊಡನಾಡುವ ಜೊನ್ನೋಲೆನಿಡಿದು ಮಾಗಾಯೆಸೆಗುಂ ॥ ೮೨
ಶಿವನಂ ಬಿಡದಪ್ಪುವ ತೋ ।
ಳಿವನಪ್ಪಿ ಕೃತಾರ್ಥರಪ್ಪೆವೆಂಬಂದದೊಳಾ ॥

ನವರತ್ನದ ರವೆಯುದ ಬಂ ।
ದಿ ವಿರಾಜಿಸುತಿರ್ಪುವಲ್ಲಿ ಗಿರಿಜೆಯ ತೋಳೊಳ್ ॥ ೮೩
ಬದವಿರ್ದ ಸಕಲಲಾವ ।
ಣ್ಯದ ಸಿರಿ ಕೈಸಾರ್ದುದರ್ಕೆ ಕಂಕಣಮಂ ಕ ॥
ಟ್ಟಿದವೋಲ್ ಮೆಱೆದುವು ವರಹ ।
ಸ್ತದೊಳೆಸೆವಂಬಿಕೆಯ ಸುಕರಮಣಿಮಯಕಟಕಂ ॥ ೮೪
ಪುರಮಥನನ ವರಕೀರ್ತ್ಯಂ ।
ಕುರಮೀಗಿರಿಸುತೆಯ ವದನದೊಳ್ ಮೊಳೆತುದು ಸಾ ॥
ದರದಿಂ ತಾನೆಂಬಂತಿರೆ ।
ಕರಮೆಸೆದುದು ವಿಮಳಮೌಕ್ತಿಕಂ ನಾಸಿಕದೊಳ್ ॥ ೮೫
ಅನವಧಿಗುಣನಿಧಿ ಪಾರ್ವತಿ ।
ಜನಿಯಿಸೆ ತಾನಱಿದು ಬಂದು ಚಂದ್ರಾಭರಣಂ ॥
ಮನವೊಸೆದು ತಾಳಿಗಟ್ಟಿದ ।
ನೆನೆ ಮೆಱೆದುದು ಕೊರಲೊಳೇಕಮುಖರುದ್ರಾಕ್ಷಂ ॥ ೮೬
ಈಶಶಿಮುಖಿ ದಿಟದಿಂ ವ್ಯಾ ।
ಘ್ರಾಸುರಹರನರಸಿಯೆಂಬುದರ್ಕಿದೆ ಕುಱುಪೆಂ ॥
ಬಾಸ್ಥೆಯನಱಿಪುವಂತಿರೆ ।
ಭಾಸುರಮಾಯ್ತುರದೆ ಪುಲಿಯುಗುರ್ ನಗಸುತೆಯೊಳ್ ॥ ೮೭
ಹೆಱೆಸೂಡಿದನ ಮನವನೀ ।
ತೆಱದಿಂದಂ ಸುತ್ತುವಳ್ ಭವಾನಿಯೆನಿಪ್ಪಾ ॥
ತೆಱನಂ ತೋಱುವ ತೆಱದಿಂ ।
ಮೆಱೆವುಡಿಗೆಯ ಮೇಲೆ ಸುತ್ತಿದುಡೆವಣಿ ಯೆಸೆಗುಂ ॥ ೮೮
ಬಿಡೆವಿನ್ನೀಗಿರಿಜೆಯ ಮೆ ।
ಲ್ಲಡಿಗಳನೆಂದಖಿಳವೇದಮುಲಿವಂತೆ ಪಲಂ ॥
ನಡೆವೆಡೆಯೊಳಗುಬ್ಬಿದಂ ಬೊ ।
ಬ್ಬಿಡುವಂದುಗೆಗೆಜ್ಜೆ ಸಜ್ಜನೆಗೆ ಸೊಗಯಿಸುಗುಂ ॥ ೮೯

ಇಂತು ಸಕಲಸೌಂದರ್ಯಮಂ ಬೀಱುವ ಬಾಲದುಡಿಗೆವೆರಸು ಲೀಲೆಮಿಕ್ಕು

ತರದಿಂ ಗೆಜ್ಜೆಗಳುಲಿಯು ।
ತ್ತಿರೆ ಮಾಗಾಯುಲುಗೆ ಮುಂತೆ ಮೆಲ್ಲಗೆ ನಲವಿಂ ॥
ಪರಿಪರಿದು ಪೋಗಿ ಗಿರಿಸುತೆ ।
ಹರಿಸಂ ಮಿಗೆ ಹರನ ನಿಳಯದೊಳ್ ನೆಲಸಿರ್ದಳ್ ॥ ೯೦
ನಲಿವಳ್ ನಗುವಳ್ ರಾಗಿಪ ।
ಳುಲಿವಳ್ ಮುದ್ದಿಸುವಳಟುವಳಪ್ಪುವಳಂತಿಂ ॥
ತೊಲೆವಳ್ ನಿಲ್ವಳ್ ಮೇನೆಯು ।
ಮೊಲೆಯಂ ಮಣಿಭವನಾಟದೊಳ್ ಸಂದಿರ್ದಳ್ ॥ ೯೧

ಇಂತರುವುಂ ಬಗೆಯದೆ ನೆರವುಂ ಪಾರದೆ ಪೋಗಿ ಪರಮಪ್ರೀತಿಯಿಂ ಹರನಾಲಯದೊಳ್ ಗಿರಿಜೆಯಿರ್ಪುದಂ ಗಿರಿರಾಜಂ ಕಂಡು ಮನಂಗೊಂಡು ಜಡೆಮುಡಿಯ ಜಾಣೆಗೆ ಭಾಳಸ್ಥಳದ ಭಾಮಿನಿಗೆ ತ್ರಿಲೋಚನದ ಲಲನೆಗೆ ಕರ್ಣಪಾಲಿಕೆಯ ಕಾಮಿನಿಗೆ ಕಪೋಳದ ವಿಪುಳೆಗೆ ನಗೆಗಣ್ಗಳ ನಲ್ಲೆಗೆ ನಾಸಿಕದ ನೀಳೆಗೆ ಬೆಳರ್ವಾಯ ಭಾಗ್ಯನಿಧಿಗೆ ಸಿರಿಮೊಗದರಸಿಗೆ ತೊದಳ್ನುಡಿಯ ಸದಮಳೆಗೆ ಕಂಬುಗ್ರೀವದ ಕಲ್ಯಾಣಿಗೆ ಪೇಱುರದ ಪಾರಿಜಾತಕ್ಕೆ ನಳತೋಳ ನಿಜಕ್ಕೆ ಹಸ್ತಕಡಗದ ಹರಿಣಾಕ್ಷಿಗೆ ಬಡನಡುವಿನ ಬಾಲೆಗೆ ಸುೞಿನಾಭಿಯೆಳೆಯಳ್ಗೆ ಯಿಸೆವಡಿಗೆಯ ಪ್ರೇಸಚೆಲ್ವೆಗೆ ನುಣ್ದೊಡೆಯ ನೂತನೆಗೆ ಕಿಱುದೊಡೆಯ ಕಾಮಧೇನುಗೆ ಮೃದುಪದದ ಮಂದಯಾನೆಗೆ ಗೆಜ್ಜೆಗಳ ಸಜ್ಜನೆಗೆ ಅಂದುಗೆಯಾನಂದೆಗೆ ನೇವುರದ ಭಾವಕಿಗೆ ಸೂಡಗದ ಪರುಷಕ್ಕೆ ಉಡಿಗೆಯ ಮೃಡಾಣಿಗೆ ಉಡೆವಣಿಯುತ್ಸಾಹಕ್ಕೆ ಕರವಲಯದ ಪರಬ್ರಹ್ಮಕ್ಕೆ ಹೊಂಗಡಗದ ಲಿಂಗನಂತೆಗೆ ತೋಳ ಬಂದಿಯ ಬಾಲಕಿಗೆ ಪುಲಿಯುಗುರ ಸುಲಲಿತೆಗೆ ನೇವಣದ ನಾಯಕಿಗೆ ರನ್ನದಾಳಿಱ ರಾಜಹಂಸೆಗೆ ಮಾಗಾಯ್ಗಳ ಮುಗ್ಧೆಗೆ ಹೊನ್ನೋಲೆಯ ಚೆನ್ನೆಗೆ ಮೂಗುತಿಯ ಮುಗುಳ್ಗೆ ಅಂಜನದಮೃತಕ್ಕೆ ತಿಲಕದ ಲಲಿತೆಗೆ ಅರಳೆಲೆಯ ತರಳೆಗೆ ಸೂಸಕದ ಸುಮ್ಮಾನೆಗೆ ರುದ್ರಾಕ್ಷಿಯ ಭದ್ರಾಂಗಿಗೆ ವಿಭೂತಿಯ ವಿಳಾಸನಿಧಿಗೆ ಭಕ್ತಿಯ ಭಾವಕ್ಕೆ ಅಱಿವಿನಮಯನಕ್ಕೆ ಶಿವಜ್ಞಾನದ ಸೀಮೆಗೆ ವೈರಾಗ್ಯದ ಮೇರೆಗೆ ಪರಮೈಶ್ವರ್ಯದ ಪುಣ್ಯಕ್ಕೆ ಲೋಕದಾಲೋಕನಕ್ಕೆ ಸಾಕಾರದ ಸುಧೆಗೆ ಪಶುಪತಿಯ ಪಟ್ಟದ ಮಹಾದೇವಿಗೆ ಸಕಳಜಗನ್ಮಾತೆಗೆ

ಸಕಳಬ್ರಹ್ಮಾಂಡನಂ ರಕ್ಷಿಸುವ ರುದ್ರಾಣಿಗೆ ರಕ್ಷಣಾರ್ಥಂ ತಂದೆ ನಿಯಾಮಿಸಿ ಕೊಟ್ಟ ದಂಡಿಗೆಯ ಧವಳಛತ್ರದ ಅಂಗರಕ್ಷಕರ, ಸಹವಾಸಿಗಳ ದಾದಿಯರ ಪಡಿಯಱತಿಯರ ಚಾಮರದ ಸೀಗುರಿಯ ಹಡಪದ ಮಡಿವರ್ಗದ ಅಂಜನದ ಕನ್ನಡಿಯ ಕಳಶದ ಸಿರಿಮುಡಿಯ ಸಿಂಗರದ ಸಾದಿನ ಮೃಗಮದದ ಕತ್ತುರಿಯ ಕರ್ಪೂರದ ಶ್ರೀಖಂಡದ ರಾಜಶುಕಪಠನದ ಹಂಸರಕ್ಷಣದ ಮಯೂರನರ್ತನದ ಲೀಲಾಂಬುಜದ ರತ್ನಕಂತುಕದ ವಿಳಾಸಿನಿಯರ, ಹರಿದ್ರಾಭರಣದ ಚರಣಪ್ರಕ್ಷಾಳನದ ಕದಂಬಫಲಭಾರದ ಮಂಗಳಾರತಿಯ ಮಾನಿನಿಯರಾದಿಯಾದ ಪ್ರಣ್ಯಾಗಣ್ಯಲಾವಣ್ಯಮಯಸಾಮ್ರಾಜ್ಯಪರಿಚರ್ಯಪಟುಗಳೆನಿಸಿದ ಷೋಡಶಸಹಸ್ರವಿಳಾಸಿನಿಯರ್ವೆರಸು ನಡೆತಂದಪೂರ್ವಸರ್ವವಿದ್ಯಗಳನಭ್ಯಾಸಂ ಮಾಡದೊಡಂ ಮುನ್ನಿನಂತೆ ಸಹಜವಾಗಿ ನೆಲಸಿ ನಿಲೆ ವಿಹಿತನವೀನಕ್ರೀಡೆ ಬಾಲ್ಯಮಂ ಸವಿದಪ್ಪದೆನೆ ಸಲ್ಲೀಲೆಯಿಂ ಶೈಲಾತ್ಮಜೆ ಕೇಳೀವನಂಗಳಂ ಪುಗುತಂದು,

ಎಲ್ಲಿ ಸರೋಜಮೆಲ್ಲಿ ವಿಮಳೋತ್ಪಲಮೆಲ್ಲಿ ಲತಾವಿತಾನದೊ।
ಳ್ಪೆಲ್ಲಿ ವನಂಗಳೆಲ್ಲಿ ಕೃತಕಾಚಳಮೆಲ್ಲಿ ವಿಶಾಲಮಂಟಪ ತ॥
ಣ್ಪೆಲ್ಲಿ ತಟಾಕಮೆಲ್ಲಿ ಪುಳಿನಸ್ಥಳಮೆಲ್ಲಿ ನದೀನದಾಳಿ ತಾ।
ನಲ್ಲಿ ಭವಾನಿ ಭಕ್ತಿ ಮಿಗೆ ಭಾವಿಸಿ ಭರ್ಗನನೊಲ್ದು ಪೂಜಿಪಳ್॥ ೯೦

ಕಣ್ಮಲರಿಂದಶ್ರುಜಲಂ।
ಪೊಣ್ಮುತ್ತಿರೆ ತನುವಿನಲ್ಲಿ ಪುಳಕಂ ಸಾಲ್ಗೊಂ॥
ಡುಣ್ಮುತ್ತಿರೆ ಗಿರಿಪತಿಸುತೆ।
ನುಣ್ಮಳಲಿಂ ದಿವ್ಯಲಿಂಗಮಂ ವಿರಚಿಸುವಳ್॥ ೯೧

ವಿರಚಿಸುವ ಲಿಂಗದೊಳ್ ಮೃದು।
ಕರಾಂಗುಲಿಸ್ಪರ್ಶಸುಖಮನೆಳಸುತೆ ಶರ್ವಂ॥
ಪರಿತಂದು ನಿಲ್ವನೆನೆ ವರ।
ಗಿರಿಜೆಯ ಸೌಭಾಗ್ಯದಿರವನಾರ್ಬಣ್ಣಿಸುವರ್॥ ೯೨

ಇಂತು ಸೌಕುಮಾರ್ಯಶೃಂಗಾರಮನಾಂತು
ಹಿಮಕರಕಿರಣಾವಳಿಗಳ್।
ಕುಮುದದ ಸೋಂಕಿಂದೆ ಕಂಪನಪ್ಪಿದುವೆನಿಪು॥

ತ್ತಮಮಲ್ಲಿಕಾಸಿಕಾಯುದೆ ।
ಕಮಳಾನನೆ ವಿಮಳಲಿಂಗಮಂ ಪೂಜಿಸುವಳ್ ॥ ೯೫

ತರಣಿಯು ತರುಣಕಿರಣಮಂ ।
ಬುರುಹಪರಿಷ್ವಂಗದಿಂದೆ ಪರಿಮಳಮಂ ಪೆ ॥
ತ್ತರಲ್ದುಪುವೆನಿಸುವ ಸಂಪಗೆ ।
ಯ ರಲಿಂದಂ ಗಿರಿಜೆ ಹರನನೊಲ್ದರ್ಚಿಸುವಳ್ ॥ ೯೬

ತರಣಿಯು ಮಧುಕರನಿಕರದ ।
ಮರುತನ ಕಾಲ್ದೂಳಿಯಿಮೆಂದು ಪೂಸಂ ಬಿಟ್ಟಾ ॥
ಗಿರಿಸುತೆ ಮನಃಕುಸುಮದಿಂ ।
ಪರಮನನೇಕಾಂತಭೂಮಿಯೊಳ್ ಪೂಜಿಸುವಳ್ ॥ ೯೭

ಅಂತುಮಲ್ಲದೆ

ವನರುಹನಾಳಂ ದಂಡಿಗೆ ।
ವನರುಹನವಪತ್ರವೊಂದೆ ಪೊಸಸೊರೆ ಮತ್ತಾ ॥
ವನರುಹಸೂತ್ರಂ ತಂತ್ರಿಗ ।
ಳೆನೆ ಶಿವಮಂ ಜಾಣೆ ಬೀಣೆಯಂ ಕೇಳಿಸುವಳ್ ॥ ೯೮

ಇಂತು ಬಾಲಲೀಲೆ ಶಿವಲೀಲೆಯಾಗಿ ಕಲನಱಿಯದೆ ಬಲನಱಿಯದೆ ಪಸಿವಱಿಯದೆ ತೃಷೆಯಱಿಯದೆ ದೆಸೆಯಱಿಯದಿರುಳ್ಪಗಲಱಿಯದೆ ಪರಿಜನಮಂ ಪರೀಕ್ಷಿಸದೆ ಶಿವನಂ ಮರುಳ್ಗೊಂಡು ಭಜಿಸಿಮೆರೆ ಕಂಡು ಕೌತುಕಂಗೊಂಡು ಸಹಚರಿಯರ್ ತನುತಮಗಂಜಿ ಭಾರತಿಗೋರನ್ನಳಪ್ಪ ನಾರಿಯನೊರ್ವಳಂ ಗಿರಿರಾಜನಲ್ಲಿಗೆ ಭರದಿಂ ಕಳಿಪಿದೊಡಾತರುಣಿ ಭೀತಿಯಿಂ ಪರಿತಂದರಮನೆಯಂ ಪೊಕ್ಕೋಲಗದೊಳ್ ನಿಂದು ನಗಾಧಿಪಂಗೆ ನಯಂ ಮಿಗೆ ಭಯಭಕ್ತಿಯಿಂ ಮೆಯ್ಯಿಕ್ಕಿ ಕೈಮುಗಿದು ನಿಂದು

ದೇವಕುಮಾರಿ ಬಾಲೆ ಸುಕುಮಾರಿ ಸಮರ್ಥೆಯತಿಸ್ವತಂತ್ರೆ ನಾ ।
ನಾವಿಧಶೈಲರಾಜಿ ನವರಾಜಿ ಸರೋವರರಾಜಿ ಸಲ್ಲತಾಂ ॥
ತಾವಳಿ ಸೈಕತಾವಳಿ ಲತಾವಳಿಯೆಂಬವಱಲ್ಲಿ ಸಂತತಂ ।
ದೇವರದೇವನಂ ಶಿವನನರ್ಚಿಸುತಿರ್ದಪಳೊಲ್ಲದೇನುಮಂ ॥ ೯೯

ದೇವಿಯ ವೋಲೆವಾಲಂ ಪರಿ ।
ಭಾವಿಸಳಾರಯ್ಯಳಂಜಳಳ್ಕಳ್ ವನದೊಳ್ ॥
ತೀವಿರ್ದ ಗುಲ್ಮಲತೆವ್ರ ।
ಕ್ಷಾವಳಿಯೊಳ್ ಲಿಂಗಪೂಜೆಯೊಳ್ ಸಂದಿರ್ದಳ್ ॥ ೧೦೦

ಕಲ್ಲೆನ್ನಳ್ ಮುಳ್ಳೆನ್ನಳ್ ।
ಮೆಲ್ಲಿತ್ತಿದು ಬೆಟ್ಟತೆನ್ನಳತಿಭಕ್ತಿಯೊಳಂ ॥
ತೆಲ್ಲಿ ಸುಖಸ್ಥಳಮುಂಟಾ ।
ದಲ್ಲಿ ವಿರೂಪಾಕ್ಷಪೂಜೆಗೀಡಾಗಿರ್ಪಳ್ ॥ ೧೦೧

ಬರೆದೆರೊ ಬೈತರೊ ಪೊಲ್ದರೊ ।
ಪೊರೆದರೊ ಬೆಚ್ಚರೊ ಮರಚ್ಚಿಕಡುವಿಟ್ಟರೊ ಕಂ ॥
ಡರಸಿದರೊ ಕಡೆದರೋ ಎನೆ ।
ಗಿರಿರಾಜತನೂಜೆ ಪೂಜೆಯೊಳ್ ರಾಜಿಸುವಳ್ ॥ ೧೦೨

ಬೇಡೆಂದೊಡೆ ಮಾಣಳ್ ನಲಿ ।
ದಾಡುವಳೆಪ್ಪುವಳಮರ್ಚುವಳ್ ಪುಳಕಿಪ್ಪಳ್ ॥
ಕೂಡುವ ಲಿಂಗಾರ್ಚನೆಯೊಳ್ ।
ನೋಡಳ್ ನುಡಿಯಳ್ ಭವಾನಿಯೇನಂದಱಿಯಳ್ ॥ ೧೦೩

ಎಂದು ಬಿನ್ನವಿಸೆ ಕೇಳ್ದು ಗಿರಿರಾಜಂ ನಿಜಾತ್ಮಜಾವಲೋಕನಹರ್ಷಮನಂ ಭದ್ರಾಸನದಿಂ ಭೋಂಕನೆೞ್ದು ಪೂಱಮಡುತ್ತೆ ಆರಾಧಿತಾರ್ಯಪ್ರಕರನುಂ ದಾನಪ್ರಮೋದಿತನಾನಾದ್ವಿಜನುಂ ತ್ಯಾಗಪರಿತೋಷಿತವಂದಿಜನನುಂ ಅವಷ್ಟಂಭಿತಕುಂಭಿಕುಂಭಸ್ಥಳಪೂರ್ವಾಸನನುಂ ಸಮಸ್ತಮುಕ್ತಾನೀತಮೌಕ್ತಿಕಾತಪತ್ರನುಂ ಪಾರ್ಶ್ವದ್ವಯುಗನರ್ತಿತಚಮರವಿಭ್ರಮನುಂ ನವೀನನರ್ತಕೀನರ್ತನಲೀಲಾವಿಲಾಸೇಕ್ಷಣನುಂ ಬಹಳಕಹಳಾರವಬಧಿರೀಕೃತದಿಙ್ಮಂಡಲನುಂ ನಿಸ್ಸೀಮೋದ್ಧತನಿಸ್ಸಾಳನಾದನುಂ ಮಕರಾಯಮಾನದ್ವಿರದಕುಲತರಂಗಾಯಮಾನತುರಂಗೌಘ ಮೇಘಾಯಮಾನರಥಯುತಸೇನಾಸಮುದ್ರನುಮಾಗಿ ನಡೆತರುತ್ತುಂ ಮುಂದೆ ನಿಂದು ಬಹಿರ್ವಣದೊಳಗಣ ಬಾಲಚೂತಾಂಕುರಮುಂ ಬಲವಂದು ಭಾವಿಸಿ ನೋಡಿ-ತೀವಿದ ನೇಹದಿಂದೋವಿಯೋವಿ ನಸುಕರ್ದುಂಕೆ ನವರಸಮುಂ ಸವಿಸವಿದು ಸೊರ್ಕಿ ಪಕ್ಕಮುಂ ಬಿರ್ಚ್ಚಿ ಮಿಕ್ಕು ನೆಗೆ

ದೆಳಗಳಿರ ಬಳಗದೊಳ್ ಪೊರಳ್ದು ಪೊರಳ್ದು ನಲಿನಲಿದು ನೋಡಿನೋಡಿ ಮ
ಲೆತು ನಿಂದು ಮೇಲಣ ತರುಶಾಖೆಮನೇಱಿ ವಿರಹಿಗಳತ್ತಲ್ ಬರಲಾಗದು ಕಾ
ಮದೇವನ ತೋಟ ಬೇಡೆಂದು ಬಿರುದೆತ್ತಿ ಕರೆವ ಕಂದರ್ಪನ ಕಹಳೆಗಳಂತೆ
ತಂಡತಂಡದಿಂ ಕೂಗುವ ಗಂಡುಗೋಗಿಲೆಗಳಂ, ಮತ್ತಮಲರ್ದರದೆ ಮು
ಕುಳಿತಮಾಗದುತ್ಪಲದ ಬಿರಿಮುಗುಳೊಳ್ ಭರದಿಂ ಪೊಕ್ಕು ಪೊಸಕಂಪ
ನೆಸೆಯೆ ಪೀರ್ದು ತಣಿತಣಿದಣಿಯುರದಿಂದುರ್ಕಿ ಸೊರ್ಕಿ ಮೊರೆದು ನೆರೆದು
ಮೋಗಣ್ಗೆ ನೆಗೆದು ಸಾಲ್ಗೊಂಡೇಱಿ ಪಾಱಿ ವನಲಕ್ಷ್ಮಿ ಪಾರ್ವತಿಗೆ ಲೀಲೆ
ಯಿಂದೋಲಗಿಸಲೆಂದೆತ್ತಿದ ನೀಲದ ಮಾಲೆಯಂತೆ ನೆರೆಮೊಱೆವ ಮಧುಕರಪ್ರ
ಕರಮಂ, ಮತ್ತಂ ಸೆಳೆಗೊಂಬಿನ ತನಿವಣ್ಣಂ ತವಕದೊಳ್ಕಪ್ಪಿ ರಸದೊಱೆತೆ
ಯು ಸೆಱೆಯುಂತಿರ್ದ ಪಣ್ಣ ಸೆರೆಯಂ ಕಂಡು ಕಣ್ಣೊಳಾಲಿಂಗಿಸುವಂತೆ ಸವಿ
ಸವಿದು ನೋಡಿ ಚಂಚುಪುಟದೊಳೀಡಿರಿದೆಚ್ಚು ಪಾಯ್ವ ರಸಧಾರೆಗೆ ನಾಲಗೆ
ಯನೊಡ್ಡಿ ನಲಿನಲಿದೀಂಟಿ ತಣಿದು ತೂಗಿ ತೊಂಡುಗೆಡೆದು ವಸಂತರಾಜನ
ಪಡಿಯಱರಂತೆ ವಿರಹಿಗಳಂ ಚಪ್ಪರಿಪ ರಾಜಕೀರಂಗಳಂ, ಮತ್ತಮಗಲ್ದ
ಪೆಣ್ಣಂಚೆಯಂ ಪುಳಿನಸ್ಥಳದ ಕುಸುಮರಜದ ಪೊಸ ಜೊನ್ನವಿಡಿದಱಿಸಿ ಪೋಗಿ
ಕೊಳನಂ ಪೊಕ್ಕು ಘೞಿಲನೆ ಕಂಡಮರ್ದಪ್ಪಿ ಕಮಲವನಗೆಲೆದುಱುಗ
ಲಿಱುಂಬಿನೊಳಗನುರಾಗದಿಂ ನೆರೆವ ರಾಜಹಂಸಮಿಥುನಂಗಳಂ, ಮತ್ತಂ
ಕಟ್ಟಲಿಪ ತಮಾಲವನಂಗಳೊಳ್ ವಿರಹಿಗಳನಱಸಲೆಂದು ಕಾಮದೇವನೆತ್ತಿ
ಸಿದ ಕೈದೀವಿಗೆಗಳಂತೆ ಪಲ್ಲವರಾಗದಿಂ ಪಲ್ಲವಿಸಿ ತೋರ್ಪಶೋಕದ್ರುಮಂ
ಗಳಂ, ನಿಂದ ಲತೆಯನಲ್ಲಾಡಿಪ ಮಂದಾನಿಳನಂ, ಅಗಲ್ದರಂ ನಗುವಂತೆ
ನಸುವಿರಿದ ದಾಡಿಮಂಗಳಂ, ಸುೞಿವ ವಿದ್ಯಾಧರಿಯರಂ, ಕುಣಿವ ನವಿಲ್ಗ
ಳಂ, ಕರೆವ ಕೊಳರ್ವಕ್ಕಿಗಳಂ, ನೆರೆವ ಚಕ್ರಮಿಥುನಂಗಳಂ- ಕಂಡು
ಗಿರಿರಾಜಂ ಕೊಂಡಾಡುತ್ತೆ ಬಂದು ಮುಂದೆ ಪುಂಡರೀಕಪ್ರಕರಪರಿಮಳಾ
ಸಕ್ತಭ್ರಮರಕುಲವಿಲಸಿತಮಾದ ಕಾಸಾರತಟದೊಳ್ ಮಂದಾನಿಳನಿಂ ಪರೆದ
ಪರಾಗದ ಪೀಠದ ಮೇಲಣ ನುಣ್ಮರಳ ಶಿವಲಿಂಗಮನಗಣಿತಪ್ರೇಮದಿಂ
ಸೊಗಸು ಮಿಕ್ಕು ಮಿಗೆ ಪೂಜಿಸುತ್ತಿರ್ದ ಮಗಳಂ ಕಂಡು

ಬಿಡದೇೞ್ವ ಪುಳಕತತಿಯೊಡ ।
ನೊಡನಾನಂದಾಶ್ರುಪ್ರೋಗೆಯೆ ಬಗೆವೆಱುರ್ತ್ತಿ ॥

ರ್ಮಡಿ ಮೂವಡಿ ನಾಲ್ಮಡಿಯೈ ।
ವಡಿ ಸಂತಸದಿಂದೆ ತಂದೆ ಮಗಳಂ ಕರೆವಂ ॥ ೧೦೫

ಬಾರೆನ್ನಾಯುವೆ ಬಾರೆ ಪುಣ್ಯತತಿಯೇ ಬಾರೆನ್ನ ಸೌಂದರ್ಯವೇ ।
ಬಾರೆನ್ನಾದಿಯೆ ಬಾರೆ ಶೈವನಿಧಿಯೇ ಬಾರೆನ್ನಯ ಪ್ರಾಣವೇ ॥
ಬಾರೆನ್ನೊಲ್ಮೆಯೆ ಬಾರೆ ತತ್ವಸುಖವೇ ಬಾರೆನ್ನ ಮಾತಾಮಹೇ ।
ಬಾರೆನ್ನಾಳ್ದಳೆನುತ್ತೆ ವೊಲ್ದು ಕರೆವಂ ಶರ್ವಾಣಿಯಂ ಶೈಳಪಂ ॥

ಇಂತು ಕರೆವ ನಿಜಜನಕಜನಿತಸ್ನೇಹರಸಾರ್ದ್ರಮಧುರಾಕ್ಷರಸಮ್ಮಿಳಿತ ಸಾತ್ವಿಕಸರಮಂ ಕೇಳ್ದು ಪ್ರತೀಭಾವಮಂ ನಟಿಸಲೆಂದು ಶಿವಲಿಂಗಮಂ ಬೀಳ್ಕೊಂಡು ತಿರಿಗಿ ನೋಡಿ

ನಿಂದಿರ್ದು ನಗುತೆ ನಲಿಯು ।
ತ್ತಂದುಗೆ ಪೊಂಗೆಜ್ಜೆಯುಲಿಪು ನೆಲನುಗ್ಗಡಿಸು ॥
ತ್ತಂದೆಸೆಯೆ ಮಂದಯಾನದೊ ।
ಳಿಂದುಪ್ರಭೆ ಮುಂದೆ ಮುಂದೆ ನಡೆತರುತಿರ್ದಳ್ ॥ ೧೦೬

ಅರಳೆಲೆ ಭಾಳಜೊಳಾಡು ।
ತ್ತಿರೆ ಮಾಗಾಪುಗಂಡಯುಗಳಮಂ ಮುಂಡಾಡು ॥
ತ್ತಿರೆ ಕುರುಳ್ಗಳ್ ಕುಣಿದಾಡು ।
ತ್ತಿರೆ ಸತಿಯರ ನಡುವೆ ಗಿರಿಜೆ ನಡೆತರುತಿರ್ದಳ್ ॥ ೧೦೭

ನವಿಲಾಟಂ ಹಂಸೆಯ ನಡೆ ।
ತವೆ ಮಂದಾನಿಳನ ಸುಗತಿ ಮದಗಜಗಮನಂ ॥
ತವತವಗಡಂಗುತಿರ್ದುವು ।
ನವೀನಬಾಲಕಿಯ ಮಧುರಮೃದುಪದಗತಿಯೊಳ್ ॥ ೧೦೮

ಎಂದೆನಿಪ ವಿಳಾಸಂ ಮಿಗೆ ।
ಮುಂದಾಡುತೆ ತೊಳಪ ಬೆಳಪ ಬೆಳತಿಗೆಗಣ್ಗಳ್ ॥
ಮುಂದೈಪ ಮೆಲ್ನಗೆಯನುಗೆ ।
ಬಂದಪ್ಪಿದಳಗಜೆ ಸೊಗಯಿಸುತ್ತಿರೆ ಪಿತನಂ ॥ ೧೦೯

ಅಂತು ಬಂದಪ್ಪಿದಾಗಳ್

ಮಾಣಿಕವೆ ಮೌಕ್ತಿಕವೆ ಮ ।
ತ್ಪ್ರಾಣವೆ ಪೊನ್ನೊರೆಯೆ ಪರುಷವೇ ಮುಕ್ತಿಯು ನಿ ॥
ರ್ಮ್ಮಣವೆ ಎನುತುಂ ಮೂರ್ಧಾ ।
ಘ್ರಾಣಂ ಬೆರಸಗಲದಪ್ಪಿದಂ ಗಿರಿರಾಜಂ ॥ ೧೧೦

ಸುತ್ತಿದ ಪರಮಸ್ನೇಹದೆ ।
ಮತ್ತಂ ಮತ್ತಪ್ಪಿ ಪುಳಕಿಸುತ್ತುಂ ಪ್ರಟವೇ ॥
ಬಿತ್ತುಂ ಪೊಣ್ಮುತ್ತುಂ ನಲಿ ।
ಯುತ್ತೆ ಗಜಾರೂಢನಾಗುತುಂ ಗಿರಿರಾಜಂ ॥ ೧೧೧

ಪೂರ್ವಾಸನದೊಳ್ ಪಟೆಪಿಂ ।
ಪಾರ್ವತಿಯುಂ ಹರ್ಷವೇಱಿ ಬಿಜಯಂಗೆಯ್ಯ ॥
ತ್ತುರ್ವತೆ ಕೊರ್ವತೆ ಪರ್ವತೆ ।
ಪರ್ವತರಾಜಂ ಪುರಕ್ಕೆ ತಿರುಗಿದನಾಗಳ್ ॥ ೧೧೨

ಬಸೆದೆತ್ತಂ ತನ್ನ ಬೆನ್ನೊಳ್ ಬರುತಿರೆ ಚತುರಂಗಂ ಮಹಾದೇವಿ ಶ ರ್ವಾ । ಣಿ ಸಮಸ್ತರ್ಧಿಕ್ಯೆ ಪೂರ್ವಾಸನದೊಳಿರೆ ಬರುತೊಪ್ಪಿದಂ ಶೈಳಪಂ ಸಂ ॥ ತಸದಿಂ ಭೂಭಾಗನುಂ ನೋೞ್ಪತಿಭರವಶದಿಂ ಪೂರ್ವಗೋತ್ರಾಗ್ರ ದೊಳ್ತಾಂ । ಶಶಿಯುಂ ಮುಂದಿಟ್ಟು ಬಪ್ಪುಜ್ಜ್ವಳವಿನುಳವಸಂತಂಬೊಲಾ ನಂದದಿಂದಂ ॥ ೧೧೩

ಬರುತಿರೆ ಮುಂದೆ ಪತ್ತನದೆರಟ್ಟೆಸೆಯೊಪ್ಪುವ ರಾಜವೀಧಿಯೊಳ್ ।
ನೆರೆದ ಶಶಾಂಕವಕ್ತ್ರೆಯರ ಕಣ್ಗಳ ಕಾಂತಿ ಶರೀರಕಾಂತಿಯಾ ॥
ಭರಣದ ಕಾಂತಿ ರತ್ನಕುಲಕಾಂತಿ ದರಸ್ಮಿತಕಾಂತಿಯೆಂಬ ವಿ ।
ಸ್ತರದ ಸುಧಾಬ್ಧಿಯುಂ ಸುಖದೊಳೀಸುತೆ ಬಂದನಗೇಂದ್ರವಲ್ಲಭಂ ॥ ೧೧೪

ಅಂತು ಬಂದು ಸಕಲರಾಜಲೋಕಂಬೆರಸು ಗಿರಿರಾಜಂ ರಾಜಧಾನೀ ತಿಳಕಮೆನಿಪ ರಾಜಮಂದಿರದ ಮುಂದೆ ನಿಂದು

ಪೊಳೆವ ಗಜದಿಂದಮವನೀ ।
ತಳಕ್ಕೆ ನಿಜತನುಜೆವೆರಸು ಬಿಜಯಂಗೆಯ್ದು ॥
ಗ್ಗಳಪ ಶಶಿಸೂರ್ಯವಂಶೋ ।
ಜ್ಜ್ವಳರಂ ಕಳಪುತ್ತೆ ಬಂದನಗಕುಲರಾಜಂ ॥ ೧೧೫

ಪರಿಜನವೆಾಡನೊಡನೊಲ್ದೊ ।
ಪ್ಪಿರೆ ಕೆಲ ಬಲ ಪಡಿತಳಾವಧಾರುಯೆನುತ್ತುಂ ॥
ಬರುತಿರೆ ತನೂಜೆ ಸಹಿತಂ ।
ಗಿರಿರಾಜಂ ಸಿಂಹವಿಷ್ಟರಸ್ಥಿತನಾದಂ ॥

ಹಾರಮರೀಚಿ ತತ್ಕುಚವ ರೀಚಿ ಕಪೋಳಮರೀಚಿಯಾನನ ।
ಸ್ಮೇರಮರೀಚಿ ಲೋಚನಮರೀಚಿ ಲಲಾಟಮರೀಚಿ ದಂತವಿ ॥
ಸ್ಫುರನುರೀಚಿಗಳ್ ತೊಳಗುವಾರತಿಗಾರತಿಗೆತ್ತು ಸತ್ತಿನಿಂ ।
ದಾರತಿಯೆತ್ತಿದರ್ ಗಿರಿಜೆಗಂ ಜನಕಂಗಮನಂತಕಾಂತೆಯರ್ ॥ ೧೧೩

ಅಂತೆತ್ತಿದಾರತಿಗಳಂ ಕೈಕೊಂಡು ಗಿರಿರಾಜಂ ನಾನಾಹರ್ಷದಿಂ ಮೇ
ನಾದೇವಿಯುಂ ಕರೆಯಿಸೆ ಬರುತ್ತಿರ್ದಳದೆಂತೆಂದೊಡೆ-

ಎಡಬಲವಂಕದೊಳ್ ನೆಲನನುಗ್ಗಡಿಪಾಳಿಯರಿಂ ವಿಳಾಸದಿಂ ।
ದಡಿಯಿಡುವಲ್ಲಿ ನೇವುರದ ನುಣ್ದನಿಗಾಡುವ ಹಂಸೆವಿಂಡಿನಿಂ ॥
ಬಿಡದೆ ಮುಖಾಬ್ಜ ಸೌರಭಮನುಣ್ಬ ಮದಾಳಿಗಳಿಂ ವಿನೂತನಂ ।
ಬಡೆದತಿನೂನಿ ಮೇನೆ ನಡೆತಂದು ನಿರೀಕ್ಷಿಸುತುಂ ಭವಾನಿಯುಂ ॥ ೧೧೪

ಏನೆನ್ನಾಯುವೆ ಎನ್ನಪಾರಸುಖವೇ ಏನೆನ್ನ ಪುಣ್ಯಾಬ್ಧಿಯೇ ।
ಏನೆನ್ನುತ್ಸವಮೇ ವಿಳಾಸನಿಧಿಯೇ ಏನೆನ್ನ ಸೌಂದರ್ಯವೇ ॥
ನಾನಾಪರ್ವತದೊಳ್ ವನಪ್ರಕರದೊಳ್ ಸಂಪೂರ್ಣಕಾಸಾರದೊಳ್ ।
ನೀನೇಂಕಿಂತಿರಲೇಕೆ ತಾಯೆ ಯೆನುತುಂ ಬಂದಪ್ಪಿಕೊಂಡಪ್ಪಿದಳ್ ॥ ೧೧೫

ಇಂತು ಮೊಲೆಯೊಡನೆ ಕಣ್ಣೊತ್ತುಮೆ ಪುಳಕದೊಡನೆ ಗದ್ಗದಂ ಪೊಣ್ಮೆ
ಸ್ವೇದದೊಡನೆ ಕಂಪನಂ ಕೊನರೆ ಸಿಂಹಪೀಠದ ಸಿಂಗರದ ಶಿಶುವಂ ಮೊಗೆ
ದಪ್ಪಿ ತೆಗೆದಪ್ಪಿ ಮೂರ್ಧಾಘ್ರಾಣಮಂ ಮಾಡಿ ಮೊಲೆಯೂಡಿ ಮೇನೆಯುಂ
ಗಿರಿರಾಜನುಂ ಕಣ್ತೀವಿ ನೋಡಿ ಮೆಯ್ದೀವಿಯಪ್ಪಿ ಮನಂ ತೀವಿ ನೆನೆಹಿ
ನೊಳಟ್ಟು ಶಶಿಕಳೆಯುಂ ಸಲಹುವಂತೆ ಸೌಕುಮಾರ್ಯಮಂ ಸುಯಿಧಾನಂಮಾ
ಳ್ಪಂತೆ ಸೊಬಗಂ ಸಂವರಿಸುವಂತೆ ಬೆಳ್ದಿಂಗಳಂ ಬಣ್ಣವಿಡುವಂತೆ ಭೋಗ
ಮಂ ಸಾಗಿಸುವಂತೆ ಚೆಲ್ವಂ ಚಮತ್ಕರಿಸುವಂತೆ ಸಾಹಿತ್ಯಮಂ ಸೈತಿಡು
ವಂತೆ ಪ್ರಾಣಮಂ ಪರಿರಕ್ಷಿಸುವಂತೆ ಜ್ಞಾನಮಂ ಬಳೆಯಿಸುವಂತೆ ಶಾಂತಿಯಂ
ಕಾಂತಿಯಿಡುವಂತೆ ಸತ್ಯಮಂ ಸಂತವಿಡುವಂತೆ ನಿತ್ಯಮಂ ಪ್ರತ್ಯಕ್ಷಮಂ

ಮಾಳ್ಪಂತೆ ಪುಣ್ಯಮಂ ಪ್ರಕಟಿಸುವಂತೆ ಮುಕ್ತಿಯುಂ ಮೂರ್ತಿಗೊಳಿಸು
ವಂತೆ ಪಾರ್ವತಿಯುಂ ಸರ್ವಸುಖಮುಮಿಂ ಸಲಹುತ್ತಮಿರೆಯಿರೆ

ಪರಮಸ್ವಾಮಿ ಜಟಾಧರಂ ಶಶಿಧರಂ ಗಂಗಾಧರಂ ಕಾಲಸಂ ।
ಹರನಜ್ಞಾನಹರಂ ಪುರತ್ರಯಹರಂ ಸೌಖ್ಯಾಕರಂ ಶಂಭು ಶಂ ॥
ಕರನಾನಂದಕರಂ ಸಮಂತೆಸಗೆ ಭಕ್ತಿಜ್ಞಾನವೈರಾಗ್ಯಮಂ ।
ಕರುಣಾಂಗೆಯ್ಗೊಲವಿಂದೆ ಹಂಪೆಯ ವಿರೂಪಾಕ್ಷಂ ಶಿವಾವಲ್ಲಭಂ ॥ ೧೨೦

॥ ಗದ್ಯ ॥

ಇದು ಸಮಸ್ತಸುರಾಸುರನಿಕರಮಕುಟತಟಘಟಿತದಿನಕರಕರಾಧಿಕ್ಯಮಾಣಿಕ್ಯ
ಪ್ರಭಾಪುಂಜರಂಜಿತಸಂಪಜ್ಜರಣಸೆಸಿಪ ಪಂಪಾವಿರೂಪಾಕ್ಷ ಶ್ರೀಪಾದಕಮಲ
ಮಕರಂದಮತ್ತಮಧುಕರಾಯಮಾಣ ಸತ್ಕವೀಶ್ವರ
ಹಂಪೆಯ ಹರಿಹರದೇವ ವಿರಚಿತಮಪ್ಪ

ಗಿರಿಜಾಕಲ್ಯಾಣ ಮಹಾಪ್ರಬಂಧದೊಳ್

ಹೈಮವತೀಶೈಶವವರ್ಣನಂ ತೃತೀಯಾಶ್ವಾಸಂ.

॥ ಚತುರ್ಥಾಶ್ವಾಸಂ ॥

— ಪಾರ್ವತೀಯೌವನ ರಾತ್ರೀವಿಹಾರ ವರ್ಣನಂ —

ಶ್ರೀಸಕಳಸುರಮುನೀಶ್ವರ ।
ವಾಸವಹರಿಕಮಲಪುತ್ರಪೂಜಿತಚರಣಂ ॥
ಭಾಸುರತೇಜಂ ಭಕ್ತಿವಿ ।
ಳಾಸಮನೆಮಗೀಗೆ ಹಂಪೆಯ ವಿರೂಪಾಕ್ಷಂ ॥ ೧

ಶಿವಶಿವ ನಳನಳಿಸುವ ಶೈ ।
ಶವದೊಳ್ ಬಳೆಯುತ್ತುಮಿರ್ಪ ಗಿರಿಜೆಗೆ ರೂಪ್ರೇ ॥
ತ್ಸವದೊಡನೆ ಮೊಱೆವ ದಶವ ।
ರ್ಷವದಾಯ್ತು*ಲರ್ಗಣೆಗೆ ಕೂರ್ಪುಕೂಡುವ ತೆಱದಿಂ ॥

ಇಂತಾಗೆ ಮೇನೆಯುಂ ತ ।
ತ್ಕಾಂತನುಮತಿಹರ್ಷಪುಳಕಯುತರಾಗುತ್ತುಂ ॥
ಮುಂತಿರ್ದ ತನುಜೆಯುಂ ಮನ ।
ದಿಂ ತೊಪಿಱಿಯುತ್ತೆ ತಮ್ಮೊಳೊಲ್ದಿಂತೆಂದರ್ ॥ ೩

ಅನವದ್ಯಂ ಚರಿತಂ ಮು ।
ನ್ನಿನ ಪರಿ ತಾನಲ್ಲ ಬಾಲ್ಯಮಿಪ್ರೋದುದೆ ಯೌ ॥
ವನಮಿಾಸಾರ್ದುದೆ ಬಣ್ಣಿಸು ।
ವನ ಜಾಣ್ಮೆಗತರ್ಕ್ಯಮುನ್ನಮನುಪಮಮುಗ್ಧಿಕಂ ॥ ೪

ನಗೆ ನಸುಲಜ್ಜೆಯೊಳ್ ತೊಡರಲಿರ್ದುದೆ ಬಳ್ಳಿಸೆ ಮಾಂದ್ಯಭಾವದೊಳ್ ।
ಪುಗಲಿದೆ ಬಾಸೆ ಸಾಲಱಿಪಲಿರ್ದುದೆ ಸೂಸುವ ಸೋಟಿಮಾಸೆಯೊಳ್ ॥
ಮಿಗಲಿದೆ ತತ್ಕುಚಂ ನಿಜದ ಸೀಮೆಗೆ ರೇಖೆಯನೊತ್ತಿ ಲಜ್ಜಿಸಲ್ ।
ಬಗೆದಿವೆ ಯೌವನೋದಯಮೊ ಬಾಲ್ಯವಿಮೋಚನಮೋ ಭವಾನಿಯಾ ॥

ಅಳಕಂ ತೆಱಪುಗೊಡಲ್ಕಿವೆ ।
ತ್ತಿಳಕಕ್ಕೆ ತದಾಸ್ಯಬಿಂಬಮಾದರ್ಶದೊಳೆಂ ॥

ಪೊಳೆಯುಲಿದೆ ನಾಭಿಮಂಡಲ ।
ಮೊಳವುಗಲಿದೆ ನೋಡು ಮೀನೆಯುಂಬಿಕೆಯಿರವಂ ॥ ೬

ದಂತಂ ಮುಸುಂಕುಗಳೆಯು ।
ಲ್ಕಾಂತಿವೆ ನಡು ತನುವನೆಳಸಲಿದೆ ನುಡಿ ಮೌನ ॥
ಪ್ರಾಂತಮನೊತ್ತುಗೊಳಲ್ಕಿದೆ ।
ಕಾಂತಿ ಶರೀರಮನನುಚರ್ಲಿದೆ ಪಾರ್ವತಿಯಾ ॥ ೭

ಎಂದಿಂತು ಮಗಳ ವಯಸ್ಸಂಧಿಯಂ ವಯಃಪರಿಣತರಪ್ಪ ಮಾತಾಪಿತೃಗಳ್ ಬಣ್ಣಿಸುತ್ತಿರ್ಪನಮನುಕ್ರಮದಿಂ ಪಲವುಕೆಲವು ದಿನಕ್ಕೆ ಬನಮಂ ಸಹಕಾರಂ, ಸಹಕಾರಮಂ ವಸಂತಂ, ವಸಂತನಂ ಕಾಮಂ, ಕಾಮನಂ ಇಕ್ಷುಚಾಪಂ, ಇಕ್ಷುಚಾಪಮಂ ನನೆಗಣೆ ಸಾರ್ವಂತೆ ಪಾರ್ವತಿಯಂ ನವಯೌವನಂ ಸಾರ್ವಲ್ಲಿ

ನವಕುಚಕಳಶಂಗಳನೊ ।
ಪ್ಪುವ ಮುಖದರ್ಪಣದಿನಳಕತೋರಣದಿಂ ಪೊ ।
ಣ್ಮುವ ಮುಡಿಗುಡಿಯಿಂ ಮಿ ।
ಕ್ಕವಯವದಿಂದಗಜೆ ಯೌವನಮನಿದಿರ್ಗೊಂಡಳ್ ॥ ೮

ಎಂಬಂತೆ ತೀವಿ ಪರ್ವಿದ ।
ಚುಂಬಿತಮುದಿತೋದಿತಪ್ರಕಾಶಿತಗಿರಿಶಾ ॥
ಲಂಬಿತಗಿರಿಜಾಯೌವನ ।
ಮಂ ಬಣ್ಣಿಪ್ರೌಢುರಗಖಚರಭೂಚರರಳವೇ ॥ ೯

ಶರ್ವಾಣಿಯ ಸೌಂದರ್ಯಮ ।
ನೊರ್ವಂ ಬಣ್ಣಿಸುವೆನೆಂಬವಂ [1]ಗಾಂಪಂ ಪ ॥
ನ್ನೀರ್ವರ್[1] ಭಾರತಿಯರ್ ಸಾ ।
ಸಿರ್ವರ್ ಫಣಿರಾಜರಾದೊಡಂ ತೀರ್ದಪ್ರದೇ ॥ ೧೦

ಮದಮಂ ವಿಭ್ರಮಮಂ ವಿಲಾಸದೊದವಂ ಸೌಂದರ್ಯಮಂ ಸೌಖ್ಯಮಂ।
ಸದಲಂಕಾರತೆಯಂ ಸಲಕ್ಷಣಮನಾಂತಿರ್ದಂಬಿಕಾಯವ್ವನಂ ॥

1. ತಾಂಗಾಂಪಂ॥ ೯ೀರ್ವರ್.

ಪದೆಪಿಂ ಪೇೞ್ವೊಡೆದತ್ಯನೂನಪದಮತ್ಯಾಶ್ಚರ್ಯಮತ್ಯುಜ್ಜ್ವಲ ।
ಪ್ರದಮತ್ಯೂರ್ಜಿತಮತ್ಯಸಾಧ್ಯಗುಣಮತ್ಯಾನಂದಮತ್ಯುನ್ನತಂ ॥ ೧೧

ಅತಿಮಧುರಮತಿಮನೋಹರ ।
ಮತಿಮಂಗಳಮತಿವಿಚಿತ್ರಮತಿಬಂಧುರಮಿಂ ॥
ತತಿಸಂಭ್ರಮಮತಿವಿಭ್ರಮ ।
ಮತಿಯುವ್ವನಮತಿವಿಲಾಸಮತಿಪಾರ್ವತಿಯಾ ॥ ೧೨

ಮತ್ತಮಾಪಾರ್ವತಿಯ ನವಯೌವನಂ ವಸಂತನಂತೆ ರಾಗೋದಯಂ, ಮಕರಧ್ವಜನ ಮತ್ತಗಜದಂತೆ ಮಂದಯಾನಂ, ಕಂದರ್ಪನ ಶಿಖೀಮುಖ ಕಳಾಪದಂತೆ ಜಗನ್ಮೋಹನಂ, ಝಷಕೇತನನಿಕೇತನತೋರಣರತ್ನಸ್ತಂಭಂಗಳಂತೆ ಕಾಂತಿಮಯಂ, ಶಶಿಕಾಂತಕೃತಕಾಚಳದಂತೆ ನಿರ್ಮಳೀಕೃತಂ, ಕ್ಷೀರಾಬ್ಧಿಯ ತರಂಗದಂತುತ್ತರೋತ್ತರಂ, ಕಮಲಾಕರದಂತೆ ಪ್ರಸನ್ನಗಭೀರಂ, ಬಿಸಜನಾಳದಂತೆ ಭುವನಾಲಂಕಾರಂ, ವನಲತೆಯಂತೆ ಸಕೋಮಲಂ, ಸುವರ್ಣಕಳಶದಂತೆ ರಮಣೀಯಂ, ಸುರದ್ರುಮಶಾಖೆಯಂತೆ ಸರ್ವವಾಂಛಿತಫಲಪ್ರದಂ, ಕಂಬುವಿನಂತೆ ತ್ರಿರೇಖಾನ್ವಿತಂ, ಪೂರ್ಣಚಂದ್ರನಂತೆ ಕಲಾಭರಿತಂ, ವ್ಯೋಮದಂತೆ ಘನವಿಚಿತ್ರಮೆನಿಸಿರ್ದುದು. ಅಂತುಮಲ್ಲದೆಯುಂ

ತೀವಿದ ಜವ್ವನಮಂ ಪರಿ ।
ಭಾವಿಸೆ ಮಾಧುರ್ಯಚರಿತಮೊಡೆಗೊಂಡುದು ಸ ॥
ದ್ಭಾವಂ ಚಂದ್ರಾಭರಣನ ।
ಜೀವಂ ಬಣ್ಣಿಪ್ಪನಾವನವನೇ ದೇವಂ ॥ ೧೩

ಅದೆಂತೆಂದೊಡೆ—

ಮನದಾಸೆ ವದನದೊಳ್ ಲೋ ।
ಚನದೊಳ್ ನುಡಿ ನಗೆ ಕಪೋಳದೊಳ್ ಕೋಪಂ ಪು ॥
ರ್ಬಿನೊಳಱಿವು ಬುದ್ಧಿಯೊಳ್ ಭಾ ।
ವನೆ ಚಿತ್ತದೊಳಮರ್ದು*ನಂಬಿಕೆಗೆ ಯೌವನದೊಳ್ ॥ ೧೪

ನುಡಿಯೊಳ್ ಜಾಣ್ ನೋಟದೊಳ್ ವಕ್ರತೆ ಪೊಸನಡೆಯೊಳ್ ವಿಭ್ರಮಂ ಸಾರ್ದುದೆಯ್ದೆ । ತ್ತಡಿಯಿಟ್ಟತ್ತಾಹ! ಕರ್ಣಾಮೃತಮತಿರುಚಿರಂ ಕಣ್ಣ

ಪ್ರಣ್ಯಂ ದಿಟಕ್ಕಿ ॥ ರ್ಪಡಿ ವಾಣೀದೇವಿಗಂ ನೂರ್ಮಡಿ ಕುಸುಮಶರಕ್ಕಂಚೆ ವಿಂಡಿಂಗೆ ಸಾಸಿ । ರ್ಮಡಿ ಸಾಹಿತ್ಯಂ ವಿಳಾಸಂ ಗಮಕಮಮುದರ್ಪದಾರ್ಥ್ಯಂಗ ದೊಳ್ ಕಣ್ಗೆ ಚಿತ್ರಂ ॥ ೧೫

ಇಂತೊಪ್ಪುವ ನವಯೌವನದೊಳ್ ಸಕಲಶ್ರೀಲಾವಿಲಾಸೆಯಪ್ಪ ಪಾರ್ವತೀದೇವಿ ನಲವಿಂ ಜಲಕ್ರೀಡೆಗೆಂದು ಷೋಡಶಸಹಸ್ರವಿಳಾಸಿನಿಯರ್ವೆರಸು ಕೇಳೀವನಮಂ ಪುಗುತರ್ಪಾಗಳ್

ವಿದಳಿತಪದ್ಮಸೌರಭಕೆ ಸಂದಣಿಗೊಳ್ವ ಮಧುವ್ರತಪ್ರತಾ ।
ನದಿನೆಸೆವುತ್ಪಳಪ್ರಕರದೊಳ್ ನೆರೆ ಸಿಲ್ಕಿ ಜಿನುಂಗುತಿರ್ಪ ಷ ॥
ಟ್ಪದಶಿಶುವೃಂದದಿಂ ಕಮಲತಂಡುಲಮಂ ಕೊಳುತಿರ್ಪ ಹಂಸೆಯಿಂ ।
ಮದನಸುಖಾಬ್ಧಿಯೊಳ್ ನೆರೆವ ಚಕ್ರದಿನೊಪ್ಪುವುದೊಂದು ಪ್ರಾಗೊಳಂ ॥

ಕೊಳನಂ ಕಂಡು ವಿಳಾಸಿನೀನಿಕರಮುದ್ಯಚ್ಚಂದನಂ ಕುಂಕುಮಂ ।
ವಿಳಸನ್ಮೌಕ್ತಿಕಪ್ರಷ್ಪರಾಜಿ ಮೃಗನಾಭಿವ್ರಾತಮಂ ತಂದು ನಿ ॥
ರ್ಮಳಕಾಸಾರದೊಳೊಂದುಗೂಡಿ ಶಿವೆ ಬಾ ಸರ್ವಜ್ಞೆ ಬಾ ದೇವಿ ಬಾ ।
ಕಳನಾದಪ್ರಿಯೆ ಬಾರೆನುತ್ತೆ ಕರೆದರ್ ಶರ್ವಾಣಿಯಂ ಜಾಣೆಯರ್ ॥ ೧೭

ಅಂತು ಕರೆಯೆ

ವನಲಕ್ಷ್ಮಿತ್ರೆ ಕೆಯ್ಯುಗ್ಗಡುತ್ತಿರೆ ।
ಯುನಸೂಯಾದೇವಿಮಾಸಿಯಾದಂಗನೆಯರ್ ॥
ಜನನಿ ಜಗಜ್ಜೀವನೆ ಮೆ ।
ಲ್ಲನೆ ಪಾಯುವಧಾರು ದೇವಿಯೆನೆ ನಡೆತಂದಳ್ ॥ ೧೮

ನೇವುರದ ಮುದ್ರಿಕೆಯ ಹಾ ।
ರಾವಳಿಗಳ ಮಧುರನಾದಮುಬ್ಜಾಕರಮಂ ॥
ತೀವುತ್ತಿರೆ ಸಕಲಕ್ರೀ ।
ಡಾವಾರಿಧಿಯೆಳಸಿ ಬಳಸಿ ಕೊಳನಂ ಪೊಕ್ಕಳ್ ॥ ೧೯

ತೊಳಗುವ ವಿಮಳಾಕಾಶ ।
ದೊಳಗವೆಟಿ ಪುಗುವಂತೆ ಮುಂತೆ ನಿರ್ಮಳಶಶಿನುಂ ॥
ಡಳದಧಿದೇವತೆ ಬೆಳ್ದಿಂ ।
ಗಳೊಳಗೆ ಪುಗುವಂತೆ ಪೊಕ್ಕಳಂಬಿಕೆ ಕೊಳನಂ ॥ ೨೦

ಗಿರಿಜೆ ಶಶಿವದನೆ ಕೊಳನಂ ।
ಭರದಿಂ ಪುಗೆ ನೆಯ್ದಿಲೆಯ್ದಿದುವು ವಿಕಸನಮಂ ॥
ವಿರಹನುನಾಂತುವು ಕೋಕಂ ।
ಸರಸಿರುಹಂ ಮುಗಿದುವರರೆ! ಪಗಲೊಳ್ ಚಿತ್ರಂ ॥ ೨೧

ಇಂತು ಜಲಕ್ರೀಡೆಗೆಂದು ಕೊಳನಂ ಪೊಕ್ಕಲ್ಲಿ ನನೆದೊಡಿಗೆಯ ನಾಯಕಿಯರುಂ, ತಿಲಕದ ಲಲನೆಯರುಂ, ಪೂಮುಡುಂಬಿನ ಪ್ರಾಣ್ಯವತಿಯರುಂ, ಅಂದುಗೆಯ ಭಂಗಿಯರುಂ, ನಗೆಗಣ್ಣಿಳ ನೀರೆಯರುಂ, ಗಿರಿಜೆಯ ಚರಣಕಮಲಕ್ಕೆಱಗುತ್ತುಂ ನತಮುಖಿಯರ್ ಸನ್ನದ್ಧೆಯರಾಗಿ

ಬಗೆಮಿಗೆ ಸತಿಯರ್ ಜಲಕೇ ।
ಳಿಗೆ ಚಿತ್ತಂಗೊಟ್ಟು ದೇವಿಯವಧಾರೆನುತುಂ ॥
ಪುಗುತುಂ ಮಿಗುತುಂ ನಗುತುಂ ।
ಸೊಗಯಿಸಿದರ್ ಸೋಸಿದರ್ ಸಮಂತಿದಿರಾದರ್ ॥ ೨೨

ಅಳಿಗಳಳಕಂಗಳೊಡನು ।
ತ್ಪಳಮಕ್ಷಿಗಳೊಡನೆ ಕಮಳಮಾಸ್ಯದೊಡನೆ ನಿ ॥
ಶ್ಚಳಚಕ್ರಂ ಕುಚದೊಡನ ।
ಗ್ಗಳಿಸಿದುವಿದಿರಾದುವಮರ್ದುವರ್ಬಿದುವಾಗಳ್ ॥ ೨೩

ಮೃದುಕರತಳದಿಂದಬಲೆಯ ।
ರುದಕಂಗಳನೆತ್ತಿ ಸುತ್ತಿ ಸೂಸುವ ಪದದೊಳ್ ॥
ಮುದದಿಂ ಕುಡುವಂತಿರ್ದುದು ।
ಮೊದಲೊಳ್ ಮದನಂಗೆ ಮೆಚ್ಚಿವ ರತ್ನಾಂಜಲಿಯಂ ॥ ೨೪

ಓರೊರ್ವರೊಳೋರೊರ್ವರ್ ।
ವಾರಿಗಳಂ ಚೆಲ್ಲುವಲ್ಲಿ ಜಲದೇವತೆಯರ್ ॥
ಕಾರೊಳಗಾಡುವೊಲಿರ್ದುದು ।
ಪಾರ್ವತಿಸುತೆ ನಲಿಯುತಾಲಿವರಲೋಕುಳಿಯಂ ॥ ೨೫

ಮತ್ತಮದಲ್ಲದೆ

ಅಳಕಾಳಿಗಳಂ ನಯನೋ ।
ತ್ಪಳದಿಂ ಮುಖಕಮಳದಿಂದೆ ಕುಚಚಕ್ರದಿನು ॥

ಜ್ವಳಕಾಂತಿಸಲಿಲದಿಂದಾ ।
ಕೊಳನೊಳ್ ಕೊಳನಾಡುವಂತಿರೊಪ್ಪಿದರಾಗಳ್ ॥ ೧೬

ಅದಲ್ಲದೆ ತವ್ಮೊಳಗೆ ಜಿನಚ್ಚಿಕೊಂಡು ಮತ್ಸರಂಗೆಯ್ದು

ಕಮಳದಳಂಗಳೊಳಗೆ ಕುಂ ।
ಕುಮಜಳಮಂ ತೀವಿ ಚಕ್ರಕುಚೆಯರ್ ಭರದಿಂ ॥
ವಿಮಳೇಂದುಮುಖಿಯರಂ ವಿ ।
ಭ್ರಮದಿಂ ನಡೆದಿಟ್ಟು ಕಂಡರೆಳವಿಸಿಲೊಳ್ಪಂ ॥ ೧೭

ಇತ್ತ ಶಶಿಮುಖಿಯರ್ ಕಂಡಾ ।
ಗಡೆ ಧವಳೋತ್ಪಳದ ನಡುವೆ ಚಂದನರಸಮಂ ॥
ಬಿಡೆ ತೀವಿಕೊಂಡು ನಡೆನಡೆ ।
ದೊಡನೊಡನಿಟ್ಟಟ್ಟು ಜೊನ್ನಮಂ ಪಸರಿಸಿದರ್ ॥ ೧೮

ಇಂತಾಡುವಲ್ಲಿ

ಅಂಬುವಿನೊಳಗೆ ನಿಜಪ್ರತಿ ।
ಬಿಂಬಮನೀಕ್ಷಿಸುತೆ ತರುಣಿ ಪೋಗದಿರೆನುತುಂ ॥
ಬೆಂಬತ್ತಿ ನಡೆದು ಕಾಣದೆ ।
ಡಂಬಲನಂ ನೋಡಿ ಮುಗ್ಧೆ ನಗಿಸಿದಳಾಗಳ್ ॥ ೧೯

ಮಡದಿಯರಾಡುವ ಪದದೊಳ್ ।
ಸಡಿಲ್ದ ಘನಕುಂತಳಾಳಿ ಪ್ರೋಲ್ಲುದು ಚಲದಿಂ ॥
ದುಡುಪತಿಬಿಂಬಂಗಳ ಬೆಂ ।
ಬಿಡದೆಯ್ದುವ ರಾಹುಮಂಡಲಂಗಳ ತೆಱನಂ ॥ ೨೦

ಉರವಣಿಸಿ ಚೆಲ್ಲಿ ಸತಿಯರ್ ।
ಕರಂಗಳಿಂ ವದನವೃಂದಮಂ ಮುಚ್ಚಿರೆ ತ ॥
ತ್ತರವಿಂದಂ ಶಶಿಬಿಂಬೋ ।
ತ್ಕರಮಂ ಮುತ್ತಿದುವೆನಿಪ್ಪ ತೆಱನಾಯ್ತಾಗಳ್ ॥ ೨೧

ನೋಡುವ ಪಾರ್ವತಿ ಮುಖಮಂ ।
ಕೂಡುತ್ತಿರೆ ತುಂಬಿವಿಂಡು ಪಾಡುತ್ತಿರೆ ತು ॥

ಳಕ್ಕಾಡಿದರಿಟ್ಟಾಡಿದರೀ ।
ಸಾಡಿದರಮದಾರ್ಡಿದರ್ ಸರೋಜಾನನೆಯರ್ ॥ ೩೨

ಇಂತಾಡುವ ಸತಿಯರ್ಗೆ ಸಂತಸದಿಂ ಮುಯ್ಯಾಂತು
ಈತೆಱದಿಂ ಜಲಕೇಳಿಯೊ ।
ಳೋತು ಮನಂಗೂಡಿ ನೋಡಿಯಾಡುತ್ತೆ ಜಗ ॥
ನ್ಮಾತೆ ಗಿರಿಜಾತೆ ಸುಖಸಂ ।
ಭೂತೆ ನುತಖ್ಯಾತೆ ಸರಸಿಯಂ ಪೊಱಮಟ್ಟಳ್ ॥ ೩೩

ಅಂತು ಪೊಱಮಟ್ಟು ನವ್ಯದುಕೂಲಮನುಟ್ಟು ದಿವ್ಯಾಭರಣಮಂ ತೊಟ್ಟು ಸಂತಸಮಂ ಮುಂತಿಟ್ಟು ಸಕಳಕಳೆಗಳನೊಳ್ಕೊಂಡು ನಿಶ್ಚಲಿತ ಚಿತ್ತೆಯುಚಿತಾಸನಮನೇಱಿ ವಿಲಾಸಿನಿಯರ್ ಕೆಲಬಲದೊಳ್ ನೆಲನುಗ್ಗಡಿಸೆ ಪುರಾಭಿಮುಖಿಯಾಗಿ ಬರುತ್ತುಮಿರೆ

ಇತ್ತಲ್ ತಮ್ಮೊಳ್ ನುಡಿದರ್ ।
ವೃತ್ತಸ್ತನೆ ಗಿರಿಜೆಗುತ್ತರೋತ್ತರರೂಪಂ ॥
ಚಿತ್ತ ಘನಯೌವನಂ ಸಾ ।
ರುತ್ತಿರ್ದಪುದೀವರಾಂಗನೆಗೆ ವರನಾರೋ ॥ ೩೪

ಈರೂಪಿಂಗೀಯೌವನ ।
ಕೀರಮಣಿಯಾಂಗವತಿಗೆ ಮಿಗೆ ಸೌಂದರ್ಯ ॥
ಕ್ಕೀರಾಜಿಪ ಗಿರಿಜೆಯ ವಿ ।
ಸ್ತಾರಕ್ಕಂ ವರನನಿಂದುಧರನೇ ಬಲ್ಲಂ ॥ ೩೫

ಎಂದಿಂತು ನುಡಿಯುತ್ತೆ ಶರ್ವಾಣಿಯ ರೂಪಾತಿಶಯಕ್ಕೆ ಬೆಱಗಾಗಿ ಮೇನೆಯ ತಪಕ್ಕೆ ದಾಕ್ಷಾಯಿಣಿ ಕರುಣಿಸಿ ಬಂದಳೆಂಬುದನತ್ಯಾಶ್ಚರ್ಯದಿಂ ಮಱೆದು

ತಿಳಿಯದೆ ಮೇನಾಸತಿಯುಮ ।
ಚಳಪತಿಯುಂ ಚಿಂತಿಸುತ್ತಮಿರೆಯಿರೆ ತೋಱೆ ॥
ತ್ತಳವಲ್ಲದೆ ನಳನಳಸುತೆ ।
ತಳತಳಸುತೆ ಪೊಳೆದು ಬಳೆವ ಜೆಳಗಾಗಸದೊಳ್ ॥ ೩೬

ಆಬೆಳಗಿನೊಳಗೆ

ಅಮೃತಮಯೂಖಮಂಡಲದಿನಂದಿಳಿತರ್ಪ ಶಶಾಂಕಮೂರ್ತಿಯೋ ।
ಅಮರನದೀಪ್ರವಾಹದೊಳಗಿಂದೊಗೆತರ್ಪ ವಿಶಾಲಪುಣ್ಯವೋ ॥
ಪ ಮುದಿತಶೈವಕೀರ್ತಿ ಬರುತಿರ್ಪುದೋ ಎನೆ ಬಂದನಸ್ಥೈಯಿಂ ।
ವಿಮಳವಿಶಾರದಂ ಘನಶರದ್ಘನಸನ್ನಿಭನೊರ್ವ ನಾರದಂ ॥ ೩೭

ಇಳಿನ ಜಡೆ ಬಳೆವ ವೀಣಾ ।
ಕಳಸ್ವನಂ ಭಸಿತಗಾತ್ರಮುಜ್ಜ್ವಳತೇಜಂ ॥
ವಿಳಸನ್ಮಂಜುಳಮುಖಮಂ ।
ಡಳಚಂದ್ರಿಕೆಯೊಪ್ಪೆ ನಾರದಂ ನಡೆತಂದಂ ॥ ೩೮

ಬರೆ ಗಿರಿಪತಿಯುಂ ಸತಿಯುಂ ।
ವರಮುನಿಗತಿವಿನತರಾಗಿ ಭದ್ರಾಸನದೊಳ್ ॥
ಭರದಿಂ ಕುಳ್ಳಿರಿಸುತ್ತುಂ ।
ಚರಣಂದೊಳೆ ಸುತ್ತೆ ತೀರ್ಥಜಳಮಂ ತಳಿದರ್ ॥ ೩೯

ಅಂತು ತಳಿದುಂ

ಗುರುಮೂರ್ತಿ ಶೈವನಿಧಿ ಶಂ ।
ಕರಮೂರ್ತಿ ಪರಾಪರೈಕವರಶಾಂತಿ ಸುಧಾ ॥
ಕರಮೂರ್ತಿ ದೇವ ನಿಮ್ಮಯ ।
ಬರವಿಂದೆ ಕೃತಾರ್ಥರಾದೆವೆಂದಿಂತೆಂದರ್ ॥ ೪೦

ಬರವೆಂತಾದುದು ನಾಕಲೋಕದಿರವಂ ಬಿಟ್ಟೀಧರಾಮಂಡಲ ।
ಕ್ಕೆರದಿಂದೆಮ್ಮಯ ಪುಣ್ಯವೆಮ್ಮ ಜನನಂ ಸಾಫಲ್ಯವೆಮ್ಮಿಂದೆ ವಿ ॥
ಸ್ತರಸೌಖ್ಯಾಕರರಾರೆನುತ್ತೆ ನಲವಿಂ ಬಿನ್ನೈಸುತಿರ್ಪನ್ನೆಗಂ ।
ಬರುತಿರ್ದಳ್ ಗಿರಿಜಾತೆ ಷೋಡಶಸಹಸ್ರಸ್ತ್ರೀಪರಿಸ್ಪಂದದೊಳ್ ॥ ೪೧

ಇದು ವಿದ್ಯುನ್ಮಾಲೆಯೋ ಚಂದ್ರಮನ ಕಮನೀಯೂಷದೀಪ್ತಿಸ್ವ
ರೂಪೋ । ಮದನಾಸ್ತ್ರವ್ರಾತವೋ ನೂತನವನಲತಿಕಾನೀಕವೋ ನಾ
ಕಲೋಕಾ ॥ ಸ್ಪದನಾರೀಕ್ಷೀರವಾರಾಶಿಯೊ ಸುರುಚಿರಸೌಂದರ್ಯಸಂಘಾತ
ವೋ ನೋ । ಡಿಮ ತಾನೆಂಬಂತೆ ತೀವಿದ ಬಲೆಯರೊಳಗಿರ್ದಂಬಿಕಾ
ಕಾಂತೆ ಬಂದಳ್ ॥ ೪೨

ಸರಸಿಜನೇತ್ರೆ ಪ್ರಣ್ಯಮಸಂಗಾತೆ, ಸದಾಶಿವನಂಗಪಾತ್ರೆ ಯು ।
ತ್ಯುರುತರದಾನಿ ನಿರ್ಮಲಭವಾಸಿ ನಿರಂತರಮಾಸಿ ನವ್ಯಸಾಂ ॥
ದರವರಮೂರ್ತಿ ಶರ್ವನ ಸುಕೀರ್ತಿ ಮಹೇಶ್ವರನಾರ್ತಿ ಬಂದಳೊ ।
ಪ್ಪಿರೆ ಗಿರಿಜಾತೆ ಲೋಕಚಯಮಾತೆ ಜಗಕ್ಕೆ ವಿನೂತೆಯಪ್ಪಿಯಂ ॥   ೪೩

ಇಂತು ಬಂದು ಕಾಂತಿಗಳ ನಡುವಣ ತಾರಾಪತಿಯು ಕಳೆಯಂತೆ, ಲತೆಗಳ ನಡುವಣ ಕಲ್ಪಲತೆಯಂತೆ, ರತ್ನಂಗಳ ನಡುವಣ ಚಿಂತಾರತ್ನದಂತೆ, ಧೇನುಗಳ ನಡುವಣ ಕಾಮಧೇನುವಿನಂತೆ, ರುದ್ರಾಕ್ಷಿಗಳ ನಡುವಣ ಕಮುಖರುದ್ರಾಕ್ಷಿಯಂತೆ, ಸಕಲಸ್ತ್ರೀಯರ ನಡುವೆ ಗಿರಿರಾಜತನೂಜೆ ವಿರಾಜಿಸುತಿರ್ದು

ಸುರುಚಿರಪೂರ್ವಾಚಳದೊಳ್ ।
ಗುರುತರಪೂರ್ಣೇಂದುವುದಯಿಪಂತಿರೆ ರಾತ್ರೀ ॥
ಶ್ವರವದನೆ ಗಿರಿಜೆ ಭರದಿಂ ।
ಗಿರಿರಾಜನ ತೊಡೆಯ ಮೇಲೆ ಬಿಜಯಂಗೆಯ್ದಳ್ ॥   ೪೪

ಆಸಮಯದೊಳ್

ಕಂಡಷ್ಟಾಂಗಪ್ರಣಾಮಂಬೆರಸು ಹರಿಸದಿಂ ನಾರದಂ ಭೀತಿಯಿಂ ಕೈ।
ಕೊಂಡಿಷ್ಟಾರ್ಥಪ್ರದೈಕಪ್ರಭೆಗೆ ವಿಭವದಿಂದಂ ನವಾಶ್ಚರ್ಯಪೂರ್ವಂ ॥
ಹಿಂಡೇಲಿಯ್ಯಾನಂದರೋಮಾಂಚದ ಪುಳಿಕೆಗಳಂ ತಾಳ್ದು ನಿಂದಿರ್ದು ತಾಯೇ
ಚಂಡಾಂಶುವಾತತೇಜೋನಿಧಿ ಶರಣೆನುತುಂ ಸ್ತೋತ್ರಮಂ ಮಾಡುತಿರ್ದಂ

ಶ್ರೀನಿಧಿ ಶಾಂಕರಿ ಶೈವ ।
ಜ್ಞಾನಿ ಸದಾವರದೆ ಭುವನಭರಿತೆ ಭವಾನೀ ॥
ಮಾನಿನಿ ಮಾನಿ ಮಹೇಶ ।
ಧ್ಯಾನಿ ಮಹಾದಾನಿ ನೀನೆ ಶರಣೆನುತಿರ್ದಂ ॥   ೪೫

ಇಂತಿಂತು ಬಣ್ಣಿಸುತ್ತುಂ ।
ಮುಂತಿರ್ದ ಗಜರಾಜಸುತೆಯನುಜ್ಞಾಸನದೊಳ್ ॥
ಸಂತಂಬಿಜಯಂಗೆಯ್ಸು ।
ತ್ತುಂ ತಣಿಯದೆ ಮತ್ತೆ ನಾರದಂ ಸ್ತುತಿಗೆಯ್ದಂ ॥   ೪೬

ತಾಯೇ ತವರೇ ತ್ರಿಭುವನ ।
ದಾಯುವೆ ಜಗದುಸಿರೆ ಜಗದ ಕಣ್ಣೇ ತ್ರಿಜಗ ॥
ನ್ನಾಯಾನಿಧಿಯೇ ಸುಧಿಯೇ ।
ಕಾಯೆನ್ನಂ ಕರುಣದಿಂದೆ ಸಲಹೆನುತಿರ್ದಂ ॥ ೪೮

ಎಂದಿಂತಾರ್ತದಿಂ ಸ್ತೋತ್ರಂಗೆಯ್ಯೆ ಕೇಳ್ದು ಕೌತುಕಂದಾಳ್ದು ಗಿರಿರಾಜನುಂ ಮೇನೆಯುಂ ಇರ್ವ- ಎಲೆ ಮುನೀಂದ್ರಾ, ನಿಮ್ಮಡಿಗಳನೊಚ್ಚತಂಗೊಂಡುಚ್ಚಾಸನದೊಳಿರಿಸಿ ಪಾದೋದಕಮನಾದರದಿಂ ಕೊಂಡು ಅತಿಹರ್ಷದಿಂ ಕೃತಾರ್ಥರಾದೆವಲ್ಲದೆಮ್ಮ ಮಗಳ್ಗೆ ನಿಮ್ಮಡಿಗಳ್ ವಂದನೆಗೆಯ್ವುದತ್ಯಾಶ್ಚರ್ಯಮೆಂದಜ್ಞಾನದಿಂ ನುಡಿಯೆ, ದಿವ್ಯಜ್ಞಾನಿ ನಾರದಂ ನಸುನಗುತ್ತುಮಿಂತೆಂದಂ—

ಸುರರಱಿಯರಿಂದ್ರನಱಿಯಂ ।
ಹರಿಕಮಲಜರಱಿಯರಖಿಳಮನುಗಳ್ ಮುನಿಗಳ್ ॥
ಕರಮಱಿಯರೆಂದೊಡಗಜೆಯ ।
ಚರಣಾಬ್ಜಕ್ಕೆಱಗಲಿಳೆಯೊಳಾನೆನಿತಜವಂ ॥ ೪೯

ನೆವದಿಂದಂ ನಿಮ್ಮ ಪುಣ್ಯೋದರದೊಳೊಗೆದೋಡಿಬಾಲೆಯುಂ ಪುತ್ರಿಯೆಂಬೊಂದವಿಚಾರಂ ಬೇಡ ನೀವೆ ಜನನಿಜನಕರಲ್ಲಲ್ಲದಂತಿರ್ಕೆ ತಾಯೇ॥
ನವರತ್ನಕ್ಕಬ್ಧಿ ಚಿಂತಾಮಣಿಗೆ ಮೊರಡಿ ಮುತ್ತಿಂಗೆ ಸಿಂಪಿಂದುವಿಂಗಂ ॥
ರವಿಗಂ ಪೂರ್ವಾಶೆ ಲಿಂಗಕ್ಕವನಿ ಸುಧೆಗೆ ದುಗ್ಧಾಬ್ಧಿ ಪದ್ಮಕ್ಕೆ ಪಂಕಂ॥ ೫೦

ಮತ್ತಮದಲ್ಲದೆ

ಮೇನೇ ನಿನ್ನಱಪಕೃತಿ ।
ಮಾನಿ ಮಹಾದೇವಿ ಕರುಣದಿಂ ನಿನ್ನುದರ ॥
ಸ್ಥಾನದೊಳಂ ಜನಿಯಿಸೆ ಸು ।
ಜ್ಞಾನಿಯನೆಲೆ ಪುತ್ರಿಯೆಂಬರೇ ಧಾರಿಣಿಯೊಳ್ ॥ ೫೧

ಶಿವನ ಸುಧೆ ಶಿವನ ಜೀವಂ ।
ಶಿವನಾನಂದಂ ಸದಾಶಿವನ ಘನಪುಣ್ಯಂ ॥
ಶಿವನ ಸುಖಂ ಶಿವನ ಮುಖಂ ।
ಶಿವನಾಯು ಗಿರೀಂದ್ರ ಗಿರಿಜೆಯಂ ಸುತೆಯೆಂಬೈ ॥ ೫೨

ದಕ್ಷನ ಶಿವನಿಂದೆಗೆ ಕವು ।
ಲಾಕ್ಷಿ ಮಹಾದೇವಿ ಸೆಡೆದು ನಿಜಯೋಗದೊಳಿಂ ॥
ತಕ್ಷಯನಿಧಿ ಮೇನೆಗೆ ಕರು ।
ಣೇಕ್ಷಣೆಯಾಗುತ್ತೆ ಬಂದುದಂ ಭಾವಿಸಿರೇ ॥ ೫೩

ಅದುಕಾರಣದಿಂ ಮುನ್ನಮೆ ।
ಮೊದಲಿಂ ಹರನರಸಿ ಗಿರಿಶನರ್ಧಾಂಗಿ ವರ ॥
ಪ್ರದೆ ವರನೀಕೆಗೆ ನಿತ್ಯಂ ।
ಮುದದಿಂ ಶಿವನಲ್ಲಿಗಿರದೆ ಕಳಿಪುವುದುಚಿತಂ ॥ ೫೪

ಗಿರಿಸುತೆ ಬಳೆವನ್ನೆವರಂ ।
ಹರನಿರ್ದಪನೊಲ್ದು ಹೇಮಕೂಟಸ್ಥಳದೊಳ್ ॥
ಪರಿಪೂರ್ಣಪರಂಜ್ಯೋತಿ ।
ಸ್ಸ್ವರೂಪನಿಜಯೋಗಭೋಗರಾಗೋನ್ನತಿಯಿಂ ॥ ೫೫

ಎಂದಿಂತಕ್ಕ್ಯರ್ಮುನಿ ಹಿತೋಪದೇಶವನುಂ ಪೇಳ್ದು ಗಿರಿಜೆಯ ಪರಮಲಾವಣ್ಯಾವಯವಂಗಳಂ ಕಂಡು ನೋಡಲಣ್ಮದೆ ಪೊಡೆಮಡುತ್ತುಂ ಮತ್ತಮಿಂತೆಂದಂ—

ಈ ಗಿರಿಜೆಯ ನವಯೌವನ ।
ಮೀಗಿರಿಜೆಯ ರೂಪವಿಭವಮೀಗಿರಿಜೆಯ ಸೌ ॥
ಭಾಗ್ಯಗಮೀಗಿರಿಜೆಯ ನಿಜ ।
ರಾಗಂ ಸ್ಥಾಣುವಿನ ಚಿತ್ತಮಂ ಚಿಗುರಿಸದೇ ॥ ೫೬

ಹರನ ಮನೋಹರಂ ಗಿರಿಜೆಯಾನುಡಿಯಾನಡೆಯಾವಿಳಾಸಮೀ ।
ತರಳಕಟಾಕ್ಷಮೀಪರಿಮಳಾಕೃತಿಯಾದರಹಾಸಮೀಸುಖಾ ॥
ವರಣತೆಯಾಸಲಕ್ಷಣತೆಯಾಸೊಬಗೀಮಧುರಸ್ವಭಾವಮೀ ।
ಸುರುಚಿರಕಾಂತಿಯಾಹರೆಯಮೀಸುಕುಮಾರತೆಯಾಸುಧಾಮಯಂ ॥ ೫೭

ಉರಮಿಂಬಿಲ್ಲ ಪಯೋಧರದ್ವಯದ ಕೊರ್ಬಿಂಗಾಸ್ಯಮಿಂಬಿಲ್ಲ ಭಾ ।
ಸುರನೇತ್ರದ್ವಿತಯಪ್ರಚಾರತೆಗೆ ಬೆನ್ನಿಂಬಿಲ್ಲ ಧಮ್ಮಿಲ್ಲಬಂ ॥
ಧುರಸೀಮಾವಳಿಯುಕ್ಕೆ ನೋಡೆ ನಡುವಿಂಬಿಲ್ಲೊಪ್ಪುಮೀಬಾಸೆಗೀ ।
ಗಿರಿಜಾಯೌವನಸಂಪದಕ್ಕೆ ತನುವೆಂತಿಂಬಪ್ಪುದೋ ರುದ್ರನಾ ॥ ೫೮

ಇಂತೊಪ್ಪುವ ಜವ್ವನೆಯಂ ।
ಶಾಂತೆಯನಖಿಳೈಕಮಾತೆಯಂ ಶಂಕರನೇ ॥
ಕಾಂತದ ಸುಖಮಂ ಸ್ತ್ರೀಯಮಾ ।
ತ್ರಂ ತನುಜೆಯೆನಿಪ್ಪ ಬಗೆಯನುೞಿ ಗಿರಿರಾಜಾ ॥ ೫೯

ನಿನಗೞಿಪಲ್ ಬಂದೆಂ ಶ ।
ರ್ವನ ವಧು ಶರ್ವಾಣಿಯೆಂದು ನಗಜೆಯನಗರಾ ॥
ಜನೆ ಕೇಳ್ ಭರದಿಂ ಕೈಲಾ ।
ಸನಗಕ್ಕಾಂ ಪೋಪೆನೆಂದು ನಾರದನೆಂದಂ ॥ ೬೦

ಎನೆ ಕೇಳ್ದು ಶೈಳರಾಜಂ ।
ವಿನಯಂ ಬೆರಸಗಜೆಗೆಂದು ಕೆಯ್ಮುಗಿಯುತ್ತುಂ ॥
ಮನದೊಳ್ ಬೆಱಗಾಗುತ್ತುಂ ।
ಘನಶೈವಾಂಬುಧಿಗೆ ನಾರದಂಗಿಂತೆಂದಂ ॥ ೬೧

ನೀವೆಂದಂತೆ ಭವಾನಿಯಂ ಮಱೆದು ಪುತ್ರೀಭಾವಮಂ ತಾಳ್ದಿವಿ ।
ನ್ನೇವೇೞ್ವೆಂ ಮರುಳಾಗುತಿರ್ದೆಮಗೆ ನಿಮ್ಮಾಬೋಧೆಯಿಂ ಜ್ಞಾನಸ ॥
ದ್ಭಾವಂ ಪುಟ್ಟದುದಿಂಪಿನಿಂ ಪರಸುತುಂ ಪಂಪಾವಿರೂಪಾಕ್ಷನಿ ।
ರ್ವಾಸಕ್ಕಿರದುಯ್ದು ತೋಱಿವಪೆನೀಶರ್ವಾಣಿಯಂ ಜಾಣೆಯಂ ॥ ೬೨

ನೀವಿಂದೆಮ್ಮರಮನೆಯೊಳ್ ।
ದೇವಾರ್ಚನೆಗೆಯ್ದು ನಾಳೆ ಪೋಪುದೆನುತ್ತುಂ ॥
ತೀವಿರ್ದ ಮೃದುಮಧುರವಾ ।
ಕ್ಯಾವಳಿಯಿಂ ನಾಡೆ ಬೇಡಿಕೊಂಡಂ ಭೂಪಂ ॥ ೬೩

ಇಂತು ಬೇಡಿಕೊಳುತ್ತುಮಿರೆ

ನಗಪತಿಯೆಂದುದಂ ಸಲಿಸಿ ನಾರದನಾತನ ಕೂಡೆ ರುದ್ರನಂ ।
ಮೃಗಧರಚೂಡನಂ ಶಿವನನರ್ಚಿಸಿ ತತ್ಪರಮಪ್ರಸಾದದಿಂ ॥
ಮಿಗೆ ತಣಿದಿರ್ಪರಂ ಕನಕಪೀಠದೊಳಪ್ಪಿನಮಿತ್ತಲತ್ತಲಾ ।
ಖಗನ ತುರಂಗಮೆಯ್ದಲಣಿದುರ್ವು ಪಶ್ಚಿಮಪರ್ವತಾಗ್ರಮಂ ॥ ೬೪

ಆಸಮಯದೊಳ್

ಅದು ಪೂರ್ವಾಂಗನೆಯಿಡೆ ನೆಗೆ ।
ದೊದೆವುತೆ ಬೆಳಬೆಳಗುತೆಯ್ದಿ ಪಶ್ಚಿಮಶೈಲಾ ॥
ಗ್ರದ ಮೇಲೆ ಬಿಟ್ಟ ಮಾಣಿ ।
ಕ್ಯದ ಕಂತುಕದಂತಿರೆಸೆದುದರ್ಕನ ಬಿಂಬಂ ॥ ೭೫

ಆಸಮಯದೊಳ್

ಅರೆ ಮುಗಿವಬ್ಜಮುಳ್ಳಲರ್ವ ಕೈರವಮಾಕುಲಿಪಾಮಧುವ್ರತಂ ।
ಕೊರಗುವ ಕೋಕಮುತ್ಸವಿಪ ಜಾರೆಯರೊಂದೆರಡೇಳ್ವ ಮಿಾನ್ಗಳಂ ॥
ಕುರಿಸ ತಮಂಧಮಬ್ಧಿಯೊಳೆ ಪಕ್ಕೆಗೆ ಸಾರ್ವ ವಿಹಂಗವೀಥಿ ಚೇ ।
ತರಿಸುವ ಮಾರುತಂ ನಸು ಕಲಂಕುವ ಸಾಂಧ್ಯಮಯೂಖಲೇಖೆಗಳ್ ॥೭೬

ಅತ್ತಿತ್ತಂ ಚಲಿಸದೆ ಮ ।
ಯ್ವತ್ತಿದ ಮನ್ಮಥಸುಖೋತ್ತಮಾಂಗದೊಳಿರುತುಂ ॥
ಮುತ್ತಿನಕಾಂತಿಗೆ ಭಯಮಂ ।
ಪೊತ್ತಿನವಕ್ತ್ರಮನೆ ನೋಡಿ ಸುಸುಯ್ವುದು ಕೋಕಂ ॥ ೭೭

ಕಾಲ್ದೆಗೆಯೆ ಬಿಜ್ಜಿನಂ ಮಿಗೆ ।
ಸೊಲ್ದೆಗೆದುದು ವಿಹಗವೀಥಿ ಮುಗಿಯುತ್ತಬ್ಜಂ ॥
ಜೋಲ್ದುವು ನೊಂದು ರಥಾಂಗಂ ।
ಕೀಲ್ದೆಗೆದವೊಲಗಲೆ ಸಾರ್ದು ಕೊರಗಿದುವಾಗಳ್ ॥ ೭೮

ಬಗೆಗುಂದಿ ಚಕ್ರಮಿಥುನಂ ।
ಮಿಗೆ ನೊಂದೊಂದೊಂದನಗಲಲಾಜದೆ ನೋಟಂ ॥
ದೆಗೆಯುತ್ತಲಿಲುತ್ತೊರಲು ।
ತ್ತುಗಲ್ದುವು ನೆರೆ ಪಗಲನರಸಿ ತಿರುಗುವ ತೆಜದಿಂ ॥ ೭೯

ಮುಗಿವ ಸರಸಿರುಹಷಂಡಮು ।
ನಗಲ್ವ ಚಕ್ರಪ್ರತಾನಮಂ ಕೋಟರದೊಳ್ ॥
ಪುಗುವ ವಿಹಗಂಗಳಂ ಮಿಗೆ ।
ನಗುವಂತಿರೆ ನೆಯ್ದಿಲೆಯ್ದಿದುವು ವಿಕಸನಮಂ ॥ ೮೦

ಇಂತು ಮುಗಿವ ಕಮಲಂಗಳನಗಲ್ವ ಚಕ್ರಮಿಥುನಂಗಳಂ ನೋಡಲಾಜದಿಱಿವಂತೆ ಜಳಜಸಖಂ ಪಶ್ಚಿಮಾಬ್ಧಿಯೊಳಿಱಿಯೆ, ನಾನಾಶಿವಾಲಯಾಂತರಂ

ಗಸಂಧ್ಯಾಸಮಯಸಮುದ್ಭೂತಮೃದುಮೃದಂಗಪಟಹಶಂಖಭೇರೀನಿನಾದ ಮುಂ ವಾರನಾರೀಸಂಗೀತನೃತ್ಯಚಟುಳತರರವಭರಿತಪುರವಳಯವಿಳಸಿತಬ ಹುರತ್ನರಚಿತಸಹಸ್ರವೀಧೀಪ್ರತಿನಿಳಯಂಗಳೊಳ್ ಪತಂಗನ ಕಿರಣಂಗಳಂ ಕಟ್ಟಿಲೆ ಸೆಱೆವಿಡಿದಂತೆ ಪೊತ್ತಿಸಿದ ದೀಪಿಕಾನಿಕಾಯಮುಂ ನಾಡೆ ಮೆಱೆಯೆ, ಕ ಡುಗಟ್ಟಿಲೆ ಕವಿತರ್ಪೊಗೆಳೊರ್ವ ಜಾರೆ ಮನೆಯವರ್ಗಂಜಿ ಮನದುತ್ಸವ ದಿಂ ಪುದಿದ ತಮಮುಂ ಪದಿರಿಂಪಾ ಡಿದಳದೆಂತೆಂದೊಡೆ—

ಅಳಿಯುಂ ಕತ್ತುರಿಯುಂ ಕೋ ।
ಕಿಳನಂ ಕಾಳಿಂದಿಯುಂ ವಿನೀಳಾಂಬುದಮುಂ ॥
ಬಳನನುಜನನುಱೆ ಪಾಡಿದ ।
ಳಳವಟ್ಟತಿಜಾರೆ ಧೀರೆ ರಜನೀಮುಖದೊಳ್ ॥ ೭೧

ಮತ್ತಮದಲ್ಲದೆ

ಪರಸಿದರಿದಿರ್ಗೊಂಡರಲಂ ।
ಕರಿಸಿದರಾದರಿಸಿದರ್ ಕರಂ ನುತಿಗೆಯ್ದರ್ ॥
ಬೆರಸಿದರೆಳಸಿದರಪ್ಪಿದ ।
ರೆರೆದರ್ ನಲಿನಲಿದು ಜಾರೆಯರ್ ಕಟ್ಟಿಲೆಯುಂ ॥ ೭೨

ಆಗಳಭಿಸಾರಿಕಾನಿಕಾಯದುತ್ಸವಂ ಪೆರ್ಚುವಂತೆ

ನಸುಗಟ್ಟಿಲೆಯುರೆಗಟ್ಟಿಲೆ ।
ಮುಸುಂಕುಗಟ್ಟಿಲೆ ಪೊದಟ್ಟಿ ಪೆರ್ಗಟ್ಟಿಲೆ ನಾ ॥
ಲ್ದೆಸೆಗಟ್ಟಿಲೆ ಪೊಸಗಟ್ಟಿಲೆ ।
ರಸೆಗಟ್ಟಿಲೆಯೆನಿಸಿ ಕೂಡೆ ತೀವಿತು ತಿಮಿರಂ ॥ ೭೩

ದಿವಸುಧೆಯುಬ್ಬಿಯನೋಱುವಿಂ ।
ತವೆ ಜನರಿಚ್ಛೆಯನೆ ಪಡೆಯಲೆಂದುಱೆ ಕಡೆಯಲ್ ॥
ಹವಣಿಸಿದ ವಿಷವನನುಕರಿ ।
ಸುವ ತೆಱದಿಂದುದಯಮುಱೊದು ತಳೆದುದು ತಮಮುಂ ॥ ೭೪

ಅಱಿಯೆಂ ಪಿರಿದಂ ಪೊಗಟಿಲ್ ।
ಪೆಱತೇಂ ಮುಚ್ಚಿದೊಡೆ ಮುಚ್ಚಿರಲ್ಕಲ್ಲದೆ ಕಣ್ ॥

ತೆಱೆದೊಡೆ ತೆಱೆದಂತಲ್ಲದೆ ।
ಮಱೆದಂತೆವೆಯಿಕ್ಕಲೀಯದಿಡಿದ ತಮಂಥಂ ॥ ೭೫

ಉಗುರಿಂದಂಟೆ ಬೆಱಂಟೆಯಂಜನಮದಕ್ಕುಂ ಚಾಕಮಂ ಕೀಱುತುಂ ।
ತೆಗೆದಾಚಿತ್ತ ದಿಸೆ ಕೇಳ ನೀಳಪಟಮಕ್ಕುಂ ಬಟ್ಟೆತಂ ಮಾಡಿ ಸು ॥
ತ್ತುಗಳೆತ್ತಲ್ಕಸಿತಾತಪತ್ರಮೆಂದದಕ್ಕುಂ ತಾನಿದೆಂಬಂತಿರೇ ।
ಜಗದೊಳ್ ಕಣ್ಗೆ ವಿಚಿತ್ರಮಾಗೆ ನೆರೆ ದಟ್ಟೈಸಿತ್ತನಿತ್ತಂ ತಮಂ ॥ ೭೬

ಇದು ಮಧುಕರಮಿದು ಮಲ್ಲಿಗೆ ।
ಯಿದು ಕೋಕಿಳನಿದುಮರಾಳಮಿದು ಮದಗಜಮಿಂ ॥
ತಿದು ಕಂಠೀರವಮಿದು ಕರಿ ।
ದಿದು ಬಿಳಿದೆಂದಱಿಯಬಾರದುರ್ವಿದ ತಮದೊಳ್ ॥ ೭೭

ಮನದೊಳಗಂ ಪೊಱಗಂ ತೆ ।
ಕ್ಕನೆ ತೀವಿದ ಮರ್ಬಿನೊಳಗೆ ಮನಸುಂ ನೆನಸುಂ ॥
ಕನಸುಂ ತಾನುಂ ಕಟ್ಟಲೆ ।
ಯೆನಿಸಿರ್ದುದು ತಮದ ಘನವನದನೇನೆಂಬೆಂ ॥ ೭೮

† ನೆಲಸಿ ನೆಲೆಗೊಂಡ ಪೆರ್ಗ ।
ತ್ತಲೆಯೊಳ್ ತೊಳತೊಳಗಿ ಬೆಳಗಿ ಮಿನಿಮಿನಿಸುತ್ತುಂ ॥
ಪಲವುಂ ದೀವಿಗೆಗಳ್ ಕ ।
ತ್ತಲೆ ಪೂತಂತೊಪ್ಪುತಿರ್ದುವಾಮನೆಮನೆಯೊಳ್ ॥ ೮೦

ಅಂತೊಪ್ಪುತ್ತಿರೆಯಿರೆ
ರಸೆಯಂ ನಭಸ್ಥಳಮನೆ ।
ಣ್ದೆಸೆಯಂ ದಟ್ಟೈಸುತಮರ್ದ ತಮದೊಳ್ ಜಾರ ॥
ಪ್ರಸರಂ ಪೊಱಮಟ್ಟುದು ಶಂ ।
ಕಿಸದೊಲ್ದಲ್ಲಲ್ಲಿ ಕುಟಿಲಪಥಸಮತಳದೊಳ್ ॥ ೮೧

---

† ಬತ್ತಂಬಿಸಿ ಪರ್ವಿದ ಪೆ ।
ರ್ಗತ್ತಲೆಯೊಳ್ ಕೂಡೆ ನೋಡೆ ಮಿನಿಮಿನಿಸುತ್ತುಂ ॥
ಸುತ್ತುಂ ಬೆಳಗಿದ ದೀವಿಗೆ ।
ಕತ್ತಲೆ ಪೂತಂತಿರೊಪ್ಪಿದುವು ಮನೆಮನೆಯೊಳ್ ॥ ೭೯
ಎಂದು ಹೆಚ್ಚುಪದ್ಯ.

ಬನವಿದೆ ಕಟ್ಟಿಲೆಯೊಳ್ ಸ ।
ವ್ಮುದದಿಂ ಪೊಱಮಟ್ಟ ಜಾರಮಿಥುನಾಳಿಗೆ ಕಂ ॥
ಡುದೆ ಬರವೆಳಸಿತೆ ಮನಮಿ ।
ರ್ದುದೆ ಮನೆ ಪಟ್ಟುದುದೆ ಪಾಸು ಮುಟ್ಟಿತೆ ಮರ್ಮಂ ॥ ೮೨

ದಾರಿಯೊಳಡುಕುಱೊಳೋಣಿಯೊ ।
ಳಾರವೆಗಳ ತಳದೊಳಂಗಡಿಗಳೊಳ್ ಮನೆಯೊಳ್ ॥
ಕೇರಿಯೊಳಾವಿಗೆಗಳೊಳಂ ।
ಬೇರೂಱಿತು ಜಾರರನುಭವಂ ಕಟ್ಟಿಲೆಯೊಳ್ ॥ ೮೩

ಅದೆಂತೆಂದೊಡೆ—

ತಾಗದ ಚುಂಬನಮುಱೆ ಸೊ ।
ಪ್ಪಾಗದ ಕರಘಾತಮಗಲದಿರ್ಪನುಭವದೊಳ್ ॥
ಸಾಗಿಸುವ ಸರಭಸಂ ಮಿಗೆ ।
ರಾಗಿಸುವ ಮನಂ ಮನೋಹರಂ ಜಾರೆಯರೊಳ್ ॥ ೮೪

ಆರೈವ ಮನಂ ಸುಖದೊಳ್ ।
ಪೂರೈಪ ಶರೀರಮುಸಿರದುಸಿರಿರ್ಪಡಕಂ ॥
ಸ್ಮೇರಾಸ್ಯಂ ಮೊಳೆನುಡಿ ಗತ ।
ಸಾರಂಭಂ ಸುರತಸಂಭ್ರಮಂ ಜಾರೆಯರಾ ॥ ೮೫

ಪುಳಕಿಪ ತನು ಪೊಣ್ಮುವ ಸುಯಿ ।
ಬಳೆವ ರತಂ ಬೆಮರ್ವ ಗಂಡಮಿಱುವಶ್ರು ಸುಖಂ ॥
ದಳೆವ ಮನಂ ಕಂಪಿಪ ಕೆಯ್ ।
ಕಳವಳಿಸುವ ಗಳಮನೂನಮುಸತೀಕುಳದೊಳ್ ॥ ೮೬

ಕಲ್ಲೆನ್ನದೆ ಮುಳ್ಳೆನ್ನದೆ ।
ಸಲ್ಲಲಿತಾಸ್ಥಾನಮೆನ್ನದೆಲ್ಲಿರ್ದೆಡೆಯೊಳ್ ॥
ಪಲ್ಲವಿಸಿತು ಪೂತುದು ಫಲ ।
ವಲ್ಲರಿಯುಂ ಪಡೆದುದರರೆ ಜಾರರ ಸುರತಂ ॥ ೮೭

ಬಬ್ಬುಳಿಸಿದ ಸಮಸುಖದೊಳ ।
ಗುಬ್ಬಿಸುತಂತೊಲಿದು ನಲಿದು ಪಲತೆಱದಿಂ ನಿಂ ॥

ದುರ್ಬುರ್ತೆ ಕೊರ್ಬುರ್ತೆ ಪರ್ಬುರ್ತೆ ।
ಗರ್ಬಿಸಿತಭಿಸಾರಿಕಾನಿಕಾಯಂ ನಿಶಿಯೊಳ್ ॥ ೮೮

ಮತ್ತಮದಲ್ಲದೆ

ಇಳೆಯನಸುರ್ಬಿ ಮುಚ್ಚಿ ಮುಸುಕಿರ್ದ ತಮಂಧಮನಟ್ಟಿಯಿಂದೆ ಕಂ।
ದಳಿಕುಳಮೆಂದು ಕಾಳಿಮತರಂಗಿಣಿಯೆಂದು ವಿನೀಳಮೇಘಮೆಂ ॥
ದಳಕದೊಳೊತ್ತುತುಂ ಸಲಿಲಕೇಳಿಯುಮಂ ನವಿಲಾಟಬೇಂಟೆಯುಂ ।
ತಳೆದಭಿಸಾರಿಕಾನಿಕರವೊಪ್ಪಿದುದಾತ್ತರತಾಂತಲೀಲೆಯೊಳ್ ॥ ೮೯

ಅಂತೊಪ್ಪುತ್ತಿರ್ಪ ಸಮಯದೊಳ್

ಗಗನಂ ಪೂತುದೊ ತಮಮುಂ ।
ಮಿಗೆ ನೋಡುವ ಭರದೊಳಂಬರಂ ತಾನಂತ ॥
ಕ್ಷಿಗಳಂ ಪಸೆದುದೊ ಪೇಳೆನೆ ।
ಸೊಗಯಿಸಿದುವು ತೊಳಗಿ ಬೆಳಗಿ ತಾರಗೆ ನಭದೊಳ್ ॥ ೯೦

ದಿನಕರನೆಸೆವಾಕಾಶಾ ।
ವನಿಯೊಳ್ ದಶಶತಕರಾನುಕೂಲಂ ಮನದೊಂ॥
ದನುನಯದಿಂ ಬಿತ್ತಿದ ಬೆಳ ।
ಗಿನ ಬೀಜಾಂಕುರಮೆನಿಸಿದುವು ತಾರಗೆಗಳ್ ॥ ೯೧

ಅಂಬುಜನಿಜಸಖನಸ್ತಮ ।
ಯಂಬರಮಂಬರದ ನಡುವೆ ಬಹುತರದಿಂ ನೆ ॥
ಯ್ದಂಬರದೊಳ್ ಮೆಯ್ಗೊಳಿಸಿದ ।
ಚುಂಬಿತರತ್ನಂಗಳಂತೆ ತಾರಗೆ ಮೆರೆಗುಂ ॥ ೯೨

ನೆಟ್ಟನೆ ಬಂದಪನೆನ್ನಯ ।
ನಿಟ್ಟೆಯ ನಿಧಿ ಚಂದ್ರನೆಂದು ರಾತ್ರಿವಧು ತಾಂ ॥
ಕಟ್ಟಿದ ಬಹುರತ್ನದ ಮೇ ।
ಲ್ಕಟ್ಟೆನಿಸಿದುದಂಬರಂ ಸುತಾರಾಗಣದಿಂ ॥ ೯೩

ಅಂದಂಬರಗಂಗೆಯು ಮುಳಿ ।
ಸಿಂದಂ ಕಾಳಿಂದಿ ಕಲಕೆ ಕರ್ಪಾಗಲ್ಕೆ ॥

ಲ್ಲೊಂದಿದ ಮುಕ್ತಾವಳಿಯೆಂ ।
ಬಂದದಿ ತಾರಗೆಗಳೆಸೆದುವಾನಭದೆಡೆಯೊಳ್ ॥ ೯೪

ಅಂತೆಸೆವ ನಕ್ಷತ್ರೋದಯಸಮನಂತರದೊಳ್

ಇದು ಸಂಕ್ರಂದನದಿಗ್ವಧೂನಿಟಲಸಿಂದೂರಾಂಶುವೋ ನೋಡು ನೋ ।
ಡಿದು ಪುಷ್ಪಾಯುಧಪದ್ಮರಾಗಮುಕುರಪ್ರದ್ಯೋತವೋ ಪೇಳ್ವೊಡಿಂ ॥
ತಿದು ವಿಸ್ತಾರಿತಕಾಮಹೋಮಹುತಭುಕ್ಪ್ರಜ್ವಾಲೆಯೋ ಎಂಬ ಸಂ ।
ಪದಮಂ ಬೀಱಿದುದಿಂದ್ರದಿಗ್ವಿವರದೊಳ್ ಚಂದ್ರದ್ಯುತಿಪ್ರಾಭವಂ ॥ ೯೫

ಆಗಳ್

ಕರಮೆಸೆದತ್ತು ಕೌಮುದಿಯ ಬಿತ್ತು ಚಕೋರಿಯ ತುತ್ತು ನೀರಜೋ ।
ತ್ಕರದ ವಿಪತ್ತು ತಾರೆಗಳ ತತ್ತು ಸುಧಾಂಬುಧಿಯೊತ್ತು ಮತ್ತಮಂ ॥
ಬರದ ಪುಳಿಂದಿ ತಾಳ್ದಿಸೆವ ಮೂಗಿನ ಮುತ್ತು ಮಗುಳ್ದು ನೋಡಲ ।
ಚ್ಚರಿಯೆನಿಸಿತ್ತು ಮೂಡದೆಸೆಯಿಂದೊಗೆತರ್ಪ ಹಿಮಾಂಶುಮಂಡಲಂ ॥ ೯೬

ಮುದದಿಂ ತಂದಿರ್ಕೆ ಪೂರ್ವಾಂಗನೆ ಗಿರಿಶಿರದೊಳ್ ಪೀಠಮಂ ಸತ್ಪ್ರಭಾ ಸಂ । ಪದಮಂ ಕೈಗೊಟ್ಟು ಚೈತ್ರಂ ನಡೆತರೆ ಮಗನಂ ಪುಷ್ಪಬಾಣಂಗ ಳಂ ಪೂ ॥ ಡಿದ ಬಿಲ್ಲಂ ಪೊತ್ತು ಪಿಂದಂ ಬರೆ ನವಕುಮುದಾಮೋದಮಾ ಧುರ್ಯದಿಂ ಷ । ಟ್ಪದಗಾನಂಬೊಣ್ಮಿಸುತ್ತಿಂ ಶಶಿಯುದಯದೊಳೊಪ್ಪಿತ್ತು ರಾಜೋಪಚಾರಂ ॥ ೯೭

ಅಂತೊಪ್ಪುತ್ತಿರೆ

ವಿದಳತ್ಕೈರವರಾಜಿ ರಾಜಬಲದಿಂ ಸಂತೋಷಮಂ ಮುಟ್ಟೆ ಸ ।
ದ್ಮದನಂ ತಾವರೆಯೆತ್ತಿ ಕಟ್ಟೆ ತಮಮಂ ಶೀತಾಂಶುವೆಬ್ಬಿಟ್ಟೆ ಪೆ ॥
ರ್ಚಿದಗುರ್ವಿಂ ವಿರಹಾಳಿಯಂ ಕುಸುಮಬಾಣಂ ಕಾಯ್ದು ಬೆನ್ನಟ್ಟೆ ಮೆ ।
ಟ್ಟಿದನಿಂದ್ರಾಚಲಚೂಡಮಂ ಕಿರಣವೀಧೀಸಾಂದ್ರಮಂ ಚಂದ್ರಮಂ ॥ ೯೮

ಮತ್ತಮದಲ್ಲದೆ

ಅದು ಪೊಸಪವಳದ ಬಂಧೂ ।
ಕದ ಕೆಂದಾವರೆಯ ದಾಸಳದ ಪೂವಿನ ವ ॥
ರ್ಣದ ಸಂಪದದಿಂ ಮುದದಿಂ ।
ಮುದದಿಂದೊಪ್ಪಿತ್ತು ಚಂದ್ರಬಿಂಬವಿಡಂಬಂ ॥ ೯೯

ಇದು ವಿರಹವಾರ್ಧಿಮಧ್ಯ ।
ಪ್ರದೇಶದಿಂದೊಗೆದ ರಾಗವಡಬಾನಳಪಿಂ ॥
ಡದವೋಲ್ ವಿರಹಿಗೆ ತೋಱಿದು ।
ದುದಯಾದ್ರಿಯ ಮೇಲೆ ಮೆಱೆವ ಹಿಮಕರಬಿಂಬಂ ॥ ೧೦೦

ಅನಂತರಂ

ಅದಿರದೆ ವಿರಹಿಗಳನಿಸಲ್ ।
ಮುದದಿಂ ಖರ್ಪರ್ಗಳೊಲ್ದು ಮಧು ಮದನಂಗೆ ॥
ತ್ತಿದ ಮುತ್ತಿನ ಸತ್ತಿಗೆಯೆನಿ ।
ಸಿದುದಿಂದ್ರಾಶಾನಿವೇಶದೊಳ್ ಶಶಿಬಿಂಬಂ ॥ ೧೦೧

ಮುಂದೆ ತಮಂಧಮಿಟ್ಟಣಿಸಿ ರಾಹುವಿನಂತಿರೆ ಪೂರ್ವವೈರಮಂ ।
ಮುಂದುಗೊಳುತ್ತೆ ಯೆನ್ನನಿದು ಮಾಡುವ ಮಾರ್ಕೆಯನಿಂದು ಮಾರ್ಕೆನಾ ॥
ನೆಂದು ತದೀಯರೂಪನುಱೆ ನುಂಗೆ ತನುಚ್ಛವಿಯಿಂದೆ ತೋಱಿತೆಂ ।
ಬಂದದೊಳೊಪ್ಪುತಿರ್ದುದು ನಿಶಾಕರಮಂಡಲದಲ್ಲಿ ಲಾಂಛನಂ ॥ ೧೦೨

ಬಡವುಟ್ಟಿದ ಬಿಸಮಿದನಾಂ ।
ಕಡೆನೂಂಕಲದೇಕೆ ಕೂಡಿ ನಡೆವೆನೆನುತ್ತಂ ॥
ದೊಡಲೊಳಗಿಂಬಿಟ್ಟೆಯ್ದುವ ।
ಪಡಿಯೆನಲೊಪ್ಪಿದುದು ಲಾಂಛನಾಂಕಿತಚಂದ್ರಂ ॥ ೧೦೩

ಇಂತಾದ ಚಂದ್ರೋದಯಮಂ ಕಂಡು ಭೋಗಸಹಾಯರಪ್ಪ ನಾಗರಿಕ ವಿಟವಿದೂಷಕಪೀಠಮರ್ದಕರ್ ಭರದಿಂ ಪರಿತಂದು ಆಸ್ಥಾನದೊಳಿರ್ದ ಗೋತ್ರರಾಜಂಗೆ ಮೆಯ್ಯಿಕ್ಕಿ ನಿಂದು ಕೆಯ್ಯಂ ಮುಗಿದು– ದೇವಾ! ಪತಂಗಂ ಪಶ್ಚಿಮಾಬ್ಧಿಯೊಳೞಿದಂ; ಸರಸಿರುಹಂ ಸುರುಳ್ದುವು; ಕುಮುದಕುಲಂ ರಮಣೀಯಮಾದುವು; ಕೋಕಂಗಳಗಲ್ದು ಶೋಕಮನೆಯ್ದಿದುವು; ಪಕ್ಕಿಗಳ್ ಪಕ್ಕಗೆ ಸಾರ್ದುವು; ಮೃಗಂಗಳ್ ನಗಮನೊತ್ತುಗೊಂಡುವು; ಇಳೆಯ ಜನಂ ನಿಳಯಮಂ ಪೊಕ್ಕುದು; ಕತ್ತಲೆಯೊತ್ತರಿಸಿತ್ತು; ಜಾರೆಯರ್ ಹಾರೈಸಿದರ್; ಗಗನದೊಳ್ ಭಗಣಂ ನೆಗೆದುದು; ಚಂದ್ರಂ ಶೈಳೇಂದ್ರಮನೇಱಿದಂ; ಬೆಳ್ದಿಂಗಳ್ ಬೀದಿನರಿದುದು; ಅಸತಿಯರ್ ದೆಸೆಗೆಟ್ಟೋಡಿದರ್; ಚಕೋರಮುಖಂ ವಿಕಸಿತಮಾದುದು; ಮನ್ಮಥಂ ನನೆಗಣೆಯಂ ಹೂಡಿದಂ;

ವಿರಹಿಗಳ್ ವಿರತರಾದರ್. ದೇವಾ! ಇಂದಿನ ದಿನಂ ಚಂದ್ರನ ಬೆಳತಿಗೆಬೆಳ್ದಿಂಗಳೊಳ್ ಪುರವೀಧಿಯ ವಿಳಾಸಮಂ ಕೈಮಿಕ್ಕು ನೋಡಿ ರಾತ್ರಿವಿದಾಹಮಂ ಮಾಳ್ಪುದೆಂದು ಬಿನ್ನೈಸಿದ ಮನ್ನಣೆಯ ರಸಿಕರ್ಗೆ ಪಸಾಯನಮಂ ನಿತ್ತೋಲಗಮಂ ಪರೆಯಲ್ವೇಳ್ದು ನಾರದನೊಡಗೂಡಿ ನಗರಾಜಂ ನಿರ್ಮಳೀಕೃತಕರಚರಣನುಂ, ಭಸಿತಾವಯವನುಂ, ರುದ್ರಾಕ್ಷಮಾಲಾಲಂಕೃತನುಂ, ಶಿವಲಿಂಗೇಕ್ಷಣನಿತ್ಯನಿಯಮಸಂಪನ್ನನುಂ, ಪ್ರಸಾದಭರಿತಶರೀರನುಂ, ಸುಗಂಧಮಯತಾಂಬೂಲಮುಖನುಂ, ಕುಸುಮಾವಳೀಪರಿವೃತಕಬರೀಭರನುಂ, ಯಕ್ಷಕರ್ದಮಕಕ್ಷಪುಟನುಂ, ನವ್ಯವಸ್ತ್ರಪರಿವೃತನುಂ, ದಿವ್ಯಾಭರಣಸರ್ವಾಂಗನುಮಾಗಿ ದಕ್ಷಿಣಾನುಕೂಲಧೃಷ್ಟಶಠನಾಯಕರೆಂಬ ರಾಜಪುತ್ರರಂ ಕೂಡಿಕೊಂಡು ಸಕಳಸುಕುಮಾರಭೋಗನಿಯೋಗನಿಕರಂ ಪಿಂತೆ ಬರೆ ನಾರದಮುನೀಂದ್ರಸಹಿತಂ ಗಿರಿರಾಜಂ ತನ್ನರಮನೆಯಂ ಪೊಱಮಟ್ಟು ರಾಜವೀಧಿಯೊಳ್ ನಿಂದು ಪೂರ್ವದಿಶಾಮುಖಾವಲೋಕನನಾಗಿ ಕಟ್ಟಿದಿರೊಳಟ್ಟಣಿಸಿದ ಬೆಳಗಿಂ ದಟ್ಟೈಸಿ ತೋರ್ಪ ಚಂದ್ರಬಿಂಬಮಂ ನೋಡುತ್ತಾಗಳ್—

ಸರಸನೆನಿಸಿರ್ದ ಸಖನಾ ।
ಗರಿಕಂ ಕೆಲಸಾರ್ದು ನಿಂದು ಕೆಯ್ಮುಗಿಯುತ್ತುಂ ॥
ಪರಿಪೂರ್ಣ ಚಂದ್ರಮಂಡಲ ।
ದಿರವಂ ಕಂಡಾಗಳಚಲಪತಿಗಿಂತೆಂದಂ ॥ ೧೦೪

ಇಂದು ಸುಧಾಂಶುರಾಜನತಿಶೀತಳಶೀಲನನೂನದಾನಿಯೇ ।
ಬ್ಬಿಂದೊಡೆ ಕೈರವಕ್ಕೆ ಶಶಿಕಾಂತದ ಕಲ್ಗೆ ಚಕೋರಮಾಲೆಗಾ ॥
ನಂದಮದಾಯ್ತು ಪಂಕಜಕೆ ಚಕ್ರಯುಗಕ್ಕಸತೀಕುಲಕ್ಕೆ ಪೋ ।
ದಂದುಗಮಾಯ್ತು ಸರ್ವಜನಸಮ್ಮತನಾವನಗಾಧಿನಾಯಕಾ ॥ ೧೦೫

ಮತ್ತಮದಲ್ಲದೆ

ಕಮಲಂಗಳೊಡನೆ ಧಾತ್ರೀ ।
ಕುಮುದಂ ಮುಗಿದಿರ್ದುವರಸ ಕುಮುದದೊಡನೆ ತ ॥
ತ್ಕಮಲಂ ಮಿಕ್ಕಲರ್ದುದು ಚಂ ।
ದ್ರಮನುದಯದೊಳೆಂದೊಡಿಳೆಗದೇಂ ಕೌತುಕಮೋ ॥ ೧೦೬

ಮತ್ತಮದಲ್ಲದೆ, ದೇವಾ ಪರ್ಬಿದ ಬೆಳ್ದಿಂಗಳಗುರ್ಬನೇನಂ ಬಣ್ಣಿಪೆಂ!

ಮುನ್ನಂ ಪಯೋಧಿ ಪಡೆದೊಡೆ ।
ತನ್ನಂ ಶಶಿ ಪಡೆದನಾಪಯೋಧಿಯನೆಂಬಂ ॥
ತುನ್ನತಿವೆತ್ತುದು ರಾಜೋ ।
ತ್ಪನ್ನಮಭಿನ್ನಂ ಪ್ರಸನ್ನವೊಪ್ಪುವ ಜೊನ್ನಂ ॥ ೧೦೭

ಹರನುದ್ಧೂಳಿಸಿದತ್ಯನೂನಭಸಿತಪ್ರದ್ಯೋತವೋ ಚಂದ್ರಶೇ ।
ಖರನಾನಂದಮಯಾಟ್ಟಹಾಸರುಚಿಯೋ ಸರ್ವೇಶಸತ್ಕೀರ್ತಿಯೋ ॥
ಪರವೋತ್ತುಂಗನುರುನ್ನದೀಪ್ರಬಳಗೌರಚ್ಛಾಯೆ ಭೂಭಾಗದೊಳ್ ।
ಪರೆದತ್ತೋ ಎನೆ ಪರ್ವಿತುರ್ವಿಯನಗುರ್ವಿಂ ಸಾಂದ್ರಚಂದ್ರಾತಪಂ ॥ ೧೦೮

ಮುಡಿವೊಡೆ ಮಲ್ಲಿಕಾಪ್ರತತಿ ಪೂಸುವೊಡುತ್ತಮನನ್ಯಚಂದನಂ ।
ತುಡುವೊಡೆ ಮೌಕ್ತಿಕಾಭರಣಮೀಸುವೊಡಂತಮೃತಾಬ್ಧಿ ಪೊರ್ದಿಕೊ ॥
ಳ್ವೊಡೆ ಧವಳೋತ್ತರೀಯಮೊಸೆದಿಂಟುವೊಡಾನವದುಗ್ಧವೊಲ್ದನೋ ।
ಟ್ವೊಡೆ ರಜತಾದ್ರಿಯೆಂದೆನಿಸಿ ತೋಱಿತು ಮಾಱಿದ ಚಂದ್ರಿಕೋಜ್ಜ್ವಳಂ ॥

ಸಕಳಸನಂ ಕಾಮುದಿಯಿಂ ।
ದೆ ಕಡೆದು ಕಂಡರಿಸಿತೆಂಬ ನುಡಿ ಚಿತ್ರಮೆ ಕಾ ॥
ತುಕಮುರಸ ಚಂದ್ರಮಂ ಚಂ ।
ದ್ರಿಕೆ ಕವಿದ ಕಳಂಕಚಂದ್ರನಂತೆಸೆದಿರ್ದಂ ॥ ೧೧೦

ಶಿವಕೀರ್ತಿ ರಸದೆ ಬೊಮ್ಮಂ ।
ತವೆ ತೊಳೆದನೊ ಜಗಮನಮೃತವಾರ್ಧಿಯ ಬೆಳಗಿಂ ॥
ಧವಳಿಸಿದನೊ ಪೇಱೆನೆ ಭೂ ।
ಭವನಮನೆಡೆಗೊಂಡುದಚ್ಚ ಪೊಸವೆಳ್ದಿಂಗಳ್ ॥ ೧೧೧

ಇಂತೊಪ್ಪುವ ಸಾಂದ್ರಚಂದ್ರಿಕಾಸಂಪದಮಂ ನಗೇಶ್ವರಂಗೆ ನಾಗರಿಕಂ ನಲಿನಲಿದು ತೋಱುತ್ತುಂ ಬರೆವರೆ ಪಟ್ಟಣದ ದಟ್ಟೈಸಿದ ಪಲವುಂ ವೀಧಿಗಳ ವಿಚಿತ್ರವಿಭ್ರಮಮನಾಶೈಲಪತಿಯಾಲೋಕಿಸುತುಂ ಕೇಳುತುಂ ಬಾಱಿತುಂ ಕೇಳೀವನಮಂ ಪುಗುತಪ್ಪಾಗಳ್ -

ಸುಗಿದಿವೆ ಕಮಳಂ ಕುಮುದಂ ।
ನಗುತಿವೆ ಕೋಕದ್ವಯಂ ರತೀಶ್ವರನೆಸುವಿಂ ॥

ದುಗಿಬಗಿಯಾಗುತ್ತಿವೆ ವಿಂಗೆ ।
ಬಗೆವೆರ್ಚುತ್ತಿವೆ ಸರಾಗಪೂರಚಕೋರಂ ॥ ೧೧೨

ಚೂತವನಪ್ಪಿ ಪುಷ್ಪವತಿಯಾದುದು ಮಲ್ಲಿಗೆ ಶೀತಕೃತ್ಕರ ।
ವ್ರಾತಮನಪ್ಪಿಯೊಪ್ಪೆ ಕರಗಿತ್ತು ಹಿಮೋಪಲಮೋತು ತುಂಬಿಯುಂ ॥
ಪ್ರೀತಿಯೊಳಪ್ಪಿ ಗರ್ಭಿಣಿಯುದಾಯ್ತು ಸರೋರುಹಮುತ್ಪಲಂ ಪ್ರಸೂ ।
ತಾತುರೆಯಾಗಿ ಪೆತ್ತುದಳಿಯಂ ನವಚಂದ್ರಿಕೆಯೊಳ್ ನಗೇಶ್ವರಾ ॥ ೧೧೩

ಮತ್ತಮದಲ್ಲದೆ

ಎಳದಳಿರೊಳರಲೊಳಾಮ್ರದ ।
ನೆಳಲೊಳ್ ಪುಳಿನಂಗಳೊಳಗೆ ಶಶಿಕಾಂತಶಿಳಾ ॥
ತಳದೊಳ್ ಕೊಳದೊಳ್ ವನದೊಳ್ ।
ತಳರದ ವಿರಹಿಗಳ ವೀಧಿಯಿದೆ ಗಿರಿನಾಥಾ ॥ ೧೧೪

ಬತ್ತುವ ಪದ್ಮಪತ್ರಕದಳೀದಳಸಂಕುಳಮೆಯ್ದೆ ಬೆಂದು ಸೀ ।
ಯುತ್ತಿವೆ ದೂರದಿಂದೆ ಸಖಿಯರ್ ತವೆ ಚೆಲ್ಲುವ ಶೀತವಾರಿಯು ॥
ರ್ಕುತ್ತಿವೆ ಬೀಸುತಿರ್ಪ ಕುಸುಮೋಜ್ಜ್ವಳವೀಜನವೃಂದಮೋಪ್ರೊ ! ಪೊ।
ತ್ತುತ್ತಿವೆ ತನ್ವಿಯೋ ವಿರಹವಹ್ನಿಗೆ ಪುಟ್ಟಿದದೊಂದು ಮೂರ್ತಿಯೋ ॥

ಸಂದಣಿಸಿ ಮಾಣದಾಳೀ ।
ವೃಂದಂ ಶಿಶಿರೋಪಚಾರಮುಂ ಲಲನೆಗೆ ಮಾ ॥
ಲ್ಪಿಂದಂ ಘೃತದಿಂ ಕಿರ್ಚ್ಚಂ ।
ನಂದಿಪ ತೆಱನಾಗಿ ತೋಱುತಿದೆ ನೋಡರಸಾ ॥ ೧೧೫

ತಾಳ್ದಾ ವಿರಹದೊಳೀಕೆಗೆ ।
ಬೆಳ್ದಿಂಗಳ್ ಬಿಳಿಯ ಕಿಚ್ಚು ಸಸಿ ಬಿಸಿ ಕಾಮಂ ।
ತೂಳ್ದುವ ದಾವಂ ಚೈತ್ರಂ ।
ಸೀಬ್ಬಿಕ್ಕುವ ಕುಂಭಿ ಕದಳಿ ಕದಳೀಘಾತಂ ॥ ೧೧೬

ಎಂದಿಂತು ವಿರಹಾತಿಶಯಮುಂ ಬಿನ್ನವಿಸುತ್ತುಂ ಬರೆವರೆ ಮುಂದೊಂಬೆಡೆಯೊಳ್

ಮಿಗೆ ಸೊಕುಮಾರ್ಯ ನವವ ।
ಸ್ತುಗಳಂ ಪೆಸರ್ಗೊಂಡೊಡುಱಿಯುಳಿವಳ್ನುತುಂ ಸು ॥

ತ್ತು ಗುವುಟಿಲುತ್ತುಂ ಸಂಜ್ಞೋ ।
ಕ್ತಿಗಳಿಂ ತೋಱುತ್ತುಮಿರ್ದುದಬಳಾನೀಕಂ ॥ ೧೧೮

ಇದೆ ಪಿಕನೆಬ್ಬಿ ಹಂಸೆ ಬರುತಿರ್ದುದೆ ನೋಂಕು ಮಧುವ್ರತಾಳಿಯುಂ ।
ದಿದೆಯಿಡು ಚಂಪಕಪ್ರಸವದಿಂ ಗಿಳಿವಿಂಡಿದೆ ಸೋವು ಮಾರುತಂ ॥
ಮುದಮುಖದಿಂದೆ ತೀಡುತಿದೆಯೊಡ್ಡು ಸೆಱಂಗನೆನುತ್ತೆ ತಮ್ಮ ಹ ।
ಸ್ತದ ನಿಜಸಂಜ್ಞೆಯಿಂ ಸುದತಿಯರ್ ನುಡಿದರ್ ಶಿಶಿರೋಪಚಾರದೊಳ್ ॥ ೧೧೯

ಮತ್ತಮೊಂದೆಡೆಯೊಳೊರ್ವ ತರುಣಿಗತ್ಯಧಿಕವಿರಹತಾಪಂ ಬಳಗಂ ಪೊ
ಱಗಂ ತೆಕ್ಕನೆ ತೀವೆ ತಳತಳಿಸಿ ಕಾಯ್ದು ಘುಱಿಘುಱಿಸುವಯಃಪಿಂಡಮೆಂ
ದು ಶಶಿಮಂಡಲಮಂ ನೋಡಲಂಜಿ ಕಣ್ಮುಚ್ಚಿ ಬೆದಱುತ್ತುಂ, ಬಿಸಿಯ ಬೆಳ
ಗೆಂದು ಬೆಳ್ದಿಂಗಳ ಸೋಂಕಿಂಗೆ ಮೆಯ್ದೆಗೆದು ಸುಗಿಯುತ್ತುಂ, ಬಾಳ ಬಾ
ಯ್ದಾರೆಯ ಸೋಂಕೆಂದು ಕದಳೀದಳಸ್ಪರ್ಶನಕ್ಕೆ ದರ್ಪಂಗೆಟ್ಟೊಪ್ಪಂಗುಂ
ದುತ್ತುಂ, ವಸಂತನೆಂಬ ಕಮ್ಮಱಂ ಶಶಿಬಿಂಬದ ಪೊಸಸಾಣೆಯೊಳೊತ್ತಿ ಮ
ಸೆವ ಕಾಮದೇವನ ಕೂರಲಗಿನ ದನಿಯೆಂದು ಕೋಕಿಲಧ್ವನಿಗಾಕಂಪನಂಗೊ
ಳುತ್ತುಂ, ಮಕರಧ್ವಜವೇತ್ರಧರಮುಖಜನಿತಮುಖರಗರ್ಜನಾರವಮೆಂದು
ಚಪ್ಪರಿಪ ಗಿಳಿಗಳ ಬಳಗಕ್ಕೆ ಧರೆಗಿೞಿಯುತ್ತುಂ, ಬಿಡದಿಸುವ ಕುಸುಮ
ಕೋದಂಡಚಂಡಪ್ರಸವಬಾಣಭೀಂಕಾರಘೋರಧ್ವನಿಯೆಂದುಱೆ ಝುಂಕರಿ
ಸುವ ತುಂಬಿಗಳ ಝೇಂಕಾರಕ್ಕೆ ಭೋಂಕನೆ ನಡುಗಿ ಶಂಕಿಸುತ್ತುಂ, ಚೈತ್ರ
ರಾಜತೇಜಃಪ್ರತಾಪದುರಿಯು ಹಬಿವಿಗೆಯ ಹೊಯ್ಲೆಂದು ಬೀಸುವ ಪೊಂಬಾ
ಳೆಯ ಚಾಮರದೆಲರ್ಗೆ ಕೊಱಗಿ ಕಳೆಗುಂದುತುಂ, ಸಖೀಜನಂ ಕೈಗೊಟ್ಟೆ
ತಂದು ಕೊಳನಂ ಪುಗಿಸೆ ಮೆಯ್ಯ ಬೆಂಕಿಯಿಂ ಚುಯ್ಯೆಂದು ನೊರೆಗಟ್ಟಿ ಬಿ
ಸಿಯ ತೆರೆ ತಾನುರ್ಚಿಟ್ಟಿ ಸೆಕೆಯುಸಿರ್ ಭುಗಿಲನೊಗೆದು ಕಾದ ನೀರ್ ಕಾಯ
ಮಂ ಸುಡೆ ಘೞಿಲನೆ ಪೊಱಮಟ್ಟು ಕೆಳದಿಯರಂ ನೆಮ್ಮಿ ಹಮ್ಮದಂಬೋಗು
ತ್ತುಂ, ಕಾಮಂಗೆ ಕನಲ್ದು, ವಸಂತಂಗಟಿಲ್ದು, ಎಳೆಲತೆಗೆ ಬಟಿಲ್ದು, ಪಲ್ಲವ
ಕ್ಕೆ ಕಟಿಲ್ದು, ಕುಸುಮಕುಲಕ್ಕೆ ಬಸಮಱಿದು, ಮಂದಾನಿಳಂಗೆ ಮದವುಡಿಗಿ,
ಕಾಮನ ಕಾರಾಗಾರದೊಳಿರ್ಪಂತೆ ಕೇಳೀವನದೊಳಿರ್ಪ ಬಾಲಕಿಗೆ ಚಂದ್ರ
ನ ದಾೞಿ, ಅಳಿಗಳ ದಟಿವುಟಿಂ, ಬಸಂತನ ಬಂದಿ, ಬಾಲಚಕೋರದ ಭಯಂ,
ಮಲಯಾನಿಳನ ಗಾಸಿ, ಶಿಶಿರೋಪಚಾರದ ದಂಡಣೆ ಅಖಂಡಿತಮಾಗೆ

ಕೊರಗಿ ಕರಗಿ ಕಂದಿ ಕುಂದಿ ಕೋಡಿ ಬಾಡಿ ಸುರುಳ್ದುರುಳ್ದು ತೆರಳ್ದು ಬಳಗಾಱಿ ಬಿಸುಸೇೞ್ ಕಳೆಗುಂದಿಯಾಸೆಯಱತು ನೋಟಂ ಬಱತು ವಿರಹಾಗ್ನಿಯೆತ್ತಿ ಮನಂ ಪೊತ್ತಿ ಬುದ್ಧಿಕವರ್ದು ಅಹಂಕಾರಂ ಹೊಗೆದು ಚಿತ್ತಂ ಬೆಂದು ಹರಣಮುರಿದು ಹಂಬೈಸಿ ಕಣ್ಮುಚ್ಚಿ ವಿರಹದ ಕರುವಿನಂತೆ, ಕರುಣದ ಹಾಹೆಯಂತೆ, ದೈನ್ಯದ ಸೀಮೆಯಂತೆ, ಕಾರ್ಪಣ್ಯದ ನೆಲೆಯಂತೆ, ವಿಲಾಸದ ವಿರತೆ, ವಿಭ್ರಮದಭ್ರಚ್ಛಾಯೆ, ಲಾವಣ್ಯದ ಬಂಜೆ, ಭೋಗದ ವಿಯೋಗಿಯೆನಿಸಿರ್ದ ತರುಣಿಯರ ವಿರಹಾತಿಶಯಮಂ ಗಿರಿರಾಜಂ ಕಂಡು ಕರುಣಿಸಿ ನೋಡಿ ಕೌತುಕಮನಾಳುತ್ತಾ ವನದೊಳ್ ಬೇಯುತ್ತುಮಿರ್ಪ ವಿರಹಿಗಳ್ಗವರವರ ನಲ್ಲರನಲ್ಲಲ್ಲಿ ತಂದು ಸಲ್ಲೀಲೆಯಿಂ ಕೂಡುವುದೆಂದು ಚರರಂ ಪರಿಕಲ್ಪಿಸುತ್ತುಂ ತಿರಿಗಿ ನಡೆತಂದು ಪಣ್ಯಾಂಗನಾವೀಧಿಯಂ ಪುಗುತಮರ್ಗಳ್

ಯುವತೀಸಂತಾನನಾನಾಚಲದಳಕಲಸಲ್ಲಾಸ್ಯಲೀಲಾಪ್ರಬಂಧಂ ।
ವಿವಿಧಾಗಾರಾಂಗಣಪ್ರಸ್ಫುರಿತಕೃತಕಕಾಸಾರಪಾನೀಯಭಂಗೋ ॥
ದ್ಭವಬಿಂದುವ್ರಾತಶೀತಾವರಣನೊಲವಿನಿಂ ತೀಡಿದಂ ಸ್ತ್ರೀಕುಲೋದ್ಯ ।
ನ್ನವಕಸ್ತೂರೀಹಿಮಪ್ರೋನ್ಮಲಯಜಘುಸೃಣಾಮೋದಭಾರಂ ಸಮೀರಂ ॥

ಅಂತು ತೀಡುವ ಮಂದಾನಿಳಂಗೆ ಮೆಯ್ಯಾಂತು ಬರೆವರೆ

ಸಕಳನಿಕೇತನಂಗಳೊಳೆ ದರ್ಪಕನುನ್ನತಿ ದರ್ಪಕಾಜ್ಞೆ ದ ।
ರ್ಪಕನ ಕಥಾಳಿ ದರ್ಪಕನ ವರ್ಣನೆ ದರ್ಪಕನ ಪ್ರಶಸ್ತಿ ದ ॥
ರ್ಪಕನ ವಿಳಾಸವಿಭ್ರಮತೆ ದರ್ಪಕನುಜ್ಜ್ವಳತೇಜದೇೞ್ಗೆ ದ ।
ರ್ಪಕನ ಸುಕೀರ್ತಿ ದರ್ಪಕನ ದಂಡಣೆ ದರ್ಪಕನಾಣೆ ಸುತ್ತಲುಂ ॥ ೧೬೧

ರತಿಯ ವಿಲಾಸದಿಂ ರತಿಯ ವಿಭ್ರಮದಿಂ ರತಿಯುರ್ಬ್ಬನಾಳಿಯಿಂ ।
ರತಿಯುತಿತೇಜದಿಂ ರತಿಯ ನೋಂಪಿಗಳಿಂ ರತಿಯಾಸೆಯೋಜೆಯಿಂ ॥
ರತಿಯ ಸುಗೀತದಿಂ ರತಿಯ ನವ್ಯ[1]ಕಥಾ[1]ರಸಪೂರಗೋಷ್ಠಿಯಿಂ ।
ರತಿಮಯಮಾಯ್ತು ಪಣ್ಯವನಿತಾಪರಿವೀಧಿಯೊಳೆಲ್ಲಿ ನೋೞ್ಪೊಡಂ ॥ ೧೬೨

ಮತ್ತಮಲ್ಲಿ

ಉಱೆ ಕಳೆ ನಿಸ್ಸ್ವನಂ ಕರೆ ಸದರ್ಥನನಿಂಬಿಡು ತಂದ ಮಂಡನಂ ।
ಗಳನೊಸೆದಟ್ಟಿಱಿಂ ರತಿಯನರ್ಚಿಸು ಕಾಮನ ನೋಂಪಿಗಿಕ್ಷುಸಂ ॥

---

1. ಸುಧಾ. ಎಂದು ಪಾಠಾಂತರ.

ಕುಳಫಳಪುಷ್ಪಮಂ ತರಿಸು ನವ್ಯದುಕೂಲಸುಗಂಧವೃಂದಮಂ ।
ತಳಿ ನವನಂದನಕ್ಕೆ ನಡೆಯೆಂಬ ರವಂ ಸಲೆ ಗೇಹಗೇಹದೊಳ್ ॥ ೧೦೩

ಅಂತು ನುಡಿನ ಮದನಪ್ರತಾಪವಿತತಚತುರೋಕ್ತಿಗಳಂ ಕೇಳುತ್ತುಂ ಬರೆವರೆ ಮುಂದೊಂದೆಡೆಯೊಳ್ ಕೆಲಬರ್ ಮುಗ್ಧೆಯರ್ಗೆ ವಿದಗ್ಧೆಯರ್ ಲಲಿತ ಚರಿತಮಂ ಕಲಿಸುತ್ತಿರ್ದರ್. ಅದೆಂತೆಂದೊಡೆ:—

ಓದಿಸದಿರ್ ಗಿಳಿಯಂ ನಿ ।
ನ್ನೀದಂತಮನೆಸೆವ ದಾಡಿಮೀಬೀಜಂಗೆ ॥
ತ್ತಾದರದಿಂ ಕರ್ದು*ಕುಗುಮೆಂ ।
ದೋದಿಸುತಿರ್ದಳ್ ವಿದಗ್ಧೆ ಮುಗ್ಧೆಯನೊಲವಿಂ ॥ ೧೦೪

ತಿಳಿವಿಲ್ಲದೆ ಶಶಿಕಾಂತದ ।
ಕಳಶಮನೇಕಾಂತೆ ಕಾಂತೆ ನಿನ್ನಮುಖೇಂದೂ ॥
ಜ್ಜ್ವಳಕೌಮುದಿಯಿಂದೊಸರ್ದ*ಪು ।
ದಿಜಿಪಿಜಿಪೆಂದೊರ್ವ ಮುಗ್ಧೆಯಂ ಸಖಿ ನುಡಿದಳ್ ॥ ೧೦೫

ಕಂಜದಳೇಕ್ಷಣೆ ನಿನ್ನೀ ।
ಮಂಜುಳರವದಿಂದೆ ಪಾಡೆ ನವಪರಪುಷ್ಟ ॥
ಪ್ರಾಂಜುಳಮಧುರಧ್ವನಿಯೆಂ ।
ಗಂಜುವರೆಲೆ ಮಗಳೆ ಪಾಡದಿರ್ ವಿರಹಿಣಿಯರ್ ॥ ೧೦೬

ತಿಳಕಮದಿಲ್ಲದೆ ಬೆಳ್ದಿಂ ।
ಗಳೊಳಗೆ ನಿಂದಿರದಿರಬಲೆ ಸಕಳಂಕಂ ತ ॥
ನ್ನೊಳಸೂಯೆಗೊಂಡು ನೋಡಿದೊ ।
ಡೆಳೆಯಳೆ ಚಂದ್ರಮನ ದಿಟ್ಟಿ ತಾಗದೆ ನಿನ್ನಂ ॥ ೧೦೭

ಎಂದು ನುಡಿನ ವಿದಗ್ಧೆಯರ ಪ್ರೌಢವಚನಂಗಳಂ ಕೇಳುತ್ತಿರ್ಪ ಮುಗ್ಧೆಯರೊಳೊರ್ವಳ್ ಬೆಳ್ದಿಂಗಳೊಳ್ ನಿಂದು

ಕಳಶೋದಕದೊಳ್ ಚಂದ್ರನ ।
ನೆಬಿಲಂ ಕಂಡೆಲೆಲೆ ಸಿಲ್ಕಿದಂ ಶಶಿಯೆನುತಂ ॥
ದೊಳಪೊಕ್ಕು ನೋಡಿ ಕಾಣದೆ ।
ಗಳಿಲನೆ ತಡಮರಿಸಿ ತರುಣಿ ತಬಿಬೆಬಿಗಾದಳ್ ॥ ೧೦೮

ಮತ್ತಮೊರ್ವಳ್
ಕರತಳಕಳಶೋದಕದೊಳ್ ।
ಸುರುಚಿರಚಂದ್ರಮನ ನೆೞಲನೂನಂ ತೋಱಿ ॥
ತ್ತಿರೆ ಬೆಳ್ಳಿವಟ್ಟಲೆಂದಾ ।
ತರುಣಿ ಕರಂ ತೆಗೆದು ತೆಗೆದು ಬೆಱಗಾಗಿರ್ದಳ್ ॥ ೧೨೯
ಮಿಗೆ ದಟ್ಟೈಸಿದ ಚಂದ್ರಿಕೆ ।
ಸೊಗಯಿಸೆ ಕಂಡೊರ್ವ ಮುಗ್ಧೆ ದುಗ್ಧಮಿದೆಂದೆಂ ॥
ದಗಲದೆ ಬದ್ಧಾಂಜಳಿಯಿಂ ।
ಮೊಗೆಮೊಗೆದಾಬಯಲನೀಂಟಿ ಬೞಲುತ್ತಿರ್ದಳ್ ॥ ೧೩೦
ಅದಲ್ಲದೆಯುಂ ಮತ್ತಮೊಂದೆಡೆಯೊಳೊರ್ವಮುಗ್ಧೆ ಮನೋವಲ್ಲಭಂ
ಬಿನದದಿಂ ಬನಕ್ಕೆ ಪೋಗೆ ಸೈರಿಸಲಾಱದಿರ್ಪಲ್ಲಿ
ಮುಗುಳೊಳ್ಕುಡಿ ಬೆಳ್ದಿಂಗಳೊ ।
ಳಗೆ ದಳ್ಳುರಿ ಪೂವಿನೊಳ್ ಪುಗುಳ್ ಮೂಡುವವೋಲ್ ॥
ಮಿಗೆ ಮುಗ್ಧೆಯೊಳತಿವಿರಹಂ ।
ನೆಗೆದುದು ಮತ್ತೊರ್ವರೞಿದುರಂತಿಂತುಸಿರಲ್ ॥ ೧೩೧
ಬಳಗಣ್ಗಂ ಪೊಱಗಣ್ಗಂ ।
ಬೞಲುತ್ತೆಡೆಯಾಡುವಳ್ ಕರಂ ಬಿಸುಸುಯ್ವಳ್ ॥
ಮುಳಿವಳ್ ತನ್ನೊಳ್ ತಾನೇ ।
ತ್ರಿಳಿವಳ್ ಕಳೆಗುಂದುವಳ್ ಕನಲ್ವಳ್ಕಾಯ್ವಳ್ ॥ ೧೩೨
ಬಳಗೊಳಗೆ ಬಳೆಬಳೆದು ಘಟ ।
ದೊಳಗಣ ದೀಪ್ತಿಯವೊಲಿರ್ಪ ಘನವಿರಹಮನಂ ॥
ತೊಳಕೊಂಡು ನುಡಿಯಲಱಿಯದೆ ।
ಕಳೆಗುಂದಿದ ಚಂದ್ರನಂತೆ ಕೊರಗುತ್ತಿರ್ದಳ್ ॥ ೧೩೩
ಇರೆ ಹರಣಂ ನಡೆತರ್ಪಂ ।
ತಿರೆ ವಲ್ಲಭನಲ್ಲಿ ಬರೆ ಸರಾಗೋತ್ಸವದಿಂ ॥
ಕರೆದಿದಿಗೊರ್ಡಿರದಿದಿಗೊರ್ಂ ।
ಡೆರೆದಿದಿಗೊರ್ಂಡಪ್ಪಿಯಪ್ಪಿಯರಲುತ್ತಿರ್ದಳ್ ॥ ೧೩೪

ಭರದಿಂ ಬಂದಚ್ಚಱಿಯುದೆ ।
ಸಿರಿಮಂಚದ ಮೇಲೆ ಲೀಲೆ ಮಿಕ್ಕಾದರದಿಂ ॥
ತರದಿಂ ಪುಳಕಂ ನೆಗೆಯು ।
ತ್ತಿರೆ ಸುರತಾಂಬುಧಿಯ ಸುಧೆಯ ಸುೞಿಯೊಳಗಿರ್ದರ್ ॥ ೧೩೪

ಮನವಲರೆ ಮುಖವಲರೆ ಲೋ ।
ಚನವಲರೆ ಕಪೋಲವಲರೆ ಕಂಠವಲರೆ ಸು ॥
ಯ್ಯನುವಲರೆ ತನುವಲರೆ ಮಿ ।
ಕ್ಕನುಭವಸುಖವಲರೆ ಸುರತಸುಖದೊಳಗಿರ್ದರ್ ॥ ೧೩೫

ಆಸಮಯದೊಳ್
ಪುದಿದಾಲಿಂಗನದೊಳಗಾ ।
ವುದನಾವುದು ಸೋಂಕಿತದೆ ಮುಖೋತ್ಸವಮದೆ ಕಾ ॥
ಮದಮದೆ ಮದನವಿಲಾಸಾ ।
ಸ್ಪದಮದೆ ಸರ್ವಾಂಗಹರ್ಷಮದೆ ಸಮಯೋಗಂ ॥ ೧೩೬

ಇಂತು ಸಮಾನುರಾಗಸಂಭೂತಸುಖಮುಖದೊಳಮರ್ದು ಭರಿತಮಾದ ಸುರತಶ್ರಾಂತಿಯಿಂ ಪೊಱಪೊಣ್ಮಿದ ಸುಖಸ್ವೇದಬಿಂದುಗಳನಾಱಿಸಲೆಂದು ಮಿಾಱಿ ಬಂದು ನಿಜನಿಳಯವೇದಿಕಾಮಧ್ಯದೊಳಿರ್ದ ಮುಗ್ಧೆಯರಂ ಗಿರಿಪತಿಗೆ ನಾಗರಿಕಂ ತೋಱುತ್ತುಂ ಬರೆವರೆ ಮುಂದೊಂದೆಡೆಯೊಳೊರ್ವ ಮುಗ್ಧೆ ವಲ್ಲಭನೊಳ್ ಮುಳಿದಂತೆ ಮಱೆದು ನುಡಿಯುದಿರ್ಪಲ್ಲಿ ತತ್ಪ್ರಿಯನಿಂತೆಂದಂ:-

ಮುಗ್ಧೇ ಕೈರವನೇತ್ರೆ ವಿ ।
ಧಗ್ಧೆಯವೋಲ್ ಮುಳಿಸನಾಂತೊಡಾನೆಂತುೞಿವೆಂ ॥
ದಗ್ಧಾಂತರಂಗನಾದೆಂ ।
ದುಗ್ಧಂ ವಿಷಮಾದೊಡೇನನೆಂದಪೆನಿಳೆಯೊಳ್ ॥ ೧೩೭

ಎಂದು ನುಡಿದು ಸುಖದೊಳಿರೆ ಮತ್ತಮೊಂದೆಡೆಯೊಳ್
ಬಳೆದೊಡಿಸಲೆಂದು ಸುದತಿಯು ।
ಕೆಳೆಯನದೊರ್ವಂ ಕರಕ್ಕೆ ಕೆಯ್ನೀಡೆ ಸುಖೋ ॥
ಜ್ಜ್ವಳೆಯ ಶಶಿಮುಖಿಯ ಚಿತ್ತಂ ।
ಗೊಳಿಸುವ ಸಖಿ ಬೇಡಬೇಡವೆನುತುಂ ನುಡಿದಳ್ ॥ ೧೩೮

ಪರಿರಂಭಾರಂಭಣದಾ ।
ತುರಸಮಯದೊಳಂ ಮನೋಹರವ್ಯಾಜದೊಳಂ ॥
ವಿರಹದೊಳಂ ತನ್ನಿನಯಂ ।
ಬರೆ ಸುಖದೊಗೆಳಬಲೆಗೆಂತು ನಿಲ್ವುವು ಬಳೆಗಳ್ ॥ ೧೩೯

ಎಂದಿಂತು ನುಡಿವ ಸರಸೋಕ್ತಿಗಳಂ ಕೇಳುತ್ತುಂ ಬರೆಬರೆ, ಮುಂದೊಂದೆಡೆಯೊಳೂರ್ವ ಮಧ್ಯಮನಾಯಕಿಯ ವಿರಹಾತಿಶಯಮಂ ಪ್ರೇಮಸಖಿ ತನ್ನ ಕೆಳದಿಗೆ ಪೇಳುತ್ತುಮಿರ್ದಳದೆಂತೆಂದೊಡೆ:—

ಅಸವಸದಿಂದಿನನುಱಿದೊಡೆ ।
ದೆಸೆ ಕಾವುಳಮುಸಗಿ ಮಾನಿನಿಗೆ ಮಧು ಮಱುಕಂ ॥
ಸಸಿ ಬಿಸಿ ಕಾವಂ ದಾವಂ ।
ಬಿಸಜಂ ಬಿಸಮನಿಲನನಲನೆನಿಸಿತ್ತಾಗಳ್ ॥ ೧೪೦

ಮತ್ತಮದಲ್ಲದೆ

ವಿರಹದೊಳೀಕೆಗಕ್ಕ ಬಿಸಜಂ ವಿಷಜಂ ಹಿಮರೋಚಿ ಸೂಚಿ ಪಾ ।
ದರಿ ದರಿ ಮಾವು ಪಾವು ಕುಮುದಂ ಕುನುದಂ ತನಿಗಬ್ಬುರ್ ಮರ್ಬುಕ ॥
ತ್ತರಿ ಯುರಿ ಗಾಳಿ ದಾೞಿ ಕುಸುಮಂ ವಿಷಮಂ ಪೊಸಬಾೞೆ ಬಾಳ್ ಮನೋ।
ಕ್ಕರಿ ಪುರಿ ಹಂಸೆ ಹಿಂಸೆ ಮೊರೆವಾಱಿಡಿ ಯಾಱಿಡಿ ತಿಂಗಳಂಗಳಂ ॥ ೧೪೧

ಮತ್ತಮದಲ್ಲದೆ

ಅತಿವಿರಹದೊಳೀಲಲನೆಗೆ ।
ಮತಿ ದುರ್ಮತಿ ವೀಣೆ ಸಾಣೆ ಸೋಮಂ ಭೀಮಂ ॥
ಲತೆಯಸಿಲತೆ ಸಂಪಗೆ ಪಗೆ ।
ನುತಕೀರಂ ಘೋರಮನ್ಯಪುಷ್ಟಮನಿಷ್ಟಂ ॥ ೧೪೨

ಎಂದು ನುಡಿವಾಗಳ್

ಬಿಸಿಲ ಚಕೋರಿಗೆ ಚಂದ್ರಂ ।
ಪಸಿದ ಶುಕಂಗಿದಿರೊಳಮೃತಫಳಮಿದಿರ್ವರ್ಪಂ* ॥
ತಸಮಾನಸುಧಾಶೀಲಂ ।
ರಸನುಯುಸುಖಜಲಧಿವಲ್ಲಭಂ ನಡೆತಂದಂ ॥ ೧೪೩

ನಡೆತರೆ ಕಂಡು ಜೀವಮಿದಿ*ರ್ವಂದವೊಲೊರ್ವರನೊರ್ವರೀಕ್ಷಿಸು ।
ತ್ತಡಿಯಿಡುತೊಂದಿ ಮುಂದುವರಿವಿಂದ್ರಿಯದಿಂ ನಡೆ ಮುಂಚೆ ಮೀಱಿ ಬಂ ॥
ದೆಡೆಗುಡದಪ್ಪಿಯುಪ್ಪಿ ನಿರತಂ ಸುರತಾಬ್ಧಿಯೊಳಾೞುತೇೞುತುಂ ।
ಕಡೆಮೊದಲಿಲ್ಲದೇೞ್ತರದ ಕಾಮಿಗಳಿರ್ದರನೂನಸಂಗದೊಳ್ ॥ ೧೪೪

ಘನಗಾಢಾಲಿಂಗನಂ ಚಾಪಳಗಳಮತಿದೈನ್ಯೋಕ್ತಿಯುಕ್ತಾಧರಂ ಚುಂ ।
ಬನಸೀತ್ಕಾರಂ ಸ್ಮಿತಾಸ್ಯಂ ಮುಕುಳಿತನಯನಂ ಲಾಸ್ಯನೀಲಾಳಕಂ ಕಂ ॥
ಪನಹಸ್ತಂ ಸ್ವೇದಗಂಡಂ ಪುಳಕಭರಿತಗಾತ್ರಂ ಸುಖಶ್ವಾಸಮಾನಂ ।
ದನಿವಾಸಂ ಲೀನಚಿತ್ತಂ ಗುರುತರಸುರತಂ ಕೂಡೆ ಕೂಡುತ್ತುಮಿರ್ದರ್ ॥

ನಯನರಝುಷಾವಳಿಯಿಂದತಿ ।
ಶಯದಧರೋದ್ಯತ್ಪ್ರವಾಳದಿಂದಂ ದ್ವಿಜಸಂ ॥
ಚಯಮೌಕ್ತಿಕದಿಂ ಸುರತಾ ।
ಬ್ಧಿಯುದಂತಿರೆ ತೆರೆಗಳಂತೆ ಕಾದಲರಿರ್ದರ್ ॥ ೧೪೬

ಅಂತು ಸುರತಸುಖದಿಂ ನಲಿನಲಿದು ನರ್ತಿಸುತ್ತುಂ ಮತ್ತವಾರಣದ ಮೇಲಿರ್ಪ ಮಧ್ಯಮನಾಯಕಿಯರಂ ನಾಗರಿಕಂ ನಗರಾಜಂಗೆ ತೋಱುತ್ತುಂ ನಡೆತರೆ ಮುಂದೊಂದೆಡೆಯೊಳೊರ್ವ ವಿದಗ್ಧೆ ವಿರಹತಾಪದಿಂ ನಿಲಲಾಱದೆ ನಿಜಸಖಿಗೆ ಬಿಸುಸುಯ್ಯುತ್ತುಮಿಂತೆಂದಳ್:—

ಸಕಳಂಕಂ ಶಶಿ ಕಾಮನೀಶನುರಿಗಣ್ಣಿಂ ಬೆಂದವಂ ವಾಯು ಸ ।
ರ್ಪಕದಂಬಾಶನಶೇಷಮಂಗಜನಮಿತ್ರಂ ರಾಗಿ ಮತ್ತಾಳಿಗಳ್ ॥
ವಿಕಳಂಗಳ್ ಪಿಕನನ್ಯಪುಷ್ಟನಿಮಱೊಳ್ ಸೌಜನ್ಯಮಂ ಮಾೞ್ಪುದ ।
ಕ್ಕ ಕರಂ ಕಷ್ಟಮೆನುತ್ತೆ ಕಾಂತೆ ನುಡಿದಳ್ ಸಾಲಿಟ್ಟ ಸಂತಾಪದಿಂ ॥

ಎಂದು ನುಡಿದ ನಿರ್ವೇದೋಕ್ತಿಗಳಂ ಕೇಳಲಾಱದೆ ಪರಮಮಿತ್ರೆ ಪರಿದು ಪೋಗಿ ಮನೋವಲ್ಲಭನನೊಡಗೊಂಡು ಬರೆ ಬಂದು ನಿಂದು ಸಾಪರಾಧಿ ಸಮೀಪಸ್ಥನಾಗಿ ಕುಳ್ಳಿರ್ಪಲ್ಲಿ

ಎಱಗುಗುಮೆಂದು ಮೇಲುದಿನೊಳಂಘ್ರಿಗಳಂ ಮಱೆಮಾಡುತುಂ ಸ್ಮಿತಂ ।
ಪೊಱಮಡೆ ಮತ್ತಮೊಂದು ನೆವದಿಂದಮೆ ಮುಚ್ಚುತುಮೆಯ್ದೆ ನೋಟಮಂ ॥
ಮಱೆಯಿಸಿ ನೋಡುತುಂ ನುಡಿಯಲುತ್ತರಮಂ ಸಖಿಗೀಯುತಿಂತು ತ ।
ನ್ನೆಱೆಯನೊಳೊಲ್ದು ಕೋಪಿಸುವ ಕಾಮಿನಿಗೀಮುನಿಸೊಂದೆ ಸಾಲದೇ ॥

ಇಂತು ಮುಳಿದ ವಿದಗ್ಧನಾಯಕಿಯು ಮುಳಿಸಂ ತಿಳಿಪಿ ಸಜ್ಜೆವನೆಯ ಸಿರಿವಮಂಚದ ಹಂಸತೂಳದಡಕಿಲ್ವಾಸಿನೊಳ್ ಭರದಿಂ ನೆರೆವಾಗಳ್

ಸೆಳೆಮಂಚದ ಕಳನಿನದಂ ।
ಬಳಸಿದ ಶಕುನಿಗಳ ಸುಜ್ಜುರಂ ನೇವುರದು ॥
ಜ್ಜ್ವಳನಾದಂ ಲಲನಾಗಳ ।
ಗಳಿತಧ್ವನಿ ಬೆರಸಿ ಬಳೆದು ನೆರೆಪಿದುದಾಗಳ್ ॥ ೧೪೯

ಕರಘಾತಂ ಸೌಖ್ಯಜಾತಂ ಕಳರಣಿತಸಮೇತಂ ಲಸತ್ಸ್ವರ್ಣಪೂತಂ ।
ಸ್ಮರಯಂತ್ರಂ ಸಾರತಂತ್ರಂ ಘನಗಳರವಮಂತ್ರಂ ಪ್ರಮೋದಸ್ವತಂತ್ರಂ
ಸ್ಫುರಿತಾಂಗಂ ಸ್ವೇದಸಂಗಂ ಸುರತರಸತರಂಗಂ ಪ್ರರೋಮಾಂಚಲಿಂಗಂ ।
ಗುರುನೇತ್ರಂ ಬಾಷ್ಪಪಾತ್ರಂ ಸುಖರವಮುದಿತಶ್ರೋತ್ರಮಾನಂದಗಾತ್ರಂ॥

ಅಂತುಮಲ್ಲದೆ

ಗಳರವದಿಂದಪ್ಪಿಂ ಕೋ ।
ಮಳರೂಪಿಂದಧರರಸದಿ ಸುಯ್ಗಂಪಿಂದಾ ॥
ಗಳೆ ಕಿವಿಮೆಯ್ಕಣ್ಣಾಲಗೆ ।
ವಿಳಸನ್ನಾಸಿಕಮನಲ್ಲಿ ತಣಿಪುತ್ತಿರ್ದರ್ ॥ ೧೫೧

ಮತ್ತಮೊಂದೆಡೆಯೊಳೂರ್ವಳ್ ತನ್ನ ಮಗಳ ಸೌಭಾಗ್ಯಮಂ ಪ್ರೇಮ ಸಖಿಗೆ ಪೇಳುತ್ತುಮಿರ್ದಳದೆಂತೆಂದೊಡೆ:—

ಮಾಳತಿಯೊಳ್ ಬಂಡುಂಡ ಮ ।
ದಾಳಿಯನಳಮಾಲೆಯೆಬಗಿ ಬಂಡುಂಬವೊಲೀ ॥
ನೀಲಾಳಕಿಯೊಳ್ ಬೆರಸಿದ ।
ಖೇಳನ ವಿಟರೆಲ್ಲ ಸೋಂಕಿ ಸುಖಿಯಾಗಿರ್ಪರ್ ॥ ೧೫೨

ಅಂತುಮಲ್ಲದೆ

ದರಹಾಸಶ್ರೀಗೆ ಬೆಳ್ದಿಂಗಳ ಸಿರಿ ಸರಿಯಲ್ಲಂ ಕಟಾಕ್ಷೇಕ್ಷಣಕ್ಕಾ ।
ಸ್ಮರಬಾಣಂ ಸಾಟಿಯಲ್ಲಂ ಮಿರುಗುವ ಕುಡುಪುರ್ವಿಂಗೆ ತಾನಿಕ್ಷುಚಾಪಂ ॥
ದೊರೆಯಲ್ಲಂ ಚಕ್ರವಾಕಂ ನೆಲೆಮೊಲೆಗೆಣೆಯಲ್ಲಂ ಕಳಂಕಪ್ರಭೂತಂ ।
ಪರಿದಗ್ಧಂ ತದ್ವಿಯೋಗಾಕುಳನಬಲೆಯ ರೂಪಿಂಗದೆಂತೊಂದು ಮಾಳ್ಪಂ ॥

ಎಂದು ಬಣ್ಣಿಸುತ್ತಿರ್ಪನಂ ಇತ್ತಲ್ ಮತ್ತೊಂದೆಡೆಯೊಳೊರ್ವ ವಿದಗ್ಧ ವಿಟಂ ವಿರಹತಾಪದಿಂ ನಿಲಲಾಱದೆ ನಿಜಸಖಿಗಿಂತೆಂದಂ:—

ಎಲೆವೆಂ ಮತ್ಸಖಿ ತಂದು ಕೂಡು ಗುಣವೃಂದಾರಾಮೆಯುಂ ರಾಮೆಯುಂ।
ವರಪುಷ್ಪಾಯುಧಚಾಪಸಂಯುತಮೆನಿಪ್ಪಾನಾರಿಯುಂ ನಾರಿಯುಂ ॥
ಸ್ಮರನಾಳೋಚನೆಗಾಪ್ತೆಯಾಗಿ ನೆಲಸಿಪ್ಪಾ ಕಾಂತೆಯುಂ ಕಾಂತೆಯುಂ।
ತರುಣೀಸಂಘಶಿರೋಮಣಿಪ್ರಬಳಕೀರ್ತ್ಯಾಶಾಂತೆಯುಂ ಶಾಂತೆಯುಂ ॥ ೧೫೪

ಎಂದಿಂತು ಬಾಯಱುವ ಮಿತ್ರನಂ ನಲ್ಲಳೊಳ್ ಕೂಡೆ ಸಮುಸುಖದೊಳಿರೆ ಮತ್ತಮೊಂದೆಡೆಯೊಳೊರ್ವ ವಿಟಂಗತ್ಯಾಸಕ್ತೆಯಾದ ಮಗಳ್ಗೆ ಮಾತೆ ಬುದ್ಧಿವೇೞ್ವಲ್ಲಿ

ಮಗಳೆ ಬಿಡಾತನಂ ಬಿಡೆನವಂ ಧನಮುಂ ಪಿರಿದೀಯನಿತ್ತುದೇ।
ಮಿಗೆ ಪಿರಿದೆಯ್ದದೆಯ್ದುವುದು ಸಾಲದು ಸಾಲ್ವುದು ಬೇಡ ಬೇೞ್ವುದೊ ॥
ತ್ತಿಗೆ ನಡೆವೂಹು ಮೂರ್ಖತೆಯೆ ಮೂರ್ಖತೆ ಕೆಟ್ಟಪೆ ಕೆಟ್ಟಪೆಂ ಕೆಲಂ।
ತೆಗೆಡ್ದೆಯೆಪ್ಪೆ ಕರಂ ತೆಗೆಟ್ಟೆಯೆಂದೆನೆ ಪುತ್ರಿಯನಟ್ಟಿ ಮೋದಿದಳ್॥ ೧೫೫

ಅದಲ್ಲದೆಯುಂ ಮತ್ತಮೊಂದೆಡೆಯೊಳೊರ್ವ ವೃದ್ಧವೇಶ್ಯಾಂಗನೆ ತನ್ನ ನೆರಮನೆಯ ಬಾಲಮುಗ್ಧೆಯ ಸೊಬಗಂ ಕಂಡು ಅಸೂಯೆಗೊಂಡು ತನ್ನೊಳಿಂತೆಂದಳ್:—

ಮೊಲೆ ಮುಗುಳೊತ್ತಮಕ್ಷಿ ಚಪಳತ್ವಮನೆಯ್ದುವು ಬಾಸೆ ಬಾರದು।
ಜ್ಜ್ವಳಿಸದು ಭ್ರೂಳರೇಖೆ ವದನಂ ಮುದವೇಱದು ನೋಡೆ ತಬ್ಬಿ ಕಂ॥
ಗೊಳಿಸದು ಮೇಲುದಗ್ಗಳಿಪ ನೋಟಮುಗುರ್ವಿಪ ಮಧ್ಯಪೊಪ್ಪವೀ।
ತ್ರಿಳಕಮನೂನಗರ್ವಮೊಲವಿಂ ನೆಲಸಿರ್ಪುದು ಚೋದ್ಯಮಲ್ಲವೇ॥ ೧೫೬

ಎಂದು ತನ್ನೊಳ್ತಾನೇ ಜಿನುಂಗಿ ನುಡಿವ ಮುದಿಪಾರಿಯುಂ ನೋಡುತುಂ ನಗುತುಂ ಬರೆ ಮುಂದೊಂದೆಡೆಯೊಳೊರ್ವ ಲಲನೆ ತನ್ನೋಪನಿಂದಾದ ಬೇಸಱಂ ನಿಜಸಖಿಗೆ ಪೇೞುತ್ತಿರ್ದಳದೆಂತೆಂದೊಡೆ—

ಆದರಿಪಂತೆ ಸಾರ್ವನುಪಚಾರಮನಾಡುವನಿತ್ತುದಂ ಸಮಂ।
ತೋದುವನಾವಗಂ ಕಟಕಿಯಂ ನುಡಿವಂ ನಗುವಂತೆ ಕೋಪಿಪಂ॥
ಸಾದಿಸುವಂ ದಿಟಂ ಪುರುಡಿಪಂತೆ ನೆಗೞ್ಬುವನಟ್ಟಿಪತ್ತುವಂ।
ಪೋದೊಡೆ ಪೋಗನಿದೋರ್ಧಿರನೀಶನಿಯುಂ ಸಖಿಯೆಂತು ನೀಗುವೆಂ॥

ಎಂದು ನುಡಿವ ನಿರಾಶಾವಚನಂಗಳಂ ಕೇಳುತ್ತುಂ ಬರೆವರೆ ಮುಂದೊಂದೆ ಡೆಯೊಳನೇಕನವೀನರತ್ನಮಯದರ್ಪಣಕನಕಕಳಶವಿಚಿತ್ರಪತ್ರಪರಿಶೋ ಭಿತಮಾಗಿ ನವೀನಕ್ರೀಡೆ ತವಿಲಿಲ್ಲದ ನವಿಲುಯ್ಯಾಲ ಮುಂದೊರ್ವ ವಿದಗ್ಧವ ನಿತೆ ಸಖೀಜನಂಬೆರಸು ಬೆಳ್ದಿಂಗಳನಿದಿರ್ಗೊಂಡು ವಸಂತಂಗೆ ಪ್ರಸತಳಿರ್ಗಳ ಪಸೆಯಂ ತಂದಿಕ್ಕಿ ಕಾಮಂಗೆ ಸಣ್ಣನನೆಯ ಪುಷ್ಪಾಂಜಳಿಯನಿತ್ತು ರತೀದೇ ವಿಗೆ ಮೆಯ್ಯಿಕ್ಕಿ ಚಂದ್ರಂಗೆ ಕುಸುಮರಸದರ್ಘ್ಯಮಂ ಕೊಟ್ಟು ಗಿಳಿಪಂಸೆ ಕೋಗಿಲೆಗಳನುಚಿತಾಹಾರದಿಂ ತಣಿಪಿ ಮುಂದೈಸಿದ ಸತಿಯುರ ಸಂದಣಿಯೊ ಳಾಂದೋಳನಮನೇಱಿದಾಗಳ್

ಏಱಿದ ಮಣೆಯುದಯನಗಂ ।
ತೋಱಿದ ಮುಖಮಿಂದುಬಿಂಬಮಪಾಂಗಂ ॥
ಮೀಱುವ ಚಂದ್ರಿಕೆಯೆನೆ ಕಳೆ ।
ಯೇಱಿದ ಪಡಿಚಂದ್ರನಂತೆ ಸೌಂದರಿಯೆಸೆದಳ್ ॥ ೧೪೮

ನೋಡುವನೇಕಸದ್ವಿಟಜನಂಗಳ ಪೆಣ್ಗಳ ಕಣ್ಗಳಾಡೆ ಕೊಂ ।
ಡಾಡುವ ತತ್ಸಖೀಜನದ ಚಾಗದ ಬೋಗದ ರಾಗಮಾಡೆ ತೂ ॥
ಗಾಡುವ ಬಾಲಕೀವ್ರಜದ ಕಂಕಣಝಂಕೃತಿ ಭೋಂಕನಾಡೆ ತಾ ।
ನಾಡಿದಳುಯ್ಯಲಂ ಮುಖಶಶಿಪ್ರಭೆ ಮುಚ್ಚಿ ಮುಸುಂಕೆ ಚಂದನಂ ॥

ಇಂತಾಡುವ ನವೀನಾಂದೋಳನಕ್ರೀಡೆ ಕಡೆಯಾದನೇಕಮದನಮಹೋ ತ್ಸಾಹಂಗಳಂ ನೋಡುತ್ತುಂ ಪಣ್ಯಾಂಗನಾವೀಧೀವಿಸರಮಂ ಕಳಿದು ಬಂ ದು ರಾಜನಿಳಯದ್ವಾರದ ಮುಂದೆ ನಿಂದಿರೆ ನಾಗರಿಕನಿಂತೆಂದಂ:—

ದೀಪ್ತಿಯನುಱಿದುವು ಭಗಣಂ ।
ಸುಪ್ತಜನಂ ನಿದ್ರೆದಿಳಿದುದಿದೆ ಕೋಕಂ ತ ॥
ನ್ನಾಪ್ತನನಱಸುತ್ತಿರುಳ ಸ ।
ಮಾಪ್ತಿ ಕರಂ ಪತ್ತೆಸಾರ್ದುದಚಳಾಧೀಶಾ ॥ ೧೫೦

ಬರವಂ ಬಯಸುತೆ ಕುಳರೆಂ ।
ಬರವಂ ಮಿಗೆ ಪತ್ತೆ ಸಾರುತಿಂತಿವೆ ಚಕ್ರಂ ॥
ಅರುಣೋದಯಮಂ ಸೂಚಿಸು ।
ತರುಣೋದಯಮಿತ್ತಲಾಗುತಿದೆ ಗಿರಿರಾಜಾ ॥ ೧೫೧

ಎಂದು ನುಡಿವ ನಾಗರಿಕನ ಬಿನ್ನಪಮಂ ಕೇಳ್ದು ಅರಮನೆಯಂ ಪೊಕ್ಕು ಗಿರಿರಾಜಂ ನಿರ್ಮಳೀಕೃತಕರಚರಣನುಂ, ನವ್ಯವಸ್ತ್ರಪರಿಶೋಭಿತನುಂ, ವಿಭೂತಿವಿಳಸಿತಸರ್ವಾಂಗನುಂ, ರುದ್ರಾಕ್ಷಾಲಂಕೃತಶರೀರನುಂ, ಶಿವಲಿಂಗಪೂಜಾವಿರಚಿತಹಸ್ತಕಮಳನುಂ, ತತ್ಪಾದಮಂಗನಾಸಕ್ತನುಂ, ಪಾದೋದಕಪ್ರಸಾದಸಂತುಷ್ಟಹೃದಯನುಂ, ಕರ್ಪೂರತಾಂಬೂಲಮುಖಕಮಳಯನುಮಾಗಿ ಸಭಾನಿಳಯಕ್ಕೆ ನಡೆತಂದು ನಾರದಮುನಿಯಂ ನಾಗಲೋಕಕ್ಕೆ ಕಳುಪಿ, ಪೂರ್ವಾಚಳಮನೇಱಿದ ಭಾಸ್ಕರನಂತೆ ಸಿಂಹವಿಷ್ಟರೋಪವಿಷ್ಟನಾಗಿರ್ದಂ. ಆಪ್ರಸ್ತಾವದೊಳ್

ಪರಮಸ್ವಾಮಿ ಜಟಾಧರಂ ಶಶಿಧರಂ ಗಂಗಾಧರಂ ಕಾಲಸಂ।
ಹರನಜ್ಞಾನಹರಂ ಪುರತ್ರಯಹರಂ ಸೌಖ್ಯಾಕರಂ ಶಂಭು ಶಂ ॥
ಕರನಾನಂದಕರಂ ಸಮಂತೆನಗೆ ಭಕ್ತಿಜ್ಞಾನವೈರಾಗ್ಯಮಂ ।
ಕರುಣಂಗೆಯ್ಗೊಲವಿಂದೆ ಹಂಪೆಯ ವಿರೂಪಾಕ್ಷಂ ಶಿವಾವಲ್ಲಭಂ ॥ ೧೬೨

ಇದು ಸಮಸ್ತಸುರಾಸುರನಿಕರಮಕುಟಖಚಿತದಿನಕರಕರಾಧಿಕ್ಯಮಾಣಿಕ್ಯ
ಪ್ರಭಾಪುಂಜರಂಜಿತಸಂಪಚ್ಚರಣನೆನಿಪ ಪಂಪಾವಿರೂಪಾಕ್ಷ ಶ್ರೀಪಾದಕಮಲ
ಮಕರಂದಮತ್ತಮಧುಕರಾಯಮಾಣ ಸತ್ಕವೀಶ್ವರ
ಹಂಪೆಯ ಹರಿಹರದೇವ ವಿರಚಿತಮಪ್ಪ

ಗಿರಿಜಾಕಲ್ಯಾಣ ಮಹಾಪ್ರಬಂಧದೊಳ್

ಪಾರ್ವತೀಯೌವನ ರಾತ್ರಿವಿಹಾರ ವರ್ಣನಂ ಚತುರ್ಥಾಶ್ವಾಸಂ.

॥ ಪಂಚಮಾಶ್ವಾಸಂ ॥

—ವಿರೂಪಾಕ್ಷದರ್ಶನ ಪುಷ್ಪಾಪಚಯ ಪೂಜಾವರ್ಣನಂ—

ಶ್ರೀಗಂಗಾಧರನಭವಂ ।
ಶ್ರೀಗೌರೀವರನುದಾರಪಾರಾವಾರಂ ॥
ಶ್ರೀಗುರುಹಂಪೆಯ ಶಂಕರ ।
ನೀಗೆಮಗೆ ಮನೋರಥಂಗಳಂ ಕೃಪೆಯಿಂದಂ ॥ ೧

ಸರಸೀಸಂಜಾತಜಾತೋನ್ನಿಶಿತನಿಶಿತಸೌರಂಭಸಂಪಾದನಾದಂ ।
ಧರಣೀದಿಗ್ವ್ಯೋಮಭಾಗಾವೃತಭರಿತಘನಧ್ವಾಂತಸಂಭೇದನಾದಂ ॥
ಸುರತಾಸಕ್ತಪ್ರಜಾಲಿಂಗನಚಲನಕರಪ್ರೌಢಿತಾನಾದನಾದಂ ।
ಪರೆದತ್ತಾದಂ ಪ್ರಮೋದಂ ಶಿವನಿಳಯಕಾಳೋತ್ಪಾದಮಾಶಂಖನಾದಂ ॥

ಆಸಮಯದೊಳ್

ಮುಗಿಯಲೊಡರ್ಚಿ ನಿಂದ ಕುಮುದಾವಳಿಯಂ ಸರಸೀರುಹಂ ಮುಗು ।
ಳ್ನಗೆನಗುವಂತಿರಿರ್ದುವು ಚಕೋರಿಗಳಸ್ತಗಿರೀಂದ್ರದತ್ತಲು ॥
ಬ್ಬೆಗದೊಳೆ ನೋಡುತಿರ್ದುವು ರಥಾಂಗಯುಗಕ್ಕೆ ಮನೋಜನೇಸು ಮೆ ।
ಲ್ಲಗೆ ತೊಲಗುತ್ತುಮಿರ್ದುದುದಯಾದ್ರಿಗೆ ಗೋಪತಿ ಬರ್ಪ ಪೊೞ್ತಿನೊಳ್ ॥

ಕೆಂಪೇಱಿತು ಮೂಡಣ ದೆಸೆ ।
ಸೊಂಪೇಱಿತು ಚಕ್ರಮಿಥುನಮಬ್ಜಕದಂಬಂ ॥
ಕಂಪೇಱಿತು ಸಕಳಜನಂ ।
ಪೆಂಪೇಱಿತು ಪದ್ಮಮಿತ್ರನುದಯಿಸುವಾಗಳ್ ॥ ೪

ಉರ್ಕುಡುಗಲ್ ಕುಮುದಂಗಳ್ ।
ಸೊಕೊರ್ಗೆಯಲ್ ಕಮಳಚಕ್ರಪಕ್ಷಿಯುಗಂಗಳ್ ॥
ತಕ್ಕೈರ್ಸಲ್ ತಮಮಾಗಳ್ ।
ಬರ್ಕಟಬಯಲಾದುದರ್ಕನುದಯಿಸುವಾಗಳ್ ॥ ೫

ಇಳಿಯ ಮುಸುಂಕಂ ಮೆಲ್ಲಗೆ ।
ಕಳೆಯುತ್ತೆೞ್ಚಱಿಸುತುಂ ರಥಾಂಗಮನಬ್ಜಂ ॥

ಗಳನೆವೆದೆಱೆಯಿಸುತುಂ ದೆಸೆ ।
ಗಳನೆೞ್ಬಿಸುತಿರ್ದುವಾಗಳಿನನ ಕರಂಗಳ್ ॥
ಮತ್ತಮದಲ್ಲದೆ
ಕೊರಗಿಸಿ ಕುಮುದಮನೆೞ್ಬಿಸಿ ।
ಭರದಿಂದಮನಂಧತಮಮನೋಡಿಸಿ ದೋಷಾ ॥
ಕರನಂ ಕಳೆಗುಂದಿಸಿ ಪರಿ ।
ಪರಿದುವು ತರಣಿಯ ತಳಾರರಂತಿರೆ ಕಿರಣಂ ॥ ೭
ಆಸಮಯದೊಳ್
ಮುದುಡಿಸುತುಂ ಕೈರವಮಂ ।
ಬೆದಱಿಸುತುಂ ಕೌಶಿಕಂಗಳಂ ಘನಪದದೊಳ್ ॥
ಕೆದಱುತ್ತುಂ ಕಿರಣಾಳಿಯ ।
ನುದಯಾಚಳಚೂಡದಲ್ಲಿ ಮೂಡಿದನರ್ಕಂ ॥ ೮
ಕಮಳಾಕರದಮಳ್ವ*ಕ್ಕಿಗ ।
ಳ ಮನೋರಥಮಲರೆ ವಾಸವಾಶಾಮುಖದೊಳ್ ॥
ತನುಮೊಂಬೆವೆದೆಗೆಯುತ್ತಿರೆ ।
ವಿಮಳಜಗಚ್ಚಕ್ಷು ತೊಳಗಿ ಬೆಳಗುತ್ತಿರ್ದಂ ॥ ೯

ಅಂತಾದ ಸೂರ್ಯೋದಯದೊಳ್ ಸಕಳಶಿವಾಲಯಪ್ರೋದ್ಭೂತಮಪ್ಪ ಪಂಚಮಹಾಶಬ್ದಮುಂ ತಟಾಕತೀರಸ್ಥಿತಸಂಧ್ಯಾವಂದನಾಸಕ್ತಧರಾಮರಪ್ರಕರಮುಂ ಗಜಶಿಕ್ಷಾಪ್ರಾರಂಭಸಮಯಸಂರಂಭಸಂಯುಕ್ತಸುಭಟಾರೋಹನಿಕಾಯಮುಂ ಹಯಶಿಕ್ಷಾವಾಹಕವ್ಯೂಹಮುಖರಮುಖಜನಿತನಿಬಿಡನಿರ್ಘೋಷಮುಂ ಸೇವಾಭರಧರಾಧೀಶ್ವರಪ್ರಕರಸಂರಂಭಮುಂ ರಾಜನಿಳಯಾಗಮನಲಂಪಟಲಲಿತಲತಾಂಗೀವಿತಾನವಿಸ್ತಾರಹಸ್ತಕಟಕಮಂಜೀರಸಂಜನಿತಮಧುರಧ್ವನಿಯುಂ ನರ್ತಕನರ್ತಕೀನಿಕರವೈತಾಳಿಕಾದಿವಂದಿಮಾಗಧಸ್ತೋತ್ರಧರಾಮರಪರಮಾಶೀರ್ವಾದಕದಂಬಧ್ವನಿಯುಂ ಪುರದೊಳಂ ರಾಜಮಂದಿರದೊಳಂ ನೆಗೞೆ ಪರಮಹರ್ಷದಿಂ ಗಿರೀಶ್ವರಂ ಪ್ರಭಾತಸಮಯಸಮುಚಿತಾಸ್ಥಾನನಾಗಿ ಕುಳ್ಳಿರ್ದು ನೆನೆದು ನೋಡಿ ನಾರದಮುನೀಶ್ವರನಱಿಪಿ ಪೋದುದಂ ಕುಱುಪುಗೊಂಡು ಹೈಮವತಿಯುಂ ಹೇಮಕೂಟದೊ

ಳರ್ದ ಪರಂಜ್ಯೋತಿಸ್ವರೂಪನಪ್ಪ ಶ್ರೀ ವಿರೂಪಾಕ್ಷನಲ್ಲಿಗೆ ಸಮರ್ಪಿಸ ಲೆಂದು ಮನಂದಂದೋಲಗನುಂ ಪರೆಯಲ್ವೇೞ್ದು

ಗಿರಿರಾಜಂ ನಾರದಂ ಪೇೞ್ದತಿಹಿತವಚನಮಂ ಚಿಂತಿಸುತ್ತಲ್ಲಿ ನಾನಾ ।
ವರವಾರಸ್ತ್ರೀಯರೊಳ್ ತಾಂ ಜಯೆವಿಜಯೆಯೆನಿಪ್ಪಿರ್ವರಂ ಕೂಡಿಕೊಂ
ಡೊ ॥ ಪ್ಪಿರೆ ಮೂಱುಂ ಪುಷ್ಪಕಂಗಳ್ ಬರೆ ನಿಜಸುತೆಯುಂ ಶಾಂತೆಯುಂ
ಸತ್ಯೆಯುಂ ತಾಂ । ಕರಿಯುಂ ಶರ್ವಾಣಿಯುಂ ಶಾಶ್ವತಗುಣನಿಧಿಯುಂ ಬಾರೆನು
ತ್ತಿರ್ದರಾಗಳ್ ॥ ೧೦

ಗಿರಿಪತಿ ಕರೆದೊಡೆ ಪುಳಕಾ ।
ಭರಣೆ ಮಹಾದೇವಿ ಮಾನಿ ಶರ್ವಾಣಿ ಕೃಪಾ ॥
ಕರೆ ಹಂಸಯಾನೆ ಬಿಂಬಾ ।
ಧರೆ ತಂದೆಯ ಮುಂದೆ ಬಂದು ನಿಂದಿರ್ದಾಗಳ್ ॥ ೧೧

ಪದೆಪಿಂದಂ ಬಂದು ಮೇನಾಸತಿ ನಿಜಸುತೆಯಂ ನೋಡಿ ಮುಂಡಾಡಿ ದೇವೀ।
ಸದಳಂಕಾರೈಕಪಾತ್ರೇ ಪುಲಿ ಕರಡಿ ಮಹಾಸರ್ಪ ನನ್ಮೃಗ ಸಿಂಹಂ ॥
ಮದವನ್ಮಾತಂಗನುಗ್ರಗ್ರಹವಿಡಿದ ಬಿದಿರ್ಚಿತ್ತವುಂಟಲ್ಲಿ ತಾಯೇ ।
ಪದುಳಂ ಪೋಗವ್ವ ಪೋಗೆಂದತಿಭಯರಸದಿಂ ಬುದ್ಧಿವೇೞುತ್ತುಮಿರ್ದಳ್ ॥

ಎಂದಿಂತು ಪೇೞೆ ಕೇಳ್ದು ಮನದೊಳ್ ನಸುಗುತ್ತುಂ ಮಾತೆಯ ಮಾತಿ ಗೊಡಂಬಟ್ಟು ವಿನಮಿತೆಯಾದ ಪಾರ್ವತಿಯುಂ ಪರ್ವತರಾಜಂ ಪುಷ್ಪಕದೊ ಳ್ ಬಿಜಯಂಗೆಯ್ಸಿ ತಾನುಂ ಕುಳ್ಳಿರ್ದು ಪಿಂದಣ ವಿಮಾನಂಗಳೊಳ್ ಜಯೆ ವಿಜಯೆಗಳಂ ಬರಲ್ವೇೞ್ದು ಗಗನಕ್ಕೆ ನೆಗೆದು ಝಾಱಿ ಪಾಱಿ ತ್ರ್ಯಕ್ಷನಂ ನೆನೆದು ದಕ್ಷಿಣಾಭಿಮುಖನಾಗಿ ನಡೆತಪ್ಪಾಗಳ್

ಪಲವುಂ ದೇಶಂಗಳಂ ಭಾಸುರನಗರಿಗಳಂ ತತ್ತಟಾಕಂಗಳಂ ನಿ ।
ಶ್ಚಲಕೇದಾರಂಗಳಂ ಪರ್ವತವಿತತಿಗಳಂ ವಿಂಧ್ಯಸಂದೋಹಮಂ ನಿ ॥
ರ್ಮಳಕಾಸಾರಂಗಳಂ ತಾವರೆಗಳನಳಿಯಂ ಹಂಸಮಾಲಾವಿಳಾಸೋ ।
ಜ್ಜ್ವಲಮಂ ನೋಡುತ್ತೆ ತೋಱುತ್ತಗಜೆಗೆ ನಗರಾಜಂ ಬರುತ್ತಿರ್ದನಾಗಳ್

ಇಂತಿಂತು ನೋಡುತುಂ ಬರೆ ।
ಮುಂತಿರ್ದುದು ತರಳತರತರಂಗಪ್ರಯುತಾ ॥

ನಂತನವಫೇನಜಲಚರ ।
ಸಂತಾನಂ ತುಂಗಭದ್ರೆ ಗಂಗಾಪ್ರಾಯಂ ॥ ೧೪
ಇರೆ ಕಂಡು ಕೊಂಡುಕೊನೆಯುತೆ ।
ಗಿರಿರಾಜಂ ನಿಜತನೂಜೆಗಱಿಪಿದನಿತ್ತಾ ॥
ದರದಿಂ ಭರದಿಂ ಪರಿವುದು ।
ಸುರುಚಿರನದಿ ತುಂಗಭದ್ರೆಯೆಂಬುದು ಪೆಸರಿಂ ॥ ೧೫
ತರಳತರಂಗಸಮುದ್ರೆಯನನೇಕಮುನೀಂದ್ರಮನಸ್ಸುಭದ್ರೆಯಂ ।
ಪರಮಸುಧಾರಸಾರ್ದ್ರೆಯನಪಾರಗಭೀರಸಮುದ್ರೆಯಂ ಪರಾ ॥
ಪರಸುಖನಿದ್ರೆಯಂ ದುರಿತನಾಳಿಗುಪದ್ರೆಯನತ್ಯನೂನವಿ ।
ಸ್ತರಸುಕೃತಾರ್ದ್ರೆಯಂ ನೆರೆ ನಿರೀಕ್ಷಿಸು ಪಾರ್ವತಿ ತುಂಗಭದ್ರೆಯಂ॥ ೧೬
ತಡಿವಿಡಿದೊಪ್ಪುವಾಮ್ರಮರನೇಱಿಲಶೋಕೆ ಕವುಂಗು ತೆಂಗು ಕ ।
ರ್ಪಿಡಿದ ತಮಾಲಮಿಂಚಿ ನವದಾಡಿಮವೀಥಿ ಲವಂಗಲುಂಗಮಿಂ ॥
ಪೊಡರಿಪ ಬಾಜೆ ಪಕ್ವಪನಸಾವಳಿ ನಿಂಬಕದಂಬಮಿಂಬುಗೊಂ ।
ಡಡಸಿದ ಮಾತುಳುಂಗತತಿ ಪೂಗಕುಲಂ ಸಲೆ ತುಂಗಭದ್ರೆಯೊಳ್ ॥ ೧೭

ಮತ್ತಮದಲ್ಲದೆ
ನೆನೆದನೆ ಧನ್ಯಂ ನೋಡಿದ ।
ನನಘಂ ಸೋಂಕಿದನೆ ಅಮರನಘಮರ್ಷಣಮಿ ॥
ರ್ದನೆ ಗಣನಾಥಂ ಸೇವಿಸಿ ।
ದನೆ ಮುಕ್ತಂ ಕೇಳ ತುಂಗಭದ್ರೆಯ ಜಳಮಂ ॥ ೧೮
ಎಂದು ಪೇಳುತ್ತುಂ ತೋಱುತ್ತುಮಿರ್ಪಲ್ಲಿ
ತರದಿಂ ಕುಳ್ಳಿರ್ದ ಸಂಧ್ಯಾಸಮಯವಿಮಳಮಂತ್ರಾಕ್ಷರಸ್ತೋಮಶೋಭಾ।
ಕರವಕ್ತ್ರಾನೀಕದಿಂದೊಪ್ಪುವ ಮುನಿತತಿಯಿಂ ಪರ್ಣಶಾಲಾಂತ್ಯದೊಳ್ಭಾ ॥
ಸುರಶಂಭುಧ್ಯಾನನಾನಾಜಪನಿಯಮಸದಾಹೋಮದಿಂದಿರ್ಪ ವಿಪ್ರೋ।
ತ್ಕರದಿಂದಂ ತುಂಗಭದ್ರಾತಟಮೆಸೆದುದು ಹೇಮಾಚಳಪ್ರಾಂತಕಾಂತಂ ॥

ಮತ್ತಮಾತುಂಗಭದ್ರೆ ಶಿವನ ಕೀರ್ತಿಯಂತೆ ಭುವನಭರಿತಮುಂ, ಪಾರ್ವತೀವಿಳಾಸದಂತೆ ತೀರದೊಪ್ಪಮುಂ, ಅಮರಾವತಿಯಂತನಿಮಿಷಪ್ರಕರಮುಂ, ಕಟಿಗೊರಲನಂತೆ ವಿಷಭಂಗಮುಂ, ಗಗನತಳದಂತೆ ವಕ್ರಗತಿ

ಯುಂ, ದ್ವಿಜರಾಜಶೋಭಿತಮುಮೆನಿಸಿರ್ದುದು. **ಆನದಿಯುಭಯತಟವಿ**
ಳಸಿತವನಾಳಿಯಲ್ಲಿ

ಪಱಿದೆಲೆಯಿಟ್ಟು ಪಲ್ಗಿಱಿದು ಹಣ್ಣಿನುತುಬ್ಬುತೆ ಪುಬ್ಬನೇಱಿಸು |
ತ್ತುಱುಗಿ ನೋಡಿ ದಾಂಟಲನುಗೆಯ್ಯುತೆ ತೂಗುತೆ ರಱಿಂಕಿಸುತ್ತೆ ಬಾ ‖
ಯ್ದೆಱೆದೊಲೆಯುತ್ತೆ ಕೈನೆಗಪಿ ಜಾಗಿಸಿ ಕುಗ್ಗುತೆಯೋಡಿಸುತ್ತೆ ತಾಂ |
ನೆಱೆ ನಗಿಸಿತ್ತು ತಾಪಸಕುಮಾರರನಲ್ಲಿಯದೊಂದು ಮರ್ಕಟಂ ‖

ಅಂತು ಪರಿಹಾಸರಸಮಂ ಮುನಿಗಳ ಮೊಗಕ್ಕೆ ಮೊಗೆದು ಚೆಲ್ಲುವಂತೇಡಿಸುವ ಕೋಡಗಂಗಳಂ ನೋಡುತುಂ ಬರೆನರೆ ಮುಂತನಂತಗುಲ್ಮಲತಾವೃಕ್ಷಗುಹಾಗಹ್ವರಂಗಳೊಳ್ ಶಿವಧ್ಯಾನನಾನಾತಪೋಭರಭರಿತಮಾದ ಮನುಮುನಿಸ್ತೋಮದಿಂ ಹೇಮಕೂಟಾಚಳಪ್ರಾಂತಮಿರ್ದುದು. ಅದೆಂತೆಂದೊಡೆ—

ಪರಮಾರ್ಥಂ ಪುಣ್ಯತೀರ್ಥಂ ಮೃಗಪತಿನಿಕರಸ್ವಾರ್ಥಮುದ್ಯತ್ಸದರ್ಥಂ |
ಸುರಭೂಜಂ ಶೈವತೇಜಂ ವಿಮಳಮುನಿಸಮಾಜಂ ನಗವ್ರಾತರಾಜಂ ‖
ಸ್ಥಿರಶೀಲಂ ದಂತಿಜಾಲಂ ಸುಕೃತಪರಿವೃತಸ್ಥೂಲಮೊಪ್ಪಿತ್ತು ಶೈಲಂ |
ವರಕೂಟಂ ಶೃಂಗಮಾಟಂ ಮೃಗಧರಧರಜೂಟಂ ಕರಂ ಹೇಮಕೂಟಂ ‖

ಆಶೈಲದಲ್ಲಿ

ತರುತರುಗಳೊಳಗನಾದಿಯ |
ಹಿರಿಯರತಿವ್ರತಿಗಳಚಳರಾಲೂಢರ್ ಭ ‖
ಕ್ತಿರಸಾವಿಷ್ಟರ್ ನಿಯತರ್ |
ಪರಮತಪೋನಿಧಿಗಳಧಿಕರುನ್ನತರಿರ್ಪರ್ ‖ ೨೨

ವೇದಕರೀಶನ ಭಕ್ತಿಯ |
ಬೋಧಕರುರುಸಾತ್ತ್ವಿಕರ್ ಸದರ್ಥರ್ ಸಿದ್ಧರ್ ‖
ಸಾಧಕರುತ್ತಮರಭವಾ |
ರಾಧಕರತಿಸಾಧುಗಳ್ ವಿರಾಜಿಸುತಿರ್ಪರ್ ‖ ೨೩

ನಿರತರ್ ಭರಿತರ್ ಚರಿತರ್ |
ಪರತತ್ವರತರ್ ನುತರ್ ವಿರಕ್ತನತೇಜಃ ‖
ಕಿರಣರ್ ಕರುಣರ್ ಶರಣರ್ |
ಕರುಣಾಳುಗಳರುಣಮಣಿನಿಭರ್ ನೆಲಸಿರ್ಪರ್ ‖ ೨೪

ಅಂತವರ ನಿಸ್ಸೀಮತಪಃಪ್ರಭಾವಮಂ ನೋಡುತ್ತುಂ ಬರ್ಪಾಗಳ್
ಕರೆಯುತ್ತು ಕೋಕಿಳೆ ಮಧುಪಂ ।
ಮೊರೆಯುತ್ತು ಗಿಳಿ ಗಳಪನನಿಲನಲ್ಲಾಡಂ ಪೆ ॥
ರ್ಮರನಂ ಗಿಡುಮಂ ಲತೆಯುಂ ।
ಗುರುಶರ್ವಸಮಾಧಿಭೀತಿಯಿಂದಾನಗದೊಳ್ ॥ ೨೫

ಅಂತವರನೀಕ್ಷಿಸುತ್ತುಂ ಬರೆವರೆ ಮುಂದೆ
ಭಾನುಪ್ರದ್ಯೋತಕಾಯಂ ನುತಸುಕೃತನಿಕಾಯಂ ವಿನಾಯಂ ಮಹೇಶ।
ಧ್ಯಾನಾರೂಢಂ ಸಗಾಢಂ ಸವಮಳಗುಣಚೂಡಂ ಶಿವಜ್ಞಾನಲೀಢಂ ॥
ಶ್ರೀನಂದೀಶಂ ಸುವೇಶಂ ಸುರುಚಿರಸುಖಸಾಕಾರಸಾರಂ ಸುಧೀರಂ ।
ಸಾನಂದಂ ಕಾದು ನಿಂದಾ ಗಿರಿಶಿಖರಮುಖದ್ವಾರಮಂ ಭಕ್ತಿಯಿಂದಂ ॥ ೨೬

ಅಂತಿರ್ದ ನಂದಿನಾಥಂ ।
ಮುಂತಿದಿರ್ವಂದಗಜೆಗೆಱಗಿ ಹೆಱಸಾರ್ದೊಲವಿಂ ॥
ದಂ ತಾಯೆ ದೇವಿ ಶಾಂತೆಯ ।
ನಂತಗುಣಾಭರಣೆ ಕರುಣಿ ಶರಣೆನುತಿರ್ದಂ । ೨೭

ಆಗಳ್

ತೊಳಗುವ ಶಾರದನೀರದ ।
ದೊಳಗಿಂ ಮಿಂಚೆಱವ ತೆಱದೆ ಗಿರಿಸುತೆ ಶಶಿಮಂ ॥
ಡಳದಧಿದೇವತೆ ಧರಣೀ ।
ತಳಕ್ಕೆ ಬರ್ಪಂತೆ ಪುಷ್ಪಕದಿನಿೞಿತಂದಳ್ ॥ ೨೮

ಬಡನಿೞಿದಂ ಗಿರಿರಾಜಂ ।
ತಡವಿಲ್ಲದೆ ಭೋಂಕನಿೞಿದು ಜಯೆವಿಜಯೆಗಳಾ ॥
ಗಡೆ ನವರತ್ನದ ಪಾತ್ರಗೆ ।
ಯಿಡೆ ಮೊಟ್ಟದಳಗಜೆ ಮುಟ್ಟಿದಳ್ ಶಿವನೊಲವಂ ॥ ೨೯

ಗಿರಿರಾಜಂ ಕೈಗುಡೆ ನೇ ।
ವುರದ ಕಳಧ್ವಾನಮೊಗೆದು ನಗಮಂ ಜಗಮಂ ॥
ಪರಿವೇಷ್ಟಿಸೆ ಬರುತಿರ್ದಳ್ ।
ಪರಮೇಶ್ವರಿ ಚಂದ್ರಧರನನೀಕ್ಷಿಪ ಭರದಿಂ ॥ ೩೦

ಅಂತು ಬರೆವರೆ

ಇದು ವಿದ್ಯುತ್ಪ್ರಭವಪ್ರಭಾಪ್ರಸರವೋ ಸಂಪೂರ್ಣಚಂದ್ರಾಂಶುಸಂ ।
ಪದವೋ ಶಾಶ್ವತಸೂರ್ಯಕೋಟಿರುಚಿರಪ್ರದ್ಯೋತವೋ ಮಾಣಿ ಪ್ರೌ ॥
ಢಿದ ಸರ್ವೇಶನಿಜಪ್ರಕಾಶನಿಧಿಯೋ ಪೇಳೆಂಬಿನಂ ತೋಱುತಿ ।
ರ್ದುದು ದಿಕ್ಸಂಕುಳನಿರ್ಮಳೀಕೃತವಿರೂಪಾಕ್ಷಪ್ರಭಾಮಂಡಲಂ ॥ ೩೧

ಆಪ್ರಭಾಮಂಡಲದೊಳಗೆ

ವಿಳಸತ್ಪದ್ಮಾಸನಂ ಭಾಸುರಭಸಿತವಪುರ್ವಲ್ಕಲಂ ಧ್ಯಾನಮುದ್ರಾಂ ।
ಗುಳಿ ರುದ್ರಾಕ್ಷಾಕ್ಷಮಾಲಾರುಚಿನಳಿನಗುಣವ್ರಾತಯಜ್ಞೋಪವೀತಂ ॥
ಲಳಿತಾಸ್ಯಂ ಸ್ನಿಗ್ಧಗಂಡಂ ಮುಕುಳಿತನಯನಂ ಚಿತ್ತನಿಷ್ಕಂಪನಂ ಪಿಂ ।
ಗಳವರ್ಣೋದ್ಯಜ್ಜಟಾಮಂಡಲವೆಸೆಯೆ ತಪೋವೇಷದಿಂದೀಶನಿರ್ದಂ॥ ೩೨

ಮನವೆಂತುಂ ಬುದ್ಧಿಯೊಳ್ ಬುದ್ಧಿಯು ನಿಲವದಹಂಕಾರದೊಳ್ತನಹಂ
ಕಾ । ರನಿಜಂ ಚಿತ್ತಾಂತದೊಳ್ ಚಿತ್ತದ ನೆಲೆ ವಿಲಸತ್ಪ್ರಾಣದೊಳ್ ಪ್ರಾ
ಣಮುಂ ಜೀ ॥ ವನೊಳಾದಂ ಕೂಡೆ ಜೀವಂ ಪರಮನೆನಿಸಿ ನಿರ್ಮಾಯ
ನಿಷ್ಕಾಮಿನಿಷ್ಕಂ । ಪನಿವಾತಜ್ಯೋತಿರೂಪಂ ನಿರುಪಮನೆನಿಸಿರ್ದಂ ವಿ
ರೂಪಾಕ್ಷಲಿಂಗಂ ॥ ೩೩

ಭಿನ್ನಾಭಿನ್ನಜ್ಞಾನಮ ।
ಯಂ ನಿಜತೇಜೋವಿಲೀನಮಾನಸನಚಲಂ ॥
ತನ್ನಂ ತಾನೇ ಜಾನಿಪ ।
ಚಿನ್ನಣದೊಳಗಿರ್ದನಭವನದ್ವಯರೂಪಂ ॥ ೩೪

ಇದು ಸತ್ಯಾಕಾರವೋ ಶಾಂತಿಯ ನೆಲೆವನೆಯೋಧರ್ಮವಿಸ್ತಾರವೋ ಪು।
ಣ್ಯದ ಜನ್ಮಸ್ಥಾನವೋ ಜ್ಞಾನದ ನಿಜರುಚಿಯೋ ನಿತ್ಯನಿರ್ಮಾಯಮೋ ತ ॥
ತ್ವದ ತೇಜಃಪುಂಜವೋ ಮುಕ್ತಿಯ ಸುಖಮುಖವೋ ಯೋಗಸಂಧಾನ
ವೋ ನೋ । ಡಿದು ತಾನೆಂಬಂತೆ ಮುಂತಿರ್ದುದು ಶಿವನ ನಿಜಧ್ಯಾನಮೂ
ರ್ತಿಪ್ರಭಾವಂ ॥ ೩೫

ಅಂತುಮಲ್ಲದೆ

ಮಾತಿನ ವೇಧೆಯ ಬೋಧೆಯ ।
ಭೂತಾದಿಯ ಪಂಚವಿಂಶತಿಗಳಂ ಮಾಣಿ ॥

ಜ್ಞಾತೃಜ್ಞಾನಜ್ಞೇಯ ।
ವ್ರಾತಮನಱಿದುಱಿದು ತಾನೆ ತಾನಾಗಿರ್ದಂ ॥ ೩೬
ಮುನಿತತಿಗಳ ಮನಮೆಯ್ದದ ।
ಮನಗಳ ಬಗೆ ಪುಗದ ಶಾಸ್ತ್ರವಱಿಯದ ವೇದಂ ॥
ಜಿನುಗುವ ಗಜಬಜೆ ನಿಳ್ಕದ ।
ಘನತೇಜೋರಾಶಿ ನಿಜನಿವೇಶದೊಳಿರ್ದಂ ॥ ೩೭
ಪೊಱಗಂ ಬಳಸದ ಮಾಯೆಗೆ ।
ತೆಱಹಂಗುಡದಚ್ಚಬಚ್ಚಬಱಿಯಱಿವಿನ ಸೈ ॥
ವೆಱಗಿನ ಮಱಹಿನ ಕುಱುಹಿನ ।
ಕಱೆಗೊರಲಂ ನಿಜಸಮಾಧಿಯೊಳ್ ಸಂದಿರ್ದಂ ॥ ೩೮
ಇರೆ ಕಾಣುತೆ ಗಿರಿರಾಜಂ ।
ಪರಮಸುಖಂಬಡೆದು ಪಿಡಿದು ಮೆಲ್ಲಡಿಯುಂ ಸಾ ॥
ದರದಿಂ ಹರ್ಷಂ ಮೂಡು ।
ತ್ತಿರೆ ಪುಳಕದ ಮೆಯ್ಯೊಳೊಲ್ದು ಮೆಯ್ಯಿಕ್ಕಿರ್ದಂ ॥ ೩೯
ಅಂತು ಮೆಯ್ಯಿಕ್ಕಿ ನಿಂದು ಕೆಯ್ಯಂ ಮುಗಿದು ಪಾರ್ವತಿಯುಂ ಕರೆದು
ಅನುಪಮನಿರ್ದನಿರ್ದನೆ ಶರಣ್ಬುಗು ಶಾಶ್ವತಮೂರ್ತಿಯಿರ್ದನಿ ।
ರ್ದನೆ ನಡೆನೋಡು ಚಂದ್ರಧರನಿರ್ದನೆ ನಂಬು ನಿಜೇಶನಿರ್ದನಿ ॥
ರ್ದನೆ ಪರಿಭಾವಿಸಪ್ರತಿಮನಿರ್ದನೆ ಕೀರ್ತಿಸು ಶಂಭುವಿರ್ದನಿ ।
ರ್ದನೆ ಪದೆದರ್ಚಿಸರ್ಚಿಸೊಲವಿಂದಮೆ ಪಾರ್ವತಿ ಹಂಪೆಯಾಳ್ದನಂ ॥ ೪೦
ನಿಧಿಯಿದೆ ಭಕ್ತರ ಬೈಕೆಯ ।
ನಿಧಾನವಿದೆ ಯಚ್ಚಶರಣರನುವಿದೆ ಕರುಣಾಂ ॥
ಬುಧಿಯಿದೆ ಸುಧೆಯಿದೆ ಕೇಳ್ ನಿ ।
ನ್ನಧಿಪಂ ಶಶಿಮೌಳಿಯೆಂಬ ಕಲ್ಪಮಹೀಜಂ ॥ ೪೧
ಸದಮಳಮಿದೆ ಪರತತ್ತ್ವದ ।
ನಿದಾನಮಿದೆಯಾದ್ಯರಱಿದು ಕುಱುಹಿಟ್ಟಾನಂ ॥
ದವ ಮೊದಲಿದೆ ಪರಮಾ ।
ರ್ಥದತುದಿಯಿದೆ ಗಿರಿಜಾತೆ ನೋಡು ನೆನೆ ಹೊಗೞೆಂದಂ ॥ ೪೨

ಎಂದು ಗಿರಿರಾಜಂ ಹರನ ಪರತತ್ವಮುಮಂಸೌಂದರ್ಯರೂಪಮುಮಂ ಗಿರಿಜೆಗೆ ತೋಱುತ್ತುಂ ಪೊಡಮಡು ಪೊಡಮಡೆನೆ, ಪಾರ್ವತೀದೇವಿಗೆ ಕೌತುಕರಸದೊಳಾನಂದಂ ಪುಟ್ಟೆ ಭಯರಸದೊಳ್ ಭಕ್ತಿಯುಣ್ಮೆ ಸ್ನೇಹರಸದೊಳ್ ತಾತ್ಪರ್ಯಂ ಪೊಣ್ಮೆ ಶೃಂಗಾರರಸದೊಳ್ ಲಜ್ಜೆವೆರಸಿ ಕಲ್ಪತರುವಿನ ಬೀೞಲ್ ಮಹಾನಿಧಾನಕ್ಕೆಱಗುವಂತೆ ಮಂದಾನಿಳನ ಸೋಂಕಿಂದಂ ಪುಷ್ಪಮಾಲೆ ಬಳ್ಕುವಂತೆ ಕುಸುಮಚಾಪಂ ಕಾಲ್ಗೆಱಗುವಂತೆ ಪಂಚಬಾಣಂ ಹೊಡೆಗೆಡೆವಂತೆ ಮುಂದೆ ನಿನ್ನಂ ವಾಮಭಾಗಮಂ ಸೂಱೆಗೊಳ್ವುದರ್ಕಿದೆ ಕುಱುಪೆಂಬಂತೆ ಬಿಂಕದಿಂ ಕೊಂಕಿ ನಿಂದು ವಿಲಾಸದಿಂದೆಡದುಂಗುಟಮಂ ಲಲಾಟದಿಂ ಮುಟ್ಟೆ ಪೊಡೆಮಟ್ಟು ನಿಂದು

ಅನಿರ್ದಂತಿರದೇಕೆ ಬೇಡ ತಪಮೆಂದೆಂಬಂತೆ ಸಂಕಾರದಿಂ ।
ನೀನೇ ಸದ್ಗತಿ ದೇವದೇವ ದಯೆಗೆಯ್ಯೆಂಬಂತೆ ಕಾರ್ಪಣ್ಯದಿಂ ॥
ಸಾನಂದಾತ್ಮಕನೆನ್ನನೇಕಱಿವನೆಂದೆಂಬಂತೆ ನಿರ್ವೇದದಿಂ ।
ನಾನಾಭೋಗದೊಳೆಂದು ಕೂಡಿದಪೆನೆಂಬಂತಾಸೆಯಿಂ ನೋಡಿದಳ್ ॥ ೪೩

ಅಂತು ನೋಡಿ

ಶಿವನೀತಂ ನಿಜವಲ್ಲಭಂ ಮಮ ಗುರು ಪ್ರಖ್ಯಾತನತ್ಯೂರ್ಜಿತಂ ।
ಭವನೆನ್ನಾಳ್ದನೆನಿಪ್ಪದಂ ತಿಳಿದೆನಾಂ ನೀಂ ಪೋಗು ನಿಶ್ಚಾರ್ಯನೋ ॥
ತ್ರನದಿಂ ಸಂತಸದಿಂ ಸದಾತುರತೆಯಿಂ ಸಾನಂದದಿಂದಿರ್ದೆನೆಂ ।
ದು ವಿಳಾಸಾಬ್ಧಿ ಭವಾನಿ ನೋಡಿ ನುಡಿದಳ್ ಭೂಭೃತ್ಕುಲಾಧೀಶನೊಳ್ ॥

ನುಡಿಯೆ ಗಿರಿರಾಜನೊಲವಿಂ ।
ಮೃಡಾಣಿಯುಂ ನೋಡಿ ಮಗಳೆ ಮಾತೆ ಕರಂ ನ ॥
ಟ್ಟಡವಿ ಗುಹೆ ಗಹ್ವರಂ ಮಡು ।
ಗಿಡುವಿನಱೊಳ್ ಪದುಳಮರ್ಪ್ಪಿಸೆನುತುಂ ನುಡಿದಂ ॥ ೪೫

ಪತ್ತಡಿಯಿಟ್ಟತಿಮೋಹಂ ।
ಚಿತ್ತಮನಳ್ಕುರಿಯೆ ತಿರಿಗಿ ಬಂದು ಗಿರಿಜೆ ಲೋ ॥
ಕೋತ್ತಮೆ ಪೋದಪೆನೆನುತುಂ ॥
ಮತ್ತಂ ಮತ್ತಪ್ಪಿ ಪರಸಿ ಗಿರಿಪತಿ ಪೋದಂ ॥ ೪೬

ಅಂತು ಪೋಗೆ ಚಿಂತಿಸಿ ನೋಡಿ ಮುಂತಿರ್ದ ವಿಪುಳವಿಭ್ರಮನಂ ತಪೋಮಯನಂ ವಿಳಾಸನಿಧಿಯಂ ವೈರಾಗ್ಯಯುಕ್ತನಂ ಭಸಿತಕಾಯನಂ ಸೌಂದರ್ಯರೂಪನಂ ಜ್ಞಾನಪ್ರದೀಪನಂ ನಿಜಸುಖನಿವಾಸನಂ ಸ್ವಯಂಪ್ರಕಾಶನಂ ಕಂಡು ಶೃಂಗಾರರಸಕ್ಕೆ ಮನಂದಂದು ವೈರಾಗ್ಯರಸಕ್ಕೆ ಮೆಯ್ದೆಗೆದು ಸಹಚರಿಯರಪ್ಪ ಜಯೆವಿಜಯೆಗಳ್ಗೆ ನಗತನೂಜೆ ನಿರ್ವೇದದಿಂದಿಂತೆಂದಳ್:—

ಇದೆ ವಿಭು ನೋರ್ದನೊಲ್ದು ಪರವಂ ಪರವಂ ಪರವಂಚನೋಕ್ತಿ ಕೊ ।
ಳ್ವದು ತಪನತ್ಯಸಾಧ್ಯವಿಷಯಂ ವಿಷಯಂ ವಿಷಯಂತ್ರದಂತೆ ಸು ॥
ತ್ತಿದುದುಪತಾಪವೆಯ್ದಿ ತನುವಂ ತನುವಂ ತನುವಂ ಕಪರ್ದಿ ನೋ ।
ಡದೊಡೆನಗಾದುದೆಯ್ದೆ ಕುಮುದಂ ಕುಮುದಂ ಕುಮುದಂ ಮೃಗೇಕ್ಷಣೇ ॥

ತಪವಿಂತಿದು ಮದ್ವಿರಹಾ ।
ತಪವತ್ಯಧಿಕಂ ತುಡುಂಕಬಾರದಪಾರಂ ॥
ತಪನನ ತೇಜಕ್ಕಂ ವಿ ।
ತ್ತಪನಱಿವಿಂಗಂ ವಿಶೇಷಚೋದ್ಯಮಭೇದ್ಯಂ ॥　　　　೪೮

ನಿಗಮಂಗಳ್ ವಿಷ್ಣುವಿರಿಂ ।
ಚಿಗಳಱಿಯದ ಶಿವನನಱಿವೊಡೆನ್ನಳವೇ ಪೇಳ್ ॥
ಬಗೆವೊಡೆ ಸಾತ್ವಿಕಶಿವಭ ।
ಕ್ತಿಗಲ್ಲದಭವಂ ಸನುಂತು ಸಿಲ್ಕಂ ಸಿಲ್ಕಂ ॥　　　　೪೯

ಅದುಕಾರಣದಿಂ ಭಕ್ತಿ ।
ಪ್ರದನ ವಿರೂಪಾಕ್ಷನಂಘ್ರಿಗಳನರ್ಚಿಸುವೆಂ ॥
ಸದಮಳಶಿವಸುಖಮುಖಸಂ ।
ಪದದೊಳ್ ಬಱಿಕಿರ್ಪೆನಪ್ಪಿ ಶರ್ವನ ತನುವಂ ॥　　　　೫೦

ಎಂದಬಲೆಯರೊಳ್ ನುಡಿಯು ।
ತ್ತುಂ ದಟ್ಟಡಿಯಿಟ್ಟು ಭಕ್ತಿ ತನ್ನಯ ಮನವಂ ॥
ಬಂದಡರೆ ಭರಂ ಮಿಗೆ ಮುಂದ ।
ದಿಂದಂ ಪುಷ್ಪಾಪಚಯಕೆ ಗಿರಿಸುತೆ ಬಂದಳ್ ॥　　　　೫೧

ನೇವುರದ ನುಣ್ದನಿಗೆ ಮಿಗೆ ।
ಯಾವರಿಸುವ ಹಂಸೆವಿಂಡನೆಡಪುತ್ತುಂ ಸ ॥

ಹ್ಯಾವಕಿ ಭಾಮಿನಿ ಭರ್ಗನ ।
ಜೀವಂ ಶೃಂಗಾರವಾರಿನಿಧಿ ನಡೆತಂದಳ್ ॥ ೫೨

ಇಂತು ನಡೆತಂದು ಪೂದೋಂಟಮಂ ಪೊಕ್ಕು,

ಅರಲೆ ಸುಕುಮಾರೆ ಸೌರ ।
ಭ್ಯರತೆ ವಸಂತಾನುಕೂಲೆ ಮೆಲ್ಲಡಿಯಿಡುತುಂ ॥
ಹರನ ಜಡೆಮುಡಿಗೆ ನಡೆತಂ ।
ದಿರವಂತಿಗೆಯುರಲನಗಜೆ ಬಗೆಮಿಗೆ ತೆಗೆದಳ್ ॥ ೫೩

ತೊಳಗುವ ಚಂಪಕನಾಸಿಕೆ ।
ಬಳಸಿದ ಚಂಪಕಸುಗಂಧಿ ನಗನಂದನೆ ಬಂ ॥
ದಲಿಮನವಲ್ಲದ ಭಕ್ತ್ಯು ।
ಜ್ಜ್ವಳೆ ತಿರಿದಳ್ ಕಂಪು ಸುರಿವ ಸಂಪಗೆಯುರಲಂ ॥ ೫೪

ಎಸೆವ ರಜೋಗುಣವಿಲಸಿತ ।
ಪ್ರಸನ್ನಮುಖರಾಗಯುಕ್ತೆ ಶಿವಪದಪೂಜಾ ॥
ವ್ಯಸನೆ ಶಶಿವದನೆ ತಿರಿದಳ್ ।
ಪೊಸಹರಿಸಮನಾಂತು ಶಾಂತೆ ಸೇವಂತಿಗೆಯಂ ॥ ೫೫

ಪರಮೋತ್ಸವದಿಂ ನಡೆತಂ ।
ದುರುತರಮೃಗನಾಭಿಗಂಧಿ ನಿಂದು ಬಿಳಿಯ ಕ ॥
ಸ್ತುರಿ ತಾನೆನಿಸುವ ಪಚ್ಚೆಳ ।
ಯುರಲಂ ತಿರಿದಳ್ ಭವಾನಿ ಶಿವಪೂಜಾರ್ಥಂ ॥ ೫೬

ಎಳಸಿ ನಲಿನಲಿದು ನವಪಾ ।
ಟಳಗಂಧಿಕೆ ಪಾಟಳಾಂಗಿ ಮಿಗೆ ಕೊಯ್ದಳ್ ಪಾ ॥
ಟಳರುಚಿರಾಧರೆ ಕಾಮನ ।
ಶಿಳೀಮುಖದ ಪರಿಯ ಪಾದರಿಯ ಪೊಸಪೂವಂ ॥ ೫೭

ಅವಂ ಕೊಂಡು ಮತ್ತೆ ನಡೆತಂದು ಕೊಳನಂ ಪೊಕ್ಕು

ಕಮಳಂದಿರಿಯಲ್ ನಿಜಕರ ।
ಕಮಳಮುಮಂ ನೀಡೆ ಕಯ್ಯ ಕಂಪಿಂಗೆಮುಮ ॥

ಭ್ರಮರಾಳಿ ಮುತ್ತೆ ಕರವಂ ।
ಕಮಳಂ ದಿಟಮೆಂದು ಬಗೆದು ನೋಡುತ್ತಿರ್ದಳ್ ॥ ೫೮
　　ಅಂತು ನೋಡಿ ತಿಳಿದು
　　ಮಿಸುಪ ನವತರುಣತರಣಿಯ ।
ಪೊಸಬಿಸಿಲಪೊಳೆಸೆವ ತನುವಿನರಿಸಿನಪೊಲಸಿಂ ॥
ದೆಸೆಯೆ ರಥಾಂಗಕುಚದ್ವಯ ।
ಪೊಸದಾವರೆವೂಸನೋವಿ ಭಾವಿಸಿ ತಿರಿದಳ್ ॥ ೫೯
　　ಸದಮಳಮೃದುಮಯುಪಸ್ತ ।
ಪ್ರದೇಶವಂ ಸುತ್ತಿ ಮುತ್ತೆ ಮತ್ತಾಳಿಗಳಂ ॥
ಮದಕೋದಂಡಭ್ರೂಯುಗೆ ।
ಸುದೀರ್ಘನಖಿ ಕೊಯ್ದಳೊಲ್ದು ನುತಕೇತಕಿಯಂ ॥ ೬೦
　　ಸೆಳ್ಳುಗುರ್ಗಳ ನಳನಳಿಸುವ ।
ಬಳ್ಳಿವೆಳಗು ಕರೆಯೆ ಕೌಮುದಿಯನುತ್ಸವದಿಂ ॥
ದುಳ್ಳಲರ್ ಕುಮುದಕುಲದೊಳ ।
ಗೊಳ್ಳಿದುವಂ ತೆಗೆದಳಿಂದುಮುಖಿ ತಿಳಿಗೊಳದೊಳ್ ॥ ೬೧
　　ಜಾತಿಸುಗಂಧಿನಿ ಮೇನಾ ।
ಜಾತೆ ಕುಸುಮಜಾತಿಯೊಳಗೆ ಜಾತಿಯಿದೆಂದಾ ॥
ಜಾತಿಸ್ತ್ರೀಜಾತಿಯೊಳತಿ ।
ಜಾತೆ ಜಗನ್ಮಾತೆ ಜಾತಿಯರಲಂ ಕೊಯ್ದಳ್ ॥ ೬೨
　　ಮಲ್ಲಿಗೆ ಶರ್ವನ ಜಡೆಮುಡಿ ।
ಯುಲ್ಲಿಗೆ ಕೊಂಡೊಯ್ವೆನೆಂದು ಸಮ್ಮದದಿಂ ನಿ ॥
ಮ್ಮಲ್ಲಿಗೆ ಬಂದೆನೆನುತ್ತುಂ ।
ಮಲ್ಲಿಗೆಯಲರ್ಗಲಂ ಮಹೇಶ್ವರಿ ತಿರಿದಳ್ ॥ ೬೩
　　ಮತ್ತಂ ಪುಷ್ಪಜಾತಿಯಂ ಕೊಯ್ದು ಪತ್ರಜಾತಿಯಂ ಕೊಯ್ವಲೆಂದು
　　ಸಹಜಾವೋದದೆ ಸುಗಂಧಾ ।
ವಹಮೆನಿಸಿದ ಮರುಗದಲ್ಲಿ ಪರಿಮಳದೆಲೆಯಂ ॥

ಬಹುಗುಣಭೂಷಣೆ ಭಕ್ತಿಯೊ ।
ಳಹಿನಿವಹಾಭರಣನರ್ಚನೆಗೆ ನೆರೆ ತಿರಿದಳ್ ॥ ೬೪

ನಲವಿಂದಂ ಮುಡಿವಾಳದ ।
ನೆಲೆಗೆಯ್ತಂದಗತನೂಜೆ ಬೇರಂ ಬಲ್ಲ ॥
ರ್ಗೆಲೆದೋಅಲೇಕೆ ನೀನೆನು ।
ತೊಲವಿಂ ಪರಿಮಳದ ಬೇರ್ಗಳಂ ಬರೆತೆಗೆದಳ್ ॥ ೬೫

ಇಂತಿಂತನಂತಕಾಂತಲ ।
ತಾಂತಂಗಳನಾಯ್ದು ಕೊಯ್ದು ಸಂತಸದಿಂದಂ ॥
ಮುಂತೆ ನವಾಂಕುರಕಿಸಲಯ ।
ದಿಂ ತೀವಿದ ಬಾಲಚೂತದೆಡೆಗೆಯ್ತಂದಳ್ ॥ ೬೬

ಬಡನೆ ಜಯೆವಿಜಯೆಗಳ್ ಮೆ ।
ಲ್ಲಡಿಯಿಡುತುಂ ಬಂದು ಪುಷ್ಪಪುಟಿಕೆಗಳಂ ಸಂ ॥
ಗಡಮಿಟ್ಟು ವಿಮಳಪದದೊಳ್ ।
ಪೊಡೆಮಡುತುಂ ಗಿರಿತನೂಜೆಗತಿಮುದದಿಂದಂ ॥ ೬೭

ಅಂತು ಪೊಡೆವಟ್ಟು ಬಾಲಸಹಕಾರತಳದೊಳ್ ಹರಿತಭೂಮಿಕೆಯೊಳ್ ಸುರುಚಿರಮರೀಚಿಗಳಂಕುರಿಸಿತೆಂಬಂತೆ ನಳನಳಿಸಿ ಬೆಳೆದ ಪೊಸಪಸಲೆಯ ಮೇಲೆ ಕದಳಿದಳಂಗಳಂ ಕಮಲಪತ್ರಂಗಳಂ ನುಣ್ಬೆಳಗಂ ಕಱೆವ ಪೊಂಬಾಳೆಯ ಪತ್ರಂಗಳನಿಂಬಿನಿಂ ಪಾಸುತ್ತುಂ ಪಾಸಿಂಗೆ ಕವಿವ ಮತ್ತಾಳಿಗಳನೆತ್ತುಂ ನಿವಾರಿಸುತ್ತುಂ ಕುಸುಮಕುಲಮನನೆಸೆಯೆ ಸುರಿದು ಭಾಸುರದುಕೂಲದಿಂ ಬಾಸಣಿಸಿ ಶತಪತ್ರಸೂತ್ರಕುಲಮಂ ಕೆಲದೊಳಿರಿಸಿ ಮೆಯ್ಯಿಕ್ಕಿ ಕೆಯ್ಯಂ ಮುಗಿದು-ದೇವಿ ಜಗನ್ಮಾತೆ ಸರ್ವಕಳಾಕೋವಿದೆ ಸುಕುಮಾರಾಂಗಿ ಸೌಂದರ್ಯಮೂರ್ತಿ ಇತ್ತ ಬಿಜಯಂಗೆಯ್ವುದೆಂದು ಬಿನ್ನವಿಸಿ ಕೆಯ್ಗುಡೆ, ಮೃದುಪದನ್ಯಾಸದಿಂ ನಡೆತಂದಿಕ್ಕಿದ ಮಾಂದಳಿರ ಪೊಸಪಸೆಯಮೇಲೆ ಕಮನೀಯದಿಂಕುಳ್ಳಿರ್ದಾಗಳ್

ಪರಿಮಳದಧಿದೇವತೆಯೋ ।
ವರಕುಮುದದ ಕೂಡೆ ಬಂದ ಶಶಿಕಳೆಯೋ ಮಾ ॥

ರಿರುಹದ ನಡುವೇಯ್ತಂದಿಂ ।
ದಿರೆಯೋ ಎನೆ ದೇವಿ ಪೂವನೋವುತ್ತಿರ್ದಳ್ ॥ ೬೮
ಅಂತೋವುತ್ತು ಮಿರ್ದು
ಮುಟ್ಟಿದೊಡಾಗಳೆ ಕಂದುವ ।
ನೆಟ್ಟನೆ ನೋಡಿದೊಡೆ ಕೋಡಿ ಬಾಡುವ ನೆನೆಯಲ್ ॥
ತೊಟ್ಟನೆ ಕೊರಗುವ ಪೂವಂ ।
ಕಟ್ಟುವ ಪರಿಯೆಂತೆನುತ್ತೆ ಚಿಂತಿಸುತಿರ್ದಳ್ ॥ ೬೯
ಅಂತು ಚಿಂತಿಸಿ ನೋಡಿ ಭಕ್ತಿಯೊಳ್ ಕೂಡಿ ಪೂಜಿಸಲ್ಬೇಡಿ ಪೂವಂ
ಪೂಸೋಂಕೆ ಕೊರಗವೆಂಬಂತೆ ತನ್ನ ಕರಕಮಲಮಂ ನೀಡಿ
ಅತಿಸುಕುಮಾರಿ ಸುಖಾಕರೆ ।
ನುತಗುಣಗಣಯುಕ್ತೆ ಶಾಂತೆ ಸಾತ್ವಿಕರೂಪಾ ॥
ನ್ವಿತೆ ಸರ್ವಕಳಾನಿಧಿ ಪಾ ।
ರ್ವತಿ ಸತಿ ಶತಪತ್ರಸೂತ್ರಮಂ ತೆಗೆಯುತ್ತುಂ ॥ ೭೦
ವದನಕ್ಕಂ ಕುಸುಮಕ್ಕಂ ।
ಪದೆದೆಯ್ದುಗುವ ಮಧುಕರಂಗಳಂ ಸೋವುತ್ತುಂ ॥
ಮೃದುತರಸರಳಾಂಗುಲಿಯಿಂ ।
ಸದಮಲೆಯಿರವಂತಿಯುರಲನೊಲವಿಂ ಪಿಡಿದಳ್ ॥ ೭೧
ಪಿಡಿದೆತ್ತಿ ನಳಿನಗುಣದೊಳ್ ।
ತೊಡರ್ಚುತುಂ ಮೆಲ್ಲಮೆಲ್ಲನಿರವಂತಿಯ ಪೂ ॥
ದೊಡಿಗೆಗಳಂ ವಿರಚಿಸಿದಳ್ ।
ಮೃಡಾಣಿ ಮೃಡನವಯವಕ್ಕೆ ಸಡಗರದಿಂದಂ ॥ ೭೨
ಸರಸಿಜಬಂಧಂ ಕಮಲಾ ।
ಕರಬಂಧಮುರಜಬಂಧಮುತ್ಪಲಬಂಧಂ ॥
ತರುಬಂಧಂ ಹರಿಬಂಧಂ ।
ಸ್ಮರಬಂಧಂ ಲಿಂಗಬಂಧಮಂ ವಿರಚಿಸಿದಳ್ ॥ ೭೩
ಸುರರ ಶಿರೋಮಾಲಾಬಂ ।
ಧುರಬಂಧಂ ನಾಗಬಂಧಮವನೀಬಂಧಂ ॥

ದ್ವಿರದಾಜಿನಬಂಧಂ ವಿ ।
ಸ್ತರವಿಧುರವಿಬಿಂಬಬಂಧಮಂ ವಿರಚಿಸಿದಳ್ ॥ ೨೪

ಕರಕಮಲಲೋಚನದ ಸರ ।
ಸಿರುಹದ ವದನಾರವಿಂದದಾಪರಿಮಳದಿಂ ॥
ಪೊರೆಯುತ್ತುಂ ಪೊಸಪೂವಂ ।
ಗಿರಿಜೆ ಸುಖಂಪುಟ್ಟೆ ಮುಟ್ಟೆ ಕಟ್ಟುತ್ತಿರ್ದಳ್ ॥ ೨೫

ಈತೆಱದಿಂ ಕ್ಷಿತಿಧರವರ ।
ಜಾತೆ ಜಗನ್ಮಾತೆಯೆಸೆವ ಕುಸುಮಾವಳಿಯಿಂ ॥
ದೋತು ಮನೋಹರಮಪ್ಪ ವಿ ।
ನೂತನಮಾಲಾವಿಳಾಸಮಂ ಬಿಗೆ ಸಮೆದಳ್ ॥ ೨೬

ಇಂತು ಪುಷ್ಪಾವಳಿಯಿಂ ಪಲವುಂತೆಱದ ಬಂಧನಮಂ ಸಮೆದು ಬಳಲ್ದು ಸ್ವೇದಭರಿತಗಂಡಸ್ಥಳೆಯುಂ, ಶಿಥಿಲೀಕೃತಕರತಳೆಯುಮಾಗಿರ್ದ ಪಾರ್ವತಿಯಂ ಕಂಡು, ಸಹಚರಿಯರ್ ಬಂದು, ಸೇವಂತಿಗೆಯ ಪನಿನೀರಂ ಮಜ್ಜನಕ್ಕೆಱೆದು, ಪರಾಗದಂಗರಾಗಮುನನುರ್ಚಿ, ತಾವರೆಯ ನೂಲ ದುಕೂಲಮನುಡಿಸಿ, ಕದಂಬಕುಸುಮಮಂ ಸಿರಿಮುಡಿಯೊಳ್ ತುಱುಂಬಿ, ಕೇತಕಿಯ ಸಣ್ಣನಪ್ಪ ನುಣ್ಣೆಸಳ ಕರ್ಣಪತ್ರಮನಿಕ್ಕಿ, ಮಕರಂದದ ತಿಲಕಮನಿಟ್ಟು, ಪುಷ್ಪಮಂಜರಿಯ ಕರ್ಣಾವತಂಸಮನಳವಡಿಸಿ, ಮಲ್ಲಿಗೆಯ ನನೆಯ ಏಕಾವಳಿಯುಂ ಮುತ್ತಿನ ಹಾರದೊಳೊಡಗೂಡಿ, ಮೊಲ್ಲೆಯ ಮುಗುಳ ಕಂಕಣಮುಂ ಕೈಗೊಳಿಸಿ, ನಳಿನಕರ್ಣಿಕಾಮುದ್ರಿಕೆಗಳಂ ಭದ್ರಾಂಗುಲಿಗೆ ಹತ್ತಿಸಾರ್ಚಿ, ನವಲತೆಯನಂಕುರದಿಂದಲಂಕರಿಸುವಂತೆ, ಕಲ್ಪತರುವಂ ಕುಸುಮದಿಂದೆ ಮುಸುಂಕುವಂತೆ, ಪಿನಾಕಿಯ ಮನೋರಥಮಂ ಪುಣ್ಯಫಲದಿಂ ಪಸದನಂಗೊಳಿಸುವಂತೆ, ಕುಸುಮಬಾಣಮಂ ಪೊಸಗಂಪಿಂ ಕೂರ್ಪಿಡುವಂತೆ ಸೌಂದರ್ಯಮಂ ಮೋಹದಿಂದೊಲ್ವಂತೆ, ಸೌಕುಮಾರ್ಯನಿಧಿಯಪ್ಪ ಶರ್ವಾಣಿಗೆ ಶೃಂಗಾರಂಗೆಯ್ದನುರಾಗದಿಂ ಕೈಗೊಟ್ಟು ಕೆಳದಿಯರ ಕೆಯ್ಯೊಳ್ ಮೆಯ್ಯಂ ಮಲಂಗಿಸಿ ಮೆಲ್ಲಮೆಲ್ಲನಡಿಯಿಡುವಾಗಳ್— ಹೊನ್ನಹಾವುಗೆಯ ರನ್ನವೆಳಗಂ ಕೀೞ್ಮಾಡಿ ನಕ್ಷತ್ರಮಾಲೆಯಂತೆ ನುಣ್ಬೆಳಗನೀಂಬ ಪದನಖಪ್ರಭೆ ಪೂವಲಿ

ಗೆದಱೆ, ಮಂಜೀರದ ಮಧುರಧ್ವನಿಗೆ ಮಂಡಳಿಸುವ ಮರಾಳಕುಳಮಂ ಜಡಿವಂತೆ ಪಟಿಂಚುವ ಪಾದಮುದ್ರಿಕೆ ನುಣ್ದನಿಯನುಗುೞೆ, ಹರನ ಚಿತ್ತಮಂ ಗಿರಿಜೆ ನಿನ್ನ ಚರಣದೊಳ್ ಕೆಡಂಪುವೆನೆಂದು ಭಾಷೆಗುಡುವಂತೆ ಸೂಸುವ ಸುನಾದದಿಂ ನೇವುರಮುಲಿಯೆ, ಕುಸುಮಕುಲವಿಳಸಿತಕಾಂಚೀದಾಮದ ಭಾರಮಂ ತಳೆದ ನಿತಂಬಬಿಂಬಮಂ ಸುತ್ತಿ ಮುತ್ತಿದ ದುಕೂಲದ ಧವಳದ್ಯುತಿ ದೆಸೆದೆಸೆಗೆ ಪಸರಿಸೆ, ಲಾವಣ್ಯರಸಂ ತೀವಿ ನೆಲೆಗಾಣಲ್ಬಾರದ ಗಂಭೀರನಾಭೀಸರೋವರದೊಳಗೊಗೆದ ಮೃಣಾಳನಾಳದಂತಿರ್ದ ಬಾಸೆಯಂ ಮಱೆಗೊಂಡ ಬಡನಡುವಡಿಗಡಿಗೆ ಬಳುಂಕುತ್ತಿರೆ, ವಿಭವಮಾದುಭಯಮಕಕ್ಷಮನಿಂಬುಗೊಂಡು ತುಂಬಿ ಬಳೆದು ಮುತ್ತಿದ ಮೇಲುದನೊತ್ತರಿಸಿ ಪೊತ್ತೆತ್ತಿ ಕೆಲಕ್ಕೆ ನೂಂಕುವ ಪೆರ್ಮೊಲೆಗಳ್ಗೆ ಹಾರಕಾಂತಿ ಹೊಸಮೇಲುದಂ ಪೂರೈಸೆ, ಕಲ್ಪತರುವಿನ ಶಾಖೆಗಳಂತೆ ಕೋಮಳದಿಂ ನೀಳ್ದು ನಳನಳಿಸಿ ಬೆಳೆಬೆಳೆದ ಬಾಹುಲತಾಪ್ರಸೂನಮಂ ಪೋಲ್ವ ಸೆಳ್ಳುಗುರ್ಗಳ್ ಬಳ್ಳವೆಳಗಂ ಕಱೆಯೆ, ಕಬರೀಭರದ ಗುರುತ್ವಮನಾಂತ ಕಂಬುಗ್ರೀವವಿಂಬುವಡೆಯೆ, ಕಪೋಳಬಿಂಬದೊಳ್ ಪ್ರತಿಬಿಂಬಿಸುವ ಕರ್ಣಾವತಂಸಪ್ರಸವಮಂಜರಿಗಳ್ ಕರ್ಣಪಾಳಿಕೆಯೊಳಾಂದೋಳನಮನಾಡೆ, ನೆರೆ ತೀವಿ ತೆರೆನುಸಗುವ ಮುಖರಸದೊಡನೆ ಕಡೆಗಣ್ಣ ಕಾಂತಿ ಕೋಡಿವರಿಯೆ, ಕರ್ಪೂರದ ಮಾಕುತಿಗೆ ಕಂಪನಿರ್ಮಡಿಸುವ ನಿಡುಸುಯ್ಯ ಪರಿಮಳಕ್ಕೆ ಪರಿಮರಿಯಾಡುವ ಮಧುಕರನಿಕರಂ ಮಕರಂದತಿಲಕದ ತನಿಗಂಪಿಂಗೆಳಸಿ ಲಲಾಟಪಟ್ಟದೊಳಂಕುರಿಸಿ ನಲಿವ ನೀಳಾಳಕಮೆಂಬ ಮಱಿದುಂಬಿಗಳೊಳ್ ಕಾಳೆಗಂದೆಗೆಯೆ, ತಾರಕಿತಮಾದ ನೀರದಮಂ ಮುಸುಂಕಿದ ತಾರೇಶಮರೀಚಿಗಳಂತೆ ಕದಂಬಕುಸುಮಗರ್ಭೀಕೃತಕಬರೀಭರಸಂಯುತಶಿರೋಭಾಗಮಂ ಬಾಸಣಿಸಿದ ನನೆಯ ಸೂಸಕದ ಕೊನೆಗಳಲುಗೆ, ಶಿವನ ಮನೋರಥಂ ಮೂರ್ತಿಗೊಂಡಂತೆ ಹರನ ಮೆಚ್ಚು ಹರೆಯಂಬಡೆದಂತೆ ಶಂಕರನ ಬಿಂಕಂ ಬಿನ್ನಣಮಾದಂತೆ ಚಂದ್ರಕಳೆ ಕಣ್ದೆಱೆದಂತೆ ನೆಱೆಮೆಱೆದು ನಡೆತಂದು ನಗತನೂಜೆ ಚಂದ್ರಧರನ ಮುಂದೆ ನಿಂದು

ಇರುಳುಂ ಪಗಲುಂ ಕಾಮಂ ।
ತರದಿಂ ತೆಗೆದೆಚ್ಚ ಕುಸುಮಬಾಣಮಿದೆಂದಾ ॥

ಗಿರಿಶಂಗೆ ತೋರ್ಪ ತೆಱದಿಂ ।
ನೆರಪಿದಳಭವಾಂಘ್ರಿಗಳ್ಗೆ ಪುಷ್ಪಾಂಜಲಿಯಂ ॥ ೭೭
ಅಂತುಮಲ್ಲದೆ
ಸಂದಣಿಸುವ ತನುಪುಳಕಂ ।
ತಾಂ ದಟ್ಟೈಸುತ್ತೆ ನೆಗೆಯೆ ಶಶಿಮೌಳಿಗೆ ಪೂ ॥
ರ್ಣೇಂದುಮುಖಿ ಪೊಡೆಮಡುತ್ತಾ ।
ನಂದಾಶ್ರುಗಳಿಂದೆ ಚರಣತಳಮಂ ತೊಳೆದಳ್ ॥ ೭೮
ಪದೆಪಿಂ ಪೊಡೆಮಡುವಾಗಳ್ ।
ಮೃದುತರಪದದುಪರಿಭಾಗಮಂ ಚೆಲ್ವಿಂ ಪ ॥
ತ್ತಿದ ಮಕರಂದದ ತಿಳಕಂ ।
ಸದಮಳಚಂದನವಿಳಾಸಮೆನಿಸಿತ್ತಾಗಳ್ ॥ ೭೯
ಸದ್ಗಂಭೀರಾವೃತಮಿಳ ।
ಸದ್ಗಮಕದೆ ನಿಂದು ಶಿವನ ಮೆಲ್ಲಡಿಗಳಗು ॥
ದ್ಯದ್ಗುಣಭೂಷಣೆ ಸುರಿದಳ್ ।
ಗದ್ಗದಿಸುತೆ ಪುಳಕಿಸುತ್ತೆ ಸರಸಿಜದಲರಂ ॥ ೮೦
ಊರುದ್ವಯದೊಳ್ ಕರದೊಳ್ ।
ಚಾರುಭುಜಾಗ್ರಂಗಳೊಳ್ ಸುಬಾಹುಗಳೊಳ್ ಪು ॥
ಣ್ಯೋರಸ್ಸ್ಥಳದೊಳ್ ಗಿರಿಸುತೆ ।
ಹಾರೈಸುತೆ ಕುಸುಮಮಾಲೆಯಂ ಪಸರಿಸಿದಳ್ ॥ ೮೧
ಮತ್ತಮದಲ್ಲದೆಯುಂ
ತನತನಗೆ ಮುಂಚುವಿಂದ್ರಿಯ ।
ನಿವಹಮನೋವುತ್ತೆ ಗಿರಿಜೆ ಹರಕಂಧರದೊಳ್ ॥
ನವಕುಸುಮಮಾಲೆಯಂ ಸಾ ।
ರ್ಚುವ ನೆವದಿಂ ಸೋಂಕಿ ಸೋಂಕಿ ಪುಳಕಿಸುತಿರ್ದಳ್ ॥ ೮೨
ಅಂತಿರ್ದು
ಭರದಿಂದಂ ನವಕುಸುಮಾ ।
ಭರಣಂಗಳನಭವನಂಗದೊಳ್ ಸಿಂಗರಿಸು ॥

ತ್ತರಳುತ್ತುರ್ಬುತೆ ಕೊರ್ಬುತೆ |
ಗಿರಿಸುತೆ ನಱುಸುಯ್ವ ಧೂಪವನಂ ಪಡೆದಿತ್ತಳ್ ॥ ೭೯

ಅಲರ್*ದೊಂಗಲ ಪೊಸದೊಡಿಗೆಯ |
ನಲಂಪಿನಿಂ ಶಂಕರಂಗೆ ಕೈಗೊಳಸುತ್ತ ॥
ಗ್ಗಲಿಸುತ್ತೆ ತ್ರಿದಳಂಬಿಕೆ |
ನಲವಿಂ ನಗೆಮೊಗದ ಕಾಂತಿಯೆಸೆವಾರತಿಯಂ ॥ ೮೦

ಉತ್ತಮಗುಣಗಣಭೂಷಣೆ |
ಚಿತ್ತವಿಕಾಸಮನೆ ಪಡೆದು ಸಾತ್ವಿಕಭಾವೋ ॥
ನ್ಮತ್ತೆ ನಗಪುತ್ರಿ ಮುದದಿಂ |
ದಿತ್ತಳ್ ಶರ್ವಂಗೆ ಭಕ್ತಿಯಾರೋಗಣೆಯಂ ॥ ೮೧

ಇಂತು ಪಾರ್ವತಿ ಪಲವುಂ ಭೋಗಂಗಳಂ ರಾಗದಿಂ ರಾಜಮಾಳಗೊಲ್ದು ಪೂಜೆಯ ನೆವದಿಂ ನಿವೇದಿಸಿ ಸಂಪದಮನೋಲಗಿಪ ಶೃಂಗಾರದಂತೆ, ಧರ್ಮಮಂ ಬಳೆಯಿಸುವ ಸಂಪದದಂತೆ, ಪುಣ್ಯಮಂ ಸೇವಿಪ ಸತ್ಕರ್ಮದಂತೆ, ಭಕ್ತಿಯಂ ಬಳೆಯಿಪ ಪುಣ್ಯದಂತೆ, ಶಿವಜ್ಞಾನಮನೆಳಸುವ ಭಕ್ತಿಯಂತೆ, ಮುಕ್ತಿಯಂ ನಿಶ್ಚಯಿಪ ಶಿವಜ್ಞಾನದಂತೆ, ಶಿವಸಂಗಮಂ ಬಯಸಿ ಮನ್ಮಥಮನೋರಥದುರ್ಲಭವಲ್ಲಭನಂ ನೋಡುವಾಗಳ್

ಪೊಸಜಡೆಯೊಳ್ ತೊಡಂಕಿ ನೊಸಲೊಳ್ ನಡೆಪಾಡಿ ಕಪೋಲಭಾಗದೊಳ್
ಪಸರಿಸಿ ಲೋಚನಂಗಳೊಳಮರ್ಜಿ ತದಾಸ್ಯದೊಳೊಂದಿ ಕಂಠದೊಳ್ ॥
ಮಿಸುಗಿ ಭುಜಾಗ್ರದೊಳ್ ತೊಳಗಿ ವಕ್ಷದೊಳಾೞ್ದು ಕರಂಗಳೊಳ್ ವಿರಾ|
ಜಿಸಿ ಪದದಲ್ಲಿ ಬೀೞ್ದುವು ಭವಾನಿಯ ಮಾನಿಯ ದೃಷ್ಟಿಗಳ್ ॥ ೮೨

ಇಂತು ಶರ್ವನ ಸರ್ವಾಂಗದೊಳ್ ನೋಟಂ ಮುಸುಂಕಿ ನೋಡಿ

ಬೆಮ*ರ್ವಳ್ ಬೆರ್ಚುವಳುರ್ಬುವ |
ಳಮ*ರ್ವಳ್ ಪೆಱಸಾರ್ವಳಂಜಿ ನಿಲ್ವಳ್ ಸೋಂಕಲ್ ॥
ನಿಮಿ*ರ್ವಳ್ ನೆನೆವಳ್ ಮುನಿವಳ್ |
ಸಮುಸೆಲ್ವಳ್ ಗಿರಿಜೆ ಸೆಡೆದು ಸುಯ್ವಳ್ ಕಾಯ್ವಳ್ ॥ ೮೩

ಚಾರುತರಕಾಂತಿಮಯಸುಕು ।
ಮಾರಾವಯವಂಗಳಂ ನಿರೀಕ್ಷಿಸಿ ನಲಿವಳ್ ॥
ತಾರಾಚಳನಾಥನ ಘನ ।
ವೈರಾಗ್ಯಕ್ಕಂಜಿ ನಡುಗಿ ಸಿಡಿಮಿಡಿಗೊಳ್ವಳ್॥ ೮೪

ಅಂತುಮಲ್ಲದೆ,

ಶಿವನಂ ನೋಡುತ್ತೆ ಮೇನಾಸುತೆ ಮದನಸುಖಾಸಕ್ತಿಯಿಂ ಸುತ್ತುವಳ್
ಸೋಂ । ಕುವಳಾನಂದಾಶ್ರುವಂ ಸೂಸುವಳನುವಿಸುವಳ್ ತತ್ತಪಕ್ಕಂಜಿ
ಹಿಮ್ಮೆ ॥ ಟ್ಟುವಳಂತಂತಳ್ಕುವಳ್ ಬಳ್ಕುವಳದಟಱುವಳ್ ಕೋಡುವಳ್
ಬಾಡುವಳ್ ಕಂ । ದುವಳಾರ್ತಂಗೆಟ್ಟು ನಿಲ್ವಳ್ ನೆನೆದುರವಣಿಪಳ್ ಮುಂ
ಚಟಿಲ್ವಳ್ ಬಟಿಲ್ವಳ್ ॥ ೮೫

ಮತ್ತಮಾಗಳ್

ನಗುವಳ್ ನಗೆಯೊಳ್ ಕೌತುಕ ।
ಮೊಗೆಯೆ ನಿರೀಕ್ಷಿಸುವಳೀಕ್ಷಣದೊಳಗೆ ದೈನ್ಯಂ ॥
ಮಿಗೆ ಭಾವಿಸುವಳ್ ಭಾವದೊ ।
ಳಗೆ ದೇವನ ಚೆಲ್ವನಬಲೆ ಸಲೆ ನಿಲೆ ನೆನೆವಳ್ ॥ ೮೬

ಇಂತು ನೋಳ್ಪರ ಕಣ್ಗೆ ಶೀತಳಮಯಸುಧಾರೋಚಿಗಳಂ ಬೀಱುವ ಚಂದ್ರಮನಂತೆ, ಮುಟ್ಟುವರ ಮೆಯ್ಗೆ ತೀವ್ರಪ್ರತಾಪಮಂ ಕುಡುವ ಸೂರ್ಯನಂತೆ, ಪೊಗಳ್ವರ ನಾಲಗೆಗಮೃತದಂತೆ, ಕೇಳ್ವರ ಕಿವಿಗೆ ಮಧುರವಾಣಿಯಂತೆ, ನೆನೆವರ ಮನಕ್ಕೆ ನಿರುಪಾಧಿಕಜ್ಯೋತಿಯಂತೆ, ಬಪ್ಪತ್ತಿರ್ದ ರುದ್ರನ ಮನೋಹರಮೂರ್ತಿಯಂ ನೋಡಿನೋಡಿ ತಣಿಯದೆ ಸೋಂಕಿಸೋಂಕಿ ಸವೆಯದೆ, ಪೊಗೞ್ದು ಪೊಗೞ್ದು ತೀಱದೆ, ನೆನೆದು ನೆನೆದು ನೆಱೆಯದೆ ನಡೆತಂದು ಪಾರ್ವತೀದೇವಿ ಪೊಚ್ಚಪೊಸಪೂಗಳನಚ್ಚರಿ ಮಿಗೆ ತಂದು ತಂದಂದಿಂಗೆ ಚಂದ್ರಧರನಂ ಕಳಾನಿಧಿಯಂ ವಿಳಾಸದಿಂದಾರ್ತದಿಂ ಹತ್ತಿಸಾರ್ದು ಮತ್ತೆಮತ್ತೆ ಮಾಣದೆ

ಹರನಂ ಶಿವನಂ ಮೃಗಧರ ।
ಧರನಂ ಸುಸ್ನೇಹಮುಡರೆ ನಸನನಕುಸುಮೋ ॥

ತ್ಕರದಿಂದೆ ನಚ್ಚಿ ಮೆಚ್ಚಿಯೆ ।
ಗಿರಿಜಾವಧುವರ್ಚಿಸುತ್ತುಮಿರ್ಪನಮುತ್ತಲ್ ॥ ೮೭

ಪರಮಸ್ವಾಮಿ ಜಟಾಧರಂ ಶಶಿಧರಂ ಗಂಗಾಧರಂ ಕಾಲಸಂ ।
ಹರನಜ್ಞಾನಹರಂ ಪುರತ್ರಯಹರಂ ಸೌಖ್ಯಾಕರಂ ಶಂಭು ಶಂ ॥
ಕರನಾನಂದಕರಂ ಸಮಂತೆನಗೆ ಭಕ್ತಿಜ್ಞಾನವೈರಾಗ್ಯಮಂ ।
ಕರುಣಂಗೆಯ್ಗೊಲವಿಂದೆ ಹಂಪೆಯ ವಿರೂಪಾಕ್ಷಂ ಶಿವಾವಲ್ಲಭಂ ॥ ೮೮

॥ ಗದ್ಯ ॥

ಇದು ಸಮಸ್ತಸುರಾಸುರನಿಕರಮಕುಟಖಚಿತದಿನಕರಕರಾಧಿಕ್ಯಮಾಣಿಕ್ಯ
ಪ್ರಭಾಪುಂಜರಂಜಿತಸಂಪಚ್ಚರಣನೆನಿಪ ಪಂಪಾವಿರೂಪಾಕ್ಷ ಶ್ರೀಪಾದಕಮಲ
ಮಕರಂದಮಧುಕರಾಯಮಾಣ ಸತ್ಕವೀಶ್ವರ
ಹಂಪೆಯ ಹರಿಹರದೇವ ವಿರಚಿತಮಪ್ಪ

ಗಿರಿಜಾಕಲ್ಯಾಣ ಮಹಾಪ್ರಬಂಧದೊಳ್

ವಿರೂಪಾಕ್ಷದರ್ಶನ ಪುಷ್ಪಾಪಚಯಪೂಜಾವರ್ಣನಂ ಪಂಚಮಾಶ್ವಾಸಂ

॥ ಷಷ್ಠಾಶ್ವಾಸಂ ॥

—ತಾರಕಾಸುರ ಯುದ್ಧವರ್ಣನಂ—

ಶ್ರೀಪತಿ ವಾಕ್ಪತಿ ಪೌಲೋ ।
ಮೀಪತಿಪೂಜಿತಪದದ್ವಯಂ ಸದ್ಭಕ್ತಿ ॥
ಶ್ರೀಪದಮಂ ಕುಡುಗೆಮಗೆ ವಿ ।
ರೂಪಾಕ್ಷಂ ಭಾಸುರಂ ಭವಾನೀಭರ್ತಂ ॥ ೧

ಸಕಳೋರಗಸುರನರಮು ।
ಸ್ತಕಶೂಲನ ನಿಖಿಳಲೋಕಕಾಲನ ತೀವ್ರ ॥
ಪ್ರಕಟಯಶೋಲೋಲನ ತಾ ।
ರಕದನುಜನ ಕೊರ್ವು ಪರ್ವಿತುರ್ವೀತಳಮಂ ॥ ೨

ಅಂತುಮಲ್ಲದೆ,

ಉರಗಾನೀಕಾಬ್ಧಿ ಮರ್ತ್ಯವ್ರಜಗಹನ ಸುರವ್ರಾತಧಾರಾಧರಕ್ಕಾ ।
ಸ್ಫುರಿತೌರ್ವಂ ಪಾವಕಂ ಮಾರುತನೆನಿಸಿ ಕರಂ ಶೋಭಿಸುತ್ತಾವಗಂ ಸು ।
ಟ್ಟುರಿಪುತ್ತಿಟ್ಟಿಟ್ಟತುಂ ಪೆರ್ಚಿದನಸುರನನಂ ತಾರಕಂ ತೀವ್ರಕೋಪಾ ।
ಕರರೂಪಂ ಪ್ರಾಯುಕಾಯಂ ಪ್ರಬಳಬಳಯುತಂ ಚಂಡಶೀಲಂ ವಿಶಾಲಂ ॥

ಅರರೇ ! ಆತ್ಮಬಲಾಕ್ಷಿಮಧ್ಯವಿಲಸಚ್ಛ್ರೀತಾರಕಂ ತಾರಕಂ ।
ಪರಭೂಪಾಲತಮಂಧಭೇದನಕರೋದ್ಯತ್ತಾರಕಂ ತಾರಕಂ ॥
ಸುರಸಂಘಾತಪಶಾಕಿನೀಪ್ರಬಳಮಾಧುರ್ಯತ್ತಾರಕಂ ತಾರಕಂ ।
ನರನಾಗಾಮರಲೋಕಶೋಕಸರಣೀವಿಸ್ತಾರಕಂ ತಾರಕಂ ॥ ೪

ಎಂಬ ಗಂಭೀರಪ್ರತಾಪಮಂ ತಳೆದು

ಧರಣಿಯನೊಕ್ಕಲಿಕ್ಕಿ ದಿಗಧೀಶರ ಗಂಟಲನೊತ್ತಿ ಮೆಟ್ಟಿ ಭೀ ।
ಕರಫಣಿಲೋಕಮಂ ಹಿಡಿದು ನಾಕಮನೋಡಿಸಿ ನಿಂದ ವೀರರಂ ॥
ಧುರದೊಳೆ ತತ್ತಳಿಂದಱಿದು ತಳ್ಗಿಸುತಪ್ರತಿಮಪ್ರತಾಪಭಂ ।
ಗುರಭುವನತ್ರಯಂ ನೆಗಳ್ದಿನಕ್ರಮಕಾರಿ ಜಿತಾರಿ ತಾರಕಂ ॥ ೫

ಇಂತು ಜಗತ್ತ್ರಯಮುಂ ನಿಜಪ್ರತಾಪದಿಂ ಕುಕ್ಕುಲಿಂಗುದಿಸುವ ವಿಕ್ರಮಶೀಲನಪ್ಪ ತಾರಕಾಸುರನುರವಣೆಯುಂ ಸೈರಿಸಲಾಱದೆ ನಾಗರ್ಕಳುಂ ನರರುಂ ನಿರ್ಜರರುಂ ಕಿನ್ನರಸ್ತೋಮಮುಂ ಕಿಂಪುರುಷವ್ರಜಮುಂ ನೆರೆದು ಪರಿತಂದು ಮೇರುವಿನ ತಪ್ಪಲೊಳಿರ್ಪ ನಾರಾಯಣವಾರಿಜಪುತ್ರಪುರಂದರರ ಸಭಾನಿಳಯದ್ವಾರವಳಯದ ಮುಂದೆ ಮಂದೈಸಿ ಮುದವಳಿದು ಮಗಮ್ರುಡುಗಿ ಮೆಯ್ಗೆಡೆದು ಮುಂದುಗೆಟ್ಟು ಸಂದಣಿಸಿ ನಿಂದು

ಸರತತಿ ನೊಂದಬಿಲ್ದು ಮೊಱೆಯೋ ಮೊಱೆಯೋ ! ನೆರೆದಲ್ಲಿಗಲ್ಲಿಯೊ
ತ್ತರಿಸಿ ನಿಳಂಪವೀಧಿಯವಿಧಾಯವಿಧಾ! ಉರಗಪ್ರತಾನಮಾ ॥
ತುರಿಸಿ ಬಿಗುತ್ತು ನಿಂದು ಶಿವಧೋ ಶಿವಧೋ! ಎನುತುಂ ಸುರರ್ಕಳ್ದು ಸೂ।
ಗುರಿಸಿ ತೆರಳ್ದು ತಲ್ಲಣಿಸಿ ಮಲ್ಲಳಿಗೊಂಡುದು ಮೇರುಭಾಗದೊಳ್ ॥ ೬

ಮೊಱೆಯಿಡೆ ಕೇಳ್ದು ಚಕ್ರಧರನುಂ ಜಳಜೋದ್ಭವನುಂ ಬಲಾರಿಯುಂ।
ಮಱುಗಿ ಸುರರ್ಕಳ್ದುರುಳ್ದು ಕರೆಯೆಲ್ಲಿಯದೀಘನಶೋಕನಾವನಿಂ ॥
ತುಱುಗಿದುದಾವನಿಂದೊದವಿತಾವನಿನುರ್ಬ್ಬಿದುದಾವನಿಂದೆಯು ।
ಳ್ಕುಱುಮುದಿದಾವನಿಂದಱಿದುದಾವನಿನೊತ್ತರಿಸಿತ್ತು ಕೌತುಕಂ ॥ ೭

ಎಂದೆಂದು ನುಡಿಯುತಿರ್ಪಿನ ।
ಮಂದೆಯ್ತಂದೊಟ್ಟಯೊಱಲಿ ಮೆದೆಗೆಡೆಯುತ್ತುಂ ॥
ಸಂದಣಿಸುತ್ತುರವಣಿಸು ।
ತ್ತುಂ ದಡದಡಿಸುತ್ತೆ ಸುರನರೋಗನಿಕರಂ ॥ ೮

ಸುರಿತರ್ಪ ಕಣ್ಣ ನೀರಿಂ ।
ಕರಾಗ್ರದೊಳ್ ನೆಗೆದು ತೋರ್ಪ ಪುಲ್ಲಿಂ ಮುಖದೊಳ್ ॥
ತರದಿಂ ಪೊಣ್ಮುವ ಮೊಱೆಯಿಂ ।
ನೆರೆದೊಱಲುತ್ತಿರ್ಪ್ಪ ತಾಪದಿಂದಖಿಳಜನಂ ॥ ೯

ಅಂತು ಬಂದಬಿಲ್ದು ನಿಂದು

ಕಾವುದು ವಿಷ್ಣು ಕಾವುದರವಿಂದತನೂಭವ ಕಾವುದಿಂದ್ರ ಸ ।
ದ್ಭಾವದೊಳೆಮ್ಮನೀಕ್ಷಿಪುದು ತಾರಕನಿಂದುಱೆ ನೊಂದು ಶೋಕದಿಂ ॥
ತೀವಿದೆವಾವುದಿನ್ನೆಮಗೆ ಜೀವನವಾವುದು ನಿಲ್ವ ತಾಣಮಿ ।
ನ್ನಾವುದು ರಕ್ಷಣಾರ್ಥಕರವಾವುದು ಸತ್ಪಥವಾವುದಾಶ್ರಯಂ ॥ ೧೦

ಅಂತುಮಲ್ಲದೆ

ಧರೆಗೆಸೆದತ್ತು ತಾರಕನ ದುರ್ಗತಿ ತಾರಕನೇೞ್ಗೆ ತಾರಕಾ ।
ಸುರನ ಪೊಡರ್ಪು ತಾರಕನ ಮತ್ತತೆ ತಾರಕನಾಜ್ಞೆ ತಾರಕಾ ।
ಸುರನ ತೆರಳ್ಕೆ ತಾರಕನ ತೀವ್ರತೆ ತಾರಕನುರ್ಕು ತಾರಕಾ ।
ಸುರನ ನಿಮಿರ್ಕೆ ತಾರಕನ ಮೂರ್ಛತಿ ತಾರಕನುತ್ಪಥಕ್ರಮಂ ॥ ೧೧

ತಾರಕನಂ ಗುರುತರಭೂ ।
ಭಾರಕನಂ ಸಕಳದುರಿತಪೂರಿತಪಾಪ ॥
ಪ್ರೇರಕನಂ ದುರ್ಗುಣವಿ ।
ಸ್ತಾರಕನಂ ಬಾರಿಸನ್ನರಾರ್ ಧಾರಿಣಿಯೊಳ್ ॥ ೧೨

ಎಂದು ಬಿನ್ನವಿಸಿದ ಪನ್ನಗನರಸುರರ ಸಂತಾಪಮನೆಂತಾನುಂ ಕೇಳಲಾಱದೆ ಸಂತೈಸಿ ಮಂತ್ರಾಳೋಚನೆಯುಂ ಮುಂದುಗೊಂಡು ಹರ್ಯಜಪುರಂದರರ್ ಪರಿಮಿತಾಸ್ಥಾನರಾಗಿ

ಪುರಹರನಿರ್ದಪಂ ನಿರುಪಮಾನತಪೋಮಯನಾಗಿ ಲೋಕಮಂ ।
ತ್ತರಿಸಿ ತೆರಳ್ದು ಪುಯ್ಯಲಿಡುತಿರ್ಪುದು ಸೈರಿಸಬಾರದಾತ್ತಸಂ ॥
ಗರವಿಜಯೋರ್ಜಿತಪ್ರಮುಖರಿಲ್ಲ ವಿಚಾರಿಸೆ ವೀರತಾರಕಾ ।
ಸುರನತುಳಪ್ರತಾಪನಿಧಿ ಕಾಳಗಮೀಪದದೊಳ್ ನಿರರ್ಥಕಂ ॥ ೧೩

ಸುರಗುರುವಂ ಕಳಿಸುವುದಾ ।
ದರದಿಂ ಸಂಧಾನಮಂ ನಿಮಿರ್ಚುವುದವನಿ ॥
ರ್ಪರನಂ ನೋಡುವುದಲ್ಲದೊ ।
ಡರವರಿಸದೆ ಕಾದುವುದು ದಿಟಕ್ಕಿದು ಮಂತ್ರಂ ॥ ೧೪

ಎಂದು ನಾರಾಯಣನೀರಜಭವನಾಕಪತಿಗಳೇಕಚಿತ್ತರಾಗಿ

ಶೌರ್ಯಮುದೀರ್ಪೊತ್ತಲ್ಲಂ ।
ವೀರ್ಯಾಧಿಪನೆನಿಪ ತಾರಕನ ಸಂಧಾನಂ ॥
ಕಾರ್ಯಮಿದೆನುತುಂ ತ್ರಿದಶಾ ।
ಚಾರ್ಯನ ಮುಖಮಂ ನಿರೀಕ್ಷಿಸುತ್ತಿಂತೆಂದರ್ ॥ ೧೫

ಸಕಳಕಳಾಪೂರಿತಮನ ।
ಱಕಳಂಕಚರಿತ್ರನಮರಗುರು ನೀಂ ಘನಸಾ ॥

ತ್ರಿಕನದುಕಾರಣದಿಂ ತಾ।
ರಕನಲ್ಲಿಗೆ ಪೋಪುದೊಳ್ಪು ಮಾಳ್ಪಿನು ನಯಮಂ ॥ ೧೬
ವಿನಯಮನಾಡುವುದಾಳೋ ।
ಚನೆಗೆಯ್ವುದು ಚಿತ್ತದೊಳಗನಾರೈವುದು ನೀಂ ॥
ನನುಕೂಲನಂತೆ ಪೊರ್ದುವು ।
ದನವದ್ಯಂ ಸಾಮದಿಂ ಮರಳ್ಚುವುದವನಂ ॥ ೧೭
ಅದು ಸಲ್ಲದೊಡಾತನ ನೇ ।
ಹದ ಗೋತ್ರಸುಮಿತ್ರರಾಜಪುತ್ರಸಚಿವಸಂ ॥
ಘದ ಕಿವಿಗೇನಾನುಮನೀಂ ।
ವುದನಾಡುತೆ ಭೇದದಿಂ ಕಟಿಲ್ಚುವುದವನಂ ॥ ೧೮
ಆನಯಮಾಗದೊಡಸುರಂ ।
ಗಾನತವಚನಾಗಿ ಬಲ್ಪುಗುಂದದೆ ಬಯಸಿ ॥
ತ್ತೇನೊಂದುಮನನುಸರಿಸುವ ।
ದಾನದೊಳಂ ಸಂತವಿಡುವುದಾತನ ಮನಮಂ ॥ ೧೯
ಈಪೇಳ್ದೊಂದಮನೊಲ್ಲದೆ ।
ಚಾಪಳವೃತ್ತಿಯೊಳೆ ಮಿಾಱಿ ನುಡಿದೊಡೆ ಸಮರ ॥
ವ್ಯಾಪಾರದಲ್ಲಿ ಕಾಣ್ಬಂ ।
ಕೋಪಾವಿಷ್ಟಪ್ರಚಂಡದಂಡಕ್ರಮಮಂ ॥ ೨೦

ಎಂದು ರಾಜೀವಸಂಭವಾದಿಗಳೀೞಜೆಯಿಂ ರಾಜನೀತಿಯುಂ ಕಲ್ಪಿಸಿ ಕಳಿಪೆ

ಭರದಿಂ ಬೀೞ್ಕೊಂಡು ವಾಚಸ್ಪತಿ ಗಮನರತಂ ಪುಷ್ಪಕಾರೂಢಕಾಯಂ
ಸ್ಥಿರಚಿತ್ತಂ ಸರ್ವಕಾರ್ಯಸ್ಥಿತಪರಿಣತನಜ್ಞಾನಮೇಘಾನಿಳಂ ಭಾ ॥
ಸುರತೇಜಂ ರಾಜಪೂಜ್ಯಂ ನುತಸಕಳಕಳಾಮಾರ್ಗಸಂಗಂ ಸುಖಾಂಗಂ ।
ಹರಪಾದಾರಾಧಕಂ ತಾರಕನ ನಗರಿಯಂ ಪೊಕ್ಕನುತ್ಸಾಹದಿಂದಂ॥ ೨೧

ಅಂತು ಪೊಕ್ಕು ಪುರವೀಧಿಯುಂ ನಿರೀಕ್ಷಿಸುತ್ತುಂ ನೂತನನಿಕೇತನಯೂಥಕ್ಕೆ ಕೌತುಕಚಿತ್ತನಾಗಿ

ಬಂದು ವಿಮಾನದಿಂದಿೞಿದು ರಾಜಗೃಹಪ್ರತಿಹಾರದೇಶದೊಳ್ ।
ನಿಂದು ಸುರೇಂದ್ರಮಂತ್ರಿ, ನಡೆತಂದನೆನಿಪ್ಪುದನಂದು ಪೇೞೆ ಸಾ ॥
ರ್ತಂದು ಕವಾಟಮಂ ತೆಱೆಯೆ ಕಂಡನನಂತಸನಂದಭಟಾವಳೀ ।
ವಂದಿತಪಾದಪದ್ಮಯುಗರಾಜಿತನಂ ಘನತಾರಕಾಖ್ಯನಂ ॥ ೨೦

ಕಂಡುಪಚರಿಸಿದನಸುರಂ ।
ಕೊಂಡಾಡುತ್ತುನ್ನತಾಸನಮನೀಯುತ್ತಾ ॥
ಖಂಡಲಮಂತ್ರಿಯುನಸುಹೃ ।
ನ್ಮಂಡಲರವಿರಾಹುಸನ್ನಿಭಂ ಬೆಸಗೊಂಡಂ ॥ ೨೩

ಸುರಪತಿಗೆ ಕುಶಲಮೇ ಪಂ ।
ಕರುಹಭವಂ ಕ್ಷೇಮಿಯೇ ಸರೋರುಹನಾಭಂ ॥
ಸ್ಥಿರನೇ ನೀವಿಂತಿಲ್ಲಿಗೆ ।
ಬರವೇನೆಂದಱಿಪುವರ್ಥವಾವುದು ಕಜ್ಜಂ ॥ ೨೪

ಎನೆ ಸುರಗುರುವೆಂದಂ ನಾ।
ಗನಿಕರಮುಂ ಮರ್ತ್ಯನಿಕರಮುಂ ತರದಿಂ ದೇ ॥
ವನಿಕರಮುಂ ನಿಮ್ಮೊಳಿಗ ।
ಮನೆ ಭರದಿಂ ಪುಯ್ಯಲಿಕ್ಕೆ ಕಳಿಪಿದರೆನ್ನಂ ॥ ೨೫

ಬಿದಿಯುಂ ದೈತ್ಯಾರಿಯುಂ ವಜ್ರಧರನುಮೆನಿಪೀಮೂವರುಂ ಕೂಡಿ ಮೂಲೋ । ಕದ ಶೋಕಾನೀಕಮಂ ಕೇಳ್ದತಿಕೃಪೆ ಮನದೊಳ್ ಪುಟ್ಟೆ ನಿನ್ನಲ್ಲಿಗೆನ್ನಂ ॥ ಪದೆಪಿಂದಂ ಪೋಗವೇಳ್ದಟ್ಟಿದರಿದುವೆ ನಿಮಿತ್ತಂ ದಿಟಂ ಬಂದೆನೀಕಾರ್ಯದ ಭಾರಂ ನಿನ್ನದೆಂತುಂ ನಿನಗೆ ಧುರದೊಳಾರ್ ಸಾಟಿ ಪೇೞ್ ದೈತ್ಯರಾಜಾ ॥ ೨೬

ವರಗಂಭೀರಂ ಧೀರಂ ।
ಪರಸೈನ್ಯಾರಣ್ಯದಾವನೆನಿಸಿದ ನಿನಗೊಂ ॥
ದಿದಿರುಂಟೆ ಪೇೞೆನುತ್ತಂ ।
ಸುರಗುರು ಮಿಗೆ ಪೊಗೞೆ ತಾರಕಂ ನಗುತೆಂದಂ ॥ ೨೭

ನಯಮಿಂತೇಕೆ ಬೃಹಸ್ಪತಿ ।
ಜಯಮಂ ಮುಂದಿಟ್ಟು ಬಂದವಂಗೆನಗತಿನಿ ॥

ಕ್ಷಣುಬುದ್ಧಿಯಿಂದೆ ಮೇಲತಿ ।
ಶಯಸಂಗರವಿಕ್ರಮಂಗಳೆಂಳೊಳ್ಳದೆ ಪೇೞಾ ॥ ೨೯

ಎಂದು ತಾರಕಂ ನಯಮನೊಲ್ಲದೆ ನಿರಾಕರಿಸಿ ನುಡಿಯೆ ಸುರಗುರುವಿಂತೆಂದಂ—:

ನಯಮಂ ನೀನೊಲ್ಲೆ ಬುದ್ಧಿಪ್ರದಸಚಿವಕುಲಂ ನೋಡೆ ತಾನಿಲ್ಲ ನಿಸ್ಸಂ।
ಶಯದಿಂದಂ ಮಂತ್ರಿಗಳ್ ಪೇೞ್ದತಿಹಿತವಚನಮಂ ಕೇಳೆ ಮತ್ತಾರುಮಂ ಸೆಂ॥
ಶಯದಿಂದಂ ನಂಬೆ ನಂಬಿರ್ದತಿಹಿತಜನಮಂ ಪೊರ್ದಿ ಮಾತಾಡೆ ಮೇಲ ।
ಪ್ಪ ಯಶೋವಿಸ್ತಾರಮಂ ಭಾವಿಸೆ ತನುಮದದಿಂ ತಾರಕಾ ಮೇರೆಗೆಟ್ಟೈ॥

ಎಂದು ವಾಚಸ್ಪತಿ ಸಾಮಮಂ ಬಿಟ್ಟು ಭೇದಮಂ ನುಡಿಯೆ ತಾರಕಂ ದರಸ್ಮಿತಮುಖನಾಗಿ

ಎಂತೆಂತು ಗುರುವೆ ನೀನೆ ।
ನ್ನಂತರಮಂ ನೋಡದಿಂತು ನುಡಿವರೆ ಸಮರ ॥
ಪ್ರಾಂತದೊಳೆನಗೆ ವಿಚಾರಮೆ ।
ಸಂತಮಿರತಿಮಘವನೇಕೆ ತಾರಕನಿದಿರೊಳ್ ॥ ೩೦

ಹಿತರೆನಗಿನ್ನಾರ್ ವಾಚ ।
ಸ್ಪತಿ ನೀನೆಂದಂತಿರಪಹ! ಹುಸಿಯಲ್ಲಲ್ತು ॥
ನ್ನತಸಂಗರದೊಳಗಱಿಯೈ ।
ಹಿತರೆನ್ನ ನಿಶಾತಖಡ್ಗಮಂ ನಿಡುದೋಳ್ಗಳುಮಂ ॥ ೩೧

ಇಂತೆಂದು ನುಡಿದ ತಾರಕ ।
ನಂತಸ್ಥಮನಱಿದು ಸಾಮಭೇದಂಗಳುಮಂ ॥
ಪಿಂತಿಕ್ಕಿ ನಿರ್ಜರಾಚಾ ।
ರ್ಯಂ ತಡೆಯದೆ ನುಡಿದನುಚಿತದಾನಕ್ರಮಮಂ ॥ ೩೨

ಕೇಳಲೆ ತಾರಕಾಸುರ ಸರೋಜಭವಾದಿಗಳಾಜಿರಂಗದೊಳ್ ।
ಕಾಳೆಗಮಂ ನಿಮಿರ್ಚಲಣಮಾರದಿರರ್ ದಿಟಮೆಂಬ ಯುದ್ಧಸ ॥
ಲ್ಲೀಳೆಯಱಿದಿರ್ಕೆ ನಿನ್ನ ಮನದೊಳ್ ಬಯಸಿರ್ದುದನೇನನಾದೊಡಂ ।
ಪೇೞಿದನಿತ್ತಪರ್ ಬಡವರಲ್ಲೊಡೆಯರ್ ಕನಕಾದ್ರಿಗಾವಗಂ ॥ ೩೩

ನೀಡಾಗದೆ ರಣರಂಗ ।
ಕ್ರೀಡೆಯನುೞಿ ಬೆಳಸಿದನಿತುಮಂ ದೇಶಮನೀ ॥
ಡಾಡಲ್ ಸಮರ್ಥರಾರದಱಿಂ ।
ಬೇಡೊಲ್ದು ಸಮುದ್ರಮುದ್ರಿತಾವನಿಯೆಡೆಯೊಳ್ ॥ ೩೪

ಎನೆ ತಾರಕಂಗೆ ಕೋಪಂ ।
ಮನದೊಳ್ ಪ್ರಟಮೆೞ್ದು ಮುಖದೊಳವತರಿಸಿ ವಿಲೋ ॥
ಚನದೊಳ್ ಪಸರಿಸಿ ಪುರ್ಬಿನ ।
ಕೊನೆಯೊಳ್ ಕುಡಿಗೊಂಡು ನಿಮಿರೆ ನಡುಗುತೆ ನುಡಿದಂ ॥ ೩೫

ಸಡಿಫಡ! ಸುರೇಂದ್ರಮಂತ್ರಿಯೆ ।
ಬೆಡಂಗಿದೇಕೆನ್ನ ಕೂಡೆ ನೆನೆಯದ ಮುನ್ನಂ ॥
ಪೊಡಮಿಯನೆನ್ನಯ ಕೆಯ್ಯೊಳ ।
ಗಡಗಿರ್ದುದನೆನಗೆ ಕುಡುವೆನೆಂಬುದು ಚಿತ್ರಂ ॥ ೩೬

ಎನ್ನೊಡನೇಕೆ ನಿನ್ನ ಮಱೆ ನಿನ್ನ ಮದೋನ್ನತಿ ನಿನ್ನ ಮತ್ಸರಂ ।
ನಿನ್ನ ನಯೋಕ್ತಿ ನಿನ್ನ ಹೃದಯೋಗ್ರತೆ ನಿನ್ನಯ ಬುದ್ಧಿ ನಿನ್ನ ಸಂ ॥
ಪನ್ನತೆ ನಿನ್ನ ಮಂತ್ರಗತಿ ನಿನ್ನಯ ವಕ್ತೃತೆ ನಿನ್ನ ವಿಸ್ತರಂ ।
ನಿನ್ನಯ ನೀತಿ ನಿನ್ನ ಬಗೆ ನಿನ್ನ ತಿರಸ್ಕರಣಂ ಬೃಹಸ್ಪತೀ ॥ ೩೭

ಧರೆಯೊಳಗೆ ತಾರಕಂಗೆನ ।
ಗರಿ ಮೇಘಮಹಾಬಲಂಗೆ ಸಮರಾಂಗಣದೊಳ್ ॥
ಹರಿಗಿರಿ ರವಿಗಿವಿ ಶಿಖಿಗಿಖಿ ।
ಸುರಪತಿಗಿರಪತಿಯುಜಂಗಿಜಂ ತೆಗೆ ಸರಿಯೇ ॥ ೩೮

ನೆಟ್ಟನೆ ಕಾಳೆಗಮನೊಡಂ ।
ಬಟ್ಟಂ ಕೇಳಮರಗುರುವೆಯಮರಾವತಿಯಂ ॥
ಬಿಟ್ಟೋಡಿ ನಿಮ್ಮ ಬೆಳ್ಳಯ ।
ಬೆಟ್ಟದ ಗುಹೆಗುಹೆಗಳೊಳಗೆ ಮಾಡುವುದಿಂಬಂ ॥ ೩೯

ಎಂದು ನುಡಿದ ತಾರಕನ ವೀರಾಳಾಪಮಂ ವಾಚಸ್ಪತಿ ಕೇಳ್ದು ಕಾತು ಕಮನಾಳ್ದು ನಿರ್ವೇದದೊಳ್ ಬಿೞ್ದು ಭಯರಸದೊಳೞ್ದು ಧೈರ್ಯದೊಳೆೞ್ದು ಎಂತಾನುಂ ಸಂತೈಸಿಕೊಂಡು ಸಾಮಭೇದದಾನಂಗಳನುಲ್ಲಂಘಿಸಿದ

ಕರ್ಕಶನಪ್ಪ ರಕ್ಕಸರರಸನೊಳ್ ದಂಡಮೊಂದುಂ ಹಸನಾಗದೆಂದು ಮನದೊಳಳ್ಕುತುಂ ಮಾತಿನೊಳ್ ಬಲ್ಪುಗೆಡದೆ ತಾರಕನಂ ಬೀೞ್ಕೊಂಡು

ಮೌನದೆ ನಡೆತಂದಂ ಸಂ ।
ಧಾನವಿಹೀನಪ್ರಧಾನಚಿಂತಾಭರಿತಂ ॥
ಮಾನನುನಸ್ಸಂಗತವಿಧು ।
ರಾನನವಿಗತಪ್ರಧೈರ್ಯನಮರಾಚಾರ್ಯಂ ॥ ೪೦

ಬರೆವರೆ ಸರೋಜಭವನುಂ ।
ಹರಿಯುಂ ವಾಸವನುಮಮರರುಂ ನೆರೆದಿರ್ದರ್ ॥
ತುರದಿಂದೆ ಬರ್ಪ ಮಂತ್ರಿಯು ।
ಬರವಂ ನೆರೆ ಕಂಡು ತಮ್ಮೊಳಂದಿಂತೆಂದರ್ ॥ ೪೧

ಕೊರಗಿದುವು ಲೋಚನಂ ಭಾ ।
ಸುರಮುಡುಗಿತು ಭಾಳಲೇಖೆ ಕಂದಿತು ಗಂಡಂ ॥
ವರವಕ್ತ್ರಂ ಕಳೆಗುಂದಿತು ।
ಗುರುತರಸಂಧಾನಮಿಲ್ಲ ಗುರುವಿನ ಮುಖದೊಳ್ ॥ ೪೨

ಎಂದಾಗಳ್ ನುಡಿಯುತ್ತಿರೆ ।
ಬಂದೆಲ್ಲರ್ಗೆಱಗುತಮರಗುರು ಕುಳ್ಳಿರ್ದಿರ್ದಂ ॥
ತೆಂದಂ ರಕ್ಕಸನೊಡನೆ ।
ಲ್ಲಂದದೊಳಂ ಪೇೞ್ದನಾವ ಮಂತ್ರಮನೊಲ್ಲಂ ॥ ೪೩

ಕ್ರಮದೊಳ್ ಸಲ್ಲಂ ಸಂಧಾ ।
ನಮನೊಲ್ಲಂ ಸಂಗರಾನುಸಂಧಾನಮೆ ತ ॥
ನ್ನ ಮನಂ ತಾರಕನೊಡನ ।
ಶ್ರಮದಿಂ ಕಾದುವುದೆ ಮಂತ್ರಮಿಂತಿದೆ ಕಜ್ಜಂ ॥ ೪೪

ಅತಿನಿಷ್ಠುರನತಿನಿಷ್ಕೃಪ ।
ನತಿನೀರಸನತಿನಿರಾಶ್ರಯಂ ತಾರಕನಿಂ ॥
ತತಿದುಷ್ಕರನತಿದುರ್ಜನ ।
ನತಿಮಗುರ್ಣಿಮತಿದುರಾತ್ಮನತಿದುಶ್ಶೀಲಂ ॥ ೪೫

ಅಂತುಮಲ್ಲದೆ

ಅಪರಿಮಿತತುರಗಕುಲದಿಂ ।
ದಪರಿಮಿತೇಭಪ್ರತಾನದಿಂ ತಾರಕನಿಂ ॥
ತಪರಿಮಿತಪತ್ತಿಯಿಂದ ।
ಶ್ವಪತಿಗೆ ಗಜಪತಿಗೆ ನರಪತಿಗೆ ಮಿಗಿಲೆನಿಪಂ ॥ ४೬

ಸಿಡಿಲಿಂದರಣ್ಯಶಿಖಿಯಿಂ ।
ವಡಬಾನಳನಿಂ ಲಯಾಗ್ನಿಯಿಂ ತಾರಕನಿ ॥
ರ್ಮಡಿ ಮೂವಡಿ ನಾಲ್ವಡಿಯೈ ।
ವಡಿ ಬಲದೊಳ್ ಚಲದೊಳುಷ್ಣದೊಳ್ ತೀವ್ರತೆಯೊಳ್ ॥ ೪೭

ಎಂದು ವಾಚಸ್ಪತಿ ತಾರಕಾಸುರನ ಪಟುತರಪ್ರತಾಪಮಂ ಪೇೞುತಿರ್ಪ ಸಮಯದೊಳೂರ್ವ್ವ ಗಂಧರ್ವನಾಯಕನತಿತ್ವರಿತಗತಿಯಿಂ ಪರಿದು ಬಂದು,

ಪಿತಱ ಮಾತಿದೇತಱ ವಿಚಾರತೆಯೇತಱ ಮಂತ್ರಶಕ್ತಿಯಿ ।
ನ್ನೇತಱ ಸತ್ವಮೇತಱ ಬಲೋನ್ನತಿಯೇತಱ ವೀರವೃತ್ತಿ ತಾ ॥
ನೇತಱ ಬುದ್ಧಿಯೇತಱ ಪರಾಕ್ರಮದುತ್ಸವಮೇತಱಾಜ್ಞೆ ವಿ ।
ಖ್ಯಾತನ ತಾರಕಾಸುರನ ಬೀಡು ಬಿಡುತ್ತಿದೆ ನೋಡಲದ್ಭುತಂ ॥ ೪೮

ಧರೆಯಿಂಬಿಲ್ಲಬ್ಧಿಯಿಂಬಿಲ್ಲಚಲವಿತತಿಯಿಂಬಿಲ್ಲ ದಿಕ್ಚಕ್ರಮಂಬಿ ।
ಲ್ಲ ರಥವ್ರಾತಕ್ಕೆ ಘೋಟಪ್ರತತಿಗೆ ಗಜಯೂಥಕ್ಕೆ ಪಾದಾತಿವೃಂದ ॥
ಕ್ಕರಿದಾರ್ಗಂ ರೇಣುಪಂಕಂ ಶಿಥಿಲತೆ ದೆಸೆಗೆಟ್ಟತ್ತು ತಾನೆಂಬಿನಂ ಸಂ ।
ಗರಕಾಲಾಭೀಳಭೃತ್ಯಾತ್ತಾರಕನಖಿಳಬಳಂ ತೀವಿ ಪರ್ವಿತ್ತು ಬೆತ್ತಂ ॥ ೪೯

ಎಂಬ ಸಂಭ್ರಮೋಕ್ತಿಯನಂಬುಜಾಕ್ಷಂ ಕೇಳ್ದು ಕೋಪಮಂ ತಾಳ್ದು

ನಡೆ ಸುರಪತಿ ನಡೆ ಪಾವಕ ।
ನಡೆಯಂತಕ ನಡೆ ನೃಪಾಹ ನಡೆ ಜಳಧೀಶಾ ॥
ನಡೆ ಮಾರುತ ನಡೆ ವಿತ್ತಪ ।
ನಡೆ ವೃಷಭಾರೂಢ ಗಾಢತರವಿಕ್ರಮದಿಂ ॥ ೫೦

ಸುರರುಂ ಕಿನ್ನರರುಂ ಖೇ ।
ಚರರುಂ ಗಂಧರ್ವರುಂ ಗರುಡರುಂ ವಿದ್ಯಾ ॥
ಧರರುಂ ರಾಕ್ಷಸರುಂ ಯ ।
ಕ್ಷರುಮೊಂದೊಂದೆಸೆಯೊಳೊಡ್ಡನೊಡ್ಡುಗೆ ರಣದೊಳ್ ॥ ೫೧

ಎಂದು ಬೃಹಸ್ಪತಿಗತಿಭರ ।
ದಿಂದಂ ಬೆಸಸುತ್ತುಮಿರ್ಪ ಸಮಯದೊಳೂರ್ಧ್ವಂ ॥
ಸಂದಣಿಪ ಸುಗಿಗಳೊಗುತಿರೆ ।
ನಿಂದುಬರ್ುತೆ ಭಾಷೆಗೊಟ್ಟನಚಳಿತವೀರಂ ॥ ೫೦

ಎನಗಿದಿರಾದ ತಾರಕಬಳಂಕಬಳಂಕಬಳಂಬೊಲಿಂದು ಪೊ ।
ಕ್ಕನವಧಿಸಾಹಸಪ್ರಕರವಂಕರವಂಕರವಂತೆ ಪ್ರೌಢಿ ಭೋಂ ॥
ಕನೆ ಕರವಾಳ್ಕಡಂಗಿದವನಂ ದನನಂದವನಂಜೆ ಪ್ರೊಯ್ದು ಪ್ರೋ ।
ದ್ದಿನಿಮಿಷರಾಶಿವೈರಿಬಲವಂ ಬಲವಂ ಬಲವಂದು ಗೆಲ್ದಪೆಂ ॥ ೫೧

ಎಂದು ನಿಂದಾಸುರದಿಂ ಭಾಷೆಗುಡುತ್ತಿರ್ಪ ವೀರಾಳಾಪಮುಂ ಕೇಳು ತ್ತಮರಪತಿ ಸಮರೋತ್ಸಾಹಭೇರಿಯುಂ ಪ್ರೊಯಿಸೆ

ಧರೆಯುಲ್ಲಾಡೆ ಸಮುದ್ರಮುರ್ಕೆ ದಿಗಧೀಶರ್ ಬೆರ್ಚೆ ದಿಕ್ಕುಂಜರಂ ।
ಕರಮುಳ್ಕುತ್ತಿರೆ ಸೀಳೆ ಶೈಳಮಹಿರಾಜಂ ಬಳ್ಕೆ ಕೂರ್ಮಂ ಭಯಾ ॥
ತುರಘರ್ಮಾನನನಾಗೆ ಮೇಗಣುಡುವೃಂದಂ ಬೀಳೆ ಕೋಳಾಹಳೋ ।
ತ್ಕರನಿಸ್ಸಾಳಧಳಂಧಳಂಧಳರವಂ ಪರ್ಬಿತ್ತು ಮೂಲೋಕಮಂ ॥ ೫೨

ಅನಂತರದಲ್ಲಿ

ಉರುನಿಸ್ಸಾಳಧಳಂಕೃತಂ ನೆಗೆದುಮುದ್ಯದ್ಘೀಕರಾಕಾರಮಾ ।
ಗಿರೆ ಪೆಣ್ಣಾನೆಯುನಾದರ್ು ಹಲ್ಲಣಿಸು ವಾಜಿವ್ಯೂಹಮುಂ ಕೂಡೆ ಪೂ ।
ಡು ರಥವ್ರಾತಮುನೆಯ್ದೆ ಕೈದುಗೊಳವೇಟ್ ಪಾದಾತಿಯುಂ ಬೇಗಮೆಂ ।
ಬ ರವಂ ಪರ್ವಿತು ನಾಕಲೋಕದಿವಿಜಾನೀಕಪ್ರಧಾನಾಖ್ಯರೊಳ್ ॥ ೫೫

ಇಂತು ಕೊರ್ಬ್ಬಿ ಪರ್ಬಿದ ಕೋಳಾಹಳದ ಸಂಭ್ರಮಮಿಂಬುವಡೆಯೆ, ಸುರಕುಲಂ ಸಡಗರಿಸಿ ಘುಡುಘುಡಿಸಿ ನಡೆತಂದು ಪರಿದು ನೆರೆದು ಮುಂಗು ಡಿಗೆದಱಿ ಸಂಗರಭೂಮಿಯೊಳೊಡ್ಡಿ ನಿಂದೆಡ್ಡಮಾಗಿ ಲಗ್ಗಿಸಿ[1] ಮೊಗ್ಗರಿಸು ತ್ತೊಗ್ಗುಗೆಡದೆ ನಡೆಗೋಂಟೆಯಂತೆ ನೆಲೆವೆರ್ಚಿ ನಿಂದು, ತೊಲಗದ ಕಂಭದ ಹುಲಿಸುಬಲ್ಲಣೆಯು ಗಜಮುಖದ ಭುಜಬಳಗರುಡನ ಗಜಕೇಸರಿಸು ಬಿರುವಶರಭನ ಗಂಡರ ದಾವಣಿಯು ಭಂಡಣವಿಜಯನ ವೈರಿಜಗದ್ದಳನನ ವೀರಘಂಟೆಯು ಹೊನ್ನಗಬ್ಬಿಯ ರನ್ನವಟ್ಟೆಯ ಬೆನ್ನ ಚಮ್ಮಟಿಗೆಯ

1. ಬಗ್ಗಿಸಿ.

ಬಿಳಿಯುಚವರದ, ವಿಳಸನ ಗೆಜ್ಜೆಯ ಅಭಯಹಸ್ತದ ಉಭಯಚ್ಛತ್ರದ ಹಗಲಕೈದೀವಿಗೆಯ ಘಟಸರ್ಪನ ಕಟಕಸೂಱೆಗಾಱನ ಅಸುರಕೋಳಾಹಳನ ದೈತ್ಯಮರ್ದನನ ದಾನವಾರಿಯ ರಕ್ಕಸಜೂಜಿನ ಪಚ್ಚೆಯುಪರಿಗೆಯ ಪಸರದ ಪಾರಿಯವೊಯ್ಯಾರದ ಕೆಂದಟ್ಟಿನ ಪಂತಿಯ ಪೊಂಬಟ್ಟೆಯ ಹಳದಿಯ ಕಾಳಕೆಯ ಜಾಳದ ನೀಲದ ಸಾಲಶಂಖದ ತಟ್ಟನೊಟ್ಟಜೆಯ ಕಟ್ಟುಬ್ಬಟೆಯ ಬಿರುದಿನ ಹರಿಗೆಕಾಱರ ಪರಿವಿಡಿಯೊಳಂ । ಮತ್ತಮಾಹರಿಗೆಕಾಱರಿಕ್ಕೆಲದೊಳ್ ಕೋಡಕೆಯ್ಯೊಳೆಟ್ಟ ಮಲ್ಲಗಂಟಿನ ತೊಡರ್ಚಿದುಡೆಗಂಟೆಯ ಕಿರ್ಗಟ್ಟಿನ ಸುರಗಿಯ ಕಟ್ಟಿದ ಚೆಂದರಿಯ[1] ತೊಟ್ಟ ಕಂಚುಳಕೆಯ ಹಿಡಿದ ಬಿಲ್ಲ ಬಲಗೈಯ ಸರಳ ಬೆನ್ನಬತ್ತಳಿಕೆಯ ಸುತ್ತಿದ ಹೀಲಿಯ ಮುಡಿಗಟ್ಟಿನ ಪಟ್ಟೆಯ ಮಲಯಜದ ಮಂಗಳಬೊಟ್ಟಿನ ಕಟ್ಟಣಕದ ಸಿಂಗರಂಬೆರಸಿ ಬೀರಸಿರಿಯುಂ ಬೀಱೆ; ನಂಜಿನ ಪುಂಜದಂತೆ, ಕುಳಿಕನ ಕುಲದಂತೆ, ಜವನ ಜಂಗುಳಿಯಂತೆ, ಬಯ್ಯುದ್ಧ ಕೊಲ್ವ ಬಕನ ಬಳಗದಂತೆ, ನಿಂದ ಬಿಲ್ಲ ಬಲ್ಲಣಿಯ ಹಿಂಗಟ್ಟಿನೊಳ್ ಮುಂಕಣಿಸಿ ನೆಗಪಿದ ಸಬಳಂಗಳ ಮೊನೆಯ ಮೊತ್ತಮಿನಕಿರಣಂಗಳನೊತ್ತರಿಸಿ ಮಿಸುಗುವ ತಪನನ ಬಿಸಿಸು ಬಿಂಬದೊಳ್ ಮಾಸ್ಫೊರ್ಗೆಳೆದು ತಳತಳಿಸಿ ಸಿಡಿಲಬಳಗಂ ತಳರ್ತಂತೆ ಗಗನತಳದೊಳ್ ತುಱುಂಗಿ ನೆರೆಮೆಱೆಯೆ, ನಭಕ್ಕೆ ಚಿಮ್ಮಿ ಕುರುಳ್ಚಿ ಕೈಮಾಡುವಕೊಂತಗಾಱರ ತಿಂತಿಣಿಯ ನಡುವೆ ಪಿಡಿದ ವಜ್ರಮುಷ್ಟಿಯ ಮಸೆದಿಟ್ಟಿಯೆಸೆವ ಗಂಡಗತ್ತಿಯ ಕೂರಲಗಿನ ಭಾರಿಸಂಕಲೆಯ ಪಟ್ಟೆಯುದ ಪರಶುವಿನ ಚಕ್ರದ ಕಕ್ಕಡೆಯ ಕರವಾಳದ ಕಠಾರಿಯ ಕತ್ತಿಯ ಕರಗಸದ ಗಂಡಗತ್ತರಿಯ ಶೂಲದ ಕಾಲತೊಡರ ರಕ್ಕಸರ ಹಾಹೆಸು ತಡೆಯುದ ಲವುಡಿಯ ಚಾವುಡಿಯ ಬಾವುಲಿಯ ಬಲ್ಲಾಳ್ಗಳ ಮುಂದೆತ್ತಿದ ಪರಿಪರಿಯ ಪತಾಕಾವಳಿಯ ಸೂಱೆಱೆದು ಮಸಗಿ ದುವ್ವಾಳಿಸುವ ಗೋವಳಗಟ್ಟಿಗೆಯ ಗೊಂದಣಂಗೂಡಿ ಗಗನಂ ಕವಿದಂತೆ ದೆಸೆಗಳ್ ವುಗುಳ್ವಂತೆ ಭೂಮಿ ಬೆಸಲಾದಂತೆ, ಭೂಚಕ್ರಮಂ ತೆಕ್ಕನೆ ತೀವಿದ ಪದಾತಿಬಲದೊಳಂ । ಮತ್ತಮಾಪದಾತಿಬಲದ ಪಡಮೆಟ್ಟಿನೊಳ್ ಹೂಡಿದ ಕುದುರೆಯ ನೀಡಿ ನೆಗೆದ ಪಟಿವಿಗೆಯ ಕಟ್ಟಿದ ಚಮರದ ನಟ್ಟತಿಸುಳದ ಕೀಲಿಸಿದ ಕೀಲ್ಗಳ ತಿರುಗುವ ಚಕ್ರದ ಸುತ್ತಿ ಬಿಗಿದ ಲೋ

---

1. ಚಿಂದಿಯ.

ಹಬಂಧದ ತೆತ್ತಿಸಿದ ಸೂನಗಿಯ ಹೇಱುವ ಶಸ್ತ್ರದ ಏಱುದ ಸಾರಥಿಯ ಮೀಱು ನಿಂದ ಜೋದರ ಭೀಕರರೂಪು ಲೋಕಕ್ಕೆ ಪ್ರೋಸತಃಗೆ, ಚಕ್ರಚೀತ್ಕೃತಿಗೆ ದಿಕ್ಕರಿಗಳ್ ಬೆಚ್ಚ್ ಸೂತರ ಕಳಕಳಕ್ಕೆ ಭೂತಳಂ ನಡುಗೆ, ಜವನ ಜಕ್ಕಂದೊಟಲಿಯಂತೆ ಮಾರಿಯ ಮಸಕದಂತೆ, ಪಸರಿಸಿ ನಿಂದ ರಥಿಕಪ್ರತಾನದೊಳಂ। ಮತ್ತಮಾಸ್ಯಂದನವೃಂದಮುಂ ಮುಂದುಗೊಂಡ ಹೊನ್ನಹಲ್ಲಣದ ರನ್ನದ ಪಕ್ಕರಿಕೆಯ ಕಟ್ಟಿಸ ಗೆಜ್ಜೆಯ ಸೂಟಿಯ ರವದ ಪೊರ್ಕುಲಿ ಗಂಟೆಯ ಮೋಹಿಸುವ ಮೊಗವಡದ ರೂಹಿಸುವ ನೊಸಲ ಕನ್ನಡಿಯ ಕಡುಚೆಲ್ವ ಕೊಡಂಕೆಯ ಲಂಬಿಸುವ ಚಮರದ ಚಾರುತರಭೂಷಣಂ ಭೀಷಣಮಾಗೆ, ಕಂಬಿಯ ಕಡಿಯಣದ ಕೀಲಣದ ಹೋರಟೆಯ ಘೋರಾಘೋರಿಯೊಳ್ ಜೋಳಸುನ ಲಾಲಾಜಲಂ ಖುರಹತಿಯಿಂ ನೆಗೆವ ದೂಳ್ಗೆ ಚಳೆಯಂಗುಡೆ, ಹರಿಣಚರಣಮಂ ಚೆಲ್ಲವಾಸುನ ಗರುಡನಂ ಪರಿಹಾಸಂಗೆಯ್ವ ಪವನನಂ ಪರಿಭವಿಸುವ ಮನಮನನುಗೆಡಿಸುವ ದಿಟ್ಟಗಳನಿಟ್ಟಣಿಸಿ ದಾಂಟುವ ಕಡುವೇಗದಿಂ ಮೆಱೆದು, ಚರ್ಮದಂಡದ ನೆಮ್ಮುಗೆಯಿಲ್ಲದೆ ದನಿದೋಱುವ [1]ಸುಮಾನಂ ಪೊರ್ದದೆ ಮಡಸನ್ನೆ ಮನದೊಳಂಕರಿಸುವಲ್ಲಿಂಮುನ್ನಂ ಪರಿದು ಶರಧಿಯನೆಡಗಲಿಪ ಗಗನಮನಡರ್ವ ಜಾತ್ಯಶ್ವಂಗಳಂ ವಳಯಮುಂ ಸೋಂಕದಂಕಣಿಯ ಹಂಗಿಲ್ಲದೆ ಭೋಂಕನೇಱ ಸುಱುವ ಮಿಂಚಂ ಸೆಳೆದು ನಿಮಿರ್ಚಿ ತಳೆದೊಳಮರ್ಚಿದಂತೆ ಮಿಗೆಪಿಡಿದು ಹೆಗಲೊಳಟ್ಟ ಪಟ್ಟೆಗಳ ಬೆಳಗ ಗೆಯೆಬ್ಬಿ ಗಗನಮನಪ್ಪಿ, ಗಾಡಿಕೆಯಿಂದೊಪ್ಪುವ ಭುಜಪೂಜೆಯ ವೀರನಿವಾಳಯ ಬಿರುದಿನೇಣ್ಗೆಯ ತರದ ಡಾಡೆಯ ಹೀಲಿದಳೆಯ ಮಾಲೆಗೊಂಡೆಯ [2]ಚಿಮ್ಮುವ ಚಾಮರದ ಸೂಸುವಸೀಗುರಿಯ ಸೂರ್ಯಸೋಮವಂಶದ ರಾಜಪುತ್ರರ ರಾಯರಾವುತರ ದಿವ್ಯವಾಹಕರ ರಾಘೆಗಿಂಬುಗೊಟ್ಟು ವಾಘೆಗಳವಟ್ಟು ಪ್ರಳಯಸಮಯದೊಳ್ ಮೇರೆಯ ಮೀಱುದ ವಾರಿನಿಧಿಯ ತರಂಗಕುಲದಂತಿರ್ದ ತುರಂಗಬಲದೊಳಂ।ಮತ್ತಮಾತುರಂಗಬಲದಪರಭಾಗದೊಳ್ ಹಮ್ಮಿದ ಗುಟಿದ ಹೊಡಿದ ಜುಂಚೆಯುದ ಕಾಲಕಂಭದ ದಂಡೆಯ ಬರಿಕೈಯ ಪಟ್ಟೆಯುದ ಕೋಡವೊನೆಯ ಕೀರ್ತಿಮುಖದ ಅಗ್ರಪಲ್ಲವದ ಪತ್ರಗತಿಯ ತಲೆಯೊಳೊಟ್ಟದ ಕುಂಕುಮದ ಕಪೋಳದೊಳ್ ಸುರಿವ ಮದಜಲದ ಬೆನ್ನ ಮೇಲಿ

1. ಸುಸರಣೆ. 2. ಚೆಲ್ಲುವ.

ಟದ ಬಿಳಿಯ ಚಾಮರದ ಮುಂತಣ ಸಾಮಂತರ ಪಿಂತಣ ಬಡಿಗೆಗಾಱರ ನಡುವಣ ವೀರಜೋದರರ ಮುಗಿಲನಳ್ಳಿಱಿವ ಕದಳಿಯಕಂಭದ ಬೊಬ್ಬೆಗುತ್ತುವಾರೆಕಾಱರ ಘೀಳಿಘೀಳಿಸುವ ವೀರವೃಂದದ ಘುಡುಘುಡಿಸುವ ಡಾಡೆಯ ಕೋಳಾಹಳದಬ್ಬರಮುಬ್ಬರವಾಗೆ, ಸೂರ್ಯಮಂಡಲಮಂ ಸೆಳೆವ ಸಿಡಿಲಂ ಪಿಡಿದ ದಿಕ್ಕರಿಗಳನೆಬ್ಬಿಟ್ಟುವ ಕಡುಗಾಯ್ಪಂ ತಳೆದು ನೀಲಾಚಳಂ ಸಾಲಿಟ್ಟಂತೆ ಅಂಜನಗಿರಿಯೊಯ್ಯಾರಂಬಡೆದಂತೆ ಕಾಳಮೇಘಂಗಳ್ ಕವಿದಂತೆ ನಿಂದ ಗಜಘಟಾಪಟಲದೊಳಂ । ಇಂತೊಡ್ಡಿ ನಿಂದ ಹಸ್ತ್ಯಶ್ವರಥಪದಾತಿಯೆನಿಪ ದೇವರ್ಕಳ ಚಾತುರಂಗಬಲದ ಕಟ್ಟಿದಿರೊಳೊಡ್ಡಿ ನಿಂದ ವೀರ ತಾರಕಾಸುರನ ಚಾತುರಂಗಬಲವೆಂತಿರ್ದುದೆಂತೆಂದೊಡೆ:- ಪೆಬ್ಬುಲಿಯೊಬ್ಬುಳಿಯಂತೆ, ಸಿಂಗದ ವಂಗಡದಂತೆ, ಶರಭಂಗಳ ನೆರವಿಯಂತೆ, ಭೇರುಂಡನ ಹಿಂಡಿನಂತೆ, ಕುಳಿಕನ ಕುಳವಂತೆ, ನಂಜಿನ ಪುಂಜದಂತೆ, ಸಿಡಿಲ ಗಡಣದಂತೆ, ಕಾಳ್ಕಿಚ್ಚಿನ ಗೊಳೆಯದಂತೆ, ವಡಬಾನಲನ ಪತ್ತೆಯಂತೆ, ಕಾಲಾಗ್ನಿಯ ಮಾಲೆಯಂತೆ, ಮಾರಿಯ ಮೂರಿಯಂತೆ, ಮೃತ್ಯುವಿನ ಕೊತ್ತಳಿಯಂತೆ, ಅಂತಕನ ಸಂತತಿಯಂತೆ, ಭೈರವನ ಬಳಗದಂತೆ ಮುಂತಿರ್ದ ರಕ್ಕಸವಡೆಯ ನಡುವೆ ನಿಂದಿರ್ದ ವೀರತಾರಕಾಸುರಂ ತನ್ನ ಬಲಕ್ಕಿದಿರಾದ ನಿರ್ಜರಬಲಮಂ ನಿರೀಕ್ಷಿಸಿ ರಾಕ್ಷಸಗುರುವಪ್ಪ ಭಾರ್ಗವನ ಮುಖಮಂ ನೋಡಿ—

ಬಟ್ಟಿದ ನಿರ್ಜರಬಲದೊಳ್ ।
ಕಟ್ಟಿದಿರಾಗಿರ್ದ ನಿಂದರಾರಾರವರಂ ॥
ನೆಟ್ಟನೆನಗಱಿಪವೇಳ್ಕೆನೆ ।
ನಿಟ್ಟಯಿಸಿಯೆ ನುಡಿವನಸುರಕುಲಗುರು ಭರದಿಂ ॥ ೫೬

ನಡೆತಂದುನ್ನತವಕ್ತ್ರನಾಗಿ ಸುರರಿಂ ಗಂಧರ್ವರಿಂ ಯಕ್ಷರಿಂ ।
ನಡೆಗೊಂಡೊಪ್ಪುವ ರತ್ನಕೋಟಿರುಚಿರಪ್ರಖ್ಯಾತಕೋಟೀರಮಿ ॥
ರ್ಕ್ಕಡಿದಿವ್ಯಪ್ರಭೆಯಾಯೆ ಬೆಳ್ಗೊಡೆಯ ವೀರಚ್ಛಾಯೆಯೊಳ್ ವಜ್ರಮಂ ।
ಪಿಡಿದೈರಾವತಮೇಱಿ ನಿಂದನವನಿಂದ್ರಂ ಕೇಳ್ ದನುಪ್ರೋದ್ಭವಾ ॥ ೫೭

ಆತನ ಕೆಲದೊಳ್ ಚಂಡ ।
ವ್ರಾತಂ ಸಿಡಿಲೇಳ್ಗೆಯೊಳ್ಪು ಬಲ್ಪಗರೇಱಿ ॥

ದಾರ್ತಂ ಸಕಳಜಗದ್ವಿ ।
ಖ್ಯಾತಂ ಹುತವಹನೆನಿಪ್ಪನವಧರಿಸಸುರಾ ॥ ೫೮
ಉರುತರಭೀಕರವಕ್ತ್ರಂ ।
ಕರತಳದಿಂ ಕಾಲದಂಡಮಂ ಕಡುಪಿಂದಂ ॥
ತಿರಿಪುತ್ತಿರ್ಪವನಂತಕ ।
ನರಿದೆನಿಪ ಲುಲಾಯವಾಹನಂ ದನುಜೇಂದ್ರಾ ॥ ೫೯
ಅಸಮಬಳನತುಳವಿಕ್ರಮ ।
ನಸುರಕುಲೋತ್ತಂಸನಾಜಿಮುಖಹಸನಂ ಮಾ ॥
ನಸನಂ ಪಾಯ್ದೇಱಿದ[1]ರ ।
ಕ್ಕಸರರಸಂ ಸಿರುತಿ ನಿರುತವೆಲೆ ದನುಜೇಂದ್ರಾ[1] ॥ ೬೦
ಅವಧರಿಸೆಲೆ ತಾರಕ ಮುಕ ।
ರವನೇಱಿ ವಿಶಾಲಪಾಶಮಂ ಪಿಡಿದತ್ಯು ॥
ತ್ಸವದಿಂದಂ ನಿಂದಾತಂ ।
ನವರತ್ನಾಭರಣಕಿರಣವರಣಂ ವರುಣಂ ॥ ೬೧
ಸಂದಣಿಪ ಕುರುಳ ಕುಂತದ ।
ಮುಂದಣ ಸಾಮಂತರಾಜಪುತ್ರೋತ್ಕರದಿಂ ॥
ಗೊಂದಣಿಸಿ ಪರ್ವಿ ರಣದೊಳ್ ।
ನಿಂದಿರ್ಪವನೇಣವಾಹನಂ ಪವಮಾನಂ ॥ ೬೨
ತುರಗವನೇಱಿ ಮಯೂಖಾ ।
ವರಣಸಿತಚ್ಛತ್ರಮೆಸೆಯೆ ಗರುಡರ ಗಂಧ ॥
ರ್ವರ ಯಕ್ಷರ ಸಂದಣಿಯೊಳ್ ।
ಬರುತೊಪ್ಪುವ ಭೀಕರಂ ಕುಬೇರಂ ದನುಜಾ ॥ ೬೩
ನಂದಿಯನೇಱಿ ಗಣಂಗಳ ।
ಮುಂಬೆ ವೃಷಧ್ವಜಮನೆತ್ತಿ ಸಮರೋತ್ಸಾಹಾ ॥
ನಂದದೊಳೆ ಬಂದು ಮುಂದಂ ।
ನಿಂದವನೀಶಾನನೆಂಬನೊರ್ವ ಗಣೇಶಂ ॥ ೬೪

1. ಪಾ॥ ಕರ್ಕಶರಕ್ಕಸನವನೆ ನಿರುತಿ ನಿರುತಂ ದನುಜಾ ।

ವರಚಕ್ರಂ ಶಾರ್ಙ್ಗಂ ಗದೆ ।
ಯುರುತರಭೀಕರವನೀಯೆ ಸಂಗರರಂಗ ॥
ಕ್ಕುರವಣಿಸುತ್ತುಂ ಬರ್ಪಂ ।
ಗರುಡಧ್ವಜನಸುರಮರ್ದನಂ ಕೇಳಸುರಾ ॥ ೬೫

ಸುತ್ತಿರ್ದ ತಱೆಯ ದಿವಿಜರ ।
ವೊತ್ತದ ಗಂಧರ್ವಕುಲದ ನಡುವೆ ವಿಳಾಸಂ ॥
ಬೆತ್ತತಿಸಂಭ್ರಮದಿಂದೆ ಬ ।
ರುತ್ತಿರ್ಪಂ ಹಂಸವಾಹನಂ ಚತುರಾಸ್ಯಂ ॥ ೬೬

ಎಂದು ತಾರಕಾಸುರಂಗೆ ಭಾರ್ಗವಂ ಬೇಱಬೇಱೆ ಮಾಱೊಡ್ಡಿ ಮೀಱಿ ನಿಂದ ಗೀರ್ವಾಣಮುಖ್ಯರಂ ತೋಱುತ್ತಿರ್ಪ ಸಮಯದೊಳಮರಪತಿ ಸಮರಕ್ಕೆ ಸನ್ನದ್ಧಮಾದ ತನ್ನ ಬಲಕ್ಕೆ ಸನ್ನೆದೋಱೆ; ಹೊಯ್ಯೆ ನಿಸ್ಸಾಳದ ಭೇರಿಯ ತಂಬಟದ ಚಂಬಕದ ವೀರಮಂದದ ಡಾಡೆಯ ಪಟಹದ ಢಕ್ಕೆಯ ಧವಳಶಂಖದ ಜವಳಿಗಾಳೆಯ ತಿತ್ತಿರಿಯ ಕಿನ್ನರಿಯ ಹೊನ್ನಬೊಬ್ಬುಳಿಯ ರನ್ನದ ಕೊಂಡಿನ ಕೋಳಾಹಳಂ ನೆಗೞೆ; ಮುಸಗಿ ಬೊಬ್ಬಿಟ್ಟು ದೆಸೆದೆಸೆಗೆ ಪರಿದು ಮೂದಲಿಸಿ ಮುಂಗುಡಿಗೆದಱಿ ಮೊಗ್ಗರಂಬೊಯ್ದುಗ್ಗಲಿಸಿ ನಡೆದು ಬಗ್ಗಿಸಿ ಬಯ್ದುಗ್ಗುಗೆಡದೆ ಘುಂಕಣಿಸಿ ಭೋಂಕನೆ ನೂಂಕಿ ಪದಾತಿಬಲಂ ಪಡಿತಳಿಸಿ ರಥವ್ರಾತಮುಂ ತುರಂಗಸಂಘಮುಂ ಗಜಘಟಾಪಟಳಮುಂ ಸಂಗಡಿಸಿ ಪಿಂಗದೊತ್ತರಿಸಿ ತನಗಿದಿರಂ ಬರ್ಪ ಚತುರಂಗಬಲದ ಭಾರದುರವಣೆಯುಂ ತಾರಕಾಸುರಂ ಕಂಡು ಕೋಪಮನೆಡೆಗೊಂಡು ಆಸ್ಫೋಟಿಸಿ ಬಾಹಾಸ್ಫಾಲನಂಗೆಯ್ದು ಗಜಱಿ ಗರ್ಜಿಸಿ ಗದ್ದುಗೆವೊಯ್ದಿರ್ದುರ್ಪೊದಿರ್ ನಿಂದು ಮಿಕ್ಕುಮೀಱುವ ರಕ್ಕಸವಡೆಗೆ ಕಾಯ್ದು ಕಡುಕೆಯ್ದು ಮೆಯ್ದೋಱಿ ಕೈವೀಸಿದಾಗಳ್—

ಚರಣದ ದೂಳಿ ಬಾಂದೊಱೆಗೆ ಬಾಸಣಮಾಗಿರೆ ಹೇಷಿತಂ ದಿಶಾ ।
ಕರಿಗಳನೆಬ್ಬೆ ಬೃಂಹಿತಮಜಾಂಡಮನಾಂತಿರೆ ಚೀತ್ಕೃತಂ ಧರಾ ॥
ಧರಮನದಿರ್ಪೆ ತಾಗಿತು ಪದಾತಿ ಪದಾತಿಯೊಳಶ್ವಮಶ್ವದೊಳ್ ।
ಕರಿ ಕರಿಯೊಳ್ ರಥಂ ರಥದೊಳದ್ಭುತಮಾಹವಭೂಮಿಗಪ್ಪಿನಂ ॥ ೬೭

ಅಂತು ತಾಗಿದಾಗಳ್

ಬೆರಸಿ ಪದಾತಿ ನೆಕ್ಕನೆರಿಲೆಂಬ ನಿಳಲ್ಕಿಟಲೆಂಬ ಘೊರುಘ ।
ರ್ಘರಘರಿಲೆಂಬ ದೊಪ್ಪದೊದಲೆಂಬ ಬುದಿಲ್ಬುದಿಲೆಂಬ ಸಂಭ್ರಮಂ ॥
ನೆರೆದು ಖಣಿಲ್ಖಟಿಲ್ಧಗಧಗದ್ಧಗೆಂಬ ದುಡುಂದುಡುಂ ತಟಿಲ್ಪಟಿಲ್ ।
ಗರಿಗರಿಲೆಂಬ ನಿಷ್ಠುರರವಂ ಮಿಗೆ ತಳ್ತುಱಿದತ್ತು ಯುದ್ಧದೊಳ್ ॥ ೬೮

ಅನಂತರದಲ್ಲಿ

ಗಿರಿ ಗಿರಿಯೊಳ್ ಪಳಂಚುವವೊಲೆಯ್ದೆ ರಥಂ ರಥದೊಳ್ ಪಳಂಚೆ ಸೂ ।
ತರ ರಥಚಕ್ರಸಂಚಯದ ಕಾರ್ಮುಕವೀಧಿಯ ಮುಕ್ತಮಾರ್ಗಣೋ ॥
ತ್ಕರದ ವಿಶಾಲಹುಂಕೃತಿ ಸಮುದ್ಗತ ಚೀತ್ಕೃತಿ ಚಾರುಬಂಕೃತಿ ।
ಸ್ಫುರಿತನವೀನಭೀಂಕೃತಿ ಚಮತ್ಕೃತಿಯಾಯ್ತು ಮಹಾಜಿರಂಗದೊಳ್ ॥ ೬೯

ಅಂತು ತಾಗಿದ ರಥಸ್ರತಾನದ ಕಾಳೆಗಮಂ ಕಂಡು

ಜಳಧಿತರಂಗಸನ್ನಿಭತುರಂಗಬಲಂ ಮುಳಿದೆತ್ತಿ ವಾಹಕಾ ।
ವಳಿಯು ನಿಶಾತಖಡ್ಗದ ಖಣಿಲ್ಖಟಿಲೆಂಬ ಮಹಾರವಂ ಮುಖೋ ॥
ಚ್ಛಳಿತರವಂ ಖುರೋದ್ಧತರವಂ ಕಳಿಕೋಚ್ಚರವಂ ಕಶಾರವಂ ॥
ಬಳಸಿ ನಭಸ್ಥಳಕ್ಕೆ ಬಳೆಯುತ್ತಿರೆ ತಾಗಿದುದಾಜಿರಂಗದೊಳ್ ॥ ೭೦

ನೆರೆದು ಬುಬೆಂದು ಕಟ್ಟದಿರ ತಟ್ಟನ ರಾವುತರೊಳ್ ಕಡಂಗಿ ಮ ।
ಚ್ಚರಿಸಿ ಮರಳ್ದು ಮೂದಲಿಸಿ ಕೂರಸಿಯಿಂ ತಳೆ ಪಾಱು ಬೀಳ್ವಿನಂ ॥
ಸರಿ ಬೆಸನಾಗಿ ಪೊಯ್ಯೆ ತಲೆ ಮಾರ್ತಲೆಯೊಳ್ ನಿಮಿರ್ದಟ್ಟೆಯಟ್ಟೆಯೊಳ್
ಹರಿ ಹರಿಯೊಳ್ ಪಳಂಚೆ ಪೊಸತಾದುದು ಸಂಗರರಂಗಭೂಮಿಯೊಳ್ ॥ ೭೧

ಆಕಾಳೆಗದ ಕಡುಪಂ ಚಂಡಗಜಾರೋಹಕರ ಕಂಡು

ಮುಂಕಣಿಸುತ್ತೆ ಚಪ್ಪರಿಸುತುಂಗುಟದಿಂದೊದೆದಾರ್ದು ಸಾರ್ದು ಕೂ ।
ರಂಕುಸಮಿಟ್ಟು ಭೈ ಭಲರೆ ಭೈಯೆನುತುಂ ಕಡುಪಿಂದೆ ನೂಂಕೆ ನಿ ॥
ಶ್ಶಂಕತೆಯಿಂದೆ ತೂಳ್ದು ಘಟೆಯೊಳ್ ಘಟೆ ಜೋಡಿಸಿ ದಂತಜಾಲದೊಳ್ ।
ಭೋಂಕನೆ ಪೊಣ್ಮೆ ತೋರಗಿಡಿ ಸೂಸೆ ಕರುತ್ತಿರೆ ತಾಗಿತಾಜಿಯೊಳ್ ॥ ೭೨

ಆಗಳ್

ಬರಿಕೆಯ್ ಬರಿಕೆಯ್ಯೊಳ್ ನಿ ।
ಷ್ಠುರದಂತಂ ದಂತದೊಳ್ ಮುಖಂ ಮದಮುಖದೊಳ್ ॥
ವರಜೋದರ್ ಜೋದರೊಳೊ ।
ತ್ತರಿಸಿದರಾರೋಹಕರ್ಕಳಾರೋಹಕರೊಳ್ ॥ ೭೩

ಮುಂತಿದಿರೊಳ್ ನೂಂಕಿದ ಮಾ ।
ನಂತರ ಗಳಗರ್ಜನಕ್ಕೆ ಕಡುಮುಳಿಯುತ್ತು ॥
ತ್ಯಂತಂ ಪೊಣ್ಮಿತು ದಂತಾ ।
ದಂತಿ ನಖಾನಖಿಯೆನಿಪ್ಪ ಕಾಳೆಗಮಾಗಳ್ ॥ ೭೪

ಅಂತು ಪೋಗದೆ ನಿಂದು ತಾಗಿ ತಱಿಱಿದು ರಕ್ಕಸವಡೆಯೊಳ್ಮಿಕ್ಕು ಮಿಱುವ ದೇವರ್ಕಳ ದೆಖ್ಖಾದೆಖ್ಖಿಯ ಕಾಳೆಗಮಂ ಕಂಡು ಕಡಿಮುಳಿದು ತಾರಕಾಸುರಂ ವಾರಣಾರೂಢನಾಗಿ ತನ್ನ ಕೆಲಬಲದ ಪಿಂತಣ ಮುಂತಣ ಚತುರಂಗಬಲಂಬೆರಸಿ ನಿಲ್ಲದೆ ನೂಂಕಿದಾಗಳ್

ಅರೆರೆ ಚತುರ್ಬಲಂ ಬೆರಸು ಭೋಂಕನೆ ನೂಂಕಿದ ವೀರತಾರಕಾ ।
ಸುರನೊಳದಾವನೇಱುವನದಾವನಮುಚರ್ಗುವನಾವನೆಯ್ದಿ ಮು ॥
ಚ್ಚರಿಸುವನಾವನೊಡ್ಡುವನದಾವನೊಡರ್ಚುವನಾವನಾಂತು ನಿ ।
ತ್ತರಿಸುವನಾವನಣ್ಮಿ ತಲೆದೋರ್ಪನದಾವನಿದಿರ್ಚಿ ತಾಗುವಂ ॥ ೭೫

ಎಂಬ ಸಂಭ್ರಮಮಂತರಿಕ್ಷದೊಳೀಕ್ಷಿಪ ಯಕ್ಷಕುಲದೊಳ್ ನೆಗೞೆ

ಕುಳಿಕನ ಕೂರ್ಪ್ರು ಬಾಡಬನ ತೀವ್ರತೆಯೋ ಸಿಡಿಲೇಱ್ಗೆಯೋ ದವಾ
ನಳನ ಪೊಡರ್ಪ್ರು ಭೈರವನಳುರ್ಕೆಯೊ ಕಾಲನ ಕಾಯ್ಪೊ ತದ್ದಿಶಾ ॥
ನಿಳನತಿವೇಗಮೋ ಪರಿವ ಮೃತ್ಯುವಿನುಗ್ರತೆಯೋ ಮಹಾಲಯಾ ।
ಜ್ವಲನನ ಧಾಳಿಯೋ ತಿಳಿಯ ಪೇೞೆನೆ ನೂಂಕಿದನುಗ್ರತಾರಕಂ ॥ ೭೬

ಅಂತು ನೂಂಕಿದತುಳಬಳವೀರತಾರಕನ ಚತುರಂಗಬಲದುರವಣೆಗಿರಲಾಱದೆ ಸುರರ ಪದಾತಿಬಲಂ ಪರಿಭವಂಬಡೆದು ರಥಾನೀಕಂ ವಿರಥಮಾಗಿ ತುರಂಗಕುಲಂ ತರಹರಿಸಲಾಱದೆ ಗಜದೊಡ್ಡು ಗಂಡುಗೆಟ್ಟು ಬೆಂಗೊಟ್ಟು ನಿಲ್ಲದೋಡಿಯುಂ [1]ಕಲ್ಲಿಯುಂ[1] ದಲ್ಲಿವಿಲ್ಲಿಯುಮಾಗೆ,

ಕಂಡತಿವೀರತಾರಕನಣಂ ಪರಿಹಾಸಮನಾಳ್ದು ಮಿಱಿ ಬೆಂ ।
ಕೊಂಡು ಭಯಾಕುಳವ್ರಜದ ಬೆಂಬೞಿಯಂ ನೆರೆ ಬಿಟ್ಟು ನಿಂದು ವೇ ॥
ದಂಡಮನೋಜೆಯಿಂ ತಿರುಪಿ ನೂಂಕಿ ಮರಳ್ದು ರಣಾಗ್ರರಂಗಭೂ ।
ಮಂಡಳಮಂ ನಿರೀಕ್ಷಿಸುತೆ ಪೋದನಪಾರಗಭೀರವಿಕ್ರಮಂ ॥ ೭೭

ಅಂತು ಪೋಗೆ

ಪಾ. 1. ತಲ್ಲಿಯುಂ.

ಇತ್ತಲನಂತರಂ ತ್ರಿದಶರೋಡಿ ಸುರಾದ್ರಿಹರಾದ್ರಿಯೊಳ್ ಭಯಂ ।
ಬೆತ್ತು ಮಹಾಗುಹಾವಳಿಗಳಂ ಘನಗಹ್ವರಘೋರವೀಥಿಯಂ ॥
ಸುತ್ತಿದರಣ್ಯದಂಧತಮನುಮಂ ತವಕಂ ಮಿಗೆ ಸಾರ್ದು ಪೊಕ್ಕು ಶಾ ।
ರ್ಯೋತ್ತರರಿರ್ದರಪ್ರತಿಮತಾರಕಸಂಗರರಂಗಭಂಗಿತರ್ ॥ ೭೮

ಓಡಿದರಡಗಿದರಗಿದರ್ ।
ಕೋಡಿದರನುಗೆಟ್ಟರಳ್ಕಿದರ್ ಸೊಕ್ಕಿಳಿದರ್ ॥
ಬಾಡಿದರಂಜಿದರಮರರ್ ।
ಪೊಡಚಿದರ್ ಮಣಿದರ್ಪ್ಪರಳಿದರ್ ಕಳಿದರ್ ॥ ೭೯

ಇಂತು ಭಯಾಕುಳರಾಗಿ ಮೇರುಗಿರಿಯ ರಜತಾದ್ರಿಯ ಗುಹೆಗಹ್ವರಂಗಳಂ ಪೊಕ್ಕು ಗಾಡಿಗೆಟ್ಟು ಗಂಡುಡಿಗಿದ ದೇವರ್ಕಳನಲ್ಲಲ್ಲಿ ಕರೆದು ಮೆಲ್ಲಮೆಲ್ಲನೆ ನೆರಪಿ ಸುರಕುಲಂಬೆರಸಿ ಹಿರಣ್ಯಗರ್ಭನುಂ ಜಿಷ್ಣುವುಂ ವಿಷ್ಣುವಿರ್ದ ತಾಣಕ್ಕೆ ಜಾಣಿಂ ಬಂದು ಕಂಡು ಕುಳ್ಳಿರ್ದು ಕಾಳಗದಿಂ ನೊಂದಾಳೋಚನಂಗೆಯ್ದು ವಿಚಾರಿಸುವಲ್ಲಿಂ ಮುನ್ನಿನಂತಲ್ಲದಿನ್ನೊರ್ಮೆ ಸಂಗರಮಂ ಸಮಕಟ್ಟಲ್ವೇಳ್ಕುಮಾನಿರ್ಪೆಂ ನೀವಿರ್ಪಿರಜನಿರ್ಪನಂಜಲೇತರ್ಕೆಂದು ಶಕ್ರಂ ಮಿಕ್ಕು ನುಡಿಯೆ

ನೆನೆದು ವಿಚಾರಿಸಿ ನಿಶ್ಚಯಿ ।
ಮನನತುಳೋಪಾಯಕೋವಿದಂ ಸ್ಥಿತಿಕರ್ತಂ ॥
ವನಜಾಕ್ಷಂ ಘನನಿರ್ಮಲ ।
ನನಾಗತಜ್ಞಾನಿ ಶಕ್ರನೊಡನಿಂತೆಂದಂ ॥ ೮೦

ಅನಿರ್ದುಂ ತಾನಿರ್ದುಂ ।
ನೀನಿರ್ದುಂ ಮೂವರಿರ್ದುಮೇನಾದುದು ಪೇ ॥
ಳ್ಳಾನಿಷ್ಠುರತರತಾರಕ ।
ಸೇನಾಮುಖನಿಖಿಳಭುವನವಿಧ್ವಂಸನದೊಳ್ ॥ ೮೦

ಅಂತುಮಲ್ಲದೆ
ಐದುಂಮುಖದ ಭವಂಗೀ ।
ರೈದುಂ ಭುಜದೀಶ್ವರಂಗೆ ಷಣ್ಮುಖನುದಯಂ ॥
ಗೈದೇಟಿನೆಯ ದಿನಂ ಬಂ ।
ದೈದಿದೊಡತ್ಯುಗ್ರತಾರಕಾಸುರನಚಿವಂ ॥ ೮೧

ಎಂದಬ್ಜಜನಿತ್ತಾದೇ ।
ಶಂ ದಿಟವುದುಕಾರಣಂ ಕಪರ್ದಿಯ ತಪವಂ ॥
ಛಂದಂಗೆಡಿಸುವ ವೀರನ ।
ನಿಂದು ವಿಚಾರಿಸಲೆವೇೞ್ಪುದಿಂತಿದೆ ಕಜ್ಜಂ ॥ ೯೨

ಕಾಳೆಗದ ಮಾತನಾಡದಿ ।
ರಾಳಾಪಂಗೊಳ್ಳನಸುರನತಿಬಳನದಱಿಂ ॥
ಕೋಳಯ ತಪವಂ ಚಲಿಯಿಸು ।
ವಾಳಾಪಂ[1]ಗೆಯ್ವ ಕಾರ್ಯವನುಚಿತದ ಶೌರ್ಯಂ[1] ॥ ೯೩

ಎಂದು ಚಕ್ರಧರಂ ಶಕ್ರನೊಳ್ ತಕ್ಕಾಗು ನುಡಿಯೆ ತನ್ಮೊಳೊಂದಾಗಿ ವಚನನಿಚಯದಿಂ ವಿಚಾರಿಸಿ ನೋಡಿ ಸಕಳಜಗಜ್ಜನವಶೀಕರಣಪಟುತರಕುಸುಮಕೋದಂಡಟಂಕಾರಪ್ರತಾಪಮುಖಂ ಮಕರಪತಾಕನೆಂದಚ್ಚರಿ ಮಿಗೆ ನಿಶ್ಚಯಿಸಿ ಪಂಚೇಷುವಿಂದಲ್ಲದೆ ಪಂಚಮುಖನ ತಪಂ ಸಂಚಲಿಸದೆಂಬ ಸಂಚಮನಱಿದು ಕಾಮನಂ ಕರೆಯಿಸಲ್ವೇಡಿ ಸರಸಿಜಾಕ್ಷಂ ಪುರಂದರನ ಮುಖಮಂ ನೀಡಾಗದೆ ನೋಡಿದಾಪ್ರಸ್ತಾವದೊಳ್

ಪರಮಸ್ವಾಮಿ ಜಟಾಧರಂ ಶಶಿಧರಂ ಗಂಗಾಧರಂ ಕಾಲಸಂ ।
ಹರನಜ್ಞಾನಹರಂ ಪುರತ್ರಯಹರಂ ಸೌಖ್ಯಾಕರಂ ಶಂಭು ಶಂ ॥
ಕರನಾನಂದಕರಂ ಸಮಂತೆನಗೆ ಭಕ್ತಿಜ್ಞಾನವೈರಾಗ್ಯಮಂ ।
ಕರುಣಂಗೆಯ್ಗೊಲವಿಂದೆ ಹಂಪೆಯ ವಿರೂಪಾಕ್ಷಂ ಶಿವಾವಲ್ಲಭಂ ॥ ೯೪

॥ ಗದ್ಯ ॥

ಇದು ಸಮಸ್ತಸುರಾಸುರನಿಕರಮಕುಟಖಚಿತದಿನಕರಕರಾಧಿಕ್ಯಮಾಣಿಕ್ಯ
ಪ್ರಭಾಪುಂಜರಂಜಿತ ಪಂಪಾವಿರೂಪಾಕ್ಷ ಶ್ರೀಪಾದಕಮಲ
ಮಕರಂದಮತ್ತಮಧುಕರಾಯಮಾಣ ಸತ್ಕವೀಶ್ವರ
ಹಂಪೆಯ ಹರಿಹರದೇವ ವಿರಚಿತಮಪ್ಪ
ಗಿರಿಜಾಕಲ್ಯಾಣ ಮಹಾಪ್ರಬಂಧದೊಳ್
ತಾರಕಾಸುರಯುದ್ಧವರ್ಣನಂ ಷಷ್ಠಾಶ್ವಾಸಂ

---

1. ಗೆಯ್ವುದುಚಿತಕಾರ್ಯಂಶೌರ್ಯಂ

॥ಸಪ್ತಮಾಶ್ವಾಸಂ॥

—ವಸಂತೋದ್ಯಾನ ಮದನಪ್ರಯಾಣಪ್ರಾರಂಭ ವರ್ಣನಂ—

ವರಸುರನರೋರಗವ್ರಜ ।
ಕಿರೀಟಪದಯುಗನತಿಸ್ವತಂತ್ರಂ ಶರ್ವಂ ॥
ಹರನಧಿಕಾಕ್ಷಂ ಸಲೆ ಭ ।
ಕ್ತಿರಸಮನೆಮಗೀಗೆ ಹಂಪೆಯ ವಿರೂಪಾಕ್ಷಂ ॥ ೧

ಪುರುಹೂತಂ ಹರಿಯಾಡಿದ ।
ಪರಿಯಂ ತಾನಱಿದು ಮಂತ್ರಿವಾಚಸ್ಪತಿಯಂ ॥
ಕರೆದೀಗಳೆ ಕಾಮನನತಿ ।
ಭರದಿಂದೊಡಗೊಂಡು ಬರ್ಪುದೆಂದಿಂತೆಂದಂ ॥ ೨

ಇದಿರ್ತೆಱನಿದು ನೀನಱಿ ।
ದಿರ್ದದೆ ನಿನಗಱಿಪಲಿಲ್ಲ ಕಾರ್ಯಸ್ಥಿತಿಯಂ ॥
ಸಾರ್ದತಿವೇಗದೆ ಶೂರ್ಪಕ ।
ಮರ್ದನನಂ ತರ್ಪುದಾವ ತೆಱದಿಂ ಜೀವಾ ॥ ೩

ಎಂದು ಬೆಸಸುತ್ತುಮಿರೆ ನಡೆ ।
ತಂದಂ ಗುರು ಮದನನಲ್ಲಿಗಮಲಿನದೇಹಂ ॥
ಸಂದ ಕಳಾವ್ಯೂಹಂ ಗುಣ ।
ಸಂದೋಹಂ ಗಗನಗಮನಪುಷ್ಪಕವಾಹಂ ॥ ೪

ನಡೆತಂದು ಮುಂದೆ ಚೆಲ್ವಿಂ ।
ದಿಡಿದ ರತೀಶ್ವರನ ರಾಜಧಾನಿಯನೊಳಪ್ಪೊ ॥
ಕ್ಕೆಡೆಯುಡುಗದೆ ನೆರೆದರಮನೆ ।
ಗೆಡೆಯಾಡುವ ಲಲನೆಯರ್ಕಳಂ ನೋೞ್ಪಾಗಳ್ ॥ ೫

ತೆಗೆದಿಸುವ ಪುಷ್ಪಚಾಪನ ।
ಮುಗುಳಂಬಿಂಗೆಣೆಯೆನಿಪ್ಪ ವಧುವೊರ್ವಳ್ ಮೆ ॥

ಲ್ಲಗೆ ಬಂದಳ್ ಮನ್ಮಥನೋ ।
ಲಗಕ್ಕೆ ಶತಪತ್ರದಾತಪತ್ರದ ನೆಬಿಲೊಳ್ ॥ ೬

ನೇವುರದ ಮುದ್ರಿಕೆಯು ಮಧು ।
ರಾವರಣಧ್ವನಿ ಬೃಹಸ್ಪತಿಯು ಕಿವಿವುಗೆ ಸ ॥
ದ್ಭಾವಕಿಯೊರ್ವಳ್ ಬಂದಳ್ ।
ಕಾವನ ಸಭೆಗೆಸೆವ ರತ್ನಮುಕುರದ ತೆಱದಿಂ ॥ ೭

ಬಿಸರುಹದಳದೊಳ್ ಚಂದನ ।
ರಸಮಂ ನೆರೆ ತೀವಿಕೊಂಡು ಮೆಲ್ಲಡಿಯಿಡುತುಂ ॥
ಪೊಸಜವ್ವನೆ ನಡೆತಂದಳ್ ।
ಕುಸುಮಾಸ್ತ್ರನ ಗಟ್ಟವಳ್ತಿಯೊಬ್ಬಳ್ ಭರದಿಂ॥ ೮

ಇಂಬಾಗಿರೆ ವರಹಿಮಕರ ।
ಬಿಂಬದ ಬೆಂಬಱಿಯೊಳಱಿವ ತಣ್ಗದಿರ್ಗಳೆನಲ್ ॥
ಪೊಂಬಾಳೆಯ ಚಮರಮದಾ ।
ಲಂಬಿಸೆ ಪಿಡಿದೊರ್ವ ಚಂದ್ರಮುಖಿ ನಡೆತಂದಳ್ ॥ ೯

ಪ್ರಬಳನವರತ್ನರೋಚಿ । 12373
ಶ್ಯಬಳಿತದರ್ಪಣಮನಾಂತು ಮುಂದೆಯ್ತಂದಳ್ ॥
ನಿಬಿಡತರಸುಕರಪುಷ್ಪ ।
ಸ್ತಬಕದ ಬೆಳ್ಗೊಡೆಯ ನೆಬಿಲೊಳಂಗನೆಯೊರ್ವಳ್ ॥ ೧೦

ಅಂತವರ ನಿರತಿಶಯಸ್ವಭಾವಸೌಂದರ್ಯಸೌಕುಮಾರ್ಯಂಗಳಂ ಕಂಡು ಬೃಹಸ್ಪತಿ ಮನದೊಳಳಿಪುತ್ತುಂ ಬುದ್ಧಿಯೊಳ್ ಬೆದಱುತ್ತುಂ ಚಿತ್ತದೊಳ್ ಕೌತುಕಂಬಡುತ್ತುಂ ನಡೆತಂದರಮನೆಯ ಮುಂದೆ ಪುಷ್ಪಕಮುಱಿದೊಪ್ಪುವ ದರ್ಪಭೂಷಣಮೆನಿಸಿದ ದರ್ಪಕಾಸ್ಥಾನಮಂ ಪುಗುತರ್ಪಲ್ಲಿ,

ಮುಂತಿರ್ದಂ ಪುಷ್ಪಮಾಲಾನಿಚಯವಿರಚಿತಸೌಗಂಧ್ಯಲೋಲುಪ್ತಭೃಂಗೀ ।
ಸಂತಾನಾಬದ್ಧಧಾರಾನಿಳಯುವಳಯಮಧ್ಯಪ್ರದೇಶಪ್ರರತ್ನಾ ॥
ನಂತಪ್ರದ್ಯೋತವೀಥೀಪ್ರಯುತನಿಯುತಸಿಂಹಾಸನಾರೂಢತಾನಿ ।
ಶ್ಚಿಂತಂ ಶೃಂಗಾರಕಾಂತಾಜನವಿನುತರತೀನಾಥನಾನಂದಯುಕ್ತಂ ॥ ೧೧

ಅಂತಿರ್ದ ಮದನಭೂಭುಜನಂ ತ್ರಿದಶಾಚಾರ್ಯಂ ದೂರದಿಂ ನಿರೀಕ್ಷಿಸುತ್ತುಂ ಬರ್ಪಾಗಳ್—ಮುಂದೆ ಮಗಮಗಿಸ ಕದಂಬಕುಸುಮದ ಪೊಸಗಂಪಿಂ ಪೊರೆದು ಸಾರ್ವರ್ತುಕಮೆನಿಸಿ ಕೊರ್ಬಿಬೆಳೆದ ಕೇಳೀವನದ ನಡುವೆ ನಿಂದ ನೀಲದ ನೆಲಗಟ್ಟಿಂಗೆ ನೆಲೆಯಾದ, ಮುತ್ತಿನ ಬೆಳಗಿನ ಬೆಳ್ದಿಂಗಳ ಭಿತ್ತಿಗಳ ಮೇಲೆ ತರತರದಿಂ ಪರಪಿದ ಕೈರವದ ನುಣ್ಣಸಬಿ ಸಣ್ಣ ಜಂತೆಗಳನಾಂತ, ಕೇತಕಿಯ ನೀಳ್ದ ದಳದ ಪಟ್ಟಿಗೆಗಳೊಟ್ಟಜೆಗಳಂ ಮತ್ತಂ ಮುತ್ತಿನ ಮತ್ತವಾರಣಮಂ ನವೀನಗಂಧದಿಂ ತವೆ ಪೊರೆದ ದವನದ ದಾರವಂದದೊಳಚ್ಚೊತ್ತಿ ಬೆಚ್ಚಂತಿರ್ದ ಲಾಮಂಚದ ಮುಚ್ಚುಳಮಂ ನೆಮ್ಮಿ ನಿಂದಿರ್ದ ಪಡಿಯಱಗೋಗಿಲೆಗಳಂ ಮತ್ತಂ ರವಿಕರಕ್ಕೆಡೆಗುಡದಿಡಿದಿಡಿದು ಸುತ್ತಿಮುತ್ತಿ ಕವಲಿರಿದು ಕವಿದ ಲತಾಂತಜಾಳದ ತಟ್ಟಿ ನೆಟಲಿಂ ಕಟ್ಟಿಲಿಸುವ ಓಲಗಸಾಲೆಯೊಳ್—ಬಂದುಗೆಯ ಬಣ್ಣದ ತಿಣ್ಣವೆಳಗುಂ ಕಣ್ಣಬೆಳಗುಂ ತನ್ನೊಳಮರ್ಡಿಸೆ ಮೆಯ್ದೋಱ ಕೈದೀವಿಗೆವಿಡಿದಿರ್ಪ ಖೇಚರಾಂಗನೆಯರಿಂ, ಕಾಮನ ರತಿಯ ನನೆಯ ಸಿಂಹಾಸನದಿಕ್ಕೆಲದೊಳ್ ನಿಂದು ಮರುಗದ ಪೊಂಬಾಳೆಯ ಸೀಗುರಿಯ ಚಾಮರಂಗಳಂ ಪಿಡಿದಿರ್ಪ ಹಸ್ತಿನಿಯರಿಂ, ನೆಱೆದು ನಿಂದ ಕೀರಾಳಿಗೆ ಕಾಮಾದ್ವೈತಶಾಸ್ತ್ರಸೂತ್ರಮಂ ಪಾಠಪೋದಿಪ ಪರಿಜ್ಞಾನದಿಂ ಮೆಱೆವ ಚಿತ್ತಿನಿಯರಿಂ, ಮೇಲೆ ಬೀಳ್ವ ಕಾಮದೇವನ ಕಟಾಕ್ಷಕಂಜಿ ರತೀದೇವಿಗಡಿಗಡಿಗೆ ಕೆಯ್ಮುಗಿದು ಕೆಲಸಾರ್ದಿರ್ಪ ಶಂಖಿನಿಯರಿಂ, ಮತ್ತಂ ಶತಪತ್ರದೊಳಮೃತರಸಮನೋವಿ ತೀವಿ ಮುದದಿಂ ಪಿಡಿದಿರ್ಪ ಪದ್ಮಿನೀನಾಯಕಿಯರಿಂ, ಹಂಸೆವಿಂಡಿಂಗೆ ನಡೆಗಲಿಪ ಮುಂದಯಾನೆಯರಿಂ, ನವಿಲ್ವಿಂಡನಾಡಿಪ ನರ್ತಕಿಯರಿಂ, ಮತ್ತಂ ಮಧುಕರಮಂಡಳಿಗೆ ಮಾರಭೂಪನ ಬಿರುದಿನೇಱ್ಗೆಗಳ ಗೀತಗೋಷ್ಠಿಯನೀವ ನೂತನಗಾಯಕಿಯರಿಂ, ಶತಪತ್ರೀಜನಸಮಾಜದಿಂ ರಥಾಂಗಮಿಥುನದ ಸುರತಶ್ರಾಂತಿಯನಾದರದಿಂದಾಱಿಸುವ ಚಕ್ರಕುಚೆಯರಿಂ, ಹರಿಣಿಗಳ ಮುಳಿಸಂ ತಿಳಿಪಿ ಹರಿಣಗಳನೊಡಗೂಡುವ ಹರಿಣಾಕ್ಷಿಯರಿಂ; ಅಶೋಕೆಯನೊದೆದಂಕುರಮಂ ಪುಟ್ಟಿಪ ಮೃದುಪದೆಯರಿಂ, ಕುರುಮಕಮಂ ಪರಿರಂಭಣದಿಂ ಪೊರೆಯೇಱಿಸುವ ತರುಣಿಯರಿಂ, ಕುಸುಮರಸಗಂಡೂಷದಿಂ ವಕುಳಕುಳಮಂ ಕೋರಕಿತಂ ಮಾಳ್ಪ ಸಾರಮುಖಿಯರಿಂ, ಹೂವಿನ ಬಿಲ್ಲನೊಚ್ಚತಂಗೊಂಡರ್ಚಿಸುತ್ತಿರ್ಪ

ಕುಡುವುರ್ವಿನ ನೀಱೆಯುರಿಂ, ನನೆಯಂಬಿಂ ಕೈಗೆಯ್ವ ಸವಿನೋಟದ ಸಾಧಾರಣೆಯುರಿಂ, ಮತ್ತಂ ಮಕರಕೇತನನಕೇತಕಿಯುಲರ್ಗಂಪಂಪರಾಗದ್ದಸಾರಣೆಯೊಳ್ (?)ಪರಿಮಳದಹೊಗರೆತ್ತುವಳಕುಂತಳೆಯುರಿಂ, ನನೆಯ ಕಠಾರಿಯುಂ ಸಿಂಗರಿಪ ಸಂಗಡದ ಮುಗ್ಧೆಯುರಿಂ, ತಳಿರ ತೋಮರವಂ ತಿರ್ದುವ ಕಳಕಂಠನಿನಾದೆಯುರಿಂ, ಕೈರವದ ಸಬಳಮನೊಪ್ಪವಿಡಿವ ಕುಮುದಾಕ್ಷಿಯುರಿಂ, ಚಕೋರಿಯ ಕುಳಕ್ಕೆ ಬೆಳ್ದಿಂಗಳನೂಡುವ ರೋಹಿಣೀವಿಳಾಸಿನಿಯುರಿಂ, ಪ್ರಾಗೊಳನಂ ಸಾವಗಿಪ ಭೋಗವತಿಯುರಿಂ, ಬನಮಂ ಬಳೆಯಿಸುವ ವನಲಕ್ಷ್ಮಿಯುರಿಂ, ಮತ್ತಂ ವಿರಿಂಚಿಯ ಹಾಹೆಯ ಕಾಲೊಳ್‌ಬಿಲ್ಲೆ ನಿಂದಿರ್ಪ ನಾಯಕಿಯುರಿಂ, ಇಂದ್ರನ ಮೆಯ್ಗಣ್ಣ ಬಾವುಲಿಯ ದರ್ಪಣೆಯುರಿಂ, ಕುಬೇರನ ರೂಪು ನೇವುರದೊಳೆಬಿಲ್ವ ಚಾಪಳೆಯುರಿಂ, ಜಿತೇಂದ್ರಿಯರ್ಗಂ ಗೆಲ್ವ ವಿಜಯಧ್ವಜದ ವೀರೆಯುರಿಂ, ತಳಿರ ಗದ್ದುಗೆಯೊಳ್ ಕೆಳಗೆ ಕುಳ್ಳಿರ್ಪ ವಸಂತರಾಜನಿಂ, ಬೆಳ್ದಿಂಗಳ ಹಸೆಯೊಳ್ ಬಳಸಿ ಕುಳ್ಳಿರ್ಪ ಕಳಾವಳೆಯುರಿಂ, ಅರಸಾಳ್ವನಂ ಸಾರ್ದಿರ್ಪ ಮಳಯಾನಿಳನಿಂ, ಕೆಲದೊಳ್ ನಿಱಿಸಿದಿಕ್ಷುಚಾಪದಿಂ, ಮಲಂಗಿಸಿದ ಕುಸುಮಬಾಣಂಗಳಿಂ, ಸಮಸ್ತವಸ್ತುವಿಸ್ತಾರವಿಳಸದ್ವಿಭಾಸವಿಭ್ರಮಮಂ ಪಡೆದು ಪರಾಗಮಂ ಪಸರಿಸುವ ಸರಸೀರುಹದೆಸಳಿ ತುಱುಂಗಲ ಸಿಂಹಾಸನದೊಳ್ ಸುರತ್ತರುಮಂ ಮಲಂಗಿ ವಸಂತನ ಮೇಲೆ ಕಾಲಂ ನೀಡಿ ಶೀತಕರನಿಂ ಶ್ರೀಹಸ್ತಮನೊತ್ತಿಸಿಕೊಳ್ಳುತ್ತುಂ ನಳಿನದುಕೊಲದ ಮಲ್ಲಗಂಟುಂ ಮೊಲ್ಲೆಯ ಮುಗುಳ ಕಂಕಣಮುಂ ಮಲ್ಲಿಗೆಯ ನನೆಯ ಹಾರಮುಂ ಬಂದುಗೆಯ ಬಾಹುಪೂರಮುಂ ದಾಡಿಮೀಬೀಜದ ಕರ್ಣಾವತಂಸಮುಂ ಚಂದನತಿಲಕಮುಂ ಶ್ಯಾಮವರ್ಣಮುಂ ಕೋಮಲಾಂಗಮುಂ ಕಣ್ಣಬೆಳಗುಂ ಮುಖದ ಕಾಂತಿಯುಂ ಮಿಗೆ ಸೊಗಸಂ ಮೂಡಿಸೆ ಮೂಱುಂ ಜಗಮಂ ಮಿಱು ಗೆಲಲೆಂದು ಸಂಗಡಿಸಿ ಶೃಂಗಾರರಸಮಂಗಂಬಡೆದಂತೆ ಸುಕುಮಾರತೆ ಸಾಕಾರಂಗೊಂಡಂತೆ ಸೊಬಗು ಸಂಧಣಿಸಿದಂತೆ ನಳನಳಿಕೆ ಬಳೆದಂತೆ ಕಣ್ಗಳ ಭಾಗ್ಯಂ ಕವಲ್ತಂತೆ ಮನೋರಥಂ ಮದವೇಱಿದಂತೆ ಪುಟವಿಟ್ಟ ಪುಣ್ಯಂ ಪುರುಷಾಕಾರಮಾದಂತೆ ಇರ್ದ ಕಂದರ್ಪರಾಜನ ಕಮನೀಯರೂಪಂ ಬೃಹಸ್ಪತಿಯ ಕಣ್ಗಳೊಳ್ಪೊಕ್ಕು ಮನಮಂ ನಲ್ಲಾಡಿಸೆ ಬುದ್ಧಿ ಬೆದಱಿ ಅಹಂಕಾರನಳಿದು ಚಿತ್ತಂ ಸೂಸಿ ಮದನವಿಕಾ

ರದ ಜಮ್ಮುಂ ಜಕ್ಕುಲಿಸಿ ಹನ್ನುರ್ದಂಬೋಗಿ ಜೀವಂ ಸುಖದ ಜೀವಕಳೆ ಯ ಕಳಾಸದ ಕುಣಿಕೆ ಕಟಿಲ್ಚಿ ತನ್ನನಱಿಯದಿದಿರನಱಿಯದೆ ಬಂದು ದಂ ಮಱೆದು ಕಜ್ಜವಂ ತೊಱೆದಿನಿತುಂ ಬೇಗಂ ಸುಖದ ಸೋಂಕಿಂದು ಕುರ್ಗವಕಾವುರಸದ ತೆರೆಯೊಳ್ ತೇಂಕಾಡುತಿರ್ದಂತಾನುಮೆಚ್ಚಿತ್ತು ಸಂತೈಸಿ ಕೊಂಡು—

ಮಱೆಯುತ್ತೆಚ್ಚಱುತುಂ ಕುಱು ।
ಕುಱುಮೆಟ್ಟುತ್ತಡಿಯನೆತ್ತಿ ತಾನೆಂದಿದಿರೆಂ ॥
ದಱಿಯದೆ ಕಾಮವಿಕಾರಂ ।
ನೆಱೆ ಪತ್ತಿ ಸುರೇಂದ್ರಮಂತ್ರಿ ದಡದಡಿಸುತ್ತುಂ ॥ ೧೨

ಮೆಲ್ಲನೆ ಮೆತ್ತನೆ ನಡೆತರು ।
ತಲ್ಲಲ್ಲಿ ಕುನುಂಗಿ ಕುಗ್ಗಿ ಪಂಚಶರಂಗು ॥
ತ್ಫುಲ್ಲನವಕುಸುಮಸಂಕುಳ ।
ವಲ್ಲರಿಯುಂ ಕಾಣ್ಕೆಯಿತ್ತನಮರಾಚಾರ್ಯಂ ॥ ೧೩

ಮತ್ತಮನಂತರಂ

ಕಂಪಂ ಕೈಕೊಳುತುಂ ಮೆಯ್ ।
ಜೋಂಪಿಸೆ ಬೀಲ್ವೆಳನಿಕಾಯಸಹಿತಂ ಜೀವಂ ॥
ಪೆಂಪಿನ ಸೊಂಪಿನಲಂಪಿನ ।
ಸೆಂಪಗೆಯಲದೋರ್ಗಲಂ ರತೀಶಂಗಿತ್ತಂ ॥ ೧೪

ಅಂತು ಕಾಣ್ಕೆಯಿತ್ತು ಕುಳ್ಳಿರ್ದ ವಾಚಸ್ಪತಿಯ ಮುಖಮಂ ಮಕರಧ್ವಜಂ ನೋಡಿ

ಸುರಪತಿಸರಸಿಜಭವಪಂ ।
ಕರುಹಾಕ್ಷರ ಸುಖದೊಳಿರ್ದಪರೆ ತಾರಕನಂ ॥
ಗರಮೇನಾದುದು ಸುರಕುಲ ।
ಗುರುವೇ ನೀಂ ಬಂದ ಕಜ್ಜಮೇನೀಪದದೊಳ್ ॥ ೧೫

ಎನೆ ಗುರುವೆಂದಂ ತಾರಕ ।
ನನುವರಮಂ ಮಾಣ್ದು ಮೇರುಗಿರಿತಟದೊಳ್ ಆ ॥

ಕ್ರನುವಜನುಂ ಸರಸಿಜನಾ ।
ಭನುಮೇಕಾಂತದೊಳಗಿರ್ದು ಕಳಪಿದರೆನ್ನಂ ॥ ೧೬

ಅತುಳತರಗುಪ್ತಕಾರ್ಯ ।
ಸ್ಥಿತಿಯೊಳಾಲೋಚನೆಗಳುಂಟು ನೀಂ ಚಚ್ಚರನು ॥
ಪ್ರತಿಮಂ ಕಾಮನನೊಡಗೊಂ ।
ಡತಿವೇಗದೆ ಬರ್ಪುದೆನಲ್ ಬಂದಂ ಮದನಾ ॥ ೧೭

ಎನುತುಂ ಗುರು ನುಡಿಯೆ ಸುಖಾ ।
ಸನದಿಂದಿದಿರೆೞ್ದು ಶಶಿವಸಂತಾದಿಗಳಂ ॥
ಬನದೊಳ್ ಪಿಂತಿರಿಸುತೆ ಭೋಂ ।
ಕನೆ ರತಿವೆರಸೇೞಿದಂ ದರ್ಪಕಂ ಪುಷ್ಪಕಮಂ ॥ ೧೮

ತಾನುಂ ವಾಚಸ್ಪತಿಯುಂ ।
ನಾನಾವಿಧಕಾರ್ಯಗತಿಗಳಂ ನುಡಿಯುತ್ತುಂ ॥
ಸಾನಂದಂ ಹರಿಯಜರಾ ।
ಸ್ಥಾನನಿಕೇತನದ ಮುಂದೆ ಬಂದಿೞಿತಂದರ್ ॥ ೧೯

ಬಂದೊಳಪೊಕ್ಕು ಚಕ್ರಿಗೆ ವಿರಿಂಚಿಗೆ ವಜ್ರಧರಂಗೆ ವಂದನಾ ।
ನಂದಶರೀರನಾಗಿ ಕುಸುಮಾಯುಧನುಂ ರತಿಯುಂ ಪ್ರಸಿದ ಸಂ ॥
ಕ್ರಂದನ ಮಂತ್ರಿಯುಂ ಮುದದೆ ಕುಳ್ಳಿರೆ ಕಾಮನನೀಕ್ಷಿಸುತ್ತೆ ಗೋ ।
ವಿಂದನನಿಂದಿತಂ ನುಡಿದನಾತ್ಮಗತಾರ್ಥವಿಚಾರಸಾರಮಂ ॥ ೨೦

ಕೇಳೆಲೆ ದರ್ಪಕ ತಾರಕ ।
ನೂೞಗದಿಂದುರಗಮರ್ತ್ಯನಿರ್ಜರಲೋಕಂ ॥
ಗೋೞಿಂಡೆಗೊಳುತುಮಿದೆ ವೀ ।
ರಾಳಾಪಂಗೊಳ್ವದಸುರನತ್ಯಧಿಕಬಲಂ ॥ ೨೧

ಆರಿಂದಂ ಸಾಯಂ ತ್ರಿಪು ।
ರಾರಿಗೆ ಪುಟ್ಟಿದ ಕುಮಾರನಿಂದಲ್ಲದವಂ ॥
ವೀರಂ ತಾರಕನಂತದು ।
ಕಾರಣದಿಂ ಮಾಳ್ಪ ಕಜ್ಜಮುಂಟೀಪದದೊಳ್ । ೨೨

ಹರನತ್ಯಧಿಕತಪೋವಿ ।
ಸ್ತರಮನನಾಗಿರ್ದಪಂ ಮದನ ತತ್ತಪಮಂ ॥
ಕೊರಗಿಸಿ ವರಗಿರಿಸುತೆಯೊಳ್ ।
ನೆರಪಲ್ಲಿಗೆ ನೀನೆ ಬಲ್ಲೆ ನೀನೆ ಸಮರ್ಥಂ ॥ ೨೩
ತಪಮಂ ಕೆಡಿಪುದು ಮಾಡುವ ।
ಜಪನಕ್ಷರದೊಳಗೆ ನಿನ್ನ ನೆಸೆಯುಂಬಂ ಕೀ ॥
ಳಿಪುದು ಗಿರಿಜಾವಧೂಸಾ ।
ಖ್ಯಪದಾವರಣಾತ್ಮನೆನಿಸುವುದು ಶಶಿಧರನಂ ॥ ೨೪
ಅಂತುಮಲ್ಲದೆ
ಪುರುಷರ್ ವಧುಗಳ್ಗೆ ವಧೂ ।
ತ್ಕರಮಾಪುರುಷರ್ಗೆ ಸೋಲ್ವುದುಚಿತಮದಲ್ಲೀ ॥
ಧರೆಯೊಳ್ ಮದನ ವರಸ್ತ್ರೀ ।
ಪುರುಷರ್ ನೆರೆ ನಿನಗೆ ಸೋಲ್ವುದೆನಗಿದು ಚಿತ್ರಂ ॥ ೨೫
ಇಂತಪ್ಪ ನಿನಗೆ ಮನ್ಮಥ ।
ಮುಂತಿದಿರಪ್ಪವರದಾರೊ ಶಶಿಚೂಡನ ತ ॥
ಚ್ಛಾಂತಿಯನುಡುಗಿಸಿ ಗಿರಿಜಾ ।
ಕಾಂತೆಯು ಸನುಸುಖಸನುಮದ್ರಮಧ್ಯದೊಳಿರಿಸೈ ॥ ೨೬
ಎನೆ ಮದನಂ ನುಡಿದಂ ನಿಃ ।
ಜನಕನೊಳಕ್ಕಕ್ಕಿದಪ್ಪುದಪ್ಪುದು ಸರ್ವೇ ॥
ಶನನನವಧಿಗುಣನಂ ಶ ।
ರ್ವನನಿಸುವುದನೆನಗೆ ಬೆಸಸುವುದು ನಿಮಗರಿದೇ ॥ ೨೭
ಶ್ರುತಿಗಳ್ ಕಾಣದ ಮನುಗಳ ।
ಮತಿಯೆಯ್ದದ ಮುನಿಗಳಱಿವು ಸಿಲ್ಕದ ಶಾಸ್ತ್ರ ॥
ಪ್ರತತಿ ನೆರೆಯಱಿಯದಪ್ರತಿ ।
ಹತರೂಪನನೆಂತು ಕಾಣ್ಬೆನೆಂತಾನಿಸುವೆಂ ॥ ೨೮
ಇಸುವೆನ್ನೀಮನಮಂ ಪ್ರೇ ।
ರಿಸುವೀತನನಖಿಳಲೋಕಗುರುವಂ ಭರದಿಂ ॥

ದಸವಾಕ್ಷನನಿರದಾರ್ದಿರ್ಸು ।
ವಸವಾಸ್ತ್ರತೆ ಜಲಧಿಶಯನ ವಸುಧೆಯೊಳುಂಟೇ ॥ ೨೯
ತ್ರಿಳಯುವ ಶೂಲಿಯ ತಪವಂ ।
ಚಲಿಯಿಸು ನೀನೆಂಬುದಹಿತಮೆನಗೆ ಹೆಱರ ಮ ॥
ಕ್ಕಳನಿಕ್ಕಿ ನೆಲೆಯನಱಿವುದ ।
ನಿಳೆಯೊಳಗೆನ್ನಲ್ಲಿ ಮಾಪ್ಪಿರೇ ಕಮಲಾಕ್ಷಾ ॥ ೩೦
ಅಂತುಮಲ್ಲದೆ
ಹರಿಯಲ್ಲಿಗೆ ತಮಮಂ ಕೇ ।
ಸರಿಯಲ್ಲಿಗೆ ಕರಿಯನಭ್ರಶಿಖಿಯಲ್ಲಿಗೆ ಕೇ ॥
ಳುರಗನನಟ್ಟುವ ತೆಱದಿಂ ।
ಹರನಲ್ಲಿಗೆ ತಂದೆ ಕಳುಪುವರೆ ನೀವೆನ್ನಂ ॥ ೩೧
ಎಂದೊಡೆ ಮುಕುಂದನೆಂದಂ ।
ಕಂದರ್ಪ ಬಹೂಕ್ತಿಯಿಂದಮೇನಪ್ಪುದು ನಿ ।
ನ್ನಿಂದಂ ಸಕಳಜಗಂ ಸುಖ ।
ದಿಂದಿರ್ಪೊಡೆ ಹರಣದೊಂದು ಹುರುಳಱಸುವರೇ ॥ ೩೨
ಎನೆ ಕಂದರ್ಪಂ ಸಕಳಭು ।
ವನಮೆನ್ನಿಂ ಪರಮಸುಖದೊಳಿರ್ಪುದು ಗಡಮೇ ॥
ನೆನಿತಱವನೆನ್ನ ಹರಣಂ ।
ಘನಮೇ ತೆಗೆಯಿಂದೆ ನೂಱು ತೀವಿತ್ತಂದಂ ॥ ೩೩

ಎಂದು ವಿೂಱಿ ನುಡಿಯುತ್ತೊಡಂಬಟ್ಟು ಬೀಳ್ಕೊಂಡು ನಡೆತಂದು ಪೊಱಗಿಕ್ಕಿದ ಸಿಂಹವಿಷ್ಟರಮನನಷ್ಟಂಭಿಸುತ್ತನ್ನತಚಿತ್ತಂ ಪುಷ್ಪಧನ್ವಂತನ್ನೊಳಂತೆಂದಂ:—

ಪೊಡವಿಯೊಳೆಲ್ಲ ಮುಖ್ಯಮುನಿಗಳ್ ಮನುಗಳ್ ಜಿತಕಾಮರುಂ ಸಮಂ।
ತೆಡೆಗುಡದೆನ್ನ ಕಾರ್ಮುಕದ ಟಂಕೃತಿಮಾತ್ರದೊಳತ್ತಲಿತ್ತಲುಂ ॥
ಸಿಡಿದು ಸುರುಳ್ದುರುಳ್ದು [1]ರತಿಯುನ್ನತಿಯಿಂ ನೆಱಪ್ಪರೆಂದೊಡೇ।
ಸಡಿಸಡ![1] ಶೂಲಿಗೀಲಿಯ ತಪಂಗಿಪವೊಡ್ಡಿಪ್ರುದೇ ರತೀಶನೊಳ್ ॥ ೩೪

ಪಾ— 1. ರತಿಯಿಂ ನುತಿಯಿಂ ನತರಪ್ಪರೆಂದೊಡಾ | ಗ, ಡ ಪಡಿ.

ಎಂದು ದರ್ಪಕಂ ತನ್ನೊಳ್ ತಾನೆ ಗಜಱಿ ಗರ್ಜಿಸಿ ಮಧುದೂತಿಯೆನಿಪ್ಪ ದಿಗ್ಗಂತಿಯುಂ ಕರೆದು ವಸಂತಾದಿಚತುರಂಗಬಲಮುಂ ಬರಲ್ವೇಳ್ಕೆಂದು ಕಳಿಪುವ ಸಮಯಮೆ ವಸಂತಸಮಯಮಾಗೆ.

ಶಿಶಿರದ ತಪ್ಪುದಲೆಯುಂ ನವ ।
ವಸಂತಸಮಯಪ್ರವೇಶಮುಂ ತಮ್ಮೊಳ್ ಸಂ ।
ಧಿಸೆ ಬಣ್ಣಿಸಲರಿದಾದೊಡೆ ।
ಮೆಸೆವಾಋತುಸಂಧಿಯುಂ ವಿಭಾಗಿಸಿ ಪೇಳ್ವೆಂ ॥ ೩೫

ಅದೆಂತೆಂದೊಡೆ—

ಪೊಳೆವ ದಿಗ್ಗಂತಿಯುಣ್ಮೆ ಮಧುಮಾಸಮೊಡರ್ಚಿದುದನ್ಯಪುಷ್ಟನಿಂ ।
ಕಳರುತಿ ಹತ್ತಿಸಾರ್ದುದು ನವಾಮ್ರಕುಳಂಗಳೊಳಂಕುರಸ್ವಳಂ ॥
ತಳೆದುವು ತೆಂಬೆಲರ್ ಜನಿಯಿಸಿರ್ದುದು ಬಾಲ್ಯದೊಳತ್ತ ಮಾರನ ।
ಗ್ಗಳಸುವ ಮಾರ್ಗಣಂಗಳನೆ ಚಿಂತಿಸುತಿರ್ದನಿದೆಂತ ಕಾಲಮೋ ॥ ೩೬

ಆಸಮಯದೊಳ್

ನನೆಯುಂ ಪೆತ್ತುದು ಮಾಧವಿ ।
ಮೊನೆಸಿದುವಂಕುರಿಸೆ ತಾಣವಿಮ್ಮಾವುಗಳೊಳ್ ।
ಜೆನ್ನುಗಿದುವು ಕೊರಲೊಳಗೆ ಪಿಕ ।
ಕನವರತಂ ಬಿಲ್ಗೆ ಮಧನನನುವೊಸಿಸಿದಂ ॥ ೩೭

ಮುಗುಳೊತ್ತಿತ್ತ ದಿಗ್ಗಂತಿಯೆಂಕುರಿಸಿತಾಮ್ರಂ ಬಂದು ಮಂದಾನಿಳಂ
ಪುಗುತೊಂದೊಂದಡಿಯಿಟ್ಟನನ್ಯಭೃತನಂತೋರೊರ್ಮೆ ಕೂಗಿತ್ತು ಮೆ ।
ಲ್ಲಗೆ ಬಿಲ್ಲಂ ಗೊಲ್ಲೆಗೆತ್ತಿ ಹೂಡಿದನವೋಷೆಸ್ತ್ರಂಗಳಂ ದರ್ಪಕಂ ।
ದಿಗಿಲೆಂದಿತ್ತು ವಿಯೋಗಿವೃಂದಹೃದಯಂ ವಾಸಂತಿಕಾಮಾಸದೊಳ್ ॥ ೩೮

ಕಳಿದುದ್ದು ಮಾಗಿ ಕೂಗಿನುದು ಕೋಗಿಲೆ ಪಲ್ಲವಿಸಿತ್ತು ಮಾಮರಂ ।
ತಳಪ್ಪೆಳಗಾಯ್ತು ಪಾಂಥಜನಮೊಲ್ದವರೊಳ್ ನವಭೋಗದುಜ್ಜುಗಂ ॥
ಮೊಳೆತುವು ಕಾನನೇಸು ಗುಱಿಗೊಂಡುದು ತಂಡದೆ ನಿಂದ ನಂದನಂ ।
ತಳೆದುದು ಕೂತೆ ಕೆಂಪಿನ ಪಸುರ್ಪಿನ ಕರ್ಪಿನ ಬೆಳ್ಪನಂದಮುಂ ॥ ೩೯

ಆಸಮಯದೊಳ್,

ಜನಮನುರಾಗಮೇಱೆ ಲಲನಾಜನಮಂ ತೆಗೆದಪ್ಪೆ ಮಿಾಱೆ ಸ ।
ನ್ಮುನಿನಿಕರಂ ಜಪಂ ತಪಮನೋವದೆ ಬಿಟ್ಟತಿದೈನ್ಯದಿಂ ವಧೂ ॥
ಸ್ತನತಟವಕ್ಷರಾಗೆ ಮೃಗವೀಧಿ ಮೃಗೀಕುಲದತ್ತ ಸಾರ್ದು ಬೆ ।
ನ್ನನೆ ಮಿಗೆ ಪೋಗೆ ಪರ್ಬಿತ್ತಿಳೆಯಲ್ಲಿ ವಸಂತವಿಶಾಲಸಂಪದಂ ॥ ೪೦

ಆಗಳ್

ಮುದದಿಂದಂ ಮಧುದೂತಿಯುಂ ಮೊಗಮನಲರ್ಚುತ್ತುಂ ವಿರಾಜಿಪ್ಪ ಚೂ।
ತದ ಮೊಗ್ಗುಳ್ಪುಳಕಂಗಳಂ ನೆಗೆಪುತುಂ ಸಾರ್ದನ್ಯಪುಷ್ಟಕ್ಕೆ ಕಂ ॥
ಠದ ಕಾಕಂ ನೆಲೆವೆರ್ಚಿಸುತ್ತೆ ವನಮಂ ವೈವರ್ಣ್ಯಮಂ ಮಾಡುತು।
ರ್ವಿದಲಂಪಿಂದೆ ವಸಂತರಾಜನೊಸೆದೇೞ್ತಂದಂ ಜಗದ್ವಲ್ಲಭಂ ॥ ೪೧

ನಡುಗಿ ವಿಯೋಗಿಗಳ್ ಸಿಡಿದು ಜೀವನಮನ್ನೊಪ್ಪಿಸೆ ದರ್ಪಕಂಗೆ ಮುಂ ।
ತಡಿಯಿಡಲಾಱದೊತ್ತರಿಸೆ ಪಾಂಥಜನಂ ಕಳೆಗುಂದಿ ಕಂದಿ ಪಾ ॥
ವಡದ*ರ್ಪೊಲಾಗುತುಂ ಬೆದಱೆ ನಲ್ಲರ ಮೆಯ್ಸಿರಿ ನವ್ಯಭೋಗದೊಳ್ ।
ತೊಡ*ರ್ದಿರೆ ಬಂದನಿಂದುಕಳೆಯುಂ ದಳಮೇಱಿಸುತುಂ ವಸಂತಕಂ॥ ೪೨

ಇಂತು ವಸುಮತಿಯು ಪೆಂಪಿನ ಸಂಪದಮಂ ಸೊಂಪೇಱಿಸುತುಂ ನವ್ಯವನಂಗಳ್ಗೆ ನಳನಳಿಕೆಯನೀಯುತುಂ, ಚೂತದ ಮೊಗ್ಗುಳಂಕುರಮನಾಗಿಸಿ ಕೋಗಿಲೆಗಳ ಕೊರಲಂ ಕಳೆಯೇಱಿಸುತುಂ, ಅಶೋಕೆಯೊಳ್ ಪಲ್ಲವಮಂ ಪಡೆದು ಕಾಂತಾಜನದ ಕರ್ಣಪೂರ್ಣ್ಯಮಂ ಕನಲ್ವರಿಯಿಸುತುಂ, ಲತಾವಿಸರದೊಳ್ ಕುಸುಮಕುಲಮಂ ಪಸರಿಸಿ ಮಧುಕರಂಗಳ ಮನೋರಥಂಗಳಂ ಪಡೆಯುತುಂ, ತರುನಿಕರಕ್ಕೆ ನವೀನಫಲಮಂ ಕೊಟ್ಟು ಶುಕಂಗಳ ಜಿಹ್ವೆಯ ವಿಕಸನಮಂ ಮಾಡುತ್ತುಂ, ಪೂಗೊಳನಂ ತಿಳಿಯಿಟ್ಟು ನೀರ್ವಕ್ಕಿಗಳಂ ನೆಲೆವೆರ್ಚಿಸುತ್ತುಂ, ರವಿಕಿರಣಂಗಳಂ ಪುಟವಿಟ್ಟು ರಥಾಂಗನುಂ ನಲವೇಱಿಸುತ್ತುಂ, ನಳಿನಕುಳಮನಲರ್ಚಿ ಕಲಹಂಸಂಗಳಂ ತಣಿಪುತ್ತುಂ, ನದೀಜಳಮಂ ನಿರ್ಮಳಮಂ ಮಾಡಿ ಮೃಗಪಕ್ಷಿಕುಳಮಂ ಮಿಗೆ ತುಷ್ಟಿವಡಿಸುತ್ತುಂ, ಚಂದ್ರಕಳೆಯಂ ದಳಮೇಱಿಸಿ ಚಕೋರಮಾಲೆಗೆ ಸುಖಮಂ ಮಾಡುತ್ತುಂ, ಇಳೆಯೊಳ್ ಬೆಳ್ದಿಂಗಳಂ ಪಸರಿಸಿ ವಿರಹಿಗಳಂ ವಿರತರಂ ಮಾಡುತ್ತುಂ, ಕಾಮನ ಬಾಣಕ್ಕೆ ಕಂಪಂ ಕೊಟ್ಟು

ಕಾಮಿಗಳನಿರ್ಮೆಯ್ಯಾಗ್ಗಣಿಸುತ್ತುಂ, ಮಳಯಾನಿಳಂಗೆ ಶೈತ್ಯಸೌರಭ್ಯಮಾಂದ್ಯಮನಿತ್ತು ಸುಖಮಿಥುನದ ಸುರತಶ್ರಾಂತಿಯನಾಱಿಸುತ್ತುಂ, ಮುನಿಗಳ ಮನಮನನನ್ವಿತಂಮಾಡಿ ವನಿತಾಜನದ ವದನಮನಲರ್ಚುತ್ತುಂ, ಸಕಳಭುವನಕ್ಕೆ ರಾಗಾಂಧತೆಯನಿತ್ತು ಸತೀಜನಮನೇಪ್ರೋಱಿತ್ತುಂ ನೆರಪುತ್ತುಂ, ಇಂತು ತನ್ನ ಬರವಿನುರವಣೆಯನುರಾಗಕ್ಕೆ ಅನುರಾಗವೇಱಿ ಮನ್ಮಥರಾಜಂ ರತಿಯನಾಲಿಂಗಿಸಲನುಗೆಯ್ಯುತ್ತಿರೆ, ವಸಂತಂ ಸಂತಸದಿಂ ನಡೆತಂದೆಳಗೆಂಪಂ ಪಸರಿಸುವ ಕಿಸಲಯವಿಸರಮುಂ ಕಂಪಂ ಕವಲ್ಪರಿಯಿಸುವ ಕುಸುಮಮುಮಂ ಜರಿಯುಂ ಮಧುರರಸಮುಂ ತೆರೆಮಸಗಿಪ ನವ್ಯಫಳಂಗಳಂ ಮಕರಪತಾಕಂಗೆ ಕಾಣ್ಕೆಯಿಕ್ಕಿ ಮೆಯ್ಯಿಕ್ಕಿ ಕೆಯ್ಯಂ ಮುಗಿದು ನಿಂದು

ಇದೆ ಚತುರಂಗಬಲಂ ಬಂ ।
ದುದು ಮನ್ಮಥಭೂಪ ನೋಡು ಚಿತ್ತವಿಸೆನುತುಂ ॥
ಸದಮಳಮೋಹನಜನಕಾ ।
ಸ್ವದಸೇನೆಯನೊಲ್ದು ತೋಱುತಿರ್ದಂ ಚೈತ್ರಂ ॥ ೪೩

ಅದೆಂತೆಂದೊಡೆ—

ಮಿಳಿ ಲತೆ ಗುಡಿಮೋ ಪತ್ರಂ ।
ಫಳರಸಮೆ ಮದಾಂಬು ನೀಳ್ದ ಕೊಂಬೆ ಕರಂ ಪ್ರಾ ॥
ತೆಳಗೊಂಬುಗಳೇ ದಂತಂ ।
ಕಳಕಂಠನಿನಾದಮೆಸೆವ ಬೃಂಹಿತನಾದಂ ॥ ೪೪

ವಿಪುಳೋನ್ನತಪಲ್ಲವಮು ।
ಗ್ರಪಲ್ಲವಂ ಡಿಂಡಿಮಸ್ವನಂ ಮತ್ತಾಳೀ ॥
ಚಪಳಸ್ವನಮೆನೆ ಚೂತ ।
ದ್ವಿಪಘಟೆಯಂ ತೋಱಿದಂ ಸಮಂತು ವಸಂತಂ ॥ ೪೫

ವರಮುಖರಾಗದ ಮೊಗವಡ ।
ದುರುಕಾಂತಿಯ ವಾಘೆ ಚರಣದಂಕಣಿಗಳ್ ಭಾ ॥
ಸುರಪಕ್ಷದ ಪಜ್ಜೆಯ ಪ ।
ಕ್ಕರಿಯೆಸೆವ ಶುಕಾಶ್ವವೀಥಿಯಂ ಕಾಣಿಸಿದಂ ॥ ೪೬

ಎರಡುಂ ಪಕ್ಷಂ ಚಕ್ರಂ ।
ಪೊರೆದಾಲಿಂಗನವೆಯುಚ್ಚು ಚಂಚುಪುಟಂ ಪೊ ॥
ತ್ತರಿಸುವ ಮುಂಕಣಿಯಾ ।
ಗಿರೆ ನೆರೆದಿರ್ದ ರಥಾಂಗರಥಮನೊಪ್ಪಿರೆ ತಂದಂ ॥ ೪೭

ಇಂತು ವಸಂತಂ ಹಸ್ತ್ಯಶ್ವರಥಂಗಳಂ ತೋಱಿದೆ ಸಮನಂತರದೊಳ್ ಪದಾತಿಬಲಂ ಬರುತಿರ್ದುದದೆಂತೆಂದೊಡೆ—

ಪಾಡುವ ತುಂಬಿಯ ತಲೆಯು ।
ಲ್ಘಾಡುತ್ತಿರೆ ಬಂದಳವನು ಕೃಷ್ಣನ ಮನಮಂ ॥
ಷೋಡಶಸಹಸ್ರಭಾಗಂ ।
ಮಾಡಿದ ಮನ್ಮಥನ ಮೊನೆಯ ನಾಯಕಿಯೊರ್ವಳ್ ॥ ೪೮

ಅನವದ್ಯಕಳಾಕೋವಿದ ।
ನೆನಿಸಿಯುಮಾತ್ಮಜೆಯೊಳೊಲ್ದು ಬೆರಸಿದ ಚತುರಾ ॥
ಸ್ಯನ ರೂಪು ಕಾಲ ಪೊಸಪೂ ।
ವಿನ ಹಾಹೆಯೊಳೆಬಿಲೆ ಬಂದಳಂಗನೆಯೊರ್ವಳ್ ॥ ೪೯

ಭಾಸುರತರಸುಕುಮಾರೆ ವಿ ।
ಲಾಸವೆ ನಡೆತಂದಳಂದಪಲ್ಲೆಯ ಕತದಿಂ ॥
ಸಾಸಿರ ಕಣ್ಣಂ ಮಾಡಿದ ।
ವಾಸವವಿಜಯಧ್ವಜಪ್ರತಾಪದಿನೊರ್ವಳ್ ॥ ೫೦

ಮತ್ತಮದಲ್ಲದೆ

ನೆರೆದು ಪಟಿಂಚುವ ಕಾಲುಂ ।
ಗುರದ ರವಂ ಮುಂದೆ ಡಾಡೆವಱಿಯಂ ಪೋಲು ॥
ತ್ತಿರೆ ಕುಸುಮಾಸ್ತ್ರನ ಮದವ ।
ತ್ಕರಿಯಂತೆ ಕರೀಂದ್ರಯಾನೆ ಬಂದಳದೊರ್ವಳ್ ॥ ೫೧

ಮತ್ತಂ ವಸಂತಂ ಪದಾತಿಬಲಮಂ ತೋಱುತ್ತಿರ್ದನದೆಂತೆಂದೊಡೆ—

ಅದೆ ನನೆಯ ಕಠಾರಿಯ ಮರು ।
ಗದ ಪಱಿಗೆಯ ಶಾಮರಸದ ಘಂಟೆಯ ಮುಡಿವಾ ॥

ಳೆದ ಚಮರಿಯ ಕುಮುದದ ಕುಂ ।
ತೆದ ಕೇತಕಿಯೆಸಬಿ ಸುರಗಿಯುಬಳಾನೀಕಂ ॥ ೫೨
ತಳಿರ್ಗ*ಳ ಚಕ್ರದ ಕದಳೀ ।
ದಳಫಲಕದ ಸುರಗಿಯುರಲ ಕೌಕ್ಷೇಯದ ಪ ॥
ಟ್ಟಳಿಗಳ ಸಬಳದ ಬಂದುಗೆ ।
ಗಳ ತಿಸುಳದ ಮೊಲ್ಲೆಯಿಟ್ಟಿಗಳ ಕಾಮಿನಿಯರ್ ॥ ೫೩
ಸುರಹೊನ್ನೆಯ ಮುಗುಳ್ಗ*ಳ ತೋ ।
ಮರದ ಲತಾವಳಿಯ ಸೆಲ್ಲೆಹಂಗಳ ಪೊಸಪಾ ॥
ದರಿಗಳ ಬಲ್ಲೆಹದೆಸೆವಂ ।
ಕುರವೀಥಿಯ ವಜ್ರಮುಷ್ಟಿಯಂಗನೆಯರ್ಕಳ್ ॥ ೫೪
ದವನದ ಸೀಗುರಿಗಳ ಪೊ ।
ಣ್ಮಿನ ಪೊಂಬಾಳೆಗಳ ಚಾಮರಂಗಳ ಕಂಪೇ ॥
ಱುವ ಸಂಪಗೆಗಳ ಸತ್ತಿಗೆ ।
ಯ ವಿಚಕಿಲನಿಕಾಯಕೇತುದಂಡದ ಸತಿಯರ್ ॥ ೫೫
ತರತರದಿಂ ಕ್ಷೀರಾಬ್ಧಿಯ ।
ತರಂಗದಂತೆಸೆವ ಶಶಿಯ ಹಾಡಿಯಪೋಲ್ ಸುಂ ॥
ದರಿಯರ ಮೋಹರವಿಂತೊ ।
ತ್ತರಿಸೆ ನಿರೀಕ್ಷಿಸುತೆ ದರ್ಪಕಂ ಬೆಱಗಾದಂ ॥ ೫೬

ಇಂತು ಬೆಱಗಾಗುತ್ತುಮಿರೆಯಿರೆ ಮತ್ತಂ ಕಂದರ್ಪರಾಜನ ಮುಂದೆ
ನಳನಳಪಿಕ್ಷುದಂಡದ ಧನುವ್ರಜದಿಂ ಶತಪತ್ರಸೂತ್ರದಿಂ ।
ತೊಳಗುವ ನಾರಿಯಿಂ ತಳರ ಕೈಪ್ರೋಡೆಯಿಂ ಕುಸುಮಾಸ್ತ್ರಮಾಲೆಯಿಂ॥
ದಳವಡೆ ನಿಂದು ನೀಡಣಿಗೆ ನೀಡಡಿ ಸಾರ್ದಿರೆ ಸಾರ್ದು ಬೊಬ್ಬೆಗೊ ।
ಟ್ಟೆಳೆ ಬೆಱಗಾಗೆ ನಾರಿಯರ ಬಿಲ್ವಡೆ ತೋಱಿತು ಮಿಾಱಿ ಲೋಕಮಂ॥ ೫೭
ಅಂತುಮಲ್ಲದೆ
ತೊಳತೊಳಪಮೃತಮಯೂಖಂ ।
ಗಳನೊಸೆದೆಣ್ದೆಸೆಗೆ ಪಸರಿಸುತ್ತೆ ಚಕೋರಾ ॥

ವಳ ಬಳಸಿ ಸೆರೆದ ಕ್ಕೈರವ ।
ಕುಳದೊಳ್ ನಡೆತಂದನಮಮ ತಾರಾಧೀಶಂ ॥ ೫೮
ಕ್ರಮದಿಂದೆ ಶೈತ್ಯಸೌರ ।
ಭ್ಯಮಾಂದ್ಯಮೆಂದೆಂಬ ತನ್ನ ಗುಣದೊಳ್ಪು ರತೀ ॥
ರಮಣನನಲ್ಲಾಡಿಸಿ ಮಂ ।
ದಮಾರುತಂ ಮೋಹಿಸುತ್ತೆ ಮುಂದೆಯ್ತಂದಂ ॥ ೫೯

ಇಂತು ಸಹಕಾರಸಾಮಜಸಮಾಜಮುಂ ಕೀರಕದಂಬತುರಂಗಸಂಘಮುಂ ರಥಾಂಗರಥವ್ರಾತಮುಂ ಸುದತೀಸಮೂಹಪದಾತಿಕುಲಮುಂ ನಿರೀಕ್ಷಿಸುತ್ತುಂ ಪರಮಾನುರಾಗದಿಂ ಕಂತುರಾಜಂ ಸಂತಸಮನೆಯ್ದುವಾಗಳ್ ವಸಂತ ನಿರ್ದಿತ್ತಲವಧರಿಸೆಂದು ನವೀನವಚೋವಿಳಾಸೋನ್ಮತ್ತತೆಯಿಂದಿಂತೆಂದಂ—

ಕಿಸಲಯದ ಕುಸುಮವಿತತಿಯ ।
ಪೆಸರೇಕಾಸ್ಥಾಣುವಿನ ವಿನಿಶ್ಚಲಮನಮುಂ ॥
ಬೆಸುಗೆಗಳಿದೊಡೆದು ಮಾಡಲ್ ।
ಮಿಸುಪಂಕುರಪ್ಪೊಂದೆ ಸಾಲದೇ ಮದನನೃಪಾ ॥ ೬೦
ಎಸೆವ ನವಾಂಕುರರಸದಿಂ ।
ಮಸೆದೀಕೋಕಿಲನ ಕೊರಲ ಮಧುರಧ್ವನಿಯೊಂ ॥
ದೆ ಸಮರ್ಥಂ ಶೂಲಿಯ ತಪ ।
ದೆಸಕಮನುಡುಗಿಸುವೊಡುಚಿದ ಪರಿಕರಮೇಕೈ ॥ ೬೧
ಇಳೆಯೊಳ್ ಸರ್ವೇಶನ ನಿ।
ಶ್ಚಳತಪದುರವಣೆಯ ತೇಜಮುಂ ದೊರೆಗೆಡಿಸಲ್ ॥
ಕಳರವದಿಂ ಬಗ್ಗಿಸುವರ ।
ಗಿಳಿಗಳ ಚಪ್ಪರಣೆಯೊಂದೆ ಸಾಲದೆ ಮದನಾ ॥ ೬೨

ಇಂತಿವರ್ಕೆ ಸೆಡೆಯದೆ ಕಡುಪಿಂದಿಂದುಧರಂ ನಿಂದನಪ್ಪೊಡೆ

ಅರಗಿಳಿಗಳ ಪವಮಾನನ ।
ತರುಣೀನಿವಹದ ಫಳಪ್ರತಾನದ ಪುಷ್ಪೋ ॥
ತ್ಕರದನುಪಮಶಬ್ದಸ್ಪ ।
ರ್ಶರೂಪರಸಗಂಧದಿಂದೆ ಶಿವನಂ ಗೆಲ್ವಂ ॥ ೬೩

ಅಂತು ಸಕಲಜಗಜ್ಜನಮನೋನುರಾಗಜನನಕಾರಣಕರ್ತೃವಪ್ಪ ವಸಂತಂ ಭಾಷೆಗೊಟ್ಟ ಸಮನಂತರದಲ್ಲಿ

ಭರದಿಂದೆ ಬಂದು ನುಡಿಗಂ ।
ವರಹಿಮಕರನೆಸೆವ ಚಂದ್ರಕಾಂತದ ಕಲ್ಲಂ ॥
ಕರಗಿಸುವೆನ್ನ ಸುಧಾಮಯ ।
ಕರಂಗಳಿಂ ಹರನ ಚಿತ್ತಮಂ ಕರಗಿಸುವೆಂ ॥ ೬೪

ಆ ಸಮಯದೊಳುರವಣಿಸಿ ನಡೆತಂದು ಮುಂದೆ ನಿಂದ ಚಂದ್ರಮುಖಿಯರೊಳೊರ್ವಳ್

ತ್ರಿಣಯನ ತಪಮಂ ಕಿಡಿಸಲ್ ।
ಕ್ಷಣವೇಧಿಗಳೆನಿಸುವೆನ್ನ ತರಳಕಟಾಕ್ಷಂ ॥
ಕ್ಷಣಯುಗಮಿರ್ದಂತೀಹೂ ।
ಗಣೆಗಳ ಪರ್ಯಂತವೇಕೆ ಮಕರಪತಾಕಾ ॥ ೬೫

ಮತ್ತಮೊರ್ವಳ್

ಮಾರನೃಪ ನಿಜಧನುಷ್ಟಂ ।
ಕಾರಮನಾರಾಂಪರಂತದಿಕ್ಕೆನ್ನಯ ನಂ ॥
ಜೀರದ ಮಧುರಧ್ವನಿಯಿಂ ।
ಘೋರತಪೋಮಯನನಭವನಂ ಪರಿಭವಿಪೆಂ ॥ ೬೬

ಎಂದು ಮಿಾಱಿ ನುಡಿವ ನೀಱೆಯರ ನಡುವಣ ಭಾಮಿನಿಯೊರ್ವಳ್ ಭಾಷೆಗುಡುತ್ತುಮಿರ್ದಳದೆಂತೆಂದೊಡೆ—

ಮದನನೃಪಾಲ ಕೇಳ್ ಭುವನತ್ರಯಮಂ ಕ್ಷಣದಿಂದೆ ಗೆಲ್ದು ಪಿಂ।
ಗದ ಘನಕೀರ್ತಿಯಿಂ ತೊಳಗುವಿಕ್ಷುವ ಚಾಪದ ಪುಷ್ಪಬಾಣದ ॥
ಗ್ಗದ ನುಡಿಯಿಲ್ಲಿಗೇಕೆ ಮಿಸುಪೆನ್ನಯ ಪುರ್ವಿನ ಕರ್ಪುವಿಲ್ಲ ನೋ ।
ಟದ ನನೆಗೋಲ ಲೀಲೆಯೊಳೆ ಸೋಲಿಸುವೆಂ ಜಿತಕಾಲಶೂಲಿಯಂ ॥ ೬೭

ಎಂದಿಂತು ಸಂದಣಿಸಿ ಭಾಷೆಗೊಟ್ಟ ವಸಂತಾದಿಸಂಮೋಹನಬಲಮುಖ್ಯರ ಸುಧಾರಸಪೂರಿತಚಾರುವಚನರಚನೆಗಳಂ ಕೇಳ್ದು ಕುಸುಮಾಯುಧಂ ವಿಶಸನವಿಜಯಿಗಳಪ್ಪ ನಿಜಭುಜದಂಡಯುಗಳಮಂ ನೋಡಿ ಮದೋನ್ಮತ್ತ ವೀರಾಳಾಪಮುಖರಮುಖನಾಗಿ,

ಇನ್ನಿರ್ಪ ನಿರ್ಪನಛವಂ ।
ಸನ್ನುತತಪದಿಂದಮಿರದೆ ಮೂಣ್ಬಂ ಕಾಣ್ಬಂ ॥
ತನ್ನಗ್ಗದ ವೈರಾಗ್ಯದ ।
ಬಿನ್ನಣಮುಮನೆನ್ನ ಪಂಚಬಾಣದ ಬಲ್ಪಂ ॥ ೬೮

ಗಣಿದಮದೇವ್ರದಿಕ್ಷುಧನುವ್ರಂ ಕುಸುಮಾಸ್ತ್ರಮುಮೆನ್ನ ಕೆಯ್ಗೆ ಸಂ।
ದಣಿಸೆ ಬಱಿಕ್ಕಮೆತ್ತಣ ತಪೋಮಯರೆತ್ತಣ ಶಾಂತಿಭೂಷರೆ ॥
ತ್ತಣ ಜಿತಕಾಮರೆತ್ತಣ ದಿಗಂಬರರೆತ್ತಣ ಕರ್ಮನಿಷ್ಠರೆ ।
ತ್ತಣ ಬುಧರೆತ್ತಣಾತ್ಮವಿದರೆತ್ತಣ ನಿಸ್ಪೃಹರೆತ್ತಣುತ್ತಮರ್ ॥ ೬೯

ಅಂತುಮಲ್ಲದೆ

ಪರಿಮಳಮನೆಣ್ದೆಸೆಗೆ ಬಿ ।
ತ್ತರಿಸುವ ನನೆಗಣೆಗಳಿಂದೆ ಗಿರಿಪತಿತನುಮಾ ॥
ವಿರಹಾತಪವೊಗೆಯಲ್ ಶಂ ।
ಕರನ ತಪಶ್ಛತ್ರದಂಡನಂ ಖಂಡಿಸುವೆಂ ॥ ೭೦

ಅತಿಭೀಮರ್ ಜಿತಕಾಮರ್।
ನುತನಾಮರ್ ಮದನನಿದಿರೊಳಿಲ್ಲೆನೆ ಹೋಹೋ ॥
ಸತಿ ಕಾಮಿತಮುನದಿಂ ಪಾ ।
ರ್ವತಿ ಬಳೆವನ್ನವರಮಿರ್ಪ ತಪಮೊಡ್ಡಿಪುದೇ ॥ ೭೧

ಅಂತುಮಲ್ಲದೆ

ಸೊಂಪಿಂ ಮಾದಿಂ ಮೋಹನ ।
ದಿಂಪಿಂ ಸಂತಾಪದಿಂ ವಶೀಕರಣೋದ್ಯ ॥
ತ್ಸಂಪದದಿಂದಂ ನೆರೆ ತೋ।
ರ್ಪೆಂ ಪಂಚಮುಖಂಗೆ ಪಂಚಬಾಣದ ಸವಿಯಂ ॥ ೭೨

ಎಂದಿಂತು ನಿಜಭುಜಪ್ರತಾಪಾಲಂಕೃತವೀರಾಳಾಪಮಂ ಮಾರನೃಪಂ ನುಡಿಯುತ್ತುಂ ನಳಿನಗುಣವಿರಚಿತನವ್ಯದುಕೂಲವುಂ ತೆಗೆದು ಬಿಗಿದುಟ್ಟು ದಿವ್ಯಚಂದನಮನುದ್ವರ್ತನಂಗೆಯ್ದು ಪರಾಗದ ತಿಲಕಮನಿಕ್ಕಿ ಕೇತಕೀದಳದ ಕೂರಲಗಂ ಕಿಗ್ಗಟ್ಟಿನೊಳಳವಡಿಸಿ ವಸಂತಂ ಪೊಸಮಲ್ಲಿಗೆಯ ನುಣ್ಣನಪ್ಪ ಸಣ್ಣ ನನೆಯ ವೀರಸೇಸೇಯುಂ ಸೂಸೆ, ವನಲಕ್ಷ್ಮಿ ಪಳಕಿನ ಹರಿ

ವಾಣದೊಳ್ ಬಂದುಗೆಯ ಕುಸುಮದ ವಿಜಯಾರತಿಯನೆತ್ತೆ, ಮಜ್ಜಯ್ಯ! ಘೂತುರೆ! ಎಂದು ಸರಸಿಜಾಕ್ಷಂ ಪರಸೆ, ಲಕ್ಷ್ಮೀದೇವಿಯರ್ ಮೊದಲಾದ ಲಲನಾಜನಂ "ವೀರವಿಭ್ರಮ ವಿಜಯೀಭವ" ಎಂದು ಗೆಲ್ವನೀಯೆ, ಚತುರಾಸ್ಯನುಮಿಂದ್ರಾದಿದಿಗ್ವರರುಂ ಮುಂದೆ ಉರಾವುರೇ ಎಂದು ಮೆಯ್ಯಾಂತು ಕೈವಾರಿಸೆ, ಕಳವಳಿ ಕೆಯ್ಗುಡೆ, ಗರ್ವಪರ್ವತಮನೇಱುವಂತೆ ಮುಂದೆ ನಿಂದ ಮಾಕಂದಮತ್ತಮಾತಂಗಮಂ ಭೋಂಕನೇಱಿ ಪಶ್ಚಿಮಾಸನದೊಳ್ ರತೀದೇವಿಯನಿರಿಸಿ ಹೊಳೆಹೊಳೆವ ಚಂದ್ರಮನ ಬೆಳ್ಗೊಡೆ ಮೇಲಲರೆ, ಗಂಧವಹಂ ಸುಗಂಧದ ಸೀಗುರಿಚಾಮರವನಿಕ್ಕೆ, ಕಬ್ಬಿನ ಬಿಲ್ಲನರಲ ಸರಲುಮಂ ರೋಹಿಣಿದೇವಿ ಪಿಡಿದಿರೆ, ಕೆಲಬಲದೊಳ್ ಶುಕಾವಳೀತುರಂಗಸಂಘಂ ಸಂದಣಿಸೆ, ರಥಾಂಗಘನರಥಂ ಮೋಳ್ಕೈಸೆ, ಚೂತಗಜಂ ವೀಥಿಗೊಳೆ, ಮುಂದೆ ಸುದತೀಕುಲಪದಾತಿಬಲಂ ಮುಂದ್ಕೈಸೆ, ನೆಗಪಿದ ಮಕರಧ್ವಜಂ ಗಗನಮಂ ಚುಂಬಿಸೆ, ದರ್ಪಂ ಕೈಮಿಕ್ಕು ದರ್ಪಕಭೂಭುಜಂ ಶೂರ್ಪಕಮರ್ದನಂ ಶಂಬರಸೂದನಂ ನತಜಿತೇಂದ್ರಿಯವಿತಾನಂ ಮುನಿಜನಮನೋಹಾರಿ ಯತಿವ್ರಜವಾರಣಪಂಚಾನನಂ ಕಾಂತಾಜನಚಕ್ರವರ್ತಿ ಅಪ್ರತಿಹತವಿಕ್ರಮಂ ಕಾಮದೇವಂ ಹೇಮಕೂಟಾಭಿಮುಖನಾಗಿ ನಡೆತಪ್ಪಾಗಳ್

ಪರಮಸ್ವಾಮಿ ಜಟಾಧರಂ ಶಶಿಧರಂ ಗಂಗಾಧರಂ ಕಾಲಸಂ।
ಹರನಜ್ಞಾನಹರಂ ಪುರತ್ರಯಹರಂ ಸೌಖ್ಯಾಕರಂ ಶಂಭು ಶಂ॥
ಕರನಾನಂದಕರಂ ಸಮಂತೆನಗೆ ಭಕ್ತಿಜ್ಞಾನವೈರಾಗ್ಯಮಂ।
ಕರುಣಂಗೆಯ್ಗೊಲವಿಂದೆ ಹಂಪೆಯ ವಿರೂಪಾಕ್ಷಂ ಶಿವಾವಲ್ಲಭಂ॥ ೭೩

॥ ಗದ್ಯ ॥

ಇದು ಸಮಸ್ತಸುರಾಸುರನಿಕರಮಕುಟಖಚಿತದಿನಕರಕರಾಧಿಕ್ಯಮಾಣಿಕ್ಯ
ಪ್ರಭಾಪುಂಜರಂಜಿತ ಪಂಪಾವಿರೂಪಾಕ್ಷ ಶ್ರೀಪಾದಕಮಲ
ಮತ್ತಮಧುಕರಾಯಮಾಣ ಸತ್ಕವೀಶ್ವರ
ಹಂಪೆಯ ಹರಿಹರದೇವ ವಿರಚಿತಮಪ್ಪ
ಶ್ರೀ ಗಿರಿಜಾಕಲ್ಯಾಣ ಮಹಾಪ್ರಬಂಧದೊಳ್
ವಸಂತೋದಯ ಮದನಪ್ರಯಾಣ ಪ್ರಾರಂಭವರ್ಣ್ಣನಂ
ಸಪ್ತಮಾಶ್ವಾಸಂ

॥ ಅಷ್ಟಮಾಶ್ವಾಸಂ ॥

— ಕಾಮದಹನ ವರ್ಣನಂ —

ಗರಳಧರನುರಗಭೂಷಂ ।
ಸರಸಿಜಭವಮಸ್ತಕಪ್ರಯುಕ್ತಕರಂ ಭೀ ॥
ಕರಭಾಳಲೋಚನಂ ಭ ।
ಕ್ತರಸಮನೆಸಗೀಗೆ ಹಂಪೆಯ ವಿರೂಪಾಕ್ಷಂ ॥ ೧

ಕೀರತುರಂಗಸಂಘಮುಮೀಧರೆ ಪುಷ್ಪಜಯಾಸ್ತ್ರಶಸ್ತ್ರವಿ ।
ಸ್ತಾರಸುಗಂಧವೃಂದಮುಮೀಕಕುಭಂ ಮಕರಂದಸಾಂದ್ರವಿ ॥
ಸ್ತಾರರಜೋನಿಕಾಯಮುಮೀನಭಮೊಂದಿನೆ ಕೌತುಕಪ್ರದಂ ।
ಮಾರನೃಪಾಲಸೇನೆ ನಡೆದತ್ತು ಜಿತೇಂದ್ರಿಯಚಿತ್ತಶೋಷಣಂ ॥ ೨

ಇಂತು ನೆರೆದು ನಡೆವ ಕುಸುಮಕೋದಂಡನ ಕಮನೀಯಬಲದ ಮುಂದೆ

ಘಳಿಲನೆ ಕಂಪನದಿಂ ಮುನಿ ।
ಗಳ ಕರತಳದಕ್ಷಮಾಲೆ ಬೀೞುತ್ತಿರೆ ಕೋ ॥
ಕಿಳ್ಕುಳನಿಸ್ವಳಧಳ್ಳಂ ।
ಧಳಂ ಧಳೆಂ ಧಳನಿನಾದಮುಣ್ಮಿತ್ತಾಗಳ್ ॥ ೩

ಅನಂತರದಲ್ಲಿ

ಮುನಿಚಿತ್ತಾಕರ್ಷಣೀಬಂಧನೆ ಋಷಿವಿಮಳಾಚಾರಸಂಹಾರಣೀಬಂ ।
ಧನೆ ಧರ್ಮಜ್ಞಾರಿಯೀಬಂಧನೆ ಜಿತವಿಷಯವ್ರಾತವಿಧ್ವಂಸನೀಬಂ ॥
ಧನೆ ಶಾಂತಾರಾತಿಯೀಬಂಧನೆ ಯತಿಪರನೀಬಂಧನೀಬಂ ।
ಧನೆಯೆಂದಲ್ಲಲ್ಲಿ ಭೃಂಗೀಬಹುವಿಧಕಹಳಾನಾದಮುಣ್ಮಿತ್ತದೆತ್ತಂ ॥ ೪

ತೊಲಗೆಲೆ ಸಹಸ್ರಲೋಚನ ।
ತೊಲೆಗೆಲೆ ವಾಣೀಶ ತೊಲಗೆಲೇ ಪಾವಕ ನೀಂ ॥
ತೊಲಗು ಬೃಹಸ್ಪತಿ ಕೃಷ್ಣನೆ ।
ತೊಲಗೆನುತುಣ್ಮಿದುವು ಬಹಳಕಹಳಾನಾದಂ ॥ ೫

ಇಂತು ಬಿರುದೆತ್ತಿ ಕರೆವ ಬಹಳಕಹಳಾನಾದದ ನಡುವೆ
ನಡೆದುದು ಸೈನ್ಯವೊಲ್ಲವರನನ್ಯವಗಲ್ದರ ಜೀವಶೂನ್ಯವಾ ।
ರ್ದಡಸಿತು ಕೂಡೆ ಕಾಮಿನಿಯರಾಡೆ ಜಿತೇಂದ್ರಿಯರೋಡೆ ನೋಡೆ ಬಿ ।
ಲ್ವಿಡಿದ ರತೀಶನಪ್ರತಿಮವೇಶನನೂನವರಪ್ರಕಾಶನು ॥
ಕುರ್ಡುಗೆ ವಿಯೋಗಿಗಳ್ ವಿಗತಭೋಗಿಗಳುದ್ಯನಿರೋಧಯೋಗಿಗಳ್ ॥ ೬

ಮುನಿಗಳ ಧೈರ್ಯಭೂಮಿ ರಜಮಪ್ಪಿನೆಗಂ ಮನುಕೇತನಾದ್ರಿ ಭೋಂ।
ಕನೆ ಪುಡಿಯಪ್ಪಿನಂ ಯತಿಚರಿತ್ರತರಂಗಿಣಿ ಪಂಕಮಪ್ಪಿನಂ ॥
ಘನವಿಮಳವ್ರತೀಂದ್ರರ ತಪೋವಿಪಿನಂ ಬಯಲಪ್ಪಿನಂ ರತೀ ।
ಶನ ಚತುರಂಗಸೇನೆ ನಡೆದತ್ತು ಧರಿತ್ರಿಗೆ ಚಿತ್ರಮಪ್ಪಿನಂ ॥ ೭

ಕೊರಗಿದರಾಯತಿಪತಿಗಳ್ ।
ಹರಣಂಗಳೆದರ್ ವಿಯೋಗಿಗಳ್ ಮನುಮುನಿಗಳ್ ॥
ಶರಣೆಂದರ್ ಜಿತಕಾಮರ್ ।
ಮರುಳಾದರ್ ಪುಷ್ಪಶರನ ಪಡೆ ನಡೆವಾಗಳ್ ॥ ೮

ಇಂತು ಸಕಳಭುವನಮಂ ಭಂಗಿಸುವ ಚತುರಂಗಸೇನೆಯು ನಡುವೆ ಕಡುಪಿಂ ನಡೆತಂದು ಭೂಮಿಗೆ ಮೆಱೆವ ಸೋಮಧರನಿರ್ಪ ಹೇಮಕೂಟ ಪ್ರಾಂತದೊಳ್ ನಿಂದು ನಗಾಗ್ರಮಂ ನೋಡಿ ಕಡುಮುಳಿದು ಕಾಮಭೂಪಂ ಉನ್ನತಮಪ್ಪ ತನ್ನ ಸೇನೆಗೆ ಕೈವೀಸಿದ ಸಮಯದೊಳ್, ಗಿಳಿಗಳ್ ಚಪ್ಪರಿಸೆ ತುಂಬಿಗಳ್ ಮೊರೆಯೆ ಕೋಗಿಲೆಗಳ್ ಕರೆಯೆ ಮಂದಾನಿಳಂ ಮೇಲ್ವರಿಯೆ ಚಂದ್ರಂ ಬೆಳ್ದಿಂಗಳಂ ಬೀಱೆ ಚಕೋರಿಗಳ್ ನಲಿದುಲಿಯೆ ಕುಸುಮಕುಲಂ ಕಂಪನೊತ್ತರಿಸೆ ಸಹಕಾರಂ ಸಂದಣಿಸೆ, ಕಾಮಿನಿಯರ್ ಜಡಿಯೆ ರಥಾಂಗಂ ಸಂದಣಿಸಿ ನೂಂಕೆ ಮಕರಧ್ವಜಂ ಗಗನದೊಳ್ ಕುಣಿಯೆ ಮತ್ಸ್ಯಪತಾಕೆಯುಚ್ಚರಿಯೊಳಾಡೆ ಮಾಕಂದಗಜಘೂತ್ಕಾರಂ ರಥಾಂಗರಥ ಚೀತ್ಕಾರಂ ಶಿಳೀಮುಖದ ಝುಂಕಾರಂ ಹಂಸಕುಲಕ್ರೇಂಕಾರಂ ಝುಷಕೇತನ ಪಟತ್ಕಾರಂ ತರುಣೀಚರಣಮುದ್ರಿಕಾಟಣತ್ಕಾರಂ ತತ್ಕಟಕಮಂಜೀರಝಣತ್ಕಾರಂ ಕಳಕಂಠವೀಥೀಥಿಕ್ಕಾರಂ ಬೆರಸಿ ಬಳೆದಾಗಸಮಂ ಮುಸುಂಕೆ, ಸರ್ವಬಲವೊರ್ಬುಳಿಸಿ ಬೊಬ್ಬಿಟ್ಟಬ್ಬರಿಸಿ ಪರ್ಬಿ ಪರೆದು ಶರ್ವನ ಸಮಾಧಿಸರ್ವತಮನೊತ್ತರಿಸಿ ಪತ್ತಿ ಬಿಡದೆ ಸುತ್ತಿ ಮುತ್ತುತ್ತಿರೆ; ಮುಂದಣ

ಕಾಪಿನ ನಂದೀಶ್ವರಂ ಮೋಹನಬಲದ ಸುಧಾರಸನಯಸನಾದಮಂ ಘೋಂ
ಕನೆ ಕೇಳ್ದಂತಂತೆ ಕಂಪಿಸಿ ಕರಣಾ ಕಲಂಕಿ ಕಿಂಚಿತ್ಸಂಚಲಮನನಾಗಿ ಚೆ
ಲ್ಲಿವ ಚಿತ್ತಮಂ ಮೆಲ್ಲಮೆಲ್ಲನೆ ಸಂತೈಸಿಕೊಂಡು ಶಿವಜ್ಞಾನದಿಂದೆಚ್ಚಿತ್ತು ಕ
ಣ್ದೆಱೆದು ಮುಂದಿರ್ದ ಬಲಮಂ ಕಂಡು

ಹರನ ಸಮಾಧಿಗಿಂತಿದನುಕೂಲತೆಯಲ್ಲ ವಿರೋಧವೃತ್ತಿಯಂ ।
ನೆರಪ್ಪವರಾರಿದಾರ ಬಲಮಾರ ಮದೋನ್ನತಿಯಾರ ಲೋಕಭೀ ॥
ಕರರವಮಾರ ಸಂಭ್ರಮವಿದಾರ ಮರುಳ್ತನಮೆಂದು ನಂದಿಕೇ ॥
ಶ್ವರನತಿಕೋಪದಿಂ ಮದನಸೇನೆಯನೀಕ್ಷಿಸಿದಾಕ್ಷಣಾರ್ಧದೊಳ್ ॥ ೯

ಅಳಿ ಮಲ್ಲಳಿಗೊಂಡುವು ಕೋ ।
ಕಿಳನಿಕರಂ ವ್ಯಾಕುಳಂಗಳಾದುವು ಚಂದ್ರಂ ॥
ಕಳೆಗುಂದಿ ಕಂದಿದಂ ಕೋ ।
ಮಳೆಯರ್ ವಿಹ್ವಳವಿಧಾನಮಾನಸರಾದರ್ ॥ ೧೦

ಮತ್ತಮದಲ್ಲದೆ,

ಕೀರತುರಂಗಮೋಡಿದುವು ಚೂತಗಜಾವಳಿ ಘೀಳಿಡುತ್ತೆ ಕಾಂ ।
ತಾರದೊಳೆಯ್ದೆ ಬಿಬ್ಬಿದುವು ಸಮೀರನಡಂಗಿದನಾವಸಂತಕಂ ॥
ಘೋರವನಂಗಳೊಳ್ ಪುಗುತೆ ಮೆಯ್ಗರೆದಂ ಕಳಹಂಸಮಾಲೆ ಕಾ ।
ಸಾರದೊಳಂಜಿ ಪೊಕ್ಕುವು ರಥಾಂಗರಥಂ ನಡೆಗೆಟ್ಟುವದ್ಭುತಂ ॥ ೧೧

ಇಂತು ಕಂತುರಾಜನ ಚತುರಂಗಬಲಂ ದಿನಸೇಂದ್ರನ ಮುಂದಣ
ತಮಃಪಟಲದಂತೆ ನಂದೀಶ್ವರನ ಕೋಪದ ಕಡುಗಾಯ್ಪಿಂಬೊತನೊಡನೆ
ಮಾಯುವಾಗೆ,

ನುಡಿದಂ ಮದನಂ ತನ್ನೊಳ್ ।
ಬೆಡಂಗಿದೇನೀಗಣೇಶನೀತೆಬಿನಿನ್ನಾ ॥
ಮೃಡನಂ ನಡೆವಿಸುವೊಡೆ ಸಂ ।
ಗಡಮಾರಾರಳವದಾರಶಕ್ಯಮಶಕ್ಯಂ ॥ ೧೨

ಇಂತೆನುತುಂ ಕಂತುರಾಜಂ ಸಂತಾಪದಿಂ ಚಿಂತಿಸುತ್ತಿರ್ಪನಿತ್ತಲ್

ಬರುತಿರ್ದಳ್ ಮುಂದೆ ಕಾಂತಿಪ್ರದೆ ಸದಮಳೆ ಸತ್ಪುಷ್ಪಕಾರೂಢೆ ಸತ್ಯಾ।
ಕರೆ ನಿತ್ಯಾನಂದೆ ಚಂದ್ರಾಭರಣನ ಸುಖಸಂಪತ್ತಿ ರುದ್ರಾರ್ಧ್ಯನಾವಿ ॥

ಸ್ತ್ರೆ ವಿಶ್ವಾರಾಧ್ಯೆ ಕಾರುಣ್ಯದ ನೆಲೆವನೆ ಶರ್ವಾಣಿ ಗೀರ್ವಾಣನುತೆ ।
ವರರತ್ನವ್ರಾತಸಂಘಟ್ಟಿತಪದೆ ನಗಸಂಭೂತೆ ಸಂಪ್ರೀತಿಯಿಂದಂ ॥ ೧೩
ಬರೆ ಕಣ್ಬಂದಂತುಸಿರ್ಬಂದಪೊಲತಿಮುದಮಂ ತಾಳ್ದು ಬಾಳ್ದಿರ್ದುದೆಲೆ ಶೋಭಾ।
ಕರನಷ್ಟಾಂಗಪ್ರಣಾಮಂಬೆರಸು ಗಿರಿಜೆ ಗೌರೀ ಜಗನ್ಮಾತೆ ಸರ್ವೇ॥
ಶ್ವರಿ ದಿವ್ಯಜ್ಞಾನಿ ನಾನಾಗಮವಿದೆ ಸದಲಂಕಾರೆ ಸಾರಾಂಗಿ ವಿಶ್ವೇ।
ದರೆಯೆನ್ನಂ ರಕ್ಷಿಸೆಂದೀಕ್ಷಿಸಿ ಮಿಗೆ ಪೊಗಳ್ದಿಂ* ಬಾಷ್ಪದೃಕ್ಪುಷ್ಪಚಾಪಂ॥

ಅಂತು ದರ್ಪಕಂ ಶೂರ್ಪಕಮರ್ದನನಾಪ್ರಾಗುಂಪಿ ಕಾರ್ಪಣ್ಯದಿಂ ನಗತನೂಜೆಯಂ ಪೊಗಳ್ದು ಮತ್ತಮಿಂತೆಂದಂ:—

ಗಿರಿಶನ ತಪಮಂ ಕೆಡಿಸಲ್ ।
ಮುರರಿಪು ಕಳಪಿದೊಡೆ ಬಂದು ಹೇಮಾಚಳಮಂ ॥
ಭರದಿಂದೆ ಮುತ್ತೆ ನಂದೀ ।
ಶ್ವರನಿಂದಂ ಸಕಳಸೇನೆಯಳಿದಾನುಳಿದೆಂ ॥ ೧೪

ತಾಯೇ ತವರೇ ಕೇಳ್ ।
ನ್ಯಾಯಮೆಯೆನ್ನುಸುವ ಕಾವುದೆಂದೊಱಲುತ್ತುಂ ॥
ಬಾಯಳಿವ ಮದನನಂ ಕಾ ।
ತ್ಯಾಯನಿ ದಯೆಯಿಂದೆ ನೋಡಿ ನಯದಿಂ ನುಡಿದಳ್ ॥ ೧೫

ಅಱಿದೆಂ ನಿನ್ನಯ ಬರವಂ ।
ಕಱೆಗೊರಲನ ತೀವ್ರತಪಮನೆಬ್ಬಿಸುವ ಪ್ರದಿ ॥
ತೆಱದಿಂದೆನ್ನಿಷ್ಟಮದೆ ।
ನ್ನೆಱಕೆಯದೆನ್ನಿಚ್ಛೆ ಯೆನ್ನ ಲಾಭಂ ಲೋಭಂ ॥ ೧೬

ನಾನಾವಿಧದಿಂ ರುದ್ರನ ।
ನೂನತಪೋಭರದ ಬೆಸುಗೆಯಂ ಬಿಡಿಸೊಲವಿಂ ॥
ಶ್ರೀನಂದನ ನೀನಂಜದಿ ।
ರಾನಿರ್ದಪೆನಾನೆ ರಕ್ಷೆಯಾಗಿ ಸಹಾಯಂ ॥ ೧೭

ಎಂದಗಜೆ ಬೆಸಸೆ ಕಾಮಂ ।
ಪಿಂದಣ ಪರಿಭವಮನುಡುಗಿ ಕಳೆದತಿಮುದಮಂ ॥
ಸಂದಣಿಸುತೊಡನೊಡನೆ ನಡೆ ।
ತಂದಂ ಪುಷ್ಪಕದ ನೆಱಲ ಕರ್ಪಿನ ಮಱೆಯೊಳ್ ॥ ೧೮

ಆಸನಮಯದೊಳ್

ಮುಗಿದ ಮನಂ ಮುಗಿದ ಕರಂ ।
ಮುಗಿದಕ್ಷಿಗಳಲರ್ದ ಪುಳಕಮಲರ್ದಾನಂದಾ ॥
ಶ್ರುಗಳಲರ್ದ ಭಕ್ತಿ ತನ್ನೊಳ್ ।
ಸೊಗಯಿಸೆ ನಂದೀಶನಿರ್ದನುತ್ತಮಭಕ್ತಂ ॥ ೨೦

ಅಂತಿರ್ದ ನಂದೀಶನಂ ಚಂದ್ರಾನನೆ ಕೃಪೆಯಿಂದಂ ನೋಡುತ್ತುಂ ಶಿವಾರ್ಚನಾತತ್ಪರೆ ಪುಷ್ಪಾಪಚಯಕ್ಕೆ ಬಿಜಯಂಗೆಯ್ದಳ್. ಇತ್ತಲ್ ಪುಷ್ಪಚಾಪಂ ನಂದೀಶ್ವರನ ಕಾಪಿನ ಸೀಮೆಯಂ ಕಳೆದು

ಬಂದು ಮತಂಗಪರ್ವತಮನೇಱಿ ಮಹೇಶನ ವಾಮಭಾಗದೊಳ್ ।
ನಿಂದು ವಿರಾಜಿಸಿರ್ಪ ರತಿಯಂ ಕೆಲದೊಳ್ ನಿಲವೇಱ್ದು ಶೌರ್ಯವೀ ॥
ರ್ಯಂ ದಳವೇಱಿ ಮಿಱಿ ನಭದೊಳ್ ಸುರಸಂತತಿ ನೋಡೆ ಬಾಪ್ಪುಬಾ ।
ಪೆಂದೆನೆ ಮುಂದೆ ಪುಷ್ಪಶರನೀಕ್ಷಿಸಿದಂ ನಿಟಿಲಾಕ್ಷಲಕ್ಷ್ಯಮಂ ॥ ೨೧

ಅಂತು ನೋಡಿ

ಅತುಳಬಳನಪ್ರತಿಮನೂ ।
ರ್ಜಿತಶೌರ್ಯಂ ಕರ್ಪುವಿಲ್ಲನೆಡಗೆಯ್ಯೊಳ್ ಮಂ ॥
ಡಿತಮೆನೆ ಪಿಡಿದಾಹಾ ರತಿ ।
ಪತಿ ನಾರಿಯನೋವಿ ನೀವಿ ಜೇವ್ರೊಡೆವಾಗಳ್ ॥ ೨೨

ವ್ರತಿಗಳ್ ಮನುಗಳ್ ಮುನಿಗಳ್ ।
ಯತಿಗಳ್ ಸೆಡದಳ್ಕಿ ಬಳ್ಕಿ ಸುಗಿದುಗಿದು ಕರಂ ॥
ಮತಿಗೆಟ್ಟರ್ ಧೃತಿಗೆಟ್ಟರ್ ।
ಗತಿಗೆಟ್ಟರ್ ಬುದ್ಧಿಗೆಟ್ಟರುನ್ನತಿಗೆಟ್ಟರ್ ॥ ೨೩

ಅಂತಿಕ್ಷುಧನುಷ್ಟಂಕಾರರವದಿಂದಧಿಗತಪರಮಾರ್ಥರೆನಿಪ ಜಿತೇಂದ್ರಿಯರ್ ವಿಕಾರಚಿತ್ತರಾಗುತ್ತು ಮಿರಲ್ ಕುಸುಮಾಯುಧಂ ವಿಷಮಾಕ್ಷನನಿಸಲೆಂದು ಸಾಹಸಚಿತ್ತನುತ್ಸಾಹಿಸುತಿರ್ಪಾಗಳ್

ಪಸರಿಸಿ ಪರ್ಬಿದ ನೀಡಡಿ ।
ಕುಸಿದಂಗಂ ನೀಳ್ದುದಂಡೆ ನೆಗೆದ ಭುಜಾಗ್ರಂ ॥

ಕುಸುಮಶರಾಕುಂಚಿತಕರ ।
ಮೆಸೆದಿರ್ದುವು ದೃಷ್ಟಿಮುಷ್ಟಿ ಶರಸಂಧಾನಂ ॥ ೨೪
ಅಸಮಯದೊಳ್
ಶೃಂಗಾರಂ ಕೋಡಿಟ್ಟುದೊ ।
ಜಂಗಮಲತೆ ವೃತ್ತಮಾಯ್ತೊ ಲಾವಣ್ಯಂ ಶಾ ॥
ರ್ಙ್ಗಂಗಂಬಡೆದುದೊ ಪೇಳೆನೆ ।
ಪಿಂಗಬೆ ತೆಗೆ ನೆರೆದು ಪುಷ್ಪಚಾಪಂ ನಿಂದಂ ॥ ೨೫
ಹರಿಯಜರರಿದರಿದೆನೆಯುಂ ।
ಬರತಳದೊಳ್ ಕಲಹಲಂಪಟಂ ನಾರದನಾ ॥
ದಿರ್ರೆ ಕಾಮಂ ಸಾಯ್ವುಲ್ಲ ।
ಲ್ಲರ ದೇವಂ ತೊಟ್ಟನೊಂದು ಸರಲಂ ತೊಟ್ಟಂ ॥ ೨೬
ಅಂತು ನನೆಗಣೆಯಂ ತೊಟ್ಟು ವಿಕ್ರಮಮಂ ಮುಂತಿಟ್ಟು ಕೋಣನಿಂ
ಬಿಟ್ಟು ಕಲಹಮನೊಡಂಬಟ್ಟು ಭಾಳಾಕ್ಷನಂ ಲಕ್ಷಿಸಿ ನೋಡಿ
ಅಜ್ಞತೆಯಿಂ ಸಕಳಕಳಾ ।
ಭಿಜ್ಞನನಖಿಳೈಕತಾತನಂ ಮದನಂ ದಿ ॥
ವ್ಯಜ್ಞಾನಿಯನಿರದುಜಿ ಸ ।
ರ್ವಜ್ಞನನುನ್ಮದನಬಾಣದಿಂ ತೆಗೆದೆಚ್ಚಂ ॥ ೨೭
ಎಚ್ಚೊಡೆ ತಪೋಮರೀಚಿಯ ।
ನುಚ್ಚಳಿಸಲ್ಕಾಱದಿತ್ತು ತಿರುಗಿದ ಶರಮಂ ॥
ಚೆಚ್ಚ ಱದೀಕ್ಷಿಸಿ ಛಲದಿಂ ।
ದೆಚ್ಚಂ ಪಂಚೇಷುಮದನಶರದಿಂದಾಗಳ್ ॥ ೨೮
ನೀಡಾಗದೆ ಮದನಶರಂ ।
ನಾಡೆಯುಮಿರದೆಯ್ದಿ ಹರನ ಹತ್ತಿರೆ ಬೀೞು ॥
ತ್ತೋಡಿ ಬರೆ ಕಂಡು ಕಾಮಂ ।
ಹೂಡಿದನುಣ್ಮಿಸ್ಮೆನುತ್ತೆ ಮೋಹನಶರಮಂ ॥ ೨೯
ಇದು ಹರಿಯಜಸುರಪತಿಗಳ ।
ಮದಮುಡುಗಿಸಿತೀಶರಂ ಕರಂ ಮೂಱುಂ ಲೋ ॥

ಕದ ಚಿತ್ತಮನಲ್ಲಾಡಿಸಿ ।
ತ್ರಿದಿಕೊಳ್ಳದೆಕೊಳ್ಳನುತ್ತೆ ಮನ್ಮಥನೆಚ್ಚಂ ॥ ೩೦

ಅಂಶಿಸೆ ಮೋಹನಶರವಾ ।
ರ್ಪಿಂ ತಡೆಯದೆ ಶೂಲಧರನ ಬಹಿರಂಗಮನಂ ॥
ತಂತೆನಸು ಸೋಂಕಿ ಬರುತಿರೆ ।
ಸಂತಾಪನಬಾಣದಿಂದೆ ರತಿಪತಿಯೆಚ್ಚಂ ॥ ೩೧

ತೆಗೆದೆಚ್ಚೊಡೆ ಸಂತಾಪನ ।
ಮಗಲದೆ ಪರಿತಂದು ಹರನ ಮನದೊಳಗಂ ಮೆ ॥
ಲ್ಲಗೆ ಮುಟ್ಟಿ ಮುಟ್ಟಲಣ್ಮದೆ ।
ಮುಗುಳ್ದುಱೆ ಬರೆ ಕಂಡು ಮನ್ಮಥಂ ಮುಳಿದಾಗಳ್ ॥ ೩೨

ಲೋಕಕ್ಕದ್ಭುತಮೆಲೆಲೆ ಪಿ ।
ನಾಕಿಯ ತಪಮಿನ್ನುಮೆನ್ನಿದಿರೊಳದರ್ಪ್ಪದೆಂ ॥
ದಾಕರ್ಣಂ ಬರೆತೆಗೆದು ವ ।
ಶೀಕರಣಾಸ್ತ್ರದಿನನೂನವಿಕ್ರಮನೆಚ್ಚಂ ॥ ೩೩

ಇಸೆ ಬಂದು ವಶೀಕರಣಂ ।
ಸಸಿಯುಂ ಸೂಡಿದನ ಕಮಲವಿಮಲಜ್ಞಾನಾ ॥
ವಸಥಪರಂಜ್ಯೋತಿಯ ಕಾ ।
ಲ್ಪಸೆಯುಂ ಕಾಣದೆ ಮರಳ್ದು ಬರೆ ಬೆಱಗಾದಂ ॥ ೩೪

ಓಹೋ ಉನ್ಮದಮದನಸ ।
ಮೋಹನಸಂತಾಪನಂ ವಶೀಕರಣಾಸ್ತ್ರ ॥
ವ್ಯೂಹಂ ವ್ಯರ್ಥಮಿದೆಂದು ।
ತ್ಸಾಹಂಗುಂದುತ್ತೆ ಮನದೊಳಂದಿಂತೆಂದಂ ॥ ೩೫

ಟಂಕಾರಾಲ್ಪಧ್ವನಿಯಿಂ ।
ಕಿಂಕರ್ತ್ವಾಣತೆಯನೆಯ್ದುವರ್ ಮುನಿಗಳ್ ನಿ ॥
ಶ್ಶಂಕನನಚಳತನಂ ಹರ ।
ನಂ ಕಂಡೆಂ ಧರೆಗೆ ಚಿತ್ರಮತುಳಚರಿತ್ರಂ ॥ ೩೬

ತೆಱಹುಗುಡನಚಳನನ್ವಯಮು ।
ನಱಯುಂ ನಿರುಪಮಸಮಾಧಿಯುಕ್ತನಭೇದ್ಯಂ ॥
ಕುಱುಹಿಲ್ಲೆನುತುಂ ಬಿಲ್ಲುಂ ।
ಬೆಱಗಾಗಿರ್ದಂ ರತೀಶನಸ್ತ್ರವಿಳಾಸಂ ॥ ೩೭

ಈತೆಱದಿಂ ಬೆಱಗಾಗಿ ನಿ ।
ಶಾತಶಪ್ರೋಗಾತ್ರಹರನನಿಸಲಾಱದ ಮಾ ॥
ಜಾತನನೀಕ್ಷಿಸಿ ಗಗನದೊ ।
ಳಾತುರಿಸುವ ಹರಿಯಜರ್ಗೆ ನಾರದನೆಂದಂ ॥ ೩೮

ಜಲದೊಳಗಣ ಜಲಜದವೋಲ್ ।
ತಿಲದೊಳಗಣ ತೈಲದಂತೆ ಕಾಷ್ಠದ ನಡುವು ॥
ಜ್ಜ್ವಲಿಸುವ ಶಿಖಿಯುಂತೊಪ್ಪುವ ।
ಚಲಶಿವನಂ ಕಾಮನಿಸುಗೆ ಕೈಕೊಂಡಪುದೇ ॥ ೩೯

ತ್ರಿಣಯನನಂ ಹಗನಂ ನಿ ।
ರ್ಗ್ಗುಣನಂ ಸಡಿಫಡ ರತೀಶನಿಸುವನೆ ಹೋ ಬೇ ॥
ಡಣಕದ ಮಾತೆಲ್ಲಿಯುದೆ ।
ತ್ತಣ ಕಾಮನದೆತ್ತಣ ಭವನೆತ್ತಣ ಬಾಣಂ ॥ ೪೦

ಎಂದು ಗಗನಾಂಕಣದೊಳ್ ಕುಣಿವ ಸಂಗ್ರಾಮಲಂಪಟನಪ್ಪ ನಾರದ ಮುನೀಂದ್ರಂ ನಾರಾಯಣನೀರಜಸಂಭವರ್ಗೆ ನಲಿನಲಿದು ಪೇೞುತ್ತಿರ್ಪಿನಮಿತ್ತಲ್

ನಡೆತಂದಳ್ ಶಿವಪೂಜೆಗೆಂದಗಜೆ ಪುಷ್ಪವ್ರಾತಮಂ ಕೊಂಡು ಸಂ ।
ಗಡದೊಳ್ ಬರ್ಪ ವಿಲಾಸಿನೀನಿಕರದಿಂ ಸೌರಭ್ಯಲೋಲುಪ್ತಿಯಿಂ ॥
ಗಡಣಂಗೊಂಡ ಶಿಳೀಮುಖಪ್ರಕರದಿಂ ಸುಯ್ಗಂಪಿನೊಳ್ಸಾರ್ದು ಮುಂ ।
ಗುಡಿಯೊಳ್ ತೀಡುವ ದಕ್ಷಿಣಾನಿಲನಿನೊಪ್ಪಂಬೆತ್ತ ವಿಸ್ತಾರದೊಳ್ ॥ ೪೧

ಬಂದು ನವೀನಪುಷ್ಪಕುಲಮಂಡನಮಂ ಜಡೆಯೊಳ್ಭುಜಂಗಳೊಳ್ ।
ಸಂದ ಕರಂಗಳೊಳ್ ಶಿವನ ತೋಳ್ಗಳೊಳುರಸ್ಥಳದೊಳ್ ಪದಂಗಳೊಳ್ ॥
ನಿಂದು ವಿಳಾಸದಿಂದಗಜೆ ಸಿಂಗರಿಸುತ್ತೆ ಕಟಾಕ್ಷಕಾಂತಿಯೊಳ್ ।
ಸಂದಣಿಗೊಳ್ವ ಕಾಮುಕಳೆಯಂದೊಗೆಯುತ್ತಿರೆ ಸಾಜೆ ನೋಡಿದಳ್ ॥ ೪೨

ಅಂತು ನೋಟದೊಳ್ ಕೋಟ್ಯನುಕೋಟಿ ಕುಸುಮಾಯುಧರ್ ಪುಟ್ಟು
ತ್ತಿರೆ ಪುಷ್ಪಾಂಜಲಿಯುಂ ಪಿಡಿದು ಕಪರ್ದಿಯ ತಪವೆಂಬ ಶಶಿಕಾಂತಶಿಲಾತ
ಳದೊಳ್ ಬಿದ್ದ ಚಂದ್ರಕರಂಗಳಂತೆಯುಂ, ಶಂಭುವಿನೆಚ್ಚರಿಕೆಯೆಂಬ ಚಂ
ದ್ರೋದಯಮಪ್ಪನ್ನಂ ಸೈರಿಸದೆ ಪರಿದು ಮುತ್ತುವ ಚಕೋರಿಗಳಂತೆ
ಯುಂ, ಹರನ ಕರಣಂಗಳೆಂಬ ಬಲ್ಲನೆಗಳಲರ್ವನ್ನಮಿರಲೀಯದೆ ಪರಿದೆಬಿ
ಗಿಸುತುಂ ಮುತ್ತುವ ಮಧುಕರಂಗಳಂತೆಯುಂ, ಬೇಗಮೀಗಳ್ ನಿನ್ನ ತಪ
ಮಂ ಪಕ್ವತರಮಂ ಮಾಳ್ಪೆಂದು ಝಂಕೃತಿಯಿಂ ನುಡಿದು ಪರಿದು ಬೆರ
ಸುವ ಕುಸುಮಶರಂಗಳಂತೆಯುಮಿರ್ದ ತನ್ನ ಸರಸದೃಷ್ಟಿಗಳಿಂ ಹರನಂ
ನೋಡುತುಂ ತಪೋಭರಮಂ ಬಿಡಿಸಲಿರ್ದ ಮೃಡಾನಿಯುಂ ಕುಸುಮಕೋ
ದಂಡಂ ಕಂಡು

ಇನ್ನಂಜೆನಂಜೆನಾಹಾ ।
ಉನ್ನತಬಲವಾಯ್ತೆನುತ್ತೆ ವಿಭ್ರಮಬಳೆಸಂ ॥
ಪನ್ನಂ ಕಾಮಂ ತೆಗೆದಂ ।
ತನ್ನಗ್ಗದುದಂಚಪಂಚಬಾಣಮನಾಗಳ್ ॥ ೪೩

ನಳನಳಿಸುವಿಕ್ಷುಚಾಪದೊ ।
ಳಳಿವಡೆ ನಡೆನೋಡಿ ಹೂಡುತೈದಂಬಂ ಸಂ ॥
ಚಳಿಸದ ಶಂಕರನ ಮನಂ ।
ಚಳಯಿಸುವುದಂ ಸಾರ್ದು ಪಾರ್ದು ತೆಗೆ ನೆರೆದಿರ್ದಂ ॥ ೪೪

ತೆಗೆದಾಕರ್ಣಂಬರಂ ಶಂಬರರಿಪು ನೆರೆ ಹೂಡಿರ್ದ ಪುಷ್ಪಾಸ್ತ್ರದೊಂದು।
ಜ್ಜುಗಮಾಕಾಶಸ್ಥನಾಕಾಲೋಕರೊಳೊದವಿದನೂನಾರ್ತಿ ಕೂರ್ತೆಯ್ದೆ ನಿಂದಿ।
ಪರ್ಗಜಾಚಿತ್ತಾಭಿಲಾಷಾವಿತತಿ ನೆರೆದು ಭೂತೇಶಚಿತ್ತಾಂತದೊಳ್ಪೊ ।
ಕ್ಕು ಗಭೀರೋದ್ವೃತ್ತಪ್ರೇಮಬೀಜಮನತಿಭರದಿಂದೊತ್ತಿ ಮುತ್ತಿತ್ತು ಸುತ್ತಂ॥

ಇಂತು ಸಕಲಜಗದ್ಧಿತಾರ್ಥಮಪ್ಪ ಹರಿವಿರಿಂಚಿಗಳ ಮನದ ಬಯಕೆಯುಂ
ಕಂದರ್ಪನ ಪಂಚಬಾಣಾನುಸಂಧಾನಮುಂ ಪಾರ್ವತಿಯ ಮನೋರಥಮುಂ
ಮುಪ್ಪುರಿಗೊಂಡು ಶಿವನ ನಿಷ್ಪ್ರಪಂಚನಿಷ್ಪ್ರಯಾತ್ಮಕನಿರುಪಾಧಿಕ
ನಿರಾವರಣಸ್ವಾನುಭಾವಸಂವೇದ್ಯಸ್ವಯಂಪ್ರಕಾಶಮುಂ ಸುತ್ತಿ ಮುತ್ತಿ ಪತ್ತಿ
ಚಿಗಿಲು ಬಿಡದಿರೆ, ನಿರ್ವಿಕಲ್ಪಸ್ವರೂಪನಪ್ಪ ಪರಮಂಗೆ ಸ್ವಪ್ನೋಪಮಾಯುಂ

ಮಮತೆ [1]ತಲೆಯೋಱೆ ಜೀವನಾಗಿ, ಜೀವನಿಂ ಪ್ರಾಣಾನಿಲಂ, ಪ್ರಾಣಾನಿಲ ನಿಂ ಚಿತ್ತಂ, ಚಿತ್ತದಿಂದಹಂಕಾರಂ, ಅಹಂಕಾರದಿಂ ಬುದ್ಧಿ, ಬುದ್ಧಿಯಿಂ ಮ ನಂ, ಜನಿಯಿಸಿತ್ತು; ಅಂತರಂಗಬಹಿರಂಗಭಾವಮಂ ನೆನೆಯೆ, ನೆನೆವಲ್ಲಿಂ ಮುನ್ನಂ ಮದನನ ಪಂಚಬಾಣಂ ಪರಿತಂದು ನೆರೆದಡಸಿ ಬೆರಸಿ ಕವಿದು ಮ ನಮನಿರ್ಮೆಯ್ಗೊಂಡು ಸಹಸ್ರಮುಖದಿಂ ಸಂಚಳಮನೀಯೆ, ನಿಲಲ್ಕಾರದೆ ತಪೋಭರದ ಬಿಸುಗೆ ಬಿಡುವಂತೆ ಮೆಯ್ಯ ಸಂಪುಟಂ ಬಿರ್ಚಲೊಡಂ; ನೋಡಿ ನೋಡಿ ನೋಡಲಣ್ಮದೆ [2]ಪುಷ್ಪಶರಮಂ ನೂರ್ಮಡಿಸುವಂತೆ[2] ಪುಷ್ಪಾಂಜಲಿಯಂ ಕೊಟ್ಟಂತೆ ಕಂಪಿಸಿ ಮುಂತೆ ಮೆಯ್ಯಿಕ್ಕಿರ್ದ ಗಿರಿಜಾತೆ ಯಂಭೂತೇಶ್ವರಂ ಕಂಡಾನೇಕೆಯಿಾಮಾನಿನಿಯೇಕೆಯಿಾತಪಮೆಲ್ಲಿಯುದೆತ್ತ ಣಿಂ ಬಂದುದಾರಿಂದಾದುದೆಂದು ಕಾಮನಿರ್ಪ ವಾಮಭಾಗಮಂ ನಿಟಿಲಾಕ್ಷಂ ನಸುಗೋಪದಿಂ ನೋಡಿದಾಗಳ್

ನೋಡಿದ ಮುನ್ನಂ ಕೋಪಂ ।
ನಾಡೆಯುಮೊತ್ತರಿಸಿ ನೀಳ್ದು ನಿಟಿಲೇಕ್ಷಣದೊಳ್ ॥
[3]ಕೂಡೆ[3] ಬೆಳ್ಬೆಳದು ಸುೞಿಸುೞಿ ।
ದೀಡಿಱಿದೊಳಗೊಳಗೆ ಘುಳುಘುಳಿಸಿ ಮುಳಿದಾಗಳ್ ॥ ೪೬

ಪೊಗೆದುದು ಪೊತ್ತಿದತ್ತು ಕಿಡಿಯಿಟ್ಟುದು ನಾಲ್ದೆಸೆದೋಱಿದತ್ತು ಬಾ ।
ನ್ಗೊಗೆದುದು ಸಿಂದು ಪೊಂಬೆಳಗುಮಂ ಪರಪುತ್ತದು ದಂಧಗಿಲ್ಧಗಿ ॥
ಲ್ಧಗಿಲೆನುತಟ್ಟಿತಟ್ಟಿದುದು ಮುಟ್ಟಿತು ಸುಟ್ಟಿತು ತಿಂದು ತೇಗಿದ ।
ತ್ತಗಿಯದೆ ನಿಂದ ಪೂಗಣೆಯನಂ ಪಣೆಗಣ್ಣುರಿ ಜಂಪೆಯಾಳ್ದನಾ ॥ ೪೭

ಇಟ್ಟಣಿಸಿ ಘುಡುಘುಡಿಸಿ ಕಿಡಿ ।
ಗುಟ್ಟಿ ಕನಲ್ದಡಸಿ ಸಿಡಿಲ ಬಳಗದ ಮುಳಿಸಂ ॥
ತೊಟ್ಟದು ಬಿಸುಗಣ್ಣುರಿ ಪೊಱ ।
ಮಟ್ಟುದು ಸುಟ್ಟುದು ರತೀಶನಂ ನಿಮಿಷಾರ್ಧಂ ॥ ೪೮

ಗಗನದ ಹರಿಸುರಪತಿಗಳ್ ।
ಜಗದ್ಧಿತಾರ್ಥಂ ಮಹೇಶ ಕರುಣಿಪುದೆಂಬ ॥

ಪಾ— 1. ಸ್ವಪ್ನೋಪಮಾಹಂಮಮತೆ. 2. ಶರಂ ನೂರ್ಮಡಿಸಿದಂತೆ. 3. ಮಸಿ.

ನ್ನೆಗವಿತ್ತಲ್ ಘೞಿಘೞಿ ಘುಗಿ ।
ಘುಗಿಲೆನೆ ನೆರೆ ಕಾಮನುರಿದು ಕರಿನಮುಱಿದ್ರೋದಂ ॥ ೪೮

ತೊಟ್ಟನೆ ಭಾಳಾನಲನಿರ ।
ದೊಟ್ಟಯಿಸಿಯೆ ಕುಸುಮಶರನನುರಿಪಿದ ಪದದೊಳ್ ॥
ಪುಟ್ಟಿತುಮಂ ಪೋದುದುಮಂ ।
ಸುಟ್ಟುದುಮಂ ಕಾಣಬಾರದಾಯ್ತಾ ಕ್ಷಣದೊಳ್ ॥ ೪೯

ಅಂತುಮಲ್ಲದೆ

ಅರರೇ ಘುರ್ಘುಗು ಭಾಸ್ಪುರೇ ಘುಗುಘುಗು ಪ್ರಜ್ವಾಲೆ ಮಜ್ಜುಯ್ಯುದೇ।
ವುರೆ ಕೋಪಾನಳವಿಸ್ಫುಲಿಂಗಮಮಮ ಪ್ರದ್ಯೋತಮುಯ್ಯಯ್ಯ ಭೀ ॥
ಕರವಾಹಾ ಛಿಣಿಛಿಳ್ ಛಿಟಿಲ್ ಛಲರೆ ಭಾಳಾಭೀಳಮೆಂದೆಂದು ನಿ ।
ರ್ಜರಲೋಕಂ ಬೆಱಗಾಗೆ ಸುಟ್ಟುದು ವಿರೂಪಾಕ್ಷಾಕ್ಷಿ ಕಂದರ್ಪನಂ ॥

ಸಂದಣಿಸಿ ಪತ್ತಿ ದುರಿ ಘೞಿ ।
ಲೆಂದುರಿಪಿದ ಬೇಗದಿಂದಮುರಿದಾಕ್ಷಣದೊಳ್ ॥
ಬೆಂದ ನುಲಿಯಂತೆ ಮದನಂ ।
ನಿಂದಿರೆ ಕಂಡಭವನೆಯ್ದೆ ಮುಳಿದಂ ತುೞಿದಂ ॥ ೫೧

ಜಯಶೀಲಂ ಪ್ರಭು ಪಾವಕ ।
ನಯನಂ ವಿಷಕಂಠನಹಿವಿಭೂಷಂ ಕೋಪೋ ॥
ದಯನಭವಂ ಸ್ಮರಭಸ್ಮಾ ।
ವಯವಂ ತಾನಾದನತುಳಬಳನಪ್ರತಿಮಂ ॥ ೫೨

ಇಂತತಿಸ್ವತಂತ್ರಂ ಶತಪತ್ರನೇತ್ರಪೂಜಿತಪಾದಂ ಹೇಮಕೂಟಾಗ್ರದ ಮತಂಗಪರ್ವತದೊಳ್ ಮದನನಂ ಸುಟ್ಟುರಿಪಿ ತದಂಗಭಸ್ಮೋದ್ಧೂಳಿತಗಾತ್ರನಾಗಿ

ಮುಂತಿದಿರ್ದಪ್ಪ ಗಿರಿಜಾ ।
ಕಾಂತೆಯನೀಕ್ಷಿಸದೆ ನುಡಿಯಿಸದೆ ಸೋಂಕದೆ ನಿ ॥
ಶ್ಚಿಂತಂ ಸ್ವತಂತ್ರನಹಿಧರ ।
ನಂತರ್ಧಾನಕ್ಕೆ ಸಂದನಲ್ಲಿಂಬೞಿಯಿಂ ॥ ೫೩

ಶಿವನಧಿಕಾಕ್ಷಕ್ರೋಧೋ ।
ದ್ಭವಶಿಖಿಯಿಂ ಮದನನುರಿಯೆ ರತಿಗತಿಶೋಕಂ ॥
ಕವಿದಳ್ಕದಳೆಂದುಗುವ ।
ಪ್ಲವಮಾಗೆ ಚಕೋರಿ ಕರಗಿ ಕೊರಗುವ ತೆಱದಿಂ ॥ ೫೪

ಇಂತು ಮನಮುಳ್ಕಿ ತನು ಬಳ್ಕಿ ಬುದ್ಧಿ ಕೋಡಿ ಕರಣಂ ಬಾಡಿ ಮತಿ ಕೆಟ್ಟು ರತೀದೇವಿಗತಿದುಃಖಂ ಪುಟ್ಟಿ ನಿಲಲಾಱದೆ ಕೊರಗುತುಂ ಪರಿದು ಬಂದು

ಬೆಂದಿರ್ದ ಕಾಮನಂ ಕಂ ।
ಡಂದಟಿಲೊಳಗೆಱಗಿ ನುಡಿಯಲಱಿಯದೆ ನಿಲೆ ಶೋ ॥
ಕಂ ದಳವೇಱುತೆ ಮಿಾಱುತೆ ।
ಸಂದಣಿಸುತ್ತುಱಿಸಿತಸ್ತು ರತಿಯುಂ ರತಿಯುಂ ॥ ೫೫

ಅದೆಂತೆಂದೊಡೆ:—

ಎತ್ತಣ ಹರನೆತ್ತಣ ತಪ ।
ಮೆತ್ತಣ ತಾರಕನ ಬಾಧೆಯೆತ್ತಣ ಬಿಸುಗ ॥
ಣ್ಣೆತ್ತಣುರಿಯೆತ್ತಣಿರ ।
ವೆತ್ತಣ ಕೋಟಲೆಯನೆನಗೆ ಮಾಡಿದೆ ಮದನಾ ॥ ೫೬

ಎಳೆಯುನೆ ಸುಕುಮಾರನೆ ಸದ ।
ಮಳನೆ ಸುಖಪ್ರದನೆ ಸೊಬಗೆ ಸುರತರುವೇ ತ ॥
ತ್ಫಳವೆ ಸುಧಾರಸವೇ ನಿ ।
ನ್ನಳವಱಿಯದೆ ನೊಸಲ ಕಣ್ಣ ಮುಸುಕಂ ತೆಱೆದೈ ॥ ೫೭

ಅಸ್ವಪ್ನರನತಿಘೋರತ ।
ಪಸ್ವಿಗಳನಪಾರಮಹಿಮರಂ ವಿಮಳಾಜಾ ॥
ರಸ್ವಾದಿಗಳಂ ಗೆಲ್ದ ಮ ।
ನಸ್ವಿ ಲಲಾಟಾಗ್ನಿಗೆಂತು ಸವಿದುತ್ತಾದೈ ॥ ೫೮

ಕಂತುವೆ ನೀನಿಂತಾದೊಡ ।
ದೆಂತುಱುವೆನದೆಂತು ನಿಲ್ವೆನೆಂತೊಪ್ಪುವೆನಿ ॥
ನ್ನೆಂತುಸಿರ್ವೆನೆಂತು ಬಾಳ್ವೆನ ।
ದೆಂತೀಕ್ಷಿಸೆನೆಂತು ಪೋಪೆನೆಂತಾಸಿರ್ಪೆಂ ॥ ೫೯

ಭಾವಿಸಿ ಭವನಂ ಕುಸುಮಾ ।
ಸ್ತ್ರಾವಳಿಯಿಂದೆಚ್ಚು ಗೆಲ್ವೆಯೆಂಬಿದರ್ಪನಿದಿಂ ॥
ತೋಱ್ವೋ ನಿಟಲಾಗ್ನಿಯಿಂದಂ ।
ಬೇಱ್ವುದನಾನೆತ್ತ ಬಲ್ಲೆನಲರ್ವಿ*ಲ್ಲರಸಾ ॥ ೩೦

ಎಂದೞಲ್ದು ಮತ್ತಮಿರದೆ

ಲಾವಣ್ಯಂ ಲಯಮಾಯ್ತು ವಿಭ್ರಮವಿಳಾಸಂ ಮಾಯಮಾಯ್ತು ಕ್ಕಟಾ ।
ಜೀವಂ ಬೆಂದುದು ಚೆಲ್ವು ಸತ್ತುದು ಸುಖಂ ಹಾೞಾಯ್ತು ಕಂದರ್ಪನ ॥
ದ್ಭಾವಂ ಭಸ್ಮಮದಾಯ್ತು ವ್ಯೈಮೆ ಮಡಿಯಿತ್ತುತ್ಸಾಹಮಿಂಗಿತ್ತದಿ ।
ನ್ನೇವೇೞ್ವೆಂ ನಡೆದೆತ್ತ ಸಾರ್ವೆನಿಳೆಗಿನ್ನೇನಪ್ಪೆನೆಂತಿರ್ಪೆನೋ ॥ ೩೧

ಎಲ್ಲಿತ್ತೊ ಶಶಿಯು ಬೆಳ್ಗೊಡೆ ।
ಯೆಲ್ಲಿತ್ತೋ ಪೂತನೂತ್ನಚೂತಗಜಂ ತಾ ॥
ನೆಲ್ಲಿತ್ತೋ ಇಕ್ಷುಚಾಪಮ ।
ದೆಲ್ಲಿತ್ತೋ ಕುಸುಮಬಾಣವಿಭ್ರಮವೀಗಳ್ ॥ ೩೨

ಎಲೆ ಸುರತಕಾಮಧೇನುವೆ ।
ಯೆಲೆ ಸುರತಾಂಭೋಧಿಚಂದ್ರ, ಯೆಲೆ ಸುರತಮಹೋ ॥
ತ್ಪಲಸೂರ್ಯಯೆಲೆ ಸುರತಸಂ ।
ಕುಲಪರಮಾರಾಧ್ಯಯೆತ್ತಲಡಗಿದೆ ಮದನಾ ॥ ೩೩

ಲಕ್ಷ್ಮಿಗೆ ನೆಱೆ ಪುಟ್ಟಿದರ್ಪಱಿ ।
ಲಕ್ಷ್ಮೀಪತಿಯೆನಿಸಿ ಬಾೞ್ದು ಪುರಹರನ ಲಸ ॥
ತ್ಪಕ್ಷ್ಮಪುಟಾಗ್ರಂ ಬಿರ್ಚಿದ ।
ಸೂಕ್ಷ್ಮದ ಕಾಲದೊಳೆ ಘಳಿಲನುರಿದೈ ಮದನಾ ॥ ೩೪

ಕೇಳೆಲೆ ಮನ್ಮಥ ಹಂಸೆಯು ।
ತೂಳದ ತಳ್ಪಂ ಕರಂ ಕಠಿನಮೆಂಬೀಗಳ್ ॥
ಭಾಳಾಕ್ಷಿಯುರಮನೆಯೊಳಾ ।
ಭೀಳದ ದಳ್ಳುರಿಯ ಮಂಚದೊಳ್ ಪವಡಿಸಿದೈ ॥ ೩೫

ಅಂತುಮಲ್ಲದೆ

ಹಾ ಮದನ ಹಾ ಮನೋಹರ ।
ಹಾ ಮಕರಪತಾಕ ಹಾ ಮಹಾವಿಭ್ರಮ ಹಾ ॥
ಹಾ ಮನ್ಮಥ ಹಾ ಸನ್ಮದ ।
ಹಾ ಮತ್ಪ್ರಾಣೇಶ ಹಾ ವಿಳಾಸವಿನೋದಾ ॥ ೬೬

ಕುಸುಮಾಭರಣಾವಳಿಗಳ್ ।
ಬಸನಲ್ಲದ ಪೊಱೆಯಿವೆಂಬ ಸುಕುಮಾರತೆಯೊಳ್ ॥
ಬಿಸುಗಣ್ಣ ಮಿಸುಪ ಕೋಪದ ।
ಪೊಸತೊಡಿಗೆಯನೆಂತು ಸೈರಿಸಿದೆ ಕಂದರ್ಪಾ ॥ ೬೭

ಮತ್ತಮದಲ್ಲದೆ ಪಂಚಬಾಣನ ಸರ್ವಗುಣಂಗಳಂ ನೆನೆನೆನೆದು ಸೈರಿಸಲಾಱದೆ ಮತ್ತಮತ್ತೆ ಶೋಕಂಗೆಯ್ದು

ಪಸಿವಱಿಯದೆ ತೃಷೆಯಱಿಯದೆ ।
ದೆಸೆಯಱಿಯದೆ ನಿದ್ರೆಯಱಿಯದಿರುಳುಂ ಪಗಲುಂ ॥
ಕುಸುಮದ ಲಿಂಗಮನೊಸೆದ ।
ರ್ಚಿಸಿದ ಫಲಂ ಕಿರ್ಚಿನೊಳಗೆ ಬೇಪಂತಾಯ್ತೇ ॥ ೬೮

ಸುರತಶ್ರಾಂತಿಯೊಳೀಷ ।
ತ್ಪರಿಸುಪ್ತಿಯನೆಯ್ದಿ ಸುಖದೊಳಾನಿರೆ ನೀಂ ಮೈ ॥
ಗರೆದೆನ್ನನಂದು ನೋಯಿಪ ।
ಪರಿ ತಾಂ ದಿಟಮಾದುದಿಂದು ಮನ್ಮಥಭೂಪಾ ॥ ೬೯

ಬೆಳಗಾಯ್ತುಪ್ಪವಡಿಸು ।
ತೊಳತೊಳಗುವ ಮಣಿಮುಕುರಮಂ ನಿರೀಕ್ಷಿಸು ಹಂಸಾ ॥
ವಳಿಯುಂ ನಡೆವಾಡಿಸು ಕೋ ।
ಕಿಳನಾದಮನಾಲಿಸುಸಿರದಿರ್ಪರೆ ಮದನಾ ॥ ೭೦

ಎಂದುಂ ಮುಳಿದೊಡೆ ತಿಳಿವಂ ।
ಮುಂದಿಟ್ಟಲ್ಲದೆ ಮದೀಶ ಮುಳಿಸಿಲ್ಲಿಲ್ಲೀ ॥
ಯುಂದಂ ಪೊಸತಿಂದಿನ ಮುಳಿ ।
ಸೆಂದಿನ ಮುಳಿಸಿನವೊಲಲ್ಲ ಮದನನೃಪಾಲಾ ॥ ೭೧

ಪನ್ನಗಭೂಷಣ ವಿಷಸಂ ।
ಪನ್ನನ ನಿಷ್ಠುರಗುಣಂಗಳಂರಿಪ್ಪದುಚಿತಂ ॥
ನಿನ್ನಂ ನಿನ್ನೀಸದ್ಗುಣ ।
ಮೆನ್ನಂ ನೆರೆಮಱಿಸಲೇಕೆ ಮನ್ಮಥರಾಜಾ ॥ ೨೨

ಎಂದು ಕುಸುಮಕೋದಂಡನ ಸುಧಾಮಯಸದ್ಗುಣಂಗಳನೆಣಿಸಿಯೆಣಿಸಿ ಪಲುಂಬಿ ಪಂಬಲಿಸಿ ಪಱಿಯಿಸಿ ಮತ್ತೆ ಮತ್ತೆ ಮಾಣದೆ

ಮದಕರಿಯೆತ್ತ ಪ್ರೋಂದೆ ಪರಪೂರ್ತಿಯದೆತ್ತಲದೃಶ್ಯನಾದೆ ಮ ।
ಧ್ವದನಸರೋಜಭೃಂಗನೆಯದೆತ್ತಲಸಂಗಿದೆ ನೀನವೆತ್ತ ಮ ॥
ಟ್ಗದೆ ಮಧುಮಿತ್ರಯೆತ್ತ ಲಯಮಾದೆ ಮದೀಶ್ವರಯೆತ್ತಣಕ್ರಮ ।
ಕೈವ್ಯವಿದೆಯೆತ್ತ ಸಾರ್ದೆ ಕಳದೆತ್ತಲಣಂ ತವಿಲಾದೆ ಮನ್ಮಥಾ ॥ ೨೩

ಎಂದಿಂತು ಶೋಕಿಸುತ್ತುಂ ವ್ಯಾಕುಲಚಿತ್ತೆ ವಲ್ಲಭವಿರಹಿತೆ ಸಕಳಸುಖವಿರತೆಯಪ್ಪ ರತೀದೇವಿ ನಿಂದಿರ್ದ್ ಬಿಸುಸುಯ್ದು ಬಸಿಱಂ ಹೊಸೆದು ಕೆಯ್ಯೆತ್ತಿ ದೆಸೆದೆಸೆಯಂ ನೋಡಿ

ಮೊಱೆಯೋ ಮೊಱೆಯೋ ಶಿವಧೋ ।
ಕಱೆಗೊರಲನ ಕಣ್ಣ ದಾಱಿ ಕುಸುಮಾಯುಧನಂ ॥
ನೆಱೆ ಮುತ್ತಿತ್ತಯ್ಯೋ ಇದ ।
ನಱಿನವರಿಲ್ಲಕ್ಕಟಾ ಕೃಪಾಳುಗಳಿಲ್ಲಾ ॥ ೨೪

ನೆಲನೇ ನಭವೇ ಶಿಖಿಯೇ ।
ಜಲವೇ ರವಿಯೇ ಶಶಾಂಕನೇ ಮಾರುತನೇ ॥
ಬಲನೞಿದವಳನನಾಥೆಯ ।
ನಲಘುತರಾಘಾತೆಯಂ ನಿರೀಕ್ಷಿಸಿರೆನ್ನಂ ॥ ೨೫

ಮನೆದೇವತೆಯರಿರಾ ನಂ ।
ದನದೇವತೆಯರಿರಾ ದೆಸೆಯ ದೇವತೆಯರಿರಾ ॥
ಘನಪಾಪಂ ಪುದಿದಿರ್ದೀ ।
ವನಿತೆಯ[1]ನೊಳಕೊಳ್ಳಿರೇ ಅನಾಥೆಯನೆನ್ನಂ[1] ॥ ೨೬

ಪಾ— 1. ನೋವಿರೆಯನಾಥೆಯಂ ನೀವೆನ್ನಂ

ಎಂದಿಂತು ದೆಸೆದೆಸೆಗೆ ಕರೆಕರೆದು ಬಾಯಱಿ ಬಲ್ಬಳಿದು ನಿಂದಿರಲಾಱದೆ ಕಾಲ್ಕುಸ್ಸಳಿಸಿ ಭೋಂಕನೆ ಕುಳ್ಳಿರ್ದು ತನ್ನೊಳಗೆ ತೆಕ್ಕನೆ ತೀವಿ ತೆರೆ ಮಸಗುವ ಶೋಕರಸಮುಕ್ಕಿ ಪೊಱಪೊಣ್ಮಿದುದೆಂಬಂತೆ ಕಣ್ಣ ನೀರ್ ಕರೆದೊತ್ತರಿಸಿ ಪರಿಯೆ, ಮತ್ತೆ ಮತ್ತ ಬಿತ್ತುಂ ಗಂಟಲುಬ್ಬಿ ಸೆರೆಬಿಗಿದು ಕಣ್ಕೆಂಪೇಱಿ ಮಿಕ್ಕು ನೆಗೆವ ಬಿಕ್ಕಸೊಳ್ ಜೆರಱ ನಾನಾವಿಧದಿಂ ನಾಲಗೆಯೊಳ್ ಪೊಱಮಡುವ ಶಿಥಿಲಾಕ್ಷರಂ ಶೋಕಾಗ್ನಿಯೊಳ್ ಬೆಂದುಗಿದು ಸೀದು ಸೀಕರಿವೋಗಿ ಪೊರಳ್ದುರುಳ್ದು ಬಱೆ ನೆಲೆಗೊಂಡ ಗದ್ಗದದಿಂ ಪಲುಂಬಿ ಪಱಿಯಿಸುತುಂ, ಮತ್ತಂ ಮಸ್ಕಘನುರಿವ ದುಃಖಾನಿಳನಿಂ ಚಿತ್ತಂ ಪೊತ್ತಿಯಹಂಕಾರಂ ಪೊಗೆದು ಬುದ್ಧಿಯುರಿದು ಮನಂ ಬೆಂದುರಿಯುಸಿರು ಸುಸುರಿಕ್ಕೆ ಕೆಲಬಲದ ಮುಂದಣ ಗುಲ್ಮಲತೆಗಳ್ ಘಳಿಲನೆ ಘುಱಿಘುಱಿಲನುರಿಯೆ ವಶನಲ್ಲದ ದುಃಖದಿಂ ಬಿಸುಸುಯ್ಯುತ್ತುಂ, ಮತ್ತಂ ಗ್ರಹಣಕ್ಕಂಜಿ ಗಗನತಳದ ಮೃಗಧರಬಿಂಬಂ ಪೊಡವಿಯೊಳ್ ಬೀಳ್ವೊಡನೆ ಬಿಡದೆ ಬೆಂಬತ್ತಿ ಕಡುವೇಗದಿಂ ಬಂದುರ್ವಿಯೊಳ್ ಸರ್ವಗ್ರಾಸಂಗೊಂಡು ನೆಲದೊಳಟ್ಟೊರಸುವ ರಾಹುಮಂಡಲದಂತೆ ಕೆದಱಿದ ಮುಡಿಕಟ್ಟು [1]ಪಚ್ಚುವರೆದು[1] ಮುಚ್ಚಿ ಮುಸುಂಕಿ ಭಾಳತಳಮಂ ಭೂತಳದೊಳಟ್ಟಿದ ನೋವಿಂ [2]ತೇದು[2]ಕೊಳುತ್ತುಂ, ಇಂತು ಕೇಳ್ವ ಪಶುಪಕ್ಷಿಮೃಗ ಗುಲ್ಮಲತೆ ವೃಕ್ಷಾವಳಿಗಳ್ಗೆ ಕರುಣಂ ಪುಟ್ಟುವಂತೆ ರತಿಯತಿಶೋಕಂಗೆಯ್ದು ದುಃಖಪ್ರಳಾಪಂಗೆಯ್ದು ಮೆಯ್ಬಿಕ್ಕಿ ಬಿಸಿಜಂ ಪೊಸೆದು ಚೇತನಂಗೆಟ್ಟು ಭೂತಳದೊಳ್ ಬಿದ್ದು ಕೆಚ್ಚುಗಟ್ಟಿದಬಿಲಿ ಮುಚ್ಚೆವೋಗಿ ಕೊರಲೊಳ್ ಹರಣಮಂ ಕಣ್ಣೊಳ್ ಕಾರ್ಪಣ್ಯಮಂ ಪುಡಿವೊಗಟೊಳ್ ನಿಡುಸುಯ್ಯಂ ನಾಲಗೆಯೊಳ್ ವಿಕಳತೆಯಂ ತನುವಿನೊಳ್ ಚೇತನಮಂ ಮನದೊಳ್ ಪರವಶನಮಂ ಪಿಡಿದು ಗಗನದಿಂ ಬಿದ್ದಂತೆ ದುಃಖದೊಳದ್ದಂತೆ ದೈನ್ಯದೊಳ್ ನಿಂದಂತೆ ಶೋಕಂ ಪೊಸೆದು ಬಿಸುಟಂತೆ ದುಃಖಂ ರೂಪುಗೊಂಡಂತೆ ಮಱೆದೊಱಗಿರ್ದಾಗಳ್

ಗಿರಿಸುತೆ ಕಂಡು ಕಂಡು ಬೆಱಗಾಗಿ ಕೃಪಾಕರಚಿತ್ತೆ ಹತ್ತೆಸಾ ।
ರ್ದು ರತಿಯ ಮೆಯ್ಯುಮಂ ಮುಖಮುಮಂ ತಡವುತ್ತಿರೆ ಸೋಂಕಿನಿಂದೆ ಚೇ॥

ಪಾ— 1. ಪರ್ಬಿಪರೆದು. 2. ತೆಗೆ.

ತೆರಿಸುತೆ ಕಣ್ಗಳಂ ತೆರೆದು ಪಾರ್ವತಿಯುಂ ನಡೆನೋಡುತುಂ ದಯಾ ।
ಪರೆ ಭುವನೈಕಮಾತೆ ಪದೆದೀಕ್ಷಿಪುದೆನ್ನಯ ದುಃಖದೊಪ್ಪಮಂ ॥ ೭೭

ಎಂದಚಿಲ್ದು ನುಡಿದು ನೀಲಾಬದೆ
ಗಿರಿಜೆಯ ಪದಯುಗದೊಳ್ ರತಿ ।
ಪೊರಳ್ದು ಪುಯ್ಯಲ್ಚಿ ಪೆರ್ಚ್ಚಿದಚಿಲಿನ್ಮಡಿಸು ॥
ತ್ತಿರೆ ಪಚಿಯಿಸುತುಂ ದುಃಖಾ ।
ತುರೆ ಶೋಕಂಗೆಯ್ದು ಸುಯ್ದು ಪ್ರೋಯ್ದುಚಿಲುತ್ತುಂ ॥ ೭೮

ಕರುಣಿಸು ತಾಯೇ ತವರೇ ।
ಪರಿರಕ್ಷಿಸು ದಯೆಯೊಳೀಕ್ಷಿಸುಡುಗಿಸು ನೋವಂ ॥
ಪರಿಹರಿಸು ದುಃಖಮಂ ಪರ ।
ಗಿರಿರಾಜತನೂಜೆ ಕಾದುಕೊಳ್ಳೆನ್ನಸುವಂ ॥ ೭೯

ಎಂದಚಿಲ್ವ ರತಿಯುಂ ಕಂಡು ಮನಂಗೊಂಡು
ಬೇಡುಡುಗು ಶೋಕರವಮಂ ।
ನೀಡಾಗದೆ ನಿನ್ನ ವಲ್ಲಭನನೀಶ್ವರನಂ ॥
ಬೇಡುವೆನಾವರ್ಥದೊಳಂ ।
ಮಾಡುವೆನೆಲೆ ಪರಮಹರ್ಷಮಂ ನಿನಗೆ ರತೀ ॥ ೮೦

ಎಂದಗಜೆ ಬೆಸಸೆ ಶೋಕಮು ।
ನ್ಗಂದುಡುಗುತಡಂಗಿಸುತ್ತು ಮಚಿಲಂ ಮನದೊಳ್ ॥
ಸಂದಣಿಪ ದುಃಖಮಂ ಮುಚಿ ।
ದೊಂದಿದಳಾರತಿ ಭವಾನಿಯುಜ್ಜ್ವಳವಚದಿಂ ॥ ೮೧

ಆಸಮಯದೊಳ್
ಇಂತು ರತಿಗಭಯಮಂ ಕೊ ।
ಟ್ಟಂತಕಹರನಿರದೆ ಪೋದ ಪರಿಯಂ ಮನದೊಳ್ ॥
ಚಿಂತಿಸಿ ಜಯೆವಿಜಯೆಗಳೊಡ ।
ನಿಂತೆಂದಳ್ ಗಿರಿಜೆ ಮನದ ಮುನಿಸಿಂದಾಗಳ್ ॥ ೮೨

ಆನಿಂತಿಂತರ್ಚಿಸುತ್ತುಂ ಗತಿ ಮತಿ ಪತಿಯೆನ್ನಾಯುಮೆನ್ನಾತ್ಮತತ್ವಂ ।
ತಾನೆಂದುತ್ಸಾಹದಿಂದಿರ್ದ ಚಳಪತಿಯ ಮೇನಾಖ್ಯೆಯೊಂದಟ್ಟಿಬಂ ಬಿ ॥

ಟ್ಟಾನಂದಂಗೊಡಿ ಕಾರುಣ್ಯಮನನವರತಂ ಹಾರುತಿರ್ಪಲ್ಲಿ ಕೇಳಂ ।
[1]ತೇನೆಂದುಂ ನೋಡದುಗ್ರಂ[1]ರಜತಗಿರಿಗೆ ಪೋದಂ ನಿಕೃಷ್ಟಾತ್ಮನಾದಂ॥ ೮೩

ಅಂತುಮಲ್ಲದೆ

ತಾನಿರ್ದಲ್ಲಿಗೆ ನಡೆತಂ ।
ದಾನರ್ಚಿಸೆ ಕಾಮವೈರಿ ನುಡಿಯಿಸದಂತ ॥
ರ್ಧಾನಕ್ಕೆ ಸಂದನದಱಿಂ ।
ದಾನಿರ್ದಲ್ಲಿಗೆ ಸಮಂತು ತನ್ನನೆ ತರ್ಪೆಂ ॥ ೮೪

ಉಗ್ರತಪೋಭರಾಕೃತಿಯನಾಂತು ಜಗಂ ಬೆಱಗಾಗೆ ನಿಶ್ಚಲಾ ।
ವ್ಯಗ್ರಮನೋಬಲಪ್ರಬಲೆಯಾಗಿ ಬಿಸಿಲ್ಮೞೆಶೀತದೊಳ್ ನಗ ॥
ಪ್ರಾಗ್ರದೊಳಂ ಕುಜಪ್ರತತಿಯೊಳ್ ಸರಸೀಕುಳದೊಳ್ ವಿರಾಜಿಸು ।
ತ್ತುಗ್ರನನೀಶನಂ ವಿಪುಳನಿಶ್ಚಲನಂ ಚಲದಿಂದೆ ತಂದೆಪೆಂ ॥ ೮೫

ಎಂದಿಂತು ಸಖೀಜನದೊಡನೆ ತನ್ನ ಸಾಮರ್ಥ್ಯದೊಂದುನ್ನತಿಯಂ ನುಡಿಯುತ್ತುಂ ಮೃಡಾನಿ ಮಹಾಮಾಯೆ ಸಕಳಜಗಜ್ಜನನಿ ನಿಖಿಳಾರಾಧ್ಯೆ ಅಕಳಂಕಚರಿತ್ರೆ ದಿವ್ಯಜ್ಞಾನಿ ಸರ್ವಬ್ರಹ್ಮಾಂಡಾಭರಣೆ ಹರನ ಮನೋಹರೆ ಸದಾಶಿವನ ಸುಖಮುಖಂ ಮಹಾದೇವನ ಮನೋರಥಂ ಚಲದ ಲಲನೆ ಬಲ್ಪಿನ ಛಾವಕಿ ಏಕನಿಷ್ಠಾನಿಧಿ ಪಶುಪತಿಯ ಪಟ್ಟದ ಮಹಾದೇವಿಯೆನಿಪ್ಪ ಶ್ರೀಪಾರ್ವತೀದೇವಿಯುಗ್ರತಪೋಭರನಿವೇಶನಾಭಿಮುಖಿಯಾಗಿ

ಸರಸಿಜನೇತ್ರೆ ಪುಣ್ಯಮಯಗಾತ್ರೆ ಸದಾಶಿವನಂಗಪಾತ್ರೆಯ ।
ತ್ಯುರುತರಮಾನಿ ನಿರ್ಮಳಭವಾನಿ ನಿರಂತರದಾನಿ ನವ್ಯಸುಂ ॥
ದರವರಮೂರ್ತಿ ಶರ್ವನ ಸುಕೀರ್ತಿ ಮಹೇಶ್ವರನಾರ್ತಿ ಬಂದಳೊ ।
ಪ್ಪಿರೆ ಗಿರಿಜಾತೆ ಲೋಕಚಯಮಾತೆ ಜಗಕ್ಕೆ ವಿನೂತೆಯಬ್ಕಿಱಿಂ ॥ ೮೬

ಪರಮಸ್ವಾಮಿ ಜಟಾಧರಂ ಶಶಿಧರಂ ಗಂಗಾಧರಂ ಕಾಲಸಂ ।
ಹರನಜ್ಞಾನಹರಂ ಪುರತ್ರಯಹರಂ ಸೌಖ್ಯಾಕರಂ ಶಂಭು ಶಂ ॥
ಕರನಾನಂದಕರಂ ಸಮಂತೆನಗೆ ಭಕ್ತಿಜ್ಞಾನವೈರಾಗ್ಯಮಂ ।
ಕರುಣಂಗೆಯ್ಗೊಲವಿಂದೆ ಹಂಪೆಯ ವಿರೂಪಾಕ್ಷಂ ಶಿವಾವಲ್ಲಭಂ ॥ ೮೭

ಪಾ— 1. ಪೇಳಿಂತೇನೆಂದುಗ್ರಂ ಸಪುಗ್ರಂ.

॥ ಗದ್ಯ ॥

ಇದು ಸಮಸ್ತಸುರಾಸುರನಿಕರಮಕುಟಖಚಿತದಿನಕರಕರಾಧಿಕ್ಯಮಾಣಿಕ್ಯ ಪ್ರಭಾಪುಂಜರಂಜಿತಚರಣನೆನಿಪ ಪಂಪಾವಿರೂಪಾಕ್ಷ ಶ್ರೀಪಾದಕಮಲ ಮಕರಂದಮತ್ತಮಧುಕರಾಯಮಾಣ ಸತ್ಕವೀಶ್ವರ ಹಂಪೆಯ ಹರಿಹರದೇವ ವಿರಚಿತಮಪ್ಪ

ಶ್ರೀಗಿರಿಜಾಕಲ್ಯಾಣ ಮಹಾಪ್ರಬಂಧದೊಳ್

ಕಾಮದಹನವರ್ಣನಂ

ಅಷ್ಟಮಾಶ್ವಾಸಂ

॥ ನವಮಾಶ್ವಾಸಂ ॥

—ಪಾರ್ವತೀತಪೋವರ್ಣ್ಣನಂ, ವಿರೂಪಾಕ್ಷಪ್ರತ್ಯಕ್ಷಕರಣವರ್ಣನಂ—

ಕಾರುಣ್ಯಾಕರನಭವಂ ।
ಘೋರತಪೋಮಯನತಿಪ್ರಮೋದಾವೃತವಿ ॥
ಸ್ತಾರಫಲಪ್ರದನೆನುಗೀ ।
ಗೌರಂತಿರೆ ಭಕ್ತಿಯಂ ವಿರೂಪಾಕ್ಷಶಿವಂ ॥ ೧

ಬಂದು ತಪೋನಿವೇಶನಮನೀಕ್ಷಿಸಿ ಬರ್ಪ ನಿದಾಘಕಾಲದೊಳ್ ।
ಸಂದ ನಗಾಗ್ರದಲ್ಲಿ ನಿಲವೇಟ್ಟು [1]ಮೆನಲ್ ಮಿಗೆ[1] ಸಿಂಧು ಮೇನಕಾ॥
ನಂದನೆ ತದ್ವಿಳಾಸಿನಿಯರಾನನಮಂ ನಡೆ ನೋಡೆ ಕಾಣುತಂ ।
ಸೌಂದರಿಯರ್ ಜಟಾರಚನೆಯಂ ತರದಿಂ ಭರದಿಂದೊಡರ್ಚಿದರ್ ॥ ೨

ವಿರಚಿಸಿದರ್ ಜಡೆಗಳನಾ ।
ದರದಿಂ ದರಹಸಿತಬಿಸರುಹಾನನೆಯರ್ ಶಂ ॥
ಕರನರಸಿಗೆ ಗಿರಿಜಾತೆಗೆ ।
ವರಭಸಿತಮನಂಗತತಿಯೊಳುದ್ಧೂಳಿಸಿದರ್ ॥ ೩

ವರಭಸಿತೋದ್ಧೂಳನಮಂ ।
ಗಿರಿಜೆಗೆ ಸುರಸತಿಯರೊಲ್ದು ಮಾಳ್ಪೆಡೆಯೊಳ್ ಕ ॥
ರ್ಪ್ಪುರದ ರಜದಿಂದೆ ಪುಷ್ಪೋ ।
ತ್ಕರಮಾಲೆಯನೊಸೆದು ಪೊರೆನ ತೆಱನಾಯ್ತಾಗಳ್ ॥ ೪

ಅಂತುಮಲ್ಲದೆ

ವಾರಿಜಮುಖಿಯರ್ ಸಖಿಯರ್ ।
ತಾರಾಚಲನಾಥನರಸಿಗನುನಯದಿಂದಂ ॥
ಸಾರಮೃದುತರವಿಮಳವಿ ।
ಸ್ತಾರಿತವಲ್ಕಲಮನೊಪ್ಪಲುಡಿಸುತ್ತಿರ್ದರ್ ॥ ೫

ಅಂತುಮಲ್ಲದೆ

ಪಾ. 1. ಮೆನುತ್ತವೆ

ಸಾಕ್ಷಾಚ್ಛಂಕರವಕ್ತ್ರವಿ ।
ವಕ್ಷಯಸುಖವೀವ ಸುಕೃತಫಲವಿವು ಸತ್ಯಂ ॥
ರಕ್ಷೆಯಿವೆನುತಗಜೆಗೆ ರು ।
ದ್ರಾಕ್ಷಿಗಳಂ ಕೊಡೆ ತೊಡಿಸಿದರ್ ಮಾನಿನಿಯರ್ ॥ ೬

ಇಂತು ಭಕ್ತಿಜ್ಞಾನವೈರಾಗ್ಯಯುಕ್ತಮಪ್ಪ ತಪೋಮಂಡನಂಗಳಂ ಸಂಗಡವಿರ್ದಂಗನೆಯರ್ ಶೃಂಗರಿಸೆ ಮಂಗಳಮುಖಿ ಪೊಂಗಿ ಪೊರೆಯೇಱೆ;

ಸಂದಣಿಸುವ ಜಡೆ ಬೆನ್ನಂ ।
ಮಂದಯಿಸಿ ಮುಸುಂಕುತಿೞಿಯೆ ನೀಲಾಂಬುದಮಂ ॥
ಪಿಂದಿಕ್ಕಿ ಮುಂದೆ ಬೆಳಗುತೆ ।
ನಿಂದೆಳಮಿಂಚಿನವೊಲಗಜೆ ನೆಱೆ ಮಱೆದಿರ್ದಳ್ ॥ ೭

ಆಳವಡೆ ಮುನ್ನಂ ಪತ್ತಿದ ।
ಕಳಂಕಮದು ಪೊರ್ದದಂತೆ ನಭದಿಂದಿೞಿತಂ ॥
ದಿಳೆಯೊಳ್ ಶಂಭುಗೆ ಮಿಗೆ ಶಶಿ ।
ಕಳೆ ತಪವಿರ್ಪಂತೆ ಗಿರಿಜೆ ತಪದೊಳ್ ನಿಂದಳ್ ॥ ೮

ಭಗ್ನಮನಮಲ್ಲದಚಲಿತೆ ।
ಲಗ್ನವ್ರತೆಯಾಗಿ ಶಂಕರಪ್ರೇಮರಸೋ ॥
ನ್ಮಗ್ನಾಂಗಿ ಧೈರ್ಯನಿಧಿ ಪಂ ।
ಚಾಗ್ನಿಯ ನಡುವಗಜೆ ವಿಪುಳತಪದೊಳ್ ನಿಂದಳ್ ॥ ೯

ಅದೆಂತೆಂದೊಡೆ:—

ಮಿಗೆಸುತ್ತಿರ್ದ ದವಾಗ್ನಿ ಕಾಯ್ವ ರವಿಕಾಂತೋಚ್ಚಾಗ್ನಿಯತ್ಯುಷ್ಣಮಂ ।
ನೆಗಪುತ್ತಿರ್ಪ್ಪ ದರಾಗ್ನಿ ಮಿಕ್ಕು ಕವಿತರ್ಪಾದಿತ್ಯತೀವ್ರಾಗ್ನಿ ಬಂ ॥
ದೊಗೆದಾಬೇಸಗೆಯಗ್ನಿಯೆಂದೆನಿಸಿ ತೋಱುತ್ತಿರ್ಪ ಪಂಚಾಗ್ನಿಮ ॥
ಧ್ಯಗತಾಂಘ್ರಿಪ್ರಭೆ ನಿಂದಳುಗ್ರತಪದೊಳ್ ಶರ್ವಾಣಿಯತ್ಯುಗ್ರದಿಂ ॥ ೧೦

ಚಲದಿಂದಂ ನಗರಾಜಪುತ್ರಿ ಹೃದಯಾಬ್ಜಾವಾಸದೊಳ್ ಭಾಪು ನಿ ।
ಶ್ಚಲನಂ ನಿರ್ಮಳನಂ ನಿರಾವರಣನಂ ನಿರ್ಮಾಯನಂ ನಿತ್ಯನಂ ॥
ನಿಲಿಸುತ್ತುನ್ನತವಕ್ತ್ರ ಸನ್ನುತತಪೋವಿಸ್ತಾರ ಮಾರ್ತಂಡಸಂ ।
ಕುಲತೇಜೋನಿಧಿ ನಿಂದಳುಗ್ರತಪದೊಳ್ ಲೋಕಕ್ಕೆ ಗುರ್ವಪ್ಪಿನಂ ॥ ೧೧

ಅಂತುಮಲ್ಲದೆ

ನೆನೆಯುತೆ ದೇವಿ ನಿಷ್ಪ್ರವರನಂ ವರನಂ ವರನಂ ಮಹೇಶನಂ ।
ಘನನಿಟಿಲಾ[1]ಗ್ನಿ[1]ಯಿರ್ಪ ಶಿವನಂ ಶಿವನಂ ಶಿವನಂ ನಗೇಶನಂ ।
ದನೆ ನೆಱೆ ಸಾರದೀಭುವನನಮಂ ವನನಂ ವನಮಂ ಭವಾನಿ ಭೋಂ ।
ಕನೆ ತಪಮಿರ್ದಳುಗ್ರತಪಮಂ ತಪನಂ ತಪನಂ ವಿಭಂಗಿಸಲ್ ॥ ೧೩

ವರನುತಧೈರ್ಯೆ ಪುಣ್ಯಮಯವೀರ್ಯೆ ಸಮುಗ್ರತಪಃಪ್ರಶೌರ್ಯೆ ಶಂ ।
ಕರನ ಸುಖೈಕಭಾರ್ಯೆ ಪರಮಾಗಮಕಾರ್ಯೆ ಜಗದ್ಧಿತಾರ್ಯೆ ವಿ ॥
ಸ್ತರಘನತೂರ್ಯೆ ಶಂಭು[2]ಸುಖ[2]ಪೂರ್ಯೆ ವಧೂಜನವರ್ಯೆ ರುದ್ರಬಂ ।
ಧುರನಿಜದಾರ್ಯೆ ಸೂರ್ಯಶಿಲೆಯಂ ಬಲದಿಂ ಛಲದಿಂದೆ ಮೆಟ್ಟಿದಳ್ ॥

ಇಂತು ಸೋಮಧರನರಸಿ ಹೇಮಕೂಟಾಗ್ರದ ಮೇಲವ್ಯಗ್ರದಿಂದುಗ್ರ ತಪದೊಳ್ ನೆಲಸಿ ನಿಲೆ ತಪಸ್ತೇಜಂ ಮೂಜಗಮಂ ಪರ್ಬಿದಾಗಳ್,

ಮೃಗತತಿ ಸುೞಿಯವು ಮಿಗೆ ಪ ।
ಕ್ಷಿಗಳೆಲ್ತೆಱಗವು ಸಮೀರಣಂ ಸಂಚಲಿಸಂ ॥
ಗಗನದ ಖೇಚರರಾಬ ।
ಟ್ಟೆಗೆ ಸಾರರ್ ನಗಜೆಯತುಳತಪದಾತಪದೊಳ್ ॥ ೧೪

ಆಸುರದ ಗಿರಿಜೆಯುಗ್ರವಿ ।
ಭಾಸುರತಪಕಂಜಿ ನಭದ ತಪನಂ ನಡೆಯಂ ॥
ಶಾಸ್ತ್ರ ಸರಿಸಮಂ ಕರಂ ಬಿ ।
ಟ್ಟೋಸರಿಸಿಯೆ ನಡೆವನೆಂದೊಡೇವಣ್ಣಿಪೆನೋ ॥ ೫

ಅಸಮಾನಮಚಳಮಂಗುತ ।
ವಿಸರಮನೂನಪ್ರಭಂ [3]ಲಸದ್ಘನ[3]ವಿಭವಂ ॥
ಪೆಸರಿಡಬಾರದು ಮಿಗೆ ನಿ ।
ಟ್ಟಿಸಬಾರದು ನೋಡಬಾರದಂಬಿಕೆಯ ತಪಂ ॥ ೧೬

ಎಂಬ ಸಾಮರ್ಥ್ಯಮನೊಳಕೊಂಡು, ಜಡೆಗಳ ಬೆಡಂಗಿ ಭಸಿತದ ಫಾಲಲೋಚನೆ ರುದ್ರಾಕ್ಷಿಯ ಭದ್ರಾಂಗಿ ನಾರ ಸೀರೆಯ ಧೀರೆ, ಗಿರಿಶಿಖರದ

ಪಾ—1. ಷ. 2. ಶುಭ. 3. ಶುಭಂ ಘನ.

ಗರುವೆ, ಉಗ್ರತಪದವ್ಯಗ್ರೆಯೆನಿಪ ಪಾರ್ವತೀದೇವಿ ಪ್ರಚಂಡತರಪ್ರತಾಪ ತಪೋವೇಷದಿಂದಿರೆಯಿಳೆ,

ದೆಸೆಯಂ ಕಾಯ್ಪೇಱಿಸುತ್ತುಂ ತೃಣಕುಲಲತೆಯಂ ಸೀದು ಕರ್ಪೇಱಿ
ಸುತ್ತುಂ । ರಸೆಯಂ ಸಂತಾಪಿಸುತ್ತುಂ ಜಳಭರಿತತಟಾಕಂಗಳಂ ಶೋಷಿ
ಸುತ್ತುಂ ॥ ಸಸಿಯಂ ವೃಕ್ಷಾಳಿಯಂ ಸುಟ್ಟುರಿಪುತೆ ಮೃಗನಂ ಬೇಯಿಸು
ತ್ತದ್ರಿಯಂ ದ । ಳ್ಳಿಸಿ ಸೀಱುತ್ತುಂ ವಿಶಾಳಂ ದವಶಿಖಿಯವೊಲೆಟ್ಟಿತ್ತು
ಮೋಘಂ ನಿದಾಘಂ ॥ ೧೭

ಅಂತು ತೋಱಿದ ನಿದಾಘದಲ್ಲಿ

ಪೊಸಬೇಸಗೆಯೊಳ್ ಮೃಗತತಿ ।
ಯಸುವೆರಸಿರವೇಟ್ಟಿಮೆಂದು ಕರುಣಿಸಿ ಮಿತ್ರಂ ॥
ಬಿಸಿಲಂ ಹಿಱಿಯಲ್ ಬೆನ್ನೀ ।
ರೊಸರ್ವಂತಿರ್ದುದು ಮರೀಚಿಕಾಜಲಮೆತ್ತಂ ॥ ೧೮

ತರದಿಂದಂ ತೆರೆಮುಕುಗುವ ।
ಮರೀಚಿಕಾಜಲಮನಿಳೆಯ ಜಲವೆಂದು ಕಱಂ ॥
ಹರಿಣಂಗಳ್ ಪರಿತಂದಾ ।
ತುರಿಸುತ್ತುಂ ಬಿಸಿಲ ಬಯಲ ನೀಂಟಿ ಬಱಲ್ದಂ ॥ ೧೯

ವಹ್ನಿ ಧರೆಯೊಳಗೆ ತೀವಿದ ।
ಚಿಹ್ನಮಿದೆಂಬಂತೆ ಬಿಸಿಲ ಬೇಗೆ ಕರಂ ಮ ॥
ಧ್ಯಾಹ್ನದೊಳಳುರ್ದೊಪ್ಪೆ ಮೃಗತತಿ ।
ಜಾಹ್ನವಿಯೊಳ್ ಪುಗಲೆ ಬಯಸಿದುವು ಬೇಸಗೆಯೊಳ್ ॥ ೨೦

ಆಸಮಯದೊಳ್

ಘರಿಘರಿಲೆಂದು ಸೀದುವು ವಿಹಂಗಕುಲಂ ಕೆರೆಬಾವಿಬೆಂಚೆಗಳ್ ।
ಪುರಿದರಳಿಱ್ದುವೀಮನುಜರಾತಪತಾಪದೊಳಳ್ಕಿ ಬಳ್ಕಿದರ್ ॥
ಕರಿಮುರಿಪ್ರೋಯ್ತರಣ್ಯಮುಱಿ ಬೆಂದು ಮೃಗಾವಳಿ ಪೊಂದಿದತ್ತು ನಿಂ ।
ದುರಿದುವು ಬೆಟ್ಟಮಿಂಗಿದುವು ವಾರಿಧಿ ಕಾಯ್ದುದು ಭೂರಿಭೂತಳಂ ॥ ೨೧

ಮೃಗತತಿಗಳ್ ಕರಿಮುರಿ ಕ ।
ಕ್ಕ್ರಗೆದ ಮರಂ ಘರಿಘರಿಲ್ ಗಜಂ ಚಿಮಿಚಿಮಿಯೆಂ ॥

ದಗನಿಕರಂ ಛಿಳಛಿಳಿಲೆನೆ ।
ಮಿಗೆ ಸೀದುವು ಬೆಂದುವುರಿದುಪೊತೆದುವು ಬಿಸಿಲೊಳ್ ॥ ೨೨
ಮರದಡಿಯೊಳ್ ಕಾನನದೊಳ್ ।
ಗಿರಿತಟದೊಳ್ ಬಟ್ಟಬಯಲೊಳಂಬರತಳದೊಳ್ ॥
ಕರಿಯು ಬಿಸಿಲುರಿಯು ಬಿಸಿಲ ।
ಚ್ಚರಿಯಬಿಸಿಲ್ ಪಿರಿಯ ಬಿಸಿಲಖಂಡಿತದ ಬಿಸಿಲ್ ॥ ೨೩

ಮತ್ತಮದಲ್ಲದೆ

ನಡೆಯಲ್ಕೊಂದಡಿಯಿಟ್ಟು ಕಾಯ್ದ ನೆಲನಂ ಕಾಲ್ಮುಟ್ಟೆ ಚುಯ್ಯೆಂದು ಬೆಂ । ದೊಡೆ ಮತ್ತೊಂದಡಿಯೆತ್ತಲಾಱದಟಲಿಂ ಕಣ್ಮುಚ್ಚಿ ಹಸ್ತಾಗ್ರವಂ ॥ ಕಡೆವಾಯೊಳ್ ಸೆಱೆಯಿಟ್ಟು ನೆತ್ತಿ ಬಿರಿಯುತ್ತುಂ ಮುತ್ತುಗಳ್ ಸುತ್ತಲುಂ । ಸಿಡಿಯುತ್ತಿರ್ಪಿನಮಿರ್ದುದೊಂದತಿ ಮದೇಭಂ ಭೀಷ್ಮದೊಳ್ ಗ್ರೀಷ್ಮದೊಳ್ ॥ ೨೪

ಅಂತುಮಲ್ಲದೆ ಮತ್ತಮೊಂದೆಡೆಯೊಳ್

ಎಲೆಲೆಲೆ ನೋಡುನೋಡು ಕೆಲನುಂ ಬಲನುಂ ನೆಲನುಂ ಗವಾಗ್ನಿ ಸುಟ್ಟೊಲೆಯುವೊಲಾಗೆ ಮೆಟ್ಟದಡಿಯುತ್ತಿದ ಕಾಲುಱೆ ಸೀಯ್ಯೆ ನಿಂದಿರಲ್ ॥
ಚಲಿಯಿಸಲಾಱದಾತಪದೆ [1]ಹಸ್ತಮನೆತ್ತುತೆ ಛೀಳಡುತ್ತೆ ತಾ ।
ನೊಲೆದುದುಚಕ್ಕೀಷ್ಟಗುಂದಿದುದುಜೋಲ್ದುದುಬಿಟ್ಟುದು ಬೆಂದುದೊಂದಿಭಂ॥

ಮತ್ತಮದಲ್ಲದೆ

ಜಳಜಸಖನನಿಲಸಖನೆಂ ।
ದಿಳೆಯೊಳ್ ರಸವೆಸರನಾನದಿರ್ದೊಡೆ ಸೂರ್ಯ ॥
ನಳರೋವೊ ಸಂತಮಿರ್ಪರೆ ।
ಘಳಿಲನೆ ನಿಂದುರಿದು ಹೋಗರೇ ಬೇಸಗೆಯೊಳ್ ॥ ೨೬
ತಪನನ ಮೆಯ್ಯೊಳ್ ಪುಗುಳ್ಗಳ ।
ಳುಪಮಿಸೆ ಪಾವಕನ ತನುವಿನೊಳ್ ಸ್ಫೋಟಕವಾ ॥
ತಪದ ಕಡುಪಿಂದೆ ನೆಗೆತಂ ।
ದಪುದೆನೆ ಬೇಸಗೆಯ ಬಿಸಿಲನದನೇನೆಂಬೆಂ ॥ ೨೭

ಪಾ. 1. ಹಸ್ತಮನೆತ್ತಿಬಲಿಲ್ದಳೆಡು । ತ್ತೊಲೆ

ಮತ್ತಮಾನಿದಾಘಂ—ಕಡುಗಾಯ್ವ ತೀವ್ರಕರಕರಪ್ರಕರಮುಂ ಚುಱಿಚುಱಿನೆ ಸುಡೆ ಕಾಯ್ದುರ್ಕಿ ಬಿಸಿಯು ತೆರೆ ತಾಮುರ್ಟ್ಟೆ ನೊರೆಗಟ್ಟೆ ಕುಕ್ಕುಳಿಂಗುದಿವ ಬಿಸುನೀರೊಳ್ ನಿಲಲಾಱದೆ ನೆಱೆಮಱುಗಿ ಪೊಱಪೊಣ್ಮಿ ಬೆನಬೆದನೆ ಬೆಂದು ಬೆಂಡೆೞ್ದು ಬಱಬಱಂಬತ್ತಿ ಹೊತ್ತಿ ಹೊಗೆದು ಜೀವನವಿಂಗೆ ಜೀವನವಿಂಗುವಂತಾಗೆ ಕಿಱುವೆಂಚೆಯೊಳ್ ಕೋಟಲೆಗೊಳುತ್ತಿರ್ಪ ಪಾಠೀನಕುಲದಿಂ; ಮತ್ತಂ ಮಸುಗುವ ತಪನನ ಬಿಸಿಯಬಿಂಬದಿಂದೊಗೆತರ್ಪ ಬಿಸಿಲ ಬೆಂಕಿಯಿಂ ಹೊಗೆದೆಯ್ದು ತರುನಿಕರವುರಿದು ಕರಿಗೊಳ್ಳಯಂತೆ ಕಾಯ್ಪೇಱೆ ಕಬೊರ್ಗೆಯುಂ ನೆಗಪುವ ಕೊಂಬುಗಳ ಕಡುಬಿಸುಪ್ಪ ಕಾಲ್ಗಳಂ ಸುಡೆ ಬಳ್ಳಿಗೊಂಡ ಬೇಗೆಯಿಂ ಕುಳ್ಳಿರಲಾಱದೆ ಮಿಱಿನೆಗೆದು ಪಾಱುವಾಗಳ್ ಬಿಸಿಲುರಿ ಪೊಡೆದು ಪಕ್ಕಂ ಸೀದು ನೆಲಕ್ಕೆ ಬಿೞ್ದು ಕಣ್ಮುಚ್ಚಿ ಹಮ್ಮೈಸಿ ಹರಣಂಗಳೆದು ಮಱಲೊಳ್ ಪುರಿದಂತಾಗೆ ಪರೆದಿರ್ದ ಬಹುವಿಧದ ವಿಹಂಗಾವಳಿಯಿಂ; ಮತ್ತಂ ತಪನಪ್ರದ್ಯೋತಹತಿಯಿಂ ಬೆನ್ನೊಡೆದು ಬಾಯಾಱಿ ತಾಳಗೆ ಬತ್ತಿ ನೆತ್ತಿ ಹೊತ್ತಿ ಕಣ್ಣೊಳ್ ನೆತ್ತರೆಚ್ಚಪಾಯೆ ಪರಿನರಿದು ಮರೀಚಿಕಾಜಲದೊಳ್ ಮೊಗವಿಟ್ಟು ಬಗೆಗೆಟ್ಟು ಮಱವಟ್ಟು ಧರೆಯೊಳ್ ಕೆಡದಿರ್ಪ ನಾನಾಮೃಗನಿಕಾಯದಿಂ; ಮತ್ತಂ ಮಾರ್ತಂಡರೋಚಿ ಸುತ್ತಿ ಮುತ್ತೆ ಕುಂಭಸ್ಥಳಂ ಹೊತ್ತಿ ಹೊಗೆದು ಬಿರಿದ ನೆತ್ತಿಯಿಂ ಮುತ್ತೊಡೆದು ಸಿಡಿದು ಪಾಱೆ ಬೆನ್ನೊಣಗಿ ಚರ್ಮಂ ಹೊಪ್ಪಳಿಸಿ ನೀಳ್ದು ಬಿಡೆ ನಾಡೆ ನೋಯಿಸಿ ನೀರಡಿಕೆ ನೆರೆದೊಳಗುದೋಱೆ ಬಾಯೊಳ್ ಬರಿಕೆಯ್ಯನಿಟ್ಟೊಡಲೊಳಗೆ ಪುಡಿಹಾಱೆ ಬೆನ್ದ ಪುಷ್ಕರಮಂ ಭೋಂಕೆನೆ ತೆಗೆದು ಕಾಯ್ಪ ಕೋಡೊಳ್ ಪೊಱಲಣ್ಮದೆ ಮಿಱಿದ ದರಿಯ ತಟದೊಳ್ ನೀಡಿ ಕೆಡಪಿ ಕಣ್ಮುಚ್ಚಿ ನೆಮ್ಮಿ ಹಮ್ಮದಂಬೋಗಿ ಕಿಡಿಸೂಸಿ ಸುಯ್ದು ಗಾಸಿಯಾಗಿ ಮೆದೆಗೆಡೆದು ಮದವೞಿದಿರ್ಪ ಮಾತಂಗವ್ರಾತದಿಂ; ಮತ್ತಂ ಶತಧಾರಾಸಹಸ್ರದಂತೆ ಸಹಸ್ರಕರಮರೀಚಿಗಳುಱದೆಱಗಿ ನಟ್ಟು ಕಾಯೆ ಗಱಿಗಱಿನರಳ್ದು ಪಱಿಪಱಿನೆ ಸೀೞ್ದು ಸಿಡಿದೊಡೆದು ಹಿಗ್ಗಿ ತಗ್ಗಿ ಕುಗ್ಗಿ ಕುಪ್ಪಳಿಸಿರ್ಪ ಪರ್ವತಪ್ರತಾನದಿಂದತ್ಯುಗ್ರತೆಯುನತಿಪ್ರಚಂಡತೆಯುನತ್ಯುಷ್ಣತೆಯುನತ್ಯಾಭೀಳತೆಯುನತಿಪ್ರತಾಪಮನುಗುಱುತ್ತಿರ್ದುದು.

ಅಂತುಮಲ್ಲದೆಯುಂ,

ಪಸಿವಿಂ ದಾವಾನಳಂ ಸುಟ್ಟುರಿಪೆ ತರುಗಿರಿವ್ರಾತಮಿಲ್ಲಾದುದೋ ನಾ ।
ಲ್ದೆಸೆಯೊಳ್ ಸೂರ್ಯಂ ಕ್ಷುಧಾಪೀಡಿತನಱಸುತೆ ಕೆಯ್ನೀಡೆ ನಿಸ್ಸಾರಕಾಷ್ಠ
ಪ್ರಸರಂ ಕಾಱಿಬ್ಬಿದ್ದುದೋನಿಂದನುಪಮತೃಷಿತಂ ವಾಡಬಂ ಪೀಱಿ ತಾಂ ಶೋ
ಷಿಸಿತೋ ವಾರಾಶಿಯೆಂಬುಷ್ಣಮನೊದವಿಸಿತತ್ಯುಷ್ಣಯೋಗಂ ನಿದಾಘಂ

ಆನಿದಾಘದಲ್ಲಿ

ರವಿಕಾಂತೋಗ್ರಸ್ಫುಲಿಂಗಪ್ರತತಿ ನೆರೆದು ಪಾದಂಗಳೊಳ್ ಬೀೞ್ವಡಂ ಪೊ।
ಣ್ಮುವ ದಾವಪ್ರೋದ್ಭವಪ್ರಸ್ಫುರಿತವಿಲಸದುಷ್ಣಂ ತನೂಭಾಗಮಂ ಪ ॥
ತ್ತುವೊಡಂ[1]ತದ್ದೇಹದಗ್ನಿಪ್ರಭೆಯೊದವುವೊಡಂ ಸೂರ್ಯತಿಗ್ಮಾಂಶುಗಳ್ ತಾ
ಗುವೊಡಂ ಮಾಧ್ಯಂ ನಿದಾಘಂ ಕವಿದೊಡಮನಿತಕ್ಕಳ್ಕ[2]ದಂತಾರ್ಯೆ ನಿಂದಳ್

ಅಂತು ನಿಂದು

ದಶಭುಜನ ಮನೋವಲ್ಲಭೆ ।
ದಿಶಾವಳೀಭರಿತಕೀರ್ತಿಯುತೆ ಘೋರತಪೋ ॥
ವಶೆ ನೆರೆ ಗಂಗಾಧರನಂ ।
ಶಶಿಧರನಂ ನೆನೆದು ಕಳಿದಳಾಬೇಸಗೆಯುಂ ॥ ೩೦

ಆಸಮಯದೊಳ್ ಸಕಳಕಳಾಕೋವಿದೆಯರಪ್ಪ ಜಯೆವಿಜಯೆಗಳ್ ಮೆಯ್ಯಿಕ್ಕಿ ಕೆಯ್ಯಂ ಮುಗಿದು

[3]ಮದವುಡುಗಿತ್ತು[3] ಬೇಸಗೆ ಕರಂ ನಸುದೋಱಿದುವಲ್ಲಿಗಲ್ಲಿಗಂ ।
ಬುದನಿಕರಂ ಸುರುಳ್ದುದು ಬಿಸಿಲ್ ನೆಗದತ್ತು ತಟಲ್ಲತಾಂಕುರಂ ॥
ಬೆದಱಿದುವಂಚೆಯಾಡಲಡಿಯಿಟ್ಟುವು ಸೋಗೆಗಳೆಯ್ದೆ ಪಲ್ಲವಂ ।
ಪುದಿದ ಕದಂಬದೊಳ್ ಮುಗಿಲನೆಬ್ಬಿಸಲಿರ್ದುದು ಪಶ್ಚಿಮಾನಿಳಂ ॥ ೩೧

ಅನಂತರಮಾಗಳ್

ಕಡವಿನ ಸೊವಡಿಂದೊಂದೆರ ।
ಡಡಿಯಿಡುತಿರ್ದಪುದು ಗಾಳಿ ನಲಿದು ನವಿಲ್ಗಳ್ ॥
ನಡೆನಟಣೆಗೊಳುತಿರ್ದಪು ।
ವೆಡೆಯಱಸುತ್ತಿರ್ದುವಂಚೆ ಸುೞಿದುವು ಮುಗಿಲ್ಗಳ್ ॥ ೩೨

ಪಾ.— 1. ತಜ್ಜಠರಾಗ್ನಿಪರ್ವಿದೊಡಲಂ ಸೂರ್ಯಾಂಶುಗಳ್. 2. ಳ್ಕದಂದಾರ್ಯೆ. 3. ಮದವೞಿದತ್ತು.

ಎಂದು ಬಿನ್ನೈಸುತ್ತುಂ ಮತ್ತಮಿಂತೆಂದರ್:—

ಪೋದುದು ಬೇಸಗೆ ಕಾರ್ ಮೊಗ ।
ಮಾದುದು ತರುತಳದ ನೆಬಿಲ ತಣ್ಪಿನೊಳಿರ್ದ ॥
ತ್ಯಾದರದಿಂ ಮಾಳ್ಪುದು ಪು ।
ಣ್ಯೋ[1]ದಯದಿಂ ಕಪಟರಹಿತತಪಮಂ[1] ಗಿರಿಜೇ ॥ ೩೩

ಎನೆ ಕೇಳ್ದು ಮನಂಗೊಂಡ ।
ತ್ಯನುಪಮಶೈವಪ್ರತಾಪತೇಜೋನಿಧಿ ಭೋಂ ॥
ಕೆನೆ ಗಿರಿಸುತೆ ನಡೆತಂದಳ್ ।
ವಿನಯವಿಭೂಷಣೆ ವಿಲಾಸವಿಭ್ರಮದಿಂದಂ ॥ ೩೪

ಭರದಿಂಬೆಯ್ತಂದು ಭರ್ಗಪ್ರಿಯೆ ಭವನ ಮನೋಮೂರ್ತಿ [2]ಭಾಳಾಕ್ಷಭ
ಕ್ತಾ । ತುರೆ[2] ಮುಕ್ತಿಮಾತೆ ಭೂತೇಶನ ನಿಖಿಳಸುಖಾಕಾರೆ ಶರ್ವಾಣಿ
ಸರ್ವೇ ॥ ಶ್ವರಿಯುರ್ವೀಮಾತೆ ಮೂಲೋಕದ ಸುಕೃತಫಲಂ ಸತ್ಯವಿಸ್ತಾ
ರೆ ಯುದ್ಯ । ದ್ಗಿರಿರಾಜಾಪತ್ಯೆ ನಿಂದಳ್ ಘನವಟವಿಟಪಿಚ್ಛಾಯೆಯೊಳ್
ಪ್ರೀತಿಯಿಂದಂ ॥ 123783 ೩೫

ಇಂತಘಟಿತಘಟಿತೆ ಪಟುತರಚಿತ್ತೆ ನಿಟಿಲಲೋಚನೆ ವಟವೃಕ್ಷದ ಕೆಳಗೆ ವಾರಿಕುಲಕ್ಕೆ ಸೋಲದೆ ಧೀರೋದಾತ್ತೆ ಘೋರತಪದೊಳ್ ನಿಂದಳನ್ನೆಗ ಮಿತ್ತಲ್

ನಲಿದುದು ಸೋಗೆ ನಣ್ಪನೆಡೆಗೊಂಡುದು ಚಾದಗೆವಕ್ಕಿ ಮಿಕ್ಕು ಪೂ ।
ತಲರ್ದುದು ಸೊಂಪಿನಿಂ ಕಡವು ತಣ್ಪನೆ [3]ಬೀಱಿದು[3]ವೆಯ್ದೆ ಬೆಟ್ಟು ಬಂ ॥
ದಲೆದುದು ಪಶ್ಚಿಮಾನಿಳನಮರ್ಚಿತು ಕೇತಕಿ ಪೂದೊಡಂಬೆಯಂ ।
ಬಿಲದೊಳ ಪೊಕ್ಕುವಂಚೆ ಮುಗಿಲೊಡ್ಡಣೆಯೊಡ್ಡಿತು ಕಾರ ಕೊರ್ವಿನೊಳ್॥

ಅಂತುಮಲ್ಲದೆಯುಂ

ಪರಿಸಂ ಮಿಗೆ ನವಿಲಾಡು ।
ತ್ತಿರೆ ಚಾದಗೆಯುಬ್ಬಿ ನಲಿಯೆ ನಾಲ್ಕುಂ [4]ದೆಸೆಯುಂ[4] ॥

ಪಾ— 1. ದಯೆ ನಿಷ್ಕಪಟವಿಪುಲತಪಮಂ, 2. ಭಾಳಾಕ್ಷ ಭಕ್ತಾತುರೆ.
3. ಪೇಱ್. 4. ದೆಸೆಯೊಳ್.

ಕರಿಯಂತಿರೆ ಗಿರಿಯಂತಿರೆ ।
ಧರೆಯಂತಿರೆ [1]ನೆಗೆದುದ[1]ಭ್ರಕುಳಮಂಬರದೊಳ್ ॥ ೩೭
ತರದಿಂ ಶಿಖಿ ಜಾದಗೆ ಮಧು ।
ಕರಮಂಜೆ ಪಯೋಧರಂಗಳನುನಯದಿಂದಂ ॥
ಕರೆದುವು ನೆರೆದುವು ಮೊರೆದುವು ।
ಪರೆದುವು ತೊಱೆದುವು ನಿರಂತರಂ ಕಾರ್ಮುಗದೊಳ್ ॥ ೩೮

ಮತ್ತಮದಲ್ಲದೆಯುಂ

ಹರಿಸಂ ಮಿಕ್ಕಭ್ರಮಾತಂಗಮನತಿಭರದಿಂ ನೋಡಲೆಂದೆಟ್ಟಿದವೋ ದಿ ।
ಕ್ಕರಿಗಳ್ ದೇವೇಂದ್ರನೊಳ್ ಕಾದುವ ಕಡುಮುಳಿಸಿಂದೆಟ್ಟಿದವೋ ಗೋತ್ರ
ಶೈಳೋ ॥ ತ್ಕರಮೀಶಂಗಂ ಹಿರಣ್ಯಾಕ್ಷನಿನೊಗೆದ ಮನೋದುಃಖಮಂ
ದೂಱಲೆಂ ದಾ । ತುರದಿಂದೆಟ್ಟಿತ್ತೊ ಧಾತ್ರೀತಳಮೆನೆ ನಭದೊಳ್ ತೀವಿತ
ಭ್ರಪ್ರತಾನಂ ॥ ೩೯

ಆಸಮಯದೊಳ್

ತವೆ ಬಳೆದು ಪರ್ಬಿತಾಕಾ ।
ಶವನೇಱಿದ ಮುಗಿಲ ನೀರ ಸೆಱೆಯಂ ಮಿಗೆ ದು ॥
ಶ್ಚ್ಯವನಂ ಬಿಡಿಸುವ ಘನಶ ।
ಸ್ತ್ರವಣಂ ಹೊಳೆವಂತೆ ಮಿಂಚು ಮಿಂಚಿತ್ತಾಗಳ್ ॥ ೪೦
ಘುಬಿಘುಬಿ ಘಟಿಘಟಿ ಘುಡುಘುಡು।
ಘುಬಿ ಛಿಟಿಛಿಟಿ ಘೂರ್ಘುಟಿಂ ಥಡಂ ಧಾಂಧಡ ಛಿಂ ॥
ಛಿಟೀಛಿಟೀ ಭಿಂಭಿಂ ಘಡ ಘಡ ।
ಘಟಿಘಡ ಘಡಿಲೆಂದು ಮೊಟಗು ಮೊಟಗಿತು ನಭದೊಳ್ ॥ ೪೧
ಆಮಿಂಚಿನ ಮೊಳಗಿನೊಳು ।
ದ್ದಾಮಾಂಬುದನಿಕರದಿಂದೆ ರಸೆ ದೆಸೆ ಗಗನಂ ॥
ತಾನುಱಿಯಲ್ಬಾರದವೋ ।
ಲೇಮಾತೋ ಕಱಿದುದಿಳೆಯ ಹರ್ಷಂ ವರ್ಷಂ ॥ ೪೨

ಪಾ— 1. ನೆರೆದು.

ಮತ್ತಮದಲ್ಲದೆಯುಂ
ಮಿಗೆ ಕಾರರಸಂ ಪಗೆ ವೇ ।
ಸಗೆಯುಂ ಸುರಧನುವಿನಿಂದೆ ಮುಗಿಲಂಬುಗಳಿಂ ॥
ತೆಗೆದಿಸೆ ಬಹುವಿಧಶರವನ ।
ನಿಗೆ ಬಿಟ್ಟಿಂತಿರ್ದುವಂಬುಧಾರಾನೀಕಂ ॥ ೪೩
ಬೆಂಗೊಟ್ಟೋಡುವ ಬೇಸಗೆ ।
ಯುಂ ಗರ್ದಿಸುವಬ್ದಸಮಯನೃಪಘನಮದವಾ ॥
ತಂಗಕುಲದಾನಧಾರಾ ।
ಭಂಗಿಯನೊಡರಿಸಿತು ಕಟ್ಟ ಕಱಿವಾಸಾರಂ ॥ ೪೪
ಗಗನದಿನೆಱಗಿದ ಮಱೆ ನೀ ।
ನಗಲದೆ ಸಲಪೆಂದು ವರ್ಷನರಪಂಗಿಳೆಯುಂ ॥
ಮುಗಿಲಗಲದ ಹಸ್ತದಿನಾ ।
ಗಗನಾಂಗನೆ ಧಾರೆಯೆಱೆದ ತೆಱನಾಯ್ತಾಗಳ್ ॥ ೪೫
ಘನಸಮಯನೃಪಾಲಕನೊಳ್ ।
ಘನಪಾಣಿಗ್ರಹಣವಾದ ಭೂವನಿತೆಗೆ ಮು ॥
ತ್ತಿನ ಸೇಸೆಗಳಂ ಗಗನಾಂ ।
ಗನೆ ಸೂಸಿದಳೆನಿಸೆ ಬಿಟ್ಟುವಾಲಿವರಲ್ಗಳ್ ॥ ೪೬

ಅಂತು ಬರ್ಪ ಕಾರ ಮಱೆಯುಂ ಕಂಡು ಮನಂಗೊಂಡು

ಶುಕನಿಕರಂಗಳುಗ್ಗಡಿಸೆ ಕೋಕಿಳನಾದದ ತಾಳವೃತ್ತ್ಮೆ ಸ ೨।
ಖ್ಯಕರಕದಂಬಪುಷ್ಪರಸದಿಂ ತಣಿದೊಯ್ಯನೆ ಪಾಡೆ ಷಟ್ಪದಂ ॥
ವಿಕಸಿತಪಕ್ಷನೂರ್ಧ್ವಗಳನುನ್ಮುಖನುಚ್ಚಳಿತಸ್ವನಂ ಬಳಾ ।
ಹಕನಿನದಕ್ಕೆ ಪೆಕ್ಕಣಮನಾಡಿದುದೊಂದು ಮಯೂರನಬ್ಬಿಯಿಂ ॥ ೪೭

ಮತ್ತಮನಂತರದಲ್ಲಿ

ನೆಗೆದುದು ಸಾರ್ದು ಪ್ರೋರ್ದಿತನುರಿತ್ತು ತುಳಂಕಿತು ಬೆಂಗೆ ನೀರ ಧಾ ।
ರೆಗ ಸಿಱಿ ನಾಂಟಲೀಂಟಿದುದು ನೇಹದೆ ನೋಡಿತುದಂಚಚಂಚುವಿಂ ॥
ದುಗಿದುದು ಪಕ್ಷದಿಂ ಪೊಡೆದುದಂಘ್ರಿಗಳಿಂದೊದೆದುತ್ತು ನೆತ್ತಿಯಿಂ ।
ನೆಗಪಿದುದಪ್ಪಿತಳ್ಕರಿದುದಂಬುಕಣಂಗಳನೊಂದು ಚಾತಕಂ ॥

ಇಂತು ಶಿಖಿಪ್ರಕರವುಂ ಚಾತಕಕುಲವುಂ— ನಲಿಯುತ್ತುಮಿರೆಯಿರೆ,

ಧಾರೆಗಳವನಿಯುನೊಳ್ಪೊ ।
ಕ್ಕೋರಂತುಚ್ಚಳಿಸಿ ಮಿಱುತಿರೆ ನಭದಿಂ ಭೋ ॥
ರ್ಘೋರಂದಿರುಳುಂ ಪಗಲುಂ ।
ಜೀರೆನುತುಂ ತೆಱಹುಗುಡದೆ ಕಱೆದುವು ಮೞೆಗಳ್ ॥ ೪೯

ಬತ್ತರಿಸುತ್ತಂಬರವಂ ।
ಮುತ್ತುತ್ತುಂ ದಿಗ್ವಿತಾನಮಂ ಧರೆಯೊಳ್ ತೀ ॥
ವ್ರುತ್ತುಂ ಕತ್ತಲಿಸುತ್ತುಂ ।
ಸುತ್ತುಂ ಜಿನುಗಿದುವು ಸೋನೆಯಿರುಳುಂ ಪಗಲುಂ ॥ ೫೦

ಅಂತುಮಲ್ಲದೆ

ಸರಿಗಳ ನೆರೆದೋಂಟಂ ಬ ।
ಲ್ಸರಿಗಳ [1]ಭರಿತಂ[1] ಸರಿಗಳ ಕಲ್ಲೋಲಕುಲಂ ॥
ಸರಿಗಳ ಘೂರ್ಣಿತದಿಂದಂ ।
ಶರನಿಧಿ ಕವಿದಂತೆ ಕಱೆದುದಿಳೆಯೊಳ್ ವರ್ಷಂ ॥ ೫೧

ಮೇಘಂಗಳ್ ಪರಿಗತವಿನಿ ।
ದಾಘಂಗಳ್ ಕಮಲವಿಮಳಜೀವನಭರಿತಾ ॥
ಮೋಘಂಗಳ್ ಶಿಖಿನಿಕರ ।
ಶ್ಲಾಘಂಗಳ್ ಕಱೆದು[2]ವಮಳ[2]ಶೀತಳಜಳಮಂ ॥

ನೋಡುತ್ತಿರೆ ಸಕಳಜನಂ ।
ಕೊಡುತ್ತಿರೆ ಚಾತಕಂಗಳಳಿ ಜಳದೊಳ್ ತೇಂ ॥
ಕಾಡುತ್ತಿರೆ ಶಿಖಿಕುಲಮು ।
ಬ್ಬಾಡುತ್ತಿರೆ ತುಱುಗಿ ಕಱೆದು ಮೊಱೆದುವು ಮೇಘಂ ॥ ೫೩

ವೃಷ್ಟಿಗಳವು ಶಿಖಿಚಾತಕ ।
ತುಷ್ಟಿಗಳವು ಘನತಟಾಕವಿಮಳನದೀಸಂ ॥
ಪುಷ್ಟಿಗಳವು ಜೀವಕ್ಕಳ ।
ದೃಷ್ಟಿಗಳವು ಬಿಡದೆ ಕಱೆದುವವನೀತಳದೊಳ್ ॥ ೫೪

ಪಾ— 1. ಭರತ. 2. ವತುಳ.

ಮತ್ತಮಲ್ಲಿ

ಗಗನಂ ಕೆಟ್ಟುದು ಚಂದ್ರಸೂರ್ಯರಱಿದರ್ ದಿಕ್ಚಕ್ರಮಿಲ್ಲಾಯ್ತು ಬ ।
ಟ್ಟೆಗಳಸ್ಪಷ್ಟಮವಾದುವಾತ್ತಜಳದೊಳ್ ಪೂೞ್ದಿತ್ತು ಧಾತ್ರೀತಳಂ ॥
ಖಗಸಂಚಾರತೆ ಶೂನ್ಯಮಾದುದು ನಿರುದ್ಯೋಗಕ್ಕೆ ಪಕ್ಕಾದುದೀ ।
ಜಗಮೊಂದೆಂಬಿನಮೆಯ್ದೆ ಕಟ್ಟೆ ಕಱೆದತ್ತಾಸಾರಮಾಲೋಕದೊಳ್ ॥ ೫೫

ಸುರಿದುದು ಮೞೆ ತಣಿಯಿತ್ತಿಳೆ ।
ನೆರೆದುದು ಬೆಳೆ ಕಾನನಂಗಳೊಳ್ ನೆಱೆ ವಿಸಟಂ ॥
ಬರಿದುವು ಹೊೞೆ ನಾಂದುವು ಶಿಲೆ ।
ಧರಣಿಗೆ ಮೊಳೆ ಪಿಡಿದ ತೞೆಗಳಾದುವು ಮೞೆಯೊಳ್ ॥ ೫೬

ಇಂತಪ್ಪ ಮೞೆಗಳೊಳಗೆ

ಮೞೆ ಮಾಣ್ದೊಡೆ ಹನಿ ಮಾಣದ ।
ದಳಫಳಯುತವಿಟಪಭರಿತವಟವಿಟಪಿಯು ತ ॥
ಣ್ಣೆಲಲ್ಲಿಂ ತಳರದೆ ಕೋಂ ।
ಮಳೆ ಮೞೆಯೊಳಗಗಜೆ ನಲಿದು ಸಲೆ ನಿಂದಿರ್ದಳ್ ॥ ೫೭

ಆಸಮಯದೊಳ್

ಅಭವಂಗಿಳೆಯೊಳ್ ತಪಮಿ ।
ರ್ಪ ಭವಾನಿಗೆ ಬಂದು ಕಲ್ಪತರು ಫಳರಸದಿಂ ॥
ದಭಿಷೇಕಂಮಾಡುವನತಿ ।
ವಿಭವದವೋಲೆಸೆದುದಾಲಮರನಾಮೞೆಯೊಳ್ ॥ ೫೮

ಇಂತು ನೆಗೆದ ಮುಗಿಲ್ಗಳ ಭೀಕರಾಕಾರಕ್ಕಂ, ಮಿಂಚುಗಳ ಸಂಚಳತೆಗಂ, ಮೊೞಗಿನ ಮಹಾಧ್ವನಿಗಂ, ಸಿಡಿಲ ಸಡಗರಕ್ಕಂ, ಬಲ್ಸರಿಗಳ ಸಂಭ್ರಮಕ್ಕಂ, ಬಿಱುವೞೆಯ ಬಳ್ವಿಯಿಲ್ಗಂ, ಪೆರ್ಮೞೆಯ ಧಾರೆಗಂ, ಆಲಿಕಲ್ಲ ಕರ್ಕಶಕ್ಕಂ, ಇಂದ್ರಗೋಪದ ಸಂದಣಿಗಂ, ಶೀಕರದ ಶೀತಕ್ಕಂ, ತುಂತುಱ ತಿಂತಿಣಿಗಂ, ಸೋನೆಗಳ ಜಿನುಂಗಿಗಂ, ಬಿಱುಗಾಳಿಯ ಗಾಸಿಗಂ, ಕಾಲ್ಪೊನಲ ಕಡುಪಿಂಗಂ, ಪೆರ್ಮೊಡವ ಕಟ್ಟಲೆಗಂ, ಕಾರಿರುಳ ಭಯಾನಕಕ್ಕಂ, ಕ್ರೂರಮೃಗದ ರೌದ್ರಕ್ಕಂ, ಉಗ್ರಸರ್ಪಂಗಳದ್ಭುತಕ್ಕಂ, ಭೀಮಾರದಾಭೀಳತೆಗಂ ಕೋಡದೆ ಕೊಂಕದೆ ಬಾಡದೆ ಬಳ್ಕದೆ ಸೆಡೆಯದೆ

ಸೋಡುಗೊಳ್ಳದೆ ಬೆಚ್ಚದೆ ಬೆಗಱದೆ ಬಳಂಗೆಡದೆ ಮನಂಗುಂದದೆ ಕೆಲನಂ ಸಾರದೆ ಸಹಾಯಮಂ ಪಾಱದೆ ಮಹಾವಟವೃಕ್ಷದ ಕೆಳಗೆ ವಿಪುಳತಪದಿಂದೆ ಅಪರ್ಣೆಯೊಪ್ಪುತ್ತುಮಿರೆಯಿರೆ,

ಜಯೆವಿಜಯೆಗಳಱಿದು ಶಿವ ।
ಪ್ರಿಯೆಯುಗ್ರತಪಃಪ್ರಭಾವಭಾಸುರೆ ಪುಣ್ಯೇ ॥
ದಯಾಶೀಲೆ ಶಾಂತೆ ಪಾರ್ವತಿ ।
ಜಯಜಯಜಯ ರಕ್ಷಿಸೆನುತುಮಿಂದಿಂತೆಂದರ್ ॥ ೫೯

ಮಾಣ್ದುದು ಮಾಟೆ ಶರದಮಳತೆ ।
ಪೂಣ್ದುದು ಕಳಹಂಸಮಾಲೆ ಮೆಲ್ಲನೆ ಬೀಡದೊಳ್ ॥
ಕಣ್ದೆಱೆದುವು ತೊಳತೊಳಗು ।
ತ್ತೆಣ್ದೆಸೆ ನೆರೆ ತಿಳಿದುವೀಗಳಬ್ದಧಾರಗಜೇ ॥ ೬೦

ಜನವನುರಾಗವೇಱೆ ಪೊಱಮಟ್ಟು ಕೃಷಿವ್ಯವಸಾಯವೃಂದಮಂ ।
ಮನದೊಲವಿಂದೆ ಮಾಡುತಿದೆ ಕೋಟರದಿಂ ನೆಗೆತಂದು ಪಕ್ಷಿಗಳ್ ॥
ಕೊನೆದಳಿಗೊರ್ಂಬಿನೊಳ್ ಬಿಸಿಲನಾಂತಿವೆ ಹಂಸಕುಲಂ ಬಿಲಂಗಳಿಂ ।
ದನುಮಿಸಿ ನೋಡಿ ಪೊಣ್ಮುತಿವೆ ಪಾರ್ವತಿ ನೋಡು ಶರದ್ವಿಳಾಸಮಂ ॥ ೬೧

ರವಿಕಿರಣಂ ನೀರೋಡು ।
ತ್ತಿವೆ ತಣ್ಬಿಂ ಬೀಱುತಿವೆ ರಥಾಂಗಕುಲಂಗಳ್ ॥
ತವೆ ತಣ್ಬಿಸಿಲೊಳ್ ನಿಂದಿ ।
ರ್ದಿವೆ ಮೇಘಂ ಹಿಂಡಿ ಹರಹಿದಂತಿವೆ ನಭದೊಳ್ ॥ ೬೨

ಪರೆದುವು ಪಯೋಧರಂಗಳ್ ।
ಬರುತಿವೆ ಕಳಹಂಸಮಾಲೆ ಬಿಸಿಲೊಳ್ ವಿಹಗಂ ॥
ನೆರೆದಿವೆ ಮೃಗಸಂತತಿ ಗ ।
ಹ್ವರದಿಂ ಪೊಱಮಟ್ಟು ಮೇಯುತಿವೆ ಮೊಳೆವುಲ್ಲಂ ॥ ೬೩

ತಿಳಿದುವು ದೆಸೆಗಳ್ ಹಂಸಾ ।
ವಳಿ ಸಾರ್ದುವು ಪೂರ್ಣಸರಸಿಯಂ ಬಿಸಕಂದಂ ॥
ಮೊಳೆವೋದುವು ಸಲಿಲಂ ನಿ ।
ರ್ಮಳಮಾದುವು ಕಳೆದುದಾಗಸಂ ಧವಳತೆಯಂ ॥ ೬೪

ಎಂದುಂ ಜಯೆವಿಜಯೆಗಳ್ ಬಿನ್ನಪಂಗೆಯ್ದು
ಇದುವೆ ಶರತ್ಸಮಯಂ ಮೇ ।
ಲೊದವುತ್ತಿರೆ ಶೀತಕಾಲಮುಗಸುತೆ ಕಾಸಾ ।
ರದ ಕೆಱೆಗಳ ತೊಱೆಗಳ ಬೆ ।
ಟ್ಟದ ತಪ್ಪಲ ಹಿಮದೊಳೆಸೆಯೆ ಮಾಡ್ಪುದು ತಪಮಂ ॥ ೬೫

ಎಂದು ಜಯೆವಿಜಯೆಗಳ್ ಬಿನ್ನಪಂಗೆಯ್ದು ಚಿತನಚನರಚನಾನೀಕಮ ನಾಕರ್ಣಿಸಿ ಲೋಕೈಕಬಂಧು ಸಾಕಾರಸುಧೆಯೆನಿಪ ಮಹಾದೇವಿ ಮಱೆಗಾಲಂಮಾಣ್ದುದಂ ಮನದೊಳಱಿದು ಬಡವಾದೊಡಲಂ ಬಿಡದೋಲಗಿಪ ನಾರಸೀರೆ ನಯುವೇಱೆ ಪೊಱಗಣ ಮಱೆಯಿಂ ನಾಂದ ಮೆಯ್ಯ ನೀರ ಬಣ್ಣಮಂ ತಣ್ಣೆಲರೊರಾಱಿಸಿ ಧ್ಯಾನಾನಂದರಸದ ಸೋನೆಯಿಂದೊಳಗೆ ನಾಂದ ಕರಣಂಗಳನುಸಿರೊಳಾಱಿಸುತ್ತುಂ ತಪೋಭಾನೂದಯಕ್ಕೆ ಮುಖಕಮಳದಳಂ ಬಿರ್ಚುವಂತೆ ಮೆಯ್ಯ ಸಂಪುಟಂ ಬಿರ್ಚೆ ಕಣ್ದೆಱೆದು ಮುಂದಿರ್ದ ಸಹಚರಿಯರಂ ಕಂಡು

ಜಳಧರದೊಳಗಿಂದಂ ಶಶಿ ।
ಕಳೆ ಪೊಱಮಡುವಂತೆ ಪರ್ವಿದಾಲದ ಮರದಿಂ ॥
ಗಳಬನೆ ಪೊಱಮಟ್ಟಳ್ ಕೋ ।
ಮಳೆಯರ ಕೆಯ್ಗುಡೆ ಭವಾನಿ ಮೆಲ್ಲಡಿಯಿಡುತುಂ ॥ ೬೬

ನಡೆತಂದು ಮಂಜು ನೆರೆ ಮಾ ।
ಣ್ದೊಡೆ ಶೀತಂ ಮಾಣದಿರ್ದ ತಣ್ಣೆಲರೊಳ್ ಕಂ ॥
ಪಿಡಿದ ಲತಾಗೇಹಂಗಳ ।
ನಡುವಣ ಕಾಸಾರತಟದೊಳಂಬಿಕೆ ನಿಂದಳ್ ॥ ೬೭

ಅಂತು ನಿಂದಿರೆಯಿರೆ

ಇತ್ತಲ್ ಭೂತಳದೊಳ್ ಹಿಮ ।
ಮೊತ್ತರಿಸಿತು ಭುವನ ಜನಮನುಱೆ ನಡುಗಿಸುತುಂ ॥
ಸುತ್ತುತ್ತುಂ ಸುಗಿಯುತ್ತುಂ ।
ಮುತ್ತುತ್ತುಂ ಮುಂದುಗೆಡಿಸುತುಂ ಮುಸುಕಿಡುತುಂ ॥ ೬೮

ಅಂತುಮಲ್ಲದೆಯುಂ

ಮೃಗಸಂತತಿಯಂ ಕೊಳರ್ವ |
ಕ್ಕಿಗಳಂ ಪಕ್ಕಿಗಳನದ್ರಿತಟದೊಳ್ ಕೊಳನೊ ||
ತ್ತುಗಳೊಳ್ ಕೋಟರದೊಳ್ ಮಿಗೆ |
ಪ್ರುಗಿಸುತ್ತುಂ ಬಂದನನುಮ ! ಶಿಶಿರನೃಪಾಲಂ || ೬೯

ಅಂತು ಬಂದು

ಕಿಡಿಗಳ್ ಕಚ್ಚನೆಯುಗಾಲಿಕಲ್ಲುರಿಯ ಪೊತ್ತಂ ಕೆಂಪಳಿಲ್ ಕೆಂಡದೊಂ |
ದಡಿಕಿಲ್ಮಾಣಿಕದಿಂದೆ ಕಾಯ್ವ ತಪನಂ ಚಂದ್ರಂ ಸ್ಫುಟೋದ್ಯತಪಂ ||
ಗಡ ಬೆಳ್ದಿಂಗಳೆನಿಪ್ಪುದೊಂದು ಪೆಸರಂ ತಾಂ ಮಾಡಿಮಂತಿರ್ದದಾ |
ಕಡುಪಿಂ ತನ್ನಯ ಕಾಲದಲ್ಲಿ ಹಿಮರಾಜಂ ಧಾರಿಣೀಚಕ್ರದೊಳ್ || ೭೦

ಮತ್ತಮದಲ್ಲದೆಯುಂ

ಮಿಗೆ ಚಿಮುರಜತುದು ನೀರಣಿ |
ಕೆಗಳಂಗಿದುವುಷ್ಣದುಸಿರಡಂಗಿತು ತಪನಂ ||
ಗೊಗೆದುದು ಪೆರ್ಚಿದ ತಣ್ಪು |
ಗ್ನಿಗೆ ಶೀತಂ ಪತ್ತಿತೆನಿಸೆಂಬೆಂ ಹಿಮದೊಳ್ || ೭೧

ಸಲೆ ರವಿ ತೇಜಂಗುಂದುತೆ |
ನಿಲಲಂಜುತ್ತೋಡಿ ಪುಗುವನದ್ರಿಯ ಮುಚಿಯೊಳ್ ||
[1]ಗೆಲೆ[1] ಹರಿವ ಹಾವುರಿವ ಕಿ |
ಚ್ಚಲೆ ನಿಂದುವು ಶಿಶಿರನೃಪತಿಯಾಜ್ಞೆಗೆ ಜಗದೊಳ್ || ೭೨

ಮತ್ತಮಲ್ಲಿ

ಉದಯಂ ಶೀತೋದಯಮು |
ಗ್ಗದ ಮಧ್ಯಾಹ್ನಂ ತುಷಾರಮಧ್ಯಾಹ್ನಂ ಮಿ ||
ಕ್ಕುದುದಸ್ತಮಯಂ ತಾನು |
ಷ್ಣದಸ್ತಮಯಮೆನಿಸಿತನುಮ ! ಹಿಮವಿಭ್ರಮದೊಳ್ || ೭೩

ತಿಳಿವೊಡೆ ಶಶಿ ರವಿ ರವಿ ಶಶಿ |
ಬೆಳಗುವ ಜೊನ್ನಂ ಬಿಸಿಲ್ ಬಿಸಲ್ ತಾಂ ಜೊನ್ನಂ ||

ಪಾ— 1. ಸೆಲೆ.

ಚಳಿ ಬಿಸುಪು ಬಿಸುಪು ಚಳಿಯೆನೆ |
ಬಳೆದುದು ಹಿಮರಾಜತೇಜಮೀಜಗದೆಡೆಯೊಳ್ || ೨೪

ಆಸವಮಯದೊಳ್
ಪಲ್ವಾಱೆಯೊಳ್ ಹುಹುಯೆಂಬಾ |
ಚೆಲ್ವಗ್ಗಡಣೆಯೊಳ್ ಹಸ್ತದಂಡಿಗೆಯೊಳ್ ತಾ ||
ನೊಲ್ವನ್ನಂ ಶಿಶಿರನಟಂ |
ಸೊಲ್ವನ್ನಂ ಜನವನಾಡಿಸಿದನುರ್ವರೆಯೊಳ್ || ೨೫

ನುಡಿಯೆ ಹು ಹು ಕಡೆಯ ಮಾತೇ |
ನೊಡಲೇ ಪ್ರಾಣಂಗೆ ಚಳಿಯ ಕುಪ್ಪಸಮಾಯ್ತಂ ||
ದೊಡೆ ಹಿಮದ ಮಹಿಮೆಯಂ [1]ಕಿ |
ಚ್ಚೊಡೆ ಬಲ್ಲಿದ[1]ನಾವನೊರ್ವನುರ್ವೀತಳದೊಳ್ || ೨೬

ಉಱೆ ಶೀತಂ ಪತ್ತಿದೊಡಿರ |
ಲಱಿಯದೆ ಜೀವಂ ಬಿಗುರ್ತು ಜಠರಾಗ್ನಿಯನೆ ||
ಬ್ಬಿಱಿಸೆ ಹೊಗೆಯುಸಿರ ಪಥದಿಂ |
ಪೊಱಮಡುವುದು ಜನದ ಮುಖದೊಳಲ್ಲದೊಡುಂಟೇ || ೨೭

ಮತ್ತಮದಲ್ಲದೆಯುಂ
ಈಕ್ಷಿಸಿದ[2]ಳ್[2]ಳಸಿ ಭಸಿತದ |
ರಕ್ಷೆಯನೊಸೆದಿಟ್ಟು ಮಂಜಿನಿಂ [3]ತೂಪಿಱಿದಳ್[3] ||
ಶಿಕ್ಷಿಸಿ ಬಲ್ಪಿಂದೂಡುತೆ |
ರಕ್ಷಿಸುವಳ್ ಶೀತಮಾತೆ ಶಿಖಿಬಾಲಕನಂ || ೨೮

ಬದವಿ ಧರಾತಳದೊಳ್ ತೀ |
ವಿದ ಶೀತಕ್ಕಂಜಿ ಕಂಪಿಸುತ್ತುಂ ನಿಲಲಾ ||
ಱದೆ ಬಡವಾಗ್ನಿ ಕರಂ ಕಾ |
ಷ್ಠದೊಳಗೆ ಪೊಕ್ಕಂ ಕೃಶಾನುವೇನಂ ಪೇೞ್ವೆಂ || ೨೯

ಮತ್ತಮಾಶೀತಾತಿಸಮಯದಲ್ಲಿ

ಪಾ— 1. ಪೇಳ್ವೊಡೆಕೀಳ್ವ. 2. ರೆ. 3. ತೂಪಿಱಿದುಂ.

ಮುಚ್ಚಿ ಮುಸುಂಕಿದ ಹಿಮಮಂ ।
ಕಿಚ್ಚಿಂದಂ ಕಳೆಯಲಱಿದಿಳೆಯ ಜನಂಗಳ್ ॥
ಚೆಚ್ಚಱವೆಯ್ತಂದೊಲವಿಂ ।
ದಚ್ಚರಿ ವಿರಹಿಯನೆ ಕಾಯ್ದು ಕಳೆವರ ಚಳಿಯಂ ॥ ೮೦

ಪರಿಪೂರ್ಣತಟಾಕದ ಮೇ ।
ಲುರಿಯಿಲ್ಲದೆ ಧೂಮಮೊಗೆವ್ರತಿರೆ ಮಾಗಿಯೊಳ ।
ತ್ಯುರುತರಗುರುತರತಾಪ ।
ಕ್ಕಿರಲಱಿದೆ ವಿರಹಿ ಪೊಕ್ಕು ಮುಳುಗದೆ ಮಾಣಾ ॥ ೮೧

ಪುಟ್ಟಿತು ಚಳಿ ಬಳೆದುದು ಚಳಿ ।
ಕೊಟ್ಟುದು ಚಳಿ ಕೊಂಡುದೆಲ್ಲಮಂ ಚಳಿ ಚಳಿಯೆಂ ॥
ದುಟ್ಟುದು ಚಳಿ ತೊಟ್ಟುದು ಚಳಿ ।
ಮೆಟ್ಟಿತು ಚಳಿ ಮುಟ್ಟಿತೆಲ್ಲ ಚಳಿ ಪೊಸಚಳಿಯೊಳ್ ॥ ೮೨

ಎಂಬ ಕೌತುಕನನೊಳಕೊಂಡು

ಈತೆಱದಿಂ ನೆಱೆ ಪಬ್ಬಿದ ।
ಶೀತದೊಳಗಜಾತೆ ನೂತ್ನಸುರುಚಿರಸರಸೀ ॥
ವ್ರಾತಮದೆಲ್ಲಿ ಘನಾಚಳ ।
ನೈತಂಬಮದೆಲ್ಲಿಯಲ್ಲಿ ತಪದಿಂ ನಿಂದಳ್ ॥ ೮೩

ಇಂತು ನಿದಾಘನಿಷ್ಠುರತೆಯೊಳಂ ಮಱೆಗಾಲದ ಪ್ರಳಯಜಲದೊಳಂ ಮಾಗಿಯ ಮಹಾಶೀತದೊಳಂ ಭಾಳಲೋಚನನ ಭಾಮಿನಿ ಗಂಗಾಧರನ ಗರುವೆ ಚಂದ್ರಧರನರಸಿಯೆನಿಪ ಗಿರಿರಾಜತನೂಜೆಯಿರ್ದ ನಿರುಪಮಾನ ತಪಃಪ್ರಭಾವಂ ವಿರೂಪಾಕ್ಷನ ಕರಣಂಗಳೊಳ್ಪರಸಿ ಬಳೆಯೆ– ಪುರಹರ ನೆಚ್ಚಿತ್ತು ಕೆಚ್ಚುಗಟ್ಟಿದ ಧೈರ್ಯಮನೊಡೆದು ಮೂಡಿ ಪಿಡಿದೆಱೆವ ಕಾರು ಣ್ಯಕ್ಕೆ ಪಕ್ಕಾಗಿ ಪನ್ನಗಭೂಷಣನಿಂ ನಿರಲ್ಪಾರದೆಂದು ತನ್ನೊಳ್ ಬಗೆದ ತಿಸ್ವತಂತ್ರಂ ಗಿರಿಜೆಯ ಮನಮನೊರೆದು ನೋಡುವ ಭರದಿಂ ಬಂದು ನಿಂದು

ದಶಭುಜಮಂ ಪಂಚಾಸ್ಯಮ ।
ನಶೇಷಭೀಮಾಂಗವಿತತಿಯಂ ತನುವಿನೊಳಂ ॥

ವಶವಂ ಮಾಡುತಡಂಗಿಸಿ ।
ಪಶುಪತಿ ವಟುವೇಷದಿಂದಮೊಪ್ಪುತ್ತಿರ್ದಂ ॥ ೮೪
ಗಿರಿಸುತೆಯುಂ ಕಾಣ್ಬನ್ನಂ ।
ವರಪರಮಬ್ರಹ್ಮಚರ್ಯದಿಂದೆ ತಾನಿ ।
ರ್ದಿರವಂ ತೋರುವ ತೆಜದಿಂ ।
ಗಿರಿಶಂ ವಟುವೇಷಮಂ ವಿರಾಜಿಸೆ ತಳೆದಂ ॥ ೮೫

ಅಂತು ತಳೆದು

ಮಿಗೆ ಶೀತಾಂಶು ಚಕೋರಿಯಲ್ಲಿಗೆ ವಸಂತಂ ರಾಜಿಸುದ್ಯಾನದ ।
ಲ್ಲಿಗೆ ಸೂರ್ಯಂ ಸರಸೀಜದಲ್ಲಿಗೆ ವರಪ್ರಾಣಾನಿಳಂ ದೇಹದ ॥
ಲ್ಲಿಗೆ ಮೇಘಂ ಶಿಖಿಯಲ್ಲಿಗೊಪ್ಪುವ ಮರಾಳಂ ಪೂರ್ಣಕಾಸಾರದ ।
ಲ್ಲಿಗೆ ಬರ್ಪಂತೆ ಭವಾನಿಯಲ್ಲಿಗಭವಂ ಬಂದಂ ಜಗದ್ವಲ್ಲಭಂ ॥ ೮೬

ಇಂತು ಭೂಲೋಕಕ್ಕಿಚಿತಂದು ಹೇಮಕೂಟದೊಳ್ ಹೈಮವತಿಯಿರ್ದ ತಪೋವನಮಂ ಪುಗುತ್ತಿರ್ಪಾಗಳ್

ಬರೆ ಗಿರಿಶಂ ವಸಂತಋತುವಲ್ಲದೊಡಂ ಮುದದಿಂದೆ ಭೋಂಕನಂ ।
ಕುರಿಸಿತು ಮಾವು ಪಲ್ಲವಿಸಿತಲ್ಲಿಯಶೋಕೆ ವಸಂತದೂತಿಯೊ ॥
ಪ್ಪಿರೆ ನೆರೆ ಪಾಡುದನ್ಯಭೃತನುನ್ನತಿಯಿಂ ಕರೆದತ್ತು ಮಲ್ಲಿಕಾ ।
ಪರಿಮಳಭಾರದಿಂ ಕುಸಿದು ಮೆಲ್ಲನೆ ತೀಡಿತು ದಕ್ಷಿಣಾನಿಳಂ ॥ ೮೭

ಅಂತು ತೀಡೆ

ಜಯೆವಿಜಯೆಗಳಿದು ಪೊಸತತಿ ।
ಶಯಮೀಶಿಶಿರದೊಳದೇಂ ಭವಾನಿ ವಸಂತೋ? ॥
ದಯಸೂಚಕನೆಯಾದುದು ನಿ ।
ಮ್ಮಯ ಪುಣ್ಯಾತಪಃಪ್ರಭಾವಕಾರಣಮಲ್ತೇ ॥ ೮೮

ಎನುತಿರೆ ಬಂದು ಭಾವಿಸಿ ತಪೋವನಮಂ ಶಶಿಮೌಳಿ ಪೊಕ್ಕು ಮೆ ।
ಲ್ಲನೆ ಬರುತುಂ ಪಥಶ್ರಮವನಾಂತು ಬಟಿಲ್ವಪೋಲಾಗಿ ತೇಂಕುತುಂ ॥
ಮನದೊಳನೂನಸಂಪದಮನೆಯ್ದುತುಮೀಕ್ಷಿಸುತಿರ್ಕೆಲಂಗಳಂ ।
ಘನಮಹಿಮಂ ಸ್ವತಂತ್ರವಿಭು ಪೊಕ್ಕಿದನೊಂದು ವಿನೂತಚೂತಮಂ ॥ ೮೯

ಇಂತು ಪ್ರೌಢರ್ ಕಪಟವಟುವೇಷಮಂ ತಳೆದ ಕಪರ್ದಿ ಪಾರ್ವತೀದೇವಿಯಿರೆ ತಪದೊಳಿರ್ಪ ಸೀಮಾಸಮೀಪದ ವಿಶಾಲಬಾಲಚೂತಶೀತಳಚ್ಛಾಯೆಯೊಳ್ ಕುಳ್ಳಿರೆ ಸಹಚರಿಯರಪ್ಪ ಜಯೆವಿಜಯೆಗಳ್ ಕಂಡು

ತರಳನಪೂರ್ವಾಗನತಿಥಿ ।
ಸ್ವರೂಪನೀಷದ್ವಿಭೂತಿಲಸಿತಲಲಾಟಂ ॥
ವರವಿಪ್ರನೆನುತೆ ಬಂದಾ ।
ದರಿಸಿದರೊಲವಿಂದೆ ಚರಣತಳಮಂ ತೊಳೆದರ್ ॥ ೯೦

ಅಂತು ತೊಳೆದು

ಎಳಮಾವಿನ ಸುಳಿಯೆಲೆಯೊಳ್ ।
ನಳನಳಿಸುವ ಕಂದಮೂಲಮಂ ನವಜಂಬೂ ॥
ಫಳಮಾಮ್ರಫಳಂ ಕದಳೀ ।
ಫಳಂಗಳಂ ತೀವಿ ತಂದು ಮುಂದಿಟ್ಟುತ್ತಂ ॥ ೯೧

ಎಲೆಯತಿಥಿ ಬಳಲ್ದಿರೆವಿಪ್ರಾ ।
ಫಲದಿಂದಂ ನಿಮ್ಮ ಪಸಿವನುಡುಗಿಸಿಯೆನೆ ಕೈ ॥
ಫಲವಂ ಕೈಕೊಂಡಪೆವೀ ।
ಲಲನೆಯುದಾರ ತಪಮಗಣ್ಯಮಾವನ ಪುಣ್ಯಂ ॥ ೯೨

ಎಂದು ನುಡಿಯೆ ಜಯೆವಿಜಯೆಗಳ್ ಕೇಳ್ದು

ಇವರಿರವಿನ ಚಿಂತಾರತಿ ।
ನಿಮಗೇಕೀಕ್ರಂಥೆಯನೀಪಥಶ್ರಮಮಂ ತೀ ॥
ರ್ಚುವ ಬಗೆಯುಂ ಬೇಗಂ ಮಾ ।
ಡುವುದೆನೆ ನಸುನಗುತೆ ವಿಪ್ರನಿಂತೆಂದಂ ॥ ೯೩

ಬೆಸಗೊಂಡೊಡೆ ದೋಷಮೆಯೀ ।
ಪ್ರೇಸಕನ್ನೆ ತಪೋನಿರೋಧದಿಂದಿದೆರ್ಪಡೆ ಸ್ವೈ ॥
ರಿಸಬರ್ಪದೆ ತಪಮಂ ಮಾ ।
ಣಿಸುವವರಿಲ್ಲಾ ಸಹಾಯಸಂಪದಮಿಲ್ಲಾ ॥ ೯೪

ಎನೆ ಕೇಳ್ದು ಗಿರಿಜೆ ಮನದೊಳ್ ।
ಮುನಿಯುತ್ತುಂ ಜಪವನುಡುಗಿ ಜಪಮಾಲೆಯನೊ ॥

ಯ್ಯನೆ ಕೆಯ್ಯೊಳೋಸರಿಸಿ ಮೆ ।
ಲ್ಲನೆ ಕಣ್ದೆಱೆಯುತ್ತೆ ಕಂಡಳಾವರನಟುವಂ ॥ ೯೫

ಆಸನ್ನಯದೊಳ್

ಇಂದುಗೆ ಮೇಘಂ ಕವಿದೊಡ ।
ಮಿಂದೀಲೋಕಕ್ಕೆ ತಣ್ಪು ತಪ್ಪದ ತೆಱದಿಂ ॥
ದಿಂದುಧರಂ ವರವಟುವೇ ।
ಷಂದಳೆದೊಡಗಜೆಗಾದುದತಿಹರ್ಷಮುಖಂ ॥ ೯೬

ಅಂತು ಹರ್ಷಮುಖಮೇ ಕಾದಪುದೆಂದು ನಿಮಿತ್ತವನಱಿಯದೆ ಬೆಱಗಾಗಿ ನೋಡುತಿರ್ಪಲ್ಲಿ

ಗಿರಿಸುತೆಯ ಮಧುರದೃಷ್ಟಿಗೆ ।
ಳುರವಣೆಯಿಂ ತಾಗೆ ತನ್ನನಾಗಳ್ ವಿಪ್ರಂ ॥
ಕರಗಿ ನಿಲಲಾಱದೆಱ್ದು ।
ತುರಪುಳಕಮನಾಂತುಮಿಂತು ಸಂತವಿಡುತ್ತುಂ ॥ ೯೭

ನೆಗೆವ ಜಡೆಮುಡಿಯನೊತ್ತು ।
ತ್ತೊಗೆವ ಭುಜಾಳಿಯನಡಂಗಿಸುತ್ತೂರುಗಳಂ ॥
ಮಿಗುವ ವೃಷೇಂದ್ರನನಂಕು ।
ತ್ತಗಲದೆ ನಿಜಮೂರ್ತಿಯೊಳಗೆ ಗಜಬಜಿಸುತ್ತುಂ ॥ ೯೮

ಎಂತಾನುಂ ನಿಜರೂಪಂ ।
ಸಂತಸವಿಡುತ್ತಲ್ಲಿ ವಿಪ್ರನತಿಧೈರ್ಯತೆಯುಂ ॥
ಮುಂತಿಟ್ಟು ಗಿರಿಜೆಯೊಡನುಸಿ ।
ರ್ದಂ* ತಡಬಡಿಸುತ್ತೆ ಮಿಸುಪ ಪೊಸಪುಸಿವಾತಂ ॥ ೯೯

ಈಸುಕುಮಾರತೆಯೀನಿಲ ।
ವೀಸುಕರತೆಯೀನವೀನಯೌವನಮುದವೀ ॥
ಭಾಸುರತೆಯೀಸುಧಾಮಯ ।
ವೀಸುಖದೊಳ್ ತಪವಿದೆಂತು ಬಂದುದು ಮುಗುದೇ ॥ ೧೦೦

ನಿನಗೇಕೀತರುಣತೆಯೊಳ್ ।
ಘನತಪವೆಸೆಗೊಂಡುದಕಟ ನವಲತೆಯುಂ ಸೂ ॥

ರ್ಯನ ಬಿಸಿಲಿಂ ಕೊರಗಿಪ ದು ।
ಷ್ಟನನೆನಗಱಿಪಬಲೆ ಸೌಕುಮಾರ್ಯಾವರಣೇ ॥ ೧೦೧

ಅಂತುಮಲ್ಲದೆಯುಂ

ಎಳಗೆಂಪನುಗುಳ್ವ* ಮೃದುಕೋ ।
ಮಳಪದಕಮಳಂಗಳೇಗಳತಿಕಠಿನಮೆನಿ ॥
ಪ್ಪಿಳೆಯೊಳ್ ಹರಹರ! ಕಲ್ನೆಲ ।
ಕಳವಟ್ಟುವಿವೆಂತು ಬಾಲಹಂಸೀಯಾನೇ ॥ ೧೦೨

ಎಳವೆಳದಿಂಗಳ ಸೋಂಕಿಂ ।
ಗಳವಡದಳ್ಕುವ ಶಿರೀಷಸುಕುಮಾರಾಂಗಂ ॥
ಬಳವತ್ಕರ್ಕಶತರದಿಂ ।
ಬಳಸಿರ್ದೀನಾರಸಿರೆಗಾಂತುದು ಚಿತ್ರಂ ॥ ೧೦೩

ಎಳಲತೆಯುಂ ಜೋಡಾಡುವ ।
ನಳತೋಳ್ ಕೋಕಂಗಳಂ ವಿಭಂಗಿಪ ಕುಚಮುಂ ॥
ಡಲಮುಸಿರಲುಪವನಪಥದ ।
ತುಳಮಧ್ಯಂ ತಪದ ಕೋಟಲೆಗೆ ಸಂಗಡವೇ ॥ ೧೦೪

ಮಿಸುಗುವ ಶಶಿವದನಂ ಕಡು ।
ಬಿಸಿಲಿಂ ಕೊರಗಿತ್ತು ಕುಸುಮಮಾಳಕೆಯಿಂ ರಾ ॥
ಜಿಸುವ ಕಚಭಾರಮಯ್ಯೋ ।
ಪೊಸಜಡೆಯಂ ಪಡೆದುದಕಟ ಘನಯೌವನದೊಳ್ ॥ ೧೦೫

ಮತ್ತಮದಲ್ಲದೆಯುಂ

ಬಿಸಿಲೆನ್ನದೆ ಮಱೆಯೆನ್ನದೆ ।
ಶಿಶಿರಮಿದೆನ್ನದೆ ತೃಷೋನ್ನತಿ ಕ್ಷುಧೆ ನಿದ್ರಾ ॥
ವಿಸರಮುಮಂ ನೆರೆ ಗೆಲ್ದೀ ।
ವಸುಮತಿ ಬೆಱಗಾಗೆ ತಪದೊಳಿರ್ದವರುಂಟೇ ॥ ೧೦೬

ವನಜಾನನೆಯೇಱುಂಜ ।
ವ್ವನದೊಳ್ ವನದೊಳ್ ನಿರೋಧದೊಳ್ ಪೇೞಿಂತಾ ॥

ವನನುದ್ದೇಶಿಸಿ ತಪವಿದ ।
ನೆನಗಱಿಪಿದೊಡೇನೊ ದೋಷವೇ ಮೃಗನಯನೇ ॥ ೧೦೭

ಎಂದು ಪ್ರೇಮಜನಪ್ರಣಯಕಲಹಲೀಲಾಲೋಲಚಿತ್ತನಪ್ಪ ವಿರೂಪಾಕ್ಷಂ ಪರಮವಟುವೇಷದಿಂ ನುಡಿದ ಮೃದುಕಠಿನಾಕ್ಷೇಪಗರ್ಭಿತವಚೋವಿಳಾಸಮಂ ಶೈಳಜೆ ಕೇಳ್ದು ಚಿಂತೆಯಂ ತಾಳ್ದು

ಬೆಸಗೊಂಡಪನನುಳಿದ್ವಿಜ ।
ನುಸಿರಲ್ತಾಂ ಬಾರದುಸಿರದಿರಬಾರದೆನು ॥
ತ್ತಸದೃಶತಪವಂ ಮನದು ।
ಬ್ಬಸದಿಂದೆ ಭವಾನಿ ಮಾಣ್ದು ಮೆಲ್ಲನೆ ನುಡಿದಳ್ ॥ ೧೦೮

ಬಗೆವೆರ್ಚೆ ಕೇಳುತಿರ್ದಪೆ ।
ವಿಗೆ ಪೇಳ್ದಪೆನೆಲೆಲೆ ಧೂರ್ತವಿಪ್ರನೆ ಕೇಳ್ ಶಂ ॥
ಭುಗೆ ಕಾರುಣ್ಯಾಬ್ಧಿಗೆ ಶೂ ।
ಲಿಗೆ ಕರುಣಂ ಪುಟ್ಟುವಂತೆ ತಪದಿಂದಿರ್ಪೆಂ ॥ ೧೦೯

ಎನುತುಂ ಗದ್ಗದಿಸುತೆ ಪುಳ ।
ಕನಿಕಾಯಮನಾನುತಶ್ರುವಂ ಕಳೆಯುತ್ತುಂ ॥
ಘನಹರ್ಷಚಿತ್ತೆಯಾಗು ।
ತ್ತೆ ನಗೇಶ್ವರಪುತ್ರಿ ಶಂಕರನ ಪೆಸರ್ಗೊಂಡಳ್ ॥ ೧೧೦

ಎಂದು ವಿರೂಪಾಕ್ಷಂಗೆ ತಪವಿರ್ಪೆನೆಂಬ ನುಡಿಯಂ ಕೇಳ್ದು ದುಷ್ಟಧರಾಮರನಟ್ಟಹಾಸದಿಂದಿಂತೆಂದಂ:—

ಅಕ್ಕಕ್ಕ ಕಾಮಹರನೊಳ್ ।
ಮುಕ್ಕಣ್ಣನೊಳಖಿಳವೇದಶಾಸ್ತ್ರಗ್ರಾಮನಂ ॥
ಮಿಕ್ಕವನೊಳ್ ಪಿತೃವನದೊಳ್ ।
ಪೊಕ್ಕವನೊಳದೆಂತು ಚಿತ್ತವಿಟ್ಟೆ ಲತಾಂಗೀ ॥ ೧೧೧

ಭೀಕರವಪ್ಪ ಶೂಲಿಯಭಿಲಾಷೆಯೊಳೀ ತಪವಾತನೇಕೆ ನೀ ।
ನೇಕೆ ಕೃಪಾಣವೇಕೆ ಲತೆಯೇಕೆ ಲಸತ್ಕರಿಯೇಕೆ ರಂಭೆ ತಾ ॥
ನೇಕೆ ಕೃಶಾನುವೇಕೆ ಪೊಸಪೂವಿನ ಮಾಲೆಯದೇಕೆ ಭಾನು ।
ವೇಕಾಕುಮುದಂಗಳೇಕೆ ಸಿಡಿಲೇಕೆ ಮರಾಳನದೇಕೆ ಲೋಕದೊಳ್ ॥ ೧೧೨

ನೀನಿನಿಯಳ್ ವಿಷಮಾತಂ ।
ನೀನತಿಮೃದು ಕಠಿನಗುಣಗಣಾಶ್ರಯನಾತಂ ॥
ನೀನಬಲೆಯುಗ್ರನಾತಂ ।
ನೀನುರುತರಭೀರು ಸರ್ಪಭೂಷಣನಾತಂ ॥ ೧೧೩

ಪುಲಿದೊವಲುಡುಗೆಯು ಪಾವಿನ ।
ನೆಲೆದೊಡಿಗೆಯು ನೊಸಲ ಕಣ್ಣು ಖಟ್ವಾಂಗದ ಪಂ ॥
ದಲೆಗಳ ಮಾಲೆಯು ಶೂಲದ ।
ಕಲಿಗಂಜದೆ ಮನವನೆಂತು ಮಾಡಿದೆ ಮುಗುದೇ ॥ ೧೧೪

ಎಂದು ವಿಪ್ರಂ ನುಡಿದ ಶಿವನಿಂದೆಗೆ ಭವಾನಿ ಮುನಿದು ಕನಲ್ದು ಕಿನಿಸಿ ಕಿಡಿಕಿಡಿವೋಗಿ

ತಪವಂತದಿರ್ಕೆ ಮಾಡುವ ।
ಜಪವಿರ್ಕೆ ಮೃಗಾಂಕಮೌಳಿ[1]ಯಂ ಭರದಿಂ[1] ಧ್ಯಾ ॥
ನಿಪುದಿರ್ಕೆ ಶಂಭುವಂ ನಿಂ ।
ದಿಪುದಂ ಕೇಳ್ವೊಂದು ಪಾಪವಿಂಬೆನಗಾಯ್ತೇ ॥ ೧೧೫

ಘೋರತಪದಲ್ಲಿ ಕೋಪಿಸ ।
ಬಾರದು ತಾಂ ತಪದ ಕೇಡು ಪತಿನಿಂದೆಯುಮಂ ॥
ಸೈರಿಸಬಾರದೆನುತೆ ವಿ ।
ಚಾರಮನುೞಿದಗಜೆ ಮನದ ಮುಳಿಸಿಂದಾಗಳ್ ॥ ೧೧೬

ಆದನಿರೋಧದ ನಿಂದೆಯು ।
ನಾದರಿಸದೆ ಭಸಿತದಿಂದೆ ವಿಪ್ರನನಿಡೆ ತಾಂ ॥
ಪೋದುದು ವಟುವೇಷಂ ಶಿವ ।
[2]ನಾದೊಡದೇಂ[2] ಪುಸಿ ದಿಟಕ್ಕೆ ನಿಲ್ವುದೆ ಜಗದೊಳ್ ॥ ೧೧೭

ಆಗಳ್

ಮುಗಿಲ ತೆಱೆ ಸರಿದ ಶಶಿಯುಂ ।
ಪೊಗೆದ ತಮಂ ತೆಗೆದ ತರುಣತರಣಿಯು ತೆಱದಿಂ ॥

ಪಾ— 1. ಧೂರ್ಜಟಿಯುಂ. 2. ನಾದನದೇಂ.

ಪೊಗೆ ತಱ್ಗದಗ್ನಿಯಂತಿರೆ ।
ಮಿಗೆ ವೇಷಂ ತೊಲಗಿ ತೊಳಗುತಿರ್ದಂ ರುದ್ರಂ ॥ ೧೧೮
ಜಡೆಮುಡಿ ಪಂಚಮುಖಂ ನೆಗೆ ।
ದುಡುಪತಿಕಳೆ ದಶಭುಜಂ ತ್ರಿನೇತ್ರಂ ಗಾತ್ರಂ ॥
ಬಿಡದೆಸೆವ ಭೂತಿ ಪುಲಿದೊವ ।
ಲುಡಿಗೆಗಳಿಂ ಶಂಕರಂ ಕರಂ ಮೆಱೆದಿರ್ದಂ ॥ ೧೧೯

ಅಸಮಯದೊಳ್
ಸರಿದುದು [1]ಪುಸಿ[1] ವೇಷದ ತೆಱೆ ।
ಸುರಿದುದು ಕೆಯ್ನೀರ ತೆಱದೆ ಹೂಮಳೆ ಸರಿಸಂ ॥
ಬಿರಿದುದು ಜೀರಿಗೆ ಬೆಲ್ಲದ ।
ಪರಿಯಿಂ ಮುಳಿದಿಟ್ಟ ಭಸಿತಮುದೆ ಮದುವೆಯವೋಲ್ ॥ ೧೨೦

ಪರಮಸ್ವಾಮಿ ಜಟಾಧರಂ ಶಶಿಧರಂ ಗಂಗಾಧರಂ ಕಾಲಸಂ ।
ಹರನಜ್ಞಾನಹರಂ ಪುರತ್ರಯಹರಂ ಸೌಖ್ಯಾಕರಂ ಶಂಭುಶಂ ॥
ಕರನಾನಂದಕರಂ ಸಮಂತೆನಗೆ ಭಕ್ತಿಜ್ಞಾನವೈರಾಗ್ಯಮಂ ।
ಕರುಣಂಗೆಯ್ಗೊಲವಿಂದೆ ಹಂಪೆಯ ವಿರೂಪಾಕ್ಷಂ ಶಿವಾವಲ್ಲಭಂ ॥ ೧೨೧

॥ ಗದ್ಯ ॥

ಇದು ಸಮಸ್ತಸುರಾಸುರನಿಕರಮಕುಟಖಚಿತದಿನಕರಕರಾಧಿಕ್ಯಮಾಣಿಕ್ಯ
ಪ್ರಭಾಪುಂಜರಂಜಿತಚರಣನೆನಿಪ ಪಂಪಾವಿರೂಪಾಕ್ಷ ಶ್ರೀಪಾದಕಮಲ
ಮಕರಂದಮತ್ತಮಧುಕರಾಯಮಾಣ ಸತ್ಕವೀಶ್ವರ
ಹಂಪೆಯ ಹರಿಹರದೇವ ವಿರಚಿತಮಪ್ಪ

ಶ್ರೀಗಿರಿಜಾಕಲ್ಯಾಣ ಮಹಾಪ್ರಬಂಧದೊಳ್

ಪಾರ್ವತೀತಪೋವರ್ಣ್ಣನಂ, ವಿರೂಪಾಕ್ಷಪ್ರತ್ಯಕ್ಷಕರಣವರ್ಣನಂ
ನವಮಾಶ್ವಾಸಂ.

ಪಾ— 1, ಪರಿ.

ಕರ್ಣಾಟಕ ಕಾವ್ಯಕಲಾನಿಧಿ. ಸಂ. ೨೧.

ಕವಿ ಗುರುಲಿಂಗವಿಭು

ವಿರಚಿತ

ಭಿಕ್ಷಾಟನ ಚರಿತೆ.

ಪ್ರಾಚೀನ ಟೀಕಾಸಮೇತ

ಮಂ. ಆ. ರಾಮಾನುಜಯ್ಯಂಗಾರ್ಯರಿಂದ

ಪರಿಶೋಧಿಸಲ್ಪಟ್ಟು,

ಕವಿಚರಿತೆ ವಿಷಯಸೂಚಿಗಳೊಡನೆ

ಮೈಸೂರು

ಜಿ. ಟಿ. ಎ. ಮುದ್ರಾಶಾಲೆಯಲ್ಲಿ ಮುದ್ರಿತವಾಯಿತು.

1903.

ಪೀಠಿಕೆ.

ಕವಿಚರಿತ್ರೆ:—

ಈ ಗ್ರಂಥಕರ್ತನು ವೀರಶೈವ ಮತದವನು; ಈತನು ತನ್ನ ಗ್ರಂಥದ ಕೊನೆಯ ಪದ್ಯದಲ್ಲಿ "ಜಯಜಯ! ಶಿವಜ್ಞಾನಿ ಬಸವೇಶ ಮಮಹೃದಯಾಬ್ಜಸನ್ನಿವಾಸ" ಎಂದೂ, ಮೊದಲ ಸಂಧಿಯ ೨ ನೆಯ ಪದ್ಯದಲ್ಲಿ "ಮದ್ಗುರು ಶಿವಜ್ಞಾನಿ ಬಸವೇಶ್ವರ" ಎಂದೂ, ಅದೇ ಸಂಧಿಯ ಮೂರನೆಯ ಪದ್ಯದಲ್ಲಿ "ಪರಮಗುರು ಬಸವೇಶನಂ" ಎಂದೂ, ವೀರಶೈವಮತ ಪ್ರವರ್ತಕನಾದ ಬಸವನನ್ನು ಸ್ತುತಿಸಿರುವುದರಿಂದಲೂ, ಮತ್ತು ಮೊದಲ ಸಂಧಿಯ ೩ ನೆಯ ಪದ್ಯದಲ್ಲಿ "ಚೆನ್ನಬಸವನಂ ಸರಸಾಲ್ಲಮಾಚಾರ್ಯನಂ ರೇವಣಾರ್ಯನಂ। ಶರಣ ಮಡಿವಳ ಮಾಚಿದೇವನಂ ಸಿದ್ಧರಾಮನ ಮಾದಿರಾಜಯ್ಯನಂ॥ ಧರೆಯೊಳಿವರೊಳಗಾದಸಂಖ್ಯಾತರುಗಳ ಚರಣಮಂ ನೆನೆದು" ಎಂದು ಹೇಳಿರುವುದರಿಂದಲೂ, ಮತ್ತು ಈ ಗ್ರಂಥದ ಟೀಕಾಕಾರನು "ಗುರುಲಿಂಗವಿಭು" ಎಂಬುದಕ್ಕೆ ಗುರುಲಿಂಗದೇವರು ಎಂದರ್ಥ ಬರೆದಿರುವುದರಿಂದಲೂ, ಕವಿಯು ಲಿಂಗಾಯತ ಮತಕ್ಕೆ ಸೇರಿದವನೆಂದು ತಿಳಿಯುತ್ತದೆ. ಈತನ ವಿಷಯವಾಗಿ ಈ ಗ್ರಂಥದಿಂದ ಮತ್ತೇನೂ ತಿಳಿಯುವುದಿಲ್ಲ. ಈತನು ತನ್ನ ಮುಖ್ಯ ಗುರುವನ್ನು ಕೂಡ ಹೇಳಿಕೊಂಡಿಲ್ಲ. ಈತನು ಇನ್ನು ಯಾವ ಗ್ರಂಥಗಳನ್ನು ರಚಿಸಿದ್ದಾನೆಯೋ ತಿಳಿಯದು. ಈ ಗ್ರಂಥದ ಪ್ರೌಢಿಮೆಯನ್ನು ನೋಡಿದರೆ ಈತನು ಅನೇಕ ಗ್ರಂಥಗಳಿಗೆ ಕರ್ತನಾಗಿರಬಹುದೆಂದು ತೋರುತ್ತದೆ. ಕಬ್ಬಿಗರ ಕೈಪಿಡಿಯನ್ನು ಬರೆದ ಕವಿಯೇ ಈತನೆಂದು ಕೆಲವರು ಅನುಮಾನಿಸುತ್ತಾರೆ. ಅಂಥ ಅನುಮಾನಕ್ಕೆ ಯಾವ ಕಾರಣವೂ ಇಲ್ಲ. ಆ ಗ್ರಂಥಕರ್ತನು ಬ್ರಾಹ್ಮಣನು. ಈತನು ಬ್ರಾಹ್ಮಣನಲ್ಲ. ಈತನು ೧೬ ನೆಯ ಶತಮಾನದವನೆಂದು ಕರ್ಣಾಟಕ ಕವಿಚರಿತ್ರೆಯಲ್ಲಿ ಹೇಳಿ ಇದೆ.

ಗ್ರಂಥವಿಚಾರ :—

ಈ ಗ್ರಂಥವು ಸಂಸ್ಕೃತದಲ್ಲಿ "ಭಿಕ್ಷಾಟನಕಾವ್ಯ" ವೆಂದು ಪ್ರಸಿದ್ಧವಾದ ಕಾವ್ಯದ ಆಧಾರದಮೇಲೆ ಹುಟ್ಟಿರಬಹುದೆಂದು ತೋರುತ್ತದೆ. ಆ ಗ್ರಂಥದ ಸಂಪೂರ್ಣವಾದ ಪರಿವರ್ತನವಲ್ಲ; ಕೆಲಕೆಲವು ಶ್ಲೋಕಗಳನ್ನು ಮಾತ್ರ ಆರಿಸಿಕೊಂಡು ಬರೆದಂತಿದೆ. ಇದು ವಾರ್ಧಿಕ ಷಟ್ಪದಿಯಲ್ಲಿ ಬರೆದಿದೆ. ಇದರಲ್ಲಿ ೩ ಸಂಧಿಗಳಿವೆ; ಪದ್ಯಗಳು—೧ನೆಯ ಸಂಧಿಯಲ್ಲಿ ೨೭, ೨ ನೆಯದರಲ್ಲಿ ೫೨, ೩ ನೆಯದರಲ್ಲಿ ೬೦, ಈಗಿನ ಕಾಲಕ್ಕೆ ಮುದ್ರಣಕ್ಕೆ ಯೋಗ್ಯವಲ್ಲವೆಂದು ತೆಗೆಯಲ್ಪಟ್ಟವು ೧೧, ಒಟ್ಟು ೧೫೦ ಪದ್ಯಗಳಿವೆ.

.........ಪದಿನೆಂಟು ವರ್ಣನೆಗಳಿಂ ॥
ಪಿರಿದಾದ ಕಬ್ಬಂಗಳಿರಲು ಭಿಕ್ಷಾಟನದ ।
ಚರಿತೆಯೇನೆನ್ನದಿರಿ ನರಸ್ತುತಿಯಲ್ಲ ।
ಚರಿತೆಗಳೊಳಿಂತಿದಕೆ ಚರಿತೆಯೆಂದೆನೆ ಪೇಳ್ವೆನವಧರಿಸಿ ಸರ್ವಜ್ಞರು ॥

ಎಂದೂ,

ಸಿರಿ ಹೋದ ಬಳಿಕಾವನಾದಡಾಗಲಿಯುವನು ।
ದರರಕ್ಷಣಾರ್ಥ ಭಿಕ್ಷಾಚರಿತ್ರಂ ಕೆಟ್ಟ ।
ವರಿಗೆಲ್ಲ ಕಟ್ಟಕಡೆಯಲಿ ಕೆಡದ ತಿರವಾದ ಬದುಕು ಭಿಕ್ಷಾಚರಿತೆಯು ॥
ದರುಸನಂಗಳಿಗೆಲ್ಲ ಭಿಷಾಟನಚರಿತ್ರ ।
ಗುರುಮತವದಾಗಿರಲುಳಿದ ಚರಿತ್ರೆಗಳಿದಕೆ ।
ಸರಿಯುಲ್ಲವಾಗಿ ಪೇಳಿದೆ ಕೇಳತಕ್ಕುದೀಹರನ ಭಿಷಾಚರಿತ್ರಂ ॥

ಎಂದೂ ಹೇಳಿಕೊಳ್ಳುತ್ತಾನೆ. ಮತ್ತು

ಹೆಸರು ಹಾಲಯ್ಯನೆಱೆದುಣ್ಬುದಂಬಿಲಮೆಂದು ।
ಪುಸಿರುವರಗಾದೆಯುಂತಲ್ಲವೆನ್ನೀಕೃತಿಯು ।
ಪೆಸರು ಭಿಷಾಟನದಚರಿತವಿದು ತಪ್ಪದೆನೆ ಪರಿಪರಿಯುರುಚಿಯುಸುಳ್ಳ ॥
ರಸಮಯಪದಾರ್ಥಗಳ ಮನೆಮನೆಯು ನಾರಿಯುರ ।
ಬೊಸಬಗೆಯು ಶೃಂಗಾರಭಾವಗಳಲಂಕಾರ ।
ವಿಸರವಿಂತಿದಱೊಳೀಕ್ಷಿಸುವರುಂಟಾಗೆ ರಂಜಿಸುಪುದೀಭೂತಳದೊಳು ॥

ಎಂಬ ಪದ್ಯದಲ್ಲಿ ಕವಿಯು ತಾನೇ ಹೇಳುವಂತೆ ಈ ಗ್ರಂಥವು ಒಂದು "ಮೋಹಕೃತಿ" ಎಂಬದಾಗಿ ನಿಸ್ಸಂದೇಹವಾಗಿ ಹೇಳಬಹುದು. ಈ ಕೃತಿಗೆ—

ಸ್ಥಿರಶಾಸನವಿದೆನಿಸಿ ಮೆಱೆವ ಭಿಷಾಟನದ ।
ಚರಿತೆಗಧಿಪತಿಯಾದ ಪರಮೇಶ್ವರಂ ಜಗ ।
ದ್ಭರಿತನಾಗಿಹನೆಂತದೆನಲು ಗೋಪಾಂಗನೆಯುರುಗಳ ಮನೆಮನೆದಪ್ಪದೆ ॥
ವರಕೃಷ್ಣನಿಹನದೆಂತೆನಲು—

ಎಂಬ ಪದ್ಯಭಾಗದಿಂದ ಈಶ್ವರನ ಸರ್ವವ್ಯಾಪಕತ್ವನಿರೂಪಣವೇ ಕವಿಗೆ ಮುಖ್ಯಾಭಿಪ್ರಾಯವೆಂದೂ,

....ಗುರುಲಿಂಗವಿಭು ।
ಹರುಷದಿಂ ರಚಿಸಿದೀಮೋಹಕೃತಿ ರಸಿಕರಾ ।
ಭರಣ ಭಾವುಕರ ಕೋವಿದರ ಮನವನೊಳಕೊಂಡತಿ ಸೊಬಗ ಬೀಱುತಿಹುದು॥

ಎಂಬುದರಿಂದ ರಸಿಕರ ಭಾವುಕರ ಕೋವಿದರ ಮನೋರಾಸಿಕ್ಯವು ಆಂತರಾಳಿಕಪ್ರಯೋಜನವೆಂದೂ ತೋರುತ್ತದೆ.

ಈ ಗ್ರಂಥದ ಕಥಾಸಾರವು ೧ನೆಯ ಸಂಧಿ ೬—೧೦, ೨೨ ನೆಯ ಪದ್ಯಗಳು; ೨ ನೆಯ ಸಂಧಿ ಸೂಚನೆ, ೬೨ ನೆಯ ಪದ್ಯ; ೩ ನೆಯ ಸಂಧಿ ಸೂಚನೆ, ೧೮, ೩೬, ೪೦, ೪೬, ೫೮ ನೆಯ ಪದ್ಯಗಳ ಟೀಕುಗಳನ್ನು ನೋಡಿದರೆ ಸ್ಪಷ್ಟವಾಗುತ್ತದೆ.

ಈ ಗ್ರಂಥದ ಶೈಲಿಯು ಸರಸವಾಗಿಯೂ, ಮೃದುವಾಗಿಯೂ, ಪ್ರೌಢವಾಗಿಯೂ, ಭಾವಗರ್ಭಿತವಾಗಿಯೂ ಇದೆ. ಇದೊಂದು ಶೃಂಗಾರಕಾವ್ಯ.

ಟೀಕಿನ ವಿಚಾರ:—

ಟೀಕು ಬರೆದವನು ಯಾರೋ ಗೊತ್ತಿಲ್ಲ. ಅವನು ಬಹುಶ್ರುತನು, ಬಹು ಸಮರ್ಥನು ಆಗಿರಬೇಕೆಂದು ಅವನ ಟೀಕುಗಳಿಂದ ಗೊತ್ತಾಗುತ್ತದೆ. ಈ ಟೀಕು ಪ್ರಸಿದ್ಧವಾದ ರಘುವಂಶಾದಿಗಳಿಗಿರುವ ಸಿದ್ಧಭಟ್ಟನೆಂದು ಪ್ರಸಿದ್ಧನಾದ ಕೋಲಾಚಲಮಲ್ಲಿನಾಥಸೂರಿಯ ಟೀಕೆಗೆ ಸರಿಸಮವಾಗಿದೆ. ಸಾಮಾನ್ಯವಾಗಿ ಕನ್ನಡದ ಪದ್ಯಗಳಿಗೆ ಹೇಗೆ ಅರ್ಥವನ್ನು ಯೋಜಿಸಬೇಕೆಂಬುದನ್ನು ಈ ಟೀಕಿನಿಂದ ಕಲಿಯಬೇಕಾಗಿದೆ. ಟೀಕಿನ ವಾಕ್ಯಶೈಲಿಯೂ ಬಹುರಮಣೀಯವಾಗಿದೆ.

ಮುದ್ರಣ ವಿಚಾರ:—

ಈ ಗ್ರಂಥವು ನಾಲ್ಕು ಪ್ರತಿಗಳ ಸಹಾಯದಿಂದ ಮುದ್ರಿತವಾಗಿದೆ. ಅವುಗಳಲ್ಲಿ ಎರಡು ಟೀಕಾಸಮೇತವಾದುವು; ಮತ್ತೆರಡು ಬರೀಮೂಲವುಳ್ಳವು. ಮೂಲಮಾತ್ರವಿರುವ ಪ್ರತಿಗಳಲ್ಲಿ ಲೇಖಕರು ತಮಗೆ ತೋರಿದಹಾಗೆ ಪದ್ಯಗಳನ್ನು ತಿದ್ದಿರುವುದೂ ಅಲ್ಲದೆ ಸ್ವಕೃತವಾದ ಇಲ್ಲ ಪರಕೃತವಾದ ಅನೇಕ ಹೊಸಪದ್ಯಗಳನ್ನು ಬರೆದು ಅಲ್ಲಲ್ಲೆ ಸೇರಿಸಿರುತ್ತಾರೆ.

ಈ ನಾಲ್ಕು ಪ್ರತಿಗಳಲ್ಲಿ ಮೂರುಪ್ರತಿಗಳನ್ನು ದಯೆಯಿಂದ ಕೊಡಿಸಿಕೊಟ್ಟುದಕ್ಕಾಗಿ ಮ॥ ರಾ॥ ಮಹದೇವಶಾಸ್ತ್ರಿಗಳವರಿಗೆ ಬಹಳ ಕೃತಜ್ಞನಾಗಿರುತ್ತೇನೆ.

ವಿ ಷ ಯ ಸೂ ಚಿ .

ಭಿಕ್ಷಾಟನ ಚರಿತೆ.

॥ ವಾರ್ಧಿಕಷಟ್ಪದಿ ॥

ಸೂಚನೆ :—

ಧರೆಯೊಳಗೆ ಗೋಪಾಲಕೃಷ್ಣ ಹದಿನಾರು ಸಾ |
ವಿರ ಗೋಪಿಯರೊಳಿಹುದ ನೋಡ ಬೇಕೆಂದು ಪುರ |
ಹರನು ಭಿಕ್ಷುಕನಾಗಿ ದ್ವಾರಾವತಿಗೆ ಬಂದ ಪರಿಯನದ ವರ್ಣಿಸುವೆನು ॥

ಟೀಕು—ಭೂಮಿಯಲ್ಲಿ ಗೋವುಗಳ ರಕ್ಷಿಸಿದ ಶ್ರೀ ಕೃಷ್ಣನು ಹದಿನಾರು ಸಾವಿರ ಸ್ತ್ರೀಯರೊಡನೆ ವಿನೋದದಿಂದ ಸುಖಿಸುತ್ತಿರ್ಪುದ ನೋಡಬೇಕೆಂದು ಪ್ರೀತಿಯಿಂದ ಪುರಹರನಾದ ಶಿವನು ಭಿಕ್ಷುಕನಾಗಿ ದ್ವಾರಾವತಿಯೆಂಬ ಪಟ್ಟಣಕ್ಕೆ ಬಂದನು ಎಂಬುದೀ ಪಲ್ಲವದರ್ಥ.

ಶ್ರೀಮದಮೃತಮಯೂಖಲೇಖಾವತಂಸನಭಿ |
ರಾಮಸುರಗಂಗಾತರಂಗೋತ್ತಮಾಂಗನಗ |
ಜಾಮನೋಹರನಖಿಳವಿನತಜನಕರ್ಮಾಂಧಕಾರನಿರ್ಹರಣಸೂರಂ ॥
ಸಾಮಗಾನಪ್ರೇಮನಗಣಿತಸುರಾಸುರ |
ಸ್ತೋಮವಂದಿತನೆಮ್ಮವಂ ಸಲಹುಗನುದಿನಂ |
ಶ್ರೀಮಹೇಶಂ ಸದಾಕೈಲಾಸವಾಸಂ ಕೃಪಾಳು ನಂದಿಗಿರೀಶನು ॥ ೧ ॥

ಟೀಕು—ಕವೀಶ್ವರನು ಕಾವ್ಯಪ್ರಾರಂಭದಲ್ಲಿ ಆಶೀರ್ವಾದ ನಮಸ್ಕ್ರಿಯಾ ವಸ್ತುನಿರ್ದೇಶಂಗಳೆಂಬ ಮಂಗಳಾಚರಣತ್ರಯಂಗಳು ಮಾಡಪಡಬೇಕಾದುವಾದುದರಿಂದ ನಂದಿಗಿರೀಶನು ರಕ್ಷಿಸಲಿ ಎಂದು ಸ್ತೋತ್ರವಂ ಮಾಡುತಿರ್ದಾನು. ಶ್ರೀಮತ್ = ಆಶ್ಚರ್ಯಕರವಾದ, ಅಮೃತಮಯೂಖ =. ಅಮೃತಕರನಾದ ಚಂದ್ರನ, ಲೇಖಾವತಂಸಂ = ಕಲೆಯನ್ನು ಶಿರಸ್ಸಿನಲ್ಲಿ ತಾಳಿದಾತನು, ಅಭಿರಾಮ = ಮನೋಹರವಾದ, ಸುರಗಂಗಾ = ದೇವಗಂಗೆಯ, ತರಂಗ = ಅಲೆಗಳಿಂದ ಅಲಂಕಾರವಾದ, ಉತ್ತಮಾಂಗಂ = ಶಿರಸ್ಸನುಳ್ಳ ಮಹಾದೇವನು, ಅಗಜಾಮನೋಹರನು = ಪಾರ್ವತೀದೇವಿಯರ ಮನಸ್ಸಿಗೆ ಅತ್ಯಂತ ಸೌಂದರ್ಯವ ತೋರುವಾತನು, ಅಖಿಲ ವಿನತಜನಕರ್ಮಾಂಧಕಾರ = ನಮಸ್ಕಾರವ ಮಾಡಿದಂಥ ಜನರುಗಳ ಪಾಪವೆಂಬ ಕತ್ತಲೆಯನು, ನಿರ್ಹರಣಸೂರಂ = ಅಡಗಿಸುವಲ್ಲಿ ಸೂರ್ಯನಾದಂಥ ಅತನು, ಸಾಮ

ಗಾನಪ್ರೇಮಂ=ಸಾಮವೇದಸಮ್ಮತವಾದ ಗಾನದಲ್ಲಿ ಪ್ರೀತಿಯನುಳ್ಳಾತನು, ಅಗಣಿತಸುರಾಸುರಸ್ತೋಮವಂದಿತಂ= ರಾಕ್ಷಸರುಗಳಿಂದ ದೇವತಾಸಮೂಹಗಳಿಂದ ವಂದಿಸಿಕೊಳ್ಳಲುಪಟ್ಟ, ಶ್ರೀಮಹೇಶಂ=ಸಮಸ್ತ ದೇವೋತ್ತಮನಾದ ಪರಮೇಶ್ವರನು, ಕೈಲಾಸವಾಸಂ=ಕೈಲಾಸವೇ ಮನೆಯಾದ, ಕೃಪಾಳು=ದಯಾಶೀಲನಾದ, ನಂದಿಗಿರೀಶನು=ನಂದಿಗಿರಿಗೆ ಕರ್ತೃವಾದ ನಂದೀಶ್ವರನು, ಎಮ್ಮುವಂ ಸಲಹುಗನುದಿನಂ=ಆವಾಗಲೂ ತನ್ನನು ಶಿವಭಕ್ತರನು ಸರ್ವಕಾಲವು ರಕ್ಷಿಸುತಿರಲಿ, ಎಂದು ಕವೀಶ್ವರನು ಕಾವ್ಯಪ್ರಾರಂಭದಲ್ಲಿ ಆಶೀರ್ವಾದ ಮಾಡುತಿರ್ದಾನು.

ನಿರತನಿರ್ಮಳಚಿತ್ತವಡೆದೀಶ್ವರಧ್ಯಾನಿ |
ಹರ ಶಾಂತನೇಕೈಕಲಿಂಗಾನುಸಂಧಾನಿ |
ಭರಿತಪರಮಾನಂದಮೋಕ್ಷಸಂಪದ್ದಾನಿ ವೀರಶೈವಾಭಿಮಾನಿ ||
ಅರಿವಿಕಾರಗುಣಂಗಳಂಟದ ಸಮಾಧಾನಿ |
ಶರಣಸನ್ನಿಹಿತಸ್ಥಲದ ಸಹಜಸುಮ್ಮಾನಿ |
ಕರುಣಿ ಮದ್ಗುರು ಶಿವಜ್ಞಾನಿ ಬಸವೇಶ್ವರನ ಚರಣಕಭಿವಂದಿಸುವೆನು||೨||

ಟೀಕು—ಕವೀಶ್ವರನು ಬಸವೇಶ್ವರನ ಸ್ತೋತ್ರವಂ ಮಾಡುತಿರ್ದಾನು. ಬಸವೇಶ್ವರನು ಎಂಥ ಆತನು ಎಂದರೆ, ನಿರತನಿರ್ಮಳಚಿತ್ತವಡೆದೀಶ್ವರಧ್ಯಾನಿ=ಆವ ಕಾಲದಲ್ಲಿಯೂ ನಿರ್ಮಲವಾದ ಚಿತ್ತದಿಂದ ಶಿವನ ಬಿಡದೆ ಧ್ಯಾನಿಸುವಾತನು, ಹರ=ಪಾಪವ ಸಂಹರಿಸುವಾತನು, ಶಾಂತ=ರಾಗದ್ವೇಷವಿಲ್ಲದಾತನು, ಏಕೈಕಲಿಂಗಾನುಸಂಧಾನಿ=ಅದ್ವಿತೀಯವಾದ ಲಿಂಗದೊಡನೆ ಒಡವೆರೆದ ಸಂಧಾನವನುಳ್ಳಾತನು, ಭರಿತಪರಮಾನಂದ ಮೋಕ್ಷಸಂಪದ್ದಾನಿ=ಪೂರ್ಣವಾದ ಪರಮಾನಂದದೊಡನೆ ಕೂಡಿದ ಮೋಕ್ಷಲಕ್ಷಣವನು ಕೊಡುವಾತನು, ವೀರಶೈವಾಭಿಮಾನಿ= ವೀರಶೈವಾಚಾರಮಾರ್ಗವನು ಬಿಡದೆ ಆಚರಿಸುವಾತನು, ಅರಿವಿಕಾರಗುಣಂಗಳಂಟದ ಸಮಾಧಾನಿ=ಕಾಮಾದಿ ಅರಿಷಡ್ವರ್ಗಂಗಳು ತನ್ನನು ಸೋಂಕದ ಮರ್ಯಾದೆಯಿಂದ ಆಚರಿಸುವ ಸೈರಣೆಯನುಳ್ಳಾತನು, ಶರಣಸನ್ನಿಹಿತಸ್ಥಲದ ಸಹಜಸುಮ್ಮಾನಿ=ಶಿವಶರಣರ ಭಕ್ತಾದಿಕ್ಯಸ್ಥಲಾಂತ್ಯವಾದ ಆಱು ಸ್ಥಳದಲ್ಲಿ ನಿಂದ ಸಹಜಮಾರ್ಗಕ್ಕೆ ನೋಡಿ ಸಂತಸಂಬೀಱುವಾತನು, ಕರುಣಿ=ದಯಾಶೀಲನಾದಾತನು, ಮದ್ಗುರು=ಎನಗೆ ವೇದದೀಕ್ಷೆ ಮಂತ್ರದೀಕ್ಷೆ ಕ್ರಿಯಾದೀಕ್ಷೆಗಳೆಂಬ ದೀಕ್ಷಾತ್ರಯುವ ಮಾಡಿ ನನ್ನ ಪಾಲಿಸಿದ, ಶಿವಜ್ಞಾನಿಯಾದ, ಬಸವೇಶ್ವರನ ಚರಣಕಭಿವಂದಿಸುವೆನು=ದ್ವಿತೀಯಶಂಭುವಾದ ಕಲ್ಯಾಣಪಟ್ಟಣದಲ್ಲಿ ಬಿಜ್ಜಳರಾಯನ ಕೂಡೆ ಮುನ್ನೂಱು ಅಱುವತ್ತು ಪವಾಡವ ತೋಱಿ ಮೆಱೆದ ಬಸವೇಶ್ವರನ ಶ್ರೀಪಾದಪದ್ಮಂಗಳಿಗೆ ನಮಸ್ಕಾರವು, ಎಂದು ಕವೀಶ್ವರನು ಬಸವೇಶ್ವರನ ಸ್ತೋತ್ರವಂ ಮಾಡುತಿರ್ದಾನು.

ಪರಮಗುರು ಬಸವೇಶನಂ ಚೆನ್ನಬಸವನಂ ।
ಸರಸಾಲ್ಲಮಾಚಾರ್ಯನಂ ರೇವಣಾರ್ಯನಂ ।
ಶರಣಮಡಿವಳ ಮಾಚಿದೇವನಂ ಸಿದ್ಧರಾಮನ ಮಾದಿರಾಜಯ್ಯನಂ ।
ಧರೆಯೊಳಿವರೊಳಗಾದಸಂಖ್ಯಾತರುಗಳ ಶ್ರೀ ।
ಚರಣಮಂ ನೆನೆದು ಬಲಗೊಂಡು ಪೇಳುವೆನುಮಾ ।
ವರನ ಸ್ಮರಹರನ ಶಶಿಧರನನಜನ ಕಪಾಲಕರನ ಭಿಕ್ಷಾಚರಿತೆಯಂ ‖ ೩ ‖

ಟೀಕು— ಕವೀಶ್ವರನು ಅಸಂಖ್ಯಾತಗಣಂಗಳ ನೆನೆದು ಕಾವ್ಯವ ಹೇಳುತಿರ್ದಾನು. ಅವರಾರಾರು? ಎಂದರೆ, ಪರಮಗುರುಬಸವೇಶನಂ—ಮೂಱುಲೋಕದಲ್ಲಿರ್ದ ಶಿವಭಕ್ತರಿಗೆ ಗುರುಭಕ್ತಿ ಲಿಂಗಭಕ್ತಿ ಜಂಗಮಭಕ್ತಿಗಳನು ಆಚರಿಸಿ ಕಲಿಸುವಲ್ಲಿ ಗುರುವಾಗಿ ಬಂದ ಬಸವೇಶ್ವರನನೂ; ಚೆನ್ನಬಸವನಂ—ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯವೆಂಬ ಷಟ್ಸ್ಥಲದಲ್ಲಿ ಆಚರಿಸುವರ ಅಱಿದು ಪೂಜಿಸುವ ಸುಜ್ಞಾನಿ ಚೆನ್ನಬಸವಣ್ಣನನೂ; ಸರಸಾಲ್ಲಮಾಚಾರ್ಯನಂ—ಕರಸ್ಥಲದ ಲಿಂಗದಲ್ಲಿ ದೃಷ್ಟಿ ನೆಟ್ಟು ಮನವಡಗಿ ಭಾವವೇಕೀಕರಿಸಿ ತನುಗುಣವಱಿದ ಅಲ್ಲಮಪ್ರಭುದೇವರನೂ; ರೇವಣಾರ್ಯನಂ—ಯೋನಿಜನಲ್ಲದೆ ಲಿಂಗಗರ್ಭದಿಂದ ಕಂತೆ ದಂಡ ಕಮಂಡಲುವೆರಸಿ ಕೊಲ್ಲಿಪಾಕದ ಸೋಮೇಶ್ವರನ ಗರ್ಭದಿಂದುದಿಸಿ ಜಗದ್ಗುರುವಾದ ರೇವಣಸಿದ್ಧೇಶ್ವರನ ಪಾದವನೂ; ಶರಣಮಡಿವಳ ಮಾಚಿದೇವನಂ—ಶಿವಶರಣರು ಬೇಡಿದ ಇಷ್ಟವ ಕೊಟ್ಟು ಮನದ ಮಲಿನವ ತೊಳೆದು ಶುದ್ಧಕಾಯದಿಂ ಆಚರಿಸುವ ಮಡಿವಳ ಮಾಚಿತಂದೆಗಳ ಪಾದಪದ್ಮವನೂ; ಸಿದ್ಧರಾಮನಂ-ಯೋಗಮಾರ್ಗದಿಂದ ....
ಧರೆಯೊಳಿವರೊಳಗಾದ ಅಸಂಖ್ಯಾತರುಗಳ ಶ್ರೀಚರಣಮಂ—ಭೂಮಿಯಲ್ಲಿ ಇರ್ದವರು ಮೊದಲಾದ ಅಸಂಖ್ಯಾತಗಣಂಗಳ ಪಾದಕಮಲವಂ ನೆನೆದು, ಬಲಗೊಂಡು, ಉಮಾವರನ—ಪಾರ್ವತೀಕಾಂತನಾದ, ಶಶಿಧರನ—ಚಂದ್ರಮೌಳಿಯಾದ, ಸ್ಮರಹರನ—ಕಾಮಸಂಹಾರಿಯಾದ, ಅಜನ ಕಪಾಲಕರನ—ಬ್ರಹ್ಮನ ಕಪಾಲವನು ಕೈಯ್ಯಲ್ಲಿ ಧರಿಸಿದ ಶಿವನ, ಭಿಕ್ಷಾಚರಿತೆಯಂ—ಭಿಕ್ಷಾಟನ ಚರಿತ್ರವನು, ಪೂರ್ವದಲ್ಲಿ ಸೂತಮುನೀಶ್ವರನು ನೈಮಿಶಾರಣ್ಯವಾಸಿಗಳಾದ ಋಷಿಗಳಿಗೆ ಹೇಳಿದ ಕಥೆಯನು, ಹೇಳುವೆನು, ಎಂದು ಕವೀಶ್ವರನು ಹೇಳುತಿರ್ದಾನು.

ಶರಧಿ ಗಿರಿ ಪುರ ನೃಪ ಕುವರ ಮಂತ್ರಿ ದೂತ ಸಂ ।
ಗರ ವಿರಹ ಪರಿಣಯ ಸುರತವಂಬುಕೇಳಿ ದಿನ ।
ಕರ ಚಂದ್ರ ಮಧು ವನ ಗಮನ ಋತುಗಳೆನಿಪ ಪದಿನೆಂಟು ವರ್ಣನೆಗಳಿಂದ‖

ಪಿರಿದಾದ ಕಬ್ಬಂಗಳಿರಲು ಭಿಕ್ಷಾಟನದ |
ಚರಿತೆಯೇನೆಂದೆನ್ನದಿರಿ ನರಸ್ತುತಿಯುಲ್ಲ |
ಚರಿತೆಗಳೊಳಂತಿದಕೆ ಚರಿತೆಯೆಂದೆನೆ ಪೇಳ್ವೆನವಧರಿಸಿ ಸರ್ವಜ್ಞರು † ||೪||

ಟೀಕು—ಕವೀಶ್ವರನು ಸರ್ವವನು ಬಲ್ಲಂಥ ವಿವೇಕಿಗಳಿಗೆ ಬಿನ್ನಹವಂ ಮಾಡುತಿರ್ದಾನು. ಸಮುದ್ರವರ್ಣನೆ, ಗಿರಿವರ್ಣನೆ, ಪುರವರ್ಣನೆ, ಅರಸುಗಳ ವರ್ಣನೆ, ಅರಸುಮಕ್ಕಳ ವರ್ಣನೆ, ಮಂತ್ರಿಗಳ ವರ್ಣನೆ, ದೂತವರ್ಣನೆ, ಯುದ್ಧವರ್ಣನೆ, ವಿರಹವರ್ಣನೆ, ವಿವಾಹವರ್ಣನೆ, ಸುರತವರ್ಣನೆ, ಜಲಕೇಳೀವರ್ಣನೆ, ಸೂರ್ಯವರ್ಣನೆ, ಚಂದ್ರವರ್ಣನೆ, ಮಧುಪಾನವರ್ಣನೆ, ವನವರ್ಣನೆ, ಗಮನವರ್ಣನೆ, ಋತುವರ್ಣನೆಗಳೆಂಬ ಹದಿನೆಂಟು ವರ್ಣನೆಗಳಿಂದ ಅಲಂಕಾರವಾದ ಕಾವ್ಯಂಗಳಿರ್ದ ಹಾಂಗೆ, ಭಿಕ್ಷಾಟನವೇನುಂಟು? ಎನ್ನದಿರಿ. ಅದೇಕೆಂದರೆ—ಚರಿತೆಗಳೊಳಗಿದು ಉತ್ತಮವಾದ ಚರಿತೆ. ಅದು ಹೇಗೆ? ಎಂದರೆ; ಸರ್ವಜ್ಞರು ನೀವು ಕೇಳಿ, ನಾನು ಹೇಳೇನು ಎಂದು ಕವೀಶ್ವರನು ಹೇಳುತಿರ್ದಾನು.

ಸಿರಿ ಹೋದ ಬಳಿಕಾವನಾದಡಾಗಲಿ ಯುವನು |
ದರರಕ್ಷಣಾರ್ಥ ಭಿಕ್ಷಾಚರಿತ್ರಂ ಕೆಟ್ಟ |
ವರಿಗೆಲ್ಲ ಕಟ್ಟ ಕಡೆಯಲಿ ಕೆಡವ ತಿರವಾದ ಬದುಕು ಭಿಕ್ಷಾಚರಿತೆಯು ||
ದರುಸನಂಗಳಿಗೆಲ್ಲ ಭಿಕ್ಷಾಟನಚರಿತ್ರ |
ಗುರುಮತವದಾಗಿರಲುಳಿದ ಚರಿತ್ರಗಳವಕೆ |
ಸರಿಯಿಲ್ಲವಾಗಿ ಪೇಳಿದೆ ಕೇಳುತಕ್ಕುದೀಪರನ ಭಿಕ್ಷಾಚರಿತ್ರಂ ||೫||

ಟೀಕು—ಕವೀಶ್ವರನು ಭಿಕ್ಷಾಟನದ ಚರಿತ್ರವೇ ಅಧಿಕವೆಂದು ಯುಕ್ತಿಬಲದಿಂದ ಲೌಕಿಕ ಪರಮಾರ್ಥಕ್ಕೆ ಸಮ್ಮತವಾಗಿ ಹೇಳುತಿರ್ದಾನು. ಆವನಾದರೂ ಐಶ್ವರ್ಯ

---

† ಹೆಸರು ಹಾಲಯ್ಯನೆಬಿದುಣ್ಬುದಂಬಲವೆಂದು |
ವುಸಿರುವರ ಗಾದೆಯಂತಲ್ಲವಿನ್ನೀಕೃತಿಯು |
ಪೆಸರು ಭಿಕ್ಷಾಟನದ ಚರಿತವಿದು ತಪ್ಪದೆನೆ ಪರಿಪರಿಯ ರುಚಿಯನುಳ್ಳ ||
ರಸವುಯುಪದಾರ್ಥಗಳ ಮನೆತುನೆಯ ನಾರಿಯರ |
ಪೊಸಬಗೆಯ ಶೃಂಗಾರಭಾವಗಳಲಂಕಾರ |
ವಿಸರವಿಂತಿದಱೊಳೀಕ್ಷಿಸುವರುಂಟಾಗೆ ರಂಜಿಸುವುದೀಭೂತಳದೊಳು ||

ಎಂಬೀಪದ್ಯವು ಟಿಪ್ಪಣವಿಲ್ಲದ ಒಂದು ಪ್ರತಿಯಲ್ಲಿ ಮಾತ್ರ ಇದೆ; ಅನ್ಯಕರ್ತೃಕವೆಂದು ತೋರುತ್ತದೆ.

ತೊಲಗಿದ ಬಳಿಕ ಭಿಕ್ಷಾವೃತ್ತಿಯಿಂದಮೆ ಜೀವಿಸುತ್ತಿಹನು. ಅದಲ್ಲದೆ ಕೆಲಬರು ಉತ್ತಮರು ತನುಗುಣವಳಿದು ಇಂದ್ರಿಯಂಗಳ ವರ್ತನೆ ಕೆಟ್ಟು ಮನ ನಿರ್ಮಲವಾದಲ್ಲಿ,

ಶ್ಲೋ॥ "ಶೈಶವೇಭ್ಯಸ್ತವಿದ್ಯಾನಾಂ ಯೌವನೇ ವಿಷಯೈಷಿಣಾಂ।
ವಾರ್ಧಕೇ ಮುನಿವೃತ್ತೀನಾಂ ಯೋಗೇನಾಂತೇ ತನುತ್ಯಜಾಂ॥"

ಎಂಬ ವಾಕ್ಯಪ್ರಮಾಣದಿಂದ ವಯೋವೃದ್ಧರಾದವರು ಮುನಿವರ್ತನದಲ್ಲಿ ಆಚರಿಸುವುದಕ್ಕೆ ಭಿಕ್ಷಾಚರಿತ್ರವೇ ಪ್ರಧಾನ; ಅದಲ್ಲದೆ ಕೆಲಬರು ಉತ್ತಮರು ಆವ ದರ್ಶನಂಗಳಲ್ಲಿಯಾದರೂ ನಿತ್ಯಶ್ರಮವನು ಕೈಕೊಂಡರೆ ಭಿಕ್ಷಾಚರಿತ್ರವೇ ಪ್ರಧಾನವಾದ ಕಾರಣವಾಗಿ ಉಳಿದ ಚರಿತ್ರಂಗಳು ಭಿಕ್ಷಾಚರಿತ್ರಕ್ಕೆ ಸಮಾನವಲ್ಲ. ಭಿಕ್ಷಾ ಎಂದರೆ—ಅದಕ್ಕೆ ನಿರ್ವಚನ:—ಭಿಕ್ಷಾ ಎಂದರೆ ಕಾಲಕರ್ಮಾದಿಗಳಿಗೆ ಭೀತಿ; ಆ ಭೀತಿಗಳನು ಕ್ಷಯುವ ಮಾಡುವುದಱಿಂದ ಭಿಕ್ಷಾ ಎನಿಸಿಕೊಂಡಿತು. ಅದುಕಾರಣವಾಗಿ ಈಶ್ವರನು ಆಚರಿಸಿದ ಭಿಕ್ಷಾಟನದ ಚರಿತ್ರವು ಅಧಿಕವು. ಅದುದಱಿಂದ ಉತ್ತಮರು ಕೇಳಿ ಎಂದು ಕವೀಶ್ವರನು ಬಿನ್ನಹವಂ ಮಾಡುತಿರ್ದಾನು.

ಇದು ಮಾನವರ ಸೃಷ್ಟಿಯಿಂದಾದ ಕಥನವೆ।
ನ್ನದಿರಿ ಪೂರ್ವದಲಿ ಸೂತಮಹಾಮುನೀಂದ್ರನತಿ।
ಮುದದಿನೈತರೆ ನೈಮಿಶಾರಣ್ಯದಲ್ಲಿರ್ದ ಸನಕಾದಿಮುನಿಗಳೆಯ್ದಿ॥
ಇದಿರುಗೊಂಡು ಯಥೋಚಿತಕ್ರಿಯೆಗಳಿಂ ತಣಿಪಿ।
ತದನಂತರದೊಳಾಮುನೀಶ್ವರಗೆ ಭಿಕ್ಷಾಟ।
ನದ ಲೀಲೆಯಾದುದೇನು ನಿಮಿತ್ತವೆಂದು ಬೆಸಗೊಳೆ ವಿಸ್ತರಿಸುತಿರ್ದನು॥೬॥

ಟೀಕು—ಇದು ಮಾನವರ ಸೃಷ್ಟಿಯಿಂದಾದ ಕಥನವೆನ್ನದಿರಿ = ಈ ಭಿಕ್ಷಾಟನದ ಚಾರಿತ್ರವು ಮನುಷ್ಯರು ಹೊತ್ತು ಹೋಂಕೆಗೆ ಹೇಳಿದ ಕಥೆಯೆನ್ನಬೇಡಿ. ಪೂರ್ವದಲ್ಲಿ ಸೂತಮಹಾಮುನೀಶ್ವರನು ಮುದದಿಂದ ಬರಲಾಗಿ ನೈಮಿಶಾರಣ್ಯದಲ್ಲಿದ್ದ ಸನಕಾದಿಮುನಿಗಳು ಇದಿರುಗೊಂಡು ನಮಿಸಿ ಅರ್ಘ್ಯಪಾದ್ಯಾಚಮನಂಗಳಿಂದ ಸತ್ಕರಿಸಿ, "ಎಲೈ ಸೂತಮಹಾಮುನೀಶ್ವರನೇ! ಶಿವನಿಗೆ ಭಿಕ್ಷಾಟನದ ಲೀಲೆಯು ಏನು ಕಾರಣ ಬಂದಿತು?" ಎಂದು ಮುನಿಗಳು ಕೇಳಲಾಗಿ; ಸೂತಮುನೀಶ್ವರನು ಹೇಳುತಿರ್ದಾನು.

ಇಳೆಯೊಳೀಕೃತಿಯ ಕಥನಾಲಾಪವೆಂತೆನಲು।
ಜಳಜಭವನೈದು ತಲೆಯೊಳಗೊಂದು ನಟ್ಟನಡು।
ದಲೆಯುರ್ಧ್ವಮುಖವಾಗಿ ಶಿವಗೆಱಗೆನೆಂದಹಂಬ್ರಹ್ಮಮೆನೆ ಕಾಲಹರನು॥

ಮುಳಿದೆಡದ ಕೆಯ್ಯುಗುರಿನಿಂದ ಚಿವುಟಿದಡುಳಿದ |
ತಲೆಯಿಂದಜಂ ಚತುರ್ಮುಖನಾದನರಿದ ಪಂ |
ದಲೆ ಬೊಬ್ಬಿಱಿಯುತೆಲೆಲೆ ಪರಶಿವನೆ ಪಸಿದೆನೆಂದಾಹಾರವಂ ಬೇಡಿತು ||೩||

ಟೀಕು—ಸೂತಮುನೀಶ್ವರನು ನೈಮಿಶಾರಣ್ಯವಾಸಿಗಳಾದ ಋಷಿಗಳಿಗೆ ಪೇಳು ತಿರ್ದಾನು. ಇಳೆಯೊಳೀಕೃತಿಯ ಕಥನಾಲಾಪವೆಂತೆನಲು = ಭೂಮಿಯಲ್ಲಿ ಶಿವನು ಭಿಕ್ಷಾಟನವ ಮಾಡಿದ ಕಥನಾಲಾಪವಾವ ಪ್ರಕಾರವೆಂದೆನಲಾಗಿ; ಜಲಜಭವನೈದು ತಲೆಯೊಳಗೊಂದು ನಟ್ಟನಡುದಲೆಯೂರ್ಧ್ವಮುಖವಾಗಿ = ಬ್ರಹ್ಮನ ಐದು ತಲೆ ಯೊಳಗೆ ಊರ್ಧ್ವವಾದ ಒಂದು ನಡುದಲೆಯು ಅಹಂಕರಿಸಿ ಅಹಂಬ್ರಹ್ಮವೆಂದು ಶಿವ ನಿಗೆ ಎಱಗದಿರಲಾಗಿ; ಕಾಲಹರನು = ಯಮಸಂಹಾರಿಯಾದ ಈಶ್ವರನು, ಮುಳಿದು = ಕೋಪವಂ ಮಾಡಿ, ಇವನಿಗೇಕೆ ಇಷ್ಟು ಎಂದು ಉದಾಸೀನದಿಂದ ಎಡದ ಕೆಯ್ಯುಗುರಿನಿಂದ ಚಿವುಟಿದರೆ: ಅದಕ್ಕೆ ಶ್ಲೋಕ—“ ಚಕರ್ತ ಕರಜಾಗ್ರೇಣ ಬ್ರಹ್ಮ ಣಃ ಪಂಚಮಂ ಶಿರಃ ” ಎಂಬೀ ಬ್ರಹ್ಮಾಂಡ ಪುರಾಣದ ವಾಕ್ಯದಿಂದ ಶಿವನು ತನ್ನೆ ಡಗೆಯ್ಯುಗುರಿನಿಂದ ಬ್ರಹ್ಮನ ಊರ್ಧ್ವಮುಖವನು ಚಿವುಟಲಾಗಿ, ಅಜನು ಅಂದಿ ನಿಂದ ಚತುರ್ಮುಖನಾದನು. ಆಗಲಾ ಅರಿದ ಪಂದಲೆ ಪರಶಿವನೆ ಪಸಿದೆನೆಂದಾಹಾ ರವಂ ಬೇಡಿತು = ಆ ಬ್ರಹ್ಮಕಪಾಲವು “ ಎಲೆ ಸ್ವಾಮಿ! ಆಹಾರವ ಪಾಲಿಸು ” ಎಂದು ಬೇಡಿತು, ಕಾಣಿರೈ ಎಲೈ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳು ತಿರ್ದಾನು.

ಕಡೆಗೆ ಕಾಲಾಗ್ನಿ ಕವಿವಟ್ಟೆ ಮೂಲೋಕಮಂ |
ಸುಡುವೆನೆಂದುರಿ ಮಸಗುವಂತೆ ಶಿಖಿಯಾಗಿ ಬೊ |
ಬ್ಬಿಡುವ ಶಿರದಬ್ಬರವ ಕೇಳಿ ಶಶಿ ಫಣಿ ಬೆದಱೆ ಪೊಡೆದೆರಡು ಭಾಗಮಾಡಿ||
ಕಡಲೊಳಿಡಲೊಡನೆ ಬಂಬಲುಗಿಡಿಯ ಗಡಣದಿಂ |
ಬಡಬನೊಡಗೂಡಿತೊಂದುಳಿದೊಂದು ಭಾಗಮಂ |
ಪಿಡಿದು ಭೂತೇಶ್ವರಂ ಭಿಕ್ಷಾಟನಕೆ ನಡೆವನೆಂಬ ಕಾಲೋಚಿತದೊಳು ||

ಟೀಕು—ಕೇಳಿರೈ, ಎಲೈ ಮುನಿಗಳಿರಾ! ಆ ಪರಮೇಶ್ವರನ ಕೆಯ್ಯೊಳಗಿರ್ದ ಬ್ರಹ್ಮಕಪಾಲದಲ್ಲಿ ರಕ್ತಹೊಱವಂಟು ತೆರೆಮಸಗಿ ಸಮುದ್ರೋಪಮಾನವಾಗಿ ಲೋ ಕವೆಲ್ಲವಾಗ್ರಾಹಿಸಿಕೊಂಬುದ ಶಿವನು ಕಂಡು ನಸುಗೋಪದಿಂದ ನೊಸಲ ಕಣ್ಣ ತೆಗೆ ದೊಂದು ಚಿಕ್ಕ ಕಿಡಿಗೆ ಬೆಸಸಲಾಗಿ; ಆ ಕಿಡಿಯು ಆ ರಕ್ತವೆಲ್ಲವನು ಹೀಱಿ ಆ ಕಪಾ ಲದೊಳಗಿರ್ದ ಮಾಂಸ ಮಜ್ಜೆ ಮೊದಲಾದ ಧಾತುಗಳೆಲ್ಲವನು ನುಂಗಿ ತಲೆಯುನು ಬುರುಡೆಯ ಮಾಡಿಹ ಸಮಯದಲ್ಲಿ; ಆ ತಲೆ ಬೊಬ್ಬಿಟ್ಟು ಕಾಲಾಗ್ನಿಯುಂಡತಿ ಅಬ್ಬರಿಸ

ಭಯಂಕರರವಂ ಬೀಱುತ್ತಿರ್ದ ಆ ಶಿರಸ್ಸ ಕಂಡು ಶಿವನ ಶರೀರದಲ್ಲಿ ಆಭರಣವಾಗಿ ರ್ದ ಸರ್ಪಂಗಳು ಬೆದಱುತ್ತಿರೆ; ಮಸ್ತಕದ ಮೇಲೆ ಇರ್ದ ಚಂದ್ರಕಳೆ ಅಂಜುತ್ತಿರಲಾಗಿ; ಪೊಡೆದೆರಡು ಭಾಗಮಾಡಿ= ಆ ಶಿರಸ್ಸ ಹೊಯ್ದು ಎರಡು ಹೋಳಮಾಡಿ ಸಮುದ್ರಕ್ಕೆ ಒಂದು ಹೋಳನಿಡಲಾಗಿ; ಅದು ಬಡಬಾಗ್ನಿಯ ಕೂಡಿಕೊಂಡಿತು. ಮತ್ತೊಂದು ಹೋಳನು ಭೂತೇಶ್ವರನು ಕೆಯ್ಯಲ್ಲಿ ಪಿಡಿದು ಭಿಕ್ಷಾಟನಕ್ಕೆ ಹೋಗಬೇಕೆಂದು ಉದ್ಯೋಗಿಸಿದ ಕಾಲೋಚಿತಕ್ಕೆ ನಾರದಮುನೀಶ್ವರನು ಬಂದನು, ಕಾಣಿರೈ ಎಲೈ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದಾನು.

ನಾರದಮುನೀಂದ್ರನೈತಂದು ಪದಕೆಱಗೆ ಮದ |
ನಾರಿ ನಸುನಗುತಿದೆಲ್ಲಿಂದ ಬಂದೆ ಮಾಯಾ |
ಧಾರಿ ವಿಶ್ವಪ್ರಪಂಚವಿಹಾರಿಯೆನೆ ಮರ್ತ್ಯದಿಂದೆಂದಡಂತಲ್ಲಿಯಾ ||
ಚಾರುವಾರ್ತಾವಿಶೇಷವದೇನೆನಲು ದೇವ |
ದ್ವಾರಾವತಿಯೊಳು ಶ್ರೀಕೃಷ್ಣ ಷೋಡಶಸಹಸ್ರ |
ನಾರಿಯುರೊಳೆಲ್ಲಿ ನೋಡಿದಡಲ್ಲಿ ತಾನಾಗಿಹುದ ಕಂಡೆನೆಂದೆನಲ್ಕೆ ||೯||

ಟೀಕು—ಎಲೈ ಮುನಿಗಳಿರಾ! ನಾರದಮುನೀಂದ್ರನೈತಂದು ಶಿವನ ಪಾದ ಕಮಲಕ್ಕೆ ನಮಸ್ಕರಿಸಲಾಗಿ; ಮದನಾರಿಯಾದ ಮಹಾದೇವನು "ಎಲೆ ಮಾಯಾ ಧಾರಿಯಾದ, ವಿಶ್ವಪ್ರಪಂಚವನಱಿದು ವಿಹರಿಸುವುದ ಬಲ್ಲ ನಾರದಮುನೀಂದ್ರ! ಎಲ್ಲಿಂದ ಬಂದೆಯಯ್ಯಾ?" ಎಂದು ಕೇಳಲಾಗಿ; "ಎಲೈ ಸ್ವಾಮಿ! ಮರ್ತ್ಯಲೋಕಕ್ಕೆ ಹೋಗಿ ಬಂದೆನು" ಎಂಬ ಬಿನ್ನಪಕ್ಕೆ ಶಿವನು ಸಂತೋಷದಿಂದ ಅಲ್ಲಿಯ ವಾರ್ತಾ ವಿಶೇಷವೇನೆಂದು ಕೇಳಲಾಗಿ; "ಎಲೆ ಮಹಾದೇವ, ದ್ವಾರಾವತಿಯೆಂಬ ಪಟ್ಟಣ ದಲ್ಲಿ ದೇವಕೀ ಕುಮಾರನಾದ ಶ್ರೀಕೃಷ್ಣನು ಹದಿನಾಱು ಸಾವಿರ ಸ್ತ್ರೀಯರೊಳಗೆ ತಾನೊಬ್ಬನೇ ಎಲ್ಲಾ ಸ್ತ್ರೀಯರುಗಳಿಗೆ ಬೇಱೆಬೇಱೆ ಸ್ವರೂಪವಾಗಿ ಸುಖಿಸುವ ಚಿತ್ರವಂ ಕಂಡು ಬಂದೆನು" ಎಂದು ನಾರದಮುನಿಯು ಈಶ್ವರನಿಗೆ ಬಿನ್ನಹಂಮಾಡಿ ದನು, ಕಾಣಿರೈ ಎಲೈ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದಾನು.

ಆ ವಿಗಡಮುನಿಯು ಬಿನ್ನಹಗೇಳುತೊಡನೆ ಭೂ |
ದೇವತೆಯ ಭಾರವಿಳುಹುವ ಕಾರ್ಯವೊಂದು ರಾ |
ಜೀವಸಂಭವನ ಪಂದಲೆಯೊಡಿಗಾಹುತಿಯನೀವ ಕಾರಣವದೊಂದು ||
ಗೋವಳಂ ಗೋಪಸತಿಯರೊಳಿಹುದ ನೋೞ್ಪೆನೆಂ |
ಬಾವಿನೋದವದೊಂದು ಕೂಡಿ ಮುಪ್ಪುರಿಯಾದ |
ದೇವನುತ್ಸವದಿಂದ ಭಿಕ್ಷಾಟನಕೆ ನಡೆದ ಠೀವಿಯನದೇವೊಗೞ್ವೆನು ||೧೦||

ಟೀಕು—ಕೇಳಿರೈ ಎಲೈ ಮುನಿಗಳಿರಾ! ಆ ವಿಗಡಮುನಿಯ ಬಿನ್ನಹಗೇಳುತೊಡನೆ = ಆ ವಿಗಡನಾದ ನಾರದಮುನಿಯು ಬಿನ್ನಹ ಹೇಳಲೊಡನೆ, ಆಲೋಚಿಸಿಕೊಂಡು ಭೂಮಿಯ ಭಾರವನಿಳುಹುವುದೆಂದು ಕಾರ್ಯ, ಕಮಲಸಂಭವನಾದ ಬ್ರಹ್ಮನ ಅರಿದ ತಲೆನೋಡಿಗಾಹುತಿಯನೀವ ಕಾರಣವದೊಂದು, ಗೋವಳಂ ಗೋಪಸತಿಯರೊಳಿಹುದ ನೋೞ್ಪೆನೆಂಬ ವಿನೋದವದೊಂದು = ಗೋಪಾಲನಾದ ವಾಸುದೇವನು ಗೋಪಸ್ತ್ರೀಯರೊಡನೆ ವಿನೋದದಿಂದಿರ್ಪುದ ನೋಡಬೇಕೆಂಬುದೊಂದು ಕೂಡಿ ಮುಪ್ಪುರಿಯಾದ ಉತ್ಸಾಹದಿಂದ ಪುರಹರನಾದ ಮಹಾದೇವನು ಭಿಕ್ಷಾಟನಕ್ಕೆ ಹೊಱವಂಟ ಠೀವಿಯನು ಏನೆಂದು ಹೊಗಳಲಿ ಎಂದು ಸನಕಾದಿಮುನಿಗಳಿಗೆ ಸೂತಮುನೀಶ್ವರನು ಹೇಳುತಿರ್ದಾನು,

ನಿಱುನಿಱುಯನಂತರಂತರಕ್ಕೈದು ಮೊನೆಯ ಮುಂ |
ಜೆಱಗೆಳೆಯೆ ಪುಲಿಯ ಚರ್ಮವನುಟ್ಟು ವಾಸುಕಿಯ |
ನುರದೆಯಜ್ಞೋಪವೀತವನಿಟ್ಟುಹೊಳೆವಮಱಹಾವುಗಳತೊಡವತೊಟ್ಟು ||
ಮಿಱುಪ ಪಳಿಕಿನ ಕುಂಡಲವ ಕಿವಿಯೊಳಿಂಬಿಟ್ಟು |
ಹೆಱೆ ಬಾಂದೊಱೆಯ ಹೊತ್ತ ಜಡವಲೆಯನೆಡೆಗೊಟ್ಟು |
ಮೆಱೆಯೆಫಣೆಯೊಳುತ್ರಿರೇಖೆಯಬೊಟ್ಟುಭಿಕ್ಷುವೇಷವತಾಳ್ದನಳ್ತಿವಟ್ಟು ||

ಟೀಕು—ಕೇಳಿರೈ ಮುನಿಗಳಿರಾ! ಆ ಜಗದೀಶ್ವರನು ಭಿಕ್ಷಾಟನಕ್ಕೆ ಹೊಱವಂಟು ಬರುವಲ್ಲಿ ಶೃಂಗರಿಸಿ ಕೊಂಡನು: ಅದು ಹೇಗೆಂದರೆ—ನಿಱುನಿಱುಗಳನು ಬೇಱೆಬೇಱೆ ಅಂಗಾಂಗದಲ್ಲಿ ಅಲಂಕರಿಸಿ, ಮೊನೆಜೆಱಗು ನೆಲಸೋಂಕುವ ಮರ್ಯಾದೆಯಿಂದ ಸೆಱಗನಿಳಿಯಬಿಟ್ಟು, ಹುಲಿಯ ಚರ್ಮವ ಬಿಗಿದು, ಸರಿಸಮವಾಗಿ ಉಟ್ಟು, ಮಹಾಶೇಷನ ಯಜ್ಞೋಪವೀತವನಿಟ್ಟು, ಎಳೆಯ ಹಾವುಗಳ ತೊಡಿಗೆಗಳ ತೊಟ್ಟು, ಮಿಱುಗುವ ಪಳಿಕಿನಂತೆಸೆವ ಸರ್ಪಕುಂಡಲಂಗಳ ಕರ್ಣಗಳಿಗೆ ಅಳವಡಿಸಿ, ಎಳೆಯದಾದ ಚಂದ್ರನ ಹೆಱೆಗೆ ದೇವಗಂಗೆಯೊಡನೆ ಕೂಡಲ್ಪಟ್ಟ ಜಟಾಮಕುಟವನು ಒಂದೆಡೆಯಾಗಿ ಮಡಗಿ ತೊಟ್ಟು, ಹಣೆಯಲ್ಲಿ ವಿಭೂತಿಯಿಂದ ಅಲಂಕರಿಸಲ್ಪಟ್ಟ ತ್ರಿರೇಖೆಯ ನಡುವೆ ಕತ್ತುರಿ ಕುಂಕುಮವೆರೆದ ಶ್ರೀಗಂಧದ ಬೊಟ್ಟನಿಟ್ಟು, ಭಿಕ್ಷಾವೇಷವಂ ತಾಳ್ದನಳ್ತಿವಟ್ಟು = ಆಶೆವಟ್ಟು ಜಗದೀಶ್ವರನು ಈ ಪ್ರಕಾರದಲ್ಲಿ ಭಿಕ್ಷಾಟನಕ್ಕೆ ಬರಬೇಕೆಂದು ಶೃಂಗರಿಸಿಕೊಂಡನು, ಕಾಣಿರೈ ಎಲೈ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದಾನು.

ಮೆಯ್ಯೊಳಗೆ ಕಾಮನಂ ದಹಿಸಿದ ಸುಭಸ್ಮವೆಡ |
ಗೆಯ್ಯೊಳಗೆ ಪಿಡಿದ ಬ್ರಹ್ಮಕಪಾಲವನಾಬಲದ |

ಕೆಯ್ಯೊಳಗೆಮೂಜಗವಕೊಂದುಕೂಗುವನೆಗೆಯುಸಿಱಿವಮುಮ್ಮೊನೆಯಶೂಲ
ಬಯ್ಯನಡಿಯಿಡುವ ಮೆಲ್ಲಡಿದಾವರೆಯೊಳುರಗ |
ಶಯ್ಯನರ್ಚಿಸಿದ ಕಣ್ಣೆಸೆಯೆ ಭಿಕ್ಷಾಟನಂ |
ಗೆಯ್ಯಬೇಕೆಂದು ಮನಸಂದು ಗುಹಗಣಪರುಗಳಯ್ಯ ಸಿಂಗರವಾದನು||೧೩||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಶಿವನಾವ ಪ್ರಕಾರದಲ್ಲಿ ಶೃಂಗಾರವಾದನು? ಎಂದರೆ—ಮೆಯ್ಯೊಳಗೆ ಕಾಮನಂ ದಹಿಸಿದ ಸುಭಸ್ಮ=ಕಾಮನ ಸುಟ್ಟ ವಿಭೂತಿಯು ಧೂಳಿಸಿಕೊಂಡು, ಎಡಗೆಯ್ಯೊಳಗೆ ಪಿಡಿದ ಬ್ರಹ್ಮನ ಕಪಾಲ ಎಡದಲ್ಲಿ ಬೊಬ್ಬಿಱಿಯುತ್ತಿರಲು, ಬಲದ ಕೆಯ್ಯಲ್ಲಿ ಮೂಜಗವ ಕೊಂದು ಕೂಗುವ ಯಮನೆದೆಯನಿಱಿದ ಮೂಱುಮೊನೆಯಿಂದ ಒಪ್ಪುವ ತ್ರಿಶೂಲಮಂ ಪಿಡಿದು, ಮೆಲ್ಲಮೆಲ್ಲನೆ ಅಡಿಯನಿಡುವ ಪಾದಕಮಲದಲ್ಲಿ ಅನಂತಶಯನನಾದ ವಿಷ್ಣುವಿನ ನಯನವು ಒಪ್ಪುತ್ತಿರಲಾಗಿ, ಭಿಕ್ಷಾಟನವ ಮಾಡಬೇಕೆಂದು ಮನಬಂದು, ಗುಹಗಣಪರುಗಳಯ್ಯ ಸಿಂಗರವಾದನು=ಗುಹ-ಷಣ್ಮುಖನಿಗೂ, ಗಣಪ-ವಿಘ್ನೇಶ್ವರನಿಗೂ, ಅಯ್ಯ=ತಂದೆಯಾದಂಥ ಮಹಾದೇವನು, ಭಿಕ್ಷಾಟನಕ್ಕೆ ಹೋಗಬೇಕೆಂದು ಶೃಂಗರಿಸಿಕೊಂಡನು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದಾನು.

ಕಾಲಕರ್ಮವನು ಪಾದುಕೆಗಳಾಗಿಯೆ ಮೆಟ್ಟಿ |
ಮೇಲೆನಿಸುವಷ್ಟ ಮಾಸಿದ್ಧಿಗಳನೇ ಕಕ್ಷ |
ಪಾಲವಾಗಿರುಕಿ ಯೋಗಾಂಗವನೆ ಯೋಗವಟಿಯಾಗಿ ಪೇರುರದೊಳಳುಹಿ||
ವ್ಯಾಳ ಕಡೆಯಮದಾಗೆ ವೇದಾಗಮಪುರಾಣ |
ಜಾಲಂಗಳುಲಿವ ತೊಡರಾಗೆ ಕಣ್ಗೆಸೆವಂ ತ್ರಿ |
ಶೂಲಿಯಸಮುಕರೋಟಿಮಾಲಿ ದ್ರುಹಿಣಶಿರಃಕಪಾಲಿಯರ್ಧೇಂದುಮೌಳಿ ||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಕೋಟಿಕಂದರ್ಪರೂಪವನು ಧರಿಸಿದ ಮಹಾದೇವನು ಭಿಕ್ಷಾಟನಕ್ಕೆ ಹೊಱಿವಂಟು ಬಪ್ಪಲ್ಲಿ, ಕಾಲಕರ್ಮಂಗಳೆರಡನು ಪಾದುಕೆಗಳಾಗಿಯೆ ಮೆಟ್ಟಿ, ಮೇಲೆನಿಸಿದ ಅಣಿಮಾ ಮಹಿಮಾ ಗರಿಮಾ ಲಘಿಮಾ ಪ್ರಾಪ್ತಿ ಪ್ರಾಕಾಮ್ಯ ಈಶತ್ವ ವಶಿತ್ವವೆಂಬ ಅಷ್ಟಮಹಾಸಿದ್ಧಿಗಳನೇ ಕಕ್ಷಪಾಲವಾಗಿ ಕೌಂಕುಳೊಳಗಿರುಕಿ, ಯೋಗಾಂಗವನೆ=ಅಷ್ಟಾಂಗಯೋಗವನೆ, ಜೋಗವಟಿಗೆಯಾಗಿ ಪೇರುರದೊಳಿಂಬಿಟ್ಟು, ಮಹಾಶೇಷನಂ ಪಾದಕ್ಕೆ ಕಡೆಯವಾಗಿ ಧರಿಸಿ, ವೇದಾಗಮಪುರಾಣಂಗಳನು ಉಲಿವ ತೊಡರಾಗಿ ತಳೆದು, ತ್ರಿಶೂಲಪಾಣಿಯಾದಾತನು, ವಿಷಮವಾದ ತಲೆಗಳ ಮಾಲೆಯ ತೊಟ್ಟಾತನು, ದ್ರುಹಿಣಶಿರಃಕಪಾಲಿ=ಬ್ರಹ್ಮನ ಶಿರಸ್ಸನೇ ಕೈಯಲ್ಲಿ ಧರಿಸಿದಾತನು, ಅರ್ಧೇಂದುಮೌಳಿ=ಚಂದ್ರಮೌಳಿಯಾದ

ಜಗದೀಶ್ವರನು, ಈಪ್ರಕಾರ ಚೆಲುವಿಕೆಯಿಂದ ಹೊಱವಂಟನು ಕಾಣಿರೈ, ಎಂದು ಸೂತಮುನೀಶ್ವರನು ಹೇಳುತ್ತಿದ್ದರ್ನು.

ಸಱುಗಂಪ ಸವಿಯಲೆಂದೆಲರ ಜೆಂಬಳಿವಿಡಿದು |
ತುಱುಗಿ ಬಂಬಲುವಮಾಲೆಗೊಂಡು ಮಂಡಳಿಸಿ ಕೆದ |
ರ್ದೆರಲುಮಂ ಪರಿವೊಂದನೊಂದು ಮುಂಚುವೆನೆಂಬುವ ಝೇಂಕಾರದಿಂದ ||
ಎಱಪಳಿಗಳೋಲೈಪ ಪರಿವಾರವೆನೆ ನಡುವೆ |
ಮೆಱೆವರಸು ತಾನಾಗಿ ತೋರ್ಪ ಕೇತಕಿಯ ನು |
ಣ್ಗಱಿಯ ಕೆನ್ನೆಯ ಪೊಱವಳೆಯಸಂದು ಕೈಲಾಸಪುರವ ಪೊಱಮಡುವಾಗಲು ||

ಟೀಕು — ಕೇಳಿರೈ, ಎಲೆ ಮುನಿಗಳಿರಾ! ಶಿವನು ಹೊಱವಂಟು ಬಪ್ಪಲ್ಲಿ, ಸಱುಗಂಪ ಸವಿಯಲೆಂದೆಲರ ಜೆಂಬಳಿವಿಡಿದು = ಪರಿಮಳವ ಕೊಂಬ ಇಚ್ಛೆಯಿಂದ ಗಾಳಿಯ ಜೆಂಬಳಿವಿಡಿದು ಬಂದು ಬಂದಕೊಂಡು ತುಱುಗಿ ಬಂಬಲುಮಾಲೆಯಿಂದ ಸಾಲ್ಗೊಂಡು ಮಂಡಳಿಸಿ ಕೆದರ್ದ ರೇಕುಗಳಿಂದ ಬಂದಕೊಂಡು ಮುಂಚುವೆವೆಂದು ಝೇಂಕಾರಧ್ವನಿಯೊಡನೆ ಕೂಡಿ ಎಱಪಳಿಗಳೋಲೈಪ ಪರಿವಾರವೆನೆ = ಬಳಸಿ ಬಂದು ನಿಂದ ತುಂಬಿಗಳೇ ಪರಿವಾರವೆಂಬ ಹಾಂಗೆ ಇರೆ, ನಡುವೆ ಮೆಱೆವರಸು, ತಾನಾಗಿ ತೋಱುತ್ತಿರ್ದ, ಕೇತಕಿಯ ನುಣ್ಗಱಿಯ ಕೆನ್ನೆಯ = ಕೇತಕಿಯ ಪುಷ್ಪದ ನುಣುಪಾದ ಗಱಿಯನು ಕೆನ್ನೆಯೊಳಿರಿಸಿಕೊಂಡು, ಎಳವೆಱೆಯ ತಳೆದ, ಕೋಮಲಾಂಗನಾದ ಮಹಾದೇವನು ಕೈಲಾಸಪುರವ ಹೊಱಡುವಾಗ ಆಸಂಭ್ರಮವ ಶಿವನೇ ಬಲ್ಲ ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತ್ತಿದ್ದರ್ನು.

ಗಿರಿಜೆ ನಿನ್ನರಮನೆಯೊಳಿರು ಪೋಗೆನುತ ಪಿಂತೆ |
ಬರೆ ಗುಹಗಣಪವೀರಭದ್ರರುಗಳಂ ಪುರದೊ |
ಳಿರಿಯೆಂದು ಸುರಪಾಗ್ನಿಯಮನಿಋತಿವರುಣವಾಯುಕುಬೇರಈಶಾನರಂ ||
ಇರಿ ನಿಮ್ಮ ತಾಣದೊಳಗಿರಿಯೆಂದು ಕಳುಪುತುಂ |
ಕರುಣಿ ಸಾಕ್ಷಾತ ಯೋಗಿಗಳ ಪರಮಾನಂದ |
ಸರಣಿ ಭವಭಯತಿಮಿರತರಣಿಯೆನಿಸುವ ಹರಂ ಧರಣೀತಳಕೆ ಬಂದನು ||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ವಿನೋದಚರಿತ್ರನಾದ ಶಿವನು ಕೈಲಾಸಪುರವ ಹೊಱವಂಟು ಬಪ್ಪಲ್ಲಿ, ಗಿರಿಜೆ ನಿನ್ನರಮನೆಯೊಳಿರು ಪೋಗೆನುತ = ಅರಮನೆಯೊಳಿರು ಎಂದು ಅರ್ಧಾಂಗಿಯಾದ ಪಾರ್ವತಿಯಂ ಕಳುಹಿ, ಹಿಂದುಗೊಂಡು ಬಱುತ್ತಿರ್ಪ ಷಣ್ಮುಖ ವಿನಾಯಕ ವೀರಭದ್ರ ನಂದಿ ಮಹಾಕಾಳ ಭೃಂಗಿರಿಟಿ ಮೊದಲಾದ ಗಣಂಗಳ ಕೈಲಾಸಪುರದಲ್ಲಿ ಇರಿ ಎಂದು ಕಳುಪುತ್ತ, ಇಂದ್ರ ಅಗ್ನಿ ಯಮ

ನಿರೃತಿ ವರುಣ ವಾಯು ಕುಬೇರ ಈಶಾನ ಮೊದಲಾದ ಅಷ್ಟ ದಿಕ್ಪಾಲಕರ ಕರೆದು ನಿಮ್ಮ ನಿಮ್ಮ ಸ್ಥಾನದಲ್ಲಿ ಇರಿ ಎಂದು ಕಳುಹಿಸುತ್ತ, ಶರಣಿ, ಯೋಗಿಗಳ ಪರ ಮಾನಂದಸರಣಿ = ಶಿವಯೋಗಿಗಳಿಗೆ ಯಾವ ಕಾಲದಲ್ಲಿಯೂ ಸಾಕ್ಷಾತ್ ಪರಮಾ ನಂದಪೂರವಾದಾತನು, ಭವಭಯತಿಮಿರತರಣಿ = ಜನ್ಮಾಂತರವೆಂಬ ಕತ್ತಲೆಯ ತೊಲಗಿಸುವ ಸೂರ್ಯನಾದ ಈಶ್ವರನು, ವಿನೋದದಿಂದ ಧರಣೀತಳಕ್ಕೆ ಬಂದನು ಕಾಣಿರೈ, ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತ್ತಿರ್ದಾನು.

ಸುರಪತಿಗೆ ತೆಗೆದೋಡಿ ಪೋಗಿ ಮೈನಾಕಗಿರಿ |
ಶರಧಿಯಂ ಪುಗಲಂದು ತನ್ನ ಗೋತ್ರಕ್ಕೆ ಕುಂ |
ದಿರದಪ್ಪುದೆಂದವಂ ಪೊಱಮಡಿಸೆ ವಜ್ರಿಗಿದಿರಾಗಿ ಸಂಗರವ ಮಾಳ್ಪ ||
ಗಿರಿಗಳೋ ಎನಿಪ ಪೆರ್ದೆರೆಗಳಿಂ ಮಿದುಳೊಕ್ಕ |
ಪರಿಗಳೋ ಎನಿಪ ಬೆಳ್ನೊರೆಗಳಿಂ ಕರುಳೆನಿಪ |
ವರಮಣಿಗಳಿಂ ಸಮರಭೂಮಿಯಂತೆಸೆವಬುಧಿಯಂ ನೋಡುತೈತಂದಪನು ||೧೬

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಕವೀಶ್ವರನು ಸಮುದ್ರವ ವರ್ಣಿ ಸುತ್ತಿರ್ದಾನು. ಸಮುದ್ರ ಅವ ಪ್ರಕಾರದಲ್ಲಿ ಒಪ್ಪಿತ್ತು? ಎಂದರೆ—ಸುರಪತಿಗೆ ತೆಗೆ ದೋಡಿ ಪೋಗಿ ಮೈನಾಕಗಿರಿ ಶರಧಿಯಂ ಪುಗಲಂದು = ದೇವೇಂದ್ರಂಗೆ ಅಂಜಿ ಪೋಗಿ ಮೈನಾಕಪರ್ವತವು ಸಮುದ್ರವ ಹೊಗಲಾಗಿ, ತನ್ನ ಗೋತ್ರಕ್ಕೆ ಕುಂದಿರದ ಪ್ಪುದೆಂದು = ಗೋತ್ರವೆಂದರೆ—ಸಂತತಿ, ಗೋತ್ರವೆಂದರೆ—"ಅದ್ರಿಗೋತ್ರಗಿರಿ ಗ್ರಾವಾ" ಎಂದು, ಪರ್ವತಕ್ಕೆ ಹೆಸರು, ಅದಱಿಂದ ತನ್ನ ಕುಲಕ್ಕೆ ಕುಂದು ಬಂದೀತು ಎಂದು ಪರ್ವತವನು ಹೊಱವಡಿಸಲಾಗಿ, ವಜ್ರಪಾಣಿಯಾದ ದೇವೇಂ ದ್ರನ ಕೂಡೆ ಸಂಗರವ ಮಾಡುತ್ತಿರ್ದ ಬೆಟ್ಟಗಳೋ ಎಂಬ ಹಾಂಗೆ, ಒಂದಱ ಮೇ ಲೊಂದು ಒತ್ತೊತ್ತಿ ಮೇಲುವಾಯ್ದ ತೆರೆಗಳಿಂದ, ಯುದ್ಧವ ಮಾಡುವಲ್ಲಿ ಮಿದು ಳೊಕ್ಕುವೋ ಎಂಬ ಮರ್ಯಾದೆಯಿಂದ ಒಪ್ಪುವ ಬೆಳ್ನೊರೆಯಿಂದ, ಕರುಳೋ ಎಂಬ ಮರ್ಯಾದೆಯಿಂದ ಒಪ್ಪುವ ರತ್ನಸಂತತಿಯಿಂದ, ಮೆಱೆಯುತ್ತಿರ್ದ, ಸಮರಭೂಮಿ ಯಂತೆ = ಕಾಳೆಗದ ಕಣದ ಮರ್ಯಾದೆಯಿಂದ ಮೆಱೆಯುತ್ತಿರ್ದ ಸಮುದ್ರವ ನೋಡು ತ್ತ ಜಗದೀಶ್ವರನು ಬಂದನು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀ ಶ್ವರನು ಹೇಳುತ್ತಿರ್ದಾನು.

ಎಲ್ಲಿ ನೋಡಿದಡಲ್ಲಿ ಪರುಷರಸದೊಱತೆಯಿಂ |
ದೆಲ್ಲಿ ನೋಡಿದಡಲ್ಲಿಯಮೃತಮಯಸರಸಿಯಿಂ |
ದೆಲ್ಲಿ ನೋಡಿದಡಲ್ಲಿ ರನ್ನಗಳ ತಪ್ಪಲಿಂ ಸುರಧೇನುವಿನ ಕೊಪ್ಪಲಿಂ ||

ಎಲ್ಲಿ ನೋಡಿದಡಲ್ಲಿ ಹೊಳೆವ ಹೊಮ್ಮಿಗಗಳಿಂ |
ದೆಲ್ಲಿ ನೋಡಿದಡಲ್ಲಿಯತಿಚಿತ್ರಖಗಗಳಿಂ |
ದಲ್ಲಿಗಲ್ಲಿಗೆ ಕಣ್ಗೆ ಮಂಗಳವನೀವ ಮೇರುವ ನೋಡುತೈತಂದನು || ೧೩

ಟೀಕು—ಕೇಳಿರೈ, ಮುನಿಗಳಿರಾ! ಆ ಶಿವನು ಹೋಬವಂಟು ಬರುತ್ತಿರ್ಪಲ್ಲಿ, ಮಹಾಮೇರುಪರ್ವತವು ಆವ ಪ್ರಕಾರದಲ್ಲಿ ಒಪ್ಪಿತ್ತೆಂದರೆ—ಎಲ್ಲೆಲ್ಲಿ ನೋಡಿದರೆ ಹರಿವ ಪುರುಷರಸದ ಒಬಿಕೆಗಳಿಂದಲೂ, ಎಲ್ಲೆಲ್ಲಿ ನೋಡಿದರೆ ಅಮೃತರಸಪೂರ್ಣವಾದ ಶೃಂಗಾರವಾದ ಕೊಳಂಗಳಿಂದಲೂ, ಎಲ್ಲೆಲ್ಲಿ ನೋಡಿದರೆ ರತ್ನದ ತಪ್ಪಲುಗಳಿಂದಲೂ, ಎಲ್ಲೆಲ್ಲಿ ನೋಡಿದರೆ ಕಾಮಧೇನುವಿನ ಕೊಪ್ಪಲಿಂದಲೂ, ಎಲ್ಲೆಲ್ಲಿ ನೋಡಿದರೆ ಹೊಳೆವ ಹೊನ್ನಮೃಗದ ಹಿಂಡುಗಳಿಂದಲೂ, ಎಲ್ಲೆಲ್ಲಿ ನೋಡಿದರೆ ಆಡುವ ಹಾಡುವ ನಲಿವ ನುಡಿವ ನರ್ತಿಸುವ ವಿನೋದಂಗಳಿಂದೊಪ್ಪುವ ವಿಚಿತ್ರವಾದ ಪಕ್ಷಿಗಳಿಂದಲೂ, ಅಲ್ಲಿಗಲ್ಲಿಗೆ ಕಣ್ಣಿಗೆ ಅತ್ಯಂತ ಮಂಗಳವ ಕೊಡುತಿರ್ದ ಮಹಾಮೇರುಪರ್ವತವಂ ನೋಡುತ್ತ ಶಿವನು ಬರುತ್ತಿರ್ದನು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತ್ತಿರ್ದಾನು.

ಹರಿಗಳೈಶ್ವರ್ಯವರಮನೆ ಹರಿಯು ಹರಿಸಾಲೆ |
ಹರಿಯು ವಾಹನಗಳಿಹ ಗೊತ್ತು ಹರಿಯಿಹ ತಾಣ |
ಹರಿಯು ಹಗೆಗಳ ನಾಟ್ಯಶಾಲೆ ಹರಿಗಳುಕಿ ತೆರಳದ ಕತ್ತಲೆಯ ಪಾಳೆಯ ||
ಹರಿಯು ಹರಿತಕ್ಕಿಂಬುಗುಡದ ತರುಗುಲ್ಮಗಳ |
ವರಜನ್ಮವಾಸ ಹರಿಗಳ ವಿನೋದದ ಬಜ್ಜೆ |
ಹರಿವಹರಿಮಯವರಣ್ಯದೊಳುಬರುತಿರ್ದಹರಿಯುಜನುರಸುರುಗಳೊಡೆಯನು||

ಟೀಕು—ಕೇಳಿರೈ, ಎಲೈ ಮುನಿಗಳಿರಾ! ಆ ಮಹಾಮೇರುಪರ್ವತದ ಮುಂದುಗಡೆಯಲ್ಲಿ ತೋಱುತ್ತಿರ್ದ ಅರಣ್ಯ ಆವ ಪ್ರಕಾರದಲ್ಲಿ ಒಪ್ಪಿತು? ಎಂದರೆ—ಹರಿಗಳೈಶ್ವರ್ಯದರಮನೆ= ಹರಿಗಳೆಂದರೆ ಸಿಂಹಗಳು, ಆ ಮೃಗಗಳ ಹರಿಯಾದ ಸಿಂಹಗಳ ಐಶ್ವರ್ಯವನುಂಟುಮಾಡುವ ಅರಮನೆಯ ಮರ್ಯಾದೆಯಿಂದ ಒಪ್ಪುತಿದ್ದಿತು. ಹರಿಯು ಹರಿಸಾಲೆ= ಹರಿಯೆಂದರೆ ಪಾರಿವದ ಪಕ್ಷಿ, ಅವು ಹರಿದಾಡುವ ಸಾಲೆಯ ಮರ್ಯಾದೆಯುಲ್ಲಿ ಒಪ್ಪುತಿದ್ದಿತು. ಹರಿಯು ವಾಹನಗಳಿಹ ಗೊತ್ತು= ಹರಿಯೆಂದರೆ ಕೃಷ್ಣನು, ಆತನಿಗೆ ವಾಹನವಾದಂಥ ಗರುಡ, ಅಂಥ ಗರುಡಪಕ್ಷಿಗಳಿಗೆ ಗೊತ್ತಾಗಿ ಒಪ್ಪುತಿದ್ದಿತು. ಹರಿಯಿಹ ತಾಣ= ಹರಿಯೆಂದರೆ ಗಿಳಿಗಳು, ಆ ಗಿಳಿಗಳು ಇಹುದಕ್ಕೆ ಸ್ಥಾನವಾದಂಥದು. ಹರಿಯು ಹಗೆಗಳ ನಾಟ್ಯಶಾಲೆ= ಹರಿಯೆಂದರೆ ಸರ್ಪ, ಆ ಸರ್ಪಕ್ಕೆ ಹಗೆಯಾದಂಥದು ನವಿಲು, ಆ ನವಿಲುಗಳು ನಾಟ್ಯವಾಡುವುದಕ್ಕೆ ರಂಗಸ್ಥಳವಾದಂಥದು. ಹರಿಗಳುಕಿ ತೆರಳದ ಕತ್ತಲೆಯ ಪಾಳೆಯ= ಹರಿಯೆಂದರೆ ಸೂರ್ಯ

ಚಂದ್ರರುಗಳ ಕಿರಣಗಳು, ಆ ಸೂರ್ಯಚಂದ್ರರುಗಳ ಕಿರಣಂಗಳಿಗೆ ತೊಲಗದೆ ಇದ್ದ ಕತ್ತಲೆಯು ಪಾಳೆಯುವನುಳ್ಳದು. ಹರಿಯು ಹರಿತಕ್ಕಿಂಬುಗುಡದ ತರುಗುಲ್ಮಗಳ ವರ ಜನ್ಮವಾಸ= ಹರಿಯೆಂದರೆ ವಾಯು, ಆ ವಾಯುವಿನ ಹರಿದಾಟಕ್ಕೆ ತೆಱಹುಗುಡದ ಮರಗಿಡುಗಳು ಹೊದಱುಮೆಳೆಬಳ್ಳಿಗಳು ಹುಟ್ಟುವುದಕ್ಕೆ ತೌರುಮನೆಯಾದಂಥದು. ಹರಿಗಳ ವಿನೋದದ ರಚ್ಚೆ= ಹರಿಯೆಂದರೆ ಕಪಿಗಳು, ಪಲ್ಗಿಱಿದು ಪುರ್ಬಿಕ್ಕಿ ನೆಗೆದು ಬದಿಯು ಚೆಱಿಂಟೆ ಏಡಿಸುವ ವಿನೋದಂಗಳಿಗೆ ಱಚ್ಚೆಯುನುಳ್ಳಂಥದು. ಹರಿವ ಹರಿಮಯದರಣ್ಯದೊಳು ಬರುತಿರ್ದ= ಹರಿಯೆಂದರೆ ಉದಕ, ಉದಕಮಯವಾದ ಅರಣ್ಯವ ನೋಡುತ್ತ ಬರುತಿರ್ದನು. ಹರಿಯುಜಸುರಪರುಗಳೊಡೆಯನು= ಬ್ರಹ್ಮ ವಿಷ್ಣು ದೇವೇಂದ್ರ ವೊದಲಾದ ದೇವತೆಗಳಿಗೆ ಒಡೆಯನಾದ ಪರಮೇಶ್ವರನು ಬರುತಿರ್ದನು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದನು.

ಎರಳೆಗಳನೆಸೆ ವೊಲಗೆಡಹು ಪುಲಿಯುನಿಱಿ ಹಂದಿ ।
ಬರುತಲಿದೆ ಬಿಡು ನಾಯಿಗಳ ನೋಯಿಸವ ಮುನ್ನ ।
ಹರಿದೊವಗಿ ತಿವಿ ಹೊಯ್ವುಕಾಳ್ಕೋಣಸಂಕಲ್ಲುಗಳಲಿಟ್ಟುಮುಂದುಗೆಡಿಸಿ ॥
ಭರದಿಂವಲೊಳಪೊಕ್ಕು ತರಿ ಮರೆಯು ಹಿಡಿ ಮತ್ತ ।
ಕರಿಯು ಕಪ್ಪಿನೊಳು ಕೆಡಪೊವಬ್ಬರಿಪ ಬೇಡ ।
ರುರವಣೆಯ ಬೇಂಟೆಗಳ ನೋಡುತ್ತಲೆ ಕಿರಾತರುದ್ರನೈತರುತಿರ್ದನು॥೧೯॥

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಆ ಶಿವನು ಅರಣ್ಯದಲ್ಲಿ ಬಹಾಗ, ಅಲ್ಲಿ ಬೇಂಟೆಯಾಡುವ ಕಿರಾತರುಗಳು ಆವ ಪ್ರಕಾರದಲ್ಲಿ ಇದ್ದರು? ಎಂದರೆ—ಎರಳೆಗಳ ವೊನೆಯುಂಬನಿಂ ಎಸೆಯೆಂಬ, ಪೊಲನ ಬಡಿಗೋಲ್ಗಳಿಂದ ಇಟ್ಟು ಕೆಡಹೆಂಬ, ಹುಲಿಯುನಿಱಿದು ಕೊಲ್ಲೆಂಬ, ಹಂದಿ ಬರುತಲಿದೆ ನಾಯ್ಗಳ ಬಿಡು ಎಂಬ, (ನಮ್ಮ ನೋಯಿಸದ ಮುನ್ನ ಹರಿದೊದಗಿ ತಿವಿಯೆಂಬ,) ಹೊಯ್ವ ಕಾಳ್ಕೋಣಂಗಳನು ಕಲ್ಲುಗಳಿಂವಿಟ್ಟು ಮುಂದುಗೆಡಿಸಿ ಒಳಪೊಕ್ಕು ತರಿಯೆಂಬ, ಮರದ ಮರೆಯಿಂದ † ಮದಕರಿಯು ಕಪ್ಪಿನೊಳು ಅಡ್ಡಗಟ್ಟಿ ಕೆಡಪೆಂಬ, ಈ ಪ್ರಕಾರದಲ್ಲಿ ಅಬ್ಬರಿಸುವ ಬೇಡರುಗಳ ಬೇಟೆಯು ಉರುವಣೆಯುಂ ನೋಡುತ್ತ ಕಿರಾತರುದ್ರನೈತರುತಿರ್ದನು. ಪೂರ್ವದಲ್ಲಿ ಅರ್ಜುನಂಗೆ ಪಾಶುಪತಾಸ್ತ್ರವಂ ಪಾಲಿಸಿದಾಗ ಕಿರಾತ ವೇಷವಂ ಹಾಕಿದ ಪರಮೇಶ್ವರನು ಈ ಕಾಂತಾರದಲ್ಲಿ ಆ ವಿನೋದವಂ ನೋಡುತ್ತ ಬರುತಿರ್ದನು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದನು.

---

† ಒಳಪೊಕ್ಕು ಮರೆಯೆಂಬ ಮೃಗವನ್ನು ಹಿಡಿ ಎಂದೂ ಅರ್ಥವಾಗಬಹುದು.

ಕರೆವ ಕನ್ನಡಿಗರೆಂತಂತೆ ಕೊಯ್ಲಾಗಿರ್ದ |
ಪರಿಪರಿಯ ಧಾನ್ಯಗಳ ಹೊಲಗದ್ದೆಯೆಂತಂತೆ |
ಹಿರಿದು ಬಡವಾದವರುಗಳ ಮೊಯ್ಗಳೆಂತಂತೆ ತನ್ನ ಪುರುಷನ ವಂಚಿಸಿ ||
ಪರಪುರುಷನಂ ಕೂರ್ತು ನೆರೆವಸತಿಯೆಂತಂತೆ |
ಸುರರು ಗಂಧರ್ವರುಗಳೆಂತಂತೆ ಪರಿಪರಿಯ |
ತರುಗಳ ಪೆಸರ್ಗಳಚ್ಚರಿಯೆಂದು ನೋಡುತ್ತ ನಡೆದನಗಜಾರಮಣನು||೨೦||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಆ ಅರಣ್ಯದ ಮಧ್ಯದಲ್ಲಿ ಆವಾವ ಮರಗಳು ಒಪ್ಪಿದುವೆಂದರೆ—ಕವೀಶ್ವರನು ಮಱೆಮಾಡಿ ಜಾಣ್ಮೆಯಿಂದ ಹೇಳುತಿರ್ದಾನು. ಕರೆವ ಕನ್ನಡಿಗರೆಂತಂತೆ= ಕನ್ನಡಿಗರು ಕರೆವಾಗ "ಬನ್ನಿ" ಎಂಬರು; ಹಾಗೆ ಒಪ್ಪುವ ಬನ್ನೀಮರಗಳಿಂದ. ಕೊಯ್ಲಾಗಿರ್ದ ಪರಿಪರಿಯ ಧಾನ್ಯಗಳ ಹೊಲಗದ್ದೆಯೆಂತಂತೆ= ಕೊಯ್ಲಾಗಿರ್ದ ಹದಿನೆಂಟು ಧಾನ್ಯಂಗಳನು ಕಂಡವರು "ಬೆಳೆದ ಹೊಲ" "ಬೆಳೆದ ಗದ್ದೆ" ಎಂಬರು; ಆ ಮರ್ಯಾದೆಯಿಂದ ಒಪ್ಪುವ ಬೆಳವಲ ಮರಗಳಿಂದ. ಹಿರಿದು ಬಡವಾದವರುಗಳ ಮೊಯ್ಗಳೆಂತಂತೆ= ಬಡವಾದವರುಗಳ ಕಂಡರೆ "ಹಿರಿದು ತಾಱಿದವನು" ಎಂಬರು; ಹಾಗೆ ಒಪ್ಪುವ ತಾರೆಯ ಮರಗಳಿಂದ. ತನ್ನ ಪುರುಷನಂ ವಂಚಿಸಿ ಪರಪುರುಷನಂ ಕೂರ್ತು ನೆರೆವಸತಿಯೆಂತಂತೆ= ತನ್ನ ಪುರುಷನಂ ವಂಚಿಸಿ ಮತ್ತೊಬ್ಬನ ಸಮೀಪಕ್ಕೆ ಹೋದ ಕನ್ನೆಯ "ಪಾದರಗಿತ್ತಿ" ಎಂಬರು; ಹಾಗೆ ಒಪ್ಪುವ ಪಾದರಿ ಮರಗಳಿಂದ. ಸುರರೆಂತಂತೆ= ಆ ಮರಗಳಲ್ಲಿ ಸುರಹೊನ್ನೆ, ದೇವದಾರು ಮೊದಲಾದ ಮರಗಳಿಂದ. ಮತ್ತು ಗಂಧರ್ವರುಗಳೆಂತಂತೆ= ಪರಿಮಳಗಳೊಡನೆ, ಕೂಡಿದ ಅಗಿಲು ಶ್ರೀಗಂಧ ತದಿಕಿಲು, ಹುಲಿವಾಲ ಮೊದಲಾದ ಮರಗಳಿಂದ. ಈ ಪ್ರಕಾರವಾದ ಹೆಸರುಗಳಿಂದ ಆಶ್ಚರ್ಯದಿಂದೊಪ್ಪುವ ಮರಂಗಳಂ ನೋಡುತ್ತ, ನಡೆದನಗಜಾರಮಣನು= ಪಾರ್ವತೀಕಾಂತನಾದ ಶಿವನು ಈ ಪ್ರಕಾರವಾದ ಅರಣ್ಯವ ನೋಡುತ್ತ ಬರುತ್ತಿರ್ದನು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತ್ತಿರ್ದಾನು.

ಬಡವರ ಮದುವೆಯ ಸಿಂಗರದಂತೆ ಸೌಂದರ್ಯ |
ವಡೆದು ತೋರ್ಪಂಗನೆಯರುಗಳಂತೆ ಮುನಿಯಂತೆ |
ಕಡೆದು ಸೂತ್ರಿಸಿದ ಮರಬೊಂಬೆಯ ರುಧಿರದಂತೆ ನರರ ಜೀವಾರ್ಥದಂತೆ||
ತಡೆಯದರುಣೋದಯದಲೆಸೆವ ತಾವರೆಯಂತೆ |
ಯೊಡಲಾಜವುಂಡು ದಣಿವವರಂತೆ ಚಿತ್ರವಿಂ |
ಯಡವಿಯ ಮರಂಗಳೆಸುತೀಶ್ವರಂ ತಾಂ ತಪೋವನಕೆ ಬಿಜಯಂಗೆಯ್ದನು ||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಆ ಶಿವನು ಅರಣ್ಯದಲ್ಲಿ ಬರುವಾಗ ಅಲ್ಲಿರ್ದ ಮರಂಗಳು ಹೇಗೆ ಒಪ್ಪಿದುವು? ಎಂದರೆ—ಬಡವರ ಮದುವೆಯು ಸಿಂಗರ ದಂತೆ= ಬಡವರ ಮದುವೆಯು ಶೃಂಗಾರಕ್ಕೆ ಎರವೆನ್ನಿಸಿಕೊಂಬರು; ಹಾಗೆ ಒಪ್ಪುವ ಎರವದ ಮರಗಳಿಂದ. ಸೌಂದರ್ಯವಡೆದು ತೋರ್ಪಂಗನೆಯುರುಗಳಂತೆ= ಶೃಂಗಾರ ವಾದ ಸ್ತ್ರೀಯನು "ಚೆಂದವುಳ್ಳ ಚೆನ್ನೆ" ಎಂಬರು; ಹಾಗೆ ಒಪ್ಪುವ ಚನ್ನಂಗಿಚಂದ ನದ ಮರಗಳಿಂದ. ಮುನಿಯಂತೆ= ಆಶ್ರಮದಲ್ಲಿಯ ಮುನಿಗಳನು ತಪಸಿಗಳೆಂಬರು; ಹಾಗೆ ಒಪ್ಪುವ ತಪಸದ ಮರಗಳಿಂದ. ಕಡೆದು ಸೂತ್ರಿಸಿದ ಮರಬೊಂಬೆಯ ರುಧಿರ ದಂತೆ= ಕಡೆದು ಮಾಡಿದ ಮರದ ಬೊಂಬೆಯೊಳಗೆ ತುಂಬಿದ್ದ ರಕ್ತವನು ಬಕುಳ ವೆಂಬರು; ಹಾಗೆ ಒಪ್ಪುವ ಬಕುಳದ ಮರಗಳಿಂದ. ನರರ ಜೀವಾರ್ಥದಂತೆ= ಮನುಷ್ಯರು ಜೀವಿಸುವುದಕ್ಕೆ ಹೊನ್ನೇ ಪ್ರಯೋಜನ; ಹಾಗೆ ಒಪ್ಪುವ ಹೊನ್ನೆಯ ಮರಗಳಿಂದ. ತಪೆಯುದರುಣೋದಯದಲೆಸೆವ ತಾವರೆಯಂತೆ= ಅರುಣೋದಯದ ಸಮಯದಲ್ಲಿ ತಾವರೆ ಅರಳುವ ಹಾಗೆ ಒಪ್ಪುವ ಅರಳಿಯ ಮರಗಳಿಂದ. ಒಡಲಾ ಬವುಂಡು ದಣಿದವರಂತೆ= ಹೊಟ್ಟೆಯು ತುಂಬುವ ಹಾಗೆ ಉಂಡು ತೇಗುವರು; ಹಾಗೆ ಒಪ್ಪುವ ತೇಗದ ಮರಗಳಿಂದ. ಈ ಮರಂಗಳಿಂದ ಒಪ್ಪುವ ಅರಣ್ಯವ ಕಂಡು ಈ ಮರಗಳ ಹೆಸರು ವಿಚಿತ್ರವಾಗಿದೆ ಎಂದು, ಈಶ್ವರನು ನೋಡುತ್ತ, ಮುಂದುಗಡೆ ಯಲ್ಲಿ ತೋಱುತಿರ್ಪ ತಪಸ್ವಿಗಳ ಆಶ್ರಮಕ್ಕೆ ಬಿಜಯಂಗೆಯ್ದನು ಕಾಣಿರೈ, ಮುನಿ ಗಳಿರಾ! ಎಂದು ಸೂತಮುನೀಶ್ವರನು ಹೇಳುತ್ತಿರ್ದನು.

ವೇದಶಾಸ್ತ್ರಾಗಮಪುರಾಣೇತಿಹಾಸಗಳ |
ನೋದುವ ವಶವ್ಯಾಕರಣವಿವಿಧತರ್ಕಸಂ |
ಪಾದನಂಗೈವ ಧರ್ಮಗಳ ಕರ್ಮಗಳ ಮರ್ಮಗಳ ಭೇದಗಳನಱಿವ ||
ಮೈದೆಗೆಯದನವರತವಷ್ಟಾಂಗಯೋಗಮಂ |
ಸಾಧಿಸುವ ಪರತತ್ವಶಿವರಹಸ್ಯಾರ್ಥಮಂ |
ಬೋಧಿಸುವ ಋಷಿಗಳಾಶ್ರಮಮಂ ನಿರೀಕ್ಷಿಸುತ ನಡೆದನಕ್ಷಯರೂಪನು ||

ಟೀಕು—ಕೇಳಿರೈ ಎಲೆ ಮುನಿಗಳಿರಾ! ಶಿವನು ಬಹ ಆಶ್ರಮದ ದಂಡೆಯಲ್ಲಿ ಋಷಿಗಳು ಆವ ಪ್ರಕಾರದಲ್ಲಿ ಒಪ್ಪಿದರು? ಎಂದರೆ—ವೇದ= ಚತುರ್ವೇದಂಗಳ, ಪಠಿಸುವಂಥ ಋಷಿಗಳು, ಶಾಸ್ತ್ರ= ಶಬ್ದಶಾಸ್ತ್ರ, ನಾಟ್ಯಶಾಸ್ತ್ರ, ಅಲಂಕಾರಶಾಸ್ತ್ರ, ಜ್ಯೋತಿಶ್ಶಾಸ್ತ್ರ, ಧರ್ಮಶಾಸ್ತ್ರ ಮೊದಲಾದ ಶಾಸ್ತ್ರಂಗಳನೋದುವಂಥ ಋಷಿ ಗಳು, ಆಗಮ= ಕಾಮಿಕ, ಯೋಗ್ಯ, ಚಿಂತ್ಯ, ಕಿರಣ, ಮೃಗೇಂದ್ರ ಮೊದಲಾದ ವಾತುಲಾಂತ್ಯವಾದ ಆಗಮಂಗಳನೋದುವಂಥ ಋಷಿಗಳು, ಪುರಾಣ= ಬ್ರಹ್ಮ ಮೊದಲಾಗಿ ಬ್ರಹ್ಮಾಂಡ ಪುರಾಣವೇ ಕಡೆಯಾದ ಹದಿನೆಂಟು ಪುರಾಣಂಗಳನಱಿದ

ಋಷಿಗಳು, ಇತಿಹಾಸ=ಭಾರತ ರಾಮಾಯಣಗಳೆಂಬ ಇತಿಹಾಸಂಗಳನೋದುವ ಋಷಿಕುಮಾರರು; ದಶವ್ಯಾಕರಣ= ಮಹಾಭಾಷ್ಯ ರೂಪಾವತಾರ ಪಾಣಿನೀಯ ಶಾಕಟಾಯನ ಸಾರಸ್ವತ ಮೊದಲಾದ ವ್ಯಾಕರಣಂಗಳ ಪಠಿಸುವ ಋಷಿಗಳು; ತರ್ಕ=ತರ್ಕಭಾಷೆ ವರದರಾಜೀಯ್ಯ ಚಿಂತಾಣಿ ಮೊದಲಾದ ತರ್ಕಶಾಸ್ತ್ರಗಳ ಸಂಪಾದಿಸುವ ಋಷಿಪುತ್ರರು ಇವರುಗಳಿಂದ; ಧರ್ಮಗಳ=

ಶ್ಲೋ ॥ " ಸತ್ಯಾಸ್ತೇಯಾರ್ಜವಾಹಿಂಸಾಃ ಶೌಚಮಿಂದ್ರಿಯನಿಗ್ರಹಃ ।
ದಾನಂ ವಿದ್ಯಾ ತಪೋಜ್ಞಾನಂ ದಶಕಂ ಧರ್ಮಲಕ್ಷಣಂ ॥ "

ಎಂಬ ಧರ್ಮಶಾಸ್ತ್ರ ಪ್ರಮಾಣದಿಂದ ದಶವಿಧವಾದ ಧರ್ಮಂಗಳ ಹೇಳುವ ಋಷಿಗಳಿಂದ; ಕರ್ಮಗಳ ಮರ್ಮಗಳ ಭೇದಗಳನಱುವ=ಮನೋವಾಕ್ಕಾಯ ಕರಣಂಗಳಲ್ಲಿ ನೆನೆದ ಕರ್ಮ ನುಡಿದ ಕರ್ಮ ಮಾಡಿದ ಕರ್ಮಂಗಳಿಗೆ ಈಪ್ರಕಾರವಾದ ಫಲವೆಂದು ಹೇಳುವ, ಧರ್ಮಜ್ಞರಾದ ಋಷಿಗಳಿಂದ; ಮೈದೆಗೆಯದಷ್ಟಾಂಗ ಯೋಗಮಂ ಸಾಧಿಸುವ= ಯಮನಿಯಮ ಆಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣ ಸಮಾಧಿಗಳೆಂಬ ಅಷ್ಟಾಂಗಯೋಗಮಂ ಸಾಧಿಸುತಿರ್ಪ ಋಷಿಗಳಿಂದ; ಶಿವರಹಸ್ಯಾರ್ಥಮಂ ಬೋಧಿಸುವ= ಪೃಥ್ವೀತತ್ವ ಆದಿಯಾಗಿ ಶಿವತತ್ವವೇ ಕಡೆಯಾದ ಶಿವರಸ್ಯವ ಬೋಧಿಸುವ ಜನರುಗಳಿಂದ--ಅಲಂಕಾರವಾದ ಆಶ್ರಮವಂ ನೋಡುತ್ತ, ನಡೆದನಕ್ಷಯರೂಪನು= ಕೇಡಿಲ್ಲದೆ ಇದ್ದ ರೂಪವನುಳ್ಳ ಶಿವನು ನಡೆತರುತಿರ್ದನು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದನು.

ಒಡಲನೆಲ್ಲವ ನೀಡಿಯಡಸೆ ಪುತ್ತಂ ಮೂಡೆ |
ಯಡಿಯುಗುರ್ಗಳ್ಕೈದೆ ಬೇರ್ವರಿದು ಪೊಡವಿಯನೊಡೆದು |
ಜಡೆಗವಲುವರಿದಿಳಿದು ಬೆಳೆಯೆ ನಿಡುಗಡ್ಡದೊಳು ಪಕ್ಷಿಗಳುಗೂಡಗೆಯ್ಯೆ ||
ಬಿಡದಿರಲು ಕರ್ಣಕೋಟರದೊಳೆಳಹಾವುಗಳು |
ಗಡಣದಿಂ ಪರಿದಾಡಲೇನೆಂದಱಿಯದೆ ತಪ |
ಬಿಡದೆ ಸಲೆ ಪರಮಕಾಷ್ಠೆಯೊಳಿರ್ಪಮುನಿಗಳಂ ಪೃಡನೀಕ್ಷಿಸುತ ನಡೆವನು||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಆ ಆಶ್ರಮದಲ್ಲಿ ತಪಸ್ಸು ಮಾಡುವ ಮುನಿಗಳು ಆವ ಪ್ರಕಾರದಲ್ಲಿ ಒಪ್ಪಿದರು? ಎಂದರೆ—ಒಡಲನೆಲ್ಲವನು ಬಿಡದೆ ಬಳಸಿ ಹುತ್ತವು ಮೂಡಿ ಕೈಯುಗುರು ಅಡಿಯುಗುರುಗಳು ನೆಲಕೆ ಬೇರ್ವರಿದು ಸುತ್ತಲಾಗಿ ಜಡೆಗಳು ಕವಲುವರಿದಿಳಿದು ಬಳೆದು ಮೆಳೆಗಳಗಲಕ್ಕೆ ನಿಡಿದಾದ ಗಡ್ಡದಲ್ಲಿ ಪಕ್ಷಿಗಳು ಗೂಡನಿಕ್ಕಲಾಗಿ, ಕರ್ಣಕೋಟರದಲ್ಲಿ ಮಱಿಹಾವುಗಳು ಮನೆಯ ಮಾಡಲಾಗಿ, ಪರಮಕಾಷ್ಠೆಯಿಂದ ತಪಸ್ಸುಮಾಡುತ್ತಿರ್ಪ ಮುನಿಗಳ ಕಂಡು ಸಂತಸದಿಂದ

ನೋಡುತ್ತ ನಡೆದನು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದಾನು.

ಸನಕಮುನಿ ಭೃಗುವತ್ರಿ ಭರದ್ವಾಜ ಸೂತ ಜೈ |
ಮಿನಿ ಜಹ್ನು ಜಮದಗ್ನಿ ಸುಪರಾಶರ ಬ್ರಹ್ಮ |
ತನುಜ ವೇದವ್ಯಾಸ ಗಾರ್ಗ್ಯ ಗೌತಮ ಸನಂದನ ಪುಲೋಮ ಸುಮರೀಚಿ ||
ಮುನಿವರವಸಿಷ್ಠ ವಿಶ್ವಾಮಿತ್ರ ಮಾಂಡವ್ಯ |
ಮನುಮತಿ ದಧೀಚಿ ಮಾರ್ಕಂಡೇಯ ವಾಲ್ಮೀಕಿ |
ಎನಿಸಿಪ ತಪಸಿಗಳಾಶ್ರಮಂಗಳಲ್ಲಿ ಭಿಕ್ಷಾಟನಂಗೆಯ್ಯುತುಂ ನಡೆದನು || ೨೪ ||

ಟೀಕು--ಕೇಳಿರೈ, ಎಲೆ ಮುನಿಗಳಿರಾ! ಶಿವನು ಸನಕ ಭೃಗು ಮೊದಲಾಗಿ ದಧೀಚಿ ವಾಲ್ಮೀಕಿ ಮಾರ್ಕಂಡೇಯರುಗಳಿದ್ದ ಎಲ್ಲಾ ಋಷಿಗಳ ಆಶ್ರಮಂಗಳನು ಹೊಕ್ಕು ಎಲ್ಲಾ ಋಷಿಗಳ ಕೆಯ್ಯ ಭಿಕ್ಷವ ಕೈಕೊಂಡು, ಅವರ ಚಿತ್ತವೃತ್ತಿಗಳನು ಅರಿಯುತ್ತ ಶಿವನು ಭಿಕ್ಷಾಟನಕ್ಕೆ ನಡೆದನು ಕಾಣಿರೈ, ಎಲೈ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದಾನು.

ಕಂಗೆ ಮಂಗಳಕರವೆನಿಸಿ ಮೆಱೆವ ಪಾತಾಳ |
ಗಂಗೆ ಗೋದಾವರಿ ವಿಮಲೆ ಮಲಪ್ರಹರಿ ಕೃ |
ಷ್ಣಾಂಗಿ ಗೌತಮಿ ಯಮುನೆ ಕಾವೇರಿ ಕಪ್ಪಿನಿಯೆನಿಪ ಭೀಮರಥಿ ಸರಸತಿ ||
ತುಂಗಭದ್ರೆಯಿವಾದಿಯಾಗಿ ಪೆಸರಾದ ತೀ |
ರ್ಥಂಗಳಂ ಚರಲಿಂಗವಾಗಿ ತನ್ನಯ ಶ್ರೀಪ |
ದಂಗಳಿಂ ಪಾವನಂಗೆಯ್ಯುತ್ತೆ ನಡೆತಂದನಾಕಾಶಗಂಗೇಶನು || ೨೫ ||

ಟೀ--ಕೇಳಿರೈ, ಎಲೆ ಮುನಿಗಳಿರಾ! ಆ ಪರಮೇಶ್ವರನು ಭಿಕ್ಷಾಟನಕ್ಕೆ ಬಹಲ್ಲಿ, ಆವ ತೀರ್ಥಂಗಳಂ ನೋಡುತ್ತ ಬಂದನು? ಎಂದರೆ--ಕಣ್ಗೆ ಮಂಗಳವಾದ ಪಾತಾಳಗಂಗೆಯುಂ ನೋಡಿ, ಗೋದಾವರಿಯುಂ ನಿರೀಕ್ಷಿಸಿ, ವಿಮಲೆಯಾದ ಮಲಪ್ರಹರಿಯುಂ ಕಂಡು, ಕೃಷ್ಣವೇಣಿಯಲ್ಲಿ ಸಂತಸಂಬಟ್ಟು, ಗೌತಮಿಯಲ್ಲಿ ಸಲಿದು, [ಯಮುನೆಯಲ್ಲಿ ಮಿಂದು,] ಕಾವೇರಿಯುಂ ಪೊಕ್ಕು, ಕಪ್ಪಿನಿಯೊಳಿರ್ದು, ಭೀಮರಥಿಯುಂ ಮೆಟ್ಟಿ, ಸರಸ್ವತಿಯನೈದಿ, ತುಂಗಭದ್ರೆಯ ಆರೈದು, ಕರುಣದಿಂದ ಇವು ಮೊದಲಾದ ಅಷ್ಟಷಷ್ಟಿ ತೀರ್ಥಂಗಳಂ ಚರಲಿಂಗವಾಗಿ ತನ್ನ ಶ್ರೀಪಾದದಿಂದ ಪಾವನವಂ ಮಾಡುತ್ತ, ನಡೆತಂದನಾಕಾಶಗಂಗೇಶನು = ದೇವಗಂಗೆಯನು ಮಸ್ತಕದಲ್ಲಿ ಧರಸಿದಂಥ ಮಹಾದೇವನು ಈ ಪ್ರಕಾರದಲ್ಲಿ ಬರುತಿರ್ದನು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದಾನು.

ಶ್ರೀಶೈಲ ಹಿಮವ ಕೇತಾರವೊಪ್ಪುವ ವಾರ |
ಣಾಸಿ ಪಂಪಾಕ್ಷೇತ್ರ ಶಿವಗಂಗೆ ನಂದಿಗಿರಿ |
ಲೇಸೆನಿಪ ಭದ್ರಾದ್ರಿ ಸೇತುಬಂಧನ ಕುಂಭಕೋಣೆ ತಿರುಕಾಳಹಸ್ತಿ ||
ಭಾಸುರವ ಪೊನ್ನಾಂಬರಂ ಕಂಚಿ ಮೊದಲಾದ |
ದೇಶದೇಶದ ಮಹಾಸ್ಥಾನಂಗಳಂ ನೋಡು |
ತೀಶನಾ ತಮ್ಮ ಬೀಡಾರವೆಂದಲ್ಲಲ್ಲಿಗೆಡೆಗೆಯ್ಯುತೈತಂದನು || ೨೬ ||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಆ ಪರಶಿವಮೂರ್ತಿಯು ಮೊದಲು ತಾನು ಪ್ರತ್ಯಕ್ಷವಾದ ಪುಣ್ಯಸ್ಥಾನಂಗಳಲ್ಲಿ ಇದ್ದ ಲಿಂಗಗಳಂ ನೋಡಿ, ಅಲ್ಲಿದ್ದ ಭಕ್ತರ ರಕ್ಷಿಸಬೇಕೆಂದು ಈ ಪ್ರಕಾರವಾದ ಪುಣ್ಯಕ್ಷೇತ್ರಂಗಳನು ಹೊಕ್ಕು ಬರುತಿರ್ದನು. ಅವು ಆವಾವುವೆಂದರೆ—ಮತಂಗಋಷಿಗೆ ಪ್ರತ್ಯಕ್ಷವಾದ ಶ್ರೀಶೈಲಮಂ ಪೊಕ್ಕು, ಧರ್ಮಪುತ್ರಂಗೆ ಕರುಣಿಸಿದ ಕೇತಾರದಲ್ಲಿ ಇದ್ದು, ಭಗೀರಥಂಗೆ ಪ್ರತ್ಯಕ್ಷವಾದ ವಾರಣಾಸಿಯೊಳಿರ್ದು, ಪಾರ್ವತಾದೇವಿಗೆ ಪ್ರತ್ಯಕ್ಷವಾದ ಪಂಪಾಕ್ಷೇತ್ರದಲ್ಲಿರ್ದು, ಪರಿಣಾಮಿಸಿದ ಕಣಾಧರ ಕಪಿಲಂಗೆ(?) ಪ್ರತ್ಯಕ್ಷವಾದ ಶಿವಗಂಗೆಗೆ ಬಂದು, ನಂದೀಶ್ವರಂಗೆ ಪ್ರತ್ಯಕ್ಷವಾದ ನಂದಿಗಿರಿಯು ಸೇರಿ, ವ್ಯಾಘ್ರಪಾದಂಗೆ ಪ್ರತ್ಯಕ್ಷವಾದ ಭದ್ರಾದ್ರಿಯಂ ನಿರೀಕ್ಷಿಸಿ, ರಾಮಚಂದ್ರಂಗೆ ಕರುಣಿಸಿದ ಸೇತುಬಂಧನದಲ್ಲಿ ವಿಶ್ರಮಿಸಿ, ಕುಂಭಕೋಣೆಯುಂ ಸಾರ್ದು, ಕಣ್ಣಪ್ಪಗೊಲಿದ ಕಾಳಹಸ್ತಿಯೊಳ್ ನಲಿದು, ಪತಂಜಲಿಗೆ ಒಲಿದ ಪೊನ್ನಾಂಬರದಲ್ಲಿ ನರ್ತಿಸಿ, ಸಿರಿಯಾಳಗೊಲಿದ ಕಂಚಿಯೊಳೆಡೆಗೆಯ್ದು, ಇವು ಮೊದಲಾದ ಪುಣ್ಯಸ್ಥಳಂಗಳಂ ನೋಡುತ್ತ, ಇವು ತಮ್ಮ=[ತನ್ನ ಭಕ್ತರಿರುವ] ಬೀಡಾರವೆಂದು ಅಲ್ಲಲ್ಲಿಗೆಡೆಗೆಯ್ಯುತ ಶಿವನು ಬರುತಿರ್ದನು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದನು.

ಮಾರಾರಿ ತನ್ನ ಲೀಲಾಚರಣೆಯಿಂದಿಂತು |
ಧಾರಿಣಿಯು ಮೇಲೆಸೆವ ಪುಣ್ಯತೀರ್ಥಂಗಳಂ |
ಚಾರುಶೈವಕ್ಷೇತ್ರವೆನಿಪ ಘಟಿಕಾಮಹಾಸ್ಥಾನಂಗಳಂ ನೋಡುತ ||
ಈರೆಂಟು ಯೋಜನಪರಿಪ್ರಮಾಣತೆಯ ವಿ |
ಸ್ತಾರವಿರ್ಪತ್ತೆಂಟು ಯೋಜನೋನ್ನತಿವಡೆದ |
ಸೌರಾಷ್ಟ್ರದೇಶಮಧ್ಯದಲಿ ರಾಜಿಸುವ ದ್ವಾರಾವತಿಗೆ ನಡೆತಂದನು || ೨೭ ||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಮಾರಾರಿ=ಕಾಮವೈರಿಯಾದ ಶಿವನು, ಲೀಲಾಚರಣೆಯಿಂದ, ಇಂತು ಭೂಮಿಯ ಮೇಲುಳ್ಳ ಪುಣ್ಯತೀರ್ಥಂಗಳನು, ಮನೋಹರವಾದ ಶಿವಕ್ಷೇತ್ರಗಳಾದ ಮಹಾಘಟಿಕಾಸ್ಥಾನಂಗಳನು ನೋಡಿ, ಆ ತದ

ನಂತರದಲ್ಲಿ ಹದಿನಾಲ್ಕು ಯೋಜನ ಪ್ರಮಾಣದ ವಿಸ್ತೀರ್ಣದಿಂದ [ಒಪ್ಪುವ] ಇಪ್ಪತ್ತೆಂಟು ಯೋಜನ ಪ್ರಮಾಣದ ಔನ್ನತ್ಯದಿಂದ ಒಪ್ಪುವ ಸೌರಾಷ್ಟ್ರದೇಶಮಧ್ಯದಲ್ಲಿ ಅಲಂಕಾರವಾಗಿ, ಶ್ರೀಕೃಷ್ಣನಿರುವುದಕ್ಕೆ ಆಶ್ರಯವಾದ ದ್ವಾರಾವತಿಯೆಂಬ ಪಟ್ಟಣಕ್ಕೆ ಬಂದನು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನ ಹೇಳುತಿರ್ದಾನು.

ಇಂತು ಪ್ರಥಮಸಂಧಿಗೆ ಜಯಮಂಗಳಂ, ಮಹಾ ಶ್ರೀ.

— ದ್ವಿತೀಯಸಂಧಿ —

ಸೂಚನೆ :—

ದ್ವಾರಾವತಿಯ ಪೊಕ್ಕು ವಾರಾಂಗನೆಯರುಗಳ |
ಕೇರಿ ಮೊದಲಾಗಿ ಭಿಕ್ಷವ ಬೇಡುತೆಯ್ದಿ ಮದ |
ನಾರಿಯುಲ್ಲಿಂದ ಶ್ರೀಕೃಷ್ಣನರಮನೆಯ [1]ನೋಡುವೆನೆಂದು ನಡೆತಂದನು[1] ||

ಟೀಕು.—ಮುಂದಣ ಸಂಧಿಯ ಕಥಾಪ್ರಸಂಗವೇನು? ಎಂದರೆ—ಶಿವನು ದ್ವಾರಾವತಿಯೆಂಬ ಪಟ್ಟಣವ ಹೊಕ್ಕು ಸೂಳೆಗೇರಿ ಮೊದಲಾದ ಕೇರಿಗಳಲ್ಲಿ ಭಿಕ್ಷವಂ ಬೇಡಿ ಅಲ್ಲಿಂದ ಶ್ರೀಕೃಷ್ಣನ ಅರಮನೆಯ ನೋಡುವುದಕ್ಕೆ ಬಂದನು, ಎಂಬುದೀ ಸಂಧಿಯ ಕಥಾಪ್ರಸಂಗವು.

ಹಿರಿಮಸಂಗಡ ಮಲೆಯರಸನ ಮಗಳೊಳಗೆನ್ನ |
ಸರಕುಮಾಡನೆನುತ್ತ ಗಂಗಾಭವಾನಿ ಮುನಿ |
ದಿರಲು ತೊಱೆವೆಣ್ಗೊಲಿದಪನು ಗೊರವನೆಂದು ಶಾಂಕರಿ ಮುನಿಸಿದ ಸುಡಿಯ
ಗಿರಿಜೆ ಸಾಸಿನ್ನವನೆಂತ ತಲೆಯ ಮಾಱಿಕೊಂ | [ದಿರಲು ||
ಡರಿಗೆ ಕಣ್ಸೊಡಗೆಯೊಂದೊವರಱಿಯದವೊಲೊ |
ವರ ತ್ರಿಳಿಸಿಯೊಂಮೊಡಲೊಳಿರ್ದಂಪಿರಾಳ್ವ ಶಂಕರನೀವುದೆಮಗೆಸುಖವಂ ||

ಟೀಕು.—ಸಂಧಿಯ ಪ್ರಾರಂಭದಲ್ಲಿ ಕವೀಶ್ವರನು ಈಶ್ವರನ ಸ್ತೋತ್ರವಂ ಮಾಡುತಿರ್ದನು.

ಪಾಠಾಂತರ—1. ನೆಲ್ಪ ಸಂಭ್ರಮವದೇ ಪ್ರೊಗಳ್ವೆನು.

ಪರಮೇಶ್ವರನು ಕೈಲಾಸದರಮನೆಯಲ್ಲಿ ತನ್ನ ತೊಡೆಯಮೇಲಿರ್ದ ಪಾರ್ವತೀದೇವಿಯ ವಾಮಕರದಿಂದಾಲಿಂಗಿಸಿ ಸವಿನೋಟದಿಂ ನೋಡಿ ಮುಗುಳ್ನಗೆವೆರಸಿ ಸರಸವಾಡುತ್ತಿರಲು, ಮಸ್ತಕದ ಮೇಲಿರ್ದ ಗಂಗೆ ಕಂಡು ಸೈರಿಸಲಾರದೆ ಶಿವನ ನೋಡಿ—ಹಿರಿದು ಸಂಗಡ ಮಲೆಯರಸನ ಮಗಳ ಮೆಚ್ಚಿ, ಎನ್ನ ಸರಕುಮಾಡನೆನುತ್ತ=ಗಿರಿರಾಜನ ಮಗಳೆನ್ನದೆ ಕೋಪದಿಂದ ಮಲೆಯರಸನ ಮಗಳೆಂದು ಸವತಿಮತ್ಸರದಿಂದ [ಹೇಳಿ], "ಆವಳ ಕೂಡಿಕೊಂಡು ಸರಕುಮಾಡನೆನ್ನನು" ಎಂದು, ಗಂಗಾಭವಾನಿ ಮುನಿಯುಲಾಗಿ; ಶಿವನು ಜಟಾಮುಕುಟವ ಸರಿಮಾಡಿಕೊಂಬುವ ನೆವದಿಂದ ಶಶಿಕಲೆಯ ಸರಿಯಾಗಿ ಇರಿಸುವ ಹಾಗೆ ಬಲಗೈಯಿಂದ ಗಂಗಾಂಬಿಕೆಯ ಗಲ್ಲವಿಡಿದು ಬೇಡಿಕೊಂಬುದ ಗೌರೀದೇವಿ ಕಂಡು, [ಸವತಿಮತ್ಸರದಿಂದ ಗಂಗೆಯೆಂದು ಹೇಳದೆ], ತೊಱೆವೆಣ್ಣಿಗೆ ಒಲಿದು ಗೊರವ ಕೆಟ್ಟನೆಂದು, ಶಾಂಕರಿ ಮುನಿದು ಮೊಗದಿರುಹಲಾಗಿ; ಗಿರಿಜೆ = ಎಲೆ ಪಾರ್ವತಿ, ನಾನಿನ್ನವನೆನುತ, ತಲೆಯ ಮಾಱುಕೊಂಡವರಿಗೆ ಕಣ್ಬೊಬ್ಬುಗೆ = ತಲೆಯ ಮಾಱುಕೊಟ್ಟ ಬಳಿಕ ಕಣ್ಣೆರಡು ಹೊಱಗೆ, ಈ ದೇಹದೊಳಗೆ ಅರ್ಧವ ನಿನಗೆ ಕೊಟ್ಟ ಬಳಿಕ ಇನ್ನು ತಾನು ಹೊಱಗಾಗುವುದಾವುದು? ಕೋಪ ಬೇಡೆಂದು, ಕಾಲ್ಗೆಱಗಿ ಗಲ್ಲವ ಪಿಡಿದು ಮುನಿಸ ತಿಳಿಪಿ, ಒಬ್ಬರನೊಬ್ಬರು ಅಱಿಯದ ಮರ್ಯಾದೆಯಿಂದ, ಇಬ್ಬರ ಚಿತ್ತಕ್ಕೂ ಸಂತೋಷವಂ ಮಾಡಿ, ಗಂಗೆಗೌರಿಯರೆಂಬ, ಇರ್ವರು ಪೆಂಡಿರನಾಳಿದ, ಮೋಹನಮೂರ್ತಿಯಾದ, ಮಹಾದೇವನು ನಿಮಗೆ ಸಕಲೈಶ್ವರ್ಯಗಳ ಕುಡಲಿ! ಎಂದು ಮಾಡಿದ ಆಶೀರ್ವಾದ.†

† "ಒರ್ವರಱಿಯದಪ್ರೌಢರ್ವ ತಿಳಿಪಿ" ಎಂಬುದರ ಸ್ವಾರಸ್ಯವನ್ನು ಟಿಪ್ಪಣಿಕಾರನು ಆಲೋಚಿಸಿದಂತೆ ಕಂಡುಬರುವುದಿಲ್ಲ. "ಗಿರಿಜೆ ನಾನಿನ್ನವನೆನುತ......ಕಣ್ಬೊಬ್ಬುಗೆಯೆಂದು" ಎಂಬ ಮಾತನ್ನು ಗಂಗೆಗೌರಿಯರಿಬ್ಬರಿಗೂ ಅನ್ವಯಿಸಿ, ಆ ವಾಕ್ಯಕ್ಕೆ ಗಂಗೆಯ ವಿಚಾರದಲ್ಲಿ— ಎಲೆ ಹೈಮವತಿಯಾದ ಗಂಗೆಯೇ, ತಲೆಯನ್ನೇ, ನಿನಗೆ ಮಾಱಿಬಿಟ್ಟರೆ ಹೇಗೋ ಹಾಗೆ, ಕೊಟ್ಟ ಬಳಿಕ ಕಣ್ಣು ಹೊಱಗೆ = ಅನ್ಯತ್ರ ಹೇಗೆ ಚಲಿಸುವುದು? ನಾನಿನ್ನವನೇ ಎಂಬುದಾಗಿಯೂ। ಪಾರ್ವತಿಯ ಪಕ್ಷವಾಗಿ, ಎಲೆ ಪಾರ್ವತಿ, ತಲೆಯ ಮಾಱಿಕೊಂಡವರಿಗೆ ಕಣ್ಬೊಬ್ಬುಗೆ ಎಂಬ ಗಾದೆಯನು ಅಱಿಯೆಯಾ? ಈ ದೇಹದಲ್ಲಿ ಅರ್ಧವನ್ನೇ ನಿನಗೆ ಕೊಟ್ಟ ಬಳಿಕ ಇನ್ನು ತಾನು ಹೊಱಗಾಗುವುದು ಹೇಗೆ? ನಾನಿನ್ನವನೇ ಎಂಬುದಾಗಿಯೂ ಅರ್ಥಗಳನ್ನು ಮಾಡದಿದ್ದರೆ, "ಒರ್ವರಱಿಯದಪ್ರೌಢರ್ವರ ತಿಳಿಪಿ" (=ಪಾರ್ವತಿಗೆ ತಿಳಿಯದ ಹಾಗೆ ಗಂಗೆಗೂ, ಗಂಗೆಗೆ ತಿಳಿಯದಹಾಗೆ ಪಾರ್ವತಿಗೂ, ಇಬ್ಬರಿಗೂ [illegible] ಈ ಸಮಾಧಾನೋಕ್ತಿಯನ್ನು ಶಿವನು ಹೇಳಿದನೆಂದು ಊಹಿಸಿಕೊಂಡು, ತಮಗೆ ತಾವೇ ಸಮಾಧಾನ ಹೊಂದುವಹಾಗೆ ಮಾಡಿ.) ಎಂಬ ವಾಕ್ಯದಲ್ಲಿ ಕವಿಯು ಇಟ್ಟ ಸ್ವಾರಸ್ಯವು ಹೊಱಪಡಲಾರದು. "ಮಲೆಯರಸನ ಮಗಳು" "ತೊಱೆವೆಣ್" ಎಂಬುದಾಗಿ ಹೆಸರನ್ನು ಮಱೆಯಿಸಿ ಹೀಯಾಳಿಸಿ ಹೇಳುವುದು ಸವತಿಯರಿಗೆ ಸಹಜವಾಗಿದೆ.

ಎಸೆದಿಹ ಸುರೇಖೆಯಿಂದಂ ಭಾವದಿಂ ರೂಪಿ |
ನೆಸಕದಿಂ ಶೃಂಗಾರವಿಷಯದಿಂ ಕಂಗೊಳಿಪ |
ಪೊಸದೇಶಿಯಿಂದಲಂಕಾರದಿಂ ಲಕ್ಷಣೋಚಿತವಾದ ಶುದ್ಧಾಂಗದಿಂ ||
ರಸರಚನೆ ವಿಭ್ರಮ ವಿಲಾಸದಿಂದಲಿ ಕೇಳ್ದ |
ರಸಿಕರ ಹೃದಯವೆಂಬ ರಂಗಮಧ್ಯದೊಳು ನ |
ರ್ತಿಸುವ ಸಚ್ಚಣಿಯಂತೆ ಶಿವನ ಭಿಕ್ಷಾಟನದ ಕೃತಿಯು ಮೋಹನವಪ್ಪುದು ||

ಟೀಕು---ಕವೀಶ್ವರನು ಕಾವ್ಯಕನ್ಯಕೆಗು ನರ್ತನಸ್ತ್ರೀಗು ಸಮಾನವೆಂದು ಅಭಿವರ್ಣಿಸುತ್ತಿದ್ದಾನು. ಎಸೆದಿಹ ಸುರೇಖೆಯಿಂದಂ = ಆ ನರ್ತನಸ್ತ್ರೀಯು ರಂಗಸ್ಥಳದಲ್ಲಿ ಸುರೇಖೆಯಿಂದ ಒಪ್ಪುವಳು; ಈ ಕಾವ್ಯವು ಲೇಸಾದ ರೇಖೆಯಿಂದ ಒಪ್ಪುತ್ತಿಹುದು. ಭಾವದಿಂ = ಆ ನೃತ್ಯಸ್ತ್ರೀಯು ಚಿತ್ತದಲ್ಲಿ ಹುಟ್ಟಲುಪಟ್ಟ ಭಾವದಿಂದ ಒಪ್ಪುವಳು; [ಈ ಕಾವ್ಯವು ಅಭಿಪ್ರಾಯದಿಂದ ಒಪ್ಪುತ್ತಿಹುದು.] ರೂಪಿನೆಸಕದಿಂ = ಆ ನೃತ್ಯಸ್ತ್ರೀಯು ಅವಯವಂಗಳ ರೂಪಿನಿಂದ ಅಲಂಕಾರವಾಗಿಹಳು; ಈ ಕಾವ್ಯವು ಸ್ತ್ರೀಯಾಕಾರವೆಂಬ ರೂಪಿನಿಂದ ಅಲಂಕಾರವಾಗಿಹುದು. ಶೃಂಗಾರವಿಷಯದಿಂ = ಆ ನೃತ್ಯಸ್ತ್ರೀಯು ಅಂಬರಶೃಂಗಾರ, ಅನುಲೇಪನಶೃಂಗಾರ, ಮಾಲ್ಯಶೃಂಗಾರ, ವಿಭೂಷಣಶೃಂಗಾರ, ನೈಪಥ್ಯಶೃಂಗಾರಗಳಿಂದ ಒಪ್ಪುವಳು; ಈ ಕಾವ್ಯವೇ ಶೃಂಗಾರ ವಿಷಯದಿಂದ ಒಪ್ಪುವುದು. ಕಂಗೊಳಿಪ ಪೊಸದೇಶಿಯಿಂದ = ಆ ನೃತ್ಯಸ್ತ್ರೀಯು ದೇಶೀಯಪಾತ್ರದಿಂದ ಒಪ್ಪುವಳು; ಈ ಕಾವ್ಯವು ತದ್ಭವ ತತ್ಸಮ ದೇಶೀಯವೆಂಬ ಲಕ್ಷಣದಿಂದ (?) ಒಪ್ಪುವುದು. ಅಲಂಕಾರದಿಂ = ಆ ನೃತ್ಯಸ್ತ್ರೀಯು ಕಟಕ ಕೇಯೂರ ಮೊದಲಾದಲಂಕಾರದಿಂದ ಒಪ್ಪುವಳು; ಈ ಕಾವ್ಯವು ಉಪಮೆ ರೂಪಕ ಸಮಾಸ ಕ್ರಮ ಮೊದಲಾದ ಅಲಂಕಾರಗಳಿಂದ ಒಪ್ಪುವುದು. ಲಕ್ಷಣೋಚಿತವಾದ ಶುದ್ಧಾಂಗದಿಂ = ಸುಲಕ್ಷಣಸಮೇತವಾದ ಹದಿನೆಂಟು ಲಕ್ಷಣದಿಂದ ಆ ನೃತ್ಯಸ್ತ್ರೀಯು ಒಪ್ಪುವಳು; ಈ ಕಾವ್ಯವು ಛಂದಸ್ಸುಲಕ್ಷಣದಿಂದ ಒಪ್ಪುವುದು. ರಸರಚನೆ ವಿಭ್ರಮ ವಿಲಾಸದಿಂದಲಿ = [ಆ ನೃತ್ಯಸ್ತ್ರೀಯು ಶೃಂಗಾರಾದಿ ನವರಸಗಳು ಹುಟ್ಟುವಂತೆ, ಅಭಿನಯಿಸುವಳು; ಈ ಕಾವ್ಯವು ಶೃಂಗಾರಾದಿ ನವರಸಗಳಿಂದ ಒಪ್ಪುವುದು. ಆ ನೃತ್ಯಸ್ತ್ರೀಯು ವಿಭ್ರಮವಿಲಾಸಗಳನು ತೋರಿಸುವಳು; ಈ ಕಾವ್ಯದಲ್ಲಿ ವಿಭ್ರಮವಿಲಾಸಗಳು ವರ್ಣಿತವಾಗಿರುವುವು.] ಕೇಳ್ದ ರಸಿಕರ ಹೃದಯವೆಂಬ ರಂಗಮಧ್ಯದೊಳು = ಆ ಸ್ತ್ರೀಯು ನಾಟ್ಯಮಂಟಪದ ರಂಗಮಧ್ಯಗಲ್ಲಿ ಕುಣಿವಳು; ಈ ಕಾವ್ಯಕನ್ನಿಕೆಯು ಸಂಸ್ಕೃತ ಕರ್ಣಾಟಕವೆಂಬ ಉಭಯವ್ಯಾಕರಣ ಪಂಡಿತರಾದ ರಸಿಕರ ಹೃದಯವೆಂಬ ರಂಗಮಂಟಪದಲ್ಲಿ ಕುಣಿವಳು. ಸಚ್ಚಣಿಯಂತೆ = ಈ ಭಿಕ್ಷಾಟನ ಚರಿತ್ರವೆಂಬ ಸಚ್ಚಣಿಯು, ಕುಣಿದಾಗ ಮೋಹನವಪ್ಪುದು ಎಂದು ಕವೀಶ್ವರನು ಅಭಿವರ್ಣಿಸುತ್ತಿದ್ದಾನು.

ಈರಾಱು ರವಿಗಳೇಕೇಂದುವಲ್ಲದೆ ಮತ್ತೆ |
ಧಾರಿಣಿಗೆ ಜೇಱಿಱೊಂದು ರವಿಶಶಿಗಳಿಲ್ಲೆಂಬ |
ಪೌರಾಣವಾಕ್ಯ ಪುಸಿಯಾದುದಿಃಪಕ್ಕಟಾ ಎನಲುಮಾಧವಸಿದಿರೊಳು ||
ಸೂರಿಯಶಶಾಂಕರ್ ಪಲಬರೊಪ್ಪುವಂದದಿಂ |
ಗೈರಿಕದಿ ಮುಕ್ತಾಫಲದಿ ಸಮೆದ ಕಲಶಂಗ |
ಳೋರಣಿಪ ಪ್ರಾಸಾದಸೌಧಹರ್ಮ್ಯಂಗಳಿಂಪೆಸೆದುದಾದ್ವಾರಾವತಿ || ೩ ||

ಟೀಕು— ಕೇಳಿರೈ, ಎಲೆ ಮುನಿಗಳಿರಾ! ಶಿವನು ದ್ವಾರಾವತಿಗೆ ಭಿಕ್ಷಾಟನಕ್ಕೆ ಬಹ ಸಮಯದಲ್ಲಿ ಕಣ್ಣಿಗೆ, ಕತ್ತಲೆಯುಲ್ಲಿ ಆ ಪುರದ ಮಧ್ಯದಲ್ಲಿದ್ದ ಕಲಶಂಗಳಾವ ಪ್ರಕಾರದಲ್ಲಿ ಒಪ್ಪಿದುವು? ಎಂದರೆ— ಈರಾಱು ರವಿಗಳು = ಸೂರ್ಯರು ಹನ್ನೆರಡು, ಏಕೇಂದು= ಚಂದ್ರನು ಒಬ್ಬನು, ಅಲ್ಲದೆ, ಮತ್ತೆ ಧಾರಿಣಿಗೆ ರವಿಶಶಿಗಳಿಲ್ಲೆಂಬ ಪೌರಾಣವಾಕ್ಯ = ಚಂದ್ರಸೂರ್ಯರು ಮತ್ತಿಲ್ಲವೆಂಬುವ ಪೌರಾಣವಾಕ್ಯ ಹುಸಿಯಾಯ್ತು ಅಕಟಕಟಾ, ಎಂಬ ಮರ್ಯಾದೆಯಿಂದ, ಉಮಾಕಾಂತನಾದ ಶಿವನ ಇದಿರಿನಲ್ಲಿ ಚಂದ್ರಸೂರ್ಯರು ಹಲಬರು ಬಂದು ನಿಂದರೋ ಎಂಬಹಾಗೆ, ಗೈರಿಕದಿಂ= ಸುವರ್ಣದಿಂದ ಮಾಡಲ್ಪಟ್ಟ ಕಲಶಂಗಳಿಂದಲು, ಮುಕ್ತಾಫಲದಿ= ಮುತ್ತುಗಳಿಂದ ಮಾಡಲ್ಪಟ್ಟ ಕಲಶಂಗಳಿಂದಲು, ರಮ್ಯವಾದ ದೇವಕ್ಷಾಭವನ ರಾಜಸದನ ಉಪ್ಪರಿಗೆಗಳಿಂದ ಆ ದ್ವಾರಕಾಪುರವು ಒಪ್ಪುತ್ತಿರಲಾಗಿ; ಶಿವನು ನೋಡುತ್ತ ನಡೆತರುತಿರ್ದನು ಕಾಣಿರೈ, ಎಲೆ ಋಷಿಗಳಿರಾ! ಎಂದು, ಸೂತಮುನೀಶ್ವರನು ಹೇಳುತಿರ್ದನು.

ಇಳೆಯ ಭೋಗಂಗಳಿಗಿದೇ ತಾಣಮೆಂಬಂತೆ |
ಬಳಸಿ ಪೊಳೆಪೊಳೆವ ಪೊಂಗೋಂಟೆ ಪೊಂಗೋಂಟೆಯಂ |
ಬಳಸಿ ಪಾತಾಳಗಾಣಿಸಿ ನೆಗಳು ನೆಲಗಾಣಗಳು ಕೆಲಬಲಗಳಲ್ಲಿ ||
ಬಳಸಿ ಕಂಗೊಳಿಪ ಪೂಗೊಳನು ಪೂಗೊಳಗಳಂ |
ಬಳಸಿ ನಾನಾಭೂಜ ಭೂಜರಾಜಿಗಳ ತ |
ಣ್ಣೆಳಲುತ್ತಿಣಿಯನಮನಂಗೊಳಲುತ್ತಿಕೃಷ್ಣ ನಿಪಪೊಳಲುಸೊಬಗಿಂದೆಸೆದುದು ||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಆ ದ್ವಾರಕಾಪುರವು ಆವ ಪ್ರಕಾರದಲ್ಲಿ ಒಪ್ಪಿತ್ತು? ಎಂದರೆ—ಇಳೆಯ ಭೋಗಂಗಳಿಗಿದೇ ತಾಣಮೆಂಬಂತೆ = ಭೂಮಿಯುಲ್ಲಿರ್ದ ಭೋಗಂಗಳೆಲ್ಲಕ್ಕೂ ಇದೇಸ್ಥಾನವೆಂಬ ಮರ್ಯಾದೆಯಲ್ಲಿ, ಬಳಸಿ ಹೊಳೆಹೊಳೆವ ಸುವರ್ಣಮಯವಾದ ಅಂಬರಚುಂಬಿಯಾದ ಕೋಂಟೆಯಿಂದ, ಆ ಕೋಂಟೆಯ ಬಳಸಿ ಪಾತಾಳಾಂತಮಾಗಿ ನೆಗಳು ನೆಲೆಗಾಣದಗಳಿನಿಂದ, ಆ ಅಗಳ ಬಳಸಿ ತಾವರೆ ನೈದಿಲೆಗಳಿಂದ ಅಲಂಕಾರವಾದ ಪೂಗೊಳಗಳಿಂದ, ಆ ಪೂಗೊಳಗಳ ಬಳಸಿ ಪೂತು ಪಣ್ತೊಪ್ಪುವ ಚೂತ ಪನಸ ನಾರಿಕೇಳ ದಾಳಿಂಬ ಪುನ್ನಾಗ ಪೂಗ ಮೊದಲಾದ

ವೃಕ್ಷಸಮೂಹಂಗಳಿಂದ, ದ್ವಾರಕಾಪುರದ ಬಹಿರ್ವನದ ತಂಪಾದ ನೆಳಲು, ತ್ರಿಣಯನನ ಮನಂಗೊಳಲು; ಶ್ರೀಕೃಷ್ಣನಿರುತಿರ್ದ ದ್ವಾರಾವತಿಯೆಂಬ ಪೊಳಲು ಸೊಬಗಿಂದ ಒಪ್ಪುತ್ತಿರಲಾಗಿ; ಶಿವನು ನೋಡುತ್ತ ನಡೆತರುತಿರ್ದನು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದಾನು.

ಈಶನು ಬಹಿರ್ವನವನೀಕ್ಷಿಸುತ ಬರುತಿರ |
ಲ್ಕಾಸಮಯದಲಿ ಮುಂದೆ ವಿಜಯಜಯಮಂ ಮಾಡಿ |
ಗಾಸಿಯಾದಶ್ವಗಳ ನೀರ್ಗುಡಿಸಲಿಳಿದನೆನಲಿನನಪರಜಲಧಿಗಿಳಿಯೆ ||
ಶ್ರೀಸದಾಶಿವನೆ ಚಿತ್ತೈಸಿ ನೋಡೆಂದೆನುತ |
ವಾಸವಂ ತೋರ್ಪ ಕನ್ನಡಿಯಂತೆ ಬೆಳ್ವೆಳಗ |
ಸೂಸುತುಂ ದಿಗುಭಿತ್ತಿಯಂ ಧವಳಿಸುತ ಪೂರ್ಣಚಂದ್ರನುದಯಂಗೆಯ್ದನು ||

ಟೀ—ಕೇಳಿರೈ, ಎಲೆ ಮುನಿಗಳಿರಾ! ಈಶ್ವರನು ಆ ದ್ವಾರಕಾಪುರದ ಬಹಿರ್ವಳಯದ ಉದ್ಯಾನವ ನೋಡುತ್ತ ಬರುತ್ತಿರ್ಪಲ್ಲಿ, ಸೂರ್ಯನು ಅಸ್ತಮಿಸುವುದಕ್ಕೆ ಉದ್ಯೋಗವಾಗಿದ್ದ ಸಮಯದಲ್ಲಿ ಹೇಗೆ ಒಪ್ಪಿದನು? ಎಂದರೆ—ವಿಜಯಜಯಮಂ ಮಾಡಿ= ವಿಜಯ--ವಿ ಚಕ್ರವಾಕಪಕ್ಷಿಗಳಿಗೆ ಜಯ ಲೇಸ ಮಾಡಿ, ಜಯಮಾಡಿ—ಕತ್ತಲೆಯೆಂಬ ಹಗೆಯನು ಓಡಿಸಿ; ಗಾಸಿಯಾಗಿ ಬಂದು ಬಳಲಿದ ಕುದುರೆಗಳ ನೀರ್ಗುಡಿಸುವುದಕ್ಕೆ ಪಶ್ಚಿಮದಿಕ್ಕಿಗೆ ಇಳಿದನೋ ಎಂಬ ಮರ್ಯಾದೆಯಿಂದ ಅಸ್ತಮಿಸಲಾಗಿ—ಆ ಸಮಯದಲ್ಲಿ, ಶ್ರೀಸದಾಶಿವನೇ ಚಿತ್ತೈಸಿ ನೋಡೆಂದೆನುತ ವಾಸವಂ ತೋರ್ಪ ಕನ್ನಡಿಯಂತೆ= ಎಲೈ ಶ್ರೀಮಹಾದೇವನೇ, ನೀನು ನೋಡೆಂದು ದೇವೇಂದ್ರನು ತಂದು ತೋರುವ ಕನ್ನಡಿಯೋ ಎಂಬ ಹಾಗೆ ದಿಕ್ಕುದಿಕ್ಕಿಗೆ ಬೆಳಗ ಬೀರುತ್ತ, ಪೂರ್ವದಿಕ್ಕಿನಲ್ಲಿ ಸಂಪೂರ್ಣ ಚಂದ್ರನು ಉದಿಸಲಾಗಿ—ಚಂದ್ರೋದಯ ಸಮಯದಲ್ಲಿ ದ್ವಾರಕಾಪುರಕ್ಕೆ ಪರಮೇಶ್ವರನು ಬಂದನು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದಾನು.

ಅಂತಾಗಲಾಪಟ್ಟಣದ ಗೋಪುರಾಕೃತಿಯ |
ನಂತಕಾಂತಕನೊಳಪುಗುತ ಮುಂದೆ ಬರವರಲ |
ನಂತವಿಭವಂದಳೆದ ಕೇರಿಕೇರಿಯ ಬೀದಿಬೀದಿಗಳ ಪರಿರಚನೆಯ ||
ಹಂತಿಹಂತಿಯ ಭದ್ರನಗಳನೀಕ್ಷಿಸುತ |
ಲಂತರಾಂತರದ ಮಣಿಮಾಡಗಳ ಸಾಲುಸಾ |
ಲಿಂ ತೋರ್ಕೆವಡೆದವಸಣ್ಯಂಗನಾವೀಥಿಯೊಳುಬರುತಿರಲವೇಶ್ಯೆಗಳ್ವನು ||

ಟೀ—ಕೇಳಿರೈ, ಎಲೆ ಮುನಿಗಳಿರಾ! ಆ ಪಟ್ಟಣದ ಗೋಪುರಾಕೃತಿಯಂ =

ಆ ದ್ವಾರಕಾಪುರದ ಬಾಗಿಲ್ವಾಡದ ಗೋಪುರಮಂ ಕಳೆದು, ಅಂತಕಾಂತಕ = ಯಮ ಸಂಹಾರಿಯಾದ ಶಿವನು ಒಳಕ್ಕೆ ಬರುತ್ತಿರಲು; ಮುಂದೆ ಅನಂತವೈಭವಗಳಿಂದ ಮೆರೆವ ಕೇರಿಕೇರಿಯಲ್ಲಿ ಬೀದಿಬೀದಿಗಳಲ್ಲಿ ರಚನೆಯಾಗಿ ಮೆರೆವ ಹಂತಿಹಂತಿಗಳಲ್ಲಿ ಸಾಲುಸಾಲಾಗಿ ತೋರುವ ಛತ್ರಮಂಟಪಗಳ ನೋಡುತ್ತ, ನವರತ್ನಖಚಿತವಾದ ಉಪ್ಪರಿಗೆಗಳಿಂ, ತೋರ್ಪವಡೆದ = ಒಪ್ಪುವ, ಪಣ್ಯಾಂಗನಾವೀಥಿಯೊಳ್ ಬರುತ್ತಿರಲದೇವ್ರೊಗಳ್ವೆನು = ಸೂಳೆಗೇರಿಯಲ್ಲಿ ಶಿವನು ಬರುತ್ತಿರ್ಪಲ್ಲಿ ಆ ಸೂಳೆಗೇರಿಯ ಸಂಭ್ರಮವನೇನೆಂದು ವರ್ಣಿಸಲಿ. ಎಂದು ಕವೀಶ್ವರನು ಹೇಳುತಿರ್ಪನು.

ಮನಸಿಜನ ಮುದ್ರೆ ಮನ್ಮಥನಾಣೆ ಮಧುರಥ |
ನ್ವನ ಗಾಹು ಮಕರಧ್ವಜನ ಬೇಹು ಕಂದರ್ಪ |
ಕನ ಕೇಳಿ ಮಾರನಧಿಕಾರ ರತಿವಲ್ಲಭನುದಾರವಂಗಜನ ಬೀರ ||
ಅನವರತ ಮೀನಕೇತನನವಟುತನವನಂ |
ಗನ ಶೌರ್ಯ ಶಂಬರಾರಿಯ ಕಾರ್ಯ ಕಾಮದೇ |
ವನ ಕಟ್ಬರಸುಖಸವಿ ಮೆರೆವ ಸೂಳೆಗೇರಿಯಸೊಬಗನೋಡುತನಡೆದನು ||

ಟೀ—ಕೇಳೆಲೈ, ಎಲೆ ಮುನಿಗಳಿರಾ! ದ್ವಾರಕಾಪುರದ ವೇಶ್ಯಾವಾಟಿಯಲ್ಲಿ ಎಲ್ಲಿ ನೋಡಿದರೂ ಮನಸಿಜನ ಮುದ್ರೆ = ಕಾಮರಾಯನ ಮುದ್ರೆಗಳಂತೆ ಮೆರೆವ ದಂತಕ್ಷತ ನಖಕ್ಷತಗಳಿಂದೊಪ್ಪುವ ಸ್ತ್ರೀಪುರುಷರುಗಳಿಂದ; ಮನ್ಮಥನಾಣೆ = ಕಾಮರಾಯನಾಜ್ಞೆ, ಊಟನಿದ್ರಾಹುಪರಿಮಳಂಗಳಂ ತೊರೆದು ಮೆರೆವ ವಿರಹಿಣಿಯರಿಂದ; ಮಧುರಥನ್ವನ ಗಾಹು = ಕಬ್ಬುವಿಲ್ಲನಾದ ಕಾಮರಾಯನ ಗಾಹಿನಿಂದ ಎಡೆಬಿಡದೆ ನೋಡುತ್ತಿರ್ಪ ಕಾಮುಕರಿಂದ; ಮಕರಧ್ವಜನಬೇಹು = ಕಾಮನ ಬೇಹಿನವರ ಮರ್ಯಾದೆಯಲ್ಲಿ ಎಡೆಯಾಡುವ ದೂತಿಯರಿಂದ; ಕಂದರ್ಪಕನಕೇಳಿ = ಮನ್ಮಥಕ್ರೀಡೆಯಾಡುವ ಮರ್ಯಾದೆಯಲ್ಲಿ ಪ್ರಚ್ಛನ್ನಪ್ರಕಾಶವೆಂಬ ಸಂಭೋಗದಲ್ಲಿ ಭೋಗಿಸುವ ಕಾಮುಕರಿಂದ; ಮಾರನಧಿಕಾರ = ಉನ್ಮತ್ತ ಪಂಚವಿಂಶತಿ ಪ್ರಾಯದಿಂ ಮೆರೆವ ಪುರುಷರಿಗೂ ದ್ವಾದಶವರ್ಷದಿಂ ಮೆರೆವ ಶೃಂಗಾರಿಯರಿಗೂ ಅಧಿಕಾರವ ಕೊಟ್ಟು, ಮೂವತ್ತು ವರ್ಷ ಕಳೆದ ಸ್ತ್ರೀಯರಿಗೂ ನಾಲ್ವತ್ತು ವರ್ಷ ಕಳೆದು ನಡೆಬಂದ ಪುರುಷರಿಗೂ ಅಧಿಕಾರವ ಬಿಡಿಸುವ ಅಧಿಕಾರಂಗಳಿಂದ; ರತಿವಲ್ಲಭನುದಾರ = ಮನ್ಮಥನ ಉದಾರದ ಮರ್ಯಾದೆಯಿಂದ, ವಸ್ತುವಾಹನವಸ್ತ್ರಾಭರಣಪರಿಮಳ ಮೊದಲಾದುವಂ ಕುಡುವ ವಿಟರುಗಳಿಂದ; ಅಂಗಜನ ಬೀರ = ಮನ್ಮಥನ ವೀರತ್ವದಿಂದ, ಬಿರಳ ಕೊಟ್ಟು ಕುರುಳ ಕೊಟ್ಟು ಮುಖದ ಮೇಲಣ ದಂತಹತಿ ನಖಹತಿಯೆಂಬ ಗಾಯದಿಂದ ಮೆರೆವ ವೀರತ್ವದಿಂದ; ಅನವರತ ಮೀನಕೇತನನದಟುತನ = ಅವಾಗಲೂ ಮನ್ಮಥನ ಅದಟಿನಿಂದ ಕೇಶಗ್ರಹ ಕರಘಾತ ಉರಸ್ತಾಡನ ಮೊದಲಾದ [1] ಅಟದ

[1] ಪಾ—1. ಅದಟ.

ಕ್ರೀಡೆಗಳಿಂದ; ಅನಂಗನ ಶೌರ್ಯ= ಒಬ್ಬೊಬ್ಬರು ಅನ್ಯೋನ್ಯ ವಿರುದ್ಧದಿಂ [1]ಕೊಂಡಾಡುವ[1] ಶೌರ್ಯದಿಂದ; ಶಂಬರಾರಿಯ ಕಾರ್ಯ= ನೋಡುವ ನುಡಿವ ನಗುವ ನಾಚುವ ಮುದ್ದಿಸುವ ಮೋಹಿಸುವ ಅಗಲುವ ಅಪ್ಪುವ ಕಾಮದೇವನ ಕಾರ್ಯದಿಂದ—ಕಾಮದೇವನ ಕಟ್ಟರಸುತನ ಈ ಪ್ರಕಾರದಲ್ಲಿ ಒಪ್ಪುತ್ತಿರಲಾಗಿ; ಆ ಸೂಳೆಗೇರಿಯ ಸೊಬಗ ನೋಡುತ್ತ ಶಿವನು ಭಿಕ್ಷಾಟನಕ್ಕೆ ನಡೆದನು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದಾನು.

ಸಿಱಿಯುಡಿಗೆ ಸುತ್ತುಸುತ್ತಿನ ಕೋಟೆಗಳು ತೋರ ।
ಪ್ರೌಢವಾಱಿ ಕೊತ್ತಳಂ ಪಱಿಸೆಗಳೆಱಪ ಸೋಗೆ ।
ದುಱುಬು ಮುಗಿಲಟ್ಟಣಂ ಮುಡಿದ ಕೇದಗೆಯ ಗಱಿಯೆಸಳೆ ಕೂರ್ದ
ನೆಱೆದಿಟ್ಟಣಿಸಿದ ಮೊಲೆ ಡೆಂಕಣಿಗಳೆಡುಗುಂಡು । [ಸಿಗಳು]
ನೆಱೆ ಚೆಲ್ವಱಿದು ನೂಸುವ ಕಣ್ ಕವಣೆಯೆನಿಸಿ ।
ಮೆಱೆದಿರಲ್ಲಿಯ ವಾರನಾರಿಯರು ಕಮ್ರಗಣೆಯಂಗೆಸೆವ ದುರ್ಗದಂತೆ ॥ ೮ ॥

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಆ ವೇಶ್ಯಾಸ್ತ್ರೀಯರು ಆವ ಪ್ರಕಾರದಲ್ಲಿ ಒಪ್ಪಿದರು? ಎಂದರೆ—ಸಿಱಿಯುಡಿಗೆ ಸುತ್ತುಸುತ್ತಿನ ಕೋಟೆಗಳು= ಒಟ್ಟ ಅಂಬರದ ಉಡಿಗೆಗಳು ಬಳಸಿದ ಕೋಟೆಯಾಗಲಾಗಿ; ತೋರಪ್ರೌಢವಾಱಿ ಕೊತ್ತಳಂ= ದೊಡ್ಡಿತ್ತಾದ ನಿತಂಬವೆ ಕೊತ್ತಳವಾಗಲಾಗಿ; ಪಱಿಸೆಗಳೆಱಪ= ತುಂಬಿಗಳೆಱಗುವ, ಸೋಗೆದುಱುಬು ಮುಗಿಲಟ್ಟಣೆಯಾಗಲಾಗಿ; ಮುಡಿದ...= ಮುಡಿದ ಕೇತಕಿಯ ಸಣ್ಣೆಸಳುಗಳು ಹರಿತವಾದ ದಸಿಗಳಾಗಲಾಗಿ; ನೆಱೆದಿಟ್ಟಣಿಸಿದ...= ಕಕ್ಕಸಕುಚಂಗಳೆ ಡೆಂಕಣಿಗಳಲ್ಲಿ ಇಡುವ ಗುಂಡುಗಳಾಗಲಾಗಿ; ಚೆಲ್ವಱಿದು... = ಚೆಲ್ವಱಿದು ನೋಡುವ ನೋಟವೇ ಕವಣೆಯಾಗಲಾಗಿ; ಕಮ್ರಗಣೆಯಂಗೆಸೆವ ದುರ್ಗದಂತೆ= ಕಾಮದೇವನು ಮಾಡಿದ ನಡೆದುರ್ಗವೋ ಎಂಬೀಮರ್ಯಾದೆಯಿಂದಲೊಪ್ಪುವ ವಾರನಾರಿಯರುಗಳಂ ನೋಡುತ್ತ, ಶಿವನು ಸೂಳೆಗೇರಿಯಲ್ಲಿ ಬರುತಿರ್ದನು, ಕಾಣಿರೈ ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದಾನು.

ವಿರಹಾಗ್ನಿಗಿಚ್ಚೆ ಜೂವವರಿಟ್ಟದಂ ಸುಯ್ದುದಿಯೊ ।
ಳುರುಹುವರುರುಹಿ ಜತಿಗಳೆರ್ದೆಗಬ್ಬು ನವ ಗುಂಡ ।
ಕರಗುವರ್ಕರಗಿ ಮೋಹದ ಸಂಕಲೆಯ ಮಾತಿ ಮುನಿದು ಮುಂತಿರ್ದ ವಿಟರ ।
ಚರಣಕಿಕ್ಕುವರಿಕ್ಕಿ ಕಲಹದೊಲುಮೆಯ ಮೊಳೆಯ ।

ಪಾ—1. ಕೊಂಡಾಡುವ.

ನಿರದೆ ಬಲಿವರು ಬಲಿದು ಸಿಕ್ಕಿದಿರಿ ನೀವಿನ್ನು ।
ಮರುಳುವಿರೆ ನಮ್ಮ ಮನ್ಮಥನ ಬಾಧೆಯುಳೆಂಬ ವಾರನಾರಿಯುರೆಸೆದರು ॥ ೯

ಟೀಕು — ಕೇಳಿರೈ, ಎಲೆ ಮುನಿಗಳಿರಾ! ಆ ಸೂಳೆಗೇರಿಯುಲಿರುತಿರ್ದ ವಾರಾಂಗನೆಯರ ಸಾಮರ್ಥ್ಯವು ಅವ ಪ್ರಕಾರವೆಂದರೆ— ವಿರಹಾಗ್ನಿಯೆಂಬ ಕಿಚ್ಚ ಹೊತ್ತಿಸಿ, ಅದು ಉರಿವ ಮರ್ಯಾದೆಯಿಂದ ಸುಯ್ಲೆಂಬ ತಿದಿಯೂದಿ, ಯತೀಶ್ವರರ ಅತಿ ಕರ್ಕಶವಾದ ಕರಗದೆ ಇದ್ದ ಹೃದಯವೆಂಬ ಕಬ್ಬಿಣದ ಗುಂಡನು ಕರಗುವರು; ಅದಱಿಂದ ಮೋಹದ ಸಂಕಲೆಯ ಮಾಡುವರು; ಆ ಮೋಹದ ಸಂಕಲೆಯನು ಮುನಿದು ಮಲೆತಿರ್ದ ವಿಟರುಗಳ ಕಾಲ್ಗಳಿಗೆ ಹಾಕಿ, ಪ್ರಣಯಕಲಹದಿಂದ ಹುಟ್ಟಿದ ಒಲುಮೆಯು ಮೊಳೆಯನು ಆ ಸಂಕಲೆಗೆ ಬಲಿದು, "ಸಿಕ್ಕಿದಿರಿ ನೀವಿನ್ನು ಮರುಳುವಿರೆ ನಮ್ಮ ಮನ್ಮಥನ ಬಾಧೆಯುಲಿ" ಎಂದು ಹೇಳುವ ವಾರನಾರಿಯುರೆಸೆದರು. ಈ ಪ್ರಕಾರವಾದ ಮೋಹದ ಸಂಕಲೆಯಿಂದ ವಿಟರುಗಳ ಸರ್ವಸ್ವಾಪಹಾರ ಮಾಡುವ ವೇಶ್ಯಾಸ್ತ್ರೀಯರಂ ನೋಡುತ್ತ, ಶಿವನು ಮುಂದಕ್ಕೆ ಭಿಕ್ಷಾಟನಕ್ಕೆ ನಡೆದನು ಎಂದು ಸೂತಮುನೀಶ್ವರನು ಹೇಳುತಿರ್ದಾನು.

ಮರುಳವಿಟರೆಂಬ ತಸ್ಕರರು ನೋಡಿರೆ ನಮ್ಮ ।
ಪರೆಯುಮಂ ಕಳಬಂದವರೆಂದು ಸೆಳ್ಳುಗುರೆಂಬ ।
ಸುರಗಿಯಿಂದಿರಿದು ಸಳಿತೋಳೆಂಬ ಪಾಶದಿಂ ಕಟ್ಟಿ ಪೂಸರದಿ ಪೊಡೆದು ॥
ಸಿರಿಪಚ್ಚೆ ಪುಡಿಯುಸಡಿಗಡಿಗೆ ಬಾಯೊಳ್ಪೊಯ್ದು ।
ಸ್ಮರರಾಜನಾಜ್ಞೆಯಿಂ ಪಿಡಿತಂದು ತಮ್ಮ ಕುಚ ।
ಗಿರಿಯೆಂಬ ಸರಿಗೊಯ್ದು ನೂಂಕಿಯುಸುಗೊಂಬ ವೇಶ್ಯೆಯುರಲ್ಲಿ ಕಣ್ಗೆಸೆದರು॥

ಟೀಕು — ಕೇಳಿರೈ, ಎಲೆ ಮುನಿಗಳಿರಾ! ಸೂಳೆಗೇರಿಯುಲ್ಲಿ ಅವ ಪ್ರಕಾರವಾದ ವಾರಾಂಗನೆಯರಿದ್ದರೆಂದರೆ—ಯೌವನಮದದಿಂದ ಮುಂದುಗಾಣದೆ ಇದ್ದ ವಿಟರೆಂಬ ಕಳ್ಳರು ಒಱಪಾತಿಂದ ಧನಮಂ ವಸ್ತ್ರಮಂ ಕೊಡದೆ ತಮ್ಮ ಭೋಗಿಸಿ ಹೋದಾಗಲೇ ತಮ್ಮ ಪ್ರಾಯವೆಂಬ ಧನಮಂ ಕಳಬಂದರೆಂದು ಸಿಕ್ಕಿದ ಕಳ್ಳನ ಮುಂದಲೆಯ ಸುತ್ತಿಕೊಂಡು ಕೆಡಪಿ ಸೆಳ್ಳುಗುರೆಂಬ ಸುರಗಿಯುಲ್ಲಿಱಿದು ತಮ್ಮ ತೋಳೆಂಬ ಬಲುಪಾಶದಿಂದ ಬಿಗಿದು ಕಟ್ಟಿ, ಪೂಸರಗಳಿಂದ ಪೊಡೆದು, ಪಚ್ಚೆಕಪ್ಪುರದ ಪುಡಿಯ ಅಡಿಗಡಿಗೆ ಬಾಯೊಳ್ಪೊಯ್ದು, ಕಾಮರಾಯನಾಜ್ಞೆಯಿಂದ ಹಿಡಿದು ತಂದು, ತಮ್ಮ ಕುಚಂಗಳೆಂಬ ಗಿರಿಯ ಸರಿಯೊಳ್ ನೂಂಕಿ ಇತ್ತತ್ತ ಚಲಿಸಲೀಸದೆ ಪ್ರಾಣಾಪಹಾರ ಮಾಡುವ ವೇಶ್ಯೆಯರಂ ನೋಡುತ ಸರ್ವೇಶ್ವರನು ಭಿಕ್ಷಕ್ಕೆ ನಡದನು ಎಂದು ಸೂತಮುನೀಶ್ವರನು ಹೇಳುತಿರ್ದಾನು,

ಕಂಗಳೆಂದೆಂಬ ಬಲೆಗಳ ಪಸರದಿಂ ಕಟಾ |
ಕ್ಷಂಗಳೆಂದೆಂಬ ನಿಡುಬಾಣಂಗಳಿಂ ಭ್ರೂಯು |
ಗಂಗಳೆಂದೆಂಬ ಬಲುಬಿಲ್ಗಳಿಂ ಪೆಱೆವಣೆಗಳೆಂದೆಂಬ ಬಡಿಕೋಲ್ಗಳಿಂ ||
ಹಿಂಗದೆಳನಗೆಗಳೆಂದೆಂಬ ತೆಱೆಯಿಂ ವೈಶಿ |
ಕಂಗಳೆಂದೆಂಬ ನಾನಾಹದಿರಿನಿಂ ವಿಟಜ |
ನಂಗಳೆಂದೆಂಬ ನರಮೃಗ ಬೇಂಟೆಯಾಡುವ ವರಾಂಗನೆಯರೆಸೆದಿರ್ದರು ||೧೧

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಆ ವೇಶ್ಯಾವೀಧಿಯಲ್ಲಿ ಸೂಳೆಯರು ಬೇಂಟೆಕಾಱರ ಹಾಗೆ ಒಪ್ಪುತಿರ್ದರು. ಅದು ಹೇಗೆಂದರೆ—ವಿಟರುಗಳ ವಶೀಕರಣ ಮಾಡುವ ಕಣ್ಣುಗಳೆಂದೆಂಬ ಬಲೆಗಳಿಂದ, ಕಡೆಗಣ್ಣ ನೋಟವೆಂಬ ಕೂರಿತ್ತಾದ ಎದೆ ತಾಕುವ ಅಂಬಿನಿಂದ, ಹುಬ್ಬುಗಳೆಂಬ ದೊಡ್ಡಿತ್ತಾದ ಬಿಲ್ಲುಗಳಿಂದ, ಹಣೆಯೆಂಬ ಬಡಿಕೋಲ್ಗಳಿಂದ, ನಾನಾಪ್ರಕಾರವಾದ ಒಱವಾತಿನುಪಚಾರದ ಮಱೆಮಾತನಾಡುವ ಹದಿರುಗಳಿಂದ, ವಿಟಜನರೆಂಬ ನರಮೃಗಂಗಳ ನೋಟದಿಂದ ಕೆಲಬರ, ಕಡೆಗಣ್ಣ ನೋಟದಿಂದ ಕೆಲಬರ, ಹುಬ್ಬುಹಾಕಿ ಕೆಲಬರ, ಏಕಾಂತವಾಗಿ ಕೆಲಬರ, ಎಳೆನಗೆಯಿಂದ ಕೆಲಬರ, ಸವಿನುಡಿಯಿಂದ ಕೆಲಬರ, ತನ್ನೊಳಗು ಮಾಡಿಕೊಂಡು ಈ ಪ್ರಕಾರದಲ್ಲಿ ಬೇಂಟೆಯಾಡುತ್ತಿರ್ದರು—ಎಂಬುದು ಈ ಪದದ ತಾತ್ಪರ್ಯ. ಈ ಪ್ರಕಾರವಾದ ಸತಿಯರ ನೋಡುತ್ತ ಶಿವನು ನಡೆತರುತಿರ್ದನು ಕಾಣಿರೈ ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದನು.

ಹರನನರೆವೆಣ್ಮಾಡಿ ತಲೆವಾಗಿಸಿದೆವು ಮುರ |
ಹರನೆದೆಯ ಮೆಟ್ಟಿ ನಾಟ್ಯವನಾಡಿದೆವು ಸುರಾ |
ಸುರರೆಲ್ಲರಿಗೆ ಪಿತಾಮಹನೆಂದು ಮೆಱೆವ ಬ್ರಹ್ಮನ ಬಾಯ ಮುದ್ರಿಸಿದೆವು ||
ಸುರಪನಂಗದಲಿ ತಮ್ಮಯ ಡಾಗನೊತ್ತಿದೆವು |
ಧರೆಯೊಳಿನ್ನುಳಿದ ಮಾನವರೆಮ್ಮ ಪೆಣ್ತನಕೆ |
ಸರಿಯೆಯೆಂದೆಂಬ ಬಿರುದಿನ ವಾರನಾರಿಯರು ಪುರದಲ್ಲಿ ಕಣ್ಗೆಸೆವರು ||೧೨||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಸೂಳೆಗೇರಿಯಲ್ಲಿ ಮತ್ತಾವ ಪ್ರಕಾರವಾದ ಸ್ತ್ರೀಯರಿದ್ದರು? ಎಂದರೆ—ಜಗತ್ಸಂಹಾರಕನಾದ ಹರನನು ಅರ್ಧಪುರುಷ ಅರ್ಧಸ್ತ್ರೀ ಮಾಡಿ ಅರ್ಧನಾರೀಶ್ವರನೆಂಬ ಹೆಸರನು ಮೆಱೆಸಿದೆವು; ಮುರನೆಂಬ ರಾಕ್ಷಸನ ಕೊಂದು ಅಧಟನಾದ ನಾರಾಯಣನ ಎದೆಯನು ಲಕ್ಷ್ಮೀಚರಣದಿಂದ ಮೆಟ್ಟಿ ನಾಟ್ಯವಾಡಿದೆವು; ದೇವತೆಗಳಿಗೆ ರಾಕ್ಷಸರಿಗೆ ಪಿತಾಮಹನೆಂದು ಹೆಚ್ಚಿದ ಬ್ರಹ್ಮನ ಬಾಯಲ್ಲಿ ಮುಖದಲ್ಲಿ ಸರಸ್ವತಿಯು ನೆಲಸಿ ಬಾಯಿಗೆ ಮುದ್ರೆಯು ಹಾಕಿಸಿ

ದೆವು; ದೇವತೆಗಳಿಗೆ ಒಡೆಯನಾದ ದೇವೇಂದ್ರನ ಮೆಯ್ಯೊಳಗೆ ತಮ್ಮಲ್ಲಿ ಉಂಟಾದ ಕುಱುಹಿನ ಡಾಗನೊತ್ತಿದೆವು. ಈಶ್ವರ ಬ್ರಹ್ಮ ವಿಷ್ಣು ಇಂದ್ರ—ಇವರುಗಳಿಗೆ ಈ ಪ್ರಕಾರ ಮಾಡಿದಮೇಲೆ ಈ ಭೂಮಿಯಲ್ಲಿ ಜಡಮನುಜರು ನಮ್ಮ ಪೆಣ್ತನಕೆ ಸರಿಯೆ ಎಂದು ಅಗ್ಗಳದ ಬಿರುದನಾಡುವ ವಾರನಾರಿಯರನು ನೋಡುತ್ತ, ಶಿವನು ನಡೆತರುತಿರ್ದನು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದಾನು.

ಎಳವರೆಯದಲಿ ಗಿಳಿಗಳೊಡನಾಡಿ ನುಡಿಗಲಿತು |
ಕಳಹಂಸೆಗಳೊಳು ನಡೆದಾಡಿ ನಡೆಗಲಿತು ಕೋ |
ಗಿಲೆಗಳೊಳು ಕೂಗಿ ಸರಗಲಿತು ಮುಗ್ಧಾಭಾವವಡಗಿ ಸಲೆ ಸುಖದಿ ಬಳೆದು||
ಬಳಿಕ ತಾಂ ತಮ್ಮೊಳು ನುಡಿಯ ನಡೆಯ ಸುಸ್ವರಂ |
ಗಳನವಕೆ ಕಲಿಸಿಯರಗಿಳಿ ರಾಜಹಂಸೆ ಕೋ |
ಗೊಳಿಸುವ ವಸಂತಕೋಗಿಲೆಯೆನಿಸಿ ಮೆಱೆವ ಪ್ರೌಢಾಂಗನೆಯರಲ್ಲಿರ್ದರು||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಮತ್ತಾವೇಶ್ಯಾವೀಧಿಯಲ್ಲಿ ಸತಿಯರು ಆವ ಪ್ರಕಾರದಲ್ಲಿ ಒಪ್ಪಿದರು? ಎಂದರೆ—ಚಿಕ್ಕಪ್ರಾಯದಲ್ಲಿ ಗಿಳಿಗಳೊಂದಿಗೆ ಆಡಿ ಮೃದುನುಡಿಯಂ ಕಲಿತು, ಹಂಸೆಗಳೊಂದಿಗೆ ಆಡಿ ನಡೆಯಂ ಕಲಿತು, ಕೋಗಿಲೆಯೊಂದಿಗೆ ಕೂಗಿ ಸ್ವರಮಂ ಕಲಿತು, ಮುಗ್ಧಾಭಾವದಿಂದ ಕೆಲವುಕಾಲ ಕಳೆದು, ಯೌವನ ತಲೆದೋಱಿದ ಬಳಿಕ ತಮ್ಮ ಜಾಣ್ಮೆಯಿಂದ ಆ ಗಿಳಿಗಳಿಗೆ ಸವಿನುಡಿಯಂ ಆ ಹಂಸೆಗಳಿಗೆ ಮೆಲ್ನಡೆಯಂ ಆ ಕೋಗಿಲೆಗಳಿಗೆ ಸುಸ್ವರಮಂ ತಾವೇ ಕಲಿಸಿ, ಅರಗಿಳಿ ರಾಜಹಂಸೆ ವಸಂತಕೋಗಿಲೆಗಳೆನಿಸಿ ಮೆಱೆವ ಪ್ರೌಢಾಂಗನೆಯರಂ ನೋಡುತ್ತ ಶಿವನು ನಡೆತರುತಿರ್ದನು ಕಾಣಿರೈ.

ಅವರ ನಸುನಗೆ ಜಿತೇಂದ್ರಿಯರ ಸೋಲಿಸುವ ಬಗೆ |
ಯವರ ಕುಡಿನೋಟ ಕಾಮನ ಸರಳ್ಗಳೆಡೆಯಾಟ |
ವವರ ಮಗಮಗಿಪ ಸೋರ್ಮುಡಿಯ ನಿಡುಗುರುಳು ಯತಿಕುಲಕಿಟ್ಟ ಬಲೆ [ಗಳುರುಳು ||
ಅವರ ಜಾಣ್ನುಡಿ ವಿಟಜನಂಗಳಾರಡಿ ನೋಡ |
ಲವರ ಶೃಂಗಾರ ತಾನೇ ರತಿಯಲಂಕಾರ |
ವವರ ಯೋಗ ಸುರೇಂದ್ರಭೋಗವೆಂದೆನೆ ಪೆಸರುವಡೆದ ವೇಶ್ಯೆಯರೆಸೆದರು||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಅಲ್ಲಿನ ವಾರವನಿತೆಯರ ನಸುನಗೆಯೇ ಇಂದ್ರಿಯನಿಗ್ರಹ ಮಾಡಿದ ಋಷಿಗಳ ಸೋಲಿಸುವ ಬಗೆ; ಅವರ ಕುಡಿನೋಟವೇ ಕಾಮನ ಬಾಣಗಳೆಡೆಯಾಟ, ಅವರ ಪರಿಮಳಕುಸುಮಂಗಳೊಡನೆ ಕೂಡಿದ

ನಿಡಿದಾದ ಕುರುಳು ಯತಿಗಳೆಂಬ ಮೃಗಂಗಳ ಕೆಡಹುವುದಕ್ಕೆ ಇಟ್ಟ ತೊಡಕಿನ ಬಲೆಗಳ ಉರುಳು, ಅವರ ಜಾಣ್ನುಡಿ ವಿಟಜನಂಗಳಾರಡಿ, ಆರಡಿಯೆಂದರೆ,= ದುಃಖ, ವ್ಯಾಕುಲವ ಹುಟ್ಟಿಸುವುದು. ಅವರ ಶೃಂಗಾರ ಮೂಱು ಪ್ರಕಾರವಾದ ರತಿಗೆ ತಾನೇ ಅಲಂಕಾರ; ಅವರ ಯೋಗವೇ ದೇವೇಂದ್ರ ಭೋಗ. ಹೀಗೆಂದು ವಿಟ ಜನರಿಂದ ಕೊಂಡಾಡಿಸಿಕೊಂಬುದಕ್ಕೆ ಯೋಗ್ಯರಾದ ಸ್ತ್ರೀಯರ ನೋಡುತ್ತ ಶಿವನು ಮುಂದಕ್ಕೆ ನಡೆದನು ಕಾಣಿರೈ.

ಅವರ ಕುಚಪರ್ವತಗಳೆಂಬ ದುರ್ಗಂಗಳಿರ |
ಲವರ ನುಡಿಯೆಂಬ ನಿರ್ಝರವಾಜಿರಾಜಿಯಿರ |
ಲವರ ಪುರ್ಬುಗಳೆಂಬ ಕಜ್ಜೊಳಪನಾಂತು ಸೊಗಯಿಪ ಕಬ್ಬುವಿಲ್ಗಳಿರಲು ||
ಅವರ ನಯನಗಳೆಂಬ ಮೋಹನಾಸ್ತ್ರಂಗಳಿರ |
ಲವರ ಕೈಯುಗುರೆಂಬ ಸುರಿಗೆಯಿರೆ ಮೂಱು ಲೋಕ |
ಕವ ಗೆಲ್ವೆನೆಂಬುದರಿದೇ ಕಾಮನೆನಿಸಿಪ ವೇಶ್ಯೆಯರಲ್ಲಿ ಕಣ್ಗೆಸೆದರು || ೧೫ ||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಆ ಸೂಳೆಗೇರಿಯಲ್ಲಿ ಒಪ್ಪುವ ಸತಿ ಯರು ಆವ ಪ್ರಕಾರದಲ್ಲಿ ಇದ್ದರು? ಎಂದರೆ—ಈ ಸ್ತ್ರೀಯರ ಕುಚಗಳೆಂಬ ದುರ್ಗಂ ಗಳಿರಲಾಗಿ, ಈ ಸ್ತ್ರೀಯರ ಸವಿನುಡಿಯೆಂಬ ತೀವ್ರವಾದ ಕುದುರೆಗಳಿರಲಾಗಿ, ಇವರ ಪುರ್ಬುಗಳೆಂಬ ಕಪ್ಪಿನ ಹೊಳಹನುಳ್ಳ ಬಿಲ್ಲು ಇರಲಾಗಿ, ಇವರ ನಯನಂಗ ಳೆಂಬ ಸಮ್ಮೋಹನಾಸ್ತ್ರಂಗಳಿರಲಾಗಿ, ಇವರ ಕೂರುಗುರ್ಗಳೆಂಬ ಸುರಿಗೆಗಳಿರಲಾಗಿ, ಕಾಮದೇವನು ಮೂಱು ಲೋಕವ ಗೆಲುವುದು ಅಚ್ಚರಿಯೇ ಎಂದು ರಸಿಕರ ಕೈ ಯಿಂದ ಕೊಂಡಾಡಿಸಿಕೊಂಬುದಕ್ಕೆ ಯೋಗ್ಯವಾದ ಬಟ್ಟಮೊಲೆಗಳಿಂದ ಸವಿನುಡಿ ಯಿಂದ ಹೊಳೆವ ಹುಬ್ಬಿನಿಂದ ಶೃಂಗಾರವಡೆದ ಅಂಗನೆಯರಂ ನೋಡುತ್ತ ಗಂಗಾ ಧರಂ ಮುಂದಕ್ಕೆ ನಡೆದನು ಎಂದು ಸೂತಮುನೀಶ್ವರನು ಹೇಳುತಿರ್ದಾನು.

ನುಡಿವ ಚಾತುರ್ಯದಲಿ ಚತುರಾಸ್ಯನಂ ನಡೆವ |
ನಡೆಯು ಗಮಕದ ರೀತಿಯಲಿ ದೇವರಾಜನಂ |
ಪಡೆದ ವೈಭವದೇಳಿಗೆಯಲಿ ಪಾಲ್ಗಡಲ ಸಡುವೆಸೆವ ಫಣಿಪತಿತಲ್ಪನಂ ||
ಕಡುಚೆಲುವಸಾಂತ ಗಾಡಿಯಲಿ ರತಿರಾಜನುಮ |
ನಡಿಗಡಿಗೆ ತಲೆದೂಗಿಸುವ ಮೆಚ್ಚಿಸುವ ಜಿಜಗು |
ವಡಿಸ ಸೋಲಿಸುವ ವೇಶ್ಯಾಂಗನೆಯರೆಸೆದಿರ್ದರಾಸೂಳೆಗೇರಿಯೊಳಗೆ || ೧೬ ||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಆ ಸೂಳೆಯರು ನುಡಿವ ಜಾಣ್ಮೆಯಿಂದ ಬ್ರಹ್ಮನ, ನಡೆಯು ಗಮಕದ ರೀತಿಯಲಿ ಇಂದ್ರನ, ಐಶ್ವರ್ಯದೇಳಿಗೆಯಲ್ಲಿ ಪಾಲ್ಗಡ

ಲಲ್ಲಿ ಅನಂತಶಯನನಾದ ನಾರಾಯಣನ, ಚೆಲುವಿಕೆಯಿಂದ ರತಿಪತಿಯಾದ ಕಾಮನ, ಅಡಿಗಡಿಗೆ ತಲೆದೂಗಿಸುವರು. ಎಂದರೆ—ಆ ಬ್ರಹ್ಮನ ಸರಸ್ವತಿಗಿಂತಲೂ ಜಾಣ್ಮೆಯುಳ್ಳವರೆಂದು ತಲೆದೂಗಿಸುವರು; ಆ ಇಂದ್ರನ ಐರಾವತಕ್ಕಿಂತಲೂ ಮಂದಗಮನವುಳ್ಳವರು ಎಂದು ಮೆಚ್ಚಿಸುವರು; ಆ ಶ್ರೀಕೃಷ್ಣನ ಲಕ್ಷ್ಮೀದೇವಿಗಿಂತಲೂ ವೈಭವವನುಳ್ಳವರು ಎಂದು ಬೆಱಗಾಗಿಸುವರು; ಆ ಕಾಮನ ರತೀದೇವಿಗಿಂತಲೂ ರೂಪಾತಿಶಯವನುಳ್ಳವರೆಂದು ಸೋಲಿಸುವರು. ಈ ಪ್ರಕಾರವಾದ ಸವಿನುಡಿಯಿಂದ ಮೆಲ್ನಡೆಯಿಂದ ವೈಭವದಿಂದ ರೂಪಾತಿಶಯದಿಂದ ಒಪ್ಪುವ ವೇಶ್ಯಾಸ್ತ್ರೀಯರ ನೋಡುತ್ತ ಶಿವನು ನಡೆತರುತಿರ್ದನು ಕಾಣಿರೈ.

ಎರಡು ತಾವರೆ ತಾವರೆಯ ಮೇಲೆರಡು ಬಾಳೆ |
ಯೆರಡುಬಾಳೆಯ ಮೇಲೆರಡು ಮಳಲ ದಿಣ್ಣೆ ಮಳ |
ಲೆರಡು ದಿಣ್ಣೆಯ ಮೇಲೆ ಗಗನ ಗಗನದ ಮೇಲೆರಡು ಕಲಶವವಱ ಮೇಲೆ ||
ಪರಿಪೂರ್ಣಶಶಿ ಶಶಿಯ ಮೇಲೆ ಮಧುಕರಗಳೀ |
ತರುಣಿಯರುಗಳ ಮೈಯ್ಯ ಮೇಲೆ ಪುಟ್ಟಿದುವಿದ |
ಚ್ಚರಿಯಬ್ಜಭವಸೃಷ್ಟಿಯೊಳಗೆನಲು ವಾರವನಿತೆಯರಲ್ಲಿ ಕಣ್ಗೆಸೆದರು ||೧೩||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಆ ವೇಶ್ಯಾವೀಥಿಯಲ್ಲಿ ವಾರಾಂಗನೆಯರು ಮತ್ತಾವ ಪ್ರಕಾರದಲ್ಲಿ ಒಪ್ಪಿದರು? ಎಂದರೆ— ಕವೀಶ್ವರನು ಹೇಳುತಿರ್ದಾನು. ಎರಡು ತಾವರೆ, ಆ ತಾವರೆಯ ಮೇಲೆರಡು ಬಾಳೆ = ಜಗತ್ತಿನಲ್ಲಿ ತಾವರೆಯ ಪುಷ್ಪಂಗಳಾದರೆ ಅವಱ ಮೇಲೆ ಬಾಳೆಗಳಿಲ್ಲ; ಸ್ತ್ರೀಯರ ಪದಕಮಲಂಗಳೆಂಬ ಎರಡು ತಾವರೆ, ಅವಱ ಮೇಲೆ ನುಣ್ಣಾದ ಹೊಱೆಯಿಲ್ಲದ ತೊಡೆಗಳೆಂಬ ಬಾಳೆಗಳೊಪ್ಪುತಿರ್ದುವು. ಆ ಯೆರಡು ಬಾಳೆಯಮೇಲೆರಡು ಮಳಲದಿಣ್ಣೆ= ಭೂಮಿಯ ಮೇಲೆ ಬಾಳೆಯಿಹುದಲ್ಲದೆ, ಆ ಬಾಳೆಯಮೇಲೆ ಮಳಲದಿಣ್ಣೆಯಿಲ್ಲ. ಈ ಸ್ತ್ರೀಯರಲ್ಲಿ ನುಣ್ದೊಡೆಗಳೆಂಬ ಬಾಳೆಯ ಕಂಭಗಳ ಮೇಲೆ ನಿತಂಬಗಳೆಂಬ ಮಳಲದಿಣ್ಣೆಗಳೊಪ್ಪುತ್ತಿರ್ದುವು. ಆ ಮಳಲ ದಿಣ್ಣೆಯಮೇಲೆ ಗಗನ= ಈ ಸ್ತ್ರೀಯರಲ್ಲಿ ಮಧ್ಯ ಶೂನ್ಯವೆನಿಸಿಕೊಂಬುದು. ಆ ಗಗನದ ಮೇಲೆರಡು ಕಲಶ= ಉಪ್ಪರಿಗೆಯ ಮೇಲೆ ದೇವಾಲಯದ ಮೇಲೆ ಕಳಶವಿರ್ಪುವಲ್ಲದೆ ಆಕಾಶದ ಮೇಲೆ ಇಲ್ಲ; ಈ ಸ್ತ್ರೀಯರ [1]ನಡುವೆಂಬ[1] ಆಕಾಶದ ಮೇಲೆ ಕುಚಗಳೆಂಬ ಕಳಶಂಗಳೊಪ್ಪಿದುವು. ಅವಱ ಮೇಲೆ ಪರಿಪೂರ್ಣ ಶಶಿ= ಆ ಚಂದ್ರನು ಪೂರ್ವಾಚಲದಲ್ಲಿ ಒಪ್ಪುವನಲ್ಲದೆ ಕಳಶಾಗ್ರದಲ್ಲಿಲ್ಲ; ಈ ಸ್ತ್ರೀಯರಲ್ಲಿ ಕುಚಗಳೆಂಬ ಕಳಶಗಳ ಮೇಲೆ ಮುಖವೆಂಬ ಪೂರ್ಣ

ಪಾ—1. ಮಧ್ಯ ಶೂನ್ಯವೆನಿಸಿಕೊಂಬ.

ಚಂದ್ರನು ಒಪ್ಪುತಿದ್ದಾನು. ಆ ಶಶಿಯುಮೇಲೆ ಮಧುಕರಗಳ್= ತುಂಬಿಗಳು ತಾವರೆಯಲ್ಲಿ ಇಹುವಲ್ಲದೆ ಚಂದ್ರನಲ್ಲಿ ಇಲ್ಲ; ಈ ಸ್ತ್ರೀಯರುಗಳ ಮುಖವೆಂಬ ಚಂದ್ರನಲ್ಲಿ ಕುರುಳುಗಳೆಂಬ ತುಂಬಿಗಳೊಪ್ಪುತ್ತಿದ್ದುವು. ಈ ತರುಣಿಯರ ಮೆಯ್ಯ ಮೇಲೆ ಈ ರೀತಿ ಹುಟ್ಟಿದುದು ಆಶ್ಚರ್ಯವಲ್ಲವೆ, ಎಂಬ ಮರ್ಯಾದೆಯಿಂದ ಒಪ್ಪುವ ವಾರಾಂಗನೆಯರಂ ನೋಡುತ್ತ ಶಿವನು ಭಿಕ್ಷಕ್ಕೆ ನಡೆದನು ಕಾಣಿರೈ, ಎಂದು ಹೇಳುತ್ತಿರ್ದಾನು.

ಯೋಗಿಗಳ್ಗೆ ಹಿಮಂ ಸುರತತಾಂತರ್ಗೆ ಶಿಶಿರಋತು |
ಭೋಗಿಜನರಿಗೆ ವಸಂತಂ ವಿಯೋಗಿಗಳಿಗೆ ನಿ |
ದಾಘಸಮಯಂ ಜಾರೆಯರಿಗೆ ವರ್ಷಾಗಮಂ ಪರಿಣಾಮಿಜೀವಿಗಳ್ಗೆ ||
ರಾಗಮಾಡುವ ಶರತ್ಕಾಲಮೆನೆ ಷಡೃತುವ |
ನಾಗಳೀಪೋಲ್ತು ಮೆಱೆವಚ್ಚ ಬೆಳ್ದಿಂಗಳೊಳು |
ಭಾಗೀರಥೀಧರಂ ಭಿಕ್ಷಮಂ ಬೇಡುತುಂ ಬರೆ ಮುಂದದೇಂ ಪೊಗಳ್ವೆನು ||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಆ ಶಿವನು ಚಂದ್ರೋದಯದಲ್ಲಿ ಭಿಕ್ಷಮಂ ಬೇಡುತ್ತ ಬರುತಿರ್ಪಲ್ಲಿ, ಆ ಬೆಳುದಿಂಗಳು ಆವ ಪ್ರಕಾರದಲ್ಲಿ ಒಪ್ಪಿತು? ಎಂದರೆ–ಯೋಗಿಗಳ್ಗೆ ಹಿಮಂ= ಸ್ತ್ರೀಪುರುಷ ಸಂಯೋಗದಿಂದಿಹ ಸುಖಿಗಳ್ಗೆ ಆಲಿಂಗನವ ಬಿಡದೆ ಇರುವುದಱಿಂದ ಹಿಮಂತಋತುವಿನ ಹಾಗೆ ಇದ್ದಿತು; ಸುರತತಾಂತರ್ಗೆ ಶಿಶಿರಋತು= ಸುರತದಿಂದ ಬಾಡಿ ಬೆವರನಾಱಿಸಿಕೊಂಬ ಸತಿಪುರುಷರ್ಗೆ ಶೈತ್ಯಮಾಡುವುದಱಿಂದ ಶಿಶಿರಋತುವಿನ ಹಾಗಿದ್ದಿತು; ಭೋಗಿಜನರಿಗೆ ವಸಂತಂ= ಶ್ರೀಗಂಧ, ಪಚ್ಚೆಕರ್ಪೂರ, ಪನ್ನೀರು, ಕುಂಕುಮ, ಕಸ್ತೂರಿ, ಮುಡಿಹೂವು– ಇವನ್ನು ಭೋಗಿಸಿ ಸತಿಯರೊಳು ಚೆಲ್ಲವಾಡುವರ್ಗೆ ವಸಂತಋತುವಿನ ಹಾಗಿದ್ದಿತು; ವಿಯೋಗಿಗಳ್ಗೆ ನಿದಾಘಸಮಯಂ= ಅಗಲಿದ ಸತಿಪುರುಷರ್ಗೆ ವಿರಹಾಗ್ನಿ ಪುಟ್ಟಿಸುವುದಱಿಂದ ಗ್ರೀಷ್ಮಋತುವಿನಹಾಗೆ ಇದ್ದಿತು; ಜಾರೆಯರ್ಗೆ ವರ್ಷಾಗಮಂ= ಒಂದಿಷ್ಟು ಬಡವಾದವನಾಡುವ ಜಾರೆಯರಿಗೆ ಮಳೆಗಾಲದಲ್ಲಿ ಮನೆಬಾಗಿಲ ಬಿಟ್ಟು ಹೊಱಡದೆ ಇರುವಹಾಗೆ ಈ ಬೆಳದಿಂಗಳೊಳು ಬಾಗಿಲ ಬಿಟ್ಟು ಹೊಱವಂಟರೆ ಆರಾದರೂ ಕಂಡಾರು ಎಂಬ ಭೀತಿಯನು ಹುಟ್ಟಿಸುವುದಱಿಂದ ಮಳೆಗಾಲದ ಮರ್ಯಾದೆಯಲ್ಲಿ ಇದ್ದಿತು; ಪರಿಣಾಮಿಜೀವಿಗಳ್ಗೆ ರಾಗವಮಾಡುವ ಶರತ್ಕಾಲವೆನೆ= ಶರತ್ಕಾಲದಲ್ಲಿ ಹೊಲ ಗದ್ದೆ ಮೊದಲಾದುವಱಲ್ಲಿ ಹದಿನೆಂಟು ಧಾನ್ಯಗಳು ಬೆಳೆದು ಬಿತ್ತಿದವರಿಗೂ ಸಂತೋಷಮಾಡುವುದು, ಸುಮ್ಮನೆ ನೋಡಿದವರಿಗೂ ಸಂತೋಷ ಮಾಡುವುದು, ಆ ಮರ್ಯಾದೆಯಲ್ಲಿ ಸರ್ವರಿಗೂ ಸಂತೋಷ ಮಾಡುವುದಱಿಂದ ಶರದೃತುವಿನ ಹಾಗೆ ಇದ್ದಿತು. ಈ ಪ್ರಕಾರದಿಂ ಷಡೃತುಗಳನು ಪೋಲ್ತು ಮೆಱೆವ ಅಚ್ಚ ಬೆಳ್ದಿಂ

ಗಳೊಳಗೆ ಭಾಗೀರಥಿಯಂ ಮಸ್ತಕದಲ್ಲಿ ಧರಿಸಿದ ಶಿವನು ಭಿಕ್ಷಮಂ ಬೇಡುತ ಮುಂದಕ್ಕೆ ನಡೆದನು ಕೇಳಿರೈ, ಎಲೆ ಮುನಿಗಳಿರಾ! ಎಂದು ಹೇಳುತಿರ್ದಾನು.

ಮೆಯ್ಯೊಲವು ಪೊಂಬಳ್ಳಿಯಂದಮಂ ಪಳಿಯಲಂ |
ಗೆಯ್ಯಲತಿಗೆಯ ಕೆಂಪುಮಂ ಕೀಳ್ಪಡಿಸಲು ಸರ |
ಗೆಯ್ಯಲದು ಕೋಕಿಲಾಪಮಂ ಸೋಲಿಸಲು ಸೊಬಗುವಿಟರಿಗೆ ಮದನನಾ ||
ಹುಯ್ಯಲಂತಿರಲು ಚಂಪಕಕೆಣೆಯ ನಾಸಿಕವ |
ಸುಯ್ಯೆಲರ್ಪರಿಮಳಿಸುತಿರಲು ನೋಳ್ಪರ ಮನವ |
ನುಯ್ಯಲಾಡಿಸಿದಳೆಂದೆನಲು ಮಣಿಮಸೋಜ ನವಿಲುಯ್ಯಲಾಡಿದಳೊರ್ವಳು ||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಶಿವನು ಭಿಕ್ಷಕ್ಕೆ ಬರುತ್ತಿರ್ಪಲ್ಲಿ ಒಬ್ಬ ಸ್ತ್ರೀಯು ಉಯ್ಯಲೆಯಾಡುತ್ತಿರ್ದಳು. ಆವ ಪ್ರಕಾರದಲ್ಲಿ ಆಡಿದಳು? ಎಂದರೆ—ಅವಳ ತನುಲತೆಯು ಸುವರ್ಣದ ಬಳ್ಳಿಯ ಹಳಿಯುತ್ತಿರಲಾಗಿ, ಅಂಗೆಯ್ಯ ಕೆಂಪು ಆಲತಿಗೆಯ ಕೆಂಪ ಕೀಳ್ಪಡಿಸಲಾಗಿ, ಅವಳ ಸ್ವರವು ಕೋಕಿಲಾಪಮಂ ಸೋಲಿಸಲಾಗಿ, ಸಂಪಗೆಯ ಪುಷ್ಪಕ್ಕೆ ಸಮಾನವಾದ ನಾಸಿಕದ ಸುಯ್ಯಲುಗಾಳಿ ಪರಿಮಳವ ಸೂಸುತ್ತಿರಲಾಗಿ, ನೋಡುವರ ಮನವನು ಉಯ್ಯಲೆಯನಾಡುತ್ತಿದ್ದಾಳೋ ಎಂಬ ಹಾಗೆ ಮಣಿಯನ್ನೇಜು ನವಿಲುಯ್ಯಲೆಯನಾಡುವ ವಿಲಾಸಿನಿಯಂ ನೋಡುತ್ತ ಶಿವನು ಭಿಕ್ಷಕ್ಕೆ ನಡೆದನು ಎಂದು ಸೂತಮುನೀಶ್ವರನು ಹೇಳುತ್ತಿರ್ದಾನು.

ಮತ್ತಲ್ಲಿಯೊರ್ವಳಭವಂಗೆ ಭಿಕ್ಷಾಶನವ |
ನಳ್ತಿಯಿಂ ತಂದು ನೀಡಲು ಪಾತ್ರೆಯಂ ಮೇಲ |
ಕೆತ್ತೆ ಮೇಲುದು ಜಾರೆ ನಸುನಗುತ ಪೆರ್ಮೊಲೆಗಳಿಂಗಂಬರಾಂಚಲವನು ||
ಪತ್ತಿಸುವ ಪರನ ಜಾಣ್ಮೆಗೆ ಮೆಚ್ಚಿ ತಲೆದೂಗೆ |
ಚಿತ್ತಜಾಂತಕನವಳ ಭಾವಮಂ ನೋಡಿ ಮೆ |
ಚ್ಚುತ್ತೆ ದರಹಸಿತಮುಖನಾಗಿ ಭಿಕ್ಷಾಯೆನುತೆ ಮುಂದಕ್ಕೆ ನಡೆತಂದನು ||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಮತ್ತೊಂದು ಸ್ಥಾನದಲ್ಲಿ ಒಬ್ಬ ಸ್ತ್ರೀಯು ಶಿವಂಗೆರಡು ಹಸ್ತದಿಂ ಭಿಕ್ಷಮಂ ನೀಡಲಾಗಿ, ಶಿವನು ಭಿಕ್ಷಾಪಾತ್ರೆಯ ಮೇಲಕ್ಕೆ ನೆಗಹಿದರೆ, ಆ ಸ್ತ್ರೀಯು ಕೈಗಳನೆತ್ತಿ ಭಿಕ್ಷಮಂ ನೀಡುವಲ್ಲಿಯುಂ ಮೊಲೆಯ ಮೇಲಣ ಮೇಲುದು ಜಾರಲಾಗಿ, ಆ ಮೊಲೆಗಳಿಗೆ ಅಭವನು ಕೈಸೋಕುಪ ಮರ್ಯಾದೆಯಿಂದ ಮುಸುಕಲಾಗಿ, ಶಿವನ ಜಾಣ್ಮೆಗೆ ಮೆಚ್ಚಿ ತಲೆವಾಗಲಾಗಿ ಶಿವನು ಅವಳ ಭಾವಕ್ಕೆ ಸಂತೋಷಪಡುತ್ತ, ಮುಗುಳು ನಗೆಯಂ ನಗುತ್ತ, ಮುಂದಕ್ಕೆ ಭಿಕ್ಷಮಂ ಬೇಡುತ್ತ ನಡೆದನು.

ವೃಡಗೆ ಕೈಗಾಣ್ಕೆಗುಡುವ್ರೊಲ್ ಭಿಕ್ಷಮಂ ನೀಡಿ |
ಪೊಡೆನುಡುತೆ ತೋರಮುಡಿಬಾರವಿನ ಪೊಱುವೆನೆಂ |
ಜೊಡೆ ಕೊರಳು ಸಣ್ಣನೇಗುವೆ ಕುಚಗಳೆಂಬ ಗಿರಿಗಳ ಭಾರಮಂ ಪೊಱು
ನಡು ಸಣ್ಣ ಘನಜಘನಭಾರಮಂ ಪೊಱುವೆನೆಂ | [ಪೊಡೆ ||
ಜೊಡೆ ಪದಗಳಿವು ಸಣ್ಣವೆಂದು ತನ್ನಯ ಬಾಳು |
ಬಡತನವನರಿದಿರಾಗಿ ಬಿನ್ನೈಸುವಂತೆ ನಿಂದಿರ್ದಳು || ೨೧ ||

ಟೀಕು— ಕೇಳಿರೈ, ಎಲೆ ಮುನಿಗಳಿರಾ! ಆ ಪರಶಿವನು ಭಿಕ್ಷಕ್ಕೆ ಬರುತ್ತಿರ್ದಲ್ಲಿ ಒಬ್ಬ ಸೌಂದರ್ಯವುಳ್ಳ ಸತಿ ಬಂದು, ವೃಡಗೆ ಕೈಗಾಣ್ಕೆ...ವುಡುತ = ರಕ್ಷಣಕರ್ತನಾದ ಶಿವನಿಗೆ ಕೈಗಾಣಿಕೆಯು ಕುಡುವ ಮರ್ಯಾದೆಯಿಂದ, ಪಂಚಭಕ್ಷ್ಯಪಾಯಸದ ಭಿಕ್ಷವಂ ನೀಡಿ, ಶರಣೆಂದು (ಹೇಳಿ), "ಎಲೈ ಸ್ವಾಮಿ! ತೋರವಾದ ಮುಡಿಯ ಭಾರವ ಹೊಱುವುದಕ್ಕೆ ಕೊರಳು ಸಣ್ಣ; ಈ ಕುಚಗಳೆಂಬ ಗಿರಿಗಳ ಹೊಱುವುದಕ್ಕೆ ನಡು ಬಲುಸಣ್ಣ; ದೊಡ್ಡಿತ್ತಾದ ನಿತಂಬಗಳ ಭಾರವ ತಾಳುವುದಕ್ಕೆ ಕಣಕಾಲ್ಗಳು ಸಣ್ಣ; ತನ್ನ ಬದುಕು ಹೀಗಾಯಿತು. ಎಲೆ ದೇವ! ನೀನು ನೋಡಬೇಕು" ಎಂದು ತನ್ನ ದೊಡ್ಡಿತ್ತಾಗಿ ಇದ್ದಂಥ ಬಾಳನು, ಸಣ್ಣನಾಗಿದ್ದ ಬಡತನವನು, ಒಡೆಯನ ಕಂಡರೆ ಬಿನ್ನವಿಸುತಿರ್ದಳೋ ಎಂಬ ಮರ್ಯಾದೆಯಿಂದ ನಿಂದಿರ್ದ ಸತಿಯು ನೋಡುತ್ತ, ಶಿವನು ಮುಂದಕ್ಕೆ ನಡೆದನು.

ದೇಶಂಗಳಱಿಯೆ ನಿನ್ನ ಕಣ್ಗಳೀರಾಱು |
ರಾಶಿಗಳೊಳೊಂದು ರಾಶಿಯು ನೆಲೆಮೊಲೆಗಳೊಂದು |
ರಾಶಿಯುನು ನಿನ್ನ ತನುವಿನೊಳು ಕಾಣಿಸವೆ ಕಾಣಿಸುವ ತನುಮಧ್ಯವೊಂದು||
ರಾಶಿಯುನು ನಿನ್ನ ಭ್ರೂಲತೆಯೊಂದು ರಾಶಿಯನು |
ಸಿಂಹ ನಹಿತಲೊಂದು ರಾಶಿಯು ಪೋಲ್ವೆಯೆಂದೊರ್ವ |
ವೇಶಿ ಮಗಳಂ ಪೊಗಳುವುದ ಕೇಳಿ ನಸುನಗುತ ರಾಶಿಗನುಸಂ ನಡೆದನು ||

ಟೀಕು— ಕೇಳಿರೈ, ಎಲೆ ಮುನಿಗಳಿರಾ! ಆ ವೇಶ್ಯಾವೀಧಿಯಲ್ಲಿ ಮುಂದುಗಡೆಯಲೊಬ್ಬ ವೃದ್ಧೆ ಮಗಳ ಕೊಂಡಾಡುತಿರ್ದಳು. ಅದೆಂತೆಂದರೆ— ಎಲೆ ಮಗಳೆ, ದೇಶದವರಱಿದ ಮರ್ಯಾದೆಯಿಂದ ನಿನ್ನ ಕಣ್ಣುಗಳು ಹನ್ನೆರಡುರಾಶಿಗಳೊಳೊಂದು ರಾಶಿಯ ಪೋಲ್ತಪ್ಪುವು. ಅದು ಹೇಗೆಂದರೆ, ಹನ್ನೆರಡು ರಾಶಿಗಳೊಳಗೆ ಮೀನರಾಶಿಯೊಂದು, ಈ ನಿನ್ನ ಕಣ್ಗಳು ಮೀನುಗಳಿಗೆ ಸಮಾನವೆಂದರ್ಥ. ನಿನ್ನ ನೆಲೆಮೊಲೆಗಳು ಒಂದು ರಾಶಿಯನು ಪೋಲ್ತುವು = ಕುಂಭರಾಶಿಗೆ ಸಮಾನವಾಗಿ ಒಪ್ಪು

ತ್ತಿದ್ದುವು. ನಿನ್ನ ತನುವಿನೊಳು ಕಾಣಿಸದೆ ಕಾಣಿಸುವ, ತನುಮಧ್ಯ = ನಡುವು, ಸಿಂಹರಾಶಿಯು ಮರ್ಯಾದೆಯಲ್ಲಿ ಒಪ್ಪುತ್ತಿದ್ದಿತು: ಅದು ಹೇಗೆಂದರೆ— ಸಿಂಹದ ನಡುವಿನಂತೆ ಸಣ್ಣನಾಗಿದ್ದಿತೆಂದರ್ಥ. ನಿನ್ನ ಹುಬ್ಬು ಧನೂರಾಶಿಯು ಹಾಗೆ ಇದ್ದಿತು. ನಿನ್ನನು ನೋಡಿದರೆ ಕನ್ಯಾರಾಶಿಯಾಗಿ ಒಪ್ಪುತ್ತಿದ್ದೀಯೆ. ಈ ಪ್ರಕಾರದಲ್ಲಿ ನೀನು ರಾಶಿಗಳ ಪೋಲ್ತು ಒಪ್ಪುತ್ತಿದ್ದೀಯೆ ಎಂದು ಒಬ್ಬ ವೇಶ್ಯೆಯು ಮಗಳ ಕೊಂಡಾಡುತ್ತಿರಲು; ಅದ ಕೇಳಿ ನಸುನಗುತ್ತ, ರಾಶಿಗಮನಂ ಎಂದರೆ ವೃಷಭಗಮನನಾದ ಶಿವನು ಮುಂದಕ್ಕೆ ನಡೆದನು, ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತ್ತಿರ್ದನು.

ಸರಸಿಜಾನನೆ ಗಿರಿಪಯೋಧರೆ ಮಯೂರಕಚ |
ಭರೆ ಮೀನನೇತ್ರೆ ನಿನಗೇನೊತ್ತೆಯೆನಲೊರ್ವ |
ಪುರುಷನೊರ್ವ ವಿಳಾಸಿನಿಯ ಬೆಸಗೊಳಲ್ಕೆ ಮೆಲ್ಲನೆ ವರಹಸಿತೆಯಾಗುತ ||
ಹರಿಣಾಂಕ ಇಂದ್ರನಾಯುಧ ಈಶನಾಭರಣ |
ವರಚಕ್ರವಾಕ ಎಂದೆನೆ ಪೋದ ವಿಟನ ಚಾ |
ತುರಿಯನಚ್ಚರಿವಳ ಜಾಣ್ಮೆಗೆ ಮೆಚ್ಚುತಭವನಲ್ಲಿಂದ ಮುಂದಕೆ ನಡೆದನು ||

ಟೀಕು — ಕೇಳಿರೈ, ಎಲೆ ಮುನಿಗಳಿರಾ! ಶಿವನು ಮುಂದಕ್ಕೆ ಬರ್ಪಲ್ಲಿ, ಒಬ್ಬ ವಿಟನು ಒಬ್ಬ ವಿಲಾಸಿನಿಯಾದ ವೇಶ್ಯಾಸ್ತ್ರೀಯನು ನೋಡಿ—ಎಲೆ ಸರಸಿಜಾನನೆ = ಕಮಲಮುಖಿ; ಗಿರಿಪಯೋಧರೆ = ಪರ್ವತೋಪಮವಾದ ಮೊಲೆಗಳನುಳ್ಳವಳೆ, ಮಯೂರಕಚಭರೆ = ನವಿಲುಗರಿಗೆ ಸಮಾನವಾದ ಮುಡಿಕಟ್ಟನುಳ್ಳವಳೆ, ಮೀನನೇತ್ರೆ = ಮೀನಿನ ನೇತ್ರದಹಾಗೆ ನೇತ್ರಗಳನುಳ್ಳವಳೇ, ನಿನಗೆ ಒತ್ತೆಯೇನು? ಎಂದು ಬೆಸಗೊಳಲಾಗಿ; ಅವಳು 'ಎಷ್ಟೆ' ಯಿಲ್ಲವೆನಲೊಲ್ಲದೆ, ಮುಗುಳುನಗೆಯಿಂದ, ಅವ ತನ್ನ ಕೊಂಡಾಡಿದುದಕೆ ತಾನು ವಿರೋಧವಾದ ನಾಮದಿಂದ ಆತನ ಕೊಂಡಾಡಿ ಹೇಳುತ್ತಿರ್ದಳು. (ಅದು ಹೇಗಂದರೆ)—

ಎಲೆ ಹರಿಣಾಂಕ = ಚಂದ್ರಂಗೆ ಸಮಾನವಾದ ಕಾಂತಿವೆತ್ತಮುಖವನುಳ್ಳವನೇ, ಎಲೆ ಇಂದ್ರನಾಯುಧ = ವಜ್ರಾಯುಧಕ್ಕೆ ಸಮಾನವಾದ ಸಾಹಸವನುಳ್ಳವನೇ, ಎಲೆ ಈಶನಾಭರಣ = ಶಿವನಾಭರಣವಾದ ಮಹಾಶೇಷಂಗೆ ಸರಿಯಾದ ಸಂಗೀತಸಾಹಿತ್ಯವ ಬಲ್ಲವನೇ, ಎಲೆ ವರಚಕ್ರವಾಕ = ಚಕ್ರಪಕ್ಷಿಯೋಪಾದಿಯಲ್ಲಿ ದಿವಸದಲ್ಲಿ ಅಗಲದೆ ಇರುವಾತನೇ, ಎಂದು ಕೊಂಡಾಡಿ ನುಡಿಯಲಾಗಿ; ಆ ವಿಟನು ಸುಮ್ಮನೆ ಪೋದನು. ಅದೇನು ಕಾರಣವೆಂದರೆ— ತಾವರೆಗೂ ಚಂದ್ರನಿಗೂ ವಿರೋ

ಧ, ಗಿರಿಗೂ ವಜ್ರಾಯುಧಕ್ಕೂ ವಿರೋಧ, ಸರ್ಪನಿಗೂ ನವಿಲಿಗೂ ವಿರೋಧ, ಚಕ್ರವಾಕಪಕ್ಷಿಗೂ ವಿಧುವಿಗೂ ವಿರೋಧ. (ಅದುದಱಿಂದ ತನ್ನಲ್ಲಿ ಅವಳಿಗೆ ಅನುರಾಗವಿಲ್ಲವೆಂಬುದನಱಿತು) ಹೋದ ವಿಟನ ಚಾತುರ್ಯಕ್ಕೂ ಆ ಸ್ತ್ರೀಯ ಪ್ರೌಢತೆಗೂ ಶಿವನು ಮೆಚ್ಚಿ ಮುಂದಕ್ಕೆ ನಡೆದನು ಕಾಣಿರೈ.

ತರಳೆ ನಿನ್ನಯ ವಿರಹದಿಂದ ಪೂವಾಸಿನೊಳು |
ಪೊರಳಿ ಮತ್ತಲ್ಲಿ ಸೈರಿಸಲಾಱದೆದ್ದು ಕು |
ಳ್ಳಿರಲಾಕೆಯವಯವಂಗಳೊಳಲ್ಲಿಗಲ್ಲಿಗೆ ಪರಿದ ಕುಸುಮಪತ್ರಂಗಳು ||
ಸ್ಮರನ ಸರಳುಗಿವೆಡೆಗೆ ಹಾಯ್ಕಿರ್ದ ಮದ್ದಿಣ್ಣೆ |
ಯರಳೆವತ್ತಿಗಳೊ ಎನಲಿವೆಯವಳ ಸಲಹು ಬ |
ಲ್ಲರ ಬಲ್ಲಹನೆನೆಂಬ ಚತುರಿಕೆಯ ವಚನಮಂ ಕೇಳುತಭವಂ ನಡೆದನು ||

ಟೀಕು — ಕೇಳಿರೈ, ಎಲೆ ಮುನಿಗಳಿರಾ! ಶಿವನು ಬರುತ್ತಿರ್ದಲ್ಲಿ, ಮುಂದೊಂದೆಡೆಯಲ್ಲಿ ಒಬ್ಬ ಸಖಿ ನಾಯಕನ ಕೂಡೆ ನಾಯಿಕೆಯ ವಿರಹಾತಿಶಯವ ಹೇಳುತ್ತಿರ್ದಳು. ಎಲೆ ವಿಟರನ್ನ, ತರಳೆಯು ನಿನ್ನ ವಿರಹದಿಂದ ಹೂವಿನಹಾಸಿಕೆಯೊಳು ಹೊರಳಿ ಸೈರಿಸಲಾಱದೆ ಎದ್ದು ಕುಳ್ಳಿರಲಾಗಿ, ಅವಳ ಅವಯವಂಗಳಲ್ಲಿ ಹತ್ತಿರ್ದ ಹೂವಿನೆಸಳುಗಳು ಆವ ಪ್ರಕಾರದಲ್ಲಿ ಒಪ್ಪಿಹವು? ಎಂದರೆ—ಕಾಮನು ಹೂವಿನ ಸರಳುಗಳಿಂದೆಸೆಯಲಾಗಿ, ಅವು ತಟ್ಟುಚ್ಚಿ ಹೋದರೆ, ಆ ಗಾಯಂಗಳಿಗೆ ಮದ್ದಿಣ್ಣೆವರಸಿನ ಅರಳೆಯ ಬತ್ತಿಯ ಹಾಯ್ಕಿದ ಮರ್ಯಾದೆಯಲ್ಲಿ ಸರ್ವಾಂಗದಲ್ಲಿ ತೋಱುತ್ತಲಿವೆ. ಬಲ್ಲವರಿಗೆ ಬಲ್ಲಹನೇ, ನೀನು ಅವಳ ಸಲಹಬೇಕೆಂದು, ನಾಯಕನ ಬೇಡಿಕೊಂಬ ಚತುರಿಕೆಯ ವಚನಮಂ ಕೇಳುತ್ತ, ಶಿವನು ಮುಂದಕ್ಕೆ ನಡೆದನು

ತಡೆದು ಬಪ್ಪಿನಿಯನ ಬರವ ಕಾಣುತ ಮುನಿದು |
ನುಡಿಯಲಾವಪ್ಪುದೆಂದು ಮನೆಯ ಕಂಭದ ಮಱೆಯೊ |
ಳಡಗಿರಲು ಭೋಂಕನೊಳಪೊಕ್ಕು ಶಯನಸ್ಥಳಂ ಶೂನ್ಯವಾಗಿರಲು ಕಂಡು ||
ಬಿಡದೆ ಸಂದೇಹವಾನಸನಾಗೆ ಮಸ್ತಕವ |
ನಡರುತಿರೆಯಸುವಳಿವುದೆಂದು ಕಂಕಣರವದಿ |
ನೊಡನವನ ಸಂತೈಸಿ ತನ್ನ ಚಲಮಂ ಮಱೆದಳೊಂದೆಡೆಯೊಳೂರ್ವಜಾಣೆ ||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಆ ಸೂಳೆಗೇರಿಯಲ್ಲಿ ಮತ್ತೊಂದು ತಾವಿನಲ್ಲಿ ನಡೆದು ಬಪ್ಪಿನಿಯನ ಬರವ ಕಾಣುತಂ, ತಡೆದು ಬರಬಹುದೇ ಎಂದು ಕೋಪದಿಂದ ಮುನಿದು, ನುಡಿಯಲಾದೀತೆಂದು ತನ್ನ ಮನೆಯ ಕಂಭದ ಮಱೆಯಲ್ಲಿ

ಅಡಗಿಕೊಂಡಿರಲಾಗಿ; ನಾಯಕನು ಥೋಂಕನೆ ಒಳಹೊಕ್ಕು ಬಂದು ಮಲಗುವ ಮಂಚದ ಮೇಲೆ ನಾಯಿಕೆ ಇಲ್ಲದೆ ಶೂನ್ಯವಾಗಿ ಇರಲಾಗಿ; ಸಂದೇಹವಾದ ಮನಸ್ಸಿನಿಂದ ಪ್ರಾಣ ನಡುನೆತ್ತಿಗೆ ಏಱುತ್ತಿರಲಾಗಿ; ನಾಯಿಕೆ ಹೆದಱಿ ತನ್ನ ಕಾಣದೆ ಇದ್ದರೆ ಪ್ರಾಣವ ಬಿಡುವನೋ ಎಂದು ಮೆಲ್ಲನೆ ಕಂಕಣಧ್ವನಿಯಂ ತೋಱಲಾಗಿ; ವಿಟಂಗೆ ಸಂತೋಷವಾಗೆ; ತನ್ನ ಚಲವನು ಮಱೆದು ಚಾಣ್ಮೆಯಿಂದ ಕೂಡಿ ಸುಖಿಸುತಿರ್ದ ಸತಿಪುರುಷರಂ ನೋಡುತ್ತ, ಶಿವನು ಮುಂದಕ್ಕೆ ನಡೆದನು, ಎಂದು ಸೂತಮುನೀಶ್ವರನು ಹೇಳುತ್ತಿರ್ದಾನು.

ಉಟ್ಟುಡಿಗೆ ತೊಡಿಗೆಯಿಂ ಸಿಂಗರಕೆ ಮೇಱಲಾಗಿ |
ಯಿಟ್ಟ ನೊಸಲಿನ ಕತ್ತುರಿಯ ತಿಲಕದಿಂದಳಕ |
ವಟ್ಟ ಕರ್ಣದ ಕನಕಪತ್ರಂಗಳಿಂದ ವರಶುಕ್ರೋಪಮಾನವಡೆದ ||
ಬಟ್ಟಮುತ್ತಿನ ನಾಸಿಕಾಭರಣದಿಂದ ಮುಡಿ |
ಕಟ್ಟಿಂದಲೊರ್ವಳೀಶ್ವರನಿದಿರೊಳಿರಲು ಸಲೆ |
ನಿಟ್ಟಿಸರ ಮನಸಿಗೊಂದೇ ತುತ್ತೆನಿಸಿ ತೋಱುತಾನೀಱೆಯೆಸೆವ ಮೋಱೆ ||

ಟೀಕು—ಕೇಳಿನ್ನು, ಎಲೆ ಮುನಿಗಳಿರಾ! ಮತ್ತಾ ಸೂಳೆಗೇರಿಯಲ್ಲಿ ಒಬ್ಬ ಸೌಂದರ್ಯವನುಳ್ಳ ಸ್ತ್ರೀಯು ಉಟ್ಟ (ದಿವ್ಯಾಂಬರದಿಂದ,) ತೊಟ್ಟ ದಿವ್ಯಾಭರಣದಿಂದ, ನೊಸಲಲ್ಲಿ ಹೊಳೆವ ಕಸ್ತುರಿಯ ತಿಲಕದಿಂದ, ಕಿವಿಯೊಳೊಪ್ಪುವ ರತ್ನಖಚಿತವಾದ ಸುವರ್ಣ ಕರ್ಣಪತ್ರದಿಂದ, (ನಾಸಿಕದಲ್ಲಿ ಒಪ್ಪುವ) ಶುಕ್ರನಿಗೆ ಸಮಾನವಾದ ದೊಡ್ಡ ಮುತ್ತಿನ ಮೂಗುತಿಯಿಂದ, ಒಪ್ಪವಾಗಿ ಕಟ್ಟಿದ ತುಱುಬಿನಿಂದ, ಅಲಂಕಾರವಾಗಿ ಒಪ್ಪುತ್ತಿರಲಾಗಿ; ನಿಟ್ಟಿಸರ ಮನಸಿಗೆ = ಇವಳ ನೋಡಿದ ರಸಿಕರ ಕಣ್ಣಿಗೆ, ಒಂದೇ ತುತ್ತೆನಿಸಿ ತೋಱುತಾನೀಱೆಯೆಸೆವ ಮೋಱೆ = ಇವಳ ಮುಖದಲ್ಲಿ ಒಪ್ಪುತ್ತಿದ್ದ ಅಧರಾಮೃತದ ಒಂದು ತುತ್ತ ಸವಿದರೆ ಸಾಲದೇ—ಎಂದೆನಿಸಿಕೊಂಬ ಮುಖವನುಳ್ಳ ನೀಱೆಯು ನೋಡುತ್ತ ಶಿವನು ಮುಂದಕ್ಕೆ ನಡೆದನು.

ಮೀನಕೇತನಹರನ ಮೋಹನಾಕಾರವನ |
ನೇಸಂಜೆ ಹತ್ತೈದು ಮನೆಯ ನಾರಿಯರು ಪರ |
ಮಾನಂದದಿಂದ ಭಿಕ್ಷವನೀಡಲೆಂದು ನಡೆತಂದು ಮನಸೋತು ನಿಂದು ||
ನೀನೆ ಬೆತ್ತಲೆ ನಿನ್ನ ನೆನೆವ ಭಕ್ತರ ಭವಂ |
ತಾನೆ ಬೆತ್ತಲೆ ನಿನ್ನ ಕಂಡೆಮ್ಮ ಚಿತ್ತದ |
ಜ್ಞಾನ ಬೆತ್ತಲೆಯನಾಮೆಂಬಂತುಡಿಗೆ ಜಗಕ್ಕು ತಾನೆ ಬೆತ್ತಲೆಯಾದರು ||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಮೀನಕೇತನಹರನ ಮೋಹನಾಕಾರವದನೇನೆಂಬೆ = ಕಾಮಸಂಹಾರಿಯಾದ ಪರಮೇಶ್ವರನ ಮೋಹನಸ್ವರೂಪವನ್ನು ಏನೆನ್ನಬಹುದು. ಹತ್ತೈದು ಮನೆಯ ನಾರಿಯರೆಲ್ಲರು ಒಗ್ಗಾಗಿ ಪರಮಾನ್ನವನು ಶಿವಗೆ ಭಿಕ್ಷವನೀಡಲೆಂದು ಬಂದು, ಶಿವನ ಸ್ವರೂಪವನು ಕಂಡು ಮನಸೋತು, ನಿರಿ ಸಡಿಲಲಾಗಿ, ಹೇಗಿದ್ದರು? ಎಂದರೆ—ಎಲೆ ದೇವ! ನೀನೆ ಬೆತ್ತಲೆ = ದಿಗಂಬರನಾದ ದೆಸೆಯಿಂದ ನೀನು ಬೆತ್ತಲೆ, ನಿನ್ನ ನೆನೆವ ಭಕ್ತರ ಭವಂ ಬೆತ್ತಲೆ= ನಿನ್ನ ಭಕ್ತರಿಗೆ ಭವವಿಲ್ಲವಾದಕಾರಣದಿಂದ ಭಕ್ತರಭವವೂ ಬೆತ್ತಲೆ, ನಿನ್ನ ಕಂಡೆಮ್ಮ ಚಿತ್ತದಜ್ಞಾನ ಬೆತ್ತಲೆ =ನಿನ್ನ ಕಂಡ ಮಾತ್ರದಲ್ಲಿ ನಮ್ಮ ಚಿತ್ತದ ಅಜ್ಞಾನವು ಬೆತ್ತಲೆಯಾಯಿತೆಂದು ನುಡಿದು,-ಉಡಿಗೆ ಜಗುಳ್ದು ಬೆತ್ತಲೆಯಾದ ಸ್ತ್ರೀಯರುಗಳಂ ನೋಡುತ್ತ ಶಿವನು ನಗುತ್ತ ನಿರ್ವಿಕಾರದಲ್ಲಿ ಮುಂದಕ್ಕೆ ನಡೆದನು.

ಶಶಿರೇಖೆ ಸಾಹಿತ್ಯವಾಣಿ ಕರ್ಪೂರಗಂಧಿ।
ಕುಸುಮಾಂಗಿ ಕುಶಲೆ ಕೋಮಲೆ ಸುವಿದ್ಯಾರಾಗೆ
ರಸಭರಿತೆ ರಾಗಕೋಗಿಲೆ ರಾಜಲಕ್ಷ್ಮಿ ರತಿರೂಪೆ ಶೃಂಗಾರಹಾರೆ ॥
ಅಸಮೆಯಭಿನವಭೋಗಿ ರಾಗಿ ಸರಸತ್ಯಾಗಿ ।
ನಿತಾನತಂನೆಯೆಂದೆನೆ ಪೆಸರ್ವಡೆದ ಪೆಣ್ಗಳ್ ।
ಕಸವಿರ್ದರೀಶ್ವರನ ಮುಂದೆ ಭಿತ್ತಿಯಲಿ ಚಿತ್ರಿಸಿದ ಪುತ್ತಳಿಗಳಂತೆ ॥ ೨೮ ॥

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಆ ಕೇರಿಯಲ್ಲಿ ಅವಾವ ಹೆಸರನುಳ್ಳ ಸ್ತ್ರೀಯರುಗಳಿದ್ದರು? ಎಂದರೆ— ಶಶಿರೇಖೆಯೋಪಾದಿಯಲ್ಲಿ ಕಾಂತಿಯನುಳ್ಳ ಶಶಿರೇಖೆಯೆಂಬವಳು, ಶಾಸ್ತ್ರೋಕ್ತವಾದ ನುಡಿಯ ನುಡಿವ ಸಾಹಿತ್ಯವಾಣಿಯೆಂಬವಳು, ಕರ್ಪೂರದೋಪಾದಿಯಲ್ಲಿ ಉಸಿರ್ಗಂಪನುಳ್ಳ ಕರ್ಪೂರಗಂಧಿಯೆಂಬವಳು, ಪುಷ್ಪದೋಪಾದಿಯಲ್ಲಿ ಮೃದುವಾದ ಶರೀರವನುಳ್ಳ ಕುಸುಮಾಂಗಿಯೆಂಬವಳು, ವಿದ್ಯಾಕುಶಲಂಗಳ ಬಲ್ಲ ಕುಶಲೆಯೆಂಬವಳು, ತನ್ನ ಸೊಬಗಿನಿಂದ ಮೆರೆವ ಕೋಮಲೆಯೆಂಬವಳು, ಸಂಗೀತ ಸಾಹಿತ್ಯಗಳ ಬಲ್ಲ ವಿದ್ಯಾರಾಗೆಯೆಂಬವಳು, ನವರಸಂಗಳ ಬಲ್ಲ ರಸಭರಿತೆಯೆಂಬವಳು, ಸುಸ್ವರದಿಂದ ಮೆರೆವ ರಾಗಕೋಗಿಲೆಯೆಂಬವಳು, ಅಷ್ಟಭೋಗದಿಂ ಮೆರೆವ ರಾಜಲಕ್ಷ್ಮಿಯೆಂಬವಳು, ರತಿದೇವಿಗೆ ಸಮಾನವಾದ ರೂಪುಳ್ಳ ರತಿರೂಪೆಯೆಂಬವಳು, ನವರತ್ನಹಾರಂಗಳನುಳ್ಳ ಶೃಂಗಾರಹಾರೆಯೆಂಬವಳು, ತನಗೆ ಸರಿಯಾರೆಂದಿರುವ ಅಸಮೆಯೆಂಬವಳು, ದಿನದಿನಕ್ಕೆ ಹೊಸತಾದ ವಸ್ತುಗಳ ಭೋಗಿಸುವ ಅಭಿನವಭೋಗಿಯೆಂಬವಳು, ಸರ್ವರಲ್ಲಿ ಪ್ರೇಮವುಳ್ಳ ರಾಗಿಯೆಂಬವಳು, ವಿನೋದದಿಂದ ಬೇಡಿದ ವಸ್ತುಗಳ ಕುಡುವ ಸರಸತ್ಯಾಗಿಯೆಂ

ಬವಳು, (ರಸಿಕರ ಕೂಡ ವಿನೋದವಾಗಿ ಮಾತಾಡಿ ಅವರನ್ನು ವಶಮಾಡಿಕೊಳ್ಳ ಬಲ್ಲ) ರಸಿಕಾವತಂಸೆಯೆಂಬವಳು—(ಈರೀತಿಯಾದ) ಹೆಸರುಗಳನುಳ್ಳ ಸ್ತ್ರೀಯ ರುಗಳು, ಶಿವನಿಗೆ ಭಿಕ್ಷವ ನೀಡಿದರು. ಚಿತ್ರದ ಬೊಂಬೆಗಳಂತೆ ನಿಂದಿರ್ದ (ಇಂಥ) ಸ್ತ್ರೀಯರಂ ನೋಡುತ್ತ ಶಿವನು ಮುಂದಕ್ಕೆ ನಡೆದನು, ಕಾಣಿರೈ ಎಲೆ ಮುನಿ ಗಳಿರಾ! ಎಂದು ಸೂತಮುನೀಶ್ವರನು ಹೇಳುತ್ತಿದ್ದಾನು.

ಎಂದು ಸವಿಸ್ಮಯಪುರಕೆ ಜಾರನಭವಂ ಬಂದ |
ನೆಂದು ಭಿಕ್ಷವನೀಡಲೆಂದು ಮಂದನೆವಾಡ |
ಲೆಂದು ರೂಪಂ ನೋಡಲೆಂದು ವರವಂ ಬೇಡಲೆಂದು ಮಾತಾಡಲೆಂದು ||
ಪೊಂದೊಡಿಗೆಯ ತೋಱಲೆಂದು ಸೊಬಗಂ ಬೀಱ |
ಲೆಂದು ಬಸವಂ ಸಾರಲೆಂದು ಕಾಮಗೆ ದೂಱ |
ಲೆಂದು ಕಾಮುಕಿಯರೈತಂದು ಬೀದಿಯ ನಡುವೆ ನಿಂದು ಜೊಱಗಾಗಿರ್ದರು ||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಆ ಸೂಳೆಗೇರಿಯಲ್ಲಿ ಶಿವನು ಬರು ತ್ತಿರಲಾಗಿ ಅಲ್ಲಿಯ ಸ್ತ್ರೀಯರುಗಳಲ್ಲಿ, ಎಂದೂ ಸವಿಸ್ಮಯಪುರಕೆ ಜಾರದಭವಂ ಬಂದ ನೆಂದು ನೋಡಲೆಂದು ಬಂದ ಸತಿಯರು ಕೆಲಬರು, ಭಿಕ್ಷವ ನೀಡಲೆಂದು ಬಂದ ಭಕ್ತೆ ಯರು ಕೆಲಬರು, ಮಾತಾಡಲೆಂದು ಬಂದ ಮಾನಿನಿಯರು ಕೆಲಬರು, ರೂಪಂ ನೋ ಡಲೆಂದು ಬಂದು ನಿಂದ ಸೌಂದರಿಯರು ಕೆಲಬರು, ವರವ ಬೇಡಲು ಬಂದ ಪುತ್ರಾ ರ್ಥಿಗಳು ಕೆಲಬರು, ಹೊಂದೊಡಿಗೆಯ ತೋಱಲೆಂದು ಬಂದ ನೀಱೆಯರು ಕೆಲಬರು, ಸೊಬಗು ಬೀಱಲೆಂದು ಬಂದ ಬಿಂಕಗಾತಿಯರು ಕೆಲಬರು, ಬರವಂ ಸಾರಲೆಂದು ಬಂದ ಘನಕುಚೆಯರು ಕೆಲಬರು, ಕಾಮಗೆ ದೂಱಲೆಂದು ಬಂದ ಕಾಮುಕಿಯರು ಕೆಲಬರು—ಐತಂದು ಬೀದಿಯಲ್ಲಿ ನಿಂದು ಬೆಱಗುವಟ್ಟು ನೋಡುತ್ತಿರಲು; ಕೋಟಿ ಕಂದರ್ಪರೂಪವನು ಧರಿಸಿದ ಮಹಾದೇವನು ನೋಡುತ್ತ ಮುಂದಕ್ಕೆ ನಡೆದನು.

ಹರನೆ ನೀಂ ಕರುಣಿಯೆಂಬರದೇಕೆ ಬಱದೆ ಪರ |
ಪುರುಷಾರ್ಥಿಯಹ ಕಾಮನಂ ಲೋಚನಾಗ್ನಿಯಿಂ |
ಮುರಿಪಿದೆಯೆನಲ್ ತರುಣಿ ಸಾಸಲ್ಲವಿನ್ನದೆಂತೆನೆ ನಿನ್ನ ನೋಡಿ ಭ್ರಮಿಸಿ ||
ಮರಹೊಳಗಣಗ್ನಿ ಮರನಂ ಸುಟ್ಟಪ್ರೊಲ್ ತನ್ನ |
ವಿರಹಾಗ್ನಿ ತನ್ನನೇ ಸುಡಬಂದು ಪೋದನೀ |
ಧರೆಯೊಳಿನ್ನದಱಿಂದೆ ಬಿಟ್ಟಬಿಮುಲಕನಾದ ಬಂದುನೆಸುತಣಿಯಿಟ್ಟನು ||

ಟೀಕು:--ಕೇಳಿರೈ, ಎಲೆ ಮುನಿಗಳಿರಾ! ಆ ಸೂಳೆಗೇರಿಯಲ್ಲಿ ಒಬ್ಬ ಸ್ತ್ರೀಯು ಶಿವನೊಡನೆ ನುಡಿಯುತ್ತಿರ್ದಳು. ಹರನೆ = ಪಾಪಹರನಾದ ದೇವನೇ, ನಿನ್ನ ಕರುಣಿ = ಕರುಣವುಳ್ಳವನು ಎಂದು ಒಱನೆ ನುಡಿವರು. ಪರಪುರುಷಾರ್ಥಿಯಾದ ಕಾಮನ ನೊಸಲ ಕಣ್ಣ ಕಿಚ್ಚಿನಿಂದ ಏಕೆ ಉರುಹಿದೆ? ಎನಲಾಗಿ; "ನಾನಲ್ಲ, ನೀನುರಿಹಿದೆ?" ಎಂಪರೆ, ಅದೆಂತೆನಲು; "ನಿನ್ನ ನೋಡಿ ಭ್ರಮಿಸಿ, ಮರದೊಳಗಣ ಅಗ್ನಿ ಮರನ ಸುಟ್ಟಹಾಗೆ ತನ್ನ ವಿರಹಾಗ್ನಿಯಿಂದ ತಾನೇ ಉರಿದು ಹೋದನು; ನನಗೆ ಈ ಧರೆಯಲ್ಲಿ ಬಟ್ಟಬಯಲ ಅಪವಾದ ಬಂದಿತು"—ಎಂದು ಅವಳನೇ ರೂಪಾತಿಶಯವನುಳ್ಳವಳ ಮಾಡಿ ನಸುನಗೆಯಿಂದ ನಕ್ಕು, ವಿನೋದಚರಿತ್ರನು ಮುಂದಕ್ಕೆ ನಡೆದನು.

ವಿಧಿವಶವ ಮೀಱಬಾರದು ನಿನ್ನ ತಲೆಯನೇ |
ಱ್ದೊಡಂ ಕಳಂಕ ಬಿಡವಾಯ್ತು ಚಂದ್ರಂಗೆನಲ್ |
ಸುದತಿ ಪುಸಿಯಲ್ಲವೇ ಹರಿಹೃದಯನೇಱ್ದೊಡೆಯುಮಲ್ಲದೆ ಬ್ರಹ್ಮನ ‖
ವದನಮಂ ಸೇರಿದೊಡೆ ಶಿವನ ಮಂಡೆಯ ತುಟ್ಟ |
ತುದಿಯನೇಱ್ದೊಡೆ ಬಿಡವಾಯಿತ್ತು ನಿಮ್ಮ ಹೃದ |
ಯದ ಕಳಂಕೆಂಬಾಗ ಚಂದ್ರನೊಬ್ಬನೆ ಪಾಪನೆನುತ ಮುಂದಕೆ ನಡೆದನು ‖

ಟೀಕು— ಕೇಳಿರೈ, ಎಲೆ ಮುನಿಗಳಿರಾ! ಮತ್ತಾ ಸೂಳೆಗೇರಿಯಲ್ಲಿ ಒಬ್ಬ ಸ್ತ್ರೀಯು ಶಿವನೊಡನೆ ನುಡಿಯುತ್ತಿರ್ದಳು. "ಎಲೆ ಮಹಾದೇವ? ವಿಧಿವಶವ ಮೀಱಬಾರದು = ಬ್ರಹ್ಮಲಿಖಿತವ ಮೀಱುವೆನೆಂದರೆ, ಆರಿಗೂ ಆಗುವುದಿಲ್ಲ. ದೇವೋತ್ತಮನಾದ ನಿನ್ನ ತಲೆಯನೇಱಿದರೂ ಚಂದ್ರನ ಕಳಂಕ ಬಿಡದೆ ಹೋಯಿತು" ಎಂದು ಬರ್ಜ ಸತಿ ನುಡಿಯಲಾಗಿ; "ಎಲೆ ಸ್ತ್ರೀಯೇ, ಅಹುದಹುದು. ಹರಿಹೃದಯನೇಱ್ದೊಡೆಯು = ವಿಷ್ಣುವಿನ ಹೃದಯವನೇ ಮನೆಯ ಮಾಡಿಕೊಂಡಿದ್ದರೂ, ಬ್ರಹ್ಮನ ಮುಖದಲ್ಲಿ ಇದ್ದರೂ, ಶಿವನ ಮಂಡೆಯ ತುದಿಯನೇಱಿಕೊಂಡಿದ್ದರೂ, ನಿಮ್ಮ ಹೃದಯದ ಕಳಂಕ ಈಗ ಬಿಟ್ಟೀತೆ! ಆ ಚಂದ್ರನೊಬ್ಬನ ಪಾಪ ಪಾಪನೇ!" ಎನುತ ಕಟಕಿಯನಾಡುತ್ತ, ನಮ್ಮ ಹೊದ್ದಿದವರಲ್ಲಿ ಗುಣದೋಷಂಗಳನಱಸುವುದಿಲ್ಲೆನುತ ಶಿವನು ಮುಂದಕ್ಕೆ ನಡೆದನು.

ಮಹಿಯೊಳೆಲೆ ಪರಶಿವನೆ ನೀನಾದಿಮಧ್ಯಾಂತ |
ರಹಿತನೆಂಬರು ಆದಿಯಂತ್ಯವಿಲ್ಲದೆ ಮಧ್ಯ |
ವಿಹುದ ನಿನ್ನೊಳು ಕಂಡೆವಿದು ಚಿತ್ರವಹುದಲ್ಲವೋ ಪೇಳು ನೀನೆಂದಿನೆ ‖

ಅಹುದಬಲೆ ನಿನ್ನೊಳಾದ್ಯಂತವಿರ್ದಂ ಮಧ್ಯ |
ವಿಹಗೆ ನೋಡಿನೋಡಿಲ್ಲದಿಹುದು ಮಹಾಚಿತ್ರ |
ವಹುದಲ್ಲವೋ ಪೇಳು ನೀನೆಂದು ಪ್ರೌಢೆಗುತ್ತರವೀಯುತಡಿಯಿಟ್ಟನು ||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಆ ವೇಶ್ಯಾವೀಧಿಯಲ್ಲಿ ಮತ್ತೊಬ್ಬ ಕೋಮಲೆ ನುಡಿಯುತ್ತಿರ್ದಳು. ಭೂಮಿಯಲ್ಲಿ ಆರಿಂದಲೂ ಅಱುವುದಕ್ಕೆ ಅಸಾಧ್ಯವಾದ ಪರಶಿವಮೂರ್ತಿಯೇ, ನಿನ್ನನು ಆದಿಮಧ್ಯಾಂತರಹಿತನೆಂಬರು; ಆದ್ಯಂತವಿಲ್ಲದೆ ಮಧ್ಯವಿಹುದ ನಿನ್ನಲ್ಲಿ ಕಂಡೆವು: ಇದು ಚಿತ್ರವಹುದು; ಅದು ಹೇಗೆಂದರೆ- ಆದಿಯಲ್ಲಿ ನೀನು ಹುಟ್ಟುವುದ ಕಂಡುದಿಲ್ಲ, ಅಂತ್ಯದಲ್ಲಿ ನೀನಳಿವುದ ಕಂಡವರಿಲ್ಲ, ಆದಿಯೂ ಇಲ್ಲದೆ ಅಂತ್ಯವೂ ಇಲ್ಲದೆ ನಡುವೆ ತೋರುವ ಆಕಾರವನು ಕಂಡುದು ಆಶ್ಚರ್ಯವಲ್ಲವೆ? ಎನಲಾಗಿ—ಶಿವನು, ಎಲೆ ಸ್ತ್ರೀಯೇ, ನಿನ್ನಲ್ಲಿ ಆದಿಯಾದ ಪಾದಂಗಳು ಕಾಣಬರುತ್ತಿದ್ದಾವು, ಅಂತ್ಯವಾದ ಶಿರಸ್ಸು ಕಾಣಬರುತ್ತಿದ್ದೀತು, ಮಧ್ಯವಾದ ನಿನ್ನ ನಡುವು ಕಾಣಬರದೇ ಇಹುದು: ಇದು ಚಿತ್ರವಲ್ಲವೆ? ಎಂದು ಆ ಸ್ತ್ರೀಯು ಶೃಂಗಾರವನಭಿವರ್ಣಿಸುತ್ತ, ಉತ್ತರವಂ ಕೊಟ್ಟು, ಆದ್ಯಂತಸ್ಥಾನವಿಲ್ಲದ ಮಹಾದೇವನು ಮುಂದಕ್ಕೆ ನಡೆದನು.

ಎಲೆ ಶಿವನೆ ಸಕಲವೇದಾಗಮಂಗಳು ನಿನ್ನ |
ನೆಲೆಗಾಣವೆಂಬನಹುದೆನೆಂಬರಹುದಹುದು |
ನೆಲೆಗಾಣದಿರಣೋರಣೀಯಾನ್ ಮಹತೋಮಹೀಯಾನೆಂದುವೇಕೆಂದೆನೆ ||
ಲಲನೆಯೆನ್ನುವನೆಂದುದಿಲ್ಲ ನೀನಿನ್ನೆಂತೆ |
ನಲು ನಿನ್ನಸಿಯ ನಡುವನುರುಜಘನವಂ ಕಂಡು |
ನಲಿಯಣೋರಣೀಯಾನ್ ಮಹತೋಮಹೀಯಾನೆಂದುವೆಂದು ಮುಂದಕೆ
[ನಡೆವನು ||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಮತ್ತಾ ಸೂಳೆಗೇರಿಯಲ್ಲಿ ಒಬ್ಬ ಕಾಮಿನಿ ನುಡಿಯುತ್ತಿರ್ದಳು. ಎಲೆ ಶಿವನೆ, ಸಕಲವೇದಾಗಮಂಗಳು ನಿನ್ನ ನೆಲೆಗಾಣವೆಂಬವರು —ಅಹುದಹುದು, ಹಾಗೆ ನೆಲೆಯ ಕಾಣದಿದ್ದರೆ ಅಣೋರಣೀಯಾನ್ ಮಹತೋಮಹೀಯಾನು ಎಂದು ಅಣುವಿಂಗೆ ಅಣುವಾದ ಮಹತ್ತಿಂಗೆ ಮಹತ್ತಾದ ರೂಪವುಳ್ಳವನು ಎಂದು ವೇದಂಗಳೇತಕ್ಕೆ ಎಂದುವು? ಎನಲಾಗಿ—ಎಲೆ ಲಲನೆ, ಎನ್ನನು ಎಂದುದಿಲ್ಲ, ನಿನ್ನ ತನುವನು ಎಂದೆನಲು, ಅದು ಹೇಗೆಂದರೆ—ಅಣುವಿಂಗೆ ಣುವಾಗಿ

ಅಣುವಾಗಿ ನಿನ್ನ ನಡುವು ಕಾಣಿಸದು. ಮಹತ್ತಿಗೆ ಮಹತ್ತಾಗಿ ನಿನ್ನ ಜಘನಂಗಳು ದೊಡ್ಡವಾಗಿ ಇರಲಾಗಿ, ಅಣೋರಣೀಯರ್ಳ್ ಮಹತೋಮಹೀಯಳೆಂದೂ ನಿನ್ನನೆ ಕೊಂಡಾಡಿದುವು—ಎಂದು ಮುಗುಳುನಗೆಯಿಂದ ಮೂದೇವರಾಣ್ಮನು ಮುಂದಕ್ಕೆ ನಡೆದನು.

ಬಳಿಕ ಮುಂದೊಂದೆಡೆಯೊಳೊರ್ವಳೀಶ್ವರನ ಕಂ |
ಗೊಳಿಪ ಚೆಲುವಿಕೆಯ ನಡೆ ನೋಡಿಯುಂತಸ್ತಾಪ |
ವೊಳೆಯಲಾಗೇಳಿಸೆಯುವಸೆ ಬಲಿದಂಗನುನ್ನಡರಲು ಗೃಹಾಂಗಣದೊಳು ||
ತೊಳಪ ಬೆಳತಿಗೆಯ ಬೆಳುದಿಂಗಳನುರಿವ ಶಿಖಿಯ |
ಬೆಳಗೆಂದು ಬಗೆದು [1]ಮನೆ[1]ಗಿಚ್ಚ ಸಂದಿಪೆನೆಂದು |
ಕಳವಳಿಸಿ ಬಯಲ ಶೀತಳವಾರಿಯೆಂದು ವೊಗೆವೊಗೆದು ಸೂಸುತಲಿರ್ದಳು||

ಟೀಕು—ಕೇಳಿರೈ, ಬಳಿಕ ಮುಂದೆ ಮತ್ತೊಂದು ಠಾವಿನಲ್ಲಿ ಒರ್ವ ಕಾಮಿನಿ ಈಶ್ವರನ, ಕಂಗಳಿಗೆ ಅತ್ಯಂತ ರಮ್ಯವಾದ ಅವಯವಂಗಳ ಚೆಲುವಿಕೆಯಂ ನೋಡಿ, ಮನಸ್ಸಿನೊಳಗೆ ಕಾಮಾಗ್ನಿ ಪೊಳೆದೋಱಲಾಗಿ, ಏಱಿಸೆಯ ವಿಕಲಾವಸ್ಥೆ ಶರೀರದೊಳು ನೆಲಸೆ, ತನ್ನ ಮನೆಯ ಹೊಱಹೊಂಟು ಅಂಗಳಕ್ಕೆ ಬಂದು ನಿಂದು, ತೊಳಗುವ ಬೆಳತಿಗೆಯ ಬೆಳುದಿಂಗಳಂ ಕಂಡು ಹಸ್ಮೈಸಿ ಉರಿವ ಕಿಚ್ಚಿನ ಬೆಳಕೆಂದು ತಿಳಿದು, ಈ[2]ಮನೆಯಕಿಚ್ಚ[2]ನಂದಿಸುವೆನು ಎನುತ್ತ ಬಯಲನೆ ಶೀತಲೋದಕವೆಂದು ಬಗಸೆಯಲ್ಲಿ ಪೊಗೆವೊಗೆದು ಚೆಲ್ಲುತ್ತಿರ್ದಳು. ಈ ವಿಕಳತೆಯಿಂದೊಪ್ಪುವ ಸತಿಯ ನೋಡುತ್ತ ಶಿವನು ಮುಂದಕ್ಕೆ ನಡೆದನು.

ಹರನ ಮೇಲಣ ವಿರಹತಾಪದಿಂ ಬೆಳುದಿಂಗ |
ಳುರಿಯಾಗಿ ಸುಡಲೊರ್ವ ಮುಗ್ಧೆ ನೊಂದೆಲೆ ನಿಶಾ |
ಚರನೆ ದೋಷಾಕರನೆ ಎಂದು ಚಂದ್ರನ ನೋಡಿ ಕೊನೆವೆರಳ ಮುರಿದು [ಮುಱುಗಿ ||
ಪರಿಣಮಿಸುವೆಂತು ಜೀವಿಸುವದಕಟಕಟ ನಿನ್ನ |
ಕಿರಣದಗ್ನಿಯಲೆಂದು ಗಂಟಯಂ ದನಿಗೆಯ್ದು |
ಕರವ ನೆಟಕೆಯಮುರಿದು ಬೈದುಶಾಪಿಸಿಸುಯ್ದುವರಳಿಮನೆಯಂಪೊಕ್ಕಳು||

ಟೀಕು—ಕೇಳಿರೈ, ಆ ಸೂಳೆಗೇರಿಯಲ್ಲೊಬ್ಬ ಸುಂದರಾಂಗಿಯು ಹರನ ಮೇಲಣ ವಿರಹತಾಪದಿಂದ ಬೆಳುದಿಂಗಳು ಉರಿವ ಕಿಚ್ಚಿನ ಮರ್ಯಾದೆಯಲ್ಲಿ ಶರೀರವನು ಸುಡುತ್ತಿರಲಾಗಿ, ಆ ಮುಗ್ಧೆ ಮನಸೊಂದು—ಎಲೆ ನಿಶಾಚರನೆ= ರಾತ್ರಿಯಲ್ಲಿ ಚರಿಸುವ ರಕ್ಕಸನೆ, ದೋಷಾಕರನೆ= ಗುರುಸತಿಗಳುಪಿದಾತನೆ, ಎಂದು ಕೋಪದಿಂದ

ಪಾ—1. ಮನ. 2. ಮನಗಿಚ್ಚ.

ಚಂದ್ರನ ನೋಡಿ ಖತಿಯಿಂದ ಕೊನೆವೆರಳ ಮುರಿದುಕೊಂಡು, ಮಱುಕದಿಂದ ಹರಿಣಶಿಶುವೆಂತು ಜೀವಿಪುದಕಟ= ನಿನ್ನೊಗಳಿರ್ದ ಎರಲೆಯುಮಱಿ ನಿನ್ನ ಕಿರಣದ ಕಿಚ್ಚಿನಲ್ಲಿ ಹೇಗೆ ಬದುಕೀತು? ಎಂದು ಎರಲೆಯ ಮಱಿಯು ಘಂಟೆಯ ಧ್ವನಿಮಾಡಿದರಾದರೂ ಬಾರದೆ ಎನುತ್ತ, ಘಂಟೆಯ ಧ್ವನಿಗೆಯ್ದಿದರೂ ಬಾರದೆ ಇರಲಾಗಿ, ಕೆಟ್ಟೆನೆನುತ್ತ, ನೆಟಿಕೆಯ ಮುರಿದು, ಬಯ್ದು ದಿನದಿನಕ್ಕೆ ನಾಶವಾಗಿ ಹೋಗು ಎಂದು ಶಾಪಿಸಿ, ಸುಯ್ದು ಮರಳಿ ತನ್ನ ಮನೆಯಂ ಪೊಕ್ಕು, ವಿಕಟಾವಸ್ಥೆಯಿಂದ ಕಂಗೆಡುತ್ತಿರ್ದ ಕಾಂತೆಯ ನೋಡುತ್ತ ಕಾರುಣ್ಯಮೂರ್ತಿ ಮುಂದಕ್ಕೆ ನಡೆದನು.

ಸೋಗೆಗಣ್ಣ ಲರ ಸೊಬಗಿನ ನೀಱೆಯೊರ್ವಳನು |
ರಾಗದಿಂ ಭಿಕ್ಷಾನ್ನಮಂ ತಂದು ನೀಡಿ ನಿಂ |
ದಾಗಲಭವನಕಾಯಕಾಂತಿರಸದೊಳುಮೂಡಿಮುಳುಕಾಡಿಯೋಲಾಡು ತುಂ
ಪೋಗಲಾಱದೆಯನಿಮಿಷತೆವಡೆದಿರಲ್ಕವಳ |
ನಾಗಭೂಷಣ ನಿಟ್ಟಿಸಲ್ ನೋಟನೋಟವ್ರೊಂ |
ದಾಗೆ ದೃಷ್ಟಿದ್ರವಣವಾಗಿ ಕುಳ್ಳಿರ್ದ ತಲೆವಾಗಿ ಲಜ್ಜಿತೆಯಾದಳು ‖ ೩೬ ‖

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಆ ಸೂಳೆಗೇರಿಯಲ್ಲಿ ಒಬ್ಬ ಸೋಗೆಗಣ್ಣ ವನಿತೆ ಬಂದು ನಿಂದು ಶಿವಗೆ ಪ್ರೀತಿಯಿಂದ ಭಿಕ್ಷಮಂ ನೀಡಿ, ಶಿವನ ಕಾಯಕಾಂತಿರಸದೊಳು ಮೂಡಿ ಮುಳುಗಿ, ಆಸಕ್ತಿಯಿಂದ ಹೋಗಲಾಱದೆ ಅನಿಮಿಷದೃಷ್ಟಿಯಿಂದ ನೋಡುತ್ತಿರಲಾಗಿ; ನಾಗಭೂಷನಾದ ಶಿವನು ಆವಳ ನೋಡಲಾಗಿ; ನೋಡಿದ ಮಾತ್ರದಲ್ಲಿ ದೃಷ್ಟಿದ್ರವಣವಾಗಲಾಗಿ; ಕುಳ್ಳಿರ್ದ ತಲೆವಾಗಿ ಲಜ್ಜಿತೆಯಾದ ಕಾಮಿನಿಯಂ ನೋಡುತ್ತ ಕಾರಣರೂಪನಾದ ಕಾಮವೈರಿಯಾದ ಶಿವನು ಮುಂದಕ್ಕೆ ನಡೆದನು, ಎಂದು ಸೂತಮುನೀಶ್ವರನು ಹೇಳುತ್ತಿರ್ದಾನು.

ಎಲ್ಲಿಂದ ಬಂದನೋ ಈ ಮೋಹನದ ಸಿದ್ಧ |
ನೆಲ್ಲಿಂದ ಬಂದನೋ ಈರೂಪರುದ್ರ ತಾ |
ನೆಲ್ಲಿಂದ ಬಂದನೋ ವಿಸ್ಮಯಾಕಾರ ಕಾರುಣಿಕ ಭಿಕ್ಷಾಪಾತ್ರನು ‖
ಎಲ್ಲಿಂದ ಬಂದನೋ ಜಾಣಜಂಗಮರಾಯ |
ನೆಲ್ಲಿಂದ ಬಂದನೋ ಎಂದು ವಾರಾಂಗನೆಯ |
ರೆಲ್ಲ ತಮತಮಗೆ ಬೆಱಗಾಗಿ ಮನಸೋತು ಮರುಳಾಗಿ ನಿಂದಿರುತಿರ್ದರು ‖

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಆ ಸೂಳೆಗೇರಿಯಲ್ಲಿ ಸತಿಯರೆಲ್ಲರೂ ತಮತಮಗೆ ನಿಂದು ಹೀಗೆಂದು ನುಡಿಯುತಿರ್ದರು. ಎಲ್ಲಿಂದ ಬಂದನೋ ಈ ಮೋಹನದ ಸಿದ್ಧ= ನೋಡಿದ ಮಾತ್ರದಲ್ಲೇ ಸಮಸ್ತ ಸ್ತ್ರೀಯರನೂ ಮೋಹಿಸುವ ಮಹಾಸಿದ್ಧನೆಲ್ಲಿಂದ ಬಂದನೋ; ಕೋಟಿ ಕಂದರ್ಪ ರೂಪನಾದ ಈ ರುದ್ರನಾವ

ಕಡೆಯಿಂದ ಬಿಜಯಂಗೈದನೋ; ಆಶ್ಚರ್ಯವಾದ ಆಕಾರವನುಳ್ಳ ಕಾರುಣಿಕನಾದ ಈ ಭಿಕ್ಷುಕನೆತ್ತಣಿಂದ ನಡೆತಂದನೋ; ಈ ಜಾಣಜಂಗಮನೇನು ಕಾರಣ ತಲೆದೋಱಿದನೋ; ಈ ಚೆಲುವರ ದೇವನೆಲ್ಲಿಂದ ಬಂದನೋ— ಎಂದು ಬೆಱಗಾಗಿ ಮನಸೋತು ಮರುಳಾಗಿ ನಿಂದು ನೋಡುತಿರ್ದ ವಾರಕಾಂತೆಯರಂ ಕಂಡು ನಸು ನಗೆವೆರಸಿ ನಾಗಕಂಕಣನು ನಲವಿಂದ ನಡೆತರುತಿರ್ದನು.

ತರಳಾಕ್ಷಿಯರ ನೋಟವೀರೈದು ಭಾವವಂ |
ಬರಿದಾವುದೆನಲು ಹೊಱಬಿಸಿ ನೋಡುವಾನೋಟ |
ಪುರುಷನಂ ಪ್ರಾಪ್ತನೆನ್ನದ ಭಾವ, ನೋಡದಂದದಿ ನೋಳ್ಪನೋಟವಾಸೆ ||
ಅರೆಗಣ್ಣ ನೋಟವೆ ನಿರಾಶೆ, ಕಡೆಗಣ್ಣಿನಿಂ |
ದಿರದೆ ನೋಡುವ ನೋಟ ಚಪಲತನವಂಗವಂ |
ಹರಹಿನೋಡುವನೋಟ ಕೊಱತೆನೆಱತೆಗಳನಱುಸುವ ಭಾವವೆಂದೆನಿಪ್ಪುದು ||

ಟೀಕು— ಕೇಳಿರೈ, ಎಲೆ ಮುನಿಗಳಿರಾ! ಮತ್ತಾಸೂಳೆಗೇರಿಯಲ್ಲಿ ನಾಗರಿಕನೆಂಬ ಸಖನು ಪ್ರೌಢನಾಯಕನ ಕರೆದು ಸ್ತ್ರೀಯರುಗಳಿಗೆ ನೋಟದ ಭಾವ ಹತ್ತುತೆಱನೆಂದು ನುಡಿವರಲ್ಲಾ, ಅವಾವುವೆಂದು ಕೇಳಲಾಗಿ; ನಾಯಕೋತ್ತಮನು ಹೇಳುತಿರ್ದನು:—ಹೊಱಬಿಸಿ ನೋಡುವ ನೋಟ= ಪುರುಷನಂ ಕಂಡು ಇತ್ತತ್ತ ಹೊಱಬಿಸಿ ನೋಡುವ ಭಾವ, ಪುರುಷನಂ ಪ್ರಾಪ್ತನೆನ್ನದ ಭಾವ= ಪುರುಷನಂ ನೀಚನು, ಪ್ರಾಪ್ತನಲ್ಲವು ಎಂಬ ಭಾವ, ಒಂದು. ನೋಡದಂದದಿ ನೋಳ್ಪ ನೋಟವಾಸೆ= ಪುರುಷನಂ ಕಂಡು ನೋಡದ ಹಾಗೆ ನೋಡುವ ನೋಟವೇ ಆಸೆಯೆಂಬ ಭಾವ, ಎರಡು. ಅರೆಗಣ್ಣ ನೋಟವೆ ನಿರಾಶೆ= ಅರೆಗಣ್ಣಿನಿಂದ ನೋಡುವ ನೋಟವೇ, ಈಶನಿ ಏಕೆ ಇದಿರಾಗಿದ್ದಾನೆಂಬ ನಿರಾಶೆಯೆಂಬ ಭಾವ, ಮೂಱು. ಕಡೆಗಣ್ಣಿನಿಂದಿರದೆ ನೋಡುವ ನೋಟ ಚಪಲತನ= ಕಡೆಗಣ್ಣಿನಿಂದ ನೋಡುವುದು ಪುರುಷನ ಮನಸ್ಸಿಗೆ ಮಮತೆ ಹುಟ್ಟಿಸಬೇಕೆಂಬ ಚಪಲತನದ ಭಾವ, ನಾಲ್ಕು. ಅಂಗವಂ ಹರಹಿ ನೋಡುವ ನೋಟ ಕೊಱತೆನೆಱತೆಗಳನಱಸುವ ಭಾವ= ಸರ್ವಾಂಗದಲ್ಲಿ ಅವಯವಂಗಳೆಲ್ಲವನು ಹರಹಿನೋಡುವ ನೋಟ, ಅಲ್ಲಿ ಶೃಂಗಾರದಲ್ಲಿ ಕೊಱತೆ ನೆಱತೆಗಳನು ಅಱಸುವ ಭಾವ, ಐದು. ಇನ್ನು ಐದು ಪ್ರಕಾರವನು ಮುಂದಣ ಪದದಲ್ಲಿ ಹೇಳೇನು, ಕೇಳೈ, ಎಲೆ ನಾಗರಿಕ! ಎಂದು ನಾಯಕೋತ್ತಮನು ನುಡಿಯುತ್ತಿರ್ದನು.

ಮರಳಿ ನೋಡುವ ನೋಟವಾಪೇಕ್ಷೆ ನೋಡಿ ಮೊಗ |
ದಿರುಹುವುದರೋಚಕವ ಭಾವ ತಪ್ಪದೆ ನೋಡು |
ತಿರೆ ಸಿಕ್ಕಿದಂಪವದು ನೋಡಿನೋಡದಿರೆ ಸೊಬಗಿಲ್ಲೆಂದು ಬಿಡೆಬೀಸಿದಾ ||

ಪರಿ ಮುಗುಳುನಗೆವೆರೆವ ನೋಟ ಕರೆಯುದ ಮುನ್ನ |
ಬರುವಳ್ತಿಯಿಂತಿವಱ ಭೇದವಱಿಯದರೆ ಸತಿ |
ಯರ ಬಯಸಬೇಡೆಂಬ ಪ್ರೌಢನಾಯಕನ ನುಡಿಗೇಳುತಭವಂ ನಡೆದನು ||

ಟೀಕು—ಕೇಳೈ, ಎಲೆ ನಾಗರಿಕ! ಮರಳಿನೋಡುವ ನೋಟವಾಪೇಕ್ಷೆ = ತಿರುಗಿ ಅಕ್ಕಱಿಂಗಡೆ ನೋಡುವ ನೋಟವೇ ಅಪೇಕ್ಷೆಯೆಂಬ ಭಾವ, ಏಱು. ನೋಡಿ ಮೊಗದಿರುಹುವುದರೋಚಕ = ನೋಡಿದ ಮಾತ್ರದಲ್ಲೇ ಅಡ್ಡಮೋರೆಯ ನೆತ್ತುವುದು ಅರೋಚಕವೆಂಬ ಭಾವ, ಏಳು. ತಪ್ಪದೆ ನೋಡುತಿರೆ ಸಿಕ್ಕಿದಂದ ವದು = ಅಂಗನೆ ನೆಟ್ಟದೃಷ್ಟಿ ತೆಗೆಯದೆ ಕಟ್ಟಕ್ಕಱಿಂದ ನೋಡುವ ನೋಟವೆ, ಒಳ ಗಾದ ಭಾವ, ಎಂಟು. ನೋಡಿನೋಡದಿರೆ ಸೊಬಗಿಲ್ಲೆಂದು ಬಿಡೆಬೀಸಿದಾಪರಿ = ಮೊದಲು ನೋಡಿ ಮತ್ತೆ ನೋಡದೆ ಇದ್ದುದು, ಸೊಬಗಿಲ್ಲ, ಪರಮಮೂಢನೆಂದು ಹಂಗುಹಱಿದ ಭಾವ, ಒಂಬತ್ತು. ಮುಗುಳುನಗೆವೆರೆದ ನೋಟ ಕರೆಯುದ ಮುನ್ನ ಬರುವಳ್ತಿ = ನೋಡಿದ ಮಾತ್ರದಲ್ಲಿ ಮುಗುಳುನಗೆವೆರಸಿ ಕಟ್ಟಕ್ಕಱಿಂದ ನೋಡಿದ ನೋಟವೇ, ಕರೆಯುದ ಮುನ್ನ ಬರುವಳ್ತಿಯಿಂದ ಒಡಂಬಟ್ಟ ಭಾವ, ಹತ್ತು. ಈ ಹತ್ತು ಪ್ರಕಾರವಾದ ನೋಟದ ಭಾವವನಱಿದವರೇ ಸತಿಯರ ಬಯಸಬೇಕು, ಅಱಿಯದವರು ಬಯಸಿದರೆ ನಗೆಗೇಡಿಯಹರು, ಕಾಣ್ಮೈ, ಎಲೆ ನಾಗರಿಕ! ಎಂದು ನುಡಿವ ಪ್ರೌಢನಾಯಕನ ಸವಿನುಡಿಯ ಕೇಳುತ್ತ ಸರ್ವೇಶ್ವರನು ಮುಂದಕ್ಕೆ ನಡೆದನು.

ನೋಡಲಾಗದೆ ವಾರಿಜಾಕ್ಷಿ ಬಾಯ್ದೆಱೆದು ಮಾ |
ತಾಡಲಾಗದೆ ಮಧುರವಾಣಿ ಕಿನಿಸದೆ ಸರಸ |
ವಾಡಲಾಗದೆ ಮಲಯಮಾರುತವಿನೋದಿ ಬರಸೆಳೆದಪ್ಪಿ ಚುಂಬನವನು ||
ಮಾಡಲಾಗದೆ ಕಲಾಧರೆಯೆನ್ನನೊಲವಿನಿಂ |
ಕೂಡಲಾಗದೆ ಮನೋಹರೆ ಕೊಲುವ ಮುನಿಸಿನಿಸು |
ಬೇಡೆಂದುಕಾಲ್ವಿಡಿದುಬೇಡಿಕೊಳುತಿರ್ದನೊರ್ವನೊರ್ವನೊಂದೆಡೆಯೊಳು

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಆ ಸೂಳೆಗೇರಿಯಲ್ಲಿ ಮತ್ತೊಂದೆಡೆ ಯಲ್ಲಿ ಒಬ್ಬ ವಿಟನು ತನ್ನ ವೇಶ್ಯಾಸ್ತ್ರೀ ಮುನಿದಿರಲಾಗಿ ಬೇಡಿಕೊಳ್ಳುತ್ತಿರ್ದನು. ವಾರಿಜಾಕ್ಷಿ = ತಾವರೆಯೆಸಳಿನೋಪಾದಿಯಲ್ಲಿ ಕಾಂತಿವೆತ್ತಿಹ ಕಣ್ಣನುಳ್ಳವಳೇ, ದಯದಿಂದ ನೋಡಲಾಗದೆ; ಮಧುರವಾಣಿ = ಸವಿನುಡಿಯನಾಡುವವಳೇ, ಬಾಯ್ದೆ ಱೆದು ನಿನ್ನ ಅಧರದ ಸೊಬಗ ತೋಱಿ ಮಾತಾಡಲಾಗದೆ; ಮಲಯಮಾರುತ ವಿನೋದಿ = ತೆಂಕಣ ಗಾಳಿಯೋಪಾದಿಯಲ್ಲಿ ವಿನೋದವ ಬಲ್ಲವಳೇ! ಕೋಪವ ಬಿಟ್ಟುಸರಸವನಾಡಲಾಗದೆ; ಕಲಾಧರೆ = ಅಮೃತಕಲೆಯ ಅಧರವಾಗಿ ಉಳ್ಳವಳೇ!

ಬರಸೆಳದಪ್ಪಿಕೊಂಡು ಚುಂಬನ ಮಾಡಲಾಗದೆ ; ಮನೋಹರೆ = ಸುಂದರಾಂಗಿಯಾದವಳೇ ! ತನ್ನೊಳಗೆ ಬಲವಿನಿಂದ ಕೂಡಲಾಗದೆ ; ಕೊಲುವ ಮುನಿಸು ಇಷ್ಟು ಬೇಡವೆಂದು ಒರ್ವ ವಿಟನು ಒಬ್ಬ ಸ್ತ್ರೀಯು ಕಾಲ್ವಿಡಿದುಕೊಂಡು ಇದ್ದುದನು ಕಂಡು ಶಿವನು ಆ ನುಡಿಗಳಂ ಕೇಳುತ್ತ ಆ ವಿನೋದಮಂ ನೋಡುತ್ತ ಮುಂದಕ್ಕೆ ನಡೆದನು.

ನೋಡಿ ಮುಂಪೊಂದು ತಾಣದೊಳೊರ್ವಬಲೆ ಶಿವನ |
ಗಾಡಿಯುಂ ಕಲ್ಕರಗುವಂತೊಣಮರಂ ಚಿಗುತು |
ಕೂಡೆ ಪಲ್ಲವಿಪಂತೆ ಮುಗಿಲೊಡ್ಡವಿಸುವಂತೆ ಮಳೆ ಭೋರನೆಱಗುವಂತೆ ||
ಆಡುತಹಿನಿಕರವ್ರೊಲ್ಲೈಪಂತೆ ಗೋಕುಲಂ |
ನೀಡಿ ಕಿವಿಗಳನಾಲಿಪಂತೆ ಸಂಗೀತಮಂ |
ಪಾಡಿ ಕಂಬಳಾಶ್ವತರರ ಕರ್ಣಕುಂಡಲಧರನ ನಡೆಗೆ ತಡೆಯಿಟ್ಟಳು || ೪೯ ||

ಟೀಕು—ಕೇಳಿರೈ, ಎಲೆ ಮುನಿಗಳಿರಾ ! ಶಿವನು ಆ ಸೂಳೆಗೇರಿಯಲ್ಲಿ ಬರುತ್ತಿರ್ಪಲ್ಲಿ ಒಬ್ಬ ಕಾಮಿನಿ ದಿವ್ಯಗಾನಮಂ ಹಾಡುತ್ತಿರ್ದಳು. ಅದೆಂತೆಂದರೆ—ಒರ್ವ ಅಬಲೆ ಶಿವನ ಗಾಡಿಕಾಱತನಮಂ ಕಂಡು, ಅತ್ಯಂತ ಪ್ರೀತಿಯಿಂದ ಕಲ್ಲು ಕರಗುವಂತೆ ಗುಂಡಕ್ರಿಯೆಯೆಂಬ ರಾಗವ ಹಾಡಿ ಕಲ್ಲಕರಗಿಸುತ್ತ, ಒಣಮರ ಚಿಗುತು ಕೂಡೆ ಪಲ್ಲವಿಸುವಂತೆ ವಸಂತಭೈರವಿಯೆಂಬ ರಾಗವ ಹಾಡಿ ಒಣಮರವ ಚಿಗುರಿಸುತ್ತ, ಮುಗಿಲೊಡ್ಡೈಸುವಂತೆ ಮೇಘರಂಜಿಯುಂ ಪಾಡುತ್ತ, ಭೋರನೆ ಮಳೆ ಎಱಗುವಂತೆ ಕುರಂಜಿಯೆಂಬ ರಾಗವಂ ಹಾಡುತ್ತ, ಆಡುತಹಿನಿಕರವ್ರೊಲ್ಲೈಪಂತೆ = ಸರ್ಪಗಳು ಹೆಡೆಯೆತ್ತಿ ಆಡುತ್ತ ಆಡುತ್ತ ಒಡನೊಡನೆ ಬರುವಂತೆ ಶಂಕರಾಭರಣವೆಂಬ ರಾಗವಂ ಹಾಡುತ್ತ, ಗೋಕುಲಂ ಕಿವಿಗಳ ನೀಡಿ ಆಲಿಪಂತೆ = ಪಶುಗಳು ಸಂತೋಷದಿಂದ ಕೇಳಲು ಪ್ರೈಮಱೆವ ಮರ್ಯಾದೆಯಿಂದ ಮೋಹನಭೈರವಿಯೆಂಬ ರಾಗವನು ಹಾಡುತ್ತ, ಕಂಬಳಾಶ್ವತರರೆಂಬ ಸರ್ಪಂಗಳನು ಕರ್ಣದಲ್ಲಿ ಧರಿಸಿದ ಪರಶಿವನ ನಡೆಯನು ಸಂಗೀತವೆಂಬ ಮಂತ್ರದಿಂದ ತಡೆಯಲಾಗಿ ; ಗಾನವಿನೋದಿ ನಿಂದು ಕೇಳುತ್ತ ಪರಿಣಾಮಿಸುತ್ತ ಪಾಪನಾಶನನಾದ ಪರಮೇಶ್ವರನು ಮುಂದಕ್ಕೆ ನಡೆದನು.

ತಲ್ಲಣಿಸಬೇಡವೆಲೆ ತರಳೆ ಕಾಮನ ಬಿಲ್ಲು |
ಯೆಲ್ಲರೆಂಜಲಿಸಿಯುಗುಳುವ ಕಱಿಯಕಬ್ಬು ಸರ |
ಳೆಲ್ಲವವರಿವರೆನ್ನದೆಲ್ಲ ಕೊಂಡಳ್ತಿಯಲಿ ಮುಡಿದು ಕೊಡಹಿ ಬೀಸಾಡುವ ||
ಪೊಲ್ಲಲರು ಹೆಪೆಯು ಪರಿದಾಡುವಳಿ ನೋಡೆ ತಾ |
ನೆಲ್ಲರಱಿಕೆಯಸಂಗನೆಂದೊಬ್ಬ ಸಖಿಯುಮಾ |
ವಲ್ಲಭನನಲ್ಲಿ ವಿರಹಿಣಿಯಾದ ಸಖಿಯ ಬೋಧಿಸಿದೊಡವಳಿಂತೆಂದಳು ||೫೦

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಆ ಸೂಳೆಗೇರಿಯಲ್ಲಿ ಶಿವನು ಬರುತ್ತಿರಲಾಗಿ ಒಬ್ಬ ಮುಗ್ಧೆ ಈಶ್ವರನ ರೂಪಾತಿಶಯವಂ ಕಂಡು ಕಾಮಬಾಣಪೀಡಿತೆಯಾಗಲು, ಅವಳ ವಿರಹವ ತೊಲಗಿಸಬೇಕೆಂದು ಒಬ್ಬ ಸಖಿ ಕಾಮನ ಜಱೆದು ನುಡಿಯುತ್ತಿರ್ದಳು. ತಲ್ಲಣಿಸಬೇಡವೆಲೆ ತರಳೆ = ಎಲೆ ಮುಗ್ಧೆ, ಅದೇಕೆ ತಲ್ಲಣಂಗೊಂಡೆ, ಬತ್ತಿದೆ? ಕಾಮನ ಬಿಲ್ಲೆಂಬುದು ಎಲ್ಲರೂ ಎಂಜಲಿಸಿ ಉಗುಳುವ ಕಱಿಯ ಕಬ್ಬು; ಆತನ ಸರಳುಗಳು ಎಲ್ಲರೂ ಅಕ್ಕರಿಯಿಂದ ಕೊಂಡು, ತಲೆಗೆ ಮುಡಿದು ಕೊಡಹಿ ಚೆಲ್ಲಿ ಸಾಡುವ ಮೃದುವಾದ ಹೂವುಗಳು; ಅವನ ಬಿಲ್ಲ ಹೆದೆಯು ನಿಂದಲ್ಲಿ ನಿಲ್ಲದೆ ಪರಿಮಳವಿದ್ದಲ್ಲಿಗೆ ಹಾಱುವ ತುಂಬಿಗಳು; ಆ ಕಾಮನು ಎಲ್ಲರಱಿಕೆಯ ಅನಂಗನು = (ಶರೀರವೇ ಇಲ್ಲದವನು;) (ಹೀಗೆ ಕಾಂತೆಯರ ಕೈಯಲ್ಲಿ) ಅನಂಗನು ಎಂದೆನಿಸಿಕೊಂಬ ಕಾಮನಿಗೆ ಅಂಜಿ, ಈ ಉಮಾಕಾಂತನಾದ ಈಶ್ವರಗೆ ಕಂಗೆಟ್ಟು, ಎದೆಗೆಡದಿರು—ಎಂದು ಬೋಧಿಸಿದ ಸಖಿಯ ಕೂಡೆ ನಾಯಿಕೆ ನುಡಿಯುತ್ತಿರ್ದಳು.

ರವೆಯನಿತು ಕಣ್ಣ ಕಸವಿರಲು ಸೈರಿಸಬಾರ |
ದವಗಡಿಸದೆಂದೊಡಂತಾಗಳೆಳವೆಱೆಯನಾಂ |
ತವ ನೀಳ್ದ ಕೆಂಜಡೆಯ ತುಱುಬಿನವ ಶೇಷಜನಿವರದವ ಕರ ಬ್ರಹ್ಮನ ||
ನವಕಪಾಲವ ತ್ರಿಶೂಲವ ಪಿಡಿದು ಕರವ ಪುಲಿ |
ದೊವಲುಡಿಗೆ ಸಣ್ಣನಡುವಿನ ಚೆಲುವರಿಗೆ ಚೆಲುವ |
ಶಿವನೆನ್ನ ಕಣ್ಣೊಳಗೆ ಸುಳಿಯುತಿರಲೆಂತು ಸೈರಿಪೆ ನಾರಿ ಕೇಳೆಂದಳು || ೩೩ ||

ಟೀಕು—ಕೇಳೆಲೆ ಸಖಿ, ರವೆಯನಿತು......ಬಾರದು = ಅಣುಮಾತ್ರದಷ್ಟು ಕಸವು ಕಣ್ಣೊಳಿದ್ದರೆ ತಾಳಬಾರದು, ಇದ ಹೇಗೆ ತಾಳಬಹುದು. ಎಳವಱೆಯ ತಳೆದು ಕೆಂಪಾದ ನೀಳವಾದ ಜಡೆಗಳಿಂದಲಂಕಾರವಾದ ತುಱುಬಿನಿಂದ, ಮಹಾಶೇಷನ ಜನಿವಾರದಿಂದ, ಕೆಂಪಾದ ಕೆಯ್ಯಲ್ಲಿ ಪಿಡಿದ ಬ್ರಹ್ಮಕಪಾಲದಿಂದ, ಬಲಗೆಯ್ಯಲೊಪ್ಪುವ ತ್ರಿಶೂಲದಿಂದ, ಉಟ್ಟ ಹುಲಿದೊಗಲಿನಿಂದ, ಸಣ್ಣ ನಡುವಿನ ಚೆಲುವರ ದೇವನಾದ ಚೆನ್ನಿಗ ಶಿವನು ಕಣ್ಣೊಳು ಸುಳಿಯುತ್ತಿರಲಾಗಿ, ಹೇಗೆ ಸೈರಿಸಲುಬಹುದು? ಎಂದು ಸಖಿಯರ ಕೂಡೆ ಆಡುವ ನಾಯಿಕೆಯ ಮಾತಂ ಕೇಳುತ್ತ, ಶಿವನು ಮುಂದಕ್ಕೆ ನಡೆದನು, ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದಾನು.

ಇಂದುಧರ ನಿನ್ನ ಹಗೆಗೊಂಡರಾರಾದೊಡಂ |
ಬಂದು ಸಾವಿರವಾಗಿ ಬದುಕುವರದೆಂತೆನಲ್ |
ಕಂದು ನಿನ್ನೊಳ್ ಸೆಣಸಿ ಬೆಂದು ಹುಡಿಹುಡಿಯಾದ ಕಂದರ್ಪನೆಂಬನವನ ||

ಕೊಂದವನು ಕೊಂದೆ ಹುಟ್ಟಿರದಂತೆ ಕೊಲದೆ ಮು |
ನ್ನೊಂದು ರೂಪಾಗಿರ್ದವನ ಹಲವು ಬಗೆಮಾಡಿ |
ಕೊಂದೆ ನೀಂ ಜಗವನೆಂದೊರ್ವಳಭವನ ವಿರಹದಿಂದ ನೊಂದಿಂತೆಂದಳು || ೪೪||

ಟೀಕು— ಕೇಳಿರೈ, ಎಲೆ ಮುನಿಗಳಿರಾ! ಮತ್ತಾ ಸೂಳೆಗೇರಿಯಲ್ಲಿ ಒಬ್ಬ ವಿರಹಿಣಿಯಾದ ಸ್ತ್ರೀಯು ಈಶ್ವರನೊಡನೆ ನುಡಿಯುತ್ತಿರ್ದಳು. ಇಂದುಧರ ನಿನ್ನ ಹಗೆಗೊಂಡರಾರಾದೊಡಂ = ಚಂದ್ರಮೌಳಿಯಾದ ಎಲೆ ಪರಶಿವನೇ! ನಿನ್ನೊಳಗೆ ಹಗೆತನವ ಆರಾದರೂ ಮಾಡಿದುದುಂಟಾದರೆ ಅವರು ಒಂದುಸಾವಿರವಾಗಿ ಬದುಕುವರು; ಅದೆಂತೆಂದೊಡೆ— ನಿನ್ನೊಳು ಯುದ್ಧವ ಮಾಡಿ ಕಂದು ಬೆಂದು ಹುಡಿಹುಡಿಯಾಗಿ ಹೋದ ಕಂದರ್ಪನೆಂಬವನ ಎಹಗು ಕೊಂದೆಯಲ್ಲ; ಕೊಂದವನು ಹುಟ್ಟದಂತು ಕೆಟ್ಟುಹೋಹಾಗೆ ಕೊಲ್ಲದೆ, ಒಂದು ರೂಪಾಗಿ ಇದ್ದವನ ಹಲವುಬಗೆಯಿಂದ ಮನಸಿಜನ ಮಾಡಿ, ಜಗವನೆಲ್ಲಾ ಕೊಲ್ಲುವಹಗೆ ಮಾಡಿದೆ?– ಎಂದು ಅಭವನ ಕೂಡಣ ವಿರಹದಿಂದ ನುಡಿವ ಮಾನಿನಿಯು ಮಾತ ಕೇಳುತ್ತ, ಮದನಹರನಾದ ಮಹಾದೇವನು ಮುಂದಕ್ಕೆ ನಡೆದನು.

ಮುಂದೊಂದೆಡೆಯೊಳೊರ್ವ ವೇಶಿ ವೇಶ್ಯಾಗಮನ |
ಕೆಂದೊಬ್ಬ ವೃದ್ಧ ಬರುತಿರೆ ಕಾಣುತೇನಯ್ಯ |
ತಂದೆಯೆನೆ ನಿನಗೆ ನಾ ತಂದೆನೊತ್ತೆಯನೊತ್ತೆಗೊಡದೆ ನಾಂ ಬರಲಪ್ಪುದೇ ||
ತಂದೆ ನೀನಿಲ್ಲಿ ಸುಳಿಸುಳಿದು ವಿಟರಿಗೆ ಹಳಿವ |
ತಂದೆಯೆನಗಪಕೀರ್ತಿಯುನಿದೇತಕಿಲ್ಲಿಗೈ |
ತಂದೆಯಿರಬೇಡ ಹೋಗೆಂದು ಕಂದನ ತಂದೆಮೊಗಕೆ ನಗೆಯಂ ತಂದಳು ||

ಟೀಕು— ಕೇಳಿರೈ, ಎಲೆ ಮುನಿಗಳಿರಾ! ಮತ್ತಾ ಸೂಳೆಗೇರಿಯಲ್ಲಿ ಮುಂದೊಂದು ಠಾವಿನಲ್ಲಿ ಒಬ್ಬ ಯೌವನೆಯಾದ ವೇಶ್ಯಾಂಗನೆಯು ಮನೆಗೆ ಒಬ್ಬ ವೃದ್ಧ ವಿಟನು ಬರಲಾಗಿ, ಕಾಣುತ್ತ,–ಏನಯ್ಯ ತಂದೆ,ಎಂದು ನಿರಾಶೆಯಿಂದ ನುಡಿದ ಮಾತಿಗೆ ಆ ವೃದ್ಧ ವಿಟನು ನಿನಗೆ ನಾ ತಂದೆ ಒತ್ತೆಯನು, ಒತ್ತೆಯ ಕೊಡದೆ ನಾನು ನಿನ್ನೆಡೆಗೆ ಬರಬಹುದೆ? ಎನಲಾಗಿ; ನಿನಿಲ್ಲಿಗೆ ತಕ್ಕತಂದೆ ನೀನು ಸುಳಿದು ಈ ಕೇರಿಯಲ್ಲಿ ಸುಳಿವ ವಿಟರಿಗೂ ಹಳಿವ ತಂದೆ, ನನಗಪಕೀರ್ತಿಯು ತಂದೆ, ಇರಬೇಡ ಹೋಗೆಂದು ವೃದ್ಧ ವಿಟನ ಜಜಿದು, ಸ್ಕಂದನಾದ ಷಣ್ಮುಖದೇವರಿಗೆ ತಂದೆಯಾದ ಶಿವನ ಮುಖಕ್ಕೆ ನಗೆಯ ತರಿಸಿದಳು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದಾನು.

ಹರೆಯಗಳೆದವಳೆಂದು ಹೋಗದಿರು ಬಾ ವಿಟನೆ |
ಹರೆಯವುಳ್ಳವರೆನ್ನವೋಲಾರನಾದೊಡಂ |

ಕರೆಯುಬಲ್ಲರೆ ಕರೆಯುಬಲ್ಲವರನುಪಚರಿಸಿ ನೆರೆಯ ಬಲ್ಲರೆ ನೆರೆವರ ||
ಇರದೆ ಸತ್ಕರಿಸಬಲ್ಲರೆ ಪಣ್ಣಿನೊಳಗುಳ್ಳ |
ವರಮಧುರ ಕಸುಗಾಯೊಳುಂಟೆ ಕೂಡಿದೊಡೆನ್ನ |
ಪರಿಯ ತೋಱುವೆ ಪೊಸತನಿನ್ನಾಣೆಯೆಂಬ ಮುದಿಪಾಱಿಯಿರ್ದಳದೊಂದೆಡೆ||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಮತ್ತಾ ಸೂಳೆಗೇರಿಯಲ್ಲಿ ಒಬ್ಬ ವೃದ್ಧ ವೇಶ್ಯಾಂಗನೆ ಆವ ಪ್ರಕಾರದಲ್ಲಿ ಒಪ್ಪಿದಳು? ಎಂದರೆ—ಸಂಧ್ಯಾ ಸಮಯದಲ್ಲಿ ನಱೆದಲೆಗೆ ಮಸಿಗಪ್ಪಡವ ಮಱೆಮಾಡಿಕೊಂಡು, ಜಱಿಯೆಲೆಯ ದಾಡೆಯಲ್ಲಿ ಅಡಗಿಸಿಕೊಂಡು, ಮುಂಬಾಗಿಲೊಳು ನಿಂದು, ಕೂಗಿ ನೋಡಿ, ಮನೆಯ ಮುಂದೆ ಸುಳಿವ ಹೊಸಹರೆಯದ ವಿಟರುಗಳಂ ಕಂಡು,—ಹರೆಯುಗಳೆದವಳೆಂದು ಹೊಗದಿರು ಎಲೆ ವಿಟರನ್ನ; ಇಲ್ಲಿಬಾ, ಒಂದಿಷ್ಟು ನಿಲ್ಲು, ಒಂದುಮಾತಂ ಕೇಳು, ಹರೆಯವುಳ್ಳವರು ಆರನಾದರೂ ಕರೆಯುಬಲ್ಲರೆ? ನಿನ್ನಹಾಗೆ ಆಕಾರದವರ ಉಪಚರಿಸಿ ನೆರೆಯಬಲ್ಲರೆ? ಆ ನೆರೆದ ವಿಟರುಗಳನು ಅವರ ಬಳಲಿಕೆಯುನಱಿದು ಸತ್ಕರಿಸಬಲ್ಲರೆ? ಹಣ್ಣಿನಿಂದ ಉಂಟಾದ ಸವಿಯು ಕಸುಗಾಯೊಳುಂಟೆ? ತನ್ನ ಪರಿಯ ತೋಱುವೆನು, ಹೊಸತು ಮಾಡೇನು, ನಿನ್ನಾಣೆ, ನೀಕೊಟ್ಟುದೊಂದು ವೀಳೆಯವೆ ಸಾಕು; ಕುಡದಿದ್ದರೂ ಬಾ, ಕೂಡಿಹೋಗು ಬಾ—ಎಂದು ನುಡಿವ ಮುದಿಪಾಱಿಯ ಲಜ್ಜೆಗೆಟ್ಟ ನುಡಿಯಂ ಕೇಳುತ್ತ ಶಿವನು ಮುಂದಕ್ಕೆ ನಡೆದನು.

ಇನನುದಯ ತಡೆಮದೇಕೆಂದು ಮುಗ್ಧೆಯರ ಹಗೆ |
ತನವನೊಂದೇ ಬಾರಿ ಮುರಿವೆನೆಂದಲ್ಲಿ ಗೊ |
ತ್ರನಗಂಗಳಿಗೆ ದಾಳಿವರಿವಿರ್ದನೋ ಪತಿವ್ರತೆಯರು ನಿಜಪ್ರಿಯರ ||
ತನುಸೋಂಕನಗಲಿಸಿವನೆಂದು ಶಪಿಸವೆ ಮಾಣ |
ರೆನುತಂಜಿ ಮೈದೋಱದಿರ್ದನೋ ಎಂದೊರ್ವ |
ಳನೆಯನನಗಲ್ದ ವಿರಹದಿನಿರುಳ ಕಳೆಯಲಾಱದೆ ನಖಿಯೊಳಿಂತೆಂದಳು ||೩೭||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಮತ್ತಾ ಸೂಳೆಗೇರಿಯಲ್ಲಿ ಒಬ್ಬ ಕಾಮಿನಿ ಪುರುಷನಿಲ್ಲದೆ ರಾತ್ರಿ ಬಹಳ ವೇಳೆಯಾಗಿ ತೋಱಲಾಗಿ, ಸೂರ್ಯೋದಯವೇಕೆ ಆಗದೆ ಹೋಯಿತೆಂದು ನುಡಿಯುತಿರ್ದಳು. ಇನನುದಯ......... = ಮುಗ್ಧೆಯರಿಗೆ ಹಗೆಯಾದ, ಗೋತ್ರನಗಂಗಳಿಗೆ = ಕುಲಪರ್ವತಂಗಳಿಗೆ ದಾಳಿವಂದು ಒಂದುವೇಳೆ ಅವರ ಮುನಿಸ ತೀರಿಸಲೆಂದು ತಳುಹಮಾಡಿದನೋ, ಅವ ಪತಿವ್ರತೆಯರುಗಳು ರಾತ್ರಿಯಲ್ಲಿ ತಮ್ಮ ನಿಜಪ್ರಿಯರುಗಳ ತನುಸೋಂಕಿನ ಸುಖದಿಂದಿರಲಾಗಿ ಅಗಸಲಿಸಿದುದೇ ಉಂಟಾದರೆ ತನ್ನ ಶಪಿಸುವರೋ ಎಂದು ಬೇಗ

ಬರಲಂಜಿ ತಳುಹಮಾಡಿದನೋ ದಿನನಾಥನು ಎಂದು ತನ್ನ ಪ್ರಾಣಕಾಂತ ಅಗಲಿರ್ದ ವಿರಹದಿಂದ ಇರುಳ ಕಳೆಯಲಾಱದೆ ಸಖಿಯರೊಂದಿಗೆ ಇನ್ನೂ ಸೂರ್ಯನು ಏಕೆ ಉದಯವಾಗಲಿಲ್ಲವೆಂದು ಮಾತನಾಡುವುದಂ ಕೇಳುತ್ತ ನಿರ್ವಿಕಲ್ಪನಾದ ನೀಲಕಂಠಮೂರ್ತಿ ಮುಂದಕ್ಕೆ ನಡೆದನು ಕಾಣಿರೈ!

ನೋಡಿ ಭ್ರಮಿಸುವ ಚಿಂತಿಸುವ ಸುಯ್ವ ತಾಪಿಸುವ ।
ಬಾಡಿ ಬಡವಹ[1]ವೂಟದೊಱೆದು ಕಳವಳಿಪ [1]ಮಾ ।
ತಾಡದಿಹ ಕಡುಮೂರ್ಛಿಸುವ ಕಡೆಯೊಳಱೆವರೆಂಬೀದಶಾವಸ್ಥೆಗಳೊಳು ॥
ನಾಡೆ ನವನಾವಸ್ಥೆಯಾದ ವಿರಹಂಗಳಂ ।
ಗೀಡುಮಾಡುವ ದಶಾವಸ್ಥೆಯಂ ಪೊರ್ದಿಸದೆ ।
ಕಾಡುತ್ತಮಂ ಸಾಕುಮಾಡಿ ನಡೆದೀಶ್ವರಂ ಸೂಳೆಗೇರಿಯ ಕಳೆದನು ॥ ೪೮

ಟೀಕು—ಕೇಳಿರೈ ಎಲೆ ಮುನಿಗಳಿರಾ! ಆ ಸೂಳೆಗೇರಿಯಲ್ಲಿ ಸೂತ್ರಧಾರಕನಾದ ಮಹಾದೇವನು ಅಲ್ಲಿದ್ದ ವಾರಾಂಗನೆಯರಿಗೆ ಕಡೆಯಾದವಸ್ಥೆ ಹೊಱಗಾಗಿ ಮಿಕ್ಕ ಅವಸ್ಥೆಗಳನು ಪುಟ್ಟಿಸುತ್ತ ನಡೆತರುತಿರ್ದನು. ಅದೆಂತೆಂದರೆ:—ನೋಡಿ ಭ್ರಮಿಸುವ = ಅವಯವದ ಚೆಲುವಿಕೆಯ ನೋಡಿದ ಮಾತ್ರದಲ್ಲಿಯೇ ಇತರಕರವನ ಱಿಯದೆ ಮೈಮಱೆದು ನೋಡುವುದು, ಒಂದನೆಯ ಅವಸ್ಥೆ; ಚಿಂತಿಸುವ = ಇಂಥವನ ಕೂಡಬೇಕೆಂಬ ವ್ಯಾಕುಲ ಹುಟ್ಟುವುದು, ಎರಡನೆಯ ಅವಸ್ಥೆ: ಸುಯ್ವ = ಇವ ಕೂಟಕ್ಕೆ ಕೆಱಪಾದುದಲ್ಲವೆಂದು ಸುಯ್ಯುವುದು, ಮೂಱನೆಯ ಅವಸ್ಥೆ; ತಾಪಿಸುವ = ಅಷ್ಟಱಿಂದ ತರಹರಿಸಲಾಱದೆ ಜ್ವರ ತೋಱಿದರೆ ತಾಪಹುಟ್ಟುವುದು, ಇದೀಗ ನಾಲ್ಕನೆಯ ಅವಸ್ಥೆ; ಬಾಡಿ = ತಾಪದಿಂದ ತನುಕಾಂತಿ ತಗ್ಗುವುದು, ಐದನೆಯ ಅವಸ್ಥೆ; ಬಡವಹ = ಶರೀರವೆಲ್ಲವೂ ಬಡವಾಗುವುದು, ಆಱನೆಯ ಅವಸ್ಥೆ; ಊಟದೊಱೆದು ಕಳವಳಿಪ = ಊಟ ಮೊದಲಾದುವ ಬಿಟ್ಟು ಕಳವಳಿಪುದು, ಏಳನೆಯ ಅವಸ್ಥೆ; ಮಾತಾಡದಿಹ = ಮಾತನಡಗಿಪ್ಪುದು, ಕಾಂತನು ಬಂದರೂ ಇಂದ್ರಿಯವ್ಯಾಪಾರಂಗಳಿಲ್ಲದೆ ಮೌನದಲ್ಲಿಪ್ಪುದು, ಎಂಟನೆಯ ಅವಸ್ಥೆ; ಮೂರ್ಛಿಸುವ = ಮೂರ್ಛಿಸುವುದು, ಜೀವಾತ್ಮನು ಬ್ರಹ್ಮಸ್ಥಾನಕ್ಕೆ ಐದಿ ಶರೀರಲಕ್ಷ್ಯತೆಯಿಲ್ಲದಿರುವುದು ಒಂಬತ್ತನೆಯ ಅವಸ್ಥೆ; ಅಱೆವ = ತನುವಱೆವುದು, ಹತ್ತನೆಯ ಅವಸ್ಥೆ—ಈ ಅವಸ್ಥೆಗಳೊಳಗೆ ಪ್ರಾಣವು ಶರೀರವ ಬಿಟ್ಟು ಹೋಗುವ ಒಂದವಸ್ಥೆ ಹೊಱತಾಗಿ ಸ್ತ್ರೀಯರು ಮಿಕ್ಕ ಅವಸ್ಥೆಗಳಿಂದ [2]ದುಃಖಿಸುತ್ತಿರೆ, ಈಪರಿಮಾಡಿ[2] ಜಗದೀಶ್ವರನು ಮುಂದಕ್ಕೆ ನಡೆದನು.

ಪಾ—1. ವಿರಹದಿಂ ಕಳವಳಿಪ; ಊಟವೊರೆವ ಕಳವ ಸಿ.

2. ನೋಡುವರ್ ಕೆಲರು, ಚಿಂತಿಸರ್ ಕೆಲರು, ಸುಯ್ವರ್ ಕೆಲರು, ತಾಪಿಸುವರ್ ಕೆಲರು, ಬಡವಪ್ಪರ್ ಕೆಲರು, ಊಟವನೊಲ್ಲದೆ ಕೆಲರ್ ಕಳವಳಿಸುವರು,

ಕೊಲ್ಲದಿಹುದೇ ಧರ್ಮ ಪರಧನಪರಸ್ತ್ರೀಯು |
ನೊಲ್ಲದಿಹುದೇ ಶೀಲವಧ್ಯಾತ್ಮವಿಷಯುಮಂ |
ಬಲ್ಲುದೇ ಜ್ಞಾನವೀಶನ ದೈವನೆಂದಱಿವುದೇ ಸಕಲಶಾಸ್ತ್ರಂಗಳ ||
ಬಲ್ಲವಿಕೆ ಸತ್ಯವೇ ಸಚ್ಚರಿತ್ರಕೆ ಮಾತೆ |
ಯುಲ್ಲದಿಲ್ಲೆಂದು ನಡೆವುದೆ ಮಾರ್ಗ ಹಲವು ಮಾ |
ತೆಲ್ಲವೇಕೆಂದು ಶ್ರೀಗುರು ಶಿಷ್ಯನಂ ಬೋಧಿಸುತ್ತಿರ್ದನೊಂದೆಡೆಯೊಳು || ೪೯

[ಗಿಳಿಗಳಂ ರಥಕೊಯ್ಯದಾದನಂಗಜನೇಕೆ |
ಕಳಕಂಠಗಳ ಕೊರಳ ಕೆಡಿಸಿದಂದಿಂ ಕೆಡಿಸ |
ದುಳಿದುದಾವಾಗಿಯೇತಕೆ ಮೆಯ್ಯೊಳುರಿಯುನೆಬ್ಬಿಸುವ ತೆಂಕಣ ಗಾಳಿಯು||
ಸುಳಿಯಲೀಸದೆ ಹಸಿದು ನುಂಗಿ ಜೀರ್ಣಿಸದುಗುಳಿ |
ಕಳೆದುದಹಿಯೇಕೆಂದು ಮನದೊಳಗೆ ನೊಂದು ಸಿತ |
ಗಳನಮೇಲಣವಿರಹದಿಂದೊಬ್ಬ ಸತಿ ನುಡಿದಳೆಂದು ಕೆಳದಿಯುರಕೂಡೆ] ||

ಎಂಬೀಪದ್ಯವು ಟಿಪ್ಪಣಿಯಿಲ್ಲದ ಒಂದು ಪ್ರತಿಯಲ್ಲಿ ಮಾತ್ರ ೪೮-೪೯ರ ಮಧ್ಯದಲ್ಲಿ ಇದೆ. ಅನ್ಯಕರ್ತೃಕವಾಗಿರಬಹುದು.

[ಟಿಪ್ಪಣಿ—ಕೇಳಿರೈ ಮುನಿಗಳಿರಾ! ಆ ಶಿವನು ಮುಂದೆ ಬರುವಲ್ಲಿ ಆತನ ಮೇಲಣ ವಿರಹತಾಪದಿಂದ ಒಬ್ಬ ಸತಿ ಕೆಳದಿಯುರಕೂಡೆ ಹೀಗೆ ನುಡಿಯುತ್ತಿರ್ದಳು. ಅನಂಗಜನು = ಮನ್ಮಥನು, ಗಿಳಿಗಳಂ, ರಥಕ್ಕೆ ಹೂಡದೆ ಏತಕ್ಕೆ ಬಿಟ್ಟನೋ? ಬಿಡದಿದ್ದರೆ ಅವುಗಳ ಚಪ್ಪರಣೆಯುನ್ನು ಕೇಳಿ ಈ ವಿರಹತಾಪಕ್ಕೆ ಈಡಾಗೆನು; ನನ್ನ ಹಿಂಸೆಗೇನೇ ಬಿಟ್ಟದು, ಎಂದು ಅಭಿಪ್ರಾಯ. ಮಾಗಿಯೇತಕೆ ......ಕೆಡಿಸಿದಂ = ಮಾಗಿಯೂ ಕೋಗಿಲೆಗಳ ಕಂಠಗಳನ್ನು ಕೆಡಿಸಿದಂದಿನಿಂದ ಕೆಡಿಸದೆ ಏಕೆ ಬಿಟ್ಟಿತು? ಎಂದರೆ ಈಕೋಕಿಲಾಪದಿಂದ ತಾಪ ಜನಿಸಲಾಱದೆಂದು ಭಾವ. ಅಹಿ = ವಾತಾಶನನಾದ ಸರ್ಪವು, ಮೆಯ್ಯೊಳುರಿಯುನೆಬ್ಬಿಸುವ ತೆಂಕಣ ಗಾಳಿಯು = ವಿರಹಿಗಳಿಗೆ ಮೆಯ್ಯಲಿ ಹೊಪ್ಪಳೆಗಳನ್ನು ಹುಟ್ಟಿಸುವ ಮಲಯಮಾರುತವನ್ನು, ಸುಳಿಯದಹಾಗೆ, ಹಸಿದು, ನುಂಗಿ, ಜೀರ್ಣಿಸಿಕೊಳ್ಳದೆ, ಏತಕೆ, ಉಗುಳಿಬಿಟ್ಟಿತೋ? ನನ್ನನ್ನು ಹಿಂಸಿಸುದಕ್ಕಾಗಿಯೇ ಎಂದು ಭಾವ. ಎಂದು ಮನದೊಳಗೆ ನೊಂದು ಹೇಳುತ್ತಿದ್ದ ಸತಿಯ ನುಡಿಗಳಂ ಕೇಳುತ್ತ ಜಗದೀಶ್ವರನು ಮುಂದಕ್ಕೆ ನಡೆದನು, ಕಾಣಿರೈ! ಶುಕಪಿಕಾಲಾಪಗಳು ಮಂದಮಾರುತಸ್ಪರ್ಶ—ಇವು ವಿರಹೋದ್ರೇಕಗಳೆಂದು ಕವಿಸಮಯ.]

ಸುಮ್ಮನಿರ್ದರು ಕೆಲರು, ಮೂರ್ಛಿಸುವರು ಕೆಲರು, ತನುವಬಿಡುವರ್ ಕೆಲರು, ಇಂತಾದ ದಶಾವಸ್ಥೆಗಳ ಪುಟ್ಟಿಸುತ್ತ ಸಾಕುಮಾಡಿ.

ಟೀಕು—ಕೇಳಿರೈ, ಎಲೆ ಮುನಿಗಳಿರಾ ! ಸೂಳೆಗೇರಿಯು ಕಳೆದು ಆ ಸರ್ವಜ್ಞನಾದ ಪರಮೇಶ್ವರನು ಬರುತ್ತಿರಲು, ಒಬ್ಬ ಗುರುಮೂರ್ತಿಯು ಬಂದು ಠಾವಿನಲ್ಲಿ ತನ್ನ ಶಿಷ್ಯಂಗೆ ಧರ್ಮಶಾಸ್ತ್ರವ ಬೋಧಿಸುತ್ತಿರ್ದನು. ಅದೆಂತೆಂದೊಡೆ :-- ಕೊಲ್ಲದಿಹುದೇ ಧರ್ಮ=

"ಅಹಿಂಸಾ ಸತ್ಯಮಸ್ತೇಯಂ [1]ಶೌಚಮಿಂದ್ರಿಯ[1] ನಿಗ್ರಹಃ ॥
ದಾನಂ ವಿದ್ಯಾ ತಪೋಜ್ಞಾನಂ ದಶಕಂ ಧರ್ಮಲಕ್ಷಣಂ ॥ "

ಎಂಬ ಧರ್ಮಶಾಸ್ತ್ರ ಪ್ರಮಾಣದಿಂದ ಸಕಲ ಪ್ರಾಣಿಗಳ ಕೊಲ್ಲದಿಹುದೇ ಧರ್ಮ. ಪರಧನ ಪರಸ್ತ್ರೀಯನೊಲ್ಲದಿಹುದೇ ಶೀಲ = ಪರದ್ರವ್ಯವನಪಹರಿಸದೆ, ಪರಸ್ತ್ರೀಯನು ತಾಯಿಗೆ ಸಮಾನವೆಂದು ಕಾಂಬುದೇ ಶೀಲ. ಅಧ್ಯಾತ್ಮವಿಷಯಮಂ ಬಲ್ಲುದೇ ಜ್ಞಾನ = ವೇದಾಗಮ ಪುರಾಣಗಳಿಂದ ನಿತ್ಯಾನಿತ್ಯವಸ್ತುವಿವೇಕವನು ಅಱಿವುದೇ ಜ್ಞಾನ. ಈಶನ ದೈವವೆಂದಱಿವುದೇ ಸಕಲಶಾಸ್ತ್ರಂಗಳ ಬಲ್ಲವಿಕೆ =

ಶ್ರು ॥ " ಏಕೋ ದೈವೋ ನ ದ್ವಿತೀಯೋ "

ಎಂಬ ಶ್ರುತಿಪ್ರಮಾಣದಿಂದ ಶಿವನೇ ದೈವವೆಂದಱಿವುದೇ ಸಕಲ ಶಾಸ್ತ್ರಂಗಳ ಬಲ್ಲವಿಕೆ. ಸತ್ಯವೇ ಸಚ್ಚರಿತ್ರಕೆ ಮಾತೆ ಯಲ್ಲದಿಲ್ಲೆಂದು ನಡೆವುದೆ ಮಾರ್ಗ =

ಶ್ರು ॥ " ಸತ್ಯಮೇವ ಪರಂ ಧರ್ಮಃ ಸತ್ಯಮೇವ ಪರಂತಪಃ ॥ "

ಎಂಬ ಶ್ರುತಿವಚನದಿಂದ ಸತ್ಯವೇ ಸದಾಚಾರಕ್ಕೆ ತಾಯಿಯೆಂದು ಅಱಿವುದೇ ಸನ್ಮಾರ್ಗ. ಹಲವು ಮಾತೆಲ್ಲವೇಕೆಂದು ಶ್ರೀಗುರು ಶಿಷ್ಯಂಗೆ ಸುಜ್ಞಾನಬೋಧೆಯು ಬೋಧಿಸುತ್ತಲಿರುವ ನುಡಿಗಳಂ ಕೇಳುತ್ತ ಮಹಾದೇವನು ಮುಂದಕ್ಕೆ ನಡೆದನು.

ಅತ್ತೆತ್ತು ಬೇಸಱಿಸುತಿದೆ ಮಗುವು ಕೋಣೆಯೊಳ |
ಗತ್ತೆಮಾವದಿರ ಮಲಗುವ ನಿದ್ರೆ ಕೆಟ್ಟಪುದು |
ಹೊತ್ತಱಿದ್ದನ್ನ ಪತಿಯೂರ್ಗೆ ಪೋದಂ ಬಾರನತ್ತಲಿನ್ನೇನಾದನೋ ||
ಹೊತ್ತುಹೋಗದು ನಡುಮನೆಯು ಪರಳುನೆಲ ಮೆಯ್ಯ |
ನೊತ್ತಿ ನಿದ್ದೆಯು ಕಿಡಿಸಿತೇಗುವೆನೊ ವಿಧಿಯೆಂದೆ | [ಯೊಳು ‖ ೫೦
ನುತ್ತೊರ್ವ ಜಾರೆ ಜಾರಗೆ ಹದಿರ ನುಡಿದಳುಭಯಾರ್ಥಮಾಗೊಂದೆಡೆ

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಆ ಶಿವನು ಮುಂದೆ ಬರುವಲ್ಲಿ ಒಬ್ಬ ಜಾರೆ ತನ್ನ ವಲ್ಲಭನು ಬರಬೇಕೆಂದು ಹದಿರಿನಿಂ ನುಡಿಯುತ್ತಿರ್ದಳು. ಅತ್ತೆತ್ತು ಮಗುವು ಬೇಸಱಿಸುತಿದೆ = ಮಗುವಿನ ಸಂದಿಯಿಂದ ಬಂದರೆ ಕಾಣಬಾರದೆಂಬ ಹದಿರು. ಕೋಣೆಯೊಳಗೆ ಮಲಗಿರುವ ಅತ್ತೆಮಾವದಿರ ನಿದ್ರೆ ಕೆಟ್ಟಪುದು = ಕೂಸು

---

1. ಹ್ರೀಸತ್ಯೇಂದ್ರಿಯ

ಕೂಗುತಿದೆ, ಆಡುವ ಮಾತು ಕೇಳದು ಎಂದೂ ಅವರು ಚೆನ್ನಾಗಿ ಮಱೆದು ಮಲಗಿದ್ದಾರೆಂದೂ ಹೇಳುವ ಹದಿರು. ಹೊತ್ತಱೆದ್ದೆನ್ನ ಪತಿಯೂರ್ಗೆ ಪೋದಂ ಬಾರನತ್ತಲಿನ್ನೇನಾದನೋ= ಎಂದಾಡುವ ಮಾತು ನನ್ನ ಬತ್ತಿನಲ್ಲಿ ಗಂಡನಿಲ್ಲವೆಂದು ಹೇಳುವ ಹದಿರು. ಹೊತ್ತು ಹೋಗದು=ತಾನೊಬ್ಬಳೇ ಇರುವಳೆಂಬ ಹದಿರು. ನಡುಮನೆಯ ಹರಳುನೆಲ ಮೆಯ್ಯನೊತ್ತಿ ನಿದ್ರೆಯ ಕೆಡಿಸಿತು=ಇನ್ನೇನು ಮಾಡಲಿ, ಎಂಬ ಮಾತು ನೀನು ಬಂದರೆ ನಾನು ಬಂದೇನೆಂಬ ಹದಿರು. ಈ ಪ್ರಕಾರದಲ್ಲಿ ಒಬ್ಬ ಹಾದಱಗಿತ್ತಿ ಹೊಱಗೆ ಸುಳಿವ ಜಾರಗೆ ನುಡಿವ ಹದಿರ ಕೇಳುತ್ತ ಮುಂದಕ್ಕೆ ನಡೆದನು.

ಒಡನೊಱಗಿದಾತ್ಮವಲಭನಱಿಯದೊಲು ನಟ್ಟ |
ನಡುವಿರುಳನೊಳು ಮನೆಯ ಪೊಱಟು ಕತ್ತಲೆಯೊತ್ತು |
ವಿಡಿದು ನಿಂದಿರಲು ಮೆಲ್ಲನೆ ಪುರುಷಮಾತ್ರವಂದವ ತಳೆದರಾರಾದೊಡಂ ||
ನುಡಿದುದೇ ಸಂಜ್ಞೆ ನೋಡಿತೆ ಸನ್ನೆ ಮಱೆದೊರಕಿ |
ದೆಡೆಯೆ ಮನೆ ಬಿದ್ದುದೇ ಪಾಸು ಪೊದ್ದಿತೆ ಕೂಟ |
ತಡೆಯದಿದ್ದುದೆ ನಿಲ್ಲದೋಟವೆಂದೆನಿಪ ಜಾರೆಯರಾಟಮಂ ಕಂಡನು || ೫೧

ಟೀಕು—ಕೇಳಿರೈ, ಎಲೆ ಮುನಿಗಳಿರಾ ! ಮತ್ತೊಂದೆಡೆಯೊಳು ಒಬ್ಬ ಜಾರೆ ಒಂದು ಹಾಸಿಕೆಯಲ್ಲಿ ಮಲಗಿದ್ದ ಗಂಡನಱಿಯದ ಹಾಗೆ ನಟ್ಟನಡುವಿರುಳಿನಲ್ಲಿ ಮನೆಯ ಹೊಱಹೊಂಟು ಒಂದು ಕತ್ತಲೆವೊತ್ತುವಿಡಿದು ನಿಂದಿರಲಾಗಿ, ಆ ಸಮಯದಲ್ಲಿ ಬ್ರಾಹ್ಮಣ ಮೊದಲಾಗಿ ಚಂಡಾಲಕಡೆಯಾಗಿ ಇದ್ದ ಹದಿನೆಂಟು ಜಾತಿಯೊಳಗೆ ಆರಾದರೂ ಪುರುಷಮಾತ್ರ ಗಂಡಸು ಎಂಬುವನು, ನುಡಿದುದೇ ಸಂಜ್ಞೆ=ಅವನು ಸುಮ್ಮನೆ ನುಡಿದುದೇ ಸನ್ನೆ; ಮಱೆದೊರಕಿದೆಡೆಯೆ ಮನೆ=ಹಿತ್ತಲುಸಂದಿಗೊಂದಿ ಪಾಳ್ಮನೆ ಪಾಳಂಗಡಿ ಮೊದಲಾದ ದೊರಕಿದೆಡೆಯೇ ಭೋಗಿಸುವ ಮನೆ; ಬಿದ್ದುದೇ ಪಾಸು=ಬಿದ್ದೆಡೆಯೆ (ಹಾಸಿಕೆ); ಪೊದ್ದಿತೆ ಕೂಟ=ತಾಗದ ಚುಂಬನ, ಧ್ವನಿಹುಟ್ಟದ ಕರಘಾತ, ಅಗಲುವ ಕೂಟ, ಈಪ್ರಕಾರದಲ್ಲಿ ಹೊದ್ದಿದುದೇ ಸುರತ; ನಿಲ್ಲದಿದ್ದುದೆ ಓಟ=ತಳವಾಱರು ಆಪ್ತರು ಬಂಧುಗಳು ಪತಿ ಮೊದಲಾದವರು ಕಂಡೇಱಪರೆಂದು ನಿಲ್ಲದೆ ಕತ್ತಲೆಮನೆಯಲ್ಲಿ ಮಱೆಯಲ್ಲಿ ಸೂರ ಬೆಂಬಱಗೊಂಡು ಓಡಿಹೋಗಿ ತನ್ನ ಮನೆಯಂ ಪೊಗುವ ಜಾರೆಯರಂ ನೋಡುತ್ತ ಜರಾಮರಣರಹಿತನಾದ ಜಗದೀಶ್ವರನು ಮುಂದಕ್ಕೆ ನಡೆದನು.

ಜಾರೆಯರ ದುಶ್ಚೇಷ್ಟೆಯಂ ನೋಡಿ ನಗುತ ಪರ |
ನಾರಿಯರೆನುತ್ತವರ ಭಾವನೆಗೆ ಹೊಱಗಾಗು |
ತೋರಂತೆ ಪತಿವ್ರತೆಯರುಗಳ ಸದ್ಭಕ್ತಿಭಾವನೆಗೆ ತಾನೊಳಗಾಗುತ ||

ಕಾರುಣ್ಯರಸವ ಸೈಗಱೆಯುತನಿಬರ ಮೇಲೆ |
ಕೇರಿಕೇರಿಯಲಿ ಭಿಕ್ಷವ ಮಾಡುತೈದಿ ಮದ |
ನಾರಿ ದ್ವಾರಾವತೀಪುರವರಾಧೀಶ್ವರನ ಅರಮನೆಗೆ ನಡೆತಂದನು ‖ ೫೦

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಆ ಶೂಲಪಾಣಿಯಾದ ಮಹಾದೇವನು ಜಾರೆಯರೆಸಗಿದ ದುಷ್ಟವಿಕಾರಂಗಳಂ ನೋಡಿ ನಗುತ್ತ, ಚೇಷ್ಟಾಭಾವಕ್ಕೆ ಹೊಱಗಾಗುತ್ತ, ಪತಿವ್ರತೆಯರುಗಳು ಮಾಡಿದ ಸದ್ಭಕ್ತಿಭಾವನೆಯಿಂದ ನೀಡಿದ ಭಿಕ್ಷಮಂ ಕೈಕೊಂಡು, ಅವರ ಮೇಲೆ ಕಾರುಣ್ಯರಸವ ಕಱೆಯುತ್ತ, ಭಿಕ್ಷಮಂ ಬೇಡುತ್ತ, ಮದನವೈರಿಯಾದ ಶಿವನು ದ್ವಾರಕಾಪುರಕ್ಕೆ ಅಧಿಪತಿಯಾದ ದೇವಕಿದೇವೀಕುಮಾರಕನಾದ ಶ್ರೀಕೃಷ್ಣದೇವನ ಅರಮನೆಗೆ ನಡೆತಂದನು ಕಾಣಿರೈ, ಎಲೈ ಮುನಿಗಳಿರಾ! ಎಂದು ಸೂತಮುನೀಶ್ವರನು ನೈಮಿಶಾರಣ್ಯವಾಸಿಗಳಾದ ಋಷಿಗಳಿಗೆ ಹೇಳುತ್ತಿರ್ದಾನು.

— ಇಂತು ದ್ವಿತೀಯಸಂಧಿಗೆ ಜಯಮಂಗಳಂ —

ತೃತೀಯ ಸಂಧಿ

ಸೂಚನೆ :—

ಧರೆಯ ಭಾರವನಿಳುಹಿ ನೀನೆನ್ನ ಕರದಜನ ।
ಶಿರಪಾತ್ರ ತಣಿಪೆಂದದಂ ಕುರುಕ್ಷೇತ್ರದೊಳ ।
ಗಿರಿಸಿ ಕೃಷ್ಣಗೆ ಪೇಳಿ ಮರಳಿ ಕೈಲಾಸದೊಳು ಹರನು ಸುಖದಿಂದಿರ್ದನು ॥

ಟೀಕು—ಈ ಸಂಧಿಯು ಕಥಾಗರ್ಭ ಆವಪ್ರಕಾರವೆಂದರೆ – ಶಿವನು ದ್ವಾರಕಾ ಪುರದಲ್ಲಿ ಶ್ರೀಕೃಷ್ಣನ ಅರಮನೆಗೆ ಬಂದು, ಅತ ನೀಡಿದ ಭಿಕ್ಷಮಂ ಕೈಕೊಂಡು, ಭೂ ಮಿಯು ಭಾರವನಿಳುಹೆಂದು ಶ್ರೀಕೃಷ್ಣನಿಗೆ ಹೇಳಿ, ಕೆಯ್ಯಲಿರ್ದ ಬ್ರಹ್ಮನ ಕಪಾಲ ವನ್ನು ತಣಿಪುದೆಂದು ಆ ಪಾತ್ರೆಯನ್ನು ಕುರುಕ್ಷೇತ್ರದಲ್ಲಿ ಇಳುಹಿ, ಹರನು ಕೈಲಾ ಸಕ್ಕೆ ಬಂದು ಸಿಂಹಾಸನಾರೂಢನಾಗಿ ಇರ್ದನು ಎಂಬುದು ಈನಿಗುದಿಯು ಕಥಾ ಗರ್ಭ.

ಮುಡಿಯು ನಿಡುಜಡೆಯು ನವಕರ್ಣಪತ್ರದ ಫಣಿಯು ।
ಜಡಿವ ಕುಂಡಲದ ಪೊಳೆವೈರದಾಳಿಯ ಕೊರಲ ।
ನಡುಗಱೆಯುಹಾರಕೆಡೆಗುಡದುರೋಜದೊಳುಲಿವರುಂಡಮಾಲೆಯು ವಕ್ಷದ ॥
ಕಡಗದ ಕರದ ತ್ರಿಶೂಲದ ನಿಱಿವಿಡಿದ ವಸ್ತ್ರ ।
ದುಡುಗೆಯು ಪುಲಿಯ ಚರ್ಮದರ್ಧಾಸನರೂಪನಂ ।
ದೊಡಲೊಳಗೆತೋಱಿಮೆಱೆದರ್ಧನಾರೀಶ್ವರಂಕುಡುಗೆನಮಗತಿಸೌಖ್ಯವ ॥

ಟೀಕು—ಕವೀಶ್ವರನು ಸಂಧಿಯ ಪ್ರಾರಂಭದಲ್ಲಿ ಅರ್ಧನಾರೀಶ್ವರನ ಸ್ತೋ ತ್ರವಂ ಮಾಡುತಿರ್ದಾನು. ಮುಡಿಯು ನಿಡುಜಡೆಯು = ಮುಡಿಯಾಡುವೆಡೆ ಒಂದು ಕಡೆಯಲ್ಲಿ ತುಱುಬು, ಒಂದುಕಡೆಯಲ್ಲಿ ಜಟಾಮುಕುಟ; ನವಕರ್ಣಪತ್ರದ ಫಣಿ ಯು ಜಡಿವ ಕುಂಡಲದ = ಒಂದುಕಡೆಯಲ್ಲಿ ನವರತ್ನ ಖಚಿತವಾದ ಓಲೆ, ಒಂದು ಕ ಡೆಯಲ್ಲಿ ಸರ್ಪಕುಂಡಲ; ಪೊಳೆವೈರದಾಳಿಯ ಕೊರಲ ನಡುಗಱೆಯು = ಒಂದೊಂದು ಕಡೆಯ ಕೊರಲಿನಲ್ಲಿ ಒಪ್ಪುವೈರದಾಳಿಯಿಂದ, ಬಲಗಡೆಯಲ್ಲಿ ಒಪ್ಪುವ ಕಪ್ಪುಗೊ ರಲಿಂದ ; ಹಾರಕೆಡೆಗುಡದುರೋಜದ...ವಕ್ಷದ = ಮುತ್ತಿನ ಹಾರಂಗಳಿಗೆ ಶ್ರೇಱಹು ಗುಡದ ಸ್ತನದಿಂದೊಪ್ಪುವ, ವಾಮಭಾಗದಲ್ಲುಲಿವ ರುಂಡಮಾಲೆಯಿಂದೊಪ್ಪುವ ಉರಸ್ಸನುಳ್ಳ; ದಕ್ಷಿಣಭಾಗದ ಕಡಗದ ಕರದ ತ್ರಿಶೂಲದ = ಎಡದ ಕೈಯಲ್ಲಿ ಒಪ್ಪು ವ ರತ್ನದ ಕಡಗದ, ಬಲದ ಕೈಯಲ್ಲೊಪ್ಪುವ ತ್ರಿಶೂಲದ; ನಿಱಿ......ಪುಲಿಯ

ಚರ್ಮದ = ಎಡಗಡೆಯಲ್ಲೊಪ್ಪುವ ದಿವ್ಯಾಂಬರದುಡುಗೆಯು, ಬಲಗಡೆಯಲ್ಲೊಪ್ಪುವ ಪುಲಿಯ ಚರ್ಮದಿಂದ ; ಅರ್ಧಾಸನದಲ್ಲಿ ಮೂರ್ತಿಗೊಂಡು ಒಂದು ಶರೀರದಲ್ಲಿ ಅರ್ಧವನ್ನು ದೇವಿಯರಿಗೆ ಕೊಟ್ಟು ಅರ್ಧನಾರೀಶ್ವರನಾಗಿ ಮೆಱೆವ, ಮಹಾದೇವನು ನಿಮಗೆ ಧನಕನಕವಸ್ತುವಾಹನ ಆಯುರಾರೋಗ್ಯ ಮೊದಲಾದ ಸುಖಸಂಪತ್ತ ಕೊಟ್ಟು ಪ್ರಿಯದಲ್ಲಿ ರಕ್ಷಿಸಲಿ ! ಎಂದು ಆಶೀರ್ವಾದವಂ ಮಾಡುತಿರ್ದಾನು.

ಪರಿ ಲೇಸುಲೇಸು ! ಹೋ ! ಹೋ ! ನಿಲ್ಲು ! ನಿಲ್ಲು ! ಭಾ |
ಪುರೆ ! ಭಲರೆ ! ಜಾಗುರೇ ! ನಿನಗೆ ಸರಿಯಿಲ್ಲವೀ |
ತೆಱದ ಸುಕವಿತ್ವ ಸುಮಧುರ ವಿಚಿತ್ರ ವಿಸ್ತಾರವೆಂದೆಂಬ ನಾಲ್ಕುಬಗೆಯ ||
ವಿರಚಿಸಲು ಬಲ್ಲ ವಸ್ತುಕಕವೀಂದ್ರರ ವಸ್ತು |
ನಿರತವರ್ಣಕಕವೀಶ್ವರರ ಕರ್ಣಾಭರಣ |
ಗುರುಲಿಂಗವಿಭುವು ಪೇೞ್ದ ಕೃತಿಯು ಸಲಿದಿದಂ ಪೊಗೞದವರಾರಿಳೆಯೊಳು||

ಟೀಕು—ಕವೀಶ್ವರನು ತನ್ನ ಸಾಮರ್ಥ್ಯವಂ ಪೇಳುತಿರ್ದಾನು. ಆಸುಕವಿತ್ವ, ಮಧುರಕವಿತ್ವ, ವಿಚಿತ್ರಕವಿತ್ವ, ವಿಸ್ತಾರಕವಿತ್ವವೆಂಬ ಕವಿತಾಹೃದಯವನೆಲ್ಲಬಲ್ಲ ರಸಿಕರು—ಲೇಸು ಲೇಸು ! ಭಾಪುರೆ ! ಭಲರೇ ! ಜಾಗುರೇ ! ಹೋ ! ಹೋ ! ಎಂದು ಕೊಂಡಾಡುವ ಮರ್ಯಾದೆಯಲ್ಲಿ ವಸ್ತುಕ ಕವಿಗಳಿಗೆ ವಸ್ತುವೆನಿಸಿ ವರ್ಣಕಕವಿಗಳಿಗೆ ಕರ್ಣಾಭರಣವೆನಿಸಿ ಗುರುಲಿಂಗಕವೀಶ್ವರನೆಂಬಾತನು ಮಾಡಿದ ಉಪಮೆಯಿಲ್ಲೆಂಬ ಕೃತಿಯನು ಭೂಮಿಯಲ್ಲಿ ಕೊಂಡಾಡದವರುಂಟೇ ! ಎಂದು ಕವೀಶ್ವರನು ಹೇಳುತಿರ್ದಾನು.

ರಮಣಿಯರು ಲಾಲಿಸಿದರಾದೊಡಂ ತಮ್ಮ ನಿಜ |
ರಮಣರಾಲಲನೆಯರ ಕೇಳಮೇಳದ ಸುಖವ |
[1]ಮಮತೆಯಲಿ ನೆನೆನೆನೆದು ಹಾರೈಸುವಂತೆ ರಮಣರು ಲಾಲಿಸಿದರಾದೊಡೆ[1] ||
[2]ರಮಣಿಯರು ಲಾಲಿಸಿ ಸ್ನೇಹಮೋಹವ ನೆನೆದು |
ಮಮತೆಯಲಿ ಹಾರೈಸುವಂದದಿಂದೊಲ್ದು[2] ಸ |
ತ್ಕ್ರಮವನಂಗೀಕರಿಸಿ ಮೆಱೆವುದೀ ಶಿವನ ಭಿಕ್ಷಾಟನದ ಕೃತಿಯರಚನೆ||೩

ಟೀಕು—ಕವೀಶ್ವರನು ಭಿಕ್ಷಾಟನದ ಚರಿತ್ರೆಯನ್ನು ಕೇಳುವರಿಗೆ ಈಪ್ರಕಾರ ಮಹಾಪರಿಣಾಮವ ಕುಡುವುದು ಎಂದು ಹೇಳುತಿರ್ದಾನು. ರಮಣಿಯರು ಕೇಳಿದುದೇ ಉಂಟಾದರೆ ತಮ್ಮ ರಮಣರು ತಮ್ಮ ಕೂಡೆ ಸರಸ ಸವಿಮಾತು ಕೇಳಮೇಳ ಮೊದಲಾದ ಸುಖದ ಮಾತುಗಳನ್ನು ಆವ ಮರ್ಯಾದೆಯಲ್ಲಿ ಅತಿಪ್ರೇಮದಿಂದ

ಪಾ—1. ಹಾರೈಸುವಂತೆ ರಮಣರು ಲಾಲಿಸಿದರಾದರತಿಪ್ರಿಯದೆ.

2. ರಮಣಿಯರುಗಳನೇಹಮೋಹಗಳ ನೆನೆನೆನೆದು•••ಹಾರೈಸುವಂದದಿಂದೊಲ್ದು.

ಕೇಳುವರು, ಪುರುಷರು ತಮಗೆ ಮೋಹವಾದ ಸತಿಯಾಡಿದ ಮಾತುಗಳನ್ನು ಆವ ಮರ್ಯಾದೆಯುಲ್ಲಿ ಅತಿಪ್ರೇಮದಿಂದ ಕೇಳುವರು—ಆ ಮರ್ಯಾದೆಯಿಂದ ಈಭಿಕ್ಷಾಟನದ ಚರಿತ್ರವ ಕೇಳುವವರ ಕಿವಿಗೆ ಅತಿಸೊಗಸ ಕೊಡುವುದು ಎಂದು ಕವೀಶ್ವರನು ಹೇಳುತಿರ್ದನು.

ಅರಮನೆಯ ದ್ವಾರಪಾಲಕ ವಿಷ್ವಕ್ಸೇನನೀ |
ಶ್ವರನ ಹೋಗಬೇಡೆಂದು [1]ವಾರಿಸಲು[1] ಶೂಲದಿಂ |
ಧಿರಿದು ನೆಗಹಲು ಬರ್ದುಂಕಿದೆನೆನಲದೇಕೆನಲು ಹರಿಯಜರರಿಸಿ ಕಾಣವ ||
ಚರಣಮಂ [2]ಸಿರಿಮುಡಿಯು[2] ಕಂಡೆನದಱಿಂದೆನಗೆ |
ಸರಿಯಾರೆನಲು ಮೆಚ್ಚಿದೆಂ ಬೇಡು ವರವನೆಂ |
ದರೆ ಬೇಡವೆನಗಿದೇ ಪರಮಪದವೆನೆ ಹರನದಂ ಕರುಣಿಸುತೆ ನಡೆದನು || ೪

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಆಶಿವನು ದ್ವಾರಕಾಪುರವಂ ಪೊಕ್ಕು ಕೇರಿಕೇರಿಯಲ್ಲಿ ಭಿಕ್ಷವಂ ಬೇಡಿ ಅನವರತ ಲೀಲಾಲೋಲಚಿತ್ತನಾಗಿ ದ್ವಾರಕಾಪುರದ ಲಕ್ಷ್ಮೀಕಾಂತನಿರ್ದ ಅರಮನೆಗೆ ಭಿಕ್ಷಾರ್ಥಿಯಾಗಿ ಬರುತಿರ್ಪಲ್ಲಿ, ಆಅರಮನೆಯ ದ್ವಾರಪಾಲಕನಾಗ ವಿಷ್ವಕ್ಸೇನನೆಂಬಾತನು ಈಶ್ವರನಂ ಅರಮನೆಗೆ ಹೋಗಬೇಡ ಎಂದು ಬಾಗಿಲೊಳು ತಡೆಯಲಾಗಿ, ತ್ರಿಶೂಲದಿಂದಿರಿದು ಅವನಂ ನೆಗಹಲಾಗಿ, ಬದುಕಿದೆನೆನಲಾಗಿ; ಅದೇಕೆಂದರೆ, ಹರಿಯಜರಱಿಸಿ ಕಾಣದ ಚರಣಮಂ ಸಿರಿಮುಡಿಯುಂ ಕಂಡೆಂ=ಹರಿಯಱಿಸಿ ಕಾಣದೆ ಹೋದ ಶ್ರೀಪಾದಪದ್ಮವಂ ಬ್ರಹ್ಮನಱಿಸಿ ಕಾಣದೆ ಹೋದ ಶ್ರೀಮುಡಿಯುಂ ಕಂಡೆಂ; ಬಂದಾಗ ನಿನ್ನ ಶ್ರೀಪಾದವ ಕಂಡೆ, ಇರಿದು ನೆಗಹಿದಾಗ ನಿನ್ನ ಮಸ್ತಕವ ಕಂಡೆ, ನನಗೆ ಸರಿಯಾರೆಂದು ನುಡಿಯಲಾಗಿ; ನಿನಗೆ ಮೆಚ್ಚಿದೆನು ಒಂದು ವರವ ಬೇಡೆಂದು ಶಿವ ನಿರೂಪಿಸಲಾಗಿ: ಇದೇ ಎನಗೆ ಪರಮಪದ; ಇದನೆ ಕರುಣಿಸೆಂದು ಬೇಡಿಕೊಂಡ ವಿಷ್ವಕ್ಸೇನನ ಶೂಲಾಗ್ರದಲ್ಲಿ ತಳೆದು, ಮುಂದಕ್ಕೆ ಶ್ರೀಕೃಷ್ಣಸ್ವಾಮಿಯ ಅರಮನೆಗೆ ನಡೆದನು.

ಇದು ರಾಜರಾಜನಂತಃಪುರದ ನವನಿಧಿಯ |
ಸದನಂಗಳೋ ದ್ವಾದಶಾದಿತ್ಯರಿಂಗೆ ಮಾ |
ಡಿದ ಪದ್ಮರಾಗದ ಗೃಹಂಗಳೋ ಮೇಣು ಸುರಪತಿಗಿಂದ್ರನೀಲದಿಂದ ||
ಒದವಿಸಿದ ನಿಳಯಂಗಳೋ ಎನಲ್ಕಧಿಕಸಂ |
ಪದದಿಂ ಪ್ರಕಾಶದಿಂ ಸೌಭಾಗ್ಯದಿಂದಲಾ |
ಮದನಹರನಯನಕ್ಕೆ[3]ಸೊಬಗನುಱೆಬೀಱುತ್ತೆ ಕೃಷ್ಣನರಮನೆಯೆಸೆದುದು[3] ||

ಪಾ—1. ವಕ್ರಿಸಲು. 2. ಮುಡಿಯುಂ. 3. ಸೊಗಸಂಬೀರೆ ಕೃಷ್ಣನರಮನೆಗಳಿಱೆ ರಾಜಿಸಿದುವು.

ಟೀಕು – ಕೇಳಿರೈ, ಎಲೆ ಮುನಿಗಳಿರಾ! ಈಶ್ವರನು ಈಪ್ರಕಾರದಲ್ಲಿ ಶ್ರೀಮಹಾ ವಿಷ್ಣುವಿನ ಅರಮನೆಗೆ ಬರುತಿರ್ಪಲ್ಲಿ, ಅದು ಆವ ಪ್ರಕಾರದಲ್ಲಿ ಒಪ್ಪಿದ್ದಿತು? ಎಂದರೆ—ಇದು ರಾಜರಾಜನಂತಃಪುರದ ನವನಿಧಿಯ ಸದನಂಗಳೋ = ಕುಬೇರನರಮನೆಯಲ್ಲಿ ನವನಿಧಿಗಳಿಪ್ಪ ಮನೆಗಳೋ ಎಂಬ ಹಾಗೆ ಇದ್ದಿತು. ದ್ವಾದಶಾದಿತ್ಯರುಗಳಿಹುದಕ್ಕೆ ಮಾಡಿದ ಪದ್ಮರಾಗರತ್ನಂಗಳ ಮನೆಗಳೋ ಎಂಬ ಮರ್ಯಾದೆಯಿಂದ, ದೇವೇಂದ್ರಂಗೆ ನಿರ್ಮಿಸಿದ ಇಂದ್ರನೀಲದ ಗೃಹಂಗಳೋ ಎಂಬ ಮರ್ಯಾದೆಯಲ್ಲಿ, ನವನಿಧಿಗಳಿಂದೊಪ್ಪುವ ಸಂಪತ್ತಿನಿಂದಲೂ ನವರತ್ನಂಗಳ ಕಾಂತಿಯಿಂದಲೂ ಸತಿಯರಿಂದೊಪ್ಪುವ ಸೌಭಾಗ್ಯದಿಂದಲೂ ಶ್ರೀಕೃಷ್ಣನ ಅರಮನೆಯೊಳಗಣ ಪ್ರಾಕಾರ ಹರ್ಮ್ಯಸೌಧಂಗಳಿಂದೊಪ್ಪುವ ಮನೆಗಳಂ ನೋಡುತ್ತ ಶಿವನು ನಡೆತರುತಿರ್ದನು.

ಘನತಿಮಿರರಾಜನೆಂಬನ ಪಾಳೆಯವ ನೋಡ |
ಲೆನುತ ನಡೆತಂದಿನನ ಜೇಹುಕಾಜರೋ ಮೇಣ |
ವನಿವಳಯಮಂ ಪರಕಲಿಸಿ ಹಬ್ಬಿದ ಚಂದ್ರಿಕಾ[1]ಲತಿಕೆತಾಂ[1]ಹೂತುದೋ ||
ತನತನಗೆ ಗೃಹಗೃಹಂಗಳ ಲಕ್ಷ್ಮಿಯರುಗಳೀ |
ಶನು ಬರಲು ಪಿಡಿದು ನಿಂದಾರತಿಗಳೋ ಇವೆಂ | [ದುವು ||೬||
ದೆಸೆಯರಮನೆಯ [2]ಗೋಪವನಿತೆಯರುಗಳ ಸಾಲಮನೆಯ ಸೊಡರುಗಳೆಸೆ

ಟೀಕು—ಕೇಳಿರೈ, ಎಲೈ ಮುನಿಗಳಿರಾ! ಆ ಪರಮೇಶ್ವರನು ಪುರುಷೋತ್ತಮನ ಅಂತಃಪುರದಲ್ಲಿ ಸಾಲುಮನೆಗಳ ಮುಂಗಡೆಯಲ್ಲಿ ಹೊತ್ತಿಸಿದ ದೀಪಂಗಳು ಆವ ಪ್ರಕಾರದಲ್ಲಿ ಒಪ್ಪಿದುವು? ಎಂದರೆ—ಘನತಿಮಿರರಾಜನೆಂಬನ ಪಾಳೆಯವ ನೋಡಲೆಂದೆನುತ ನಡೆತಂದ ಸೂರ್ಯನ ಕಿರಣಗಳೆಂಬ ಜೇಹುಕಾಜರೋ ಎಂಬ ಹಾಗೆ ಇದ್ದುವು. ಮೇಣು = ಅದು ಅಲ್ಲದೆ, ಅವನಿವಳಯಮಂ ಪರಕಲಿಸಿ = ಭೂಮಿಯ ಅಗಲದಲ್ಲಿ ಹಬ್ಬಿದ, ಚಂದ್ರಿಕಾಲತಿಕೆ ತಾಂ ಹೂತುದೋ = ಬೆಳುದಿಂಗಳೆಂಬ ಲತೆ ತಾನೆ ಪುಷ್ಪಂಗಳಾಯಿತೋ ಎಂಬ ಹಾಗೂ ಇದ್ದುವು. ತಮತಮಗೆ ಆಗೃಹಂಗಳಲ್ಲಿ ಇದ್ದ ಲಕ್ಷ್ಮಿಯರು ಶಿವನು ಬರಲಾಗಿ ಆರತಿಗಳಂ ಹಿಡಿದು ನಿಂದರೋ ಎಂಬ ಹಾಗೆ ಇದ್ದ ಆ ಅರಮನೆಯ ಗೋಪವನಿತೆಯರ ಸಾಲುಮನೆಗಳಲ್ಲಿ ಬೆಳಗುವ ದೀಪಂಗಳ ಸಮೂಹಂಗಳಂ ನೋಡುತ್ತ ಮಹಾದೇವನು ನಡೆತರುತಿರ್ದನು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಪೌರಾಣಿಕನು ಪೇಳುತಿರ್ದನು.

ಗೋಪಾಲಕೃಷ್ಣನರಸಿಯರು ಷೋಡಶಸಹಸ್ರ |
ಗೋಪಾಂಗನೆಯರ ಮನೆಮನೆಯ ಮುಂದೊಬ್ಬೊಬ್ಬ |
ತಾಪಸೋತ್ತಮನಾಗಿ[3] ಭಿಕ್ಷವಂ ಬೇಡುತ್ತೆ ನೋಡುತ್ತೆ ವಿಶ್ವಮಯನು ||

ಪಾ—1. ಲತಾವಳಿ. 2. ಸೊಡರು ಕನ್ನೆಯುಲಭವಂ ನೋಡ. ತೃತರಲು ರಾಜಿಸಿದುವು.
3. ಭಿಕ್ಷಾ ಭಿಕ್ಷಾ ಎಂದು ಬೇಡುತಿರೆ.

ಅಪ್ಪೊತ್ತು ತತ್ತದ್ಗೃಹಂಗಳೊಳಗೆಡೆವಿಡದೆ ।
[1]ಶ್ರೀಪರಮಪುರುಷೋತ್ತಮಂ ಅವರವರಿಗಿಸಿತು[1] ।
ರೂಪಾಗಿ ಸತಿಯರೊಳು [2]ವ್ಯಾಪಾರಿಸುತ್ತಿರ್ದ ಬಗೆಯನೇವಣ್ಣಿಸುವೆನು ॥

ಟೀಕು – ಕೇಳಿರೈ, ಎಲೆ ಮುನಿಗಳಿರಾ! ಆಪರಮೇಶ್ವರನು ಆಅರಮನೆಯ ಹೊಕ್ಕು ಬಂದು, ಆಗೋಪಾಲಕೃಷ್ಣನರಸಿಯರು ಷೋಡಶಸಹಸ್ರ = ಆಗೋಪಾಲಕೃಷ್ಣನ ವರಸ್ತ್ರೀಯರು ಹದಿನಾಱುಸಾವಿರ, ಒಬ್ಬೊಬ್ಬ ಸ್ತ್ರೀಯರುಗಳಿಗೆ ಒಂದೊಂದು ಮನೆ, ಆಮನೆಮನೆಯ ಮುಂದೆ ಮನೆಮನೆದಪ್ಪದೆ ಒಬ್ಬೊಬ್ಬ ತಾಪಸೋತ್ತಮನಾಗಿ, ಭಿಕ್ಷವಂ ಬೇಡುತ್ತ, ವಿಶ್ವಮಯನಾದ ಶಿವನು ಶ್ರೀ ಕೃಷ್ಣನ ವಿನೋದವ ನೋಡುತ್ತ, ಗೃಹಗೃಹಂಗಳಲ್ಲಿ ನೋಡುವಲ್ಲಿ—ಆವಾಗಲೂ ಆಪುರುಷೋತ್ತಮನು ಹದಿನಾಱುಸಾವಿರ ಸ್ತ್ರೀಯರುಗಳ ಮನೆಗಳಲ್ಲಿಯೂ ಬೇಱೆ ಬೇಱೆ ರೂಪಾಗಿ ವ್ಯಾಪಾರಿಸುತಿದ್ದ ಬಗೆಯನು ಏನೆಂದು ಬಣ್ಣಿಸಲಿ ಮುನಿಗಳಿರಾ! ಎಂದು ಸೂತಮುನೀಶ್ವರನು ಪೇೞುತಿರ್ದಾನು.

ಒರ್ವಳೊಳ್ ಸಂಗೀತಮಂ ಕೇಳುತಿರ್ಪ ಮ ।
ತ್ತೊರ್ವಳೊಳ್ ಸಾಹಿತ್ಯಗೋಷ್ಠಿಯಿಂದಿರುತಿರ್ಪ ।
ನೊರ್ವಳೊಳ್ ಪೂರ್ವಪೂರ್ವಕಥಾಪ್ರಸಂಗಂಗಳಿಂ ಪೊತ್ತುಗಳೆಯುತಿರ್ಪಂ
ಒರ್ವಳೊಳ್ ಪೌರಾಣಮಂ ಪೇೞುತಿರ್ಪ ಬೞಿ ।
ಕೊರ್ವಳೊಳ್ ನವ್ಯಕಾವ್ಯವನುಸಿರುತಿರ್ಪನಿಂ ।
ತೊರ್ವಳೊಳಗಲ್ಲಿಗಲ್ಲಿಗೆ ಮೇಲುಮನೆಗಳೊಳಗಿರುತಿರ್ದನಾಕೃಷ್ಣನು ॥೮॥

ಟೀಕು—ಕೇಳಿರೈ, ಎಲೈ ಮುನಿಗಳಿರಾ! ಆ ಪರಮೇಶ್ವರನು ಹದಿನಾಱುಸಾವಿರ ಗೋಪಾಂಗನೆಯರ ಮನೆಯ ಮುಂದೆ ತಾನು ಹದಿನಾಱುಸಾವಿರ ರೂಪಿನಿಂದ ಭಿಕ್ಷಮಂ ಬೇಡುತ್ತ ನೋಡುವಲ್ಲಿ, ಆ ಪರಮಮೂರ್ತಿ ಶ್ರೀಕೃಷ್ಣನು ಗೋಪಿಯರುಗಳ ಕೂಡೆ ಆವ ಪ್ರಕಾರದ ವಿನೋದದಿಂದೊಪ್ಪಿದನು? ಎಂದರೆ—ಒರ್ವಳೊಳ್ ಸಂಗೀತಮಂ ಕೇಳುತಿರ್ಪ = ಒಬ್ಬಳ ಮನೆಯಲ್ಲಿ ದಿವ್ಯಗಾನವಂ ಹಾಡಿಸಿ ಕೇಳಿ ಪರಿಣಾಮಿಸುತ್ತಿರ್ಪ; ಮತ್ತೊರ್ವಳೊಳ್ ಸಾಹಿತ್ಯಗೋಷ್ಠಿಯಿಂದಿರುತಿರ್ಪ = ಮತ್ತೊರ್ವಳ ಕೂಡೆ ಶಬ್ದ ತರ್ಕ ಮೊದಲಾದ ಸಾಹಿತ್ಯಗೋಷ್ಠಿಯಿಂದಿರುತಿರ್ಪ; ಒರ್ವಳೊಳ್ **ಪೂ**ರ್ವಪೂರ್ವ ಕಥಾಪ್ರಸಂಗಂಗಳಿಂ = ಮತ್ತೊರ್ವಳ ಕೂಡೆ ಪೂರ್ವವಾದ ಕ್ಷೇಮೇಂದ್ರಿಯವೇ† ಮೊದಲಾದ ಪೂರ್ವ ಕಥೆಗಳಿಂ ಹೊತ್ತು

ಪಾ—1. ಶ್ರೀಪತಿ ಪುರುಷೋತ್ತಮನವರವರಿಗೆಸಿತನಿತು. 2. ವ್ಯವಹರಿ.

† ವ್ಯಾಖ್ಯಾನ = ಕ್ಷೇಮೇಂದ್ರನೆಂಬ ಕಾಶ್ಮೀರಖಂಡದ ಒಬ್ಬ ಪ್ರಾಚೀನನಾದ ಪ್ರಸಿದ್ಧಕವಿಯು ಮಾಡಿದ ಕಾವ್ಯಗಳು.

ಗಳೆಯುತಿರ್ಪ; ಮತ್ತೊರ್ವಳ ಕೂಡೆ ಪೌರಾಣವಮಂ ಪೇಳುತಿರ್ಪ= ಸರ್ಗ, ಪ್ರತಿಸರ್ಗ, ವಂಶ, ಮನ್ವಂತರ, ವಂಶಾನುಚರಿತವೆಂಬ ಪುರಾಣವಮಂ ಪಂಚಲಕ್ಷಣಗಳಿಂ ಒಬ್ಬಳೊಳು ಹೇಳುತಿರ್ಪ; ಒರ್ವಳೊಳ್ ನವ್ಯಕಾವ್ಯವನುಸಿರುತಿರ್ಪ= ಮತ್ತೊರ್ವಳೊಡನೆ ನವ್ಯಕಾವ್ಯ ರಸ ಗೀತಿ ಉಪಮೆ ಉತ್ಪ್ರೇಕ್ಷೆ ಮೊದಲಾದುವಂ ಹೇಳುತ್ತ, ಈ ಪ್ರಕಾರದಲ್ಲಿ ಮನೆಮನೆದಪ್ಪದೆ ಶ್ರೀಕೃಷ್ಣನು ಇರುತ್ತಿರ್ದನು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತ್ತಿರ್ದಾನು.

ಭರತ ನಾಟಕ ಮದನಶಾಸ್ತ್ರ ಕವಿತಾರಚನೆ ।
ಪಿರಿದೆನಿಪ ಚೌಷಷ್ಟಿವಿದ್ಯಾಕಳಾಪ್ರೌಢಿ ।
ಸ್ವರಮಂಡಲಂ ರುದ್ರವೀಣೆ ಕಿನ್ನರಿ ಜಂತ್ರ ಚದುರಂಗ ನೆತ್ತ ಪಗಡೆ ॥
ಪರಿಪರಿಯ ಪೆಸರಿನಿಂದೆಸೆವ ನಾನಾ ಜೂಜು ।
ಧರೆಯೊಳಿವು ಮೊದಲಾದ ಸರಸಸಮ್ಮೇಳದಿಂ ।
ತರುಣಿಯರ ಮನೆಮನೆಯೊಳವರಿಚ್ಛೆಯಂ ಸಲಿಸುತಿರ್ದನಾಶ್ರೀಕೃಷ್ಣನು॥೯॥

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಆ ಪುರುಷೋತ್ತಮನು ಒರ್ವಳಿಗೆ ಮಂಡಲದೃಷ್ಟಿ, ಹಾವ, ಭಾವ, ರೇಖೆ ಮೊದಲಾದ ಭರತಶಾಸ್ತ್ರವ ಹೇಳುತಿರ್ಪನು; ಮತ್ತೊರ್ವಳ ಕೂಡೆ ಶಾಕುಂತಳ, ಪ್ರಬೋಧ ಚಂದ್ರೋದಯ ಮೊದಲಾದ ನಾಟಕಶಾಸ್ತ್ರವ ಹೇಳುತಿರ್ಪನು; ಮತ್ತೊಬ್ಬಳ ಕೂಡೆ ನಾಯಕನಾಯಕೀಭೇದ, ಆಲಿಂಗನ, ಚುಂಬನ, ಬಂಧ, ರತಿ ಮೊದಲಾದ ಷೋಡಶಕಲೆಯಿಂದೊಪ್ಪುವ ಮದನಶಾಸ್ತ್ರವ ಹೇಳುವನು; ಮತ್ತೊಬ್ಬಳ ಕೂಡೆ ಛಂದಸ್ಸು, ಗಣನಿಯಮ, ರೀತಿ, ಪಾಕ, ದಶಪ್ರಾಣ ಮೊದಲಾದ ಕವಿರಚನೆಯನು ಹೇಳುವನು; ಮತ್ತೊಬ್ಬಳ ಕೂಡೆ ದೂರದೃಷ್ಟಿ, ದೂರಶ್ರವಣ, ಪರಕಾಯಪ್ರವೇಶ, ಅಂಜನಸಿದ್ಧಿ, ಘುಟಿಕಾಸಿದ್ಧಿ, ಅಗ್ನಿಸ್ತಂಭನ ಮೊದಲಾದ ಚೌಷಷ್ಟಿವಿದ್ಯಾಕಲಾಪ್ರೌಢಿಯ ತೋರುವನು; ಮತ್ತೊಬ್ಬಳೊಡನೆ ಸ್ವರಮಂಡಲವ ನುಡಿಸುವ; ಒಬ್ಬಳೊಡನೆ ರುದ್ರವೀಣೆಯ ಬಾರಿಸುವ; ಒಬ್ಬಳೊಡನೆ ಕಿನ್ನರಿಯ ನುಡಿಸುವ; ಒಬ್ಬೊಳೊಡನೆ ಜಂತ್ರಪ್ರತಿಮೆಯ ನಾಡಿಸುವ; ಒಂದೆಡೆಯಲ್ಲಿ ಚದುರಂಗಗಳನಾಡುವ; ಒಬ್ಬಳೆಡೆಯಲ್ಲಿ ನೆತ್ತಗಳನಾಡುವ; ಒಬ್ಬಳೊಡನೆ ಪಗಡೆಗಳನಾಡುವ; ಉಳಿದ ಸತಿಯರೊಳಗೆ ನಾನಾ ತೆರದ ಜೂಜು ಸರಸಸಮ್ಮೇಳನದಿಂದ ಇರುವ. ಈ ರೀತಿಯಲ್ಲಿ ತರುಣಿಯರ ಮನೆಮನೆಗಳಲ್ಲಿ ಅವರವರಿಚ್ಛೆಯ ಸಲಿಸುತ್ತ ಶ್ರೀಕೃಷ್ಣನು ಇರುತಿರ್ದನು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಪೇಳುತಿರ್ದಾನು.

ನುಡಿಯ ಬಾರದ ಮುನಿಸು ನೋಡಬಾರದ ಕೋಪ ।
ಪೊಡಗೂಡಬಾರದೆಂದೆಂಬ ಚಲವಿಡಿದೊರ್ವ ।
ಮಡದಿ ಗೋಪಾಲರಾಯನೊಳತಿಪ್ರಣಯಕಳಹದಿನಿರ್ದಲ್ಲಾಕ್ಷಣದಲಿ ॥

ತಡೆಯುದಾಪತಿ ಸೀನಲೊಡನೆ ಹಱಸಲು ಮುನಿಸು |
ಕೆಡುಗೆಂದು ಕರ್ಣಪತ್ರವ ಮುಟ್ಟಿಯುಮೆಯ ನೆನೆ |
ದೊಡೆ ಮೆಚ್ಚಿ ಕಾಲ್ಗೆಱಗಿ ತಿಳಿಪಿಯವಳಂ ನೆರೆವನೊಂದೆಡೆಯೊಳಾಕೃಷ್ಣನು||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಮತ್ತೊಂದೆಡೆಯಲ್ಲಿ ಒಬ್ಬ ಗೋಪಾಲಸ್ತ್ರೀಯು ಆವ ಪ್ರಕಾರದಲ್ಲಿ ಇದ್ದಳು ? ಎಂದರೆ—ನುಡಿಯ ಬಾರದ ಮುನಿಸು=ನುಡಿದುದೇ ಉಂಟಾದರೆ ನಾಯಕನು ತಪಿಸನು ಎಂದು ಮಾತನಾಡದಿರುವ ಮುನಿಸು; ನೋಡಿದುದೇ ಉಂಟಾದರೆ ಈತನು ಸಮೀಪಕ್ಕೆ ಬಂದಾನು ಎಂದು ನೋಡಬಾರದ ಕೋಪ; ಸಮೀಪಕ್ಕೆ ಬಂದು ಒಳ್ಳಿತಾದ ಮಾತನಾಡಿದರೆ, ಇವನ ಕೂಡೆ ನುಡಿಯೆನು, ಇವನ ನೋಡೆನು, ಇವನೊಡಗೂಡಬಾರದು ಎಂದು ಛಲದಿಂದ ಒಬ್ಬ ಗೋಪಾಂಗನೆ ಪ್ರಣಯಕಲಹದಿಂದ ಗೋಪಾಲರಾಯನ ಕೂಡೆ ಮುನಿದಿರಲಾಕ್ಷಣದಲ್ಲಿ; ತಡೆಯುದಾಪತಿ ಸೀನೆ=ತನ್ನ ಪ್ರಾಣಕಾಂತನು ಅಷ್ಟಱೊಳಗೆ ಸೀನಲು; ಸೀನುತ್ತಲೆ ಹಱಸಿದುದೇ ಉಂಟಾದರೆ ತನ್ನ ಮುನಿಸು ಕೆಟ್ಟೀತು, ಎಂದು ಕರ್ಣಪತ್ರವ ಮುಟ್ಟಿ ಉಮೆಯ ನೆನೆಯಲು; ಪತಿಯು ಮೆಚ್ಚಿ=ಮಾತನಾಡದೆ ಹಱಸಿದ ಬಗೆಗೆ ಮೆಚ್ಚಿದನು. ಅದು ಹೇಗೆ ? ಎಂದರೆ—ಪಾರ್ವತಿಯ ನೆನೆದು ತನ್ನ ಓಲೆಯ ಮುಟ್ಟಕೊಂಡ ಭಾವ—ಎಲೌ ದೇವಿಯರೇ! ನಿನ್ನ ಹಾಗೆ ಎನಗೆ ಮುತ್ತೈದೆತನವನು ಕೊಡು ಎಂಬ ಭಾವವು—ನಾಯಕನ ನಿತ್ಯನಾಗಿರು ಎಂದು ಹಱಸಿದಹಾಗಾಗಲಾಗಿ, ಮೆಚ್ಚಿ; ಅವಳ ಕಾಲ್ಗೆಱಗಿ, ಮುನಿಸ ತಿಳುಹಿ, ಆಲಿಂಗಿಸಿ, ಅವಳ ಕೂಡಿ, ಶ್ರೀಕೃಷ್ಣನು ಸುಖದಿಂದಿರುತಿದ್ದನು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಪೇಳುತಿರ್ದಾನು.

ಒಂದೆಡೆಯೊಳೊರ್ವ ಗೋಪಾಲಸತಿ ಕುಳಿತು ಗೋ |
ವಿಂದನಂಗಪ್ರಭೆಯೊಳಗೆ ತನ್ನ ಕಂಡನ್ಯ |
ಳೆಂದು ರಮಣನೊಳು ಸೊಲ್ಲಿಸುವ ಸಲ್ಲಾಪನುಂ ಕೇಳಿ ಕಂಬನಿದುಂಬತ ||
ನೊಂದ ಮಾನಿನಿಯ ಬಗೆಯಱಿದು ನಸುನಗುತ ಕರ |
ದಿಂದ ಬರಸೆಳೆದಪ್ಪಿ ತಿಳುಹಿ ನಾನಾ[1] ವಿನಯ |
ದಿಂದ ಮುಸಗೊಳಿಸುತ್ತೆ ನೆರೆದು ಮನ್ನಿಸಿದನವನೇಂ ವಿದಗ್ಧರ ದೇವನೋ[1] ||

ಟೀಕು—ಕೇಳಿರೈ, ಎಲೈ ಮುನಿಗಳಿರಾ! ಮತ್ತೊಂದೆಡೆಯಲ್ಲಿ ಒರ್ವ ಗೋಪಾಂಗನೆ ತನ್ನ ಪ್ರಾಣಕಾಂತನಾದ ಗೋವಿಂದಸ್ವಾಮಿಯ ಸನ್ನಿಧಾನದಲ್ಲಿ ಕುಳಿತು ಅತಿಪ್ರೀತಿಯಿಂದ ನೋಡುವಲ್ಲಿ, ಆತನ ಹೊಳೆವ ಅಂಗಪ್ರಭೆಯಲ್ಲಿ ತನ್ನ ರೂಪು ಪ್ರತಿಬಿಂಬಿಸಲಾಗಿ, ಕಂಡು, ತನ್ನ ವಂಚಿಸಿ ಶರೀರದಲ್ಲಿ ಮತ್ತೊಬ್ಬಳನಿರಿಸಿಕೊಂಡಿದ್ದಾನೆ

ಪಾ—1. ಚಿತ್ರಬಂಧನಗಳನಱುಹಿ ಮುಗ್ಧೆಯ ನೆರೆದನು ಮಹಾನಂದದಿಂದಾಕೃಷ್ಣನು.

ಎಂದು ರಮಣನ ಕೂಡೆ ಆಡುತಿರ್ದ ಸರಸವಂ ಬಿಟ್ಟು ಕೋಪದಿಂದ ಕಂಬನಿದುಂಬಿ ದುಃಖಿತೆಯಾಗಲಾಗಿ ನೊಂದ ಮಾನಿನಿಯು ಬಗೆಯುಱಿದು ನಸುನಗುತ, ಇವಳಿಗೆ ಅಂಗಚ್ಛಾಯೆ ಕಾಣಬಾರದು ಎಂದು ಬರಸೆಳೆದಪ್ಪಿ, ಇಲ್ಲಿ ಆರೂ ಇಲ್ಲ ಎಂದು ತಿಳುಹಿ, ನಾನಾಪ್ರಕಾರವಾದ ವಿನಯದಿಂದ ಮುಗ್ಧೆಯುಳ ಮುನಿಸ ತಿಳುಹಿ, ಅವಳ ನೆರೆದು, ವಿದಗ್ಧರ ದೇವನಾದ ನಾರಾಯಣಸ್ವಾಮಿ ಈ ಪ್ರಕಾರದಲ್ಲಿ ಒಪ್ಪಿದನು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಪೇಳುತ್ತಿರ್ದಾನು.

ಬಳಿಕ ಮುಂದೊಂದು ಮಣಿಮಯದ ಗೃಹದೋಲಗದ |
ಲಲನೆಯರುಗಳಿಗೆಲ್ಲ ವೀಳೆಯಂಗುಡು[1]ತವರೊ |
ಳೆಲೆಯು[1] ಕೆಲಬರಿಗೆ ಮಿಗಿಲಾಗಿ ಕೆಲಬರಿಗೆಯತಿಪೂಗಮಂ ಮಿಶ್ರವಾಗಿ ||
ಕೆಲಬರಿಗೆ ಚೂರ್ಣಮಂ ಮಿಗಿಲಾಗಿ ಕೆಲಬರಿಗೆ |
ಯೆಲೆಯಡಕೆ ಚೂರ್ಣಮಂ ಸಮನಾಗಿ ಕುಡಲು ಗೋ |
ಪಾಳರಾಯನವನೀಶ್ವರಂನೋಡಿಮೆಚ್ಚಿದನದೇಂ ಜಾತಿಭಾವಜ್ಞನೋ ||೧೦||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಬಱಿಕ ಮತ್ತೊಂದು ಠಾವಿನಲ್ಲಿ ನವರತ್ನ ಖಚಿತವಾದ ಗೃಹಾಂತರದಲ್ಲಿ ಓಲಗದ ಸತಿಯರುಗಳಿಗೆ ಶ್ರೀಲಕ್ಷ್ಮೀಪತಿಯು ವೀಳೆಯಂಗಳಂ ಕುಡುವ ಸಮಯದಲ್ಲಿ—ಕೆಲಬರು ಸ್ತ್ರೀಯರುಗಳಿಗೆ ಎಲೆಯನೇ ಬಹಳವಾಗಿ ಕೊಟ್ಟು ಅಡಕೆ ಸುಣ್ಣವನು ಅಲ್ಪವಾಗಿ ಕೊಟ್ಟು, ಕೆಲವರಿಗೆ ಅಡಕೆಯನೇ ವಿಶೇಷವಾಗಿ ಕೊಟ್ಟು ಎಲೆ ಸುಣ್ಣಗಳ ಕಡಮೆಯಾಗಿ ಕೊಟ್ಟು, ಕೆಲಬರಿಗೆ ಸುಣ್ಣವ ವಿಶೇಷವಾಗಿ ಕೊಟ್ಟು ಅಡಕೆಯೆಲೆಯಃ ಕಡಮೆಯಾಗಿ ಕೊಟ್ಟು, ಕೆಲಬರಿಗೆ ಎಲೆಯಡಕೆ ಸುಣ್ಣವ ಸಮಾನವಾಗಿ ಕೊಟ್ಟು ಗೋಪಾಲರಾಯನಾದ ಶ್ರೀಕೃಷ್ಣನು ಈ ಪ್ರಕಾರದಲ್ಲಿ ವೀಳೆಯಂಗಳನು ಸ್ತ್ರೀಯರಿಗೆ ಕುಡುವುದನು ನೋಡಿ—ಈಶ್ವರನು ಮೆಚ್ಚಿದನು. ಶಿವನೇಂ ಭಾವಜ್ಞನೋ! ಎಂದು ನುಡಿವ ಚಾತುರ್ಯವೇನು? ಎಂದರೆ—ಎಲೆ ಬ್ರಹ್ಮನಿಗೆ ಪ್ರಿಯವಾದುದು; ಅಡಕೆ ವಿಷ್ಣುವಿಗೆ ಪ್ರಿಯವಾದುದು; ಸುಣ್ಣ ರುದ್ರನಿಗೆ ಪ್ರಿಯವಾದುದು. ಅದಱಿಂದ ಎಲೆಗೊಟ್ಟದು ಬ್ರಹ್ಮಪ್ರಿಯವಾದುದಱಿಂದ ಆ ಬ್ರಹ್ಮನು ಶಾರದಾಪ್ರೀತನಾದ ಕಾರಣವಾಗಿ ಅವಳಿಗೆ ಸಂತಸವಂ ಮಾಡಿ, ಅಡಕೆಯು ವಿಷ್ಣುವಿಗೆ ಪ್ರಿಯವಾದುದಱಿಂದ ಲಕ್ಷ್ಮೀದೇವಿಯನು ಹೃದಯದೊಳಿಟ್ಟ ಮರ್ಯಾದೆಯಿಂದ ಅವಳಿಗೆ ಸಂತಸವಂ ಮಾಡಿ; ಸುಣ್ಣವ ಕೊಟ್ಟವಳಿಗೆ ಶಿವನು ಅರ್ಧನಾರೀಶ್ವರನೆಂಬ ಭಾವದಿಂದ ಅವಳಿಗೆ ಸಂತಸವಂ ಮಾಡಿ; ಅಡಕೆಯೆಲೆ ಸುಣ್ಣವ ಸಮವಾಗಿ ಕೊಟ್ಟ ಸ್ತ್ರೀಯರುಗಳಿಗೆ ರತಿತ್ರಯಂಗಳಿಂದ ನಿಮ್ಮೊಳು ನೆರೆದಪೆನೆಂಬ ಭಾವದಿಂದ ಆ ಸತಿಯರಿಗೆ ಸಂತಸಂಬಡಿಸಿ, ಎಲ್ಲರ ಚಿತ್ತಕ್ಕೂ ಕವಲು ಹುಟ್ಟದೆ

ಪಾ—1. ತಲವನೆಲೆಯು. 2. ಕೆಲಕೆಲಬರಿಗೆ ಪೂಗಮಂ.

ಪರಿಣಾಮಿಸುವ ಮರ್ಯಾದೆಯಲ್ಲಿ ದಕ್ಷಿಣಾಧೀಶ್ವರನಾದ (?) ನಾರಾಯಣಸ್ವಾಮಿ ಸ್ತ್ರೀಯರ ಮನ್ನಿಸುವುದ ಕಂಡು ಜಾತಿಭಾವಜ್ಞನಾದ ಶಿವನು ಮೆಚ್ಚಿ ನಗುತಿರ್ದನು ಕಾಣಿರೈ, ಎಲೆ ಮುನಿಗಳಿರಾ ! ಎಂದು ಸೂತಮುನೀಶ್ವರನು ಹೇಳುತಿರ್ದಾನು.

ತರುಣಿಯರು [1]ಮೂವರೇಕಾಸನದೊಳಿರಲಾಗಿ[1] |
ಪುರುಷೋತ್ತಮಂ ನಗುತ ಲೀಲಾವಿನೋದದಿಂ |
ತರಳೆಯೊರ್ವಳ ಹಾರಮಂ ಹರಿಯೆ ಬಿದ್ದ ಮಣಿಗಳನಾಯುತಿರಲೊರ್ವಳಾ
ಸರಸನೆವದಿಂ ಕಣ್ಣ ಮುಚ್ಚುತುಂ ಮತ್ತೊರ್ವ |
ಸರಸಿಜಾಕ್ಷಿಯ ಕಳಾಧರವ ಚುಂಬಿಸಿ [2]ಮನವ ‖ [ದನು ‖೧೩‖
ಹರುಷವೆಯ್ದಿಸಿ[2] ತನ್ನ ಧೂರ್ತನಾಯಕನಾದ ಪರಿಯನವರೊಳು ಮೆರೆ[3]

†ಟೀಕು—.................

ಸಂವತ್ಸರಾವೇಶಿಯಾದ ಗೋಪಾಂಗನೆಯು |
ಸಂವತ್ಸರವ ನೋಡಿ ಸಂವತ್ಸರವನರಿದು |
ಸಂವತ್ಸರಾರಿ ನೆರೆಯಲ್ಕೆ ಸಂವತ್ಸರೆಯುದಾಗಿ ಸಂವತ್ಸರದಲಿ ‖
ಸಂವತ್ಸರದ ವೀಣೆಯಂ [3]ಗೀತಜಾತಿಯಿಂ[3] |
ಸಂವತ್ಸರವನುಂಟುಮಾಡಿ ನುಡಿಸುತ ಪಾಡಿ |
ಸಂವತ್ಸರನ ಜಡೆಮುಡಿಬಿನ ಸಂವತ್ಸರೇಶ್ವರನ ಲಾಂಛನವ ಸೆಳೆಕೊಂಡಳು ‖

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಮತ್ತೊಂದೆಡೆಯಲ್ಲಿ ಆ ದೇವಕೀನಂದನನಾದ ಶ್ರೀಗೋಪಾಲಕೃಷ್ಣನು ಸಂವತ್ಸರಾವೇಶಿಯಾದ ಗೋಪಾಂಗನೆಯು = ಸಂವತ್ಸರವೆಂದರೆ—ಮನ್ಮಥಸಂವತ್ಸರ, ಮನ್ಮಥಾವೇಶಿಯಾದ ಗೋಪಾಂಗನೆಯು ; ಸಂವತ್ಸರವ ನೋಡಿ = ಸಂವತ್ಸರವೆಂದರೆ ಶ್ರೀಮುಖ, ಅವಳ ಮುಖವ ನೋಡಿ ; ಸಂವತ್ಸರವನರಿದು = ಸಂವತ್ಸರವೆಂದರೆ ಭಾವಸಂವತ್ಸರ, ಅವಳ ಭಾವವನರಿದು ; ಸಂವತ್ಸರಾರಿ = ಸಂವತ್ಸರವೆಂದರೆ ರಾಕ್ಷಸಸಂವತ್ಸರ, ರಾಕ್ಷಸರುಗಳಿಗೆ, ಅರಿ-ವೈರಿಯಾದ ಶ್ರೀಕೃಷ್ಣನು ; ನೆರೆಯಲ್ಕೆ ; ಸಂವತ್ಸರೆಯುದಾಗಿ = ಸಂವತ್ಸರವೆಂದರೆ ಶುಕ್ಲಸಂವತ್ಸರವನುಳ್ಳವಳಾಗಿ; ಸಂವತ್ಸರದಲಿ = ಸಂವತ್ಸರವೆಂದರೆ ಆನಂದಸಂವತ್ಸರ,

---

ಪಾ—1. ಮೂವರೊಂದೇಮನೆಯೊಳಿರುತಿರಲು.

2. ಮನೋಹರುಷವೇದಿಸಿ ತನ್ನ ಧೂರ್ತನವಮಾಡಿ ನುಡಿದ....

3. ಗೀತಜಾತ್ಯೆಯುಂ.

†ಈ ಪದ್ಯದ ವ್ಯಾಖ್ಯಾನವು ಎರಡುಪ್ರತಿಯಲ್ಲಿಯೂ ಪಾತವಾಗಿದೆ. ಪದ್ಯಾಭಿಪ್ರಾಯ ಸ್ಪಷ್ಟ.

ಆಸಂದದಲ್ಲಿ; ಸಂವತ್ಸರದ ವೀಣೆಯಿಂ = ಸಂವತ್ಸರವೆಂದರೆ ರೌದ್ರಿಸಂವತ್ಸರ, ರುದ್ರ ವೀಣೆಯುಂ ಬಾರಿಸುತ್ತ; ಗೀತಜಾತಿಗಳಿಂದ ಸಂವತ್ಸರವನುಂಟುಮಾಡಿ = ಸಂವತ್ಸರವೆಂದರೆ ಸಿದ್ಧಾರ್ಥಿಸಂವತ್ಸರ, ಆಗೀತಂಗಳಲ್ಲಿ ಇದ್ದ ಸಿದ್ಧವಾದ ಅರ್ಥಂಗಳನುಂಟುಮಾಡಿ; ನುಡಿಪಾಡಿ; ಸಂವತ್ಸರನ ಜಡೆದುಱುಜಿನ = ಸಂವತ್ಸರವೆಂದರೆ ಈಶ್ವರ ಸಂವತ್ಸರ, ಆ ಈಶ್ವರನ ಜಡೆದುಱುಜಿನ; ಸಂವತ್ಸರೇಶ್ವರನ = ಸಂವತ್ಸರವೆಂದರೆ ಶಾರ್ವರಿ ಸಂವತ್ಸರ, ಶಾರ್ವರೀಶ್ವರನಾದ ಚಂದ್ರನ; ಲಾಂಛನವ ಸೆಳೆಕೊಂಡಳು = ಆ ನಾರಾಯಣಸ್ವಾಮಿಯು ಕರಾಗ್ರದಿಂದ ಹುಟ್ಟಿದ ನಖಕ್ಷತವೆಂಬ ಚಂದ್ರನ ಸೆಳೆಕೊಂಡಳು. [ಇಂತು] ಕಲೆಯಿಂದಾದವೊಪ್ಪುವ ಸ್ತ್ರೀಯೊಡನೆ ನಾರಾಯಣಸ್ವಾಮಿ ಸುಖಿಸುತ್ತ ಒಪ್ಪಿದನು ಎಂದು ಸೂತಮುನೀಶ್ವರನು ಹೇಳುತ್ತಿದ್ದರ್ನು.

. . . . .ಶ್ರಮವ ನಿವಾರಿಸುವೆನೆಂದೊರ್ವ |
ತರುಣಿ ಮನೆಯಿಂದ ಪೊಱಮಟ್ಟು ಬಾಗಿಲೊಳು ನಿಂ |
ದಿರಲೊಡನೆಯುಪವನದ[2]ಕುಳಿರ್ವ ತಿಳಿಗೊಳದತ್ತಣಿಂ[2]ದಲರ್ದ ಕೈರವಗಳ ||
ಪರಿಮಳವ [3]ಸತ್ಕರಿಸಿ[3] ಪೊತ್ತೊಯ್ಯುನೊಯ್ಯನೈ |
ತರುತ ಮಾರುತನೆಂಬ ಚೋರನದೃಶ್ಯಕರಣ | [ಯ್ದನು || ೧೫ ||
ವೆರಸಿ ಬಂದವಳ [4]ಬೆಮರೆಂಬ ಮುತ್ತಿನ ತೊಡಿಗೆಯಂ[4] ಪರಿದುಕೊಂಡು

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಒಂದೆಡೆಯಲ್ಲಿ ಒಬ್ಬ ಗೋಪಾಲಸ್ತ್ರೀಯು ತನ್ನ ಒಬಲಿಕೆಯ ಪರಿಹರಿಸಿಕೊಂಬೆನೆಂದು ಮನೆಯ ಪೊಱಮಟ್ಟು ಬಾಗಿಲ ಮುಂದೆ ನಿಂದಿರಲೊಡನೆ ಉಪವನದತ್ತಣಿಂದ ತಿಳಿಗೊಳನಲ್ಲಿ ಶೈತ್ಯಮಂ ತುಂಬಿಕೊಂಡು, ಅಲರ್ದ ಕಮಲಕೈರವಂಗಳಲ್ಲಿ ಪರಿಮಳವ ಸತ್ಕರಿಸಿಕೊಂಡು, ಶೈತ್ಯಸೌರಭ್ಯಗಳನು ಕದ್ದು ಹೊತ್ತು ನಡೆಯಲಾಱದ ಮಂದಮಾರುತನೆಂಬ ಚೋರನು ಅದೃಶ್ಯಕರಣದಿಂದ ಬಂದು, ನಾಯಕಿಯ ಬೆಮರೆಂಬ ಮುತ್ತಿನ ಹಾರವ ಹಱಿದು ಕೊಂಡು ಹೋದನೋ ಎಂಬ ಮರ್ಯಾದೆಯಿಂದ ಮಂದ ಮಾರುತವು ತೀಡಿತು ಕಾಣಿರೈ, ಎಲೈ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದರ್ನು.

ನೋಟದಿಂ ನೋಡಿ ಕೆಲಬರಂ ಮರುಳ್ಮಾಡುತುಂ |
ಜೋಟಿಮಂ ಬೀಱಿ[3] ಕೆಲವರ ಕಾಡಿ ನೋಡುತುಂ |
ಕೂಟದ ಕಲಾಪ್ರೌಢಿಯಿಂದೆ ಕೆಲಕೆಲಬರಂ ಸುಖದೊಳೋಲಾಡಿಸುತ್ತುಂ ||

ಪಾ—2. ಸರಸಿಯ ಪೊರೆಯ ತಂಪಿನಿಂ. 3. ತತ್ಕರದಿ.
4. ಮೆಯ್ಬೆಮರ್ವನಿಱು ಮುತ್ತದೊಡವಂ.

ಆಟದಿಂ ಕೆಲಕೆಲಗಿರಿಗಿಂಪ ನೈಗಱೆಯುತುಂ |
ಪಾಠದಿಂ ಕೆಲರಿಗಚ್ಚಿಯನೀಯುತುಂ ಕಪಟ |
ನಾಟಕಂ ಮನೆಮನೆಯೊಳಿರೆ ಪ್ರೊಱಗೆ ವಿಶ್ವನಟನಾಟಕಂ ದನಿದೋಱಿದಂ ||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಆ ಗೋಪಾಲಕೃಷ್ಣ ತನ್ನ ಆರ ಮನೆಯಲ್ಲಿ ಹದಿನಾಱುಸಾವಿರ ಮಂದಿ ಗೋಪಸ್ತ್ರೀಯರನ್ನು, ನೋಟದಿಂದ ಕೆಲಬರಂ ಮರುಳ್ಮಾಡುತುಂ= ನೋಟದ ಮಾತ್ರದಲ್ಲೇ ಕೆಲವರನ್ನು ವಶೀಕರಣವ ಮಾಡುತ್ತ, ಕಿವಿವೇಟ ನುಡಿವೇಟದಿಂದ ಕೆಲ ಸತಿಯರ ಕಾಡಿ ನೋಡುತ್ತ, ಕೂಟದ ಕಲಾಪ್ರೌಢಿಯಿಂದ ಕೆಲ ಸತಿಯರ್ಗೆ ಸುರತಸುಖಸಂಪತ್ತಿನಲ್ಲಿ ಓಲಾಡಿಸುತ್ತ, ನೆತ್ತ ಪಗಡೆ ಚದುರಂಗ ಮೊದಲಾದ ಆಟಗಳಿಂದ ಕೆಲ ಸತಿಯರ್ಗೆ ಸವಿಗಱೆಯುತ್ತ, ಓದು ಹಾಡು ಮೊದಲಾದ ನಾನಾಪ್ರಕಾರವಾದ ವಿನೋದಗಳಿಂದ ಆಶೆಯನೀಯುತ್ತ, ಕಪಟನಾಟಕನಾದ ಗೋಪಾಲಕೃಷ್ಣನು ಈ ಪ್ರಕಾರದಲ್ಲಿ ಮನೆಮನೆದಪ್ಪದೆ ಎಲ್ಲಿ ನೋಡಿದರೂ ತಾನೇ ಇರುತ್ತಿರಲಾಗಿ, ವಿಶ್ವನಾಟಕನಾದ ಮಹಾದೇವನು ಆ ಮನೆಗಳ ಮುಂದೆ ಧ್ವನಿದೋಱಿದನು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದಾನು.

ಶಿವಗೆ ಭಿಕ್ಷಂ ಸದಾಚಾರಭಿಕ್ಷಂ ಸದಾ |
ಶಿವಗೆ ಭಿಕ್ಷಂ ವಿಚಾರದ ಸುವರ್ತನೆಯ ಶಂ |
ಭುವಿಗೆ ಭಿಕ್ಷಂ ವಿನೋಱಿದವಿಚಾರಖರ್ಪರವ ಪಿಡಿದಜಾತಂಗೆ ಭಿಕ್ಷ ||
ಭವಗೇಡಿಯಾಗಿ ಬಯಸದೆ ಬಂದ ಭಿಕ್ಷಮಂ |
ಸವಿದು ಚರಿಪವಧೂತ ಬಂದು ಭಿಕ್ಷಾ ಎಂದ |
ಭವನು ಶ್ರೀಕೃಷ್ಣನರಮನೆಯೊಳಗೆ ಭಿಕ್ಷಾಧ್ವನಿಯನುಚ್ಚರಿಸುತಿರ್ದನು||೧೭

ಟೀಕು—ಕೇಳಿರೈ, ಎಲೆ ಮುನಿಗಳಿರಾ! ವಿಶ್ವನಾಟಕನಾದ ಮಹಾದೇವನು ಮನೆಮನೆಯ ಮುಂದೆ ನಿಂತು ಧ್ವನಿದೋಱುತಿರ್ದನು. ಶಿವಗೆ ಭಿಕ್ಷಂ= ಮಂಗಳಾತ್ಮನಿಗೆ ಭಿಕ್ಷ; ಸದಾಚಾರಭಿಕ್ಷಂ=ಆ ಸದಾಶಿವಗೆ ಭಿಕ್ಷ; ಸದಾಚಾರಭಿಕ್ಷವ ಕೈಕೊಂಬ ಪಾರ್ವತೀಕಾಂತಂಗೆ ಭಿಕ್ಷ; ವಿಚಾರದ ಸುವರ್ತನೆಯ ಶಂಭುವಿಗೆ ಭಿಕ್ಷ=ವಿಚಾರದೊಡನೆ ಕೂಡಿದ ಲೇಸಾದ ವರ್ತನೆಗೆ ಆಶ್ರಮವಾದ ಸುಖದಿಂದ ಆಕಾರವಂ ಪಡೆದ ಪರಮಾತ್ಮಂಗೆ ಭಿಕ್ಷ; ಅವಿಚಾರತತ್ವದ ಖರ್ಪರವ ಪಿಡಿದ= ಹುಟ್ಟದೆ ಇದ್ದಾತಂಗೆ ಭಿಕ್ಷ; ಭವಗೇಡಿಯಾಗಿ ಬಯಸದೆ ಬಂದ ಭಿಕ್ಷಮಂ ಸವಿದು, ಚರಿಪವಧೂತ ಬಂದು, ಜನರಲ್ಲಿ ಬಾರದೆ ಬಯಸದೆ ಬಂದ ಪದಾರ್ಥವ ಸವಿದು ಚರಿಸುತ್ತ, ಸುಕರ್ಮದುಷ್ಕರ್ಮಗಳನ್ನು ಕೊಟ್ಟಾತನು ಬಂದು ಭಿಕ್ಷೆಯೆಂದು

ಉದಾತ್ತಸ್ವರದಿಂದ ಅಭವನು ಭಿಕ್ಷಾ ಎಂಬ ಶಬ್ದದಿಂದ ಶ್ರೀಕೃಷ್ಣನ ಅರಮನೆಯೊಳಗೆ ದನಿದೋಱಿದನು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದಾನು.

ಮನೆಮನೆಯ ಮುಂದೆ ಭಿಕ್ಷಾ ಎಂಬ ಶಬ್ದ ಸಂ ।
ಜನಿಸೆಯುದ ಕೇಳಿ ತವಸಿಗಳು ಬಿಜಯಂಗೆಯ್ದ ।
ರೆನುತ ಭಕ್ತಿಯಲಿ ಭಿಕ್ಷವ ನೀಡಲೆಂದು ತಮುತಮು[1]ಗಲ್ಲಿ ಸಂಭ್ರಮಿಸುತ ॥
ವನಜನೇತ್ರೆಯರು[1] ಕೈರವಸುನೇತ್ರೆಯರು ಕಾಂ ।
ಚನಕರ್ಣಪತ್ರೆಯರು ಮಾಂಗಲ್ಯಸೂತ್ರೆಯರು ।
ವಿನುತಗುಣಗಾತ್ರೆಯರು ಪಾವನಚರಿತ್ರೆಯರು ಗೃಹಗಳಂ ಪೊಱಮಟ್ಟರು ॥

ಟೀಕು— ಕೇಳಿರೈ, ಎಲೆ ಮುನಿಗಳಿರಾ! ಶಿವನು ಶ್ರೀ ಗೋಪಾಲಕೃಷ್ಣನ ಅಂತಃಪುರದಲ್ಲಿ ಮನೆಮನೆಗಳ ಮುಂದೆ ಭಿಕ್ಷಾ ಎಂಬ ಶಬ್ದವನೆ ಧ್ವನಿಮಾಡಲಾಗಿ, ಆ ಧ್ವನಿಯಂ ಕೇಳಿ ತಪಸ್ವಿಗಳು ಬಿಜಯಂಗೈದರೆನುತ್ತ, ಭಯಭರಿತಭಕ್ತಿಯಿಂದ ಭಿಕ್ಷವ ನೀಡಬೇಕೆಂದು ತಮುತಮುಗೆ ಸಂಭ್ರಮಿಸುತ್ತ, ವನಜನೇತ್ರೆಯರು = ತಾವರೆಗೆ ಸಮಾನವಾದ ಮುಖವುಳ್ಳವರು ಕೆಲರು, ಕೈರವಸುನೇತ್ರೆಯರು = ಕನ್ನೈದಿಲೆಸಳುಗಳಿಗೆ ಸಮಾನವಾದ ಲೋಚನಗಳುಳ್ಳವರು ಕೆಲರು ; ಕಾಂಚನಕರ್ಣಪತ್ರೆಯರು = ಸುವರ್ಣಮಯವಾದ ಓಲೆಗನುಳ್ಳವರು ಕೆಲರು ; ಮಾಂಗಲ್ಯಸೂತ್ರೆಯರು = ಕೊರಲಿನಲ್ಲಿ ಮಾಂಗಲ್ಯಸೂತ್ರವನುಳ್ಳವರು ಕೆಲರು ; ವಿನುತಗುಣಗಾತ್ರೆಯಗು = ಎಲ್ಲರಿಂದಲೂ ಕೊಂಡಾಡಿಸಿಕೊಂಬುದಕ್ಕೆ ಯೋಗ್ಯವಾದ ಶರೀರವನುಳ್ಳವರು ಕೆಲರು ; ಪಾವನಚರಿತ್ರೆಯರು = ಪವಿತ್ರಗಾತ್ರೆಯರಾದ ಗೋಪಾಂಗನೆಯರು–ಭಿಕ್ಷವನೀಡಲೆಂದು ಮನೆಮನೆಗಳಿಂದ ಹೊಱಟರು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದಾನು.

ನಾರಿಯರು ಸುಪತಿವ್ರತಾಗುಣದ ಸಹಜಶೃಂ ।
ಗಾರಿಯರು ಲಾವಣ್ಯರಸಭರಿತಮನೋಹರಾ ।
ಕಾರೆಯರು ಶುಭಲಕ್ಷಣಂದಳೆದ ಕೀರ್ತಿವಿಸ್ತಾರೆಯರು ಕಂಗೊಳಿಸುವ ॥
ನಾರಿಯರು ಸತ್ಪಥವಿಹಾರೆಯರು ನಿರ್ಮಲಶ ।
ರೀರೆಯರು ನಿತ್ಯಸುವಿಚಾರೆಯರು ನೆರೆ ಸದಾ ।
ಚಾರೆಯರು ಪರಮಸಂಸ್ಕಾರೆಯರು ಕೃಷ್ಣಸಂಸಾರೆಯರು ಬರುತಿರ್ದರು ॥

ಪಾ—1. ಗಲ್ಲಿ ಸಂಭ್ರಮಿಸುತಾವನಜವಕ್ತ್ರೆಯರು.

ಟೀಕು- ಕೇಳಿರೈ, ಎಲೆ ಮುನಿಗಳಿರಾ! ಆಶಿವನು ಭಿಕ್ಷಾ ಎಂದ ಧ್ವನಿಯು ಕೇಳಿ ಈ ಪ್ರಕಾರವಾದ ಗೋಪಾಂಗನೆಯರು ಬರುತ್ತಿರ್ದರು ಎಂದು ಹೇಳುತಿರ್ದಾನು. ಅವರು ಎಂಥವರು? ಎಂದರೆ—ನಾರಿಯರು = ಕಬ್ಬುವಿಲ್ಲಿನ ನಾರಿಯೋಪಾದಿಯಲ್ಲಿ ಪುರುಷರ ಮನವೆಂಬ ಜಿಲ್ಲ ಬಾಗಿಸುವ ನಾರಿಯರು; ಸುಪತಿವ್ರತಾಗುಣದ ಸಹಜಶೃಂಗಾರಿಯರು = ಪತಿವ್ರತಾಗುಣವೇ ದಿವ್ಯಾಭರಣಂಗಳಾಗಿ ಉಳ್ಳವರು; ಲಾವಣ್ಯರಸಭರಿತಮೋಹನಾಕಾರೆಯರು = ತನುಕಾಂತಿಯಿಂದ ತುಂಬಲ್ಪಟ್ಟ ಮೋಹನವೇ ಆಕಾರವಾದವರು; ಶುಭಲಕ್ಷಣಂದಳೆದ ಕೀರ್ತಿವಿಸ್ತಾರೆಯರು = ಸುಲಕ್ಷಣದೊಡನೆ ಕೂಡಿದ ಪುಣ್ಯಕೀರ್ತಿಯನು ಪ್ರಕಟಿಸುವರು; ಕಂಗೊಳಿಪ ನಾರಿಯರು = ಹದಿನೆಂಟು ಲಕ್ಷಣಗಳಲ್ಲಿ ಕೊಂಕುಕೊರತೆಯಿಲ್ಲದೆ ನೆರವಾದವರು; ಸತ್ಪಥವಿಹಾರೆಯರು = ಶಾಸ್ತ್ರಂಗಳಲ್ಲಿ ಹೇಳಲ್ಪಟ್ಟ ಸತ್ಕೀರ್ತಿಮಾರ್ಗದಲ್ಲಿ ಆಚರಿಸುವರು; ನಿರ್ಮಲಶರೀರೆಯರು = ಕಂದುಕಳಂಕಿಲ್ಲದೆ ಇದ್ದ ನಿರ್ಮಲಶರೀರವುಳ್ಳವರು; ನಿತ್ಯಸುವಿಚಾರೆಯರು = ಅವಾಗಲೂ ಅಜ್ಞಾನಕೃತವಲ್ಲದೆ ಮೇಲನರಿದು ವಿಚಾರಿಸಿ ನಡೆವರು; ನೆರೆಸದಾಚಾರೆಯರು = ನಿತ್ಯ ನೈಮಿತ್ತಿಕಕಾರ್ಯಂಗಳೆಂಬ ಸದಾಚಾರದಲ್ಲಿ ನಡೆವರು; ಪರಮಸಂಸ್ಕಾರಿಯರು = ಪೂರ್ವಜನ್ಮಕೃತವಾದ ಪಾಪವಿಲ್ಲದೆ ಪುಣ್ಯಸಂಸ್ಕಾರವನುಳ್ಳವರು; ಕೃಷ್ಣಸಂಸಾರಿಯರು = ಆನಾರಾಯಣಂಗೆ ಸಂಸಾರಿಯಾದ ಗೋಪಾಲಸ್ತ್ರೀಯರು ಈಶ್ವರಗೆ ಭಿಕ್ಷವ ನೀಡಲೆಂದು ಬರುತಿದ್ದರು ಕಾಣಿರೈ, ಮುನಿಗಳಿರಾ! ಎಂದು ಸೂತಪೌರಾಣಿಕನು ಹೇಳುತಿರ್ದಾನು.

ಕುಂಭಕುಚವೆಂಬ ಕಲಶಂಗಳಿಂ ಪೊಳೆವಧರ ।
ವೆಂಬ ಪಲ್ಲವಗಳಿಂ ತೊಳತೊಳಪ ನುಣ್ಗಲ್ಲ ।
ವೆಂಬ ದರ್ಪಣಗಳಿಂ ಪುಳಕಾಂಕುರಂಗಳೆಂದೆಂಬ ಶೇಷಾಕ್ಷತೆಗಳಿಂ ॥
ಬೆಂಬಳಿಯ ನೂಪುರಧ್ವನಿಯೆಂಬ ವಾದ್ಯಂಗ ।
ಳಿಂ ಭಕ್ತಿಯೆಂಬ ಸುಮನೋರಾಗದಿಂ ನಯನ ।
ವೆಂಬ ದೀಪಂಗಳಿಂ ಗೋಪಸತಿಯರು ನಡೆದು ಶಂಭುವನಿದಿರ್ಗೊಂಡರು ॥

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಈಶ್ವರಂಗೆ ಆ ಗೋಪಾಂಗನೆಯರು ಭಿಕ್ಷವ ನೀಡಲೆಂದು ಬರುವಲ್ಲಿ ಈಶ್ವರನನಿದಿರ್ಗೊಂಬ ಸಂಭ್ರಮವೋ ಎಂಬಹಾಗೆ ತೋರುತಿರ್ದರು. ಅದು ಹೇಗೆಂದರೆ:-ಕುಂಭಕುಚವೆಂಬ ಕಳಶಂಗಳಿಂ = ಸುವರ್ಣಕಲಶಂಗಳಿಗೆ ಸಮಾನವಾದ ಕುಚಂಗಳೆಂಬ ಲಾವಣ್ಯರಸ ತೀವಿದ ಪೂರ್ಣಕಳಶಂಗಳಿಂದ; ಪೊಳೆವಧರವೆಂಬ ಪಲ್ಲವಗಳಿಂ = ಕಾಂತಿಮತ್ತಾದ ಚೆಂದುಟಿಯೆಂಬ ಕೆಂಪಾದ ಎಳದಳಿರ್ಗಳಿಂದ; ತೊಳಪ ನುಣ್ಗಲ್ಲವೆಂಬ ದರ್ಪಣಗಳಿಂದ = ಕಾಂತಿವೆತ್ತು ನುಣ್ಪುವೆತ್ತ ಕದಪುಗಳೆಂಬ ಕನ್ನಡಿಗಳಿಂದ; ಪುಳಕಾಂಕುರಂಗಳೆಂದೆಂಬ ಶೇಷಾಕ್ಷತೆಗಳಿಂ = (ಕಿರುಬೆಮರೆಂಬ ತಳಿದ ಅಕ್ಷತೆಗಳಿಂದ) ಬೆಂಬಳಿಯ ನೂಪುರಧ್ವನಿಯೆಂಬ ವಾದ್ಯಂ

ಗಳಿಂ= ಜಿಡದೆ ಧ್ವನಿಮಾಡುತಿರ್ದ ಅಂದುಗೆ ನೂಪುರ ಮೊದಲಾದ ಆಭರಣಂಗಳ ಧ್ವನಿಗಳೆಂಬ ವಾದ್ಯಂಗಳಿಂದ; ಸುಮನೋರಾಗದಿಂ=(ಒಳ್ಳೆಯ ಮನಸ್ಸೆಂಬ ಕೆಂಪಾದ ಓಕುಳಿಯಿಂದ); ನಯನವೆಂಬ ದೀಪಂಗಳಿಂ= ಕಣ್ಣುಗಳೆಂಬ ದೀಪಗಳಿಂ ಒಪ್ಪುತಿರಲಾಗಿ- ಗೋಪಸತಿಯರು ಶಂಭುವೆಂಬ ಮಹಾದೇವನ ಕಳಸ ಕನ್ನಡಿ ವಾದ್ಯ ಮೊದಲಾದ ಮಂಗಳೋತ್ಸವದಿಂದ ಎದುರುಗೊಂಡರು ಎಂಬ ಮರ್‍ಯಾದೆಯಲ್ಲಿ ಗೋಪಾಂಗನೆಯರ್ಕಳು ಒಪ್ಪಿದರು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಪೇಳುತಿರ್ದನು.

ಹರಿಯಂ ವನಕ್ರೀಡೆಗುಯ್ದು ಕೀರ್ತಿಸಿ ಚೂತ |
ತರುವಂ ನುಡಿದು ಕರ್ಣಿಕಾರವನ್ನಪ್ಪುತುಂ |
ಕುರವಕವ ಕುಡಿನೋಟದಿಂ ಪ್ರಿಯಂಗುವನೂದಿ ಲೊಕ್ಕಿಯಂ ಸಂಗೀತದಿಂ||
ಸುರಹೊನ್ನೆಯನ್ನುಗುಳ್ದು* ಬಕುಳವಂ ಕಣ್ಬೆಳಗ |
ಹರಹಿ ತಿಲಕವ ನಗುತ ಮಲ್ಲಿಗೆಯನೊದೆದಶೋಕೆಯ |
ಮರನ ಪೂವೋರ್ಪ ಸತಿಯರು ಸ್ಥಾಣುವಿಗೆ ಭಿಕ್ಷವನ್ನೀಡಲೈತಂದರು ||

ಟೀಕು— ಕೇಳಿರೈ, ಎಲೆ ಮುನಿಗಳಿರಾ! ಆ ಈಶ್ವರಂಗೆ ಭಿಕ್ಷವ ನೀಡಲೆಂದು ಬಂದಾಸ್ತ್ರೀಯರುಗಳು ಆವ ಪ್ರಕಾರದ ಸಾಮರ್ಥ್ಯವನುಳ್ಳವರು? ಎಂದರೆ— ಹರಿಯಂ ವನಕ್ರೀಡೆಗುಯ್ದು= ಶ್ರೀ ಕೃಷ್ಣಸ್ವಾಮಿಯ ವನಕ್ರೀಡೆಗೆಂದು ಉದ್ಯಾನವನಕ್ಕೆ ಕರೆತಂದು, ಆತನ ಮುಂದೆ ತಮ್ಮ ಸಮರ್ಥತೆಯಂ ತೋಱುವುದಕ್ಕೆ, ಕೀರ್ತಿಸಿ ಚೂತತರುವಂ= ಕೊಂಡಾಡಿ ಮಾವಿನ ಮರದಲ್ಲಿ ಅಂಕುರವಂ ಪುಟ್ಟಿಸುತ್ತ; ನುಡಿದು ಕರ್ಣಿಕಾರವ= ಬೆಟ್ಟದಾವರೆಯಲ್ಲಿ ಸವಿವಾತನಾಡಿ ಪುಷ್ಪನುಂ ತೋಱುತ್ತ; ಅಪ್ಪುತುಂ ಕುರವಕವ= ಕೇರಣವನಪ್ಪಿ ತಳಿರಾಗಿಸುತ್ತ; ಕುಡಿನೋಟದಿಂ ಪ್ರಿಯಂಗುವ= ನೋಟದಿಂದಾಪ್ರಿಯಂಗುವೃಕ್ಷದಲ್ಲಿ ಚಿಗುರ ತೋಱುತ್ತ; ಊದಿ ಲೊಕ್ಕಿಯಂ = ಉಚ್ಛ್ವಾಸದಿಂದ ಲೊಕ್ಕಿಯಲ್ಲಿ ಹೂವ ತಂದು; ಸಂಗೀತದಿಂ ಸುರಹೊನ್ನೆಯಂ = ಹಾಡಿ ಸುರಹೊನ್ನೆಯಲ್ಲಿ ಅರಳುಗಳ ತೋಱುತ್ತ; ಉಗುಳ್ದು ಬಕುಳವಂ= ಗಂಡೂಷದಿಂದ ಬಕುಳವ ಪಲ್ಲವಿಸುತ್ತ; ಕಣ್ಬೆಳಗ ಹರಹಿ ತಿಲಕವ= ನೋಟದಿಂದ ತಿಲಕವ ಹೆಚ್ಚಿಸುತ್ತ; ನಗುತ ಮಲ್ಲಿಗೆಯ= ನಗೆಯಿಂದ ಮಲ್ಲಿಗೆಯಲ್ಲಿ ಪುಷ್ಪವಂ ತೋಱುತ್ತ; ಒದೆದಶೋಕೆಯ= ಅಶೋಕೆಯನ್ನೊದೆದು ತಳಿರ ತೋಱುತ್ತ; —ಈ ಪ್ರಕಾರವಾದ ಸಾಮರ್ಥ್ಯವನ್ನು ತಮ್ಮ ವರನಾದ ಪುರುಷೋತ್ತಮನೆಡೆಗೆ ತೋಱಿದ ಶೃಂಗಾರವಡೆದ ಸತಿಯರೆಲ್ಲಾ ಶಿವನೆಡೆಗೆ ಭಿಕ್ಷವ ನೀಡಲೆಂದು ಬಂದರು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದನು.

ಶರಧಿಯಾವರ್ತಕೆಣೆಯುಹ ಪೊಕ್ಕುಳೆಂದೆಂಬ |
ಪಿರಿಯ ಪುತ್ತಿನೊಳಿರ್ದ ರೋಮಾಳಿಯೆಂದೆಂಬ |
ಕರಿಯುರಗ ತದ್ವನಿತೆಯಾನನೇಂದುವನಟ್ಟಿ ತಾನವಗ್ರಹಿಪೆನೆಂದು ||
ಬರುತಿರಲು ತೆಱಹುಗುಡಬಾರದೆಂದುಭಯಕುಚ |
ಗಿರಿಗಳಡ್ಡೈಸೆ ಕಂಡಾಸ್ಥಿತಿಯ ಕಿವಿಯು ಹ |
ತ್ತಿರಿಗೆಯ್ದಿ ವಂದುಸಿರುವಂತಿರ್ಪ್ಪೊರ್ವಗೋಪಾಂಗನೆಯುನಿಡುಗಣ್ಗಳು ||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಭಿಕ್ಷವ ನೀಡಲೆಂದು ಬಂದ ಒರ್ವ ಗೋಪಾಂಗನೆಯ ಕಣ್ಗಳು ಕರ್ಣಾಂತವಾಗಿ ಇದ್ದ ಭಾವ ಹೇಗಿದ್ದಿತು? ಎಂದರೆ. ಸಮುದ್ರದ ಸುಳಿಗೆ ಸಮಾನವಾದ ಹೊಕ್ಕುಳೆಂದೆಂಬ ದೊಡ್ಡಿತ್ತಾದ ಹುತ್ತಿನಿಂದ ಹೊಱವಟ್ಟು ಬಂದ, ಆಸ್ತ್ರೀಯ ರೋಮಾಳಿಯೆಂದೆಂಬ, ಕರಿಯುರಗ = ಕಾಳೋರಗನು, ಅವಳ ಮುಖವೆಂಬ ಚಂದ್ರಮನ ಹಿಡಿದೇನೆಂದು ಬರುತ್ತಿರಲಾಗಿ; ತೆಱಹುಗುಡಬಾರದೆಂದು, ಅವಳ ಕುಚಂಗಳೆಂಬ ಎರಡು ಬೆಟ್ಟಗಳು ಅಡ್ಡಲಾದುವಂತೆ; ಇದನು ಕಂಡವರು ಸುಮ್ಮನಿರಬಾರದಲ್ಲಾ ಎಂದು ಕಂಡಸ್ಥಿತಿಯ ಹೇಳುವುದಕ್ಕೆ ಹೊಸಸುದ್ದಿಯನು ಕಿವಿಯಲ್ಲಿ ಏಕಾಂತವಾಗಿ ಹೇಳಬೇಕಲ್ಲದೆ ಪ್ರಕಟವಾಗಿ ಹೇಱಬಾರದು ಎಂದು ಕಂಡ ಸ್ಥಿತಿಯ ಹೇಳುವುದಕ್ಕೆ ಕಣ್ಣುಗಳು ಕಿವಿಯ ಸಮೀಪಕ್ಕೆ ಬಂದುವೇ ಕೈ ಎಂಬ ಮರ್ಯಾದೆಯಿಂದ ಕರ್ಣಾಂತವಾದ ಕಣ್ಣನುಳ್ಳ ಗೋಪಾಂಗನೆಯು ಭಿಕ್ಷವ ನೀಡಲು ಬಂದಳು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಪೇಳುತ್ತಿರ್ದಾನು.—

ಪರಿಮಳಿತ ಘೃತಮಿಶ್ರವಾದ ಪರಮಾನ್ನಮಂ |
ಪರಮಪರಿತೋಷದಿಂ ಪೊಚ್ಚಪೊಸತೆನಿಸಿಪ ಪೊಂ |
ಬರಿಮಾಣದಲಿ ತೀವಿ ಪಿಡಿದು [1]ಗೋಪಿಯರೊಳೊರ್ವಳು ಶ್ರೀಕರಭರಾನತೆ[1]
ಉರುತರಸ್ತನಭಾರನತೆ ಬಂದು ಪಾತ್ರೆಯೊಳ |
ಗಿರದೆ ಭಿಕ್ಷವ ನೀಡಿ ಹರಿಯಜಸುರಾನತನ |
ಚರಣಕಾನತೆಯಾದಳತಿಮುದದಿಗೋಪಸತಿಮನದೊಳುತ್ಸಾಹಮಿಗಲು ||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಓರ್ವ ಗೋಪಾಂಗನೆ ಅತಿಭಕ್ತಿಯಿಂದ ಪರಿಮಳಿತ ಘೃತ ಮಿಶ್ರವಾದ= ಕಂಪಿಸಿದ ತುಪ್ಪದೊಡನೆ ಕೂಡಿದ ಪರ

ಪಾ—1. ಗೋಪಸತಿಯರೊಳಗೊರ್ವ ಶ್ರೀಕರಮಾನತೆ || ಉರುತರದಸ್ತನಭಾರನತೆ ಬಂದುಪಾತ್ರೆಯೊಳ | ಗಿರದೆ ಭಿಕ್ಷವ ನೀಡಿ ಹರಿಯಜಸುರರು ನತಚರಣಕಾನತೆಯಾದಳು ||

ಮಾನ್ನಮಂ = ಪಾಯಸವನು, ಪರಮಸಂತೋಷದಿಂದ ಪೊಚ್ಚ ಪೊಸತೆನಿಪ ಚಿನ್ನದ ಹರಿವಾಣದಲ್ಲಿ ಗಡಣಿಸಿ, ಆಸುವರ್ಣಪಾತ್ರೆಯನು ಕರದಲ್ಲಿ ಪಿಡಿದು, (ಶ್ರೀಕರಭರಾನತೆ = ಅದಱ ಬಾರಕ್ಕೆತಗ್ಗಿದ ಕೈಯನುಳ್ಳವಳಾಗಿ,) ಉರುತರಸ್ತನಭಾರನತೆ= ಸ್ತನಂಗಳ ಭಾರಕ್ಕೆ ಬಡನಡು ಬಳುಕುತ್ತಿರಲಾಗಿ, ಬಾಗಿಲ ಪಟಮುಖದಿಂದ ಬಂದು, ಹರಿಯಜಸುರಾಸುರರಿಂಗ ನಮಸ್ಕರಿಸಿಕೊಂಬುದಕ್ಕೆ ಯೋಗ್ಯವಾದ ಪಾದವನುಳ್ಳ ಮಹಾದೇವಂಗೆ ಭಿಕ್ಷವ ನೀಡಿ, ಓರ್ವ ಗೋಪಾಂಗನೆ ಸಂತಸದಿಂದ ನಮಸ್ಕರಿಸಿದಳು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದಾನು.

ಸುಂಪಡರ್ದ* ಮಾಂದಳಿರ್[2]ಡಿಯು ನವಕನಕಕಳಶ |
ಮಂ ಪೋಲ್ವ[1] ಬಟ್ಟಬಲ್ಮೊಯು ಪವಳದ ಬಳ್ಳಿ |
ಯಂ ಪಳಿವ ಸಿರಿಯು ಚೆಂದುಟಿಯು ದಾಡಿಮಬೀಜದಂತೆಸೆವ ದಂತಂಗಳ್ ||
ಸಂಪಗೆಯ [2] ಬಿರಿಮುಗುಳಿಗೆಣೆಯೆನಿಸ ನಾಸಿಕದ[2] |
ಸಂಪಗೆಯ ಪೂವಿನಂದದ ಮೈಸಿರಿಯು ಬಿಚ್ಚ |
ಸಂಪಗೆಯ ಕಂಪ ಬೀಱುವ ಪೆಂಪಿನವಳೊರ್ವ ಕೆಂಪಿ ನಡೆತರುತಿರ್ದಳು ||೨೪

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಮತ್ತೊರ್ವಸ್ತ್ರೀಯು ಭಿಕ್ಷವ ನೀಡುವುದಕ್ಕೆ ಬರುತಿರ್ದಳು. ಅದೆಂತೆಂದಡೆ—ಸುಂಪಡರ್ದ ಮಾಂದಳಿರ್ಗೆ ಸಮಾನವಾದ ಪಾದತಳಂಗಳಿಂದ, ಕನಕಕಲಶಂಗಳಿಗೆ ಸರಿಯೆನಿಸುವ ಬಟ್ಟಕುಚಗಳಿಂದ, ಹವಳದ ಎಳವಳ್ಳಿಗೆ ಸರಿಯೆನಿಸುವ ಚೆಂದುಟಿಯಿಂದ, ದಾಳಿಂಬದ ಬೀಜಗಳಿಗೆ ಸರಿಯಾದ್ದು ಕಾಂತಿವೆತ್ತ ದಂತಪಙ್ತಿಗಳಿಂದ, ಸಂಪಗೆಯ ಬಿರಿಮುಗುಳಿಗೆಣೆಯೆನಿಸುವ ನಾಸಿಕದಿಂದ, ಸಂಪಗೆಯ ಹೂವಿನ ಕಾಂತಿಯಂತೊಪ್ಪುವ ಮೈಬಣ್ಣದಿಂದ, (ಮೆಱೆವ) ಸಂಪಗೆಯ ಹೂವಿನ ಪರಿಮಳಕ್ಕೆ ಸಮನೆನಿಸುವ ಉಸಿರ್ಗಂಪನುಳ್ಳ, ಗೋಪಾಂಗನೆ ನಡೆತಂದು ಈಶ್ವರಂಗೆ ಭಿಕ್ಷವಂ ನೀಡುತಿರ್ದಳು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಪೇಳುತಿರ್ದಾನು.

ನಕ್ಷತ್ರಮಂಟಪದೊಳೊರ್ವ ಗೋಪಾಲಸತಿ |
ನಕ್ಷತ್ರರಮಣನನುಜನ ತೊಡೆಯ ಮೇಲಿರ್ದು |
ನಕ್ಷತ್ರಮಂ ಪಿಡಿದು ನಕ್ಷತ್ರದಿಂ ಹಿಮವ ತುಂಬುತಿರಲಾಕ್ಷಣದೊಳು ||

ಪಾ—1. ಪೋಲ್ವಡಿಯ ಕನಕಕಳಶಂ ಪೋಲ್ವ.
2. ನನೆಯಂಗವಿಸುವಾನಾಸಿಕದಚ್ಚ.

ನಕ್ಷತ್ರಜನಕ ದನಿದೋಱೆ[3] ಬಾಗಿಲೊ[1]ಳದಂ[1] ।
ನಕ್ಷತ್ರದಿಂ ಕೇಳುತೆದ್ದು ಭಿಕ್ಷವ ನೀಡಿ ।
ನಕ್ಷತ್ರಪತಿಧರಗೆ ವಂದಿಸಿ ಮರಳಿ ಮನೆಯ ನಕ್ಷತ್ರಮಂ ಸಾರ್ದಳು ॥೭೫॥

ಟೀಕು—ಕೇಳಿರೈ, ಎಲೆ ಮುನಿಗಳಿರಾ! ನಕ್ಷತ್ರಮಂಟಪದೊಳೊರ್ವ ಗೊಪಾಲಸತಿ = ನಕ್ಷತ್ರ ಎಂದರೆ ಉತ್ತರಾನಕ್ಷತ್ರ, ಮಂಟಪಂಗಳೆಲ್ಲಕ್ಕು ಉತ್ತರಾಪಾದ ನಕ್ಷತ್ರವೆಸರ ಮಂಟಪದಲ್ಲಿ ಒಬ್ಬ ಗೋಪಾಂಗನೆ, ನಕ್ಷತ್ರರಮಣನನುಜನ ತೊಡೆಯ ಮೇಲಿರ್ದು = ನಕ್ಷತ್ರವೆಂದರೆ ರೇವತೀನಕ್ಷತ್ರ, ರಮಣ-ಆರೇವತೀರಮಣನಾದ ಬಲಭದ್ರನ, ಅನುಜ = ತಮ್ಮನಾದ ಶ್ರೀ ಕೃಷ್ಣದೇವರ, ತೊಡೆಯ ಮೇಲಿರ್ದು; ನಕ್ಷತ್ರಮಂ ಪಿಡಿದು = ನಕ್ಷತ್ರವೆಂದರೆ ಭರಣಿ, ಭರಣಿಯಂ ಪಿಡಿದು, ನಕ್ಷತ್ರದಿಂ-ನಕ್ಷತ್ರ ಎಂದರೆ ಹಸ್ತನಕ್ಷತ್ರ, ಹಸ್ತದಿಂದ, ಹಿಮವ ತುಂಬುತಿರಲಾಕ್ಷಣದೊಳು = ಹಿಮ ಎಂದರೆ ಪಚ್ಚೆಗಪ್ಪುರ, ಪಚ್ಚೆಗಪ್ಪುರವ ತುಂಬುತಿರಲು; ಆ ಕ್ಷಣದಲ್ಲಿ ನಕ್ಷತ್ರ ಜನಕ ದನಿದೋಱೆ = ನಕ್ಷತ್ರ ಎಂದರೆ ವಿಶಾಖ ನಕ್ಷತ್ರ, "ವಿಶಾಖಃ ಶಿಖಿವಾಹನಃ" ಎಂಬಭಿಧಾನದಿಂದ ವಿಶಾಖನೆಂದರೆ ಷಣ್ಮುಖನು, ಆತಂಗೆ ಜನಕ= ತಂದೆಯಾದ ಪರಮೇಶ್ವರನು, ದನಿದೋಱಲಾಗಿ; ಬಾಗಿಲೊಳದಂ ನಕ್ಷತ್ರದಿಂ ಕೇಳುತೆದ್ದು = ಬಾಗಿಲ ಮುಂದಾದ ದನಿಯನ್ನು ನಕ್ಷತ್ರ ಎಂದರೆ ಶ್ರವಣ, ಆಕಿವಿಯಿಂದ ಕೇಳುತೆದ್ದು, ಭಿಕ್ಷಮಂ ನೀಡಿ, ನಕ್ಷತ್ರಪತಿಧರೆಗೆ = ನಕ್ಷತ್ರಂಗಳಿಗೆ ಪತಿಯಾದ ಚಂದ್ರನ ಧರಿಸಿದ ಶಿವನಿಗೆ, ನಮಸ್ಕರಿಸಿ, ಮರಳಿ ಮನೆಯ ನಕ್ಷತ್ರಮಂ ಸಾರ್ದಳು = ಮರಳಿ ಬಂದು ನಕ್ಷತ್ರ ಎಂದರೆ ಮೂಲನಕ್ಷತ್ರ, ತನ್ನ ಮೊದಲ ಮನೆಯ, ಸಾರ್ದಳು ಕಾಣಿರೈ ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಪೇಳುತಿರ್ದಾನು.

ಸರ್ಬಂಗೆ ಭಿಕ್ಷಾನ್ನಮಂ ನೀಡಲೆಂದು ಮ।
ತ್ತೊರ್ಬಳತ್ಯಾಲಸ್ಯಗಮನೆ ಪೂರ್ಣೇಂದುಮುಖಿ ।
[2]ಪರ್ಬಿರೂಪೊಸರ್ವ ರಂಜಿಸನೀಱೆ[3]ಯೆಸಿಪೊರ್ವ[2]ಗರ್ಭಿಣಿನಡೆದು ಬರುತಿರೆ
ಅರ್ಭಕನಿದಾನವಿದೆ ಇವಳ ಬಸಿಱೊ[3]ಳಗೆನು ।
ತ್ತುರ್ಬಿ[3]ನೊ[3]ಳು ತೋಱುವಂಜನಗಾಱರಂದದಿಂ । [ಕುಚಗಳು ॥೭೬
ಕಾರ್ಬೊಳೆಪ ತುದಿಯೊಳಾಲಿಂಗಿಸಿ ಮೊಱೆ[3]ದುವವಳ [4]ಕೊರ್ಬಿದುರ್ಬಿದ

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಗೋಪಾಂಗನೆಯರೊಳೊರ್ವ ಗರ್ಭಿಣಿ ಭಿಕ್ಷವ ನೀಡಲೆಂದು ಬಂದು, ಆ ಸ್ತ್ರೀಯ ಕುಚಾಗ್ರಂಗಳು ಆವ ಪ್ರಕಾರ

ಪಾ— 1. ಳಿರ್ದು. 2. ಪರ್ಬಿದ ನಿಡುಬಾಸೆಯಿಂ ರಂಜಿಪ ನೀರೆಯೆಂದೆನಿಪ.
3. ಯೊ .4. ಪರ್ಬಿದುಭಯಕುಚಂಗಳು.

ದಲ್ಲಿ ಒಪ್ಪಿದುವು? ಎಂದರೆ,—ಕವೀಶ್ವರನು ಅಭಿವರ್ಣಿಸುತ್ತಿರ್ದಾನು. ಸರ್ಬಂಗೆ ಭಿಕ್ಷಾನ್ನಮಂ ನೀಡಲೆಂದು=ಜಗತ್ಕರ್ತನಾದ ಮಹಾದೇವಂಗೆ ಭಿಕ್ಷವ ನೀಡಬೇಕೆಂದು, ಅತ್ಯಾಲಸ್ಯಗಮನೆ=ಅಧಿಕವಾದ ಆಲಸ್ಯದೊಡನೆ ಕೂಡಿದ ನಡೆಯುಳ್ಳ, ಪೂರ್ಣೇಂದುಮುಖಿ=ಸಂಪೂರ್ಣಚಂದ್ರನಿಗೆ ಸರಿಸಮಾನವಾದ ಕಾಂತಿಯಿಂದ ಬಿಳುಪೇಱಿದ ಮುಖವನುಳ್ಳ, ಹಬ್ಬಿದ ಕಾಳಸರ್ಪಂಗೆ ಸಮಾನವಾದ ಜಾಸೆಯುಳ್ಳ ಗರ್ಭಿಣಿ, ನಸುಬಳಲಿಕೆಯೊಡನೆ ನಡೆದು ಬರುತ್ತಿರಲಾಗಿ; ಇವಳ ಗರ್ಭದಲ್ಲಿ ಅರ್ಭಕನಿಧಾನ=ಸುಕುಮಾರನೆಂಬ ನಿಧಾನ, ಇವಳ ಬಸಿಱಲ್ಲಿ ಉಬ್ಬಿ ತೋಱುತಿದೆ ನೋಡಿ ಎಂದು ತೋಱುವುದಕ್ಕೆ ಬಂದ, ಅಂಜನಗಾಱರ ಮರ್ಯಾದೆಯಿಂದ ಕಾರ್ಬೊಳೆಪ=ಕಪ್ಪಿನ ಹೊಳೆಹನು, ತುದಿಯೊಳಾಲಂಗಿಸಿ = ಮೊಲೆದುದಿಗಳಲ್ಲಿ ಆಲಿಂಗಿಸಿ, ಮೆಱೆವ ಆವಳ ದೊಡ್ಡಿತ್ತಾದ ಬಟ್ಟ ಮೊಲೆದುದಿಗಳು ಈಪ್ರಕಾರದಿಂದ ಒಪ್ಪದುವು ಎಂದು ಕವೀಶ್ವರನು ಹೇಱುತಿರ್ದಾನು.

ಅರವಿಂದಮುಖಿ ಮಧುರವಾಣಿ ಪಲ್ಲವಪಾಣಿ |
†ತರುಣಾಶೋಕಾಂಕುರಲಸಿತಚರಣತಳೆ ಜಾತಿ |
ವರಕುಸುಮ[1] ಸೌಗಂಧಬಂಧುರಸುಗಂಧಿ ಕಂಗೊಳಿಪ ಕೈರವಸುನೇತ್ರೆ[1] ||
ತೊಱೆ[3]ದ ಮೊಲೆವಾಲ [2]ಕಂದಂಗೆ ಕೊಡುತುಂ[2] ಭಕ್ತಿ |
ವೆರಸಿಯುಭವಂಗೆ ಭಿಕ್ಷವ ನೀಡು[3]ತುಂ ಮನದ[3] |
ಪರುಷದಿಂ ನೋಡುತುಂ ಪಂಚಬಾಣಾಂಗಿಯೆನಲೊರ್ವ ಬಾಣತಿಯೆಸೆದಳು||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಒರ್ವ ಗೋಪಾಂಗನೆಯು ಬಾಣತಿತನದ ಲಕ್ಷಣಸಮೇತವಾಗಿ ಭಿಕ್ಷವ ನೀಡುತಿರ್ದಳು ಎಂದು ಕವೀಶ್ವರನು ವರ್ಣಿಸುತ್ತಿರ್ದಾನು. ಅದು ಹೇಗೆಂದರೆ—ಅರವಿಂದಮುಖಿ= ತಾವರೆಗೆ ಸಮಾನವಾದ ಕಾಂತಿಮತ್ತಾದ ಮುಖವನುಳ್ಳವಳು; ಮಧುರವಾಣಿ=ಕಿವಿಗೆ ಸೊಗಸಾದ ಸವಿಮಾತನಾಡುವಳು; ಪಲ್ಲವಪಾಣಿ=ಮಾಂದಳಿರ್ಗೆ ಸಮಾನವಾದ ಕರತಳವನುಳ್ಳವಳು; ತರುಣಾಶೋಕಾಂಕುರ ಲಸಿತಚರಣತಳೆ=ಕೋಮಲವಾದ ಅಶೋಕೆಯ ತಳಿರಿಗೆಣೆಯಾದ ಪದತಳವನುಳ್ಳವಳು; ಜಾತಿವರಕುಸುಮಸೌಗಂಧ ಬಂಧುರ ಸುಗಂಧಿ=ಜಾಜಿಯ ಪುಷ್ಪದ ಪರಿಮಳದೋಪಾದಿಯಲ್ಲಿ ಮನೋಹರವಾದ ಅಂಗ ಪರಿಮಳವನುಳ್ಳವಳು; ಕಂಗೊಳಿಪ ಕೈರವಸುನೇತ್ರೆ = ಮನೋಹರವಾದ ಕನ್ನೆಯ್ದಿಲೆಸಳಿಗೆ ಸಮಾನವಾದ ಕಣ್ಣನುಳ್ಳವಳು—ಈ ಪ್ರಕಾರವಾದ ಚೆಲ್ವನುಳ್ಳ ಕೋ

† ತರುಣಾಶೋಕಾಂಕುರ ಎಂದಿರಬೇಕು. ವೃತ್ತದ ನಿರ್ಬಂಧದಿಂದ ಹೀಗೆ ಮಾಡಿರಬಹುದೆಂದು ತೋಱುತ್ತದೆ.

ಪಾ—1. ಸೌಗಂಧಿಕುಮುದಬಾಂಧವದಳಿಕೆ ಕಂಗೊಳಿಪ ಕುಮುದನೇತ್ರೆ.
2. ಕಂದನಿಗೂಡುತುಂ. 3. ತೆಹರನ.

ಮುಳೆ, ತೊಱೆದ ಮೊಲೆವಾಲನ್ನು ಕಂದಂಗೆ ಕೊಡುತ್ತ, ಭಕ್ತಿಯೊಡನೆ ಕೂಡಿ, ಅಭವಂಗೆ ವಂದಿಸಿ ಭಿಕ್ಷವಂ ನೀಡಿ, ಮನಸ್ಸಿನ ಹರ್ಷದಿಂದ ಶಿವನ ಪದಂಗಳಂ ನೋಡಿ ಬರುವಲ್ಲಿ—ಪಂಚಬಾಣಾಂಗಿಯೆನಲು= ಪಂಚಬಾಣಂಗಳು ಇತ್ರೀಕ್ಕೈ ಎಂಬ ಮರ್‍ಯಾದೆಯಲ್ಲಿ ಓರ್ವ ಬಾಣೆತಿಯೆಸೆದಳು ಎಂದು ಹೇಳುವುದು ಸ್ವಭಾವವಾದ ಅರ್ಥ. (ಆವಳು ಬಾಣತಿ= ಎಂದರೆ ಬಾಣವುಳ್ಳವಳು ಹೇಗೆ ಆದಳು?) ಪಂಚ ಬಾಣಂಗಳು ಅವಳ ಅಂಗದಲ್ಲಿ ಎಲ್ಲಿ ಇದ್ದುವು? ಎಂದರೆ—ಮುಖದಲ್ಲಿ ತಾವರೆ ಯೆಂಬ ಬಾಣ, ಪದದಲ್ಲಿ ಅಶೋಕೆಯೆಂಬ ಬಾಣ, ಹಸ್ತದಲ್ಲಿ ಚೂತವೆಂಬ ಬಾಣ, ತನುಗಂಪಿನಲ್ಲಿ ಮಲ್ಲಿಗೆಯೆಂಬ ಬಾಣ, ಕಣ್ಣಿನಲ್ಲಿ ನೀಲೋತ್ಪಲವೆಂಬ ಬಾಣ, ಈ ಪ್ರಕಾರದಲ್ಲಿ ಪಂಚಬಾಣಂಗಳೇ ಅಯುವಯುವಾದ ಮರ್‍ಯಾದೆಯಿಂದೊಪ್ಪುವ ಓರ್ವ ಬಾಣತಿ ಶಿವಂಗೆ ಭಿಕ್ಷವ ನೀಡಿದಳು ಎಂದು ಕವೀಶ್ವರನು ಅಭಿವರ್ಣಿಸುತ್ತಿರ್ದಾನು.

ಉಟ್ಟ ಪಟ್ಟಾವಳಿಯ ನವರತ್ನದುಡಿಗೆಗಳ ।
ತೊಟ್ಟ [1]ನೂತನರತ್ನರುಚಿಯ[1] ಮೆಯ್ದೊಡಿಗೆಗಳ ।
ಇಟ್ಟ ಕತ್ತುರಿಯ ತಿಲಕದ ಸಕಲಪರಿಮಳದ್ರವ್ಯಾನುಲೇಪನಗಳ ॥
ಕಟ್ಟಿದ ಕದಂಬಜಾತಿಯ ಪೂದುಱುಂಬುಗಳ ।
ಮುಟ್ಟಿಯೋಲೈಪ ತುಂಬಿಗಳ ಬಳಗದ ನಡುವೆ ।
ಕಟ್ಟಾಣಿವೆಣ್ಗಳೈತಂದು [2]ಭಿಕ್ಷವ ನೀಡಲಿಟ್ಟಣಿಸಿ ನಿಂದಿರ್ದರು[2] ॥ ೨೮

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಪರಮೇಶ್ವರಂಗೆ ಭಿಕ್ಷವ ನೀಡುವು ದಕ್ಕೆ ಬಂದು ನಿಂದಿರ್ದ ಸತಿಯರು ಅವ ಪ್ರಕಾರದಲ್ಲಿ ನಿಂದಿರ್ದರು? ಎಂದರೆ— ಉಟ್ಟ ಪಟ್ಟಾವಳಿಯ= ವಿಚಿತ್ರವಾದ ಚಿತ್ರಾಂಬರವನುಟ್ಟು, (ತೊಟ್ಟನವರತ್ನದುಡಿ ಗೆಗಳ=) ಹೊಸದಾದ ನವರತ್ನಂಗಳಿಂದ ಅಲಂಕಾರವಾದ ಕಟಕ, ಕೇಯೂರ, ಮುದ್ರಿಕೆ, ಕಾಂಚೀದಾಮ, ಕರ್ಣಪತ್ರ, ಸೂಸಕ, ಮುತ್ತಿನಹಾರ ಮೊದಲಾದ ಆಭರಣಂಗಳ ತೊಟ್ಟು, (ಇಟ್ಟ ಕತ್ತುರಿಯ ತಿಲಕದ=) ಹಣೆಗೆ ಕತ್ತುರಿಯ ತಿಲಕ ವಿಟ್ಟು, (ಸಕಲ ಪರಿಮಳದ್ರವ್ಯಾನುಲೇಪನಗಳ=) ಮೆಯ್ಗೆ ಕುಂಕುಮಕರ್ಪೂರದೊ ಡನೆ ಕೂಡಿದ ಪರಿಮಳಗಂಧವನನುಲೇಪಿಸಿ (ಕಟ್ಟಿದ ಕದಂಬಜಾತಿಯ ಪೂದುಱುಂ ಬುಗಳ=) ಕದಂಬವಾದ ಜಾಜಿ, ಮಲ್ಲಿಗೆ, ಸೇವಂತಿಗೆ, ಸುರಗಿ, ಸುರಹೊನ್ನೆ, ಸಂಪಗೆ, ಮೊದಲಾದ ಪುಷ್ಪಂಗಳ ತುಱುಬಿಗೆ ಮುಡಿದು, (ಮುಟ್ಟಿಯೋಲೈಪ... ನಡುವೆ=) ಆ ಪರಿಮಳಕ್ಕೆ ತುಂಬಿಗಳು ಬಂದು ಬಳಸಿ ಓಲೈಸಲಾಗಿ ; ಕಟ್ಟಾಣಿ

ಪಾ—1. [redacted]ರುಚಿರಮಯ. 2. ನೀಡುತಿರ್ದರಂದೀಶ್ವರಂಗೆ.

ವೆಣ್ಣುಗಳು ಅಂಬರಶೃಂಗಾರ, ಅನುಲೇಪಶೃಂಗಾರ, ಮಾಂಗಲ್ಯಶೃಂಗಾರ, ಇವ ಱೊಡನೆ ಕೂಡಿದ ನೈಪಥ್ಯಶೃಂಗಾರವೊಪ್ಪುತಿರಲಾಗಿ, ಶಿವನಿಗೆ ಭಿಕ್ಷವ ನೀಡುವು ದಕ್ಕೆ ಇಟ್ಟಣಿಸಿ ನಿಂದಿರ್ದಳು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮು ನೀಶ್ವರನು ಹೇಳುತಿರ್ದಾನು.

ಕರಿಯ ತಲೆನವಿರೆಣ್ಣೆಗಂಟು ಬೆನ್ನಿನೊಳೊಲೆಯೆ ।
[1]ಕರಿಯ ಸಾದಿನ ಬೊಟ್ಟನಿಟ್ಟು ಸಾಲೆಯದೊಂದು ।
ಕರಿಯ ಕತ್ತುರಿಮಡಿಯನುಟ್ಟು[1] ಮಿಂಚುವ ಕಣ್ಗೆ ಕರಿಯ ಕಾಡಿಗೆಯನೆಚ್ಚಿ ॥
ಕರಿಯ ನೇಱಿಲ ಹಣ್ಣ ಪೋಲ್ವ ಮೆಯ್ವೆಳಗಚ್ಚ ।
ಕರಿಯ ಮುಗಿಲಂ ಜಱಿಯೆ ಕರಿಯ ಗೋವಳತಿ ಮದ ।
ಕರಿದನುಜಹರಗೆ ಭಿಕ್ಷವ ನೀಡಿ ಮುಂಗಾರ ಸಿರಿಯಂತೆ ಕಣ್ಗೆಸೆದಳು ॥೨೯॥

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಒಬ್ಬ ಕಪ್ಪಿನ ಗೋಪಾಂಗನೆ ಶಿವ ನಿಗೆ ಭಿಕ್ಷವ ನೀಡಬಂದಲ್ಲಿ ಆವ ಪ್ರಕಾರದಲ್ಲಿ ಒಪ್ಪಿದಳು? ಎಂದರೆ—ಅತಿಕರಿದಾದ ತಲೆನವಿರಿನಿಂದ ಹಾಕಲ್ಪಟ್ಟ ಎಣ್ಣೆಗಂಟು ಬೆನ್ನೊಳು ಒಪ್ಪುತಿರಲಾಗಿ, ಕರಿಯ ಸಾ ದಿನ ಬೊಟ್ಟು ಹಣೆಯಲ್ಲಿ ರಂಜಿಸಲಾಗಿ, ಕರಿದಾದ ಕಸ್ತೂರಿಯ ಮಡಿಯ ಸಾಲೆಯ ನುಟ್ಟು, ಮಿಂಚುವ ಕಣ್ಣುಗಳಿಗೆ ಕರಿದಾದ ಕಪ್ಪನೆಚ್ಚಿಕೊಂಡು, ಕರಿದಾದ ನೇಱಿಲ ಹಣ್ಣಿನ ಕಾಂತಿ ಶರೀರದಲ್ಲಿ ತೋಱುತ್ತಿರೆ, ಆ ಕಾಂತಿ ಕರಿಯ ಮುಗಿಲನು ಜಱಿ ಯುತಿರಲಾಗಿ, ಕಪ್ಪಾದ ಶರೀರವನುಳ್ಳ ಕಪ್ಪಿನ ಗೋಪಾಂಗನೆಯು, ಕರಿದನುಜ ಹರಗೆ=ಗಜಾಸುರನ ಕೊಂದ ಹರಗೆ ಭಿಕ್ಷವ ನೀಡುವಲ್ಲಿ, ಕಾರ್ಗಾಲದ ಲಕ್ಷ್ಮಿ ಯೋ ಕೈ! ಎಂಬ ಹಾಗೆ ಒಪ್ಪುತಿರ್ದಳು ಕಾಣಿರೈ, ಎಂದು ಕವೀಶ್ವರನು ಹೇಳುತಿ ರ್ದಾನು.

ದಿನದಿನಕೆ ನೋಡಲೊಂದೊಂದು ಪರಿಯಾಗಿಹಂ ।
ಮನದೊಳು ಕಳಂಕಂ ಜಡಾತ್ಮನಿದ್ದಲ್ಲಿರದ ।
ವನಪದಸ್ಥಂ ದಿವಾಚೋರಚಂದ್ರಮನವನ ಬಱಿ[2]ಯ ನಿಂದಿರದೆ[2] ಬಂದು ॥
ತನತನಗೆ [3]ನೆರೆದಿಹ ಲತಾಂಗಿಯರ ಮುಖಚಂದಿ ।
ರನ ಸುತ್ತ[3] ಲೋಲೈಪ ತಾರಕೆಗಳೋ ಇವೆಂ ।
ದೆನಲು ಮುತ್ತಿನ ಬೈತಲೆಯ ಗೋಪವನಿತೆಯರು ಭಿಕ್ಷಮಂ ತರುತಿರ್ದರು ॥

ಪಾ—1. ಕರಿಸಾಲೆಯ ಮಡಿಯನುಟ್ಟು ಸಾಕಿಯದೊಂದು ಕರಿಯ ಕಸ್ತುರಿಯ ಬೊ ಟ್ಟನಿಟ್ಟು. 2. ಬಱಿಯೊಳಿರವೆಂದು.
3. ನೆರದ ಲಲಿತಾಂಗಿಯರ ಮುಖಚಂದ್ರನೆನುತ.

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಶಿವಂಗೆ ಭಿಕ್ಷಮಂ ತರುತಿರ್ದ ಗೋಪಾಂಗನೆಯರ ಮುತ್ತಿನ ಜೈತಲೆಗಳಾವ ಪ್ರಕಾರದಲ್ಲಿ ಒಪ್ಪಿದುವು? ಎಂದರೆ—ಚಂದ್ರನು ದಿನದಿನಕ್ಕೆ ನೋಡಲಾಗಿ ಒಂದು ದಿನ ಸಣ್ಣನಾಗಿ ಒಂದು ದಿನ ದೊಡ್ಡದಾಗಿ ತೋಱುವನಲ್ಲದೆ ಒಂದೇ ಬಗೆಯಲ್ಲಿ ಇರುವವನಲ್ಲ; ಒಳಗೆ ಕಳಂಕವುಳ್ಳವನು; ಜಡಾತ್ಮನು; ಇದ್ದಲ್ಲಿರದವನು = ಇದ್ದಲ್ಲಿ ಇರದೆ ಮೂಡ ಪಡುವಲೋಡಿಯಾಡುವನು; (ಅಪದಸ್ಥಂ =) ಪದಸ್ಥನಲ್ಲ; ಹಗಲಿಗೆ ಕಳ್ಳನಾಗಿ ಕಾಣಿಸಿಕೊಳ್ಳುವನು: ಇಂಥ ಅವಗುಣದಿಂ ದೂಷಕನಾದ ಚಂದ್ರನ ಬಳಿಯಲ್ಲಿ ಇರಲೊಲ್ಲೆವೆಂದು ತನತನಗೆ ಬಂದು ಲತಾಂಗಿಯಾದ ಆ ಸ್ತ್ರೀಯರ ಮುಖವೆಂಬ ಚಂದ್ರನನು ಒಲೈಸುವ ತಾರಕೆಗಳೋ ಎಂಬ ಮರ್‍ಯಾದೆಯಿಂದ ಮೆಱೆದ ಮುತ್ತಿನ ಜೈತಲೆಯ ಗೋಪಾಂಗನೆಯರು ಪರಮೇಶ್ವರಂಗೆ ಭಿಕ್ಷವಂ ನೀಡುತಿರ್ದರು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದಾನು.

ಕಂಗಳೋ ಕಾಮನ ಶರಂಗಳೋ ನೀಲಾಳ |
ಕಂಗಳೋ ಅಳಿಯ ಬಳಗಂಗಳೋ ಅರುಣಾಧ |
ರಂಗಳೋ [ಪವಳದಲತಿಕೆಗಳೋ] ತೊಳಪ ವದನಂಗಳೋ ಪೂರ್ಣಕಳೆಯ ||
ತಿಂಗಳೋ ನಗೆಯೊ ಬೆಳುದಿಂಗಳೋ ತುಂಗಸ್ತ |
ನಂಗಳೋ ಚಕ್ರವಾಕಂಗಳೋ ಮೃದುಪದತ |
ಲಂಗಳೋ [1]ತಳಿರೋ ಶಿವಂಗೆ[1] ಭಿಕ್ಷವ ನೀಡ ಬಂದ ಗೋಪಾಂಗನೆಯರು ||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಮತ್ತಾವ ಪ್ರಕಾರವಾದ ಗೋಪಾಂಗನೆಯರು ಆವ ಪ್ರಕಾರದಲ್ಲಿ ಒಪ್ಪಿದರು? ಎಂದರೆ—ಕಾಮನ ಬಾಣಂಗಳಿಗೆ ಸರಿಯಾಗಿ ಮೋಹನವ ಬೀಱುವ ಕಣ್ಣನುಳ್ಳವರು; ತುಂಬಿಗಳಿಗೆ ಸಮಾನವಾದ ಕಪ್ಪಿನ ಕುರುಳನುಳ್ಳವರು; ಹವಳದ ಲತೆಗಳಿಗೆ ಸಮಾನವಾದ ಕೆಂಪಾದ ಚೆಂದುಟಿಯನುಳ್ಳವರು; ಪೂರ್ಣಚಂದ್ರನಿಗೆ ಸರಿಯಾದ ಎಳನಗೆಯೆಂಬ ಬೆಳುದಿಂಗಳೊಡನೆ ಕೂಡಿದ ಮುಖವನುಳ್ಳವರು; ಚಕ್ರವಾಕಪಕ್ಷಿಗಳಿಗೆ ಸಮಾನವಾದ ಬಟ್ಟ ಮೊಲೆಗಳನುಳ್ಳವರು; ಎಳದಳಿರಿಗೆ ಸಮಾನವಾದ ಪದತಳವನುಳ್ಳ ಶೃಂಗಾರವಾದ ಗೋಪಾಂಗನೆಯರು ಶಿವಂಗೆ ಭಿಕ್ಷವ ನೀಡ ಬಂದರು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದಾನು.

ಎಂದು ಮನೆಯಿಂ ಪೊಱಮಡದ ಬಟ್ಟಮೆಱೆವೊಗದ |
ಚೆಂದಳಿರ್ದುಟಿಯ ನೆಳ್ಳುಗುರಬಲೆ ಭಿಕ್ಷವಂ |
ತಂದಿಕ್ಕೆ ಮರಳಿಯುಂಗಳದ ಶಶಿಕಾಂತ[2]ದಿಂದೆಸೆವ[2] ಕನ್ನಡಿಗೋಡೆಯ ||

ಪಾ—1. ತಳಿರೊ ಎನೆ ಶಿವಗೆ. 2. ದೂಷ್ಟಂದ.

ಬಂದು ಮಱೆಗೊಂಡಿರಲ್ಕದು ದ್ರವಿಸುತಿರಲಾಗಿ |
ಮುಂದೆ ಜವನಿಕೆಯ ಮಱೆಯೊಳು ಶಿವಂಗಿದಿರಾಗಿ |
ನಿಂದ ನರ್ತಕಿಯಂತೆ ಬೆರಗಾಗಿ ಹರಮೂರ್ತಿಯಂ ನಿರೀಕ್ಷಿಸುತಿರ್ದಳು||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಒಬ್ಬ ಗೋಪಾಂಗನೆ ಚಂದ್ರಕಾಂತದ ಕನ್ನಡಿಯ ಗೋಡೆಯ ಮಱೆಯಲ್ಲಿ ನಿಂದು ನೋಡುತಿರ್ದ ಸ್ತ್ರೀಯ ಭಾವ ಹೇಗಿದ್ದಿತು?—ಎಂದರೆ ಕವೀಶ್ವರನು ಹೇಳುತಿರ್ದಾನು. ಎಂದೂ ಮನೆಯನ್ನು ಹೊಱವಡದ ಮರ್ಯಾದೆಯಲ್ಲಿ ಮಹಾಸುಖಿಯಾದ, ಬಟ್ಟವೆಱೆಗೆ ಸಮಾನವಾದ ವಕ್ತ್ರವನುಳ್ಳ ಚಂದ್ರಮುಖಿ, ಚೆಂದಳಿರ್ಗೆ ಸಮಾನವಾದ ತುಟಿಯನುಳ್ಳ, ಸೆಳ್ಳುಗುರುಗಳನುಳ್ಳ ಅಬಲೆ, ಶಿವಂಗೆ ಭಿಕ್ಷವ ನೀಡಿ, ಮರಳಿ ಬಂದು, ತನ್ನಂಗಳದ ಮುಂದಣ ಚಂದ್ರಕಾಂತದ ಅತ್ಯಂತಶುಭ್ರವಾದ ಕನ್ನಡಿಗೋಡೆಯ ಮಱೆಯಲ್ಲಿ ನಿಂದಿರಲಾಗಿ; ಅದು ಇವಳ ಮುಖವೆಂಬ ಚಂದ್ರನಿಂದ ಕರಗಿ ದ್ರವಿಸಲಾಗಿ; ಹೇಗೆ ಒಪ್ಪಿದಳು?—ಎಂದರೆ, ಈ ಚಂದ್ರಕಾಂತದ ಕನ್ನಡಿಗೋಡೆಯೆಂಬ ತೆರೆಯ ಮಱೆಯಲ್ಲಿ ಶಿವನಿಗಿದಿರಾಗಿ ನಿಂದ ನರ್ತನ ಸ್ತ್ರೀಯೋಕೈ! ಎಂಬ ಹಾಗೆ, ಬೆಱಗಾಗಿ, ಹರನ ಮೂರ್ತಿಯ ನೋಡುವ ಗೋಪಾಂಗನೆ ಈ ಪ್ರಕಾರದಲ್ಲಿ ಒಪ್ಪಿದಳು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದಾನು.

ಬಿಗಿದುಟ್ಟ ನಿಱಿಯ ಕಿತ್ತಿಳೆಗಾವಿಸೀರೆ ಕೆಂ |
ಮ್ಮುಗಿಲಾಗೆ ತೊಟ್ಟ ಪೊಸಮುತ್ತಿನಾಭರಣ ತಾ |
ರೆಗಳಾಗೆ ಹಣೆಯೊಳಿಕ್ಕಿದ [ಸಣ್ಣ]ನಾಮ ಹೆಱೆಯಾಗೆ ಬೆಳಗುವ ಕಂಗಳು||
ನಗುವ ನೈದಿಲ ಪೂಗಳಾಗೆ ಕುರುಳೆಸೆವ ತುಂ |
ಬಿಗಳಾಗೆ ಧೂಳಿಧೂಸರದ ಸಂಧ್ಯಾಂಗನೆಯ |
ಬಗೆಯನಂಗೀಕರಿಸಿ ಬಾಗಿಲೊಳಗೊರ್ವ ಸೌಮ್ಯಾಂಗಿ ಕಣ್ಗೆಸೆದಿರ್ದಳು ||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಶ್ರೀ ಕೃಷ್ಣಸ್ವಾಮಿಯ ಅರಮನೆಯಲ್ಲಿ ಓರ್ವ ಗೋಪಾಂಗನೆ ಶಿವನಿಗೆ ಭಿಕ್ಷವ ನೀಡಬೇಕೆಂದು ತನ್ನ ಬಾಗಿಲಲ್ಲಿ ನಿಂದಿರುವಲ್ಲಿ ಹೇಗೆ ಒಪ್ಪಿದಳು? ಎಂದರೆ—ಸಂಧ್ಯಾಂಗನೆಯ ಪ್ರಕಾರದಲ್ಲಿ ಒಪ್ಪಿದಳು ಎಂದು ಕವೀಶ್ವರನು ವರ್ಣಿಸುತಿರ್ದಾನು. ಅದು ಹೇಗೆಂದರೆ—ಸಂಧ್ಯಾಕಾಲದಲ್ಲಿ ಮುಗಿಲು ಕೆಂಪಾಗಿಹುದು, ಆ ಮರ್ಯಾದೆಯಲ್ಲಿ ಈ ಸ್ತ್ರೀಯು ನಿಱುವಿಡಿದುಟ್ಟ ಕಿತ್ತಿಳೆಗಾವಿಯ ಸೀರೆ ಕೆಂಪಾಗಿರಲಾಗಿ; ಆ ಸಂಜೆಯಲ್ಲಿ ನಕ್ಷತ್ರಂಗಳು ತೋಱುವುವು, (ಹಾಗೆ) ಈ ಗೋಪಸ್ತ್ರೀಯು ತೊಟ್ಟ ಹೊಸ ಮುತ್ತಿನಾಭರಣಂಗಳೆ ನಕ್ಷತ್ರಂಗಳಾಗಲಾಗಿ; ಆ ಸಂಜೆಯಲ್ಲಿ ಹೆಱೆ=ಚಂದ್ರ ತೋಱುವುದು, ಈ ಸ್ತ್ರೀಯು

ಹಸೆಯುಲ್ಲಿಕ್ಕಿದ ಸಣ್ಣನಾಮವೇ ಆ ಹಜ್ಜೆಯಾಗಲಾಗಿ; ಆ ಸಂಜೆಯಲ್ಲಿ ನೈದಿಲೆಗಳು ಅರಳುವುವು, ಇಲ್ಲಿ ಈ ಸತಿಯು ಕಣ್ಣುಗಳೆಂಬ ನೈದಿಲೆಯರಳಿ ಕಾಂತಿಮತ್ತಾಗಿ ಇರಲಾಗಿ; ಆ ಸಂಜೆಯುಲ್ಲಿ ತುಂಬಿಗಳು ಆಡುವುವು, ಈ ಗೋಪಾಲಸತಿಯಲ್ಲಿ ಕುರುಳುಗಳೆಂಬ ತುಂಬಿಗಳು ಆಡುವುವು, ಆ ಸಂಧ್ಯಾಸಮಯವು ಧೂಳಿಂದ ಧೂಸರವರ್ಣವಾಗಿ ಬಪ್ಪುವುದು, ಆ ಮರ್ಯಾದೆಯಿಂದ ಸಂಧ್ಯಾಂಗನೆ ಸ್ತ್ರೀಯಾದಳೋ ಎಂಬ ಮರ್ಯಾದೆಯುಲ್ಲಿ ಬಾಗಿಲಲ್ಲಿ ಸೌಮ್ಯಾಂಗಿಯಾದ ಒಬ್ಬ ಗೋಪಸ್ತ್ರೀಯು ಒಪ್ಪಿದಳು ಕಾಣಿರೈ ಎಂದು ಸೂತಪೌರಾಣಿಕನು ವರ್ಣಿಸುತಿರ್ದಾನು.

ಪೃಡಗೆ ಭಿಕ್ಷವನೋರ್ವ ಗೋಪಾಲಸತಿ ನೀಡ ।
ಲೊಡನವಳ ವೊಗಸಸಿಯುಸೀಶನಾಭರಣದಹಿ ।
ತುಡುಕೆ ತಿರುಗಿದ ಸತಿಯ [1]ಮುಡಿ ಕೇಕಿಯಂತಿರಲು[1] ಬೆದಱಿ ಶಿವನ
ಅಡರೆ ತತ್ಫಣಿಯುದಕೆ [2]ನಕ್ಷತ್ರಪತಿ ಬೆಮ । [ಜಟಾಗ್ರವ ॥
ರ್ತಡೆಯಮೃತಬಿಂದು ಸೂಸಲು ರುಂಡಶಿರಗಳಸು ।
ವಡೆಮ [3]ಕುಬುಬೆಂದಾಲುತ[3]ಭವನ ತನುವೊಳದ್ಭುತರಸವ ನೈಗಱಿದುವು॥

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಒರ್ವ ಗೋಪಾಂಗನೆ ಶಿವಂಗೆ ಭಿಕ್ಷವ ನೀಡುತಿರಲಾಗಿ, ಅವಳ ಮುಖವನು ಕಂಡು ಚಂದ್ರನೆಂದು ಶಿವನಿಗೆ ಆಭರಣವಾಗಿದ್ದ ಸರ್ಪನು ಹೆಡೆಯೆತ್ತಿ ಬುಸ್ಸೆಂದು ಮುಖಕ್ಕೆ ತುಡುಕಲಾಗಿ, ಆ ಸತಿಯುಂಜಿ ವೊಗದಿರುಹಿದೊಡೆ, ಅವಳ ಮುಡಿಯುನು ಕಂಡು ನವಿಲೆಂದು ಬೆದಱಿ, ಶಿವನ ಜಟಾಮಕುಟದಲ್ಲಿ ಇಡುಕುರಾಱದ ತೆಱದಲ್ಲಿ ಇರಬೇಕು ಎಂದು ಬರುತ್ತಿರಲಾಗಿ; ಆ ಜಡೆಮುಡಿಯುಲ್ಲಿದ್ದ ಚಂದ್ರನು ಬರುವ ಸರ್ಪನ ಕಂಡು ಭಯದಿಂದ ಬೆದಱಲಾಗಿ; (ಅತನ) ಅಮೃತಬಿಂದುಗಳು ಕಡೆಗೆ ಸೂಸಲಾಗಿ; ಈಶ್ವರನು ಧರಿಸಿದ ರುಂಡಮಾಲೆಯ ಶಿರಸ್ಸುಗಳಿಗೆ ಪ್ರಾಣಂಗಳು ಬರಲಾಗಿ; ಆ ಶಿರಸ್ಸುಗಳು ಕುಬುಬೆಂದು ಬೊಬ್ಬಿಡಲಾಗಿ: ಶಿವನು ತನ್ನ ತನುವಿನಲಿ ಹುಟ್ಟಿದ ಅನಿಮಿತ್ತವಾದ ಅದ್ಭುತರಸವಂ ಕಂಡು ವಿನೋದಿಸುತಿರ್ದನು ಎಂದು ಸೂತಮುನೀಶ್ವರನು ಹೇಳುತಿರ್ದಾನು.

ಪಾ—1. ಮುಡಿಯು ನವಿಲಂತಿರಲು. 2. ನಡುಗೆಯುಡುಪತಿ.
3. ಕುಬುಬುವೆಂದುಲಿಯುತೆ.

ಒದರಲು ಕರೋಟಿಮಾಲೆಗಳದಱೊಳೊಂದು ತಲೆ ।
[1]ದಿದಿಮಿ ದಿಮಿದಿಮಿಕಿ ಧಿತ್ರೊಂಗಿ ತೊಂಗಿಣ ತೊಂಗಿ ।
ತದಿಮಿ ದಿಮಿದಿಮಿಕಿಟ ವೃಣವೃಣ ಝುಂಕುರೆ ಝುಂಕು ಝುಂಕು ಜಗಕೆ ॥
ತದಿತದಿಗ ದದಿಗದ ಕುಟು ಕೃಣಿ ನೃಣೆನಲು ವಾದ್ಯ ।
ಮದು ಗಜಾಸುರನ[1] ಮೇಲಾಡಿದಂದಿನ ರುದ್ರ ।
ನಿದೆ ಬಂದ[2]ಶಂಭು ಕೋ ಎಂದು ನಾಟ್ಯದ ಪದನ ಪಾಡಿ[2]ಬೊಬ್ಬಿಡುತಿರ್ದುದು॥

ಟೀಕು---ಕೇಳಿರೈ, ಎಲೆ ಮುನಿಗಳಿರಾ! ಅನಂತಮಹಿಮನಾದ ವಿನೋದ ಚರಿತ್ರನು ಭಕ್ತಜನಲೀಲಾಲೋಲಚಿತ್ತನು ಶ್ರೀಮನ್ನಾರಾಯಣಸ್ವಾಮಿಯು ಅರಮನೆಯ ಮುಂಗಡೆಯಲ್ಲಿ ಗೋಪಸ್ತ್ರೀಯರು ತಂದು ನೀಡಿದ ಭಿಕ್ಷಮಂ ಕೈಕೊಂಡು ಬರುವಲ್ಲಿ-ಶಿವನು ಧರಿಸಿದ ಕರೋಟಿಮಾಲೆಗಳೊಳಗೆ ಒಂದು ತಲೆ ಕಣ್ಬಿಟ್ಟು ಸಲಿದು ನಲವೇಱಿ ಆನಂದದಿಂದ, ಶಿವನಿಗೆ ನಾಟ್ಯದ ಪದವನ್ನು ಹಾಡುತ್ತಿದ್ದಿತು: ಅದು ಹೇಗೆ? ಎಂದರೆ---ದಿಮಿ ದಿಮಿಕು ದಿಕ್ಕಿಟ ಎನುತ ದಿಕ್ರೊಂಗು ತ್ರೊಂಗಿ ತ್ರೊಂಗಿ ಎನುತ್ತ, ದಿಮಿಕಿಟ ವೃಣ ವೃಣ ಝುಂಕುರೆ ಝುಂಕು ಜಗಕೆನುತ್ತ, ದಧಿಗ ತದ್ಧಿಗ ಧಿಕ್ಕಿಟ ಕೃಣಿ ನೃಣಿ ನೃಣವೆಂಬ ವಾದ್ಯಸಂಕಟವಾದ ತಾಳದೊಡನೆ ಕೂಡಿದ ಧ್ವನಿಯಿಂದ ಗಜಾಸುರನ ಸಱಸಱನೆ ಸೀಳಿ, ಎದೆಯ ಮೇಲೆ ಮೆಟ್ಟಿ ನಿಂದು, ಜಡೆಯ ಕೆದಱಿ, ಕೈಯ ಡಮರುಗ ಢಂ ಎನಲು, ತೊಟ್ಟ ಸರ್ಪಗಳು ಬುಸ್ಸೆನಲು, ಮುಡಿಯ ಮೇಲಣ ಗಂಗೆ ತುಳುಕಲು, ಉಟ್ಟ ಪುಲಿದೊಗಲು ಸಡಿಲಲು, ಉಡೆಯ ಘಂಟೆ ಢಣಢಣಮೆನಲು, ಪಾದದ ಕಿಱುಗೆಜ್ಜೆ ಉಲಿಯುತ್ತಿರಲು, ಕೋ ಎಂದು ನಾಟ್ಯವನಾಡಿದ ಶಂಭು ಬಂದನಿದೆ ನೋಡಿ! ಎಂದು ಬೊಬ್ಬಿಡುತ್ತ, ಒಂದು ಶಿರಸ್ಸು ಈ ಪ್ರಕಾರದಲ್ಲಿ ಶಿವನ ಕೀರ್ತಿಸಿತ್ತು, ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತ ಮುನೀಶ್ವರನು ಹೇಳುತಿರ್ದಾನು.

ನಾರಾಯಣಂಗೆ ಮಱವೆಯ ಬೀಱ[1] ಗೋಪಾಲ ।
ನಾರಿಯರ ಮನೆಮನೆಗಳಲಿ ನೋಱ್ಪೆವೆಂದು ನಾ ।
ನಾರೂಪ ಧರಿಸಿ ಭಿಕ್ಷವ ಬೇಡಿ ನೋಡಿಯುವರಂ ಕೃತಾರ್ಥರ ಮಾಡುತುಂ॥

ಪಾ—1. ತದಿಮಿ ತದಿಮಿಕಿಟ ತ್ರೊಂಗಿಣಾಂತ್ರೊಂಗಿ ದಿಮಿದಿಮಿದಿಮಿಕಿಟ ವೃಣ ವೃಣ ಪಟ್ಟರ್ಪ ವೃ ಝುಂಕ್ರ ಝುಂಕ್ರ ಝುಕುಕು ॥ ತೊದಿಗ ತದಿಗ ತದಿದಿಗಿಟ ಣ್ಣಣಮೆನಲು ವಾದ್ಯ ಮದಗಜಾಸುರನ.

2. ಸಮ್ಮುಖಕೆಂದು ನಾಟ್ಯದ ಪದವನೊದರು.

ಕಾರಣವ ಶ್ರೀಕೃಷ್ಣಗಱುಹಬೇಕೆಂದು ತ |
ದ್ಭೂರಿ ತಾಪಸ ರೂಪನುೞಿದೇಕರೂಪಾಗಿ |
ಮಾರಾರಿ ಗಗನಗಂಗಾಧಾರಿ ಭಕ್ತಸಂಸಾರಿ ನಡೆತರುತಿರ್ದನು ‖ ೨೬ ‖

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಜಗದ್ರಕ್ಷಕನಾದ ಮಹಾದೇವನು ತಾ ಬಂದ ವೃತ್ತಾಂತವನು ಅಱಿಯದ ಮರ್ಯಾದೆಯಲ್ಲಿ ನಾರಾಯಣಸ್ವಾಮಿಗೆ ಮಱೆಯ ಜೇಱಿ, ಆ ಶ್ರೀಕೃಷ್ಣಸ್ವಾಮಿಯ ಅರಮನೆಯಲ್ಲಿರ್ದ ಹದಿನಾಱು ಸಾವಿರ ಗೋಪಸ್ತ್ರೀಯರ ಮನೆಮನೆಗಳ ಮುಂದೆ ತಾನು ನಾನಾರೂಪಿನಿಂದ ಹದಿನಾಱು ಸಾಸಿರ ರೂಪ ಧರಿಸಿ, ಭಿಕ್ಷವಂ ಬೇಡಿ, ಅವರಂ ಕೃತಾರ್ಥರ ಮಾಡುತ್ತ, ಈ ಪ್ರಕಾರದಲ್ಲಿ ನಡೆದು, ಶ್ರೀ ಕೃಷ್ಣಸ್ವಾಮಿಗೆ ತಾನು ಬಂದ ಕಾರಣವನಱುಹಬೇಕೆಂದು ಮೊದಲು ಧರಿಸಿದ ನಾನಾಪ್ರಕಾರವಾದ ತಾಪಸರೂಪನುೞಿದು=ಮೊದಲು ಹಲವು ಪ್ರಕಾರವಾದನು, ತಾನೇ ಕಡೆಯಲಿ ಒಂದೆಡೆಯಾಗಿರುವುದ ತೋಱುವಂತೆ ಏಕರೂಪನಾಗಿ, ಮಾರಾರಿ=ಕಾಮನ ಕೊಂದಾತನು, ಗಂಗಾಧಾರಿ=ದೇವಗಂಗೆಯನು ಮಸ್ತಕದಲ್ಲಿ ಧರಿಸಿದಾತನು, ಭಕ್ತಸಂಸಾರಿ=ಭಕ್ತರಾಡಿದುದನಾಡಿ, ನೋಡಿದುದ ನೋಡಿ, ಹಿಡಿದುದ ಹಿಡಿದು, ಕೊಡೆಂದುದ ಕೊಟ್ಟು, ಬಿಡೆಂದುದ ಬಿಟ್ಟು, ಭಕ್ತರೇ ಸಂಸಾರವಾಗಿರುವಾತನು—ಈ ಪ ಕಾರವಾದ ಮಹಾದೇವನು ನಡೆತರುತಿರ್ದನು ಕಾಣಿರೈ ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದಾನು.

ದೇವಕೀಸುತನಗ್ರಮಹಿಷಿಯರು ರುಕ್ಮಿಣೀ |
ದೇವಿಯರು [ಜಾಂಬವತಿ] ಸತ್ಯಭಾಮಾದೇವಿ |
ಭಾವೆ ನಗ್ನಜಿತೆ ಕಾಳಿಂದಿನೀದೇವಿ ಭದ್ರಾದೇವಿ ಮಿತ್ರವಿಂದಾ ‖
ದೇವಿ ಸತ್ಯಾದೇವಿಯೆನಲಿಂತು ಪೆಸರಾದ |
ದೇವಿಯರು ತಾವೆಣ್ಬರಿವರ ಮನೆಗಳಿಗೆ ಮೂ |
ದೇವರೊಡೆಯಂ ಕ್ರಮಕ್ರಮದಿಂದೆ ಭಿಕ್ಷಮಂ ಬೇಡುತುಂ ಬರುತಿರ್ದನು‖

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಶಿವನು ಭಿಕ್ಷವ ಬೇಡಿಕೊಂಡು ಬರುತಿರಲಾಗಿ, ಮುಂದುಗಡೆಯಲ್ಲಿ ದೇವಕೀಸುತನಗ್ರಮಹಿಷಿಯರು=ದೇವಕೀ ಕುಮಾರನಾದ ಶ್ರೀ ಕೃಷ್ಣನ, ಅಗ್ರಮಹಿಷೀ="ಪಟ್ಟಾಭಿಷಿಕ್ತಾಮಹಿಷೀ" ಎಂಬಭಿಧಾನದಿಂದ ಮಹಿಷಿಯೆಂದರೆ ಪಟ್ಟಸ್ತ್ರೀ, ಆ ಪಟ್ಟದ ಸ್ತ್ರೀಯರುಗಳಾದ ರುಕ್ಮಿಣೀದೇವಿ, ಜಾಂಬವತೀದೇವಿ, ಸತ್ಯಭಾಮಾದೇವಿ, ನಗ್ನಜಿತಾದೇವಿ, ಕಾಳಿಂದಿನೀದೇವಿ, ಭದ್ರಾದೇವಿ, ಮಿತ್ರವಿಂದಾದೇವಿ, ಸತ್ಯಾದೇವಿ ಎಂದು ಹೆಸರ ಪಡೆದ ಪಟ್ಟದ ಸ್ತ್ರೀಯರುಗಳ ಮನೆ ಮನೆಗಳಿಗೆ ಹೋಗಿ, ಮೂದೇವರೊಡೆಯನಾದ ಶಿವ

ನು ಕ್ರಮಕ್ರಮದಿಂದ ಭಿಕ್ಷಮಂ ಬೇಡುತ್ತ ಬರುತಿರ್ದನು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಪೇಳುತಿರ್ದಾನು.

ವಾರಿಜಾಕ್ಷನ ರಾಣಿ ಸತ್ಯಭಾವಾಂಗನೆಯು |
ಚಾರುಗೇಹಾಂಗಣದ ಮುಂದೆ ರಾರಾಜಿಸುವ |
ಪಾರಿಜಾತದ ಮರದಡಿಯು ನಿಂದು ವಿಶ್ವಮಯ ಭಿಕ್ಷಾ ಎನಲು ಕೇಳುತ ||
ನಾರಿಯರ ಸೀಮಂತಮಣಿ ಲಕ್ಷಣದ ಕಣಿ ಸ |
ದಾರಮ್ಯಗುಣಿ ಪತಿವ್ರತೆಯರಗ್ರಣಿಯೆನಿಪ | [ರ್ದಳು ||೩೪||
ಸ್ತ್ರೀರಮಣಿ ಮಂಚದಿಂದಿಳಿದು ಪೊಂಬಟ್ಟಲೊಳು ಭಿಕ್ಷಮಂ ತರುತಿ

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಶಿವನು ಭಿಕ್ಷಮಂ ಬೇಡುತ್ತ ನಡೆದು ಬರುವಲ್ಲಿ ಬಂದು ತಾವಿನಲ್ಲಿ ವಾರಿಜಾಕ್ಷನ ರಾಣಿ=ಕಮಲನೇತ್ರನಾದ ವಿಷ್ಣುವಿನ ಪಟ್ಟದ ಸ್ತ್ರೀಯಾದ, ಸತ್ಯಭಾಮಾದೇವಿಯು ಮನೋಹರವಾದ ಮನೆಯ ಮುಂದಣ ಅಲಂಕಾರವಾದ ಪಾರಿಜಾತದ ವೃಕ್ಷದಡಿಯ ದೊಡ್ಡಿತಾದ ನೆಳಲಿನಲ್ಲಿ ನಿಂದು, ವಿಶ್ವಮಯ ಭಿಕ್ಷಾ ಎನ್ನಲಾಗಿ; ಆ ಧ್ವನಿಯು ಕೇಳಿ, ನಾರಿಯರ ಸೀಮಂತಮಣಿ=ಸತಿಯರ ತಲೆವಣಿಯಾದ ಆಯುಕ್ಕನು, ಲಕ್ಷಣದ ಕಣಿ=ಸುಲಕ್ಷಣ ವಿಶ್ವರೂಪಾದ (?) ಆ ಯುಕ್ಕನು, ಸದಾರಮ್ಯಗುಣಿ=ಎಲ್ಲ ಕಾಲದಲ್ಲೂ ಮನೋಹರವಾದ ಸುಗುಣವನೇ ತೋಱುವ ಆ ಯುಕ್ಕನು, ಪತಿವ್ರತೆಯರಗ್ರಣಿ=ಪತಿವ್ರತೆಯರಲ್ಲಿ ಅಗ್ರಗಣ್ಯಳಾದ ಸ್ತ್ರೀಯರ ರಮಣಿಯು, ಮಂಚದಿಂದಿಳಿದು, ಸುವರ್ಣಮಯವಾದ ಪಾತ್ರೆಯಲ್ಲಿ ಭಿಕ್ಷವನು ಪರಮೇಶ್ವರನಿಗೆ ತರುತಿರ್ದಳು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಪೇಳುತಿರ್ದಾನು.

ಮುಡಿಯ ಭಾರವ ಕೊರಲು ಕುಚಭಾರವನ್ನಸಿಯು |
ನಡು ಜಘನಭಾರವಂ ಬಟ್ಟದೊಡೆ ಪೊಱಲಾಱ |
ದೊಡೆ ಸರ್ವಭಾರಮಂ ಪೊತ್ತು ಮೆಲ್ಲಡಿ ಮೆಲ್ಲ ಮೆಲ್ಲಡಿಯಿಡಲವನಿಯ||
ಬಿಡದೆ ನಿಟ್ಟಿಸುತೆ ಭಿಕ್ಷವ ನೀಡಲೈತಂದು |
ಮೃಡನ ಪದನಖಮುಕುರದೊಳಗೆ ಬಿಂಬಿಸಿ ತೋಱೆ |
ಡೊಡೆ ಹರನ ಪಡಿರೂಪದಂ ಕಾಣುತುಂ ಹೆದಱೆ ತನ್ನ ಮನೆಯಂ ಪೊಕ್ಕಳು ||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಆ ಸತ್ಯಭಾಮಾದೇವಿಯು ಶಿವನಿಗೆ ಭಿಕ್ಷವ ತರುತಿರ್ಪಲ್ಲಿ ಮುಡಿಯ ಭಾರಕೆ ಕೊರಲು ಕೊಂಕುತಿರಲಾಗಿ, ಕುಚಗಳ ಭಾರಕ್ಕೆ ಅಸಿದಾದ ನಡು ಬಳುಕುತಿರಲಾಗಿ, ಜಘನಭಾರವನು ಬಟ್ಟದೊಡೆಗಳು ಹೊಱಲಾಱದೆ ಕಂಪಿಸುತಿರಲಾಗಿ, ಸರ್ವ ಭಾರವನೂ ಹೊತ್ತು ಪದಂಗಳು ನಡೆಯಲಾಱದೆ, ಮೆಲ್ಲಮೆಲ್ಲನೆ ಅಡಿಯಿಟ್ಟು, ನೆಲನ ನೋಡುತ್ತ ಬರುತ್ತ, ಭಿಕ್ಷವ

ನೀಡಲೆಂದು ಬಂದು, ಮೃಡನಾದ ಶಿವನ ಪಾದದ ಉಗುರುಗಳೆಂಬ ಕನ್ನಡಿಯೊಳಗೆ ಹರನ ಪ್ರತಿರೂಪವು ಬಿಂಬಿಸಲಾಗಿ, ಕಂಡು ಹೆದಱಿ, ತನ್ನ ಮನೆಯನು ಹೊಕ್ಕಳು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದಾನು.

ನಗಧರಂ [ಕಾಣುತೇನೌ ಸತ್ಯಭಾಮೆ ಹೇ ।
ಬಿಗ್ರ]ಯಿದೇನೆಂದೆನಲು ಭಿಕ್ಷಧಾರಿಯ ಪಾದ ।
ದುಗುರ್ಗ*ಳೆಂದೆಂಬ ಕನ್ನಡಿಗಳೊಳ್ ಕಂಡೆನಾಶ್ಚರ್ಯವನದೆಂತೆಂದೊಡೆ ‖
ತೊಗಲುಡೆಯ ಹೆಗಲ ಮೇಲಣ ತ್ರಿಶೂಲದ ಹೆಣನೊ ।
ಳುಗುವ ರಕುತದ ಪಾವತೊಡಿಗೆಗಳ ರುಂಡವಮಾ ।
ಲೆಗಳ ಕಾಪಾಲಿಯಿರ್ದಪ ಭಿಕ್ಷವಂ ನೀಡಲಂಜಿ ತಿರುಗಿದೆನೆಂದಳು ‖೪೦‖

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಆ ಸತ್ಯಭಾಮಾದೇವಿಯರು ಶಿವನ ಪಾದನಖದಲ್ಲಿ ಶಿವನ ಪ್ರತಿರೂಪದ ಬಿಂಬವಂ ಕಂಡು ಹೆದಱಿ ತನ್ನ ಮನೆಗೆ ಬರಲಾಗಿ, ನಗಧರಂ=ಗೋವರ್ಧನ ಗಿರಿಯನು ನೆಗಹಿದಂಥ ನಾರಾಯಣಸ್ವಾಮಿಯು ಕಾಣುತ್ತೆ- ಏನೌ! ಎಲ ಸತ್ಯಭಾಮೇ! ಮಹಾಭೀತಿವೆರಸಿ ಬರುತಿರ್ದೆ, ಇದೇನು ಕಾರಣ? ಹೇಳು ಎನ್ನಲಾಗಿ;—ಒಬ್ಬ ಭಿಕ್ಷುಕನು ಅಂಗಳದಲ್ಲಿ ಭಿಕ್ಷಾ ಎಂದನು. ಆ ಧ್ವನಿಯನ್ನು ಕೇಳಿ ಸುವರ್ಣಪಾತ್ರೆಯಲ್ಲಿ ಭಿಕ್ಷವನು ಕೊಂಡು ನೀಡಲೆಂದು ಹೋದೆನು. ಹೋಗಲಾಗಿ ಆ ಭಿಕ್ಷಧಾರಿಯ ಪಾದದ ಉಗುರುಗಳೆಂಬ ಕನ್ನಡಿಗಳೊಳಗೆ ಬಂದು ಆಶ್ಚರ್ಯವ ಕಂಡೆ. ಉಟ್ಟ ಪುಲಿದೊಗಲುಡಿಗೆ, ಹೆಗಲ ಮೇಲಣ ತ್ರಿಶೂಲದಲ್ಲಿ ನೆತ್ತರು ಸುರಿವ ಹೆಣ, ಹಾವಿನ ತೊಡಿಗೆ, ತಲೆಗಳ ರುಂಡಮಾಲೆ, ಕೈಯ್ಯಲಿ ಭಿಕ್ಷವ ಬೇಡುವೊಡೊಂದು ಕಪಾಲ—ಇಷ್ಟು ಇರಲಾಗಿ, ಕಂಡು ತಿರುಗಿ, ಭಿಕ್ಷುಕನ ನೋಡಿ, ಭಿಕ್ಷವ ನೀಡುವುದಕ್ಕೆ ಅಂಜಿ, ಬೇಗದಲ್ಲಿ ತಿರುಗಿ ಬಂದೆನು ಕಾಣಿರೆ ಎಲೈ ಸ್ವಾಮಿ!—ಎಂದು ಸತ್ಯಭಾಮಾದೇವಿ ನಾರಾಯಣಸ್ವಾಮಿಗೆ ಬಿನ್ನಹವಂ ಮಾಡಿದಳು ಕಾಣಿರೈ, ಎಂದು ಸೂತಮುನೀಶ್ವರನು ಹೇಳುತಿರ್ದಾನು.

ಬಂದನೇ ಎನ್ನ ಸಾಕ್ಷಾತ ವರಗುರುರಾಯ ।
ಬಂದನೇ ಎನ್ನಿಷ್ಟನೆನಿಪ ದೇವರದೇವ ।
ಬಂದನೇ ಎನ್ನ ದಾತಾರನೆನ್ನ [1]ಭವಾಂಧಕಾರನಿರ್ಹರಣಸೂರ[1] ‖
ಬಂದನೇ ಎನ್ನನನವರತ ಪಾಲಿಸುವಾತ ।
ಬಂದನೇ ಎನ್ನ ಭಾಗ್ಯದ ಸದಾಶಿವನೊಲಿದು ।
ಬಂದನೇ ಎನುತಿದ್ದು ಬಂದು ಶ್ರೀಶಿವನ ಮೂರ್ತಿಯ ಕಂಡನಾಕೃಷ್ಣನು ‖

ಪಾ—1. ದುರ್ಗಾತಿಮಿರ ನಿರ್ಹರಣಪ್ರಚಂಡಸೂರ್ಯ.

ಟೀಕು--ಕೇಳಿರೈ, ಎಲೆ ಮುನಿಗಳಿರಾ! ಸತ್ಯಭಾಮಾದೇವಿ ಹೇಳಿದ ನುಡಿಗಳನ್ನು ದೇವಕೀಕುಮಾರನಾದಂಥ ಪುರುಷೋತ್ತಮನು ಕೇಳಿ ಸಂತೋಷದಿಂದ ಹೀಗೆಂದು ನುಡಿಯುತಿರ್ದನು. ಬಂದನೇ ಎನ್ನ ಸಾಕ್ಷಾತ ವರಗುರುರಾಯ, ಬಂದನೇ ಎನಿಷ್ಟನೆನಿಪ ದೇವರದೇವ, ಬಂದನೇ ಎನ್ನ ದಾತಾರ = ಎನಗೆ ಸೃಷ್ಟಿಕರ್ತೃತ್ವವ ಕೊಟ್ಟಾತನು, ಬಂದನೇ ಎನ್ನ ಭವಾಂಧಕಾರನಿರ್ಹರಣಸೂರ = ಎನ್ನ ಜನ್ಮಾಂತರಗಳಲ್ಲಿ ಮಾಯಾರೂಪವಾದ ಕತ್ತಲೆಯ ತೊಲಗಿಸುವಲ್ಲಿ ಸೂರ್ಯನಾದಾತನು, ಬಂದನೇ ಎನ್ನನಾವಾಗಲೂ ಪಾಲಿಸುವ ಒಡೆಯನು, ಬಂದನೇ ಎನ್ನ ಭಾಗ್ಯದ ಸದಾಶಿವಮೂರ್ತಿ ಎಂದು ಬೇಗದಲ್ಲಿ ಎದ್ದುಬಂದು ಪರಶಿವನ ಕಂಡನು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದನು.

ಹೆಱೆದುಱುಬಿ[1]ನಿಂದೆ ಶೃಂಗಾರ ಶೂಲದಿ[1] ವೀರ |
ನೆಱೆ ಹಱಸಿ ಭಿಕ್ಷಗೆಯ್ವಲ್ಲಿ ಕರುಣಂ ಕಿಡಿಗೆ | [ವಿನಾ ||
ದಱುವ ಭಾಳಾಕ್ಷದಿಂ ರೌದ್ರ ಪುಲಿದೊವಲುಡುಗೆಯಿಂ ಹಾಸ್ಯ ಮೆಯ್ದೊಡ
ಮಱಿಹಾವಿನಿಂ ಭಯಂ ರುಂಡದಿಂ ಬೀಭತ್ಸ |
ಹೊಱಗೆಯ ಶವದಿನದ್ಭುತ ಕ್ಷಮತ್ವದಿ ಶಾಂತ |
ಮೆಱೆಯೆ ಶ್ರೀಕೃಷ್ಣನಿದಿರನಲಿ ನವರಸಭರಿತನಾಗಿರ್ದನಗಜೇಶನು ||೪೦

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಆ ಪರಶಿವನ ಶ್ರೀಮನ್ನಾರಾಯಣಸ್ವಾಮಿ ನೋಡುವಾಗ ಆವ ಪ್ರಕಾರದ ಸ್ವರೂಪದಿಂದೊಪ್ಪಿರ್ದನು? ಎಂದರೆ, ಕವೀಶ್ವರನು ನವರಸಪೂರ್ಣವಾಗಿ ಒಪ್ಪಿದನು ಎಂದು ಅಭಿವರ್ಣಿಸುತಿರ್ದನು. ಹೆಱೆದುಱುಬಿನಿಂದೆ ಶೃಂಗಾರ = ಮಸ್ತಕದಲ್ಲಿ ಧರಿಸಿಕೊಂಡಿರ್ದ ಚಂದ್ರನ ಶೃಂಗಾರವಾದ ಕಲೆಯಿಂದ ಶೃಂಗಾರರಸ; ಶೂಲದಿ ವೀರ = ಕರಾಗ್ರದಲ್ಲಿ ಮುಮ್ಮೊನೆಯಿಂದೊಪ್ಪುವ ನಿಶಿತತ್ರಿಶೂಲದಿಂದ ವೀರರಸ; ಹಱಸಿ ಭಿಕ್ಷಗೆಯ್ವಲ್ಲಿ ಕರುಣಂ = ಸರ್ವರನು ಸುಖಿಯಾಗಿರಿ ಎಂದು ಹಱಸುವುದಱಿಂದ ಕರುಣರಸ; ಕಿಡಿಗೆದಱುವ ಭಾಳಾಕ್ಷದಿಂ ರೌದ್ರ = ಕಿಡಿಗಳ ಕೆದಱುತಿದ್ದ ಹಣೆಗಣ್ಣಿಂದ ರೌದ್ರರಸ; ಪುಲಿದೊವಲುಡುಗೆಯಿಂ ಹಾಸ್ಯ = ಬಹುಕಾಲದಲಿ ಕೊಂದ ಹುಲಿಯ ಚರ್ಮವನುಟ್ಟುಕೊಂಡಿರುವಲ್ಲಿ, ದಿವ್ಯಾಭರಣಂಗಳಿದ್ದೂ ಹುಲಿದೊವಲನೇಕೆ ಉಟ್ಟುಕೊಂಡನೆಂಬಲ್ಲಿ ಹಾಸ್ಯರಸ; ಮಱಿಹಾವಿನಿಂ ಭಯಂ = ತೊಟ್ಟಿರ್ದ ಮಱಿಹಾವುಗಳ ಹೆಡೆಗಳ ಮೊಱೆವ ಧ್ವನಿಯಿಂದೊಪ್ಪುವ ತೊಡಿಗೆಯಿಂದ ಭಯರಸ; ರುಂಡದಿಂ ಬೀಭತ್ಸ = ತೆಱೆದ ಕಣ್ಣುಗಳಿಂದ, ಬಿಟ್ಟ ಬಾಯಿಗಳಿಂದ, ಕೆದರ್ದ ತಲೆಗಳಿಂದೊಪ್ಪುವ ರುಂಡಮಾಲೆಯ ತಲೆಗಳಿಂ ಬೀಭತ್ಸರಸ; ಹೊಱಗೆಯ ಶವದಿನದ್ಭುತ = ಶೂಲಾಗ್ರದಲ್ಲಿ ಅಚೈತನ್ಯವಾಗಿ

ಪಾ—1. ನಿಂ ಸಿಂಗರಂ ಶೂಲದಿಂ.

ವಿರೂಪದಿಂದೊಪ್ಪುವ ಹೆಣದಿಂದದು ತರಸ; ಕ್ಷಮತ್ವದಿ ಶಾಂತ = ಕ್ಷಮಿಸುವ ಸ್ಥೈರ ಣೆಯಿಂದ ಶಾಂತರಸ, ಶ್ರೀಕೃಷ್ಣನಿದಿರಲಿ ಒಪ್ಪುತಿರಲಾಗಿ—ನವರಸಭರಿತನಾಗಿರ್ದ ಪಾರ್ವತೀಪತಿಯನು ಶ್ರೀ ಮಹಾವಿಷ್ಣುವು ಕಂಡನು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದಾನು.

ಹರನೆ ಜಯಜಯ ! ಕೃಪಾಕರನೆ ಜಯಜಯವಿಂದು |
ಧರನೆ ಜಯಜಯ ! ಉಮಾವರನೆ ಜಯಜಯ ! ಪುಣ್ಯ |
ಕರನೆ ಜಯಜಯ ! ಮನೋಹರನೆ ಜಯಜಯ ! ಪಂಚಶಿರನೆ ಜಯ [ಜಯತು ಜಯತು ! ||
ಸ್ಥಿರನೆ ಜಯಜಯತು ! ಶಂಕರನೆ ಜಯಜಯ ! ಶೂಲ |
ಕರನೆ ಜಯಜಯ ! ಎಂದು ಪುರಮಥನಸಂಘ್ರಿಯೊಳು |
ಮುರಮಥನ ನಿಜತನುವ ಹರುಪುತಿರಲಂದಿನಿರುಳಿರದೆ ತಾಂ ಕಡೆ [ಗಂಡುದು|| ೪೨

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಅನಾರಾಯಣನು ಶಿವನ ಕಂಡು ಸ್ತೋತ್ರವ ಮಾಡುತಿರ್ದಾನು. ಹರನೆ ಜಯಜಯ = ಜಗತ್ಸಂಹಾರ ಮಾಡುವಾತನೆ ಸರ್ವೋತ್ಕರ್ಷನಾಗು; ಕೃಪಾಕರನೆ ಜಯಜಯ = ದಯಾಶೀಲನಾದಾತನೆ ಜಯಜಯ; ಇಂದುಧರನೆ ಜಯಜಯ = ಚಂದ್ರಮೌಳಿಯಾದಾತನೇ ಜಯಜಯ; ಉಮಾವರನೆ ಜಯಜಯ = ಪಾರ್ವತೀ ಪ್ರಾಣಕಾಂತನಾದಾತನೇ, ಪುಣ್ಯಕರನೆ = ನುತಿಸಿ ನಮಸ್ಕರಿಸುವರಿಗೆ ಪುಣ್ಯವನು ಮಾಡುವಾತನೇ, ಮನೋಹರನಾದಾತನೇ ಜಯಜಯ; ಪಂಚಶಿರನೇ ಜಯಜಯ = ಸದ್ಯೋಜಾತ, ವಾಮದೇವ, ಅಘೋರ, ತತ್ಪುರಷ, ಈಶಾನ ಎಂಬ ಪಂಚಮುಖದಿಂದೊಪ್ಪುವಾತನೇ ಸರ್ವೋತ್ಕರ್ಷನಾಗು, ಸ್ಥಿರನೇ = ಎಂದೂ ಕೇಡಿಲ್ಲದಾತನೇ, ಶಂಕರನೆ = ಸರ್ವರಿಗೂ ಸುಖವ ಮಾಡುವಾತನೇ, ಶೂಲಕರನೇ = ತ್ರಿಶೂಲವ ಪಿಡಿದಾತನೇ, ಸರ್ವೋತ್ಕರ್ಷನಾಗೆಂದು ಮುರಮಥನ = ಮುರನೆಂಬ ರಾಕ್ಷಸನ ಕೊಂದ ಪುರುಷೋತ್ತಮನು ಪುರಮಥನ = ಮುಪ್ಪುರವ ಸುಟ್ಟಾತನ ಪದಂಗಳಿಗೆಱಗಿ = ನಮಸ್ಕರಿಸಿ, ಸ್ತೋತ್ರವ ಮಾಡುವ ಪೇಳೆಗೆ, ಅಂದಿನಿರುಳಿರದೆ ತಾಂ ಕಡೆಗಂಡುದು = ಆವೇಳೆಗೆ ಬೆಳಗಾಗುವ ಸಮಯವಾಯಿತು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದಾನು.

ಹುಟ್ಟಿದೆಡೆಯೇನಲ್ಪವೇ ಶರಧಿ ತನ್ನೊಡನೆ |
ಹುಟ್ಟಿದವಳೇಂ ಬಡವೆಯೇ ಲಕ್ಷ್ಮಿ ಭಾವನಂ |
ನಿಟ್ಟಿಸುವರ್ಪೊಡೇಂ [1] ಜಾವಳನೆ ಲೋಕರಕ್ಷಿ ಮಾಧವನೆಂಬುದಱಿದೆನ್ನನು[1] |

ಪಾ—1. ಜಾವಳಂ ಲೋಕರಕ್ಷಣೆಯ ಮಾಡುವುದೆಂಬುದಱಿದೆನ್ನನು.

ದಿಟ್ಟತನದಿಂದೀಶ್ವರಾಲಯಂಗಳ ಮುಂದೆ |
[1]ದುಷ್ಟತಮ್ಮಡಿ ಕಚ್ಚಿ ಕೊಲುತಿಹನೆಯೆಂದು[1] ಮೊರೆ |
ಯಿಟ್ಟುಕೂಗುವವೊಲಾಮುಂಜಾವದೊಳು ಪುರದೊಳೊದಱಿದುವು
[ಶಂಖಂಗಳು ‖ ೪೪

ಟೀಕು — ಕೇಳಿರೈ, ಎಲೆ ಮುನಿಗಳಿರಾ! ಆನಾರಾಯಣಸ್ವಾಮಿಯು ಶಿವನಮೂರ್ತಿಯ ನೋಡುವ ವೇಳೆಯಲ್ಲಿ ಮುಂಜಾವನಾಗಲಾಸಮಯದಲ್ಲಿ ನಾನಾದೇವಾಲಯಂಗಳಲ್ಲಿ ಶಂಖಧ್ವನಿಯಾಗುತಿರ್ದುವು; ಅವು ಹೇಗೆ ಇದ್ದುವು? ಎಂದರೆ, ಕವೀಶ್ವರನು ಅಶಂಖಂಗಳು ನೊಂದುಕೊಂಡು ಮೊರೆಯಿಡುವ ಹಾಗಿದ್ದುವು ಎಂದು ಅಭಿವರ್ಣಿಸುತಿರ್ದಾನು. ಹುಟ್ಟಿದೆಡೆಯೇನಲ್ಪವೇ, ಶರಧಿ = ತಾನು ಹುಟಿದ ತಾವು ನೀಚಸ್ಥಾನವೇ? (ಅದು) ನವರತ್ನಂಗಳಿಗೆ ಆಶ್ರಯವಾದ ಸಮುದ್ರ. ತನ್ನೊಡನೆ ಹುಟ್ಟಿದವಳೇಂ ಬಡವೆಯೇ? ಲಕ್ಷ್ಮಿ = ತನ್ನೊಡನೆ ಹುಟ್ಟಿದ ತಮ್ಮಕ್ಕನು ಬಡವೆಯೇ? (ಅವಳು) ಮಹಾಲಕ್ಷ್ಮಿ: ಭಾವನಂ ನಿಟ್ಟಿಸುವೊಡೆ—ತಮ್ಮ ಭಾವನ ನೋಡೇನೆಂದರೆ (ಅವನು ಏಂ ಜಾವಳನೇ?) ಲೋಕರಕ್ಷಕನಾದ ಲಕ್ಷ್ಮೀಶ್ವರನಾದ ನಾರಾಯಣನು. ಹೀಗೆಂಬುದನಱಿದು ದಿಟ್ಟತನದಿಂದ ಶಿವಾಲಯಂಗಳ ಮುಂದೆ ದುಷ್ಟನಾದ ತಮ್ಮಡಿ ನನ್ನ ಕಚ್ಚಿಕೊಂಡು ಕೊಲುತಿಹನಲ್ಲಾ ಎಂದು ಮೊರೆಯಿಟ್ಟು ಕೂಗುವಹಾಗೆ ಮುಂಜಾವದಲ್ಲಿ ಪುರದ ದೇವಾಲಯಂಗಳಲ್ಲಿ ಒಡಱುವ ಶಂಖಧ್ವನಿಗಳು ಈಪ್ರಕಾರದಲ್ಲಿ ಒಪ್ಪುತಿರ್ದುವು ಎಂದು ಕಪೀಶ್ವರನು ಹೇಳುತಿರ್ದಾನು.

ಮುರಮದಧ್ವಂಸಿಯೇಱಯ್ಯ ಧರಣೀಧರನೆ |
[2]ನರಕಾರಿ ಹಿರಣ್ಯಾಕ್ಷದಾನವವಿನಾಶಕನೆ[2] |
ಧರೆಯನೀರಡಿ ಮಾಡಿದನೆ ಪಾರ್ಥಿವಕುಲಾಂತಕನೇ ದಶಶಿರಮರ್ದನ ‖
ದುರುಳಪ್ರಲಂಬಘ್ನ ಏೞು ಪುರಸಾಧಕನೆ |
ಧುರಗಲಿಯೆ ಕೃಷ್ಣ ಬೆಳಗಾಯಿತೇೞೆಂದೊಬ್ಬ |
ತರುಣಿಯುಪ್ಪವಡಮಂ ಹಾಡಿ [3]ಹರಿಯದಶಾವತಾರಮಂ[3] ಬಣ್ಣಿಸಿದಳು‖೪೫

ಟೀಕು — ಕೇಳಿರೈ, ಎಲೆ ಮುನಿಗಳಿರಾ! ಆಬೆಳಗಿನ ಜಾವದಲ್ಲಿ ಆನಾರಾಯಣಸ್ವಾಮಿಗೆ ಉಪ್ಪವಡಿಸಬೇಕೆಂದು ಒಬ್ಬ ಗೋಪಸ್ತ್ರೀಯು ಉಪ್ಪವಡದ ಪದನ ಹಾಡಿದಳದೆಂತೆಂದೊಡೆ:—ಮುರಮದಧ್ವಂಸಿಯೇಱಯ್ಯ = ಮುರಾಸುರನ * ಕೊಂದಾತನೇ ಏಳೈಯ; ಧರಣೀಧರನೆ = ಭೂಮಿಯ ನೆಗಹಿ ರಕ್ಷಿಸಿದಾತನೇ ಏಳೈಯ, ನರಕಾರಿ

---

1. ದುಷ್ಟತ್ವಮಂ ಮಾಡಿ ಕಚ್ಚಿ ಕೊಲುತಿಹನೆಂದು; ಕೊಟ್ಟುತಮ್ಮಡಿ...
2. ನಿರಯದಲ್ಲಣನೆ ಹಿರಣ್ಯದಾನವನಾಶ. 3. ಕಮಲಾಕ್ಷನವತಾರಗಳ.

= ನರಕಾಸುರನನ್ನು ಕೊಂದಾತನೇ ಉಪ್ಪವಡಿಸು *; ಹಿರಣ್ಯರಾಕ್ಷಸನ ಕೊಂದಾತನೇ ಏಳು ; ಧರೆಯನೀರಡಿಮಾಡಿದನೇ = ಭೂಮಿಯನೀರಡಿ ಮಾಡಿದಾತನೇ ಏಳು ; ಪಾರ್ಥಿವ ಕುಲಾಂತಕನೆ = ಕ್ಷತ್ರಿಯರ ಕುಲವನ್ನು ಇಪ್ಪತ್ತೊಂದು ಸಂಹರಿಸಿದಾತನೇ, ದಶಶಿರಮರ್ದನ = ರಾವಣನ ಕೊಂದಾತನೇ, ದುರುಳಪ್ರಲಂಬಘ್ನ = ದುಷ್ಟನಾದ ಪ್ರಲಂಬನ ಸಂಹರಿಸಿದಾತನೇ ಏಳು ; ಪುರಸಾಧಕನೇ = ಮುಪ್ಪುರವ ಸಾಧಿಸಿದಾತನೇ,* ಧುರಗಲಿ = ಧುರದಲ್ಲಿ ಕಲಿಯೆನಿದ, ಶ್ರೀ ಕೃಷ್ಣನೇ, ಬೆಳಗಾಯಿತೇಳೆಂದು — ಒಬ್ಬ ಸ್ತ್ರೀಯು ವಿಷ್ಣುವಿನ ದಶಾವತಾರವ ಹಾಡಿದಳು. ಅದು ಹೇಗೆಂದೊಡೆ—ತಮಾಸುರನ *ಕೊಂದಲ್ಲಿ ಮತ್ಸ್ಯಾವತಾರ; ಭೂಮಿಗೆ ಆಧಾರವಾದಲ್ಲಿ ಕೂರ್ಮಾವತಾರ; ಹಿರಣ್ಯ ಕಶ್ಯಪುವ ಕೊಂದಲ್ಲಿ ವರಹಾವತಾರ; ಹಿರಣ್ಯರಾಕ್ಷಸನ ಕೊಂದಲ್ಲಿ ನಾರಸಿಂಹಾವತಾರ ; ಬಲಿಯೆಂಬ ರಾಕ್ಷಸನ ಕೊಂದಲ್ಲಿ* ವಾಮನಾವತಾರ; ಕ್ಷತ್ರಿಯರ ಕುಲ ಕೆಡಿಸುವಲ್ಲಿ ಪರಶುರಾಮಾವತಾರ; ರಾವಣಾಸುರನ ಕೊಂದಲ್ಲಿ ರಾಮಾವತಾರ; ಪ್ರಲಂಬನ ಕೊಲ್ಲುವಲ್ಲಿ ಕೃಷ್ಣಾವತಾರ; ತ್ರಿಪುರವ ಸಾಧಿಸುವಲ್ಲಿ ಬೌದ್ಧಾವತಾರ; ಕಡೆಯಲ್ಲಿ ಕಲ್ಕ್ಯವತಾರವ ತಳೆದ ದಶಾವತಾರಿಯನ್ನು (ನೋಡಿ) ಓರ್ವ ಗೋಪಾಲ ಸ್ತ್ರೀಯು ಉಪ್ಪವಡದ ಪದನ ಹಾಡಿದಳು ಎಂದು ಕವೀಶ್ವರನು ಹೇಳುತಿರ್ದನು.

ಒದವಿದ ತಮಂ ಪರೆಯಲೊಡನೆ ಪರೆಯಿಸುತ ಲೋ |
ಕದ ಜನರ ನಿದ್ರಾತಮಂಧಮಂ ಸರಸಿಯೊಳು |
ಪದುಮಂಗಳೊಡನೆಯರಲಿಚುತ ಲೋಕದ ಜನಗಂಳ ನಯನಪದುಮಂಗಳ ||
ಉದಯವಾಗಲ್ಕೊಡನೆಯುದಯವಾಗಿಸುತ ಲೋ |
ಕದ ಸಮಸ್ತ ಜನಂಗಳುದ್ಯೋಗಮಂ ಕಿರಣ |
ಗೆದಱುತಿಂದ್ರಾದ್ರಿಯಂ ಪತ್ತಿದನಮರಗಣಸ್ತುತ್ಯನೆನಿಪಾದಿತ್ಯನು ||೪೬||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಆವೇಳೆಯಲ್ಲಿ ಸೂರ್ಯೋದಯವಾಗುತಿದ್ದಿತು. ಒದವಿದ ತಮಂ ಪರೆಯಲೊಡನೆ, ಲೋಕದೊಳಗಿರ್ದ ಜನರ ನಿದ್ರೆಯೆಂಬ ಕತ್ತಲೆಯು ಹರಿಯಲಾಗಿ, ಕೊಳಂಗಳಲ್ಲಿದ್ದ ಪದುಮಂಗಳು ಅರಳಲಾಗಿ, ಅವಱೊಡನೆ ಲೋಕದ ಜನಂಗಳ ಕಣ್ಣುಗಳೆಂಬ ಕಮಲಂಗಳು ಅರಳುತಿರೆ, ಉದಯವಾಗಲೊಡನೆ ಸಮಸ್ತ ಜನಂಗಳ ಉದ್ಯೋಗಂಗಳು ಉದಿಸುತ್ತಿರಲಾಗಿ, ಕಿರಣಂಗಳ ಕೆದಱುತ್ತ ಪೂರ್ವದಿಕ್ಕಿನ ಪರ್ವತಾಗ್ರದಲ್ಲಿ ಅಮರಗಣಗಳ ಸ್ತೋತ್ರಪಾತ್ರನಾದ ಆದಿತ್ಯನು = ಸೂರ್ಯನು, ತಲೆದೋಱಿದನು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದನು.

---

* ಈ ಗುರಿತಿನ ಸ್ಥಳದಲ್ಲಿ ಈ ಪದ್ಯದ ಟೀಕೆಯಲ್ಲಿ ಬಹಳ ತಪ್ಪು ಇರುವಂತೆ ತೋರುತ್ತದೆ.

ಬಳಿಕಲಾಸಂಭ್ರಮದೊಳಡಿಗಡಿಗೆ ಸಂಭ್ರಮಿಸಿ ।
ಸಲೆ ಶಿವನ ನಾಮಸ್ತವಂಮಾಡುತಿರಲು ಸಾ ।
ಕೆಲೆ ಕೃಷ್ಣ ಕರದ ಬ್ರಹ್ಮ ಕಪಾಲಕಾಹುತಿಯನೀಯಬೇಕೆಂದೆನ್ನಲು ॥
ಮಲಹರನೆ ಅಂತಾಗಲಿ ಮಹಾಪ್ರಸಾದವಿದ ।
ನಿಱುಹಿ ನೀಂ ಚಿತ್ತೈಪುವೆನುತ ವಜ್ರದ ಕಂಭ ।
ದಲಿ ತನ್ನ ತಲೆಯನೊಡೆದರುಣಜಲನುಂ ಸುರಿಯುತಿರ್ದನಜಪಾತ್ರೆಯೊಳಗೆ॥

ಟೀಕು — ಕೇಳಿರೈ, ಎಲೆ ಮುನಿಗಳಿರಾ! ಸೂರ್ಯೋದಯವಾದ ಸಮಯದಲ್ಲಿ ಲಕ್ಷ್ಮೀಕಾಂತನಾದ ನಾರಾಯಣಸ್ವಾಮಿ ಸಂಭ್ರಮದೊಡನೆ ಕೂಡಿದಾತನಾಗಿ, ಸಂತಸದಿಂದ ಶಿವನಾಮಸ್ತೋತ್ರವ ಮಾಡುತಿರಲಾಗಿ, ಈಶ್ವರನು-ಸಾಕುಸಾಕು ಎಲೆ ಕೃಷ್ಣ, ನನ್ನ ಕರದಲ್ಲಿ ಇದ್ದ ಬ್ರಹ್ಮನ ಕಪಾಲಕ್ಕೆ ಆಹುತಿಯ ಮಾಡು ಎಂದು ನುಡಿಯಲಾಗಿ; ಆನಾರಾಯಣನು—ಎಲೈ ಈಶ್ವರನೇ ಮಹಾಪ್ರಸಾದ ಹಾಗೆಯಾಗಲಿ, ಪಾತ್ರೆಯ ನಿಳುಹಿ, ಚಿತ್ತೈಸುವುದು ಎಂದು ಹೇಳಲಾಗಿ; ಪಾತ್ರೆಯ ನಿಳುಹಲಾಗಿ; ಮುಂದಿರ್ದ ವಜ್ರದ ಕಂಭವಂ ಹಾಯ್ದು ತನ್ನ ತಲೆಯೊಡೆದು, ರಕ್ತಜಲಧಾರೆಯನು ಆ ಅಜಪಾತ್ರೆಯೊಳಗೆ =ಆ ಬ್ರಹ್ಮಕಪಾಲವೆಂಬ ಪಾತ್ರೆಯಲ್ಲಿ ಸುರಿಯುತ್ತಿರ್ದನು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದನು.

ಕರಿಯ ಬಱಿಕೆಯ್ಯ ತೋರದಲರುಣಜಲಧಾರೆ ।
ಸುರಿಸುರಿದು ತುಂಬುತಿರಲದ[1]ಕದೇ ನೂರ್ಮಡಿಸಿ[1] ।
ಶಿರಪಾತ್ರೆ ಹೆಚ್ಚಿ ಬಳೆಯುತ್ತಲಿರೆ [2]ತಲೆಯ ಸಾರವೆಲ್ಲ ಪೋಱ[3]ತೊ
ಇರದೆ ತತ್ತರಿಸಿ ಬೀಱುತಿರೆ[2] ಕೈವಿಡಿದೆತ್ತಿ । [ಱ[3]ತು ಹರಿ ॥
ಯರೆಯಾದುದೀಪಾತ್ರೆ[3]ಯೇನಿದಕ್ಕೆನಲುನಾ ।
ಧರೆಯ ಭಾರವನಿಱುಹಿ ಪರಿತುಷ್ಟಿಯಂ ಮಾಱ್ಪೆನೀಶ ಚಿತ್ತೈಸೆಂದನು[3] ॥

ಪಾ.—1. ಕಂಡು ಬ್ರಹ್ಮನ ಸು.
2. ತತ್ಸುರಿದ ಸಾರವೆಲ್ಲವು ಪೋಗಿ ದೇಹವರಿತು...ತರತರಿಸುತ ಬೀಳೆ.
3. ಯಿದಕೆವಿಶ್ವಭೂ । ಧರೆಯ ಭಾರವಿಳುಹುವ ಪರಿಯ ಮಾಳ್ಪನೀಶಬರದ ಚಿತ್ತೈಸೆಂಧನಾಕೃಷ್ಣನು.

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಅರಕ್ಷಣಕರ್ತನಾದ ನಾರಾಯಣನ ಶಿರಸ್ಸಿನಿಂದ ಆಸೆಯು ಬರಿಕೈಯ ತೋರದಲ್ಲಿ ರಕ್ತಜಲಧಾರೆ ದಿವಾರಾತ್ರೆಯೆನ್ನದೆ ಸುರಿಯುತಿರಲಾಗಿ, ಆಸುರಿದು ತುಂಬಿತು ಎಂಬ ವೇಳೆಗೆ ಆ ಬ್ರಹ್ಮನ ಕಪಾಲವು ಅದಕೆ ಅದೇ ನೂರ್ಮಡಿ ಹೆಚ್ಚಿ ಬಳೆವ ಸಮಯದಲ್ಲಿ, ಆ ಪುರುಷೋತ್ತಮನು ಶರೀರದಲ್ಲಿರ್ದ ಸಾರವೆಲ್ಲವೂ ಒಱೆತು ತತ್ತರಿಸಿ ಬೀಳುತಿರ್ಪುದಂ ಶಂಕರಂ ಕಂಡು, ನಸುನಗೆಯಿಂದ ಕೈವಿಡಿದೆತ್ತಿ—ಎಲೈ ದಾಮೋದರಾ! ಈಪಾತ್ರೆ ಅರೆಯಾಯಿತು, ಇದಕ್ಕೆ ಮುಂದೆ ಏನು ಎನ್ನಲಾಗಿ; ಭೂಭಾರವನಿಳುಹಿ ಇದಕ್ಕೆ ಸಂತುಷ್ಟಿಯ ಮಾಡೇನು, ನೀನು ಚಿತ್ತೈಸೆಂದು, ಶ್ರೀ ಗೋಪಾಲಸ್ವಾಮಿ ಬಿನ್ನಹ ಮಾಡಿದನು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದಾನು.

ನಡೆಯೆಂದು ನಡೆದು ನಾಲ್ವತ್ತೆಂಟು ಯೋಜನಂ |
ಬಡೆವಿಹ ಕುರುಕ್ಷೇತ್ರದೆಡೆಗೆ ಬಂ[1]ದಲ್ಲಿ[1] ತ |
ನ್ನೆಡಗೆಯ್ಯನೆಡೆಗೊಂಡ ಬ್ರಹ್ಮನ ಶಿರಃಕಪಾಲವನಿಲ್ಲಿ [2]ಬಂಡಾರಿಸಿ[2] ||
ತಡೆಯದೀಪಾತ್ರೆಯುಂ ತುಂಬಿ[3]ಲ್ಲಿ[3] ತುಂಬದಿ |
ರ್ದೊಡೆಯದಕ್ಕೆ ತಕ್ಕುದಂ ಮಾೞ್ಪೆನೀಮಣಿಪಮಂ |
ಪೊಡವಿಯಱ[4]ಯಲು[4] ಮಾಡಿ ಬಾ ಕೃಷ್ಣನೇ ಎಂದು ಕೈಲಾಸಕ್ಕೈದಿದ [ನಭವನು || ೪೯

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಆವಿಶ್ವನಾಟಕಸೂತ್ರಧಾರಿಯಾದ ಮಹಾದೇವನು ಶ್ರೀ ಕೃಷ್ಣನ ನಡೆಯೆಂದು ಕರೆದುಕೊಂಡು ಬಂದು ನಾಲ್ವತೆಂಟು ಯೋಜನ ಪರಿಪ್ರಮಾಣದಿಂದೊಪ್ಪುವ ಕುರುಕ್ಷೇತ್ರಕ್ಕೆ ಬಂದು, ಆ ಬ್ರಹ್ಮಕಪಾಲವನ್ನು ಇಲ್ಲಿ ಬಂಡಾರಿಸಿ ಈ ಪಾತ್ರೆಯು ತುಂಬಿಸೆಂದು ನಿಯಮಿಸಿ, ಇದು ತುಂಬದೆ ಇದ್ದರೆ ಇದಕ್ಕೆ ತಕ್ಕುದ ನಾನು ಮಾಡೇನು, ನೀನು ಈ ಭೂಮಿಯಲ್ಲಿ ಅಱಿವ ಮರ್ಯಾದೆಯಿಂದ ಈಮಣಿಹವನು ಮಾಡಿ ಬಾರೆಂದು ಶ್ರೀ ಗೋಪಾಲಕೃಷ್ಣಂಗೆ ನಿರೂಪಿಸಿ,

ಆಬಳಿಕ ಭಕ್ತಜನ ಲೀಲಾಲೋಲಚಿತ್ತನು ಚತುರ್ದಶಭುವನಾರಾಧ್ಯನು ಕಾರುಣ್ಯವಾರಾಶಿ ಕರುಣಾಳುಗಳ ದೇವನು ತ್ರಿಶೂಲಮಂ ತಿರುಹುತ್ತ, ನಡುವಿನೊಳಗಣ ಘಂಟೆ ಧಣಧಣಮೆನ್ನಲು, ಕರದ ಡಮರುಗ ಢಮ್ಮೆಂದು ನುಡಿಸುತ್ತ, ಕೈಲಾಸಕ್ಕೆ ನಡೆದು ಬರುವಲ್ಲಿ—ಧೂಮಾಂಗನೆಂಬ ಗಣೇಶ್ವರನು ಸಹಸ್ರ ಯೋಜನದ ಸತ್ತಿಗೆಯಂ ಪಿಡಿಯೆ, ಪರಂಜ್ಯೋತಿ ಗಣೇಶ್ವರನು ಚಾಮರವನಿಡಲು, ಶಿತಿಕಂಠನೆಂಬ ಗಣೇಶ್ವರನು ಸೀಗುರಿಯನಿಕ್ಕಲು, ನಂದಿ ಮದ್ದಳೆಯ ನುಡಿಸೆ, ದೇವದುಂ

ಪಾ—1. ದಂದು. 2. ಬಂಡಿರಿಸಿ. 3. ಲ್ಲ. 4. ನೊಲು.

ದುಭಿ ವೊಳಗೆ, ನರರು ನಲಿಯೆ, ನಾಗರ್ಕಳಚ್ಚರಿಸೆ, ಸುರರು ಸುಮ್ಮಾನಿಸೆ, ಪ್ರಮಥಗಣಂಗಳು ಕುಣಿದಾಡೆ, ರುದ್ರಗಣಂಗಳು ಪಾಡುತಿರಲಾಗಿ, ವಿನುತಜಗತ್ಕಲ್ಪವೃಕ್ಷನು ಕಾಮಿತಜನಕಾಮಧೇನುವು ಭಕ್ತಜನಬಾಂಧವನು ಕೈಲಾಸಕ್ಕೆ ನಡೆತರುತಿರ್ದನು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದಾನು.

ಭುವನದೊಳಗಾದಿಯಲಿ ಜನಿಸಿದನು ಬ್ರಹ್ಮನಿಂ |
ದವೆ ನವಬ್ರಹ್ಮರವರೊಳಗತ್ರಿಯತ್ರಿಸಂ |
ಭವ ಸೋಮ ಸೋಮನಿಂ ಬುಧ ಬುಧಾತ್ಮಜ ಪುರೂರವನಾಪುರೂರವ [ನೊಳು ||
ದ್ಭವಿಸಿದಂ ನಹುಷನಾನಹುಷನಿಂದೆ ಯಯಾತಿ |
ಯವಗೆ[1]ಮತ್ಸ್ನವ ಮತ್ಸ್ಯವಾತ್ಮಭವ[1] ಭರತನೆಂ |
ಬವನವಗೆ ಸಹೋತ್ರಿಸಹೋತ್ರಿಯಿಂದವೆ ಹಸ್ತಿನಾಪುರವನಾಳ್ದ ಹಸ್ತಿ ||

ಟೀಕು— ಕೇಳಿರೈ ಎಲೆ ಮುನಿಗಳಿರಾ! ಕುರುವಂಶವಾವ ಪ್ರಕಾರವೆಂದರೆ— ಆದಿಸೃಷ್ಟಿಯಲಿ ಶಿವನ ದಕ್ಷಿಣಾಂಗದಲ್ಲಿ ಬ್ರಹ್ಮ ಹುಟ್ಟಿದ; ಆಬ್ರಹ್ಮನಿಂದ ಮರೀಚಿ, ಅತ್ರಿ, ಅಂಗಿರಸ, ಪೌಲಸ್ತ್ಯ, ಪುಲೋಹ, ಕ್ರತು, ದಕ್ಷ, ಕಶ್ಯಪ, ಭೃಗು ಮೊದಲಾದ ನವಬ್ರಹ್ಮರುಗಳಾದರು ; ಅವರೊಳಗೆ ಅತ್ರಿಸಂಭವನು ಸೋಮನು ; ಸೋಮನಿಂದ ಬುಧನಾದ; ಬುಧನಿಂದ ಪುರೂರವನಾದ; ಪುರೂರವನಿಂದ ನಹುಷನಾದ; ನಹುಷನಿಂದ ಯಯಾತಿಯಾದ; ಯಯಾತಿಯಿಂದ [1]ಮತ್ಸ್ಯವನಾದ; ಮತ್ಸ್ಯವನಿಂದ[1] ಭರತನಾದ; ಭರತನಿಂದ ಸಹೋತ್ರಿಯಾದ; ಸಹೋತ್ರಿಯಿಂದ ಹಸ್ತಿಯಾದ; ಆಹಸ್ತಿಯೆಂಬಾತನು ತನ್ನ ಹೆಸರಿನಿಂದ ಹಸ್ತಿನಾಪುರವೆಂಬ ಪಟ್ಟಣವ ಕಟ್ಟಿಸಿ ಆಳಿಕೊಂಡಿರುತಿರ್ದನು ಕಾಣಿರೈ ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದಾನು.

ಆವನಿಂದ ಕುರು ಕುರುವಿನಿಂದೆ ಪೃಥ್ವೀಶನೆಂ |
ಬವನವನ ಸುತ ಶಾಂತ†ಶಾಂತನಿಂ ಸಂಭವಿಸಿ |
ದವನುಂ ವಿಚಿತ್ರವೀರಿಯನವನ ನಂದನರು ಧೃತರಾಷ್ಟ್ರ ಪಾಂಡುನೃಪರು ||
ಅವರ ಮಕ್ಕಳು ಕೌರವರು ಪಾಂಡವರು ಮುನ್ನಿ |
ನವರಿಂದೆ ಸೋಮವಂಶದ ರಾಯರುಗಳೊಳೊ |
ಪ್ಪುವ ಸತ್ಕುಲಪ್ರದೀಪಕರೆನಿಸಿ ಸಕಲ ಸಾಮ್ರಾಜ್ಯವಾಳುತ್ತಿರ್ದರು ||

ಪಾ—1. ಪ್ರರುತ್ಸಪುರುತ್ಸವಾತ್ಮಭವ ಯುತ್ಸವ ಯುತ್ಸವಗೆ.

† ಶಂತನು ಎಂದು ಪ್ರಸಿದ್ಧಿಯಿದೆ; ಶಾಂತನೆಂದು ಎಲ್ಲೂ ಕೇಳಿಲ್ಲ.

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಹಸ್ತಿಯೆಂಬವನಿಂದ ಕುರುವೆಂಬಾತನಾದ; ಆಕುರುರಾಯನಿಂದ ಪೃಥ್ವೀಶನೆಂಬವನಾದ; ಆಪೃಥ್ವೀಶನಿಂದ ಶಾಂತರಾಯನಾದ; ಆಶಾಂತರಾಯನಿಂದ ವಿಚಿತ್ರವೀರ್ಯನಾದನು; ಆವಿಚಿತ್ರವೀರ್ಯನಿಂದ ಧೃತರಾಷ್ಟ್ರ, ಪಾಂಡುನೃಪಾಲರು ಆದರು; ಅವರ ಮಕ್ಕಳು ಕೌರವಪಾಂಡವರಾದರು. ಮುನ್ನಿನವರಿಗಿಂತ ಹೆಚ್ಚಾಗಿ ಸೋಮವಂಶದ ರಾಯರುಗಳೊಳು ಒಪ್ಪುವ ಸತ್ಕುಲ ಪ್ರದೀಪಕರೆನಿಸಿ ಅವರು ರಾಜ್ಯವನಾಳುತಿರ್ದರು, ಕಾಣಿರೈ ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದನು.

ಹರನಾಜ್ಞೆಯಿಂ ಕೃಷ್ಣನಂದು ಕೌರವಪಾಂಡ |
ವರೊಳು ದಾಯಾದವಿಷಯದ ಕದನನುಂ [1]ಬಳೆಸಿ[1] |
ನರನ ಸಾರಥಿಯಾಗಿಯಷ್ಟಾದಶಾಕ್ಷೋಹಿಣೀಬಲವ ಸಂಹಾರಿಸೆ ||
ಕುರುಭೂಮಿಯೊಳಗೇೞು ತಾಳೆಮರದುದ್ದನೆ |
ತ್ತರು ಪರಿಯೆ ಪಾತ್ರೆ[2]ದುಂಬ[2]ದೊಡಾಸಮಯದೊಳೀ |
ಶ್ವರನಲ್ಲಿಗೆಯ್ತಂದದಂ ಗಗನಕಿಡೆ ಘುಡಿಘುಡಿಸು[3]ತುರಿಯ[3] ಸಿಡಿಲಾಯದು ||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಜಗತ್ಸಂಹಾರವ ಮಾಡುವ ಹರನಾಜ್ಞೆಯಿಂದ ದೇವಕೀಕುಮಾರನಾದ ಕೃಷ್ಣನು ಧೃತರಾಷ್ಟ್ರಕುಮಾರರಾದ ಕೌರವಮೊದಲಾದ ನೂಱೊಂದು ಕುಮಾರರಿಗೂ ಪಾಂಡುರಾಯನ ಕುಮಾರರಾದ ಧರ್ಮರಾಯ ಮೊದಲಾದ ಪಾಂಡವರಿಗೂ ದಾಯಾದ ವಿಷಯದಿಂದ ಕದನವ ಬಳೆಸಿ, ತಾನು ಅರ್ಜುನಂಗೆ ಸಾರಥಿಯಾಗಿ, ಅಷ್ಟಾದಶಾಕ್ಷೋಹಿಣೀಬಲವ ಸಂಹಾರಮಾಡೆ; ಕುರುಭೂಮಿಯೊಳಗೇಳು ತಾಳೆಯ ಮರದುದ್ದ ನೆತ್ತರು ಪರಿದೂ ಪಾತ್ರೆ [4]ತುಂಬ[4]ದಿರಲಾಗಿ; ಆಸಮಯದಲ್ಲಿ ಈಶ್ವರನು ಅಲ್ಲಿಗೆ ಬಂದು ಆಪಾತ್ರೆಯಂ ತೆಗೆದು ಗಗನಕ್ಕಿಡಲಾಗಿ; ಅದು ಘುಡಿಘುಡಿಸುತ್ತ ಉರಿಯನುಗುಳುತ್ತ ಸಿಡಿಲಾಗಿ, ಆಕಾಶದಲ್ಲಿ ತಿರುಗುತಿದ್ದಿತು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದನು.

ಅಂಬರವನೆಡೆಗೊಂಡು ಕಾಳಮೇಘಂಗಳೆಂ |
ದೆಂಬ ಪೆರ್ಮುಗಿಲ್ಗಳಂ ಪೆರ್ಚಿದಂತಾಹಾರ |
ಗೊಂಬುತಿರು ನೀನೆಂದಜನ ಪಾತ್ರೆಗಾಜ್ಞೆಯಂ ಮಾಡುತಲ್ಲಿಂದ ಮರಳಿ ||
ಅಂಬುಜೋದರನುಮಂ ಹಱಸಿ ಬೀೞ್ಕೊಂಡು ಬೞಿ |
ಕಂಬಿಕಾವರನಭಯಕರನಪ್ರತಿಮಗೋೞ್ಕ |
ದಂಬವಲ್ಲಭನ ಬೆನ್ನಡಱ್ ನಡೆತಂದು ಕೈಲಾಸಪುರಮಂ ಪೊಕ್ಕನು || ೫೦

ಪಾ—1. ಬೆರಸಿ. 2. ದುಂಬಿ. 3. ತುರುವ. 4. ತುಂಬ.

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಆಕಾಶವನೆಡೆಗೊಂಡ ಆ ಬ್ರಹ್ಮನ ಕಪಾಲಕ್ಕೆ ನೀನು ಈ ಆಕಾಶದಲ್ಲಿದ್ದುಕೊಂಡು ಕಾಳಮೇಘ ಮೊದಲಾದ ಮೇಘಂಗಳಿಂ ಪೆರ್ಮಳೆಗಳು ಕಱೆದರೆ ಆ ಉದಕಂಗಳು ಹೆಚ್ಚಿದಹಾಗೆ ಆ ಉದಕಂಗಳನೆ ಆಹಾರವ ಕೊಂಡು ನೀನಿರು ಎಂದು ಆ ಬ್ರಹ್ಮನ ಕಪಾಲಕ್ಕೆ ಆಜ್ಞೆಯಂ ಮಾಡಿ, ಅಲ್ಲಿಂದ ಮರಳಿ, ನಾರಾಯಣನಿದ್ದಲ್ಲಿಗೆ ಬಂದು, ಆತಂಗೆ ಹಱಿಸಿ, ನಿನ್ನಿಂದ ಬ್ರಹ್ಮನ ಕಪಾಲಕ್ಕೆ ಆಹುತಿಯಾಯಿತೆಂದು, ಆತನ ದ್ವಾರಕಾಪುರಕ್ಕೆ ಕಳುಹಿದಬಳಿಕ ಅಂಬಿಕಾರಮಣನು ಅಭಯಕರನು ಅಪ್ರತಿಮನು ನಿರ್ವಿಕಲ್ಪನು ನಿರಾಮಯನು ಧರ್ಮರೂಪಾದ ಬಸವೇಶ್ವರನ ಬೆನ್ನೊಳವತರಿಸಿ, ಪರಮೇಶ್ವರನು ರುದ್ರಗಣಂಗಳು ಪ್ರಮಥಗಣಂಗಳು ವೀರಗಣಂಗಳು ಸಮೇತವಾಗಿ, ಎತ್ತಿದ ವೃಷಭಧ್ವಜಂಗಳಿಂದ, ಹೊಡೆವ ದೇವದುಂದುಭಿಗಳಿಂದ ಸರ್ವ ಸಂಭ್ರಮದಿಂದ ಕೈಲಾಸಪುರಮಂ ಪೊಕ್ಕು, ದೇವಿಯರೊಡನೆ ವಿನೋದದಿಂದ ಶಿವನು ಸುಖದಲ್ಲಿದ್ದನು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಪೇಳುತಿರ್ದಾನು.

ಭಾರತವ ಮಡುಹಿ ಭೂಭಾರವನಿೞುಹಿ ಸರ್ವ |
ಧಾರಿಣೀಶ್ವರಪಟ್ಟಮಂ ಧರ್ಮಜಗೆ ಕಟ್ಟಿ |
ಚಾರುಲಗ್ನದೊಳು ಪಾಂಡುಕುಮಾರರನಿಬರಂ ಹಸ್ತಿನಾಪುರದೊಳಿರಿಸಿ ||
ಕೌರವನಿಗೀಶ[1]ನನುವಿಡಿದಿನ್ನು[1] ಸೌಖ್ಯಮಂ |
ಸೇರಿಸುವೆನೆಂದು [2]ಮನಸಂದು[2] ನಡೆತಂದು ತಾ |
ದ್ವಾರಾವತಿಗೆ ಬಂದು ಕೃಷ್ಣನತ್ಯಧಿಕ [3]ಸಂರಂಭ[3]ದಿಂದಿರುತಿರ್ದನು ||೫೩||

ಟೀಕು—ಕೇಳಿರೈ, ಎಲೆ ಮುನಿಗಳಿರಾ! ಆ ಪರಮೇಶ್ವರನು ಭಿಕ್ಷಾಟನದ ಲೀಲೆಯನುಳಿದು, ಕೈಲಾಸದೊಳಗಿರ್ದನು. ಇತ್ತಲಾನಾರಾಯಣಸ್ವಾಮಿಯು ಭಾರತವ ಮಡುಹಿ, ನೂಱೊಂದು ಕುಮಾರರನು ಅಕ್ಷೋಹಿಣಿ ಮಾರ್ಬಲವನು ಸಂಹಾರಮಾಡಿ, ಬ್ರಹ್ಮನ ಕಪಾಲವ ತುಂಬಿಸಿ, ಭೂಮಿಯ ಭಾರವನಿಳುಹಿ, ಧರ್ಮರಾಯಂಗೆ ಶುಭಲಗ್ನದಲ್ಲಿ ಸಕಲರಾಜ್ಯದ ಪಟ್ಟಮಂ ಕಟ್ಟಿ, ಭೀಮಾರ್ಜುನ ನಕುಲ ಸಹದೇವರೆಂಬ ಪಾಂಡುಕುಮಾರರಂ ಹಸ್ತಿನಾಪುರದೊಳಿರಿಸಿ, ಆ ತದನಂತರದಲ್ಲಿ ಆ ಕೌರವನಿಗೆ ಈಶ್ವರನಿಂದ ಸೌಖ್ಯವಾಗಿಸಬೇಕೆಂದು ಚಿತ್ತದಲ್ಲಿ ನೆನೆದು, ಆ ಶ್ರೀಮನ್ನಾರಾಯಣನು ದ್ವಾರಾವತಿಗೆ ಬಂದು, ಅತ್ಯಂತ ಸಂಭ್ರಮದಿಂದ ಸುಖಸಂಕಥಾ ವಿನೋದಗಳಿಂದ ಇರುತಿರ್ದನು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದಾನು.

ಪಾ—1. ಶ್ವರನ ಪಿಡಿದಿನ್ನು. 2. ಮನಬಂದು. 3. ಸೌಭಾಗ್ಯ.

ಹಲವು ಕಾಲದ ಮೇಲೆ ಮುನಿಯಿತ್ತ ಶಾಪದಿಂ |
ಹುಲುಬೇಡನಂಬಿಂದ ಕೃಷ್ಣಾವತಾರವಳಿ |
ಯಲು ಬಳಿಕ ಧರ್ಮಜಂ ಹಸ್ತಿನಾಪುರವನಾಳುತಿರೆ ಮೂವತ್ತು ವರುಷ ||
ಕಲಿಯುಗಂ ಬರೆ ಪರೀಕ್ಷಿತಗೆ ಪಟ್ಟವ ಕಟ್ಟಿ |
ನಳಿನಮುಖಿ ಭೀಮಾರ್ಜುನರು ಯಮಳರೊಡನೆರಸಿ |
[1]ಪರಿದುತ್ತರಾಭಿಮುಖವಾಗಿ ಹಿಮವಂ ದಾಂಟಿ ನಾರಾಯಣನ ಕಂಡನು[1] ||

ಟೀಕು —ಕೇಳಿರೈ, ಎಲೆ ಮುನಿಗಳಿರಾ! ಈ ಪ್ರಕಾರದಲ್ಲಿ ದ್ವಾರಕಾಪುರದಲ್ಲಿ ದೇವಕೀಕುಮಾರನು ಹದಿನಾರುಸಾವಿರ ಗೋಪಸ್ತ್ರೀಯರೊಡನೆ ಸುಖದೊಳಿರ್ದನು. ಹಲವು ಕಾಲದಿಂ ಮೇಲೆ ದೂರ್ವಾಸನಿತ್ತ ಶಾಪದಿಂದ ಹುಲುಬೇಡನಂಬಿಂದ ಕೃಷ್ಣಾವತಾರ ಸಂಪೂರ್ಣವಾಗಲಾಗಿ, ಆ ಬಳಿಕ ಹಸ್ತಿನಾಪುರದಲ್ಲಿ ಧರ್ಮರಾಯನು ಮೂವತ್ತು ವರುಷ ಪರಿಯಂತ ರಾಜ್ಯವನಾಳಿ, ಕಲಿಯು ಪ್ರವೇಶಿಸಲಾಗಿ ಧರ್ಮಶೀಲರು ಅಧರ್ಮಯುಗದಲ್ಲಿದ್ದರೆ ಧರ್ಮಕ್ಕೆ ಹಾನಿ ಬಹುದೆಂದು ತಿಳಿದು ಪರೀಕ್ಷಿತರಾಯಂಗೆ ಪಟ್ಟಮಂ ಕಟ್ಟಿ ದ್ರೌಪದಿ ಭೀಮಾರ್ಜುನ ನಕುಲ ಸಹದೇವರ ಸಮೇತನಾಗಿ ಉತ್ತರಾಭಿಮುಖವಾಗಿ ನಡೆದು, ಹಿಮವಂ ದಾಂಟಿಹೋಗುವ ಸಮಯದಲ್ಲಿ (ಅವರು ಸಾಯಲು ಅವರನ್ನುಳಿದು ತಾನೊಬ್ಬನೇ ಹೋಗುತ್ತ) ನಾರಾಯಣಸ್ವಾಮಿ ಪ್ರಸನ್ನನಾಗಲಾಗಿ, ಕಂಡು ನಮಿಸಿ, ಸ್ತುತಿಸಿದನು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಮುನೀಶ್ವರನು ಹೇಳುತಿರ್ದನು.

ಧರಣಿಪನನಪ್ಪಿ ಧರ್ಮಕುಮಾರಗನುಜರನು |
ತರುಣಿ ಪಾಂಚಾಲಿಯುಂ ತೋರುತುಂ ಕೈಲಾಸ |
ಪುರಕುಮುದ್ದ ಶಿವನ ಕಾಣಿಸೆ ಯುಧಿಷ್ಠಿರನಭೀಷ್ಟಾರ್ಥಮಂ ಕೈಸೇರಿಸಿ ||
ಪರಿಯ ಬಿನ್ನಹವ ಲಾಲಿಸಿ ಕೃಪಾದೃಷ್ಟಿಯಿಂ |
ಕುರುರಾಜಗೆ ವಸಂತ ರಾಜ್ಯವಂ* ಕೊಟ್ಟು ಶಂ|
ಕರನು ಸಕಲೋರ್ವಿಯಂ ಪಾಲಿಸುತ ರಜತಾಚಲಾಗ್ರದೊಳಗೆಸೆದಿರ್ದನು||

ಟೀಕು —ಕೇಳಿರೈ, ಎಲೆ ಮುನಿಗಳಿರಾ! ಧರ್ಮರಾಯನ ಧರ್ಮವರ್ತನಕ್ಕೆ ನಾರಾಯಣನು ಪ್ರಸನ್ನನಾಗಿ, "ಮಮ ಪ್ರಾಣಾ ಹಿ ಪಾಂಡವಾಃ" ಎಂಬ ನುಡಿಗೆ (ತಕ್ಕಂತೆ) ಧರ್ಮರಾಯನ ಬಿಗಿಬಿಗಿದು ಆಲಿಂಗಿಸಿಕೊಂಡು, ಭೀಮಾರ್ಜುನ ನಕುಲ

ಪಾ—1. ಮೂರು ಪ್ರತಿಯಲ್ಲಿಯೂ ಇದೇಪಾಠವಿದೆ. "ಸಲೆ ನಡೆದು ಬಳಿಕವರ ನೋದು ಹಿಮವಂ ದಾಂಟ ನಾರಾಯಣನ ಕಂಡನು." ಎಂದು ಇದ್ದರೆ, ಪ್ರಾಸದಲ್ಲಿಯೂ ತಪ್ಪಿರುವುದಿಲ್ಲ, ಮುಂದಣ ಪದ್ಯದ ಕಥೆಗೂ ಸರಿಹೋಗುತ್ತದೆ.

ಸಹದೇವ ದ್ರೌಪದಿಯರ ತೋರಿಸಿ ಕೊಟ್ಟು ಸಂತೈಸಿ, ಕೈಲಾಸಪುರಕ್ಕೆ ಒಡಗೊಂಡು ಬಂದು, ಶಿವನ ಕಾಣಿಸಿ, ಶಿವಂಗೆ ಬಿನ್ನೈಸಿ ಧರ್ಮರಾಯಂಗೆ ಇಷ್ಟಾರ್ಥಮಂ ಕೊಡಿಸಿ, ಕೌರವನ ಪಾತಕವ ತೊಲಗಿಸಿ, ವಸಂತರಾಜ್ಯವಂ* ಕೌರವಂಗೆ ಕೊಡಿಸಿ, ನಾರಾಯಣಸ್ವಾಮಿ ವೈಕುಂಠಕ್ಕೆ ಹೋಗಲಾಗಿ; ಶಂಕರನು ರಜತಾಚಲಾಗ್ರದಲ್ಲಿ ಸಕಲ ಲೋಕಂಗಳನು ಪಾಲಿಸುತಿರ್ದನು ಕಾಣಿರೈ, ಎಲೆ ಮುನಿಗಳಿರಾ! ಎಂದು ಸೂತಪೌರಾಣಿಕನು ಹೇಳುತಿರ್ದನು.

[1]ಇಂದು ನಾಂ ಕೃತಕೃತ್ಯರಾದೆವೀಶ್ವರನದೊಂ ।
ದಂನವಂ[1] ನೀಂ ಮೆಮಗೆ ವಿರಚಿಸಿದಿರಾಗಿನ್ನು ।
ಸಂದೇಹವೇನು ಬರ್ದುಕಿದೆವೆಂದು ಸನಕಾದಿ ಮುನಿಗಳಾನಂದದಿಂದ ॥
ವಂದಿಸಲು ಕೈಮುಗಿಯುತವರವರಸುಚಿತೋಕ್ತಿ ।
ಯಿಂದೆ ಮನ್ನಿಸುತ ಬೀಳ್ಕೊಂಡು[3] ಸೂತಮುನೀಂದ್ರ ।
[2]ನಂದು[2]ಮಾಮೇರುವಿನ [ಪೊರೆಯೊಳಿಹ] ಪುಣ್ಯಾಶ್ರಮವನೆಯ್ದಿ
[ಸುಖಮಿರ್ದನು ॥ ೫೬

ಟೀಕು—ಈ ಪ್ರಕಾರದಲ್ಲಿ ನೈಮಿಶಾರಣ್ಯವಾಸಿಗಳಾದ ಮುನಿಗಳಿಗೆ ಸೂತ ಮುನೀಶ್ವರನು ಶಿವನ ಭಿಕ್ಷಾಟನದ ಲೀಲೆಯಂ ಪೇಳಲಾಗಿ; ಆಮುನಿಗಳು ಸಂತಸದಿಂದ ಸೂತಮುನೀಶ್ವರಂಗೆ ಬಿನ್ನಹಮಾಡುತಿರ್ದರು—ಎಲೆ ಸೂತ ಮುನೀಶ್ವರ! ಇಂದು ನಾವು ಕೃತಕೃತ್ಯರಾದೆವು, ನಮಗೆ ಶಿವಕಥಾಮೃತವನ್ನು ನೀವು ಹೇಳಿದಿರಿ, ನಾವು ಬದುಕಿದೆವೆಂದು, ಸನಕಾದಿ ಮುನಿಗಳು ಆನಂದದಿಂದ ವಂದಿಸಲಾಗಿ; ಅವರವರಿಗೆ ಕೈಮುಗಿದು ವಂದಿಸಿ, ಅವರವರ ಆಶ್ರಮಕ್ಕೆ ಉಚಿತವಾದ ಮಾತುಗಳನಾಡಿ ಕಳುಹಿಸಿ, ಪೌರಾಣಿಕೋತ್ತಮನಾದ ಸೂತಮಹಾಮುನೀಂದ್ರನು ಮಹಾಮೇರುವಿನ ಹೊಱವಳಯದೊಳಿರ್ದ ತನ್ನ ಪುಣ್ಯಾಶ್ರಮಕ್ಕೆ ಬಂದು ಈಶ್ವರನ ಆರಾಧನೆಯಿಂದ ಸುಖದೊಳಿರುತಿರ್ದನು ಎಂದು ಕವೀಶ್ವರನು ಹೇಳುತಿರ್ದನು.

---

* ವಸಂತರಾಜ್ಯವೆಂದರೆ ಅರ್ಥವಾಗುವುದಿಲ್ಲ. “ಕುರುರಾಜಗೆಸೆವ ಸ್ವಾರಾಜ್ಯವಂ ಕೊಟ್ಟು” ಎಂದಿದ್ದರೆ, ಕೌರವನಿಗೆ ತನ್ನ ಸ್ವಾರಾಜ್ಯವಂ ಎಂದರೆ ಕೈಲಾಸ ಸುಖವನ್ನು ದಯೆಪಾಲಿಸಿ, ಎಂಬ ಅರ್ಥವು ಉಂಟಾಗುತ್ತದೆ.

ಪಾ—1. ಇಂದಾವು ಕೃತಕೃತ್ಯರಾದೆವೈ ಶಿವಕಥಾನಂದವಂ.

2. ನೆಂದು.

ಕ್ಷಿತಿಯೊಳೀಭಿಕ್ಷಾಟನದ ಚರಿತೆಯೆಂಬ ಸ |
ತ್ಕೃತಿಯ ಮುದದಿಂದೋ [ದಿ ಪೇಳ್ವರ್ಗೆ ಕೇಳ್ವರ್ಗೆ] |
ಪ್ರತಿಯ ಬರೆವರ್ಗಾಯುರಾರೋಗ್ಯವೈಶ್ವರ್ಯವನ್ನೀವನಭವನೆಂದು ||
[2]ಶ್ರುತಿಯಮತವಿದು ಪುರಾತನವಚನ ಋಷ್ಯುಕ್ತ |
ಕಥನವಿದು ಶಿವಪುರಾಣಾರ್ಥವೆಂದಱಿದಱಿದು[2] ||
ಚತುರರಾಹಾ! ಎಂದು ಪೊಗೞೆ[3] ಕವಿರಾಯಗುರುಲಿಂಗವಿಭು ರಚಿಯಿಸಿದನು||

ಟೀಕು—ಕ್ಷಿತಿಯೊಳೀಭಿಕ್ಷಾಟನದ ಚರಿತೆಯಂ – ಈ ಭೂಮಿಯಲ್ಲಿ ಶಿವನ ಭಿಕ್ಷಾಟನದ ಚರಿತೆಯೆಂಬ ಸತ್ಕಥೆಯನ್ನು ಸಂತಸದಿಂದ ರಾಗರಚನೆಯಲಿ ಓದಿದ ವರಿಗೆ, ಇಲ್ಲಿ ಇದ್ದ ಶಬ್ದ ಅರ್ಥಂಗಳು ಎಲ್ಲರು ಅಱಿವ ಮರ್ಯಾದೆಯಿಂದ ಹೇಳಿದ ವರಿಗೆ, ಭಕ್ತಿಯಿಂದ ಕೇಳಿದವರಿಗೆ ಸಮಾನವಾಗಿ ವ್ಯಂಜನ ವಿಸರ್ಗಂಗಳ ಬಿಡದೆ ಅಕ್ಷರವ್ಯಕ್ತವಾಗಿ ಬರೆದವರಿಗೆ ಶಿವನು ಆಯುರಾರೋಗ್ಯ ಐಶ್ವರ್ಯವಿಷ್ಟನ್ನೂ ಪಾಲಿಸುವನು. ಇದು ಶ್ರುತಿಯ ಮತ, ಇದು ಪುರಾತನರ ವಚನ, ಇದು ಋಷಿ ಪ್ರೋಕ್ತ, ಇದು ಶಿವಪುರಾಣಾರ್ಥವೆಂದಱಿದಱಿದು ಚತುರರು ಆಹಾ! ಎಂದು ಹೊಗಳುವಂತೆ, ಕವೀಶ್ವರನಾದ ಗುರುಲಿಂಗದೇವರು ಬಿನ್ನಹವಂ ಮಾಡಿದನು; ಶಿವಭಕ್ತರುಗಳು ಕೇಳಿ ಕರುಣಿಸುವುದು ಎಂದು ಕವೀಶ್ವರನು ಬಿನ್ನಹವಂ ಮಾಡು ತಿರ್ದ್ದನು.

ಸ್ಥಿರಶಾಸನವಿದೆನಿಸಿ ಮೆಱೆವ ಭಿಕ್ಷಾಟನದ |
ಚರಿತೆಗಧಿಪತಿಯಾದ ಪರಮೇಶ್ವರಂ ಜಗ |
ದ್ಭರಿತನಾಗಿಪನೆಂತದೆನಲು ಗೋಪಾಂಗನೆಯರ ಮನೆ ಮನೆದಪ್ಪದೆ ||
ವರಕೃಷ್ಣನಿಪನದೆಂತೆನಲು ಗುರುಲಿಂಗವಿಭು |
[2]ಪರುಷದಿಂ ರಚಿಸಿದೀಮೋಹಕೃತಿ ರಸಿಕರಾ |
ಭರಣ ಭಾವುಕರ[2] ಕೋವಿದರ [3]ಮನವ[ನೊಳಕೊಂಡತಿ] ಸೊಬಗ[3]
[ಬೀಱುತಿಹುದು|| ೫೮

ಪಾ—1. ಶ್ರುತಿಮಾತಮಿದಿದು ಪುರಾತನಋಷಿಪ್ರೋಕ್ತಮುಹ ಕಥನಮಂ ಶಿವಪು ರಾಣೋಕ್ತಂಗಳಿಂದರಿತು. 2. ವಿರಚಿಸಿದ ಸತ್ಕೃತಿಯು ಮೋಹನದ ರಸಿಕ ರ್ಗೆ | ವರಭಾವಕರಣ. 3. ಮನವನಿಂಬುಗೊಂಡದು ಸೊಗಸ.

ಟೀಕು - ಈ ಭೂಮಿಯಲ್ಲಿ ಸ್ಥಿರಶಾಸನವಾಗಿ ಮೆಱೆವ ಈ ಭಿಕ್ಷಾಟನದ ಚಾರಿತ್ರಕ್ಕೆ ಅಧಿಪತಿಯಾದ ಪರಮೇಶ್ವರನು ಜಗದ್ಭರಿತನಾಗಿ ಹೇಗೆ ಒಪ್ಪುವನು ? ಎಂದರೆ ಶ್ರೀ ಕೃಷ್ಣನು ಹದಿನಾಱು ಸಾವಿರ ಗೋಪಾಂಗನೆಯರುಗಳ ಮನೆಮನೆಗಳೊಳಗೆ (ಹೇಗೆ) ತಪ್ಪದಿಹನು ಆ ಮರ್‍ಯಾದೆಯಿಂದ (ಇದ್ದನು ಎಂದರೆ) ಗುರುಲಿಂಗ ಕವೀಶ್ವರನು ಹೇಳಿದ ಮೋಹನವಾದ ಈಕೃತಿಯು ರಸಿಕರಾದವರಿಗೆ ಆಭರಣವಾಗಿ ಭಾವಜ್ಞರ ಮನಸ್ಸಿಗೆ ಸೊಗಸ ಬೀಱುತಿಹುದು ಎಂದು ಕವೀಶ್ವರನು ಬಿನ್ನಹ ಮಾಡುತಿರ್ದಾನು.

ಚಾರುವಾದಿತ್ಯಾಶ್ರಿತನ ಸೋಮಕೋಟೀರ |
ಭಾರನಂ ಮಂಗಳಾಕಾರನಂ ವಿಬುಧ [1]ವಿ |
ಸ್ತಾ [1]ರನುತಿಪಾತ್ರತ್ರಿಣೇತ್ರನಂ ಬೃಹಸ್ಪತಿ[2] ಶತಕೋಟಿ[2] ಸಂಕಾಶನಂ ||
ನಾರಾಯಣಾಕ್ಷಿ ಪೂಜಿತ[3]ಶುಕ್ರವರನ ಶನಿ[3] |
ವಾರವಂದ್ಯನನಗಣಿತಪ್ರಮಥರುಗಳ ಪರಿ |
ವಾರನೊಡೆಯನನೇೞುವಾರ ತಪ್ಪದೆ ನೆನೆದು ಬದುಕುವುದು ಸರ್ವಜನರು ||

ಟೀಕು—ಸೂರ್ಯನಿಂದ ಆಶ್ರಯಿಸಿಕೊಳ್ಳಲ್ಪಟ್ಟಾತನು, ಸೋಮನ ಧರಿಸಿದಾತನು, ಮಂಗಳವಾದ ಆಕಾರವುಳ್ಳಾತನು, ಬುಧಜನರಾದ ವಿದ್ವಾಂಸರಿಂದ ಕೊಂಡಾಡಿಸಿಕೊಳ್ಳಲು ತಕ್ಕಾತನು,...........ಈಪ್ರಕಾರದಿಂದ ಆದಿತ್ಯ ಸೋಮ ಮಂಗಳ ಬುಧ ಬೃಹಸ್ಪತಿ ಶುಕ್ರ ಶನಿಗಳೆಂಬೇಳು ವಾರಂಗಳಲ್ಲಿ ಈ ಪ್ರಮಥರೊಡೆಯನಾದ ಶಂಕರ ಮೂರ್ತಿಯ ಸರ್ವಜನರು ನೆನೆದು ಸುಖದಲ್ಲಿರ್ಪುದೆಂದು ಕವೀಶ್ವರನು ಹೇಳುತಿರ್ದಾನು.

ಗುರುವೆ ಜಯಜಯ ! ವೇದಶಾಸ್ತ್ರ ಸನ್ನುತಿಪಾತ್ರ |
ಗುರುವೆ ಜಯಜಯ! ನಿಜಾನಂದ ನಿರ್ಮಲಗಾತ್ರ |
ಗುರುವೆ ಜಯಜಯ! ವಿಶ್ವತೋರೂಪ ವಿಮಲಪ್ರತಾಪ ಮಾಯಾವಿಲೋಪ||
ಗುರುವೆ ಜಯಜಯ! ಪರಮಪಾವನಗುಣೋಲ್ಲಾಸ |
ಗುರುವೆ ಜಯಜಯ! ನಿರಂಜನ ನಿತ್ಯಪರಿತೋಷ |
ಗುರುವೆ ಜಯಜಯ! ಶಿವಜ್ಞಾನಿ ಬಸವೇಶ ಮಮ ಹೃದಯಾಬ್ಜ ಸನ್ನಿವಾಸ||

ಟೀಕು—ಶ್ರೀ ಗುರವೇ, ವೇದಶಾಸ್ತ್ರಂಗಳಿಂದ ಸ್ತೋತ್ರಪಾತ್ರನಾದಾತನೇ, ನಿಜಾನಂದ ಮೂರ್ತಿಯೇ, ನಿರ್ಮಲಗಾತ್ರನೇ, ವಿಶ್ವತೋರೂಪನೇ, ವಿಮಲಪ್ರತಾಪನೇ, ಮಾಯಾಸಹಿತನೇ, ಪಾವನಾತ್ಮಗುರುವೇ, ಸದ್ಗುಣಗುರವೇ, ನಿರಂಜನಗುರುವೇ, ನಿತ್ಯತೃಪ್ತಿ ಗುರುವೇ, ಶಿವಜ್ಞಾನಗುರುವೇ, ಬಸವೇಶ್ವರಗುರುವೇ,

---

ಪಾ—1. ಜನಸ್ತಾ. 2. ಯಕೋಟಿರವಿ. 3. ಸುಕ್ರಮನಶನೀ.

ಜಯುಜಯು! ಎನ್ನ ಹೃದಯುಕಮಲದಲ್ಲಿ ನಿಂತು ನನ್ನನ್ನು ರಕ್ಷಿಸಿ, ಸರ್ವರನ್ನೂ ಪಾಲಿಸೆಂದು ಕವೀಶ್ವರನು ಸ್ತೋತ್ರವ ಮಾಡುತಿರ್ದಾನು.

ಈ ಭಿಕ್ಷಾಟಣದ ಚರಿತವೆಂಬ ಶಿವಕಾವ್ಯವನ್ನು ಸ್ತ್ರೀಯುರು ಬಾಲಕರು ವೃದ್ಧರು ಎಲ್ಲರೂ ಕೇಳಿ ಪುಣ್ಯಾತ್ಮರಾಗಬೇಕೆಂದು ಕವೀಶ್ವರನು ಅಭಿವರ್ಣಿಸುತಿರ್ದಾನು.

ಇಂತು ಮೂಱನೆಯು ಸಂಧಿ ಸಂಪೂರ್ಣಂ.

ಭಿಕ್ಷಾಟನ ಚರಿತೆ ಸಮಾಪ್ತಿಯಾಯಿತು.

ರಾಘವಾಂಕ ವಿರಚಿತಂ

ಹರಿಶ್ಚಂದ್ರಕಾವ್ಯಂ

(ವಾರ್ಧಿಕಷಟ್ಪದಿ.)

ಸೂಚನೆ॥ ದೇಶಾಧಿಪತಿ ಹರಿಶ್ಚಂದ್ರರಾಯನ ಸತ್ಯ ।
ವಾಸವನ ಸಭೆಯೊಳಗೆ ನೆಗಟ್ದ ಪ್ರಸಂಗದೊಳು ।
ಕೌಶಿಕವಸಿಷ್ಠಮುನಿಗಳಿಗೆ ಘನತರದ ಸಂವಾದಮಂ ಮಾಡಿತಂದು॥

ಶ್ರೀಪತಿಗೆ ಸೊಬಗನುಡುಪತಿಗೆ ಶಾಂತಿಯನು ವಾ |
ಣೀಪತಿಗೆ ಚಾತುರ್ಯಮಂ ದಿವಸ್ಪತಿಗೆ ಪ್ರ |
ತಾಪಮಂ ಸುರಪತಿಗೆ ಭೋಗಮಂ ರತಿಪತಿಗೆ ಮೂಲೋಕಮಾವರಿಸುವ ||
ರೂಪಂ ಸರಿತ್ಪತಿಗೆ ಗಂಭೀರತೆಯನು ಸ್ವಾ |
ಹಾಪತಿಗೆ ತೇಜಮಂ ಕೊಟ್ಟ ಗುರುಮೂರ್ತಿ ಪಂ |
ಪಾಪತಿ ವಿರೂಪಾಕ್ಷನೆಮಗಿಷ್ಟಸಿದ್ಧಿಯಂ ಮಾಳ್ಕೆ ಸಂತೋಷದಿಂದ || ೧ ||

ಜಡೆಯಿಡುಕುಱಿಡೆಯೆಡೆಯೊಳಡಿಯಿಡುವ ಕಡಲ ತಡಿ |
ವಿಡಿದುಡುಗಣದೊಡೆಯನೊಡಲೊಡಕು ನಡುನಡುಗಿ |
ಪೊಡಕರಿಸಿ ಮಿಡುಮಿಡುಕಲಡಿಗಡಿಗೆ ಜಡಿಜಡಿದು ಪಡುಪಡುವ ನಡುನ [ಯನದ |
ಸುಡುವಿಡುವ ಜಡಧಿಯಂ ಕಡೆದ ಕಡೆಯೊಳ್ ಮೂಡಿ |
ಘುಡಿಘುಡಿಸಿ ಪಡೆಯ ಪಡಲಿಡೆ ಕೆಡಪುವುದ ತುಡುಕಿ |
ಪಿಡಿದೊಡನೆ ಪೊಸೆದು ಕೊರಲೊಳ್ತೊಡೆದ ಹಂಪೆಯ ಮೃಡಂ ಬಿಡದೆ [ಸಲಹುಗೆಮ್ಮ || ೨ ||

ಸೋಮ ಸೋಮವಿಭೂಷ ಸುರರಾಜರಾಜ ರಿಪು |
ಭೀಮ ಭೀಮಪ್ರಥುಲಭುಜ ಶಮನಶಮನ ಜಿತ |
ಕಾಮ ಕಾಮವಿದೂರ ಗುಣಗಾತ್ರಗಾತ್ರ ಪಿಂಗಳಜಟಾರಾಮ ರಾಮ ||
ನಾಮನಾಮಯುಗರಳಧರ ಧರಸ್ಥಿರಪುಣ್ಯ |
ದಾಮದಾಮಪ್ರಬಲಬಲವಂತ ಶ್ರುತಿನಿಕರ |
ಸಾಮಸಾಮಸ್ತುತ್ಯ ಪಂಪಾಧಿಪತಿ ವಿರೂಪಾಕ್ಷ ಕರುಣಿಸುವುದೆಮಗೆ || ೩ ||

ನಿರುಪಮ ನಿರಾಲಂಬ ನಿತ್ಯ ನಿರ್ಭಯ ನಿರಾ |
ವರಣ ನಿರ್ಮಾಯ ನಿರ್ಮಳ ನಿರ್ವಿಕಲ್ಪ ನಿಜ |
ನಿರಸೂಯ ನಿಶ್ಚಿಂತ ನಿರ್ಲೇಪ ನಿರ್ಗುಣ ನಿರಾಧಾರ ನಿತ್ಯತೃಪ್ತ ||
ನಿರವದ್ಯ ನಿರ್ಭಿನ್ನ ನಿರ್ದ್ವಂದ್ವ ನಿರ್ದೋಷ |
ನಿರಪೇಕ್ಷ ನಿಷ್ಕಾಮಿ ನಿಷ್ಕಳ ನಿರಾಕಾರ |
ನಿರಜ ನಿರಹಂಕಾರ ನಿರ್ಮಳ ನಿರಾಳ ಪಂಪಾವಿರೂಪಾಕ್ಷ ಶರಣು || ೪ ||

ನುತಕಾಯ ಜಿತಮಾಯ ಪುರಮಥನ ವರಕಥನ |
ಧೃತಸೋಮ ಗತಕಾಮ ಚಿರಲಿಂಗ ವರಸಂಗ |
ಶ್ರುತಿದೂರ ಮತಿಸಾರ ಗಿರಿಜೇಶ ಸ್ಮರನಾಶ ದುರಿತಹರ ಕರುಣಾಕರ ||
ಪ್ರತಿರಹಿತ ನುತಿವಿಹಿತ ಶರಣಮಯ ಚರಿತಜಯ |
ವಿತತಗಣ ಚತುರಗುಣ ಸುರರಾಜ ವರತೇಜ |
ಸಿತಗಳನೆಯತಿಬಳನೆ ಶರಣು ಸದ್ಗುರುಮೂರ್ತಿ ಪಂಪಾಪುರಾಧೀಶ್ವರ ||೫||

ತರುಣಶಶಿ ಮಲ್ಲಿಕಾಮಾಲೆ ಕೆಂಜಡೆ ತುಱುಬು |
ವುರಿಗಣ್ಣು ಕತ್ತುರಿಯ ಬೊಟ್ಟು ಕಪಿಲಾಕ್ಷಿ ಸರ |
ಸಿರುಹಸಯನಂ ನಾಗಕುಂಡಲಂ ಪೊನ್ನೋಲೆಯೆಸೆವ ಕಱೆ ರನ್ನದಾಳಿ ||
ಸುರುಚಿರಸ್ಫಟಿಕಹಾರಂ ಹಾರಮಪ್ಪ ಕುಚ |
ವರಪಯೋಧರಮಜಿನವಸನಂ ದುಕೂಲಮಾ |
ಕರಶೂಲಮಬುಜ ತೊಡರುಂ ನೇವುರಂ ಮೆಱೆವ ದೇವನೆಮ್ಮಂ ಸಲಹಲಿ ||

ವಾಣಿಯಱಿವಿನ ಬೆಳಗು ಮುಕುತಿವನಿತೆಯ ಮುಡಿಯ |
ಮಾಣಿಕಂ ಸರ್ವಮಂತ್ರಾದಿಪಂಚಾಕ್ಷರಿಯ |
ಪ್ರಾಣ ಮಂಗಳದ ಮನೆ ದೇವಲೋಕದ ಜನ್ಮಭೂಮಿ ತಾವರೆಗಣ್ಣಿನ ||
ರಾಣಿಯೆಸೆವೋಲೆವಾಗ್ಯಂ ಸರ್ವಸಿದ್ಧಿಗಳ |
ತಾಣಂ ವಿರೂಪಾಕ್ಷನುನ್ನತೈಶ್ವರ್ಯದ |
ಕ್ಷೋಣಿ ಪಂಪಾಂಬಿಕೆ ಮದೀಯಮತಿಗೀಗೆ ಪ್ರಸನ್ನತೆಯನುತ್ಸವದೊಳು ||

ಶ್ರೀಯುಮಾವರನಿಂದುಧರನಭಯಕರನುಗ್ರ |
ಮಾಯಾರಿ ಭಕ್ತಭವಹಾರಿ ಗಂಗಾಧಾರಿ |
ವಾಯುಭುಗ್ಭೂಷನುತ್ತಮವೇಷನಘತಿಮಿರಪೂಷನತಿವಿಗತದೋಷ ||

ಸ್ವಾಯತಾಖಿಲಲೋಕನಾಯಕವ್ರಜಪೂಜ್ಯ |
ದಾಯಕಂ ಹರಿವಿರಿಂಚ್ಯಾದಿಪ್ರಮುಖದೇವ |
ರಾಯ ಪಂಪಾವಿರೂಪಾಕ್ಷನೆಮಗೀಗೆ ಭಕ್ತಿಜ್ಞಾನಸಂಪದವನು ||೮||

ಶ್ರೀವಿರೂಪಾಕ್ಷದೊಳು ನಿತ್ಯನಭಿನವಮಹಾ |
ದೇವಂ ಜಿತೇಂದ್ರಿಯಂ ನಿಷ್ಕಾಮಿ ದೇಹಗುಣ |
ಮಾವರಿಸದಮಲ ನಿರ್ಲೇಪನಾರೂಢಲೌಕಿಕವಂಟದಪ್ರತಿಮನು || 9
ಭೂವಂದಿತಂ ನಿತ್ಯತೃಪ್ತಂ ಸಮಸ್ತಮುಖ |
ಜೀವಾನುಕಂಪಿಯೆಂದೆನಿಸಿ ರಾಜಿಸ ಸುಕೃತಿ |
ಭಾವಿ ಹಂಪೆಯ ಶಂಕರಪ್ರಭು ಮದೀಯಮತಿಗೀಗೆ ಪ್ರಸನ್ನತೆಯನು ||೯||

ಸಕಲಾಗಮಾಚಾರ್ಯನನಸೂಯನಪ್ರತಿಮ |
ನಕಳಂಕನುತ್ತಮನನಂತವೇದಾರ್ಥಸಾ |
ಧಕನವಿದ್ಯಾತೀತನಾನಂದಮಯನು ಶಾಪಾನುಗ್ರಹಾಧಿಕಾರಿ || 10
ಪ್ರಕಟಿತಯಶೋಮಯಂ ಗುಪ್ತಲಿಂಗಂ ಪ್ರೇಮಿ |
ಸುಕವಿಹಂಪೆಯ ಮಾದಿರಾಜ ಸುಜ್ಞಾನದೀಪಿ |
ಕೆ ಕವಿವ ಮಾಯಾತಮಂಧನಳಿವಂತೆನ್ನ ಹೃದಯದೊಳ್ ತೊಳಗಿಬೆಳಗು||

ಭವಭಕ್ತರಲ್ಲದೊಡೆ ಕೈಮುಗಿಯದುದು ತನ್ನ |
ಯುವತಿಗಲ್ಲದೆ ಮನವನೆಳಸದುದು ಕಾಯದಿ |
ಷ್ಟವ ಹಿಡಿಯದಿಹುದು ನಿಂದೆಯನಾಡದಿಹುದು ಪರದೈವವಂ ಬಗೆಯದಿಹುದು||
ಶಿವಲಿಂಗಪೂಜೆಯಶ್ರಾಂತಿ ಹಿಂಗದುದು ಕಾ | 11
ಮವಿಕಾರವಾದಿ ಷಡುವರ್ಗವಳಿಯದುದು ನೇ |
ಮವಿದೆಂದು ನಡೆವ ಹಂಪೆಯ ಮಹಾದೇವ ಗುರುರಾಯ ರಕ್ಷಿಸುಗೆಮ್ಮನು||

ಆಮಹಾದೇವರುದರದೊಳು ಗುರುಭಕ್ತಿ ನಿ |
ಷ್ಕಾಮವಳಿವಾಚಾರ ನೀತಿ ದಯೆ ಜಂಗಮ |
ಪ್ರೇಮ ಶಮೆ ದಮೆ ಶಾಂತಿ ದಾಂತಿ ಸತ್ಯವುದಾರ ಸದ್ಭಕ್ತಿಯೇಕನಿಷ್ಠೆ || 12
ಸಾಮರ್ಥ್ಯವೆಲ್ಲಾ ಕಳಾಪ್ರೌಢಿ ಸದ್ಗುಣ |
ಸ್ತೋಮವೆಲ್ಲಂ ನೆರೆದು ರೂಪಾದುದೆನಿಸುವ ಮ |
ಹಾಮಹಿಮ ಹಂಪೆಯ ಹರೀಶ್ವರನ ಮೂರ್ತಿ ನೆಲಸಿರ್ಕೆನ್ನಚಿತ್ತದೊಳಗೆ

ವೇದನಾಲ್ಕಱೊಳು ಹದಿನಾಲ್ಕು ಶಾಸ್ತ್ರಂಗಳೊಳು |
ವಾದಿಸುವ ಹದಿನೆಂಟು ಪೌರಾಣದೊಳು ಕೇಳ್ದು |
ಸೋದಿಸಿದೆ ತಿಳಿದೆ ತೂಗಿದೆನೊರೆದೆನಾನ್ಯೆಯು ಶ್ರೀಗುರುವಿರೂಪಾಕ್ಷನ ||
ಪಾದವೇ ದಿವ್ಯವಿದಱೊಳಗೊಂದು ಕುಂದಿಲ್ಲ |
ಭೇದಿಸುವೊಡೀಕೃತಿಗೆ ಪ್ರತಿಯಿಲ್ಲ ಹಂಪೆಯ ಮ |
ಹಾದೇವನಾತ್ಮಜನ ರಾಘವಾಂಕನ ಕಾವ್ಯ ತರ್ಕಿಗಿಕ್ಕಿದ ಮುಂಡಿಗೆ ||೧೩||

ಮನವಚನಕಾಯದೊಳಗೊಮ್ಮೆಯುಂ ಫಾಲಶೋ |
ಚನನನಲ್ಲದೆ ಪೊಗೞದುದ್ಭಟಯ್ಯನ ಮಯೂ |
ರನ ಕಾಳಿದಾಸನ ಹಲಾಯುಧನ ಕೇಶಿರಾಜನ ಮಲುಹಣನ ಬಾಣನ |
ವಿನುತಭೋಜನ ಭಲ್ಲಟನ ಭಾರವಿಯ ಪದವ |
ನೆನೆದು ಬಲಗೊಂಡು ತೊಡಗಿದೆನೀಮಹಾಕೃತಿಯ |
ನೆನಗೆ ನೆರವಾಗಿ ನಡಸುಗೆ ರಸಂಗುಡುಗೆ ತಿರ್ದ್ದುಗೆ ಸುನಿರ್ವಿಘ್ನದಿಂದ ||೧೪||

ಕೃತಿಗೆ ನಾಮಂ ಹರಿಶ್ಚಂದ್ರಚಾರಿತ್ರವೀ |
ಕೃತಿಗೊಡೆಯನಮಳಪಂಪಾಪುರಾಧೀಶನೀ |
ಕೃತಿಗೆ ಪಾಲಕರು ಶಿವಭಕ್ತರ್ಕಳಿಂತಿದಂ ಪೇೞ್ದಾತನಾರೆಂದೊಡೆ ||
ಚತುರ ಕವಿರಾಯ ಹಂಪೆಯ ಹರೀಶ್ವರನ ವರ |
ಸುತನುಭಯಕವಿಕಮಲರವಿ ರಾಘವಾಂಕಪಂ |
ಡಿತನೆಂದೊಡೀಕಥಾರಸದ ಲಹರಿಯನು ಬಣ್ಣಿಸದರಾರೀಧರೆಯೊಳು ||೧೫||

ಪರರೊಡವೆಯಂ ಕೊಂಡು ಕೃತಿಯ ಪೇೞದ ಭಾಷೆ |
ಪರರ ಕಾವ್ಯಾರ್ಥಂಗಳಂ ಛಿದ್ರಿಸದ ಭಾಷೆ |
ಪರರ ದೈವವ ನುತಿಸದಿರ್ಪ ಭಾಷೆಯು ತನ್ನ ಮನದೊಳಗೆ ಹಿಡಿದಿರ್ಪನು||
ಪರರ ನಿಂದಿಸಿ ತನ್ನ ಹೊಗೞ್ಕೊಳ್ಳದ ಭಾಷೆ |
ಪರರ ವಧುವಂ ಕಂಡು ಮನವೆಳಸದಿಹ ಭಾಷೆ |
ಪರರ ವಸ್ತುವ ತೃಣಕೆ ಸರಿಯೆಂಬ ಭಾಷೆಯಿದು ರಾಘವಾಂಕಗೆ ಸಂದುದು||

ವಸುಧಾಧಿಪತಿ ಹರಿಶ್ಚಂದ್ರ ಘನಸತ್ಯನೆಂ |
ದೊಸೆದು ವಾಸಿಷ್ಠನಿಂದ್ರಂಗೆನಲು ಕೌಶಿಕಂ |
ಹುಸಿಮಾೞ್ಪೆನೆಂದು ಭಾಷೆಯನಿತ್ತು ಧರೆಗೆ ಬಂದವನಿಪನ ಸತಿಪುತ್ರರ ||

ಅಸುವಂತ್ಯವೆನೆ ನಿಗ್ರಹಂ ಮಾಡಿಯೊಪ್ಪಿದಿರೆ |
ಶಶಿಮೌಳಿ ಶ್ರೀವಿಶ್ವನಾಥ ಭೂಪಂಗೆ ಕರು |
ಣಿಸಿ ಸಕಲಸಾಮ್ರಾಜ್ಯವಿತ್ತಾತನಂ ಮೆಱೆದ ಕೃತಿ ಪುಣ್ಯದಾಕೃತಿಯಿದು||೧೭||
ಇದು ಕಥಾಬೀಜವೀಬೀಜಮಂ ಬಿತ್ತಿ ಬೆಳ |
ಸಿದಪೆನೀಕಾವ್ಯವೃಕ್ಷವನಿದಕೆ ನಿಮ್ಮ ಪುಳ |
ಕದ ಗೊಬ್ಬರವನು ತಳಿದಾನಂದಜಲವೆಱೆದು ಸಲಹಿ ಮಡಲಿಱಿದರ್ಥದ ||
ಹೊದಱ ನೆಱಲಂ ಸಾರ್ದು ತುದಿಮೊದಲ್ತನಕ ಹೇ |
ಱಿದ ಕಾವ್ಯರಸಫಲಂಗಳನು ಸವಿಸುವುದು ಲೋ |
ಕದ ಶಿವಪದಾರ್ಚಕರು ಮಾನಿಗಳು ರಸಿಕರುತ್ತಮರು ಸುಕಲಾಪ್ರೌಢರು||
ಚಿತ್ತದೊಳು ವಿಮಲರಸಭಾವಭರಿತಾರ್ಥ ಸಂ |
ಪತ್ತು ಸಜ್ಜನರ ಪುಳಕಾಂಕುರಂಗಳನು ಹೊ |
ತ್ತಿತ್ತಿಯಾನಂದಾಶ್ರುಬಿಂದುವ್ರಜಂಗಳಿಂ ಸಲಹಿ ಮಡಲಿಱಿದು ಬೆಳೆದು ||
ಮತ್ತೊಂದಱಭಿಲಾಷೆಯುಂ ಮಱೆದು ಕಳೆದು ತ |
ಮ್ಮತ್ತಲೆಱಗಿಸುವ ಶಿವಭಕ್ತಿವಲ್ಲರಿಯು ಹೊಸ |
ಬಿತ್ತೆಂದೆನಿಸುವ ಹರಿಶ್ಚಂದ್ರನೃಪಕಥಾವೃತ್ತಾಂತವೆಂತೆಂದೊಡೆ ||೧೯||
ರಸದೊಳರ್ಥದೊಳು ಭಾವದೊಳಲಂಕಾರದೊಳು |
ಪ್ರಾಸರೀತಿಯೊಳು ಬಂಧದೊಳು ಸುಲಕ್ಷಣಪದ |
ಪ್ರಸರದೊಳು ಕಾವ್ಯದೊಳು ತಪ್ಪುಳ್ಳೊಡಿದಱೊಳಗೆಪರರುಕ್ಕೈಯಿಕ್ಕದಂತೆ||
ಸಸಿನೆ ಮಾಡುವುದು ತಿದ್ದುವುದು ಕೊಂಡಾಡಿ ಲಾ |
ಲಿಸಿ ಕೇಳ್ವುದೆಲ್ಲಾ ಶಿವಾರ್ಚಕರು ನಾಂ ನಿಮ್ಮ |
ಶಿಶುವಯ್ಯ ಕುಂದಿಲ್ಲವೇತಱಿಂದೆನಲೆನ್ನ ಭರಭಾರ ನಿಮ್ಮದಾಗೆ ||೨೦||
ನುಡಿ ಲಕ್ಷಣಾರ್ಥ ರಸ ಭಾವಜ್ಞರೆನಿಸಿದು |
ಗ್ಗಡದ ಕಾವ್ಯದ ಕವಿಗಳದಿರೊಳಿದು ಬೇಡ ತೆಗೆ |
ಜಡಮತಿಯೊಳೀಶನಂ ಬಣ್ಣಿಸಿದನಿವನೆಂದು ನಿಂದಿಸುವುದೀಧರೆಯೊಳು ||
ಬಡವರ ಮನೆಯ ಸೊಡರು ಕಂದುವುದೆ ಗುಡ್ಡಿಪಶು |
ಕುಡೆ ಕಱೆದ ಹಾಲು ಕಹಿಯಪ್ಪುದೇ ನನ್ನ ನುಡಿ |
ಪ್ರೌಢವಿಯೊಳು ಸಲುವುದಿದಕೇನು ಸಂದೆಯ ಬೇಡ ಸಂಬು ನೀಡಿದೆಕೈಯನು||

ನೆರೆದೆಲ್ಲರೀಕೃತಿಯೊಳುಳ್ಳ ಲೇಸುಗಳನಾ |
17 ದರಿಸಲಲ್ಲೊಂದು ತಪ್ಪಂ ಹಿಡಿವನೆಂಬ ನಿ |
ಷ್ಠುರದುರ್ಜನರ್ಗೆ ವಂದಿಸುವೆನೆನ್ನಂ ಜನಂ ನಗಲಾಗದೇಕೆಂದೊಡೆ ||
ವರಮುಕುರವನು ತೊಡೆವರಾರಂಗಣವನು ಬೋ |
ಹರಿಪರಾರ್ಮಲಿನಾಂಬರವನೊಗೆವರಾರಿದಂ |
ಪರಿಕಿಪರು ಸುಜನರಾದವರ್ಗಳೆನ್ನೀಕೃತಿಗೆ ಕುಂದ ಕಾಣಿಸಲಱಿಯರು||೧೧

ನಡೆವರೆಡಹದೆ ಕುಳಿತರೆಡಹುವರೆ ಕಾವ್ಯಮಂ |
18 ನಡಸುವಾತಗೆ ರಸಾವೇಶ್ಟಿ ಮಱಹಾಲಸ್ಯ |
ವೆಡೆಗೊಳಲ್ ತಪ್ಪುಗಲ್ಲದೆ ಕಾವ್ಯಕರ್ತೃ ತಪ್ಪುವನೆಯೊಂದೆರಡಡಿಯೊಳು ||
ಎಡೆವಾಯ್ದು ಬಂದ ತಪ್ಪಂ ಹಿಡಿದು ಸಾಧಿಸುತ |
ಕಡೆತನಕ ಬಂದ ಲೇಸಂ ಮಱೆವ ನೀಚರೆದೆ |
ಯೊಡೆಯದೇ ಬೇನೆಯಱಿಯದ ನೀರಸರನೇಕೆ ಪುಟ್ಟಿಸಿದನಬುಜಭವನು ||

ವ್ಯಾಕರಣಪರಿಣತನಲಂಕಾರಪರಿಚಿತನ |
19 ನೇಕರಸನಿಪುಣನಭಿಧಾನಪ್ರವೀಣನೆ |
ಲ್ಲಾ ಕಳಾಕುಶಲನೆನಿಪಾತಂ ಕವೀಶನವನಿದಿರೊಳೇನುಮಸಱಿಯದ ||
ಕಾಕುದುರ್ಬೋಧಕಂ ಕವಿಯೆನಿಸಿ ಕೊಂಡೊಡವ |
ಗೇಕೊರತೆ ಜಲಶಯನ ವಿಷ್ಣು ಹರಿಯೆನಿಸಿದೊಡೆ |
ಭೇಕನುಂ ನೀರೊಳಗೆ ಹರಿಯೆನಿಸಿ ಕೊಂಡೊಡದ ಕೊಂದನೇಚಕ್ರಧರನು||

20 ಕವಿಯಧಿಕನಿರ್ದೊಡೇಂ ಕೇಳ್ವರಿಲ್ಲದೊಡೆ ಗಾ |
ನವಿನೋದಿಯಿರ್ದೊಡೇಂ ಜಾಣರಿಲ್ಲದೊಡೆ ಜಾ |
ತಿವಿದಗ್ಧಯಿರ್ದೊಡೇಂ ರಸಿಕರಿಲ್ಲದೊಡೆ ಪೊಸಪೂಮಾಲೆಯಿರ್ದೊಡೇನು ||
ತವೆ ಮುಡಿವರಿಲ್ಲದೊಡೆ ನಾನಾಕಳಾಪ್ರೌಢ |
ನಿವಹವಿರ್ದೇನಧಿಕದಾತರಿಲ್ಲದೊಡಿಂ |
ತಿವನೈದೆ ಬಲ್ಲವರಪೂರ್ವ ಮೇಣುಳ್ಳೊಡವ ದೇವನಲ್ಲದೆ ಮನುಜನೇ ||

21 ಇಳೆಯೊಳೊಂದೂರೊಳೆಂತಕ್ಕೆ ಪುಣ್ಯಾಧೀನ |
ದೊಳು ಸಮಂತೊಬ್ಬೊಬ್ಬರಂ ಮೆಚ್ಚಿಸುವನಲ್ಲ |
ತಿಳಿದು ಕೇಳದೊಡಱಿಯೆನೀಕಾವ್ಯದರ್ಥಮಂ ಕಿವಿಯ ಸೆಱಗುಗಳನೊಡ್ಡಿ||

ತಳೆದ ಕವಿಗಳ ಗಮಕಿಗಳ ವಾದಿಗಳ ವಾಗ್ಮಿ |
ಗಳ ರಸಾವೇಶಿಗಳ ತಲೆದೂಗಿಸುವೆನೆಂದೊ |
ಡುೞಿದೆ ದುರ್ಜನರು ಮೆಚ್ಚದೊಡೆಂತೆನಲ್ಕದಕೆ ಕೇಳು ಮೇಲುತ್ತರವನು ||
ರೋಗಿ ಹೞಿದೊಡೆ ಹಾಲು ಹುೞಿಯಪ್ಪುದೇ ಹಗಲ |
ಗೂಗೆ ನೋಡದೊಡೆ ರವಿ ಕುಂದುವನೆ ಕಣ್ಗುರುಡ |
ನೇಗೈದು ಕಾಣದಿರ್ದೊಡೆ ಮುಕುರ ಕಿಡುವುದೇ ದುರ್ಜನರು ಮೆಚ್ಚದಿರಲು ||
ನಾಗಭೂಷಣನ ಕಾವ್ಯಂ ಕಿಡುವುದೇ ಮರುಳೆ |
ಹೋಗಲಾಮಾತದಂತಿರಲಿ ಕಡೆತನಕಿನ್ನು |
ಮೇಗುತ್ತರೋತ್ತರವನೀವ ಭಾಷೆಗಳನವಧರಿಸಿ ಸಾತ್ವಿಕನಾಗಿರು || ೨೭ ||
ಬಗೆವೆರಸಿ ಸಂದಷ್ಟವಾದೊಡಱಿಯೆಂ ಪರೋ |
ಕ್ತಿಗಳರ್ಥಮಂ ಕಳುವುದಧಮತನವದನಳುಪಿ |
ತೆಗೆದೆನಾದೊಡೆ ಬೞಿಕಲವರ ವೀನೀರ್ಗೆ ಮುಡಿಯಿಂ ತೆಗೆದ ಪೂಮಾಲೆಗೆ ||
ಉಗುಳ್ದ ತಂಬುಲಕುಟ್ಟ ಕಳೆದ ಮೆಯ್ಲ್ಗೆಗೆ ಸವಿ |
ದೊಗಡಿಸಿದ ಕೂೞ್ಗೆ ಕಯ್ಯಾಂತವಂ ಬೇೞ್ಪ ಸಂ |
ದೆಗವಿಲ್ಲೆಸಿಪ್ಪಪ್ರತಿಜ್ಞೆ ಹಂಪೆಯ ರಾಘವಾಂಕ ನಿನಗಲ್ಲದಹುದೇ || ೨೮ ||
ಮುಂತೆ ಸರಿಯಿಲ್ಲೆಂದು ಪೊಗೞ್ದವನ ಪೊಱಮಡಿಸಿ |
ಪಿಂತವನ ಕವಿತೆಯೇನೆಂದು ನಿಂದಿಸಿ ತಮ್ಮ |
ಕೊಂತಗವಿತೆಯ ತೂಬನುರ್ಚಿ ನೆರೆದೂರುಗರ ನಡುವೆ ನಿಜನಿಳಯದೊಳಗೆ ||
ಮಂತಣಂಗೊಂಡು ಕಾೞ್ಗೆಡೆದೂೞ್ಪ ಕವಿಯೆದೆಯ |
ಕೊಂತ ಮೂಗಿನ ಕತ್ತಿಯಧಟು ಕವಿನಿಕರಬಾ |
ದಂತ ಹಂಪೆಯ ರಾಘವಾಂಕಪಂಡಿತನುಭಯಕವಿಶರಭಭೇರುಂಡನು || ೨೯
ಗಿರಿಜಾವಿವಾಹಮುಪಮನ್ಯುಚರಿತಂ ಗಜಾ |
ಸುರಮಥನ ದಕ್ಷಾಧ್ವರಂ ಕಾಲದಲನ ವಿಷ |
ಹರಣ ಪಂಪಾಕ್ಷೇತ್ರಭಿಕ್ಷಾಟನಂ ಕಾಮದಹನ ಕಾಶೀವರ್ಣನಂ ||
ಪುರವಿಜಯಮಂಧಾಸುರಧ್ವಂಸನಂ ಜಲಂ |
ಧರದಹನ ಕಾಶಿಕಾಂಡದೊಳಗಿನ್ನಾದ ಶಂ |
ಕರಲೀಲೆಗಳನು ಹಲವಿತಿಹಾಸಗಳನು ನಾಂ ಪೇೞ್ವೆನೀಕಾವ್ಯದೊಳಗೆ || ೩೦ ||

ಕೆಳೆತನದ ಸಂಟು ವಿಷಯದ ಬಂಧುವಾತುಗಳ |
ಬಲದೊಳಾಂ ಕವಿಯೆಂದು ಕವಿರಾಯನೆಂದು ವೆ |
ಗ್ಗಳಿಸಿ ಕಾಱುಗ್ಗಿಡೆದವರ ಸೇರಿಸುವೆನಲ್ಲದಾಸಂಟನೀಡಾಡಿ ಮಱೆತು ||
ಬಱಿಕ ನಾಂ ಕವಿಯೆಂದುಮಿದಿರಾಗಿ ನಿಂದು ಬಿಡೆ |
ಗಱುಹಿ ದನಿಗೈವ ದುಷ್ಕವಿಯ ಗರ್ವದ ಮೂಗ |
ನಿಱುಹದಿರದುಭಯಕವಿಶರಭಭೇರುಂಡ ರಾಘವನ ಬಿರುದೀ ಧರೆಯೊಳು ||೨೧

ಎನಿತು ಸಿರಿ ಸಾಮ್ರಾಜ್ಯಂ ಸಾರಿ ಮಾಣ್ದೊಡೆ ನಿತ್ಯ |
ವನು ಪಡೆವೊಡಂ ಸಾವೊಡಂ ಮೆಚ್ಚಿ ಹಂಪೆಯರ |
ಸನ ಪೊಗೞ್ವ ನಾಲಗೆಯೊಳನ್ಯದೈವವ ಕವಿಗಳಂ ಕೀರ್ತಿಸಿದೆನಾದೊಡೆ ||
ಮನಸಿಜಾರಿಯ ಭಕ್ತನಲ್ಲ ತಾನೆನಿಪ ಬಿರು |
ದಿನ ಕವಿಯೆನಿಪ್ಪ ಹಂಪೆಯ ರಾಘವಾಂಕನೊ |
ಯ್ಯನೆ ಪೇೞ್ದನೆಂಬಾಗಳೀಕೃತಿಯನಾವ ಸಜ್ಜನರು ಕೊಂಡಾಡದಿಹರು ||೨೨

ರಸ ಜೀವ ಭಾವವ್ರೊಡಲರ್ಥವವಯವ ಶಬ್ದ |
ವಿಸರವೇ ನುಡಿಯಲಂಕಾರವೇ ತೊಡಿಗೆಯು ತ |
ವೆ ಸುಲಕ್ಷಣವೆ ಲಕ್ಷಣ ವಿಮಳಪದನ್ಯಾಸ ನಡೆ ರೀತಿ ಸುಕುಮಾರತೆ ||
ರಸಿಕತನ ಸುಱಿ ಸುಖಂ ನಿಳಯವಂತಪ್ಪಯೀ |
ಪೊಸಕಾವ್ಯಕನ್ಯಕೆಯ ಪಡೆದು ಪಂಪಾಂಬಿಕೆಯ |
ರಸ ವಿರೂಪಾಕ್ಷಂಗೆ ಕೊಟ್ಟಹಂಪೆಯರಾಘವಾಂಕನೇಂ ಕೃತಕೃತ್ಯನೋ ||

ಧರೆಯುಱಿಯುಲೀಕೃತಿಗೆ ಮೊದಲಾವುದೆನೆ ತರಳ |
ತರತರಂಗಾವರ್ತಗರ್ತನೀಹಾರಶೀ |
ಕರದ ನಿಕರಂ ಜರತಕಮಠಪಾಠೀನಚಯ ಡಿಂಡೀರಪಿಂಡಷಂಡ ||
ಕರಿಮಕರನಕ್ರಶೈವಾಳವಿದ್ರುಮರತ್ನ |
ವರಶಿಂಶುಮಾರಬುದ್ಬುದತಿಮಿತಿಮಿಂಗಿಳೋ |
ತ್ಕರಜಳೂಕವ್ಯಾಳಕೋಳಾಹಳಧ್ವಾನವೆರಸಿ ಜಲನಿಧಿ ಮೆಱೆದುದು ||೨೪||

ಆರುಚಿರ ವನಧಿಪರಿವೃತಧರಾಮಧ್ಯದೊಳು |
ಮೇರುವಿಂ ದಕ್ಷಿಣಾಶೆಯೊಳು ಕಬ್ಬಿನ ಬಿಲ್ಲ |
ವೀರನರಲಂಬಿನಾಡುಂಬೊಲಂ ಸರ್ವಸುಖ ಸಂಪದದ ಜನ್ಮಭೂಮಿ ||

ಭಾರತಿಯ ನೆಲೆವೀಡು ಮಂಗಳಂಗಳ ನಿಜಾ |
ಗಾರ ಲಕ್ಷ್ಮಿಯ ರಾಜಧಾನಿಯೆನಿಸಲೊಪ್ಪಿಹುದು |
ಚಾರುತರ ಲಾಳದೇಶಂ ಪರಮಭಕ್ತಿಕೋಶಂ ಪುಣ್ಯದಾದೇಶವು ||೩೫||

ಆಲಾಳದೇಶಮಧ್ಯಸ್ಥಳದೊಳದಟ ಭೂ |
ಪಾಲವೆಸರಂ ತಾಳ್ದ ಪಂಕೇಜಸಖಕುಲದ |
ಪೀಱಿಗೆಯ ರಾಯುರ್ಗೆ ವೀರಸಿರಿ ಸಲೆ ನಲಿದು ಕೈಗೆಯ್ದ ಜಯತವಗದ ||
ಮೇಲಿಟ್ಟ ರತ್ನಸಿಂಹಾಸನದ ಚೆಲುವಿನಿಂ |
ತ್ರೈಲೋಕ್ಯದೊಳು ಪ್ರತಿವಿಹೀನವೆನಿಸಿರ್ಪ ಕೀ |
ರ್ತ್ಯಾಳಾಪದಿಂದಯೋಧ್ಯಾಪುರದ ದುರ್ಗವಿಂತೆಸೆದುದೇವಣ್ಣಿಸುವೆನು ||೩೬||

ಕಾಲಭೈರವನ ಕಣ್ಣನೋ ಮೇಱುವಮಾಪತಿಯ |
ಭಾಳಾಕ್ಷವೋ ಪ್ರಳಯಕಾಲದಗ್ಗದ ಸಿಡಿಲ |
ಹೋಱೆಱೊ ರವಿಕುಲದ ವೈರಿಗಳ ಶುಭಕೀರ್ತಿಶಶಿಯಂ ಪಿಡಿವ ರಾಹುವಿರ್ಪ||
ಹೇಳಿಗೆಯೊ ರಿಪುವಿಪಿನದವ ಹರಿಶ್ಚಂದ್ರ ಭೂ |
ಪಾಲನ ಪ್ರಬಳಪ್ರತಾಪಶರಧಿಯ ಸುೞಿಯೆನಾ |
ಹೇೞಿಸಲಯೋಧ್ಯಾಪುರಂ ಮೆಱೆಯುತಿರ್ದುದು ಭಯಂಕರಾಕಾರದಿಂದ||

ಅಟ್ಟಳೆಯೊ ಸುರರ ನಗರಕ್ಕೆ ದಾೞಿಡಲು ತಂ |
ದಿಟ್ಟ ನಿಚ್ಚಣಿಗೆಗಳೊ, ಕೊತ್ತಳವೊ ಗಗನದೊಳು |
ಬಟ್ಟೆಯಂ ನಡೆವ ಚೆಂಡಾದ ಖಚರರು ಸಾರಲೆಂದಿಟ್ಟ ಭದ್ರಂಗಳೋ ||
ನಟ್ಟ ಡೆಂಕಣಿಗಳೋ ಹಗೆಗಳನು ದುರ್ಗವರೆ |
ಯಟ್ಟಲೆತ್ತಿದ ಪಲವು ಕೈಯೊ, ಪರಿಖೆಯ ಪರ್ವಿ |
ನೊಟ್ಟಜೆಯೊ ಪುರದ ಪರಿವೇಷವೋ ಎನಿಸಿತೆಂಬಾಗಳನ್ನೇವೊಗಟ್ಟೈಸು ||

ಸಲೆ ನಿಲೆ ದಿನೇಶವಂಶದ ಲಕ್ಷ್ಮಿ ನೆಲಸಿರ್ಪ |
ಜಲಜದೆಸ*ೞ್ಗಳೊ ವೈರಿಗಳ ಭಯಂಕರಬೀಜ |
ಕುಲವಗೆಯ ಸಾಲೊ ನೆಱೆ ಮೇಲೆತ್ತಿ ಬರ್ಪ ರಿಪುರಾಯರಂ ವೋದಿ
ಮೊಲಲೆಂದು ದುರ್ಗ ಬಾಯ್ದೆಱೆದೆಸೆವ ದಂತವೋ | [ಮುಱಿದು ||
ತಿಳಿಯಲರಿದೆನಲಯೋಧ್ಯಾಪುರದ ಕೋಂಟೆಯೊಳು |
ತಳತ ರನ್ನದ ತೆನೆಯ ತೆಕ್ಕೆ ಮಿಕ್ಕುವು ಮೇಘಮಂಡಲವ ಬಗಿದು ನೆಗೆದು ||

ಭರದೊಳಮರಾವತಿಯ ಸೊಬಗನಳಕಾಪುರಿಯ |
ಸಿರಿಯ ಮಧುರಾಪುರದ ಮಂಗಳವ ಶೋಣಿತದ |
ಪುರದ ದರ್ಪವನು ಲಂಕಾಪುರದ ಜಸವ ಯಮಪುರದ ರೌದ್ರತ್ವವ ||
ಉರಗೇಂದ್ರಪುರದ ರಚನೆಗಳನಿಂದ್ರಪ್ರಸ್ಥ |
ಪುರದ ಬಲವಂ ಹಿಱಿದು ಬಱಿಕೈದೆ ಕರುಗಟ್ಟಿ |
ಸರಸಿಜದ ಕಂದನೀಪುರವನೆಱೆಯದೆ ಮಾಣನೆನಿಸಿತಂತಾದುರ್ಗವು ||೪೦||

ಸುರಪತಿಯ ಭೋಗವಗ್ನಿಯ ತೇಜವಂತಕನ |
ಭರದದಟು ನೈಋತಿಯ ಕಾಯ್ಪು ರತ್ನಾಕರೇ |
ಶ್ವರನ ಗಂಭೀರವನಿಲನ ಬಲಂ ವಿತ್ತಪನ ಸಿರಿ ರುದ್ರನುಗ್ರತ್ವವು ||
ತರಣಿಯ ಪ್ರಭೆ ಧರೆಯ ಧೈರ್ಯ ಚಂದ್ರನ ಶಾಂತಿ |
ವೆರಸಿ ರೂಪಾದುದೆನಿಸುವ ಹರಿಶ್ಚಂದ್ರಭೂ |
ವರನಾಪುರಕ್ಕೊಡೆಯನರಿಶರಧಿಬಡಬಾಗ್ನಿ ವೈರಿಗಜಪಂಚಾಸ್ಯನು ||೪೧||

ತನುರುಚಿಯ ಮುಂದೆ ದಿನಪನ ಕಾಂತಿ ಕಪ್ಪಕ |
ಪ್ಪನೆ ಕೋಪದಿದಿರೊಳುಗ್ರಾನಳಂ ತಣ್ಣತ |
ಣ್ಣನೆ ಕುಡುವ ಕೆಯ್ಯಿದಿರೊಳಮರತರು ಮೆಲ್ಲಮೆಲ್ಲನೆ ಮೋಹನವನಪ್ಪಿದ
ಘನರೂಪಿನಿದಿರನಂಗನ ರೂಪು ನೊಪ್ಪನೊ |
ಪ್ಪನೆ ಗಭೀರತೆಯಿದಿರಲಂಬುನಿಧಿ ತೆಳ್ಳತೆ |
ಳ್ಳನೆ ಶಾಂತಿಯಿದಿರ ಶಶಿ ಬೆಚ್ಚಬೆಚ್ಚನೆಯೆನೆ ಹರಿಶ್ಚಂದ್ರನೃಪನೆಸೆದನು ||೪೨||

ಧರೆಯೊಳು ಹರಿಶ್ಚಂದ್ರಭೂವರಂ ತನ್ನ ಸಾ |
ರ್ದರ ಬೇಡಿದರ ಬಯಸಿದರ ಸೋಂಕಿದರ ಬೆರಸಿ |
ದರನು ತನ್ನಂತೆ ಮಾಳ್ಪುನ್ನತಿಕೆಯನು ಕಂಡು ನಾಚಿ ಸಿಗ್ಗಾಗಿ ಸೆಡೆದು ||
ಮರನಾಯ್ತು ಚಂದನಂ ಸ್ವರ್ಗಸ್ಥವಾಯ್ತು ಸುರ |
ತರು ಮೂಗುವಟ್ಟುದಮರರ ಧೇನು ಕಲ್ಲಾಯ್ತು |
ಪರುಷ ಕಟ್ಟನೆ ಕರಗಿತೆನೆ ಸಿದ್ಧರಸವಂದು ಮೊದಲಾಗಿ ಮೂಜಗದೊಳು ||

ಪರಿಭವಿಸಿ ನಂದಿಸಿ ತಗುಳ್ದಱಸಿ ಪೀರ್ದು ಧಿ |
ಕ್ಕರಿಸಿ ಡೊಕ್ಕರಿಸಿ ಝಂಕಿಸಿ ಸುರಪನಗ್ನಿ ಯಮ |
ನಿಋತಿ ವರುಣ ಮರುತ ಧನದನೀಶಾನರೆಂಬಿವರ ಪವಿ ಶಕ್ತಿ ದಂಡ ||

ವರಕುಂತ ಪಾಶ ಧ್ವಜಂ ಖಡ್ಗ ಶೂಲತತಿ |
ವೆರಸಿ ಕರಿ ತಗರು ಕೋಣಂ ನರಂ ಮಕರ ಜೆ |
ಳ್ಳೆರಲೆ ಹಯ ವೃಷಭಂಗಳಂ ಸೆಳೆದು ತಪಸು ತತ್ತೊಡೆ ಹರಿಶ್ಚಂದ್ರನೃಪನು ||
 ವರರೂಪಿನೊಳು ರತಿಗೆ ಹೊಣಕೆ ಸೌಭಾಗ್ಯದೊಳು |
ಸಿರಿಗೆ ಹೊಯಿಕ್ಕೈ ಜಾಣಿನೊಳು ವಾಣಿಗಿಮ್ಮಿಗಿಲು |
ಚರಿತದೊಳು ಗಂಗೆಗಲಗುಣಿಸು ಪತಿಭಕ್ತಿಯೊಳರುಂಧತಿಗೆ ಸರಿ ಜಸದೊಳು||
ಪರಮರೋಹಿಣಿಗೆ ಹೆಗಲೆಣೆ ಪುಣ್ಯದೊಳ್ ಸ್ವಧಾ |
ತರುಣಿಗೋರಗೆ ಪಂವ್ರತೆಯೊಳು ಗಾಯತ್ರಿಗೊರೆ |
ದೊರೆಯೆನಿಸಿ ಮೆಱೆವಳು ಹರಿಶ್ಚಂದ್ರನೃಪನರಸಿ ಚಂದ್ರಮತಿ ಭೂತಳದೊಳು
 ತೊಡರ್ವ* ರಾಯರನೊಱಸಿದಪನೆಂದು ನುಡಿನುಡಿದು |
ನುಡಿಗಲಿತು ಘುರದೊಳಾಂತವರ ಸರ್ವಸ್ವಮಂ |
ಪಿಡಿಪಿಡಿದು ಪಿಡಿದು ಸಿಂದಿರೆ ಕಲಿತು ಹಗೆಮುಬಯ್ತಲೆಯ ಬಟ್ಟೆಯೊಳೊಯ್ಯನೆ||
ನಡೆನಡೆದು ನಡೆಗಲಿತು ರಿಪುಗಳಲಿ ಕಪ್ಪವಂ |
ಬಿಡಬಿಡದೆ ಕೊಂಡುಕೊಂಡುಣಕಲಿತು ಕೀರ್ತಿಯೊಡ |
ನೊಡನೆ ಹರಿಹರಿದೋಡಿಯೋಡ ಕಲಿತಂ ರೋಹಿತಾಶ್ವನೆಂಬ ಕುಮಾರನು ||
 ಪತಿಹಿತಂ ಪೌರಜನದುತ್ಸವಂ ದೇಶದು |
ನ್ನತಿ ದುಷ್ಟರೆದೆಗಿಚ್ಚು ಶಿಷ್ಟರಾನಂದಮಯ |
ವತಿಚದುರ ಚೌಷಷ್ಟಿಕಳೆ ಸಾಮಭೇದಮಂತ್ರಾಳಾಪವೀಶಭಕ್ತಿ ||
ನುತವೀರವಿತರಣಗುಣಂಗಳುಂ ಕೀರ್ತಿಸಂ |
ತತಿಗಳೆಲ್ಲಾ ನೆರೆದು ರೂಪಾಮುದೆನಿಸಿರ್ಪ |
ಮತಿವಂತನತ್ಯಕೀರ್ತಿಯೆನಿಪ್ಪನೇಕಪ್ರಧಾನನಾ ಭೂಮಿಪತಿಗೆ ||೪೭||
 ಪೊಡವಿಯುಂ ಬಗಿವ ಫಣಿಪನನುಗಿವ ಜಲಧಿಯುಂ |
ಕುಡಿವ ವಡಬನ ಹಿಡಿವ ಗಿರಿಗಳಂ ಪೋಲ್ವ ಪಗ |
ಲೊಡೆಯನಂ ತೂಳ್ವ ಮೃತ್ಯುವನು ತುತ್ತುವ ದಿಶಾಧಿಪರ ಮುತ್ತುವ ಸಿಡಿಲನು
ಹುಡಿಗೈವ ಧೆಸೆಯ ಮೂಲೆಯ ಕೊಯ್ವ ದಿಗ್ಗಜದ |
ಕುಡಿದಾಡೆಯುಂ ಮುಱಿವ ನಕ್ಷತ್ರಮಂ ತಱಿವ |
ಕಡುಗಲಿಗಳೆಂಬತ್ತು ಪದ್ಮನಾಯಕರುಱಿವ ಪಡೆಯನಿನ್ನಾರೆಣಿಪರು ||೪೮||

ತ್ಯಾಗಕ್ಕೆ ಬುಧರ ತಣಿವವಧಿ ರಾಜ್ಯಕ್ಕೇಳು ।
ಸಾಗರದ ತಡಿಯುವಧಿ ಭಕ್ತಿಗೀಶ್ವರನ ತಲೆ ।
ದೂಗಿಸುವುದವಧಿ ಕೀರ್ತ್ಯಂಗನೆಯ ಸುಳಿವಿಂಗೆ ಮೂಲೋಕವವಧಿ ವಿಪುಳ ॥
ಭೋಗಕ್ಕೆ ಸರ್ವಸುಖವವಧಿ ವೀರಕ್ಕೆ ಭೂ ।
ಭಾಗದೊಳು ನಿಷ್ಕಂಟಕತ್ವವೇ ಅವಧಿ ತಾ ।
ನಾಗೆ ಪಿರಿಯರಸುತನವಂ ಮಾಡುತಿರ್ದನು ಹರಿಶ್ಚಂದ್ರಭೂನಾಥನು ॥೪೯॥

ಮುಸುಳಿಸದ ಕೀರ್ತಿ ಮಾಸದ ತೇಜ ಕಲಿ ಹುಗದ ।
ಹೆಸರಿಂಗದೋಜೆ ಕೊರಗದ ದರ್ಪವುಗದ ಬಗೆ ।
ಹುಸಿ ಹುಗದ ನುಡಿ ಮಾಯೆ ಮುಸುಕದಱಿವಾಲಸ್ಯವೆಡೆಗೊಳ್ಳದೀಶಭಕ್ತಿ ॥
ನಸುಲೋಭ ನಡದ ಸಿರಿ ಭೀತಿ ಬೆರಸದ ವೀರ ।
ದೆಸಕವಿದಿರೊಗೆಯದುನ್ನತಿ ಸಹಜವೆನಿಸಿ ರಾ ।
ಜಿಸುತುಂ ಹರಿಶ್ಚಂದ್ರಭೂನಾಥನಿರಲಿತ್ತಲತ್ತಲಮರಾವತಿಯೊಳು ॥೫೦॥

ಇಂತು ಹರಿಶ್ಚಂದ್ರಕಾವ್ಯದೊಳ್
ಪ್ರಥಮಸ್ಥಲಂ.

ದ್ವಿತೀಯಸ್ಥಲಂ.

ಸೂಚನೆ ॥ ಭೂವರಹರಿಶ್ಚಂದ್ರನೃಪನ ಘನಸತ್ಯವಾ ।
ದೇವಸಭೆ ನಡುಗೆ ವಾಸಿಷ್ಠ ಕೌಶಿಕಮುನಿಯ ।
ನಾವಗಂ ಕದನಮಂ ಬಳಸಿ ಪ್ರತಿಜ್ಞೆಯಂನುಡಿಸಿತೇವಣ್ಣಿಸುವೆನು ॥

ಪರುಷವಂಗಣದ ಕಲ್ ಸುರಭಿ ಕಱುಹಂ ಕಲ್ಪ ।
ತರು ಬನಂ ಸ್ವರ್ಗ ನಿಜದೇಶವಮರಾವತಿಯೆ ।
ಪುರುದುರ್ಗವಮರರಾಳ್ ಮೇರು ಕೇಳೀಶೈಲವಮೃತವೇ ಮನೆಯಬೀಯಂ ॥
ವರರಂಭೆ ಸೂಳೆ ಶಚಿ ರಾಣಿಯೈರಾವತಂ ।
ಕರಿ ವಜ್ರವಾಯುಧಂ ನವನಿಧಿಯೆ ಬಂಡಾರ ।
ಪೊರೆವಾಳ್ದನಭವನೆಂದೆನಿಪ ದೇವೇಂದ್ರನೊಂದಿರುಳೋಲಗಂಗೊಟ್ಟನು ॥೧॥

ತರದ ತಂಡದ ಗಡಣದೋರಣದ ವಂಗಡದ |
ಪರಿವಿಡಿಯ ಸಾಲ ಸೇರುವೆಯ ಪರಿಪಜ್ತಿಗಳ |
ಸುರರ ವಿದ್ಯಾಧರರ ಕಿನ್ನರರ ಖೇಚರರ ಗುಹ್ಯಕರ ಗಂಧರ್ವರ ||
ತುರಗವದನರ ಮಯೂರರ ಮಹೋರಗರ ಸಿ |
ದ್ಧರ ಧರಾಚರರ ಗರುಡರ ಕಿಂಪುರುಷರ ಮು|
ಖ್ಯರ ನಟ್ಟನಡುವೆ ಮಣಿಭದ್ರಾಸನದೊಳಿರ್ದನಿಂದ್ರನನಿಮಿಷಚಂದ್ರನು ||೨||

ಹಿಂದೆ ಮುಂದೆಡಬಲನನೆಡೆಗೊಂಡ ಪಟುಭಟರ
ಗೊಂದಣದ ಮಕುಟದಿಡುಕುಱ ತಳಿತ ಕೈದುಗಳ |
ಸಂದಣಿಯ ತುಱುಗಿ ತುಂಬಿದ ದೀವಿಗೆಯ ಸುಧಾಭಿತ್ತಿಯ ವಿಳಾಸಿನಿಯರ||
ಹೊಂದೊಡಿಗೆವೆಳಗು ನಗೆಮೊಗ ಕಂಗಳೊಳು ಪುಟ್ಟ |
ಮುಂದೈಸಿ ಬಳೆದ ಬೆಳತಿಗೆವೆಳಗಿನೊಳಗಿರ್ದ |
ನಾದು ಗಿರಿದಳನದೋರ್ದಂಡಂ ಶಚೀಸತಿಯ ಗಂಡ ರಂಭೆಯ ಮಿಂಡನು||೩

ಸನಕ ಕಶ್ಯಪ ಜಹ್ನು ಜಮದಗ್ನಿ ಭೃಗು ಸನಂ |
ದನ ಕುತ್ಸ ವತ್ಸ ಶುಕನತ್ರಿ ವಾಲ್ಮೀಕಿ ಜೈ |
ಮಿನಿ ಭರದ್ವಾಜ ರೋಮಜ ಭಗೀರಥ ಕುಶಾವರ್ತ ನಾರದ ಮರೀಚಿ ||
ಮನು ಮತಂಗ ವ್ಯಾಸ ಗರ್ಗ ಗೌತಮ ಸನಾ |
ತನನಗಸ್ತ್ಯ ದಧೀಚಿ ಪೌಲಸ್ತ್ಯ ಮಾಂಡವ್ಯ |
ಮುನಿಮುಖ್ಯರಿರ್ದರಮರಾವತಿಯ ಬಲ್ಲಹನ ಬಳಸಿನೊಡ್ಡೋಲಗದೊಳು ||

ಬಡಲನಾವರಿಸಿದಂಗೋಪಾಂಗಸಂಕುಲದ |
ನಡುವೆ ನಯನದ್ವಯಂಗಳು ಸಲೆ ನವಗ್ರಹದ |
ನಡುವೆ ಚಂದ್ರಾದಿತ್ಯರುರ್ವಿಯಂ ಪರ್ವಿ ಪಸರಿಸುವ ನಾನಾನದಿಗಳ ||
ನಡುವೆ ಸುರುಚಿರಗಂಗೆ ತುಂಗಭದ್ರೆಗಳೊಪ್ಪ |
ವಡೆದ ಮಹಿಮೆಯೊಳೆಸೆವ ತೆಱದಿ ಸುರಪನ ಸಭೆಯ |
ನೆಡೆಗೊಂಡ ಮುನಿಕುಲದ ನಡುವಿರ್ದರಾಗಳ್ ವಸಿಷ್ಠವಿಶ್ವಾಮಿತ್ರರು ||೫||

ಅಲಸದೆ ಸಮಸ್ತಭೂಮಂಡಲವನಾಳ್ವ ರವಿ |
ಕುಲಜರೆನಿಪಿಕ್ಷ್ವಾಕುವಂಶದರಸುಗಳೊಳತಿ |
ಬಲರೆನಿಸಿ ಮನವಚನಕಾಯದೊಳಗೊಮ್ಮೆಯುಂಹುಸಿಹೊರ್ದದಂತೆನಡೆವ||

ಕಲಿಗಳಾರಯ್ಯ ಹೇೞುವರ ಪಾರಂಪರೆಗೆ |
ಸಲೆ ಸಂದ ರಾಜಗುರು ನೀನಱಿಯದವರಿಲ್ಲ |
ವೆಲೆ ಮುನಿಪ ಹೇೞೆಂದು ಹಲವುಕಣ್ಣಾದವಂ ನುಡಿದನು ವಸಿಷ್ಠಮುನಿಗೆ ||
ಬೆಸಗೊಂಡೊಡಿಕ್ಷ್ವಾಕುವಂಶದೊಳಗಣ ಚತು |
ರ್ದಶಭುವನಪತಿಗಳೊಳಗಿಂದುತನಕಾನಱಿಯೆ |
ಹುಸಿ ಹೊರ್ದದವರಿಲ್ಲ ಹಿಂದಣರಸುಗಳನುದ್ಧರಿಸಲೆಂದವತರಿಸಿದ ||
ವಸುಧಾಧಿಪತಿ ಹರಿಶ್ಚಂದ್ರನಾತನ ಸತ್ಯ |
ದೆಸಕಮಂ ಪೊಗೞಲೆನ್ನಳವೆ ಫಣಿಪತಿಗರಿದು |
ಶಶಿಮೌಳಿಯಾಣೆಯೆನಲಾ ವಸಿಷ್ಠಂಗೆ ಕೋಪಿಸಿದ ವಿಶ್ವಾಮಿತ್ರನು ||೭||
ತೀವಿದೊಡ್ಡೋಲಗದ ನಡುವೆ ತನ್ನಂ ಮೊದಲೊ |
ಳೋವಿ ನುಡಿಸದ ಕೋಪವೊಂದಾವಸಿಷ್ಠಮುನಿ |
ಯಾವುದಂ ಪೇೞ್ದೊಡದನಲ್ಲೆಂಬ ಭಾಷೆಯೆರಡಖಿಳಜೀವಾವಳಿಯಲಿ ||
ಭಾವಿಪೊಡೆ ಕುಂದನಲ್ಲದೆ ಲೇಸ ಕಾಣವಿಪ |
ಭಾವ ಮುಪ್ಪುರಿಗೊಂಡು ಕುಡಿವರಿದು ಕಡುಗೋಪ |
ವಾವರಿಸಿ ಕೌಶಿಕಂ ನಿಂದು ನಿಲ್ ನುಡಿಯಬೇಡೆಂದು ಜಱೆದಿಂತೆಂದನು ||೮||
ಬೇಸಱದೆ ಕೇಳ್ವ ದೇವೇಂದ್ರನುಂಟೆಂದು ನೀಂ |
ಹೇಸದಕಟಕಟ! ಸೊರಹುವರೆ ವಾಸಿಷ್ಠಯೆನ |
ಲಾಸೊರಹುವನೆ ಆತನಧಿಕನಲ್ಲವೆ ಹೇೞು ಮುಪಿದ ಮೊಱೆಯೊಳೆಂದೆನೆ ||
ರಾಸಿ ಹೊನ್ನುಂಟಧಿಕನಹುದೆನಲು ಹೊನ್ನ ಮಾ |
ತೀಸಭೆಯೊಳೇಕೆ ಸತ್ಯನೆ ಹೇೞೆನಲು ಸತ್ಯ |
ಲೇಶವಂತವನಾಳ್ವ ದೇಶದೊಳಗಿಲ್ಲೆಂದು ನುಡಿದ ವಿಶ್ವಾಮಿತ್ರನು ||೯||
ಶಿವನಱಿಯಲಾತನೆಂತುಂ ಸತ್ಯನವನಾಳ್ವ |
ಭುವನದೊಳಗನೃತವನ್ಯಾಯವಾಲೀಢತ್ವ |
ವವಿಚಾರ ದುರ್ನೀತಿ ದುಸ್ಸಂಗ ದುಸ್ಸ್ಥಿತಿ ದುರಾಚಾರವಿಲ್ಲೆಂದೆನೆ ||
ತವೆ ಬೇರ ಬಲ್ಲವಂಗೆಲೆದೋಱಲೇಕೆ ನಿ |
ನ್ನವನೀಶನಾಳ್ವ ನಾಡೆಯ್ದೆ ಮುನಿನಾಥ ನೋ |
ಡುವೊಡೆನ್ನ ಕಾಲಾಟದೊಳಗಣದು ಪೇೞ್ವೆನದಱಿರವ ಕೇಳುವೊಡೆಂದನು ||

ನುತವಿಚಾರೋನ್ನತಂ ಕಾನನಂಗಳೊಳು ಪಶು |
ಪತಿರತಿತ್ವಂ ಗೋಕುಲದೊಳು ಸ್ವರಾಗಸಂ |
ತತಿ ಶುನಕಗೋಷ್ಠಿಯೊಳು ಚತುರದ್ವಿಜೋಪಚಾರಂ ದಂತಧಾವನದೊಳು||
ವಿತತಧರ್ಮಶ್ರವಣವಂತ್ಯಕಾಲದೊಳಗಾ |
ಶ್ರಿತಸರ್ವವಿಭವ ವೇಣುಗಳೊಳು ಸ್ವಸ್ಥತಾ |
ಗತಿ ಮುಕುತರಾದವರೊಳಲ್ಲದಾನಾಡೊಳಿಲ್ಲೆಂದ ವಿಶ್ವಾಮಿತ್ರನು ||೧೧||

ಕೋಣನೆರಡುಂ ಹೋರೆ ಗಿಡುವಿಂಗೆ ನಿತ್ತೆಂಬ |
ಕ್ಷೋಣಿಯಾಡುವ ಗಾದೆಯಂತೆ ವಿಶ್ವಾಮಿತ್ರ |
ನೂಣೆಯುವ ಹಿಡಿನ ವಾಸಿಷ್ಠಮುನಿ ಸತ್ಯವಂ ಕೊಂಡಾಡುವೆರಡಱಿಂದೆ ||
ಕ್ಷೋಣೀಶನೆನಿಸುವ ಹರಿಶ್ಚಂದ್ರಭೂಪಂಗೆ |
ಪ್ರಾಣಪರಿಯಂತದಲ್ಲಪಮೃತ್ಯು ಸಾರ್ಗೆಂದು |
ಕ್ಷೀಣವಂ ತೋಱನುಡಿವಂದದಿಂ ಕೋಪದೊಳು ಜಂಭಮರ್ದನ ನುಡಿದನು

ಏನನಾಂ ಬೆಸಗೊಂಡೊಡೇನನಾಡುವಿರಿಳೆಯ |
ಭೂನಾಥರೊಳು ಸತ್ಯರಾರೆಂನು ಬೆಸಗೊಂಡೊ |
ಡೀನಾಡ ಮಾತು ಮಾಱುತ್ತರವೆ ಮುನಿಗಳಿರ! ಎಂದು ಸುರಪತಿ ನುಡಿಯಲು
ಏನೆಂದೊಡಂ ಹರಿಶ್ಚಂದ್ರನೇ ಸತ್ಯಸಂ |
ಧಾನನೆಂದಾವಸಿಷ್ಠಂ ನುಡಿಯಲಲ್ಲ ನಿ |
ಲ್ಲಾನಱಿಯಲಾನೃಪಂ ಸತ್ಯನಲ್ಲವನ ಮಾತೀಸಭೆಯೊಳೇಕೆಂದನು ||೧೨||

ಇಳೆ ತಳಕ್ಕಿೞಿಯೆ ಸಸಿ ಬಿಸಿಯಾಗೆ ಮೇರುಗಿರಿ |
ಚಳಿಸೆ ರವಿ ಕಂದೆ ಜಲನಿಧಿ ಬತ್ತೆ ಶಿಖಿ ಹಿಮಂ |
ದಳೆದ ದಿನದೊಳು ಸತ್ಯನಿಧಿ ಹರಿಶ್ಚಂದ್ರರಾಯನ ವಾಕ್ಯದೊಳು ಹುಸಿಗಳು||
ಮೊಳೆಯುವಿದು ನಿರುತವಾನಱಿಯಲಾತನ ಸತ್ಯ |
ದಳವನಱಿವೊಡೆ ನೊಸಲ ಕಣ್ಣುಳ್ಳನಾಗಬೇ |
ಕುೞಿದವರಿಗಳವಡದು ನೀನೇಪರೀಕ್ಷಿಸುವೆಯೆಂದನಾಮುನಿನಾಥನು ||೧೪||

ಇಂತಿವಕೆ ವರ್ಪಂದುತಸಕವಂ ಸ್ಥಿರನೆಯಾ |
ದಂತಿರಲಿ ಸತ್ಯಮಾತ್ರದೊಳಿಪ್ಪುದೇಂ ಸತ್ಯ |
ವಂ ತಳೆದುದಕ್ಕೆ ಸಾಧನವಾಗಿ ಬಿಡಬೇಹುಮುಂಟವಂ ಬಿಡದಿರ್ದೊಡೆ ||

ಎಂತು ಹೇೞೆಂದೊಡವನುಸಿರೆನಲು ಲೋಭವಾ |
ರ್ತಂ ತೀವ್ರಭೀತಿ ನಿಷ್ಕರುಣ ಮೂರ್ಖತ್ವ ಜಾ |
ಡ್ಯಂ ತವಕ ಬಿಡಬೇಹುದಲ್ಲೆಂಬೊಡಲ್ಲೆಂದು ನುಡಿಯೆಂದನಾಮುನಿಪನು ||

ಕನಕದಲಿ ಕಂಪ ಮಾಣಿಕದಲ್ಲಿ ರಸವ ಮು |
ತ್ತಿನಲಿ ಮೃದುವಂ ದೀಪ್ತಿಯಲಿ ತಂಪನಮಳಚಂ |
ದನನೊಳಿಸಿದಂ ನವ್ಯಕುಸುಮಚಯದೊಳು ದನಿಯುನಱಸುವುದು ಸಾಹಿತ್ಯವೇ
ಘನಸತ್ಯವಾದಿಯೆಂದಾಂ *ಪೊಗೞ್ವಡದಱೊಳಾ |
ತನನೀಕ್ಷಿಸುವುದಲ್ಲದೀಗುಣವನಱಸುವರೆ |
ಮುನಿಪ ಹೇೞೆಂದೊಡೀಗುಣವಿಲ್ಲದಿರ್ದೊಡವ ಸತ್ಯನೇ ಅಲ್ಲೆಂದನು||೧೬||

ಮುನಿವರ್ಗೆ ಬೆಂಗೊಡದ ದೆಸೆಯೊಳತಿಲೋಭಿ ದು |
ರ್ಜನರ ಮಾತಂ ಕೇಳದೆಡೆಯೊಳತಿಮೂರ್ಖ ಪರ |
ವನಿತೆಯರ ನೋಡುವೆಡೆಯೊಳು ಭೀತನೀಶಭಕ್ತಿಯನು ಬಯಸುವ ದೆಸೆಯೊಳು ||
ವಿನುತಾರ್ಥಿ ವಿಬುಧಜನದರ್ಶನಂ ಕುಡುತ ಬ |
ರ್ಪನಿತಱೊಳು ತವಕಿ ದುಷ್ಕರ್ಮಮಾರ್ಗದೊಳಗೊ |
ಯ್ವನೆ ನಡೆಯಲಾಱನದಱಿಂ ಜಾಡ್ಯನಿದಱೊಳಲ್ಲದೆ ಬೇಱೆ ತಲೆದೋಱವು

ಎಸೆವ ಮಗನಿಲ್ಲದೊಡೆ ನರಕವಹುದೆಂದು ಶಂ |
ಕಿಸುತ ಕಲಿ ಮಗನಾದೊಡಂ ಮಗನ ಯಾಗಕ್ಕೆ |
ಪಸುವ ಮಾಡುವೆನೆಂದು ವರುಣನಂ ಬೇಡಿದೊಡೆಯಾಕ್ಷಣಂ ಸುತನಾಗಲು||
ಹುಸಿದ ಸತ್ಯಂ ಮನೆಯೊಳಿರಬಾರದೆಂದು ಶಂ |
ಕಿಸಿ ಮಗನನಡವಿಯೊಳು ಬೈತಿಟ್ಟ ಲೋಭಿಯೆಂ |
ದು ಸಮಸ್ತವೇದಂಗಳೊಳು ಕೇಳ್ದು ಮತ್ತಱಿದು ಹೊಗೞ್ವದಿವಸದೊಳೆಂದನು||೧೮

ಹಿರಿದು ಹುಸಿಗಬುಧಿಸತಿ ಮುನಿದು ಮಾಡಿದ ಜಳೋ |
ದರವ ಭಾವಿಸದೆ ಕಂಗೆಟ್ಟ ಜಾಡ್ಯಂ ಮಹಾ |
ಧ್ವರಕೆ ಪಶುವಂ ಮಗನ ಮಾಡಲಾಱದೆ ಮೋಹದಿಂದೆ ಜೀಗರ್ತಮುನಿಯ ||
ವರಸುತಶುನಶ್ಶೇಫನಂ ತಂದು ಯಾಗವಿಡಿ |
ದಱಿದು ಬೇಳಲ್ಕೆ ಮನದಂದ ಪಾತಕನು ಭೂ |
ವರನನೇತಕ್ಕೆ ಹೇಸದೆ ಹೊಗೞ್ವೆಯೆಂದಾ ವಸಿಷ್ಠನಂ ಕೆಡೆನುಡಿವನು ||೧೯||

ಹಲವು ಮಾತೇಕಾ ಹರಿಶ್ಚಂದ್ರಭೂನಾಥ ।
ನೊಳಗಸತ್ಯವನು ಕಾಣಿಸಲು ಬಲ್ಲರು ಧಾತ್ರಿ ।
ಯೊಳು ಮುನ್ನ ಹುಟ್ಟಿದವರಿಲ್ಲಿನ್ನು ಹುಟ್ಟುವರ ಕಾಣೆ ನಾನಿದ ಬಲ್ಲೆನು ॥
ಉಱಿದವರ ಹವಣಾವುದೆಂದಾ ವಸಿಷ್ಠ ಮುನಿ ।
ಕುಲತಿಲಕನೆನಲು ವಿಶ್ವಾಮಿತ್ರ ಮನದೊಳತಿ ।
ಮುಳಿದು ನಿಲ್ಲಾಡದಿರು ಬಾಯಿ ಹಿರಿದುಂಟೆನುತಲೆಂದು ಜಱಿದಿಂತೆಂದನು ॥ ೨೦

ವನಧಿಪರಿಯಂತ ಧರೆಗರಸುತನನವದಱ ಮೇ ।
ಲನುವುಳ್ಳ ಶಿಷ್ಯನಾಗಿಯು ಹಿತವನತಿವಿಪುಳ ।
ಧನವನಾರಾಧಿಸುವನದಱ ಮೇಲಾತನಾರೈಕೆಯೊಳಗಿರ್ಪ ನೀನು ॥
ಎನಿತನಗ್ಗಳಿಸಿ ಬಣ್ಣಿಸಲೊಪ್ಪದೈಯ ಹೇ ।
ಱೆನಲು ರಾಜಪರಿಗ್ರಹದ ಬಲದವನೆ ನಾನು ।
ಯೆನೆ ಮುನಿಯ ಬೇಡಾತ ಹುಸಿದನಾದೊಡೆ ನಿನ್ನನೇಗೈಯಬಹುದೆಂದನು ॥ ೨೧

ಶ್ರುತಿಮತ ಕುಲಾಚಾರ ಧರ್ಮಮಾರ್ಗಂ ಮಹಾ ।
ವ್ರತವನುಷ್ಠಾನ ಗುರುವಾಜ್ಞೆ ಲಿಂಗಾರ್ಚನೋ ।
ನ್ನತಿ ತಪಂ ಬ್ರಹ್ಮಕರ್ಮಂ ಪುಣ್ಯದೊಳಗಾದವೆಲ್ಲವಂ ತೊಱೆದು ಕಳೆದು ॥
ಸತಿಯನುಱಿವತಿದಿಗಂಬರನಾಗಿ ಮುಕ್ತಕೇ ।
ಶಿತನಾಗಿ ನರಕಪಾಲದೊಳು ಸುರೆಯೆಱೆದು ಕುಡಿ ।
ಯುತ ತೆಂಕಮುಖವಾಗಿ ಹೋಹೆಂ ಹರಿಶ್ಚಂದ್ರ ಮಱೆದು ಹುಸಿಯಂ [ನುಡಿದೊಡೆ ॥ ೨೨

ಧರೆ ಗಗನವಡಸಿ ಕಾದುವ್ರೊಡೆಡೆಯುಲಿಹ ಚರಾ ।
ಚರವೆಲ್ಲ ಹೊಗಲಿ ಮುನಿದಖಿಳಮಂ ಸುಟ್ಟೊಱಿಸಿ ।
ಮರಳಿ ಹುಟ್ಟಿಸ ಬಲ್ಲ ಮುನಿಗಳಿಬ್ಬರ ಶಾಂತಿ ಸವೆದ ಕೋಪದ ಮುಖದಲಿ ॥
ಇರಬಾರದೇಳಬಾರದು ನುಡಿಯುಬಾರದಂ ।
ತಿರಬಾರದಹುದೆನಲು ಬಾರದಲ್ಲೆನಬಾರ ।
ದೆರಡಱ ವಿರೋಧದಿಂದೊಡ್ಡೋಲಗಂ ಚಿಂತೆ ಮುಸುಕಿ ಸೈವೆಱಗಾದುದು ॥

ಬಂದಕ್ಕೆ ಹಿತ ನುಡಿಯೆ ಪಕ್ಷವೆಂದೆರಡುಮಂ ।
ಹಿಂದುಗಳೆದಿರಲುಪೇಕ್ಷಿತವೆಂದು ಜಱಿದೊಡೆ ।
ವ್ಮಿಂದಧಿಕನೇಳೆಂದು ಹೊಗೞ್ದೊಡುಪಚಾರವೆಂದೆತ್ತಿದೊಡೆಧೂರ್ತನೆಂಬ ॥

ನೊಂದು ಶಾಪವನೀಯದಿರರೆಂದು ಸುರಪನಾ |
ನಂದರಸವಱಿತು ಬೆರಗಿನ ಮೊಗದೊಳಿರಲು ನಾ |
ರಂದ ದಟ್ಟಿಸುತೆರ್ದು ಕುಡು ವಸಿಷ್ಠಂಗೆ ಭಾಷೆಯು ಕೌಶಿಕಾ ಎಂದನು ||೨೪||

ಧರೆಯೊಳು ಚತುರ್ಯುಗಂಗಳು ಮರಳಿ ಮರಳಿ ಸಾ |
ಸಿರ ಬಾರಿ ಬಂದೊಡಜನೊಂದು ದಿನವಾದಿನದ |
ಪರಿ ದಿನಂ ಮೂವತ್ತು ಬರಲೇಕಮಾಸಮಾಮಾಸ ಹನ್ನೆರಡಾಗಲು ||
ವರುಷವಾವರುಷಶತವೆಂಬುದೇ ಸುರಪತಿಗೆ |
ಪರಮಾಯುವೀತನೀರೇಳ್ವಂ ಬರ್ಪನ್ನೆ |
ವರ ದೇವಲೋಕಕ್ಕೆ ಬಾರೆಂ ಪ್ರತಿಜ್ಞೆಯೆನಗೆಂದ ವಿಶ್ವಾಮಿತ್ರನು ||೨೫||

ಹೊಟ್ಟೆ ನೊಂದೊಡೆ ತುಱುಬ ಕೊಯ್ವವನ ಪಶು ಕಱುವ |
ಮೆಟ್ಟಿದೊಡೆ ಗೂಳಿಯಂ ಸದೆವವನ ಸೂಳೆ ಮೊರೆ |
ಯಿಟ್ಟೊಡೂರಗುಸೆಯಂ ಮುಱಿವವನ ನಗೆಯ ಕತೆಯಂ ಕಾಣಲಾದುದಿಂದು
ನೆಟ್ಟನೆ ಹರಿಶ್ಚಂದ್ರ ಹುಸಿದನಾದೊಡೆ ಸಾವು |
ಗೆಟ್ಟರಧಿನಾಥನೀರೇಳ್ವಂ ಸಲೆ ಸತ್ತು |
ಹುಟ್ಟುವನ್ನಬರ ಸಗ್ಗಂಬುಗೆನೆಸಿಪ್ಪ ಬಿರುದರಿದರಿದು ನಿನಗೆಂದನು ||೨೬||

ಭಕ್ತಿ ಶಮೆ ದಮೆ ಯೋಗ ನೀತಿ ಮತವಱಿವು ವೇ |
ದೋಕ್ತಿ ಘೋರವ್ರತ ತಪೋನಿಷ್ಠೆ ಜಪ ಗುಣಾ |
ಸಕ್ತಿ ತೆ ಸ್ನಾನಮೌನಧ್ಯಾನವಾಚಾರ ಸತ್ಯತಪ ನಿತ್ಯನೇಮ ||
ಯುಕ್ತಿ ಶೈವಾಗಮಂ ಪೇಷಲಿಂಗಾರ್ಚನಂ |
ಭಕ್ತಿಯಿಂ ಬಳೆದ ಪುಣ್ಯದೊಳರ್ಧಮಂ ಸುಧಾ |
ಭುಕ್ತರಱಿಯಲು ಕುಡುವೆನಾಹರಿಶ್ಚಂದ್ರ ಹುಸಿಯಂ ನುಡಿಯದಿರಲೆಂದನು ||

ಎಂದು ಭೂವರನಂ ಪರೀಕ್ಷಿಸುವೆಯೆನ್ನ ಮನ |
ಬಂದ ದಿನಮೆನಿತು ಸುಳ್ಮಾತನೀಧರೆಯೊಳಿ |
ರ್ದಂದುತನಕಾನಾವ ಪರಿಯೊಳು ಸಹಸ್ರವಿಧದೊಳು ದಿಟಮೆ ದಿಟವೆಂದೆನೆ ||
ಹಿಂದುಗಳೆಯಲದೇಕೆ ನಡೆಯೆನಲು ನೀನಾಡು |
ವಂದವನುವಾಗಿರದೆನುತೆ ಕೌಶಿಕನೊಕ್ಕ |
ದಿಂದಾಡಲೆಮ್ಮ ಕೂಡಿನಿತಣಕವೇಕೆಂದು ವಾಸಿಷ್ಠಮುನಿ ನುಡಿದನು ||೨೮||

ಇನಿತು ಮುಳಿಸಾವುದು ಹರಿಶ್ಚಂದ್ರಭೂಭುಜನ |
ಮನೆಗೀಗಳಿಂತು ನೀ ಹೋಗಿ ಕೌಶಿಕನು ನೆ |
ಟ್ಟನೆ ನಿನ್ನನಂತಿಂತು ಕಿಡಸಿದಪನ ನೀನಾವ ಪರಿಯುಲಿಚ್ಚೆತ್ತಿರೆಂದು ||
ನೆನಸಿ ಕುಡು ಹೋಗೆಂದೊಡಾನಾಡುವವನೆ ಹೇ |
ಳೆನಲೆನ್ನ ಗಾಸಿಗಾಱದೆ ನೃಪಂ ಹುಸಿನುಡಿಯೆ |
ಮುನಿತನವನೀಡಾಡಿ ಹೋಹಂತಿರಾದಪುದು ಹೋಗಿ ನೀಂ ಹೇಳೆಂದನು||೨೯

ತರಣಿ ತೇಜಂಗಿಡದಿರಗ್ನಿ ಬಿಸುಪಾಱದಿರು |
ಸರಸಿರುಹವೈರಿ ತಂಪಂ ಬಿಡದಿರೆಲೆಲೆ ಮುಂ |
ದರವೆ ಚಲಿಸದಿರೆಂದು ಬೋಧಿಸಲದೇಕೆ ನಿಜವಳಿವವೇ ಸುಮ್ಮನಿರಲು||
ವರಹರಿಶ್ಚಂದ್ರ ಸತ್ಯಂಗಿಡದಿರೆಂದು ಬೋ |
ಧಿಸುವಂತಾಗಿ ಹುಸಿಯುಂಟೆ ಕೊಂಡೆಯುವೆಮಗೆ |
ಹಿರಿಯತನ ಕೆಟ್ಟಿಂತು ನುಡಿಪೆ ಕಂಡ್ಯೆಯೆಂದು ವಾಸಿಷ್ಠಮುನಿ ನುಡಿದನು||೩೦||

ಸಿಡಿಲು ಹೊಡೆವೊಡೆ ಹಿಡಿದ ಕೊಡೆ ಕಾವುದೇ ಮುನಿದು |
ಪೊಡವಿ ನುಂಗುವೊಡೆ ಮನ ತೂಗುವುದೆ ಕವಿದು ಹೆ |
ಗ್ಗಡಲುಕ್ಕಿ ಜಗವ ಮೊಗೆಯಲ್ಕೆ ಮೆಳೆಯಡ್ಡಬಹುದೇಯುಳಿವ ಹೊತ್ತು
ಬಡಬೋದೆಗೀದೆಗಳು ರಕ್ಷಿಸುವುವಲ್ಲವಾಂ | [ನಿನ್ನ ||
ಕಡುಮುಳಿದ ಬಳಿಕವೇಗುವುವು ನೀಂ ಹೇಳಿದಿ |
ರ್ದೊಡೆ ಮದನಹರನಾಣೆ ! ಹೋಗೆಂದು ಕೌಶಿಕಂ ನುಡಿದನು ವಸಿಷ್ಠನೊಡನೆ||

ಕುಲವ ನಾಲಗೆಯುಱುಹಿತೆಂಬ ನಾಣ್ನುಡಿಗಿಂದು |
ನೆಲೆಯಾಯ್ತಲಾ ಬ್ರಹ್ಮಋಷಿಯಾದೊಡೊಳಗು ನಿ |
ರ್ಮಳವಹುದು ಕೇಳು ರಾಜರ್ಷಿ ಕೋಪಿಸದೆ ದಟ್ಟಿಸದೆ ಕೆಡೆನುಡಿಯದೆ ||
ನಿಲಲಿಂತು ಬಲ್ಲಿಯೆನಲೆನ್ನನೇ ಇಂತು ನೀಂ |
ಚಲಿಸದಾಡುವೆಯೆಂದೊಡಹುದು ನಿನ್ನಂ ನಿನ್ನ |
ನೆಲೆ ಮುನಿಸಯೆನೆ ಕೌಶಿಕಂ ಕುಪಿತನಾದುದದನಾವ ಕವಿ ಬಣ್ಣಿಸುವನು||೩೧

ನುಡಿಯುರಿಯನುಗುಳೆ ಕಣ್ ಕಿಡಿಗೆದಱೆ ವದನ ಕೆಂ |
ಪಡರೆ ನಿಟಿಲಂ ಬಿಸಿಯ ಬಿಂದುವಂ ತಳೆಯೆ ಕೈ |
ನಡುಗೆಪುಬ್ಬುಲುಗೆಮಿಸುಪಧರಸಿಡಿಯೆಲಾಕುಳಹೊಗೆಯೆಕಾಲ್ಕುಂಬಿಡೆ ||

ತೊಡೆದ ಭಸಿತಂ ಧೂಮವಿಡೆ ಮೆಯ್ಯ ರೋಮ ಕಾ |
ರಿಡೆ ಕಮಂಡಲುಜಲಂ ತೆಕ್ಕತೆಕ್ಕನೆ ಕುದಿಯೆ |
ಮೃಡನ ಪಣೆಗಣ್ಣ ಮುನಿಯಾದಂತೆ ಕೌಶಿಕಂ ಮುನಿದನು ವಸಿಷ್ಠಮುನಿಗೆ ||
ನೋಡು ನೋಡಿಂದೆನ್ನ ರಾಜಋುಷಿಯೆಂದು ಕೆ |
ಟ್ಟಾಡೆ ತಕ್ಕಾ ಹರಿಶ್ಚಂದ್ರನಸಸತ್ಯನಂ |
ಮಾಡಿಸುವೆನಧಿಕಪ್ರತಿಜ್ಞೆಯಂ ನುಡಿದ ನಿನ್ನಂ ವ್ರತಭ್ರಷ್ಟನೆನಿಸಿ ||
ಆಡಾಡಿ ಕಾಡುವೆನೆನುತ್ತಿರ್ದು ಸಾವನೀ |
ಡಾಡಿದವರೊಡೆಯನೋಲಗದಿಂದೆ ಪೊಱವಟ್ಟ |
ನಾಡಂಬರದ ಸಿಡಿಲು ಗಜಱಿ ಗರ್ಜಿಸಿ ಮೇಘದಿಂದೆ ಪೊಱಮಡುವ ರವದಿ ||
ನಡೆದು ತನ್ನಾಶ್ರಮವ ಹೊಕ್ಕು ಹಲುವೊರೆಯುತ್ತ |
ಪೊಡವೀಶನಂ ಭಂಗಿಸುವುದಕ್ಕುಪಾಯಮಂ |
ಬಿಡದೆ ಕೌಶಿಕ ನೆನೆಯುತಿರಲತ್ತಲಿರ್ದವನಿಪಂಗೆ ಸೂಚಿಸದೆ ಪೋಗಿ ||
ಮೃಡಮೂರ್ತಿಯೆನಿಸುವ ವಸಿಷ್ಠಂ ತಪೋವನದ |
ನಡುವೆ ಸುಖದಿಂದಿರೆ ಹರಿಶ್ಚಂದ್ರ ಭೂಭುಜಂ |
ಕಡಲು ಮುದ್ರಿತವಸುಧೆಯೆಲ್ಲವಂ ಪಾಲಿಸುತ್ತಿರ್ದನೇವಣ್ಣಿಸುವೆನು ||೩೫||

ಇಂತು ಹರಿಶ್ಚಂದ್ರಕಾವ್ಯದೊಳ್

ದ್ವಿತೀಯಸ್ಥಲಂ.

ತೃತೀಯಸ್ಥಲಂ.

ಸೂಚನೆ॥ ವಸುಧೆ ದಣಿಯಲು ಬಹುಸುವರ್ಣಯಾಗವ ಮಾಡಿ ।
ಹೊಸಬನವ ಹೊಕ್ಕು ಸುಖಮಂ ಸವಿದು ಮುನಿಯ ಕೈ ।
ಮಸಕದಿಂದೊಗೆದ ಖಗಮೃಗ ನಾಡ ಮೊಱೆಯಿಡಿಸುತಿರ್ದುವೇವರ್ಣಿಸುವೆನು ॥

ಕೋಣನೆರಡುಂ ಹೋರೆ ಗಿಡುವಿಂಗೆ ಮಿತ್ತೆಂಬ ।
ಕ್ಷೋಣಿಯಾಡುವ ಗಾದೆಯುಂ ದಿಟಂ ಮಾಳ್ಪಂತೆ ।
ಹೂಣಿಸಿ ವಸಿಷ್ಠಂಗೆ ಕೌಶಿಕಂ ನುಡಿದ ಪ್ರತಿಜ್ಞೆಯುಂ ಗೆಲುವೊಡಿನ್ನು ॥
ಜಾಣಿಂ ಹರಿಶ್ಚಂದ್ರರಾಯನುನ್ನತಿಯಱಿವ ।
ಕಾಣಬೇಕೆಂದಖಿಳಸಾಮರ್ಥ್ಯದ ಕಲಾಪ್ರ ।
ವೀಣನಂತಸ್ತದೇಕಾಂತದೊಳ್ ಚಿಂತೆಯಿಂ ಭ್ರಾಂತಿಯೋಗದೊಳಿರ್ದನು॥೧॥

ಧರೆಯೊಳು ಹರಿಶ್ಚಂದ್ರನಂ ಹುಸಿಕನೆಂದೆನಿಪ ।
ಪರಿಯಾವುದೆಂದು ಚಿಂತಿಸಲೊಂದುಪಾಯಮಂ ।
ಕುರಿಸೆ ಕಂಡುಬ್ಬಿ ಭುಜವೊಯ್ದು ನಿಜವೈರದಂತಸ್ತವಱಿಯದ ಮುನಿಗಳ ॥
ಕರೆದು ನೀವಿಂತೀಗ ಹೋಗಿ ಭೂವರನನುಪ ।
ಚರಿಸಿ ಬೋಧಿಸಿ ಬಹುಸುವರ್ಣಯಾಗವನಾವ ।
ಪರಿಯೊಳಂ ಮಾಳ್ಪ ಮನವಂ ಮಾಳ್ಪುದೆಂದು ಕಳುಹಿದನು ವಿಶ್ವಾಮಿತ್ರನು॥

ಕೌಶಿಕನ ಕುಟಿಲವಱಿಯದೆ ಹೋದ ಮುನಿಗಳವ ।
ನೀಶಂಗೆ ಮಂಗಳಾಶೀರ್ವಾದಶೇಷೆಯಂ ।
ಸೂಸಲೇಂ ಕಾರ್ಯ ಬಿಜಯಂಗೈದಿರೆನೆ ಸಕಲವೇದಪೌರಾಣಾಗಮ ॥
ರಾಶಿಗಳೊಳೊಂದಧಿಕಧರ್ಮಮಂ ಕಂಡಱಿಪ ।
ಲೋಸುಗಂ ಬಂದೆವೆನಲಾವುದೆನೆ ಮಾಳ್ಪ ವಿ ।
ಶ್ವಾಸಮಂ ನುಡಿಯೆ ಪೇಳ್ದಪೆವು ಮಾಡದೊಡದಂ ಪೇಳ್ದು ಫಲವೇನೆಂದರು॥

ಮನವೊಸೆದು ಮಾಡುವೆಂ ತಾನೆನ್ನ ಗುರುವಸಿ ।
ಷ್ಠನ ಪಾದಪಂಕೇಜದಾಣೆ ನಾಚದೆ ಪೇಳ್ವು ।
ದೆನೆ ಬಹುಸುವರ್ಣಯಾಗಂ ಯಾಗಕೋಟಿಕೋಟಿಗಳಿಂದವತ್ಯಧಿಕವು ॥

ನಿನಗಲ್ಲದಿನ್ನುಱಿದವರ್ಗಾಗದೆಂದೊಡದ |
ಱನುವಾವುದೆನೆ ನೆರೆದ ಮುನಿಗಳತಿದೋಷ ನೆ |
ಟ್ಟನೆ ನಿನಗೆ ಬಾರದಂದದಿ ಬೇಡಿದನಿತು ವಸ್ತುವನೀಯಬೇಕೆಂದರು ||೪||

ಆವಿಮಳಮುನಿಗಳ ಹಿತೋಪದೇಶವನಾಂತು |
ಭೂವರಂ ಸರ್ವಮುನಿವರ್ಗಮಂ ಬರಿಸಿ ನಾ |
ನಾವೇದವಿಧಿವಿಹಿತಕರ್ಮಾಗಮಾರ್ಥದಿಂ ಯಾಗಮಂ ಮಾಡಿ ಬಱಿಕ ||
ಆವಾವ ಮುನಿಗಳಾವಾವ ಧನವಂ ಬೇಡ |
ಲೋವಿ ಕೊಟ್ಟುಪಚರಿಸುತಿರೆ ಬಂದನಖಿಳಮುನಿ |
ಪಾವನಂ ಕಪಟಪಟುವಟು ಕೌಶಿಕಂ ವಸಿಷ್ಠಂ ಹೋದ ಹೊತ್ತನಱಿದು ||

ಇತ್ತಲಾಭೂಭುಜಂ ಸಕಲಮುನಿಗಳಿಗೆ ಮನ |
ವೆತ್ತಿಕ್ಕಿ ನೆನೆದರ್ಥಮಂ ಕುಡುತ್ತಿರಲಾಸು |
ಚಿತ್ತಮನನಾಗಿ ಸಂತೋಷದಿಂ ಹರ್ಷಸಂಜನಿತಸಂಭ್ರಮದೊಳಿರಲು ||
ಅತ್ತ ವಿಶ್ವಾಮಿತ್ರಮುನಿಯುಱಿಕೆಯಾಯ್ತೆಂದು |
ಸುತ್ತಿದ ಪ್ರಪಂಚವೆಲ್ಲವ ಕೂಡಿಕೊಂಡು ಸಲಿ |
ಯುತ್ತ ನಟಸುತ್ತ ಹೊಡೆದಾಡಿ ಬಂದನು ಹರಿಶ್ಚಂದ್ರಭೂಪಾಲನೆಡೆಗೆ ||೬||

ಹರಿದು ವಿಶ್ವಾಮಿತ್ರಮುನಿಗೆಱಗಿ ಚರಣಸರ |
ಸಿರುಹಮಂ ತೊಳೆದು ನೆನೆದರ್ಥಮಂ ಬೆಸಸಿಮೆನೆ |
ಪಿರಿಯಕರಿಯುಂ ಮೆಟ್ಟಿ ಕವಡೆಯುಂ ಮಿಡಿದೊಡೆನಿತುದ್ದಮಂ ಪೋಪುದದಱ ||
ಸರಿಯೆನಿಸೆ ಸುರಿದ ಹೊಸ ಹೊನ್ನರಾಸಿಯನೀವು |
ದರಸಯೆಂದೆನೆ ಹಸಾದಂ ಕೊಟ್ಟೆನದನೀಗ |
ಲಿರದುಯ್ವುದೆನೆ ಬೇಡ ನಿನ್ನ ಮೇಲಿರಲಿ ಬೇಹಾಗ ತರಿಸುವೆನೆಂದನು ||೭||

ಕೊಂಡ ಹೊಸ ಹೊನ್ನರಾಸಿಯನವನಿಪಾಲಕನ |
ಬಂಡಾರದೊಳಗಿರಿಸಿ ತನ್ನಾಶ್ರಮವನೆಯ್ದಿ |
ಚಂಡಕರನರುಣಕಿರಣವು ಹುಗುವ ತಾವೆಲ್ಲವಂ ತೀವಿತವನ ಸತ್ಯ ||
ಪಂಡಿತರ ಮುಂದೆ ದೇವೇಂದ್ರನಿದಿರಲಿ ಮುನಿಯ |
ಬಂಡುಮಾಡುವೆ ಭೂಪತಿಯಲನೃತವಚನಮಂ |
ಕಂಡೆನಾದೊಡೆ ಕಾಣ್ಬ ತೆಱನಾವುದೆಂದು ಚಿಂತಿಸಿದ ವಿಶ್ವಾಮಿತ್ರನು ||೮||

ಕೊಟ್ಟ ದಾನದ ಧನವ ನೃಪನ ಮೇಲಿರಿಸಿ ಮನ |
ಗೊಟ್ಟು ಮನಗುಡದಿಹರನಿನ್ನಱಸಿ ತಾ ಹೇೞಿ |
ಲಟ್ಟದ ಮುನಿಶ್ವರರು ಸಹಿತಾಗ ಬರುತ ಭೂಪನ ಸತ್ಯಸಾಮರ್ಥ್ಯವ ||
ನಿಟ್ಟೆಯುಂ ಗುರುಭಕ್ತಿಯುಂ ಶಿವಾರ್ಚನೆಯು ಮಸ |
ಮುಟ್ಟ ದೇಶಂಗಳಂ ಪಾಲಿಸುವುದನು ಕಿವಿ |
ಗೊಟ್ಟುಕೇಳಲು ಕೌಶಿಕಂಗೆ ಹೇೞಿದರು ಭೂಪನ ಗುಣಾವಳಿಯನಂದು ||

ಬಂದೆರಡು ಹಳ್ಳಿ ಹಿರಿಯೂರ ಮನ್ನಣೆಯು ಜನ |
ವೆಂದಿಲ್ಲ ವನಧಿಪರ್ಯಂತ ವಸುಧೆಯು ವಿಪ್ರ |
ಬೃಂದ ಮೊದಲಾದಷ್ಟಾದಶಪ್ರಜೆಯು ಸಂಕುಳಂ ಕಡೆಯೆನಲು ಸರ್ವರ ||
ಕುಂದೆಡರು ಬಡತನ ವಿರೋಧವಪಕೀರ್ತಿಗಳ |
ನೊಂದುವಂ ಕೇಳನೆಂದೆಂಬ ಬಿರುದಿನ ಹಾಹೆ |
ಪೊಂದೊಡರೊಳಿಪ್ಪುದಾಭೂಭುಜಂಗೆಂಬಾಗಳೇನಱಿಕೆಯಾಯ್ತಂವಸು ||೧೦||

ಕರ್ಪುರವನುರುಹಿ ಕಿಚ್ಚಂ ಕಾವನಂತೆ ಮಣಿ |
ದರ್ಪಣವನೊಡಗುಟ್ಟಿ ಹಲ್ಲಿಯುಂ ಮಾೞ್ಪಂತೆ |
ಕೂರ್ಪ ತಾಯುಂ ಮಾಱಿ ತೊತ್ತ ಕೊಂಬಂತೆ ಕೀಲಿಂಗೆ ದೇಗುಲವನಱಿವ ||
ದರ್ಪದಂತಖಿಳಧರಣಿಗೆ ಕಲ್ಪವೃಕ್ಷವನೆ |
ತೋರ್ಪ ಹರಿಶ್ಚಂದ್ರರಾಯನುನ್ನತಿಯನಱಿ |
ವಾರ್ಪುಳ್ಳದೊಂದು ದುರ್ಬುದ್ಧಿಯುಂ ನೆನೆದನಾಸರ್ವಗುಣಸಂಪನ್ನನು ||೧೧||

ಮುಳಿದು ಮೃಗಸಂಕುಳಂಗಳನು ಹುಟ್ಟಿಸಿ ನಾಡ |
ಬೆಳೆಗಳಂ ಕಿಡಿಸಿ ಕೇಡಿಂಗೆ ಬೆಂಡಾಗಿ ಜನ |
ವಳವಱಿದು ಮೊರೆಯಿಟ್ಟು ದೂಱಿದೊಡೆ ಕೇಳ್ದು ಸೈರಿಸಲಾಱದಾಹುಯ್ಯಲ ||
ಬಱಿವಿಡಿದು ಬೇಂಟೆಗೈತಂದು ಭೂಪಾಲಕನ |
ನೆಱತಟಂಮಾಡಿ ತೆಗೆದೆನ್ನಾಶ್ರಮಕ್ಕಯ್ದು |
ಬೞಿಕ ನೋಡುವೆನವನ ಸತ್ಯಗಿತ್ಯದ ಬಲುಹನೆಂದು ಕೌಶಿಕ ನೆನೆದನು||೧೨||

ಅನುವುಳ್ಳ ಬುದ್ಧಿಯುಂ ಕಂಡೆನೆಂದತಿ ಮೆಚ್ಚಿ |
ತನಗೆ ತಾ ತೂಪಿಱಿದುಕೊಂಡು ಕಣ್ಮುಚ್ಚುತುಂ |
ಮನದೊಳುತ್ಪತ್ತಿಮಂತ್ರದಿ ಮಂತ್ರಿಸಿದ ಜಲವನಿರದೆ ದೆಸೆದೆಸೆಗೆ ತಳಿದು ||

ವಿನಯದಿಂ ಕಣ್ದೆಱೆದು ನೋಡುತಿರೆ ಧರಣಿ ತೆ |
ಕ್ಕನೆ ತೀವಿ ನಿಂದ ನಾನಾಪಕ್ಷಿಮೃಗಕುಲಕೆ |
ಕೊನೆವೆರಲನಲುಗಿ ಚಿಟುಕಿಸುತೆ ಕೈವೀಸಿದಂ ದೇಶಮಂ ಗೋಱಿಡಿಸಲು ||
ಧರಣೀಶನಂ ಹುಸಿಕನೆನಿಸಿ ವಾಸಿಷ್ಠಮುನಿ |
ವರನಂ ವ್ರತಭ್ರಷ್ಟನಂ ಮಾಡಿದಪೆನೆಂಬ |
ಭರಕೆ ಬಲವಾದುದನುವಿಂಗೆ ತನುವಾಯ್ತು ಪ್ರಾಯಕ್ಕೆ ದಾಯಂ ಮೊಳೆತುದು ||
ನಿರುತವೆಂದುಬ್ಬುತ್ತೆ ಕೊಬ್ಬುತ್ತೆ ಕೌಶಿಕಂ |
ಹರಿದು ತನ್ನಯ ತಪೋವನದೊಳಿರುತಿರ್ಪ; ಹೊ | [ದಂದು ||
ತ್ತಱೆಯಾಯ್ತು ಮಾಗೆಯ ಮನೋಮುದ ವಸಂತಋತು ಬಹ ಕಾಲವಾದು
ಎಳಮಾವುಗಳ ಬೀಡೆ ಹೋಱೆ ಕೋಗಿಲೆಯ ಕೊರ |
ಲೊಳಗು ತೆಱಹಾಗೆ ಮಾಧವಿಗಳೆಲೆದಾಣ ಹೊ |
ಪ್ಪಳಿಸೆ ತೆಂಕಣ ದಿಶಾಭಾಗದೊಳು ಗಾಳಿ ಹೊಡಕರಿಸೆ ಮನ್ಮಥಭೂಪನು ||
ತಿಳಿದು ಬಿಲುಬತ್ತಳಿಕೆಗಳನಱಸಿ ಕೊಳಲು ಗಿಳಿ |
ಗಳು ಚಂಚುವಂ ಮಸೆಯೆ ಮಾಡಿತ್ತು ಋತುಸಂಧಿ |
ಯಳವು ಮೆಱೆಯಿತ್ತಾದಿಕಾಲವೆನಲುಱೆವ ಬಡಜಾಣರಿಗೆ ತಿಳಿಯಲರಿದು ||
ಪೊಸಮಾಗೆ ಮದವಾಱೆ ಮಾವಂಕುರಂದೋಱೆ |
ಯಸುಕೆ ತಳಿರಂ ಹೇಱೆ ಲತೆ ನನೆಗಳಂ ಬೀಱೆ |
ಕುಸುಮರಜಮಂ ತೂಱೆ ತುಂಬಿ ಸುತ್ತಂ ಪಾಱೆ ತೆಂಗಾಳಿ ತಂಪುವೀಱೆ ||
ಶಶಿಗೆ ಕಳೆಯೇಱೆ ಕೋಕಿಲರವಂ ವಿರಾಱೆ ಕಾ |
ಮಶರಂಗಳಾಱೆ ವಿರಹಿಗಳು ಬಾಯಾಱೆ ಮಾ |
ಮಸಕದಿಂ ಬಂದುದು ವಸಂತಂ ವಿಯೋಗಿಹೃತ್ಕೃಂತಂ ಸುಖಾಶಾಂತಮು||೧೬||
ಬಳಸಿದ ವಸಂತಮಂ ಕಂಡು ವನಪಾಲನಾ |
ಗಳೆ ಹರುಷದಿಂ ಹರಿದು ಹೋಗಿ ಹವಣಱಿದು ಭೂ |
ತಳಪತಿ ಹರಿಶ್ಚಂದ್ರರಾಯನಂ ಕಂಡು ನಳನಳಿಪಶೋಕೆಯ ತರುವಿನ ||
ತಳಿರ ತೊಂಗಲುಗಳನು ನವ್ಯಕುಸುಮಸ್ತಬಕ |
ಕುಳವ ಫಳಮಂಜರಿಯ ಮಾಲೆಯಂ ನೀಡಿ ಕುಸಿ |
ದಿಱುಹಿದಂ ನಿಜಲಲಾಟವನು ತೊಳತೊಳಗಿರ್ಪ ರಾಜನಡಿದಾವರೆಯೊಳು

ಎಳೆಲತೆಯ ಲಾವಣ್ಯಲಹರಿ ಮಾವುಗಳ ಮಂ |
ಗಳದ ಮನೆ ಕೋಗಿಲೆಯ ಕೊರಲ ಪುಣ್ಯಂ ತುಂಬಿ |
ಗಳ ನಾಸಿಕದ ಸಲಿವು ನವಿಲ ನವನಾಟ್ಯರಂಗಂ ಜನದ ಸುಖದ ಸುಗ್ಗಿ ||
ಗಿಳಿವಿಂಡುಗಳಗೆಸೆವ ಸಾಮ್ರಾಜ್ಯ ಹಿಮಕರನ |
ತಳಿತ ಬೆಳಗಿನ ಬೆಂಬಲಂ ರತೀಶ್ವರನ ಭುಜ |
ಬಲವೀರಶ್ರೀಯೆನಿಸಿ ಬಂದುದು ವಸಂತವವನೀಶ ಚೈತ್ರೈಸೆಂದನು|| ||೧೮||
ಎಂದು ವನಪಾಲನಾಡಿದ ಮಾತ ಕೇಳಿ ನಲ |
ವಿಂದ ಭೂನಾಥನಾಡಿದ ಚಂದ್ರಮತಿದೇವಿ |
ಗಿಂದೆಮ್ಮ ಸುಖದ ಸುಗ್ಗಿಯ ಕಾಲವಿಂದು ನಾಂ ವನವಿನೋದಕ್ರೀಡೆಯ ||
ಬಂದು ತಿಂಗಳು ಸವಿದು ಬಹೆವು ನಡೆ ಕರೆಯಲಿವ |
ಬಂದನೆಲವ್ರೋ ಹೇೞು ಹೇೞಿಸಲು ಭಯದೊದವಿ |
ನಿಂದ ಕೈಮುಗಿದು ಸಾಷ್ಟಾಂಗವೆಱಗುತ್ತ ಬಿನ್ನವಿಸಿದನು ವಿನಯದಿಂದ ||೧೯||
ಇನನ ಬರವಂ ಬಯಸುವಬುಜಬನದಂತೆ ನಂ |
ದನವನಂ ನಿಮ್ಮ ಬರವಂ ಬಯಸುತಿದೆ ಸಕಲ |
ಜನವನೊಡಗೊಂಡು ಬಂದೊಂದು ಮಾಸಂಬರಂ ಸಕಲಸುಖಸಾಮ್ರಾಜ್ಯವ||
ಅನುಭವಿಸಬೇಕು ಸಂತೋಷದಿಂದರಸ ಕೇ |
ಳೆನೆ ಪಟ್ಟದರಸಿ ಸುತ ಮಂತ್ರಿ ನಿಜಜನವೆರಸಿ | [ದಂಡನು ||೨೦||
ಮನಪ್ರೊಲಿದು ನಡೆವನಾಹಾ! ಭಾಪು! ಭೂಪರೂಪಿನ ಕುಸುಮಕೋ
ಹೊಡೆದುವೈದಾಱೇೞು ಕೋಟಿ ನಿಸ್ಸಾಳಂಗ |
ಳಡಸಿ ತಱುಗಿದುವು ತಂಬಟದ ಸೂೞಿನ ಲಗ್ಗೆ |
ಯೆಡೆವಿಡದೆ ಚೀರಿದುವು ಕೋಟಿ ಹೆಗ್ಗಾಳೆಗಳು ಚಿನ್ನತಿತ್ತಿರಿ ಬೊಂಬುಳಿ ||
ಬಡಿಸಿಕೊಂಡುವು ಧಣಂಧಣವೆನಿಪ ಮದ್ದಳೆಯ |
ಸಡಗರದ ಸಂಭ್ರಮದೊಳುಲಿವ ಜಯಘಂಟೆ ಬಂ |
ದೊಡಗಲಸಿಯೊರಲುತಿರ್ದುವು ವೈರಿಕುಂಜರವ್ಯಾಘ್ರಪನ ಕಟ್ಟೆದರೊಳು ||
ಕಡಿತಲೆಯ ಕರಿಯ ಹರಿಗೆಯ ತುಳುವ ಪಡೆ ಕೂಡಿ |
ನಡೆಗೊಂಡಿತೇೞು ನಿರ್ಬುದ ಕಠಾರಿಯ ಖಜ್ಜ |
ವಿಡಿದಕಾಲಾಳು ಮೂವತ್ತೆರಡು ಖರ್ವ ಜೋಂಕಣಿಸುವರು ನೂಱುಕೋಟಿ||

ಎಡೆವಿಡದೆ ಬಿಲ್ಲ ವೋಹರಿಸಿತ್ರೈಪದ್ಮ ಹುಲು |
ವಡೆಯು ಲೆಕ್ಕಿಸಲು ಬಾರದು ಹರಿಶ್ಚಂದ್ರ ನಿಂ |
ದೊಡೆ ನಿಲುವ ಮಂಡಿಸಿದರೊಡನೆ ಮಂಡಿಸುವ ರಾವುತರೆಯ್ದೆ ಬಱಿಸಂದರು ||
ಹರಿಣನಂ ಹಱಿವ ಮಾರುತನನಣಕಿಸುವ ಹರಿ |
ಶರವನೇಱಿಸುವ ಕಣ್ಮನವ ಮೀಱುತಿರ್ಪ |
ಭರವೆಂತುಟೆನಲು ರವಿಮಂಡಲವನುಗಿದು ಚಂದ್ರನ ಮೀಱಿದಿರವೆನಲ್ಕೆ ||
ಶರಧಿಯೋಱಂ ಕಳಿದು ಮಂದರವನಡರಿ ಭೂ |
ವರಸ ಮುಂದಾಡುತಿಹ ಪೇರಣದಲೆಂಬ ಸಂ |
ವರಣೆಗುಂಟಾದ ವಾಜಿಗಳೆಯ್ದೆ ಚಾರಿವರಿದಾಡಿದುವು ಶತಕೋಟಿಯು ||೨೩
ಗಿರಿಯು ನೀಡಿಱಿವ ದಿಕ್ಕರಿಗಳಂ ಜಱಿವ ದೇ |
ವರ ಪತಿಯು ಗಜದ ಕೋಡಂ ಮುಱಿವ ಪೌರುಷದ |
ಕರಿಘಟೆಗಳೆಂಟು ಕೋಟಿಯು ಮೇಲೆ ಮೂವತ್ತೆರಡು ಲಕ್ಷವೇಱಿಬರಲು ||
ಧರೆಯೆದ್ದುದಾನೆಯಡಿಯಿಡಲು ವಾಸುಕಿ ತನ್ನ |
ಶಿರಕೆ ಸಿವುಡಂ ಕೊಟ್ಟನಿಂತೀಮಹಾಹಸ್ತಿ |
ಬರುತಿರ್ದುದರಸ ವನಕಾಗಿ ನಡೆಯಲು ರಥದ ಸಡಗರವನೇನೆಂಬೆನು ||೨೪
ಇನಕುಲನ ತೇರ ನಿಕ್ಕರಿಸಿ ಬೆಂಬಱಿವಿಡಿದು |
ಬನಕೆ ಬರುತಿಹ ರಥದ ಮಾಲೆ ಕ್ಷೀರಾಬ್ಧಿಯೊಳ |
ಗನುಪಮದಲೊದವಿನೊಱೆಗಟ್ಟಿ ತೆರೆತೆರೆಮಸಗಿಬಿಳಿದೆರೆಯ ಹಿಂಡುಗೊಂಡು
ಮನವೇಗದಲ್ಲಿ ಗತಿಯಿಡುವಂತೆ ಬಲವೆಂಬ |
ವನಧಿಯು ನಡುವೆ ತೆರಳಿ ನಡೆಗೊಂಡಸವನೀಶ |
ನನಿಮಿಷರು ನೋಡಿ ತಲೆದೂಗಲುದ್ಯಾನವನಕೆಯ್ದಿದನದೇಂ ಪೊಗೞ್ವೆನು ||
ಅರಸಿ ಮೃಗಧರಮತಿಯು ದಂಡಿಗೆಯನಿಕ್ಕೆಲದಿ |
ಬರುತಿರ್ದುದೆಂಟು ಸಾವಿರದಂದಣಂ ಕೂಡೆ |
ಚರಣಗತಿಯಲಿ ಬರ್ಪರಾಸರೋಜಾನನೆಯರೊಂಬತ್ತು ಕೋಟಿ ಬರಲು ||
ಅರಲ ಬಾಣಂ ಹೊಲಬುಗಿಡುವ ಕಾನನವೊ ಹಿಮ |
ಕರನ ಮನಗೊಲಿದು ದಾಱಿಯನಿಡುವ ದಳದುಳವೊ |
ವರತಪೋಧನರ ನಿಷ್ಕಾಮನಿಧಿಯಂ ಕಳುವ ಚೋರರೆನಲ್ಕೈತಂದರು ||೨೬||

ಹಡಪದನುಲಿಪನದ ಕುಸುಮಮಾಲೆಗಳ ಕ |
ನ್ನಡಿಯು ಸಿರಿಮುಡಿಯು ಪಡಿಸಣದ ಹಂತಿಯು ಹಲವು |
ತುಡಿಗೆಗಳ ಚಾಮರದ ಸೀಗುರಿಯು ಚದುರೆಯರು ಹಾಡುವಾಡುವ ನಗಿಸುವ ||
ನುಡಿವ ಗಿಳಿಯೋದಿಸುವ ಹಂಸಮಿಥುನಂಗಳಂ |
ನಡೆಯಿಸುವ ನವಿಲ್ಗಳಂ ಕುಣಿಯಿಸುವ ಚದುರೆಯರ |
ನಡುವೆಯಾಚಂದ್ರಮತಿ ರಾಜಿಸಿದಳಮಮ ! ಕಾಮನ ಕೈಯ ಸರಳಿಸಂತೆ ||
ಕಂಗಳ ಬಱಂ ತೀರಿ ಹೋಯ್ತು ನಾರಿಯರ ಬಸಿ |
ತಾಂಗವಂ ಕಂಡು ಗಂಡದ ಸುಗಂಧಕ್ಕೆ ಘ್ರಾ |
ಣಂಗಳಱಿತಂ ತೀರ್ದುದವರೊಡನೆ ನುಡಿವ ಜೀವರ ಜಿಹ್ವೆ ಸುಖಿಯಾದುದು ||
ಹೆಂಗಳೊಡನಾಡಿ ಪಾಡುವ ರವವ ಕೇಳಿ ಕ |
ರ್ಣಂಗಳರ್ಥಂ ತೀರಿತಂತಾವಿಳಾಸದಿಂ |
ಮಂಗಲಮಹೋತ್ಸಾಹದಿಂ ಚಂದ್ರಮತಿ ಬಂದು ನಂದನವ ಹುಗುವಾಗಳು ||
ಬಲವೆತ್ತ ಮದನನರಮನೆ ವಸಂತನ ಬೀಡು |
ಯೆಳಲತೆಗಳಿಕ್ಕೆ ನಾನಾಭೂಜದಾಗರಂ |
ತಳಿರ ತಾಣಂ ಕುಸುಮಕುಲದ ನೆಲೆ ಫಲನಿಲಯ ಕೋಕಿಲಂಗಳ ಚಾವಡಿ ||
ಅಳಿಗಳಾಡುಂಬೊಲಂ ಗಿಳಿಗಳೋದುವ ಮಠಂ |
ಮಳಯಾನಿಳನ ಜನ್ಮಭೂಮಿ ಪುಳಿನಾಕೀರ್ಣ |
ಕೊಳನ ಹರವರಿ ನವಿಲ ನಂದನವೆನಿಪ್ಪ ಕೇಳೀವನಕ್ಕೆಯ್ತಂದಸು ||೨೯||
ವಿರಹಿಗಳ ಚಿತ್ತಮಂ ಸೀಳ್ವ ಕಾಮನ ಕೈಯ್ಯ |
ಕರಗಸವ ಕಕ್ಕುಗಳೊ ಕಂತು ಹೊಡೆದೊಡೆ ಮುನೀ |
ಶ್ವರಕರಿನಮನಕಾಂತು ದಾರೆಗಳು ಮುಱಿದಲಗುಗಳ ಮುಕ್ಕುಗಳಬಳಗವೊ
ಪರಿಮಳದ ಮುಳುವೇಲಿಯೋ ಎನಿಸಿ ಕಂಟಕೋ |
ತ್ಕರಭರಿತಕೇತಕಿಗಳೊಪ್ಪಿದುವು ಹೊಱಗೆ ಕಂ |
ಕರವಿರೋಧಿಯನು ನಡುವಿರಿಸಲಣ್ಮದೆ ಬನಂ ಪೊಱಮಡಿಸಿತೆಂಬಂತಿರೆ ||೩೦
ಸಂಗ ಮಗುಚುವೆನೆಂದು ಭೂಮಿ ಕೈನೀಡಿ ಮೇ |
ಘಂಗಳಿಗೆ ಕುಡುವಮೃತಕಲಶಸಂಕುಳವೊ ಗಗ |
ನಾಂಗಣದೊಳುಱೆ ಸುೞಿವ ವಿದ್ಯಾಧರಾಳಿಗೆ ವಸಂತನಿಟ್ಟಱವಟಿಗೆಯೋ ||

ಇಂಗಡಲ ಬಿಡದೆ ಕಡೆವಂದು ಹುಟ್ಟಿದ ಪದಾ |
ರ್ಥಂಗಳಂ ತನುತನುಗೆ ಕೊಂಡುಯ್ಯುತಿರೆ ಭೂಲ |
ತಾಂಗಿ ತೆಗೆದೆತ್ತಿಟ್ಟ ರಸಕಳಶವೋ ಎನಿಸಿ ಪಣ್ತು ಜೆಂದೆಂಗೆಸೆದುವು ||೨೧||

ಬಲವದಂಗಜನೆಂಬನೆನಿತರವನೆಂದು ವೆ |
ಗ್ಗಳಸುವ ಜಿತೇಂದ್ರಿಯರು ನಿಷ್ಕಾಮಿಗಳು ವ್ರತಿಗ |
ಳೊಳಗಾದವರು ಕುಸುಮಬಾಣದಂಡಲೆಯೊಳಳವಱೆವಂತೆ ಮಾಱ್ಪವೆಂದು ||
ಬಳಸಿ ಗುಂಡಿಗೆಗಳಡಸಿದ ಮಾಲೆ ರುದ್ರಾಕ್ಷೆ |
ಗಳ ಮಾಲೆ ಚಕ್ರಚೀತ್ಕೃತಿ ಮದನಮಂತ್ರವೆನೆ |
ತಿಳಿದು ವನದೇವಿಯರು ಜಪವನೆಸಪೆ ಮಾಣರೆನಿಸೆ ಱಾಟಳ ಮೆಱೆದುವು ||

ಜನದ ಪಂಚೇಂದ್ರಿಯಕೆ ಸೊಗಿಸುವ ಮಾವತುಳ |
ವನಿತೆಯರ ಸಲಹಿದೆಳಲತೆಗಳಂ ವಂದ್ಯರೆಂ |
ದೆನಿಪ ಪಾರಣವದನ ವಾಣಿಗಳು ಪರಸಿ ಮುತ್ತಿನ ಸೇಸೆಯಿಟ್ಟರೆನಿಪ ||
ನನೆಯು ಮಲ್ಲಿಗೆ ಮನೋರಾಗಮಯರೊಲಿದು ನೆ |
ಟ್ಟನೆ ಹೊಱೆವ ದಾಡಿಮಂ ವಸುಮತಿಯೆನಿಪ್ಪ ಕಾ |
ಮಿನಿಯ ಬಲಗೊಂಡ ಸಂಪಗೆಗಳೊಪ್ಪಂಬೆತ್ತು ಮೆಱೆದುವಂತಾವನದೊಳು ||

ಹೃದಯದೆ ಕಲಂಕಿಲ್ಲದೋರಂತೆ ಸಾರನು |
ಟ್ಟುದಕಮಂ ಕುಡಿಕುಡಿದು ಮಱೆಗಾಳಬಿಸಿಲಿಗ |
ಳ್ಕದೆವನದೊಳೊಂದೆಡೆಯೊಳಿರ್ದು ಕೊಂಬಾಸೆಯಿಲ್ಲದೆ ನೆಲಕೆ ಹೊಱೆಯಾಗದೆ |
ಬದುಕಿ ತಲೆವಾಗಿ ಬೆಳೆದೊಂದೆಡೆಯೊಳಿರ್ದ ನಾ |
ನುದಿತರಸಫಲವನಾಂತರ ಕೆಯ್ಯಮೇಲೆ ತಾ |
ಳಿದೆನೆನ್ನನೋಡಿ ಮುನಿಕುಲವೆಂದು ಬುದ್ಧಿವೇೞ್ವಂತೆ ಕದಳಿಗಳೆಸೆದುವು ||೨೪

ಕಂಕಣವ ತರತರದಿ ನತಜನಕೆ ಸುರತರುವ |
ನಂ ಕುಡುವವೊಲು ಹರಪದಾಬ್ಜವನು ಭಜಿಪರ |
ರ್ಥಂ ಕಿಡದೆ ಸೋಪಾನವೇಱಿ ಕೈಲಾಸದೊಳು ಸಾಮೀಪ್ಯಪದವ ಪಡೆದು ||
ಭೋಂಕೆನಲು ತ್ರೈಮೂರ್ತಿಗಳೊಳಜನ ಸೃಷ್ಟಿಗುಣ |
ಮಂ ಕೊಂಡು ದೇವಾಧಿದೇವತತಿಸಹಿತ ನಿ |
ಷ್ಪಂಕಿಸಲುಧರೆಗೆವೋಗಸಿರಿಯೆನಿಸಿಮೆಱೆದುವಾಕ್ರಮುಕವೃಕ್ಷಂಗಳೊಲಿದು ||

ಮರುಗ ಘೊನೆಸನೆದೋಱಿ ಸುರಗಿ ಜಾಜಿಯು ನನೆಗ |
ಳರಳಿ ಪರಿಮಳದಲೆಸೆಯಲ್ಕೆ ಮುಡಿವಾಳ ತಾ |
ಭರವಶದಿ ಸುತ್ತ ಚೆಲುವಿಂದಲುಂ ಪರಿವಿಡಿಯೆ ಕಱಿಯೆ ಮಲ್ಲಿಗೆಯರಳಿನಾ||
ನಿರುತ ನಿಜವಾಹಿಸಿಗೆ ತವರುಮನೆಯೆಂಬಂವ |
ದರಿದೆನಿಸುವಮರಾಸುರಾಳಿಗಳ ಮೋಹರದ |
ಕರಿಮಕರನಕ್ರಾಳಿ ಪುಷ್ಪಭರಿತದೊಳೆಯ್ದೆ ಜಲವು ತಿಂತಿಣಿಗೆಯ್ದುದು||೩೬||

ಸೋಕೆ ಸ್ಯರಿಸಿ ಮರಳಿ ನೂಕಿ ನೀರ್ಪಯ್ದಂತೆ |
ಯಾಕರಣೆಯಿಂ ಬೆಳೆದ ಪೂವಾಱಿ ಕಮಳವ್ರೊಂ ||
ದಾಕು ಬಿರಿದಳಿಗಳಿಗೆ ಪಾಕಮೆಯ್ದುವ ತೆಜದಿ ಪುಷ್ಪಂಗಳಿರೆ ಪೊರೆಯಲಿ ||
ಸಾಕು ಸಾಕವಱಿಡೆಯು ಕುರವಕಂ ಚಂದನದ |
ಲೋಕಲೋಕಾಕ್ಷರದುರುತ್ತಗೆಯು ಹೇಳಿಗೆಯು |
ನೀಕರಿಸಿ ಸುರಹೊನ್ನೆ ಹರುಷದಿಂ ಹೆಚ್ಚಿ ಪದಭರಿತಭಾವನೆಯೆಸೆದುದು ||

ಮಡಲಿಱಿದು ಹಬ್ಬಿ ಹರಕಲಿಸಿ ನೆಳೆದೆಳಲತೆಗ |
ಳಿಡುಕುಱೊಳು ತಳಿತು ಕೆದಱಿದ ಹೊದಱುಗೊನೆಗೊಂಬು |
ವಿಡಿದ ಭೂಜಂಗಳಿಂ ತುಱುಗಿಯೊಲೆದೊಲೆದು ತೂಗುವ ತಮಾಲಂಗಳಿಂದ||
ಜಡಿದು ಹೊಡೆಯೊತ್ತಿನೊಳು ತೂಗಿ ಬಾಗುವ ಸೋಗೆ |
ಯೆಡೆಗೆಡೆಗಿಡಿದ ತೆಂಗು ಕೌಂಗಿನೊತ್ತೊತ್ತಿಯಿಂ |
ಪೊಡಕರಿಸಿ ಬೆಳೆದ ಕಱ್ತಲೆವೆಳಗ ಕನಸಿನೊಳು ಕಾಣೆನೆನಲೇವೊಗಱ್ವಿನು||

ಮಿಸುಪಂಕುರಂ ಕೊನರು ಕೆಂದಳಿರು ಪಲ್ಲವಂ |
ಪಸುರೆಲೆ ಕನಮುರ್ಗುಳು ನನೆಮೊಗ್ಗೆ ಕುಸುಮ ಬಿಡ |
ದೆಸೆವ ಮಿಡಿಗಾಯಿ ಹವಗಾಯಿ ಬಲುದೋರೆವಣ್ಣಿಂಬುಗಿಡದೊಱಗುತಿರ್ಪ||
ಹೊಸಮಾವು ಜಂಬು ನಿಂಬಂ ಮಾತುಳುಂಗ ಬಿಂ |
ಬಿಸುವ ನಾರಂಗ ದಾಡಿಮ ಪೂಗ ಪುನ್ನಾಗ |
ವೆಸೆವಿಱಿ ಕಿತ್ತಿಱಿ ಹಲಸು ಮಾದಲದಿಂದಲಾವನಂ ಕಣ್ಗೆಸೆದುದು ||೩೯||

ಹೊಸಬನದೊಳಿರ್ಪಬಲೆಯುರ ತುಡಿಗೆವೆಳಗು ಹೊಂ |
ಬಿಸಿಲಂತಿರಲ್ ಕಂಡು ಕಮಲವರಳುವುವವರ |
ನಸುನಗೆಯು ಬೆಳಗು ಬೆಳ್ದಿಂಗಳಂತಿರೆ ಕಂಡು ಕುಮುದವರಳುವುವಲ್ಲದೆ||

ಶಶಿರವಿಗಳಾಟವಾಬನದೊಳಗೆ ಹುಗದು ನಿ |
ಟ್ಟಿಸಲು ರವಿ ಕಾಣದುದ ಕವಿ ಕಂಡನೆಂಬ ನುಡಿ |
ಹುಸಿಯಲ್ಲ ಸುಕವಿ ಹಂಪೆಯ ರಾಘವಾಂಕನದಱಳವ ಬಣ್ಣಿಸಿದನಾಗಿ||೪೦||
ಗಿಳಿಗಳೋದುಗ್ಗಡಣೆ ಕೋಕಿಲರವಂ ಕಹಳೆ |
ಪಳವಿಡಿದ ಪಲಸು ಮದ್ದಳೆಯು ಮೊರೆವಳಿಕುಳಂ |
ಬಳಸಿತಾರಯಿಪಚಿಹಣಿಯರು ನೆಲಕಿಱಿವಶೋಕೆಯತಳಿರು ಹೊಸಜವನಿಕೆ||
ಬೆಳುಮುಸುಕು ಕುಸುಮಲತೆ ಸತಿಯರೆಲೆಯುಲುಹುಗಳು |
ತಳವ ಕಂಸಾಳೆ ಮರಪೊಲೆಪು ತಳೆದೊಂಕು ನೆಱೆ |
ಕಳಿತ ಹಣ್ಣೆಲೆ ಹೆಚ್ಚೆನಲು ನವಿಲು ನರ್ತನಂಗೆಯ್ದುವಂತಾಸದೊಳು ||೪೧||
ಗಿಳಿಗಳರಗಿಳಿ ನವಿಲು ಸೋಗೆನವಿಲಾಕೊಳಂ |
ತಿಳಿಗೊಳಂ ತುಂಬಿ ಮಱಿದುಂಬಿ ಮಾವಿಮ್ಮಾವು |
ಪುಳಿನ ಶೀತಳಪುಳಿನ ತೆಂಗು ಚೆಂದೆಂಗು ಕೇದಗೆಯೆಲ್ಲ ಪೊಂಗೇದಗೆ ||
ಸುಱಿವೆಲರು ತೆಂಬೆಲರು ಕೋಕಿಲಂ ಮತ್ತಕೋ |
ಕಿಲ ಪಲಸು ಚಕ್ಕವಲಸೀಱೆ ಕಿತ್ತೀಱೆಯು |
ತ್ಪಳವೆಲ್ಲ ನೀಲೋತ್ಪಲಂ ಹಂಸೆ ರಾಜಹಂಸೆಯೆನೆ ಮೆಱೆದುವು ವನದಲಿ ||
ಶ್ರೀವಧೂರಮಣಾ ಹರಿಶ್ಚಂದ್ರಭೂಪಾಲ |
ನಾವಸಂ ಕಣ್ಗೆ ಸೊಗಯಿಸೆ ಕಂಡು ಹಾರೈಸಿ |
ನಾವಿಲ್ಲಿಯೊಂದು ತಿಂಗಳುವರಂ ವನಜಲಕ್ರೀಡೆಯುಂ ಮಾಳ್ಪೆವೆಂದು ||
ಹಾವಭಾವವಿಲಾಸವಿಭ್ರಮವಿಲಾಸಿನಿಯ |
ರಾವಿಟವಿದೂಷಕಂ ನಾಗರಿಕಪೀಠಮ |
ರ್ದಾವಳಿಯನಂದು ಜೇಕೊರ್ಱಿವಿ ತಿಱಿಚೆಗಳೊಡನೆ ಬರಿಸಿದಂ ಹರ್ಷದಿಂದ||
ವನಲಕ್ಷ್ಮಿ ತನ್ನ ವನದೇವಿಯರುಸಹಿತ ಭೂ |
ಪನಸಿದಿರ್ಗೊಂಡು ಚರಣಕ್ಕೆಱಗಿ ಕೈಗೊಟ್ಟು |
ವಿನಯದಿಂ ಕ್ಷೇಮಕುಶಲವನಾಡಿ ಕಾಲ್ಗೆಱೆದು ಮಂಗಳಾಸನವನಿಕ್ಕಿ ||
ವಿನುತ ಪಣ್ಪಳನಿಕರಮಂ ಕೊಟ್ಟು ಹರ್ಷಸಂ |
ಜನಿತಸಂಭ್ರಮದೊಳುಪಚರಿಸಿದಪಳೆನಿಸಿ ನಂ |
ದನವಸಂ ಕಣ್ಗೆಸೆದುದಬುಜಸಂಭವಕುಲಜನೊಳಪುಗುವಾಗಲೇವೊಗಳ್ವೆನು ||

ಈವನಂ ಸತಿಯರಿಂ ನೋವನಂ ವಿರಹದಿಂ |
ಬೇವನಂ ಕಾಮದಿಂ ಸಾವನಂ ಶೈತ್ಯಸ |
ದ್ಭಾವನಂ ಸಂತೈಸುವಾವನಂ ಸುಖವನೊಸೆದೀವನಂ ನಗುವುದೊಲಿದು ||
ಈವನಂ ಶುಕಪಿಕದ ಜೀವನಂ ಪಥಿಕಜನ |
ಪಾವನಂ ಸೌಖ್ಯಸಂಜೀವನವೆನುತ್ತ ಮು |
ತ್ತಾವನವನಾನೃಪಂ ಕೊಂಡಾಡುತೆಯ್ತರುತಿರಲಿದಿರಲೇಂ ಪೊಗೞ್ವಿನು ||
ಎಸೆವ ಲತೆಗಳು ಸತಿಯರಾಕುಸುಮವಿಸರ ಹೊಸ |
ಮುಸುಕು ಫಳತತಿ ಕಲಶವೆಳದಳಿರ್ ಕನ್ನಡಿಗ |
ಳಸಿಯಮರಝಲ್ಲರಿಗಳುಲಿವ ಗಿಳಿಗಳ ದನಿಗಳಬ್ಬರಮೆ ಡಿಂಡಿಮರವ ||
ಮಿಸುಪ ಸನೆ ನೆನೆಯಕ್ಕಿ ಕೋಕಿಲರವಂ ಕಹಳೆ |
ಮಸಗುವಳಿಗಳು ಗೀತವೆನಲಿದಿರ್ಗೊಂಡರಂ |
ದೊಸೆದು ವನದೇವತೆಯುರುಚಿತೋಪಚಾರದಿಂ ನೃಪರೂಪಮಸಿಜನನು ||
ಎಳೆಯ ಪಳಿಕಿನ ಶಿಲೆಯೊಳಡಸಿ ಕಟ್ಟಿದ ಕಟ್ಟೆ |
ಗಳಲಿ ದಂಡಾವಳಿಯ ಸೊಸಕದ ಪತ್ರತತಿ |
ಗಳೊಳೋರಣಂಗೊಳಿಸಿ ಕೇವಣಿಸಿದಮಳರತ್ನಂಗಳೊಯ್ಯಾರದ ||
ತಳದೊಳೋವದೆ ಸುರಿದ ಕಿಱುಮುತ್ತುಗಳ ಮಱಲು |
ಗಳ ತುಂಬಿ ತುಱುಕಾಡುವತುಲನಿರ್ಮಲಜಲಂ |
ಗಳ ಮೇಲೆ ಬೆಳೆದ ನಾನಾಕಮಲಕೈರವದಲೆಸೆವವಲ್ಲಿಯ ಕೊಳಗಳು ||
ಬಸವೞಿದ ನೆಯ್ದಿಲಂ ಕಂಡು ನಗುವಂತರಳ್ವ |
ಹೊಸಕಮಳಕುಟ್ಮಲದ ಕರ್ಣಿಕೆಯ ಕೆಲದ ಕಿಱು |
ಯೆಸಳಿಡುಕುಱಂಬಗಿದು ಕೇಸರದ ಕುತ್ತುಱೊಳು ನಸುಳಿನುಸುಳಿಪರಾಗದ
ಮಿಸುಪ ರಜದೊಳು ಹೊರೞ್ ಬಳೆದ ಬಂಡೊಂಬ ಕೊ |
ೞ್ಗೆಸಱೊಳು ಸಿಲ್ಕಿ ಜಿನುಗುವ ಮಱಗೆ ಸೌರಭ್ಯ |
ರಸದಕುಟುಕಿತ್ತು ಸಾಗಿಸುವ ಬಾಣತಿದುಂಬಿ ಮೊೞ್ದುವಂತಾಕೊಳದೊಳು ||
ಎಸೆವ ವಿಷವುಂಟಾಗಿಯುಂ ವಿಷವು ತಾನಲ್ಲ |
ಹೊಸಕಮಲವುಂಟಾಗಿಯುಂ ಕಮಲವಿಲ್ಲ ನಿ |
ಟ್ಟಿಸೆ ಕುಮುದವುಂಟಾಗಿಯುಂಕುಮುದವಿಲ್ಲಲ್ಲಿ ಪ್ರತಿಕೂಲವುಂಟಾಗಿಯುಂ ||

ಹೆಸರಿಡಲು ಪ್ರತಿಕೂಲವಿಲ್ಲಲ್ಲಿ ಕಡೆಗೆ ಸೋ |
ದಿಸೆ ವಿಜಾತಿಗಳುಂಟೆನಿಸಿ ವಿಜಾತಿಗಳಿಲ್ಲ |
ವಸುಧೆಗೆ ವಿಚಿತ್ರವೆಂದೊಡೆರಡುಗಳಿಗೆ ನೋಡಿದ ಕೊಳನನಾಭೂಪನು॥೪೯
ಬಿಸಕಂದದಂತೆ ತೋರ್ಪತಿವೃತ್ತದಿಂ ಪೂರ್ಣ |
ರಸಭಾವದಿಂದಲಂಕಾರದಿಂ ಸೋಪಾನ |
ವಿಸರದೊಳು ಕೇವಣಂಗೊಳಿಸಿದ ಪದಾರ್ಥದಿಂ ಕೇಳ್ದು ನೋಡಿದರಮನಕೆ॥
ಎಸೆವ ಪ್ರಸನ್ನಗಂಭೀರದಿಂ ನಲಿನಲಿದು |
ದೆಸೆದೆಸೆಗಳಿಂ ಬಂದು ಪದವಿಡುವ ಕವಿಗಳಿಂ |
ವಸುಧೆಗೆ ಮಹಾಕವಿಯ ತೆಱದೊಳಂತಲ್ಲಿಯ ಸರೋವರಂ ಕಣ್ಗೆಸೆದುದು ॥
ಸಂದ ಶೈತ್ಯೋದಕಂಬೊಕ್ಕು ಸಿತಕಮಳರಜ |
ದಿಂದ ಕಾಲುದ್ಧೂಳನಂಗೆಯ್ದು ಷಟ್ಚರಣ |
ವೃಂದವಮಾಲೆಗಳ ರುದ್ರಾಕ್ಷಿಯುಂ ಧರಿಸಿ ಹೊಸಕೆಂದಳಿರ ಕಾಸೆಯುಟ್ಟು ॥
ಇಂದುಧರನಿಂದೞಿದ ಕಾಮನಂ ನೋಡಿ ಸುಡ |
ಲೆಂದು ಸಂಸಾರವಂ ಬಿಟ್ಟು ವನದೊಳು ಬಿಡದೆ |
ಮಂದಾನಿಲಂ ಶಿವವ್ರತಿಯಾದನೆಂಬಂತೆಯೊಲೆಯುತಿರ್ದುದು ಕೊಳನೊಳು ॥
ತೊಳತೊಳಗಿ ಹೊಳೆವ ತಿಳಿಗೊಳನ ತಡಿವಿಡಿದಡಸಿ |
ಫಳಭರದಿ ಜಡಿದೊಱಗುತಿರ್ಪ ನಾನಾಮರಂ |
ಗಳ ತಳದ ತಣ್ಣೆೞಲೊಳೋವಿ ನಳನಳಿಸಿ ಬೆಳೆದೆಳಲತೆಗಳಿಡುಕುಱುಗಳಾ॥
ಬೞಿಯ ತುಂಪಿನ ತಡಿಯ ತಾಣದೊಳು ಭೂಪಕುಲ |
ತಿಳಕನ ವಿನೋದವಿಭ್ರಮವಿಲಾಸಕ್ಕೆ ಮಂ |
ಗಳಮಯುವೆನಲ್ ಸವೆದ ಚೈತ್ಯಶಾಲೆಗಳನದನಾವ ಕವಿ ಬಣ್ಣಿಸುವನು ॥೫೦
ಪಳಿಕಿನ ನೆಲಂ ಮರುಗವೆಡೆನೆರಕೆಯೆಳಬಾಳ |
ದೊಳು ಬಿತ್ತಿ ಕಱಿಯ ಕಬ್ಬಿಸ ಜಂತೆ ಕೇತಕೀ |
ದಳದ ಹೊಸಹೊದಿಕೆ ಚಂದನದ ಸಾರಣೆ ಪುಷ್ಪಸರದ ಜಲ್ಲಿಯು ಕಮಳದ॥
ಎಲೆಯಾಲವಟ್ಟಮೆಳದಳಿರ ಹಸೆ ಪನ್ನೀರ |
ಚಳೆಯ ತಳಿರ್ವಾಸು ಹೊಂಬಾೞಿಗಳ ಚಮರಮು |
ತ್ಪಳದ ಮೇಲ್ಕಟ್ಟು ಮಡಿವಾಳ ಸೀಗುರಿ ಮೆಱೆದುವಾಚೈತ್ಯಶಾಲೆಯೊಳಗೆ॥

ಇದು ಮಾಗಿಯುಸು ಹೆತ್ತ ತಾಯ್ಮನೆಯೊ ಮೇಣು ತಾ |
ನಿದು ಶೀತಕರನಾಡಿ ಬಳೆದ ನಿಳಯವೊ ಮತ್ತ |
ಮಿದು ವಸಂತನ ಶಸ್ತ್ರಶಾಲೆಯೋ ಇದು ಮಲಯಮಂದಮಾರುತನ ಮ
ಇದು ಮದನನರಲಂಬು ಮಡಲಿಱಿದು ಹೊಡೆಗೆಡೆದ | [ಟವೋ ॥
ಸದನವೋ ಸಕಲಶೈತ್ಯಂಗಳಂಗಡಿಯೊ ಪೇ |
ೞಿದು ಚಿತ್ರಮೆನಲೆಸೆದುದೊಂದು ತಂಪಿನ ಶಾಲೆಯಧಿಕಶ್ರಮಾಕರ್ಷಣಂ ॥

ಆಶೈತ್ಯಶಾಲೆಯರಮನೆಯ ಬಾಗಿಲ ಮುಂದೆ |
ಭೂಸುದತಿವಲ್ಲಭ ಹರಿಶ್ಚಂದ್ರನೃಪ ರಾಣಿ |
ವಾಸ ಸುತಸಹ ರಥವನಿೞಿದನಾವನದೊಳಗೆ ಕಂಚುಕಿಗಳುಗ್ಗಡಿಸಲು ॥
ಭೂಸುರಾಯತ ತಳಿರ ತೋಣದೊಳಗಿಟ್ಟ ಸಿಂ |
ಹಾಸನದೊಳೊಡ್ಡೋಲಗಂಗೊಟ್ಟು ಕಿಱಿದು ಪೊ |
ೞ್ತುಸಭಾಸ್ಥಳದೊಳಿರ್ದೆೞ್ದು ಪೊಱಮಟ್ಟು ವನದೊಳು ವಿಹಾರಿಸಿದನಂದು ॥

ವಾಸಂತಋತುಕಾಲಸಮಯಕುಸುಮವನಾವಿ |
ಳಾಸಿನೀಜನ ತುಡಿಗೆಯುಂ ಮಾಡಿ ತಂದೊಲ್ದು |
ಭೂಸುದತಿವಲ್ಲಭಂಗೀಯಲು ಶಿವಾರ್ಪಿತಂಮಾಡಿ ಹೂದುಡಿಗೆದೊಟ್ಟು ॥
ಆಸಮಯದೊಳು ಕುಸುಮಬಾಣನಂದದಿ ವನವಿ |
ಲಾಸದಿಂ ಸಾಫಲ್ಯವೆನಿಸಿ ಮಧ್ಯಾಹ್ನದ ದಿ |
ನೇಶನುಷ್ಣಾಂಶುವಿಂದಂ ಬೞಲಿ ಜಲಕೇಳಿಗೆಳಸಿದಂ ನರನಾಥನು ॥೫೬॥

ಹೊಳೆವ ನವರತ್ನಸೋಪಾನಗಟ್ಟಂ ಮುನ್ನ |
ಲಳವಟ್ಟ ಪನ್ನೀರ ಚಂದನದ ಕೋೞ್ಗಸಱ |
ನೊಳಗೆ ರಂಜಿಪ ಕಮಳಕುಮುದಕಲ್ಹಾರಕನ್ನೆಯ್ದಿಲಾಚೆನ್ನೆಯ್ದಿಲಾ ॥
ತಿಳಿಗೊಳನ ತೆಂಬೆಲರ ತಳಿರ ಕಾವಣ ಬಾಳ |
ದೊಳುಬಿತ್ತಿಯೊಳಗೆ ಮಂಡವಿ ಕೊಪ್ಪರಿಗೆ ಖೇಡ |
ಕುಳಿಯ ನಿರ್ಮಳಜಲಂ ತುಂಬಿದಲ್ಲಿಗೆ ಬಂದನಬುಜಸಖಕುಲತಿಲಕನು ॥೫೭॥

ತೊಟ್ಟ ಹೂಮುಡಿಗೆಯನಧಃಕರಿಸಿ ಬೆಮರಿ ಪೊಱ |
ಮಟ್ಟ ಹನಿ ಹೊಸಮುತ್ತುದುಡಿಗೆ ತೊಟ್ಟಂತಿರಳ |
ನಟ್ಟ ಭಾವದ ಪೂವ ತೊಡಿಗೆಯ ವಿಲಾಸಿನಿಯರಂ ನೋಡಿಸುವನೀಶನು ॥

ಅಟ್ಟಿ ಹಿಡಿದಂಡೆಯಿಂ ಹೊಯ್ದು ತಿಱಿಚೆಯನೊತ್ತೆ ।
ಹೆಟ್ಟುಗೆಯರೆಲ್ಲ ಮೂದಲಿಸಿ ಮುಮ್ಮುಳಿಗೊಂಡು ।
ನಿಟ್ಟೋಟದಿಂದೋಡುವವನಿಪನ ತಮ್ಮಾಣೆಯಿಟ್ಟು ನಿಲಿಸಿದರಾಗಳು ॥೫೯॥
ನಳಿತೋಳ ಮೊದಲು ಹೊಗರಂ ಕಱೆಯೆ ಕಡೆಗಣ್ಣು ।
ತೊಳಪ ಮಿಂಚಂ ಕೆದಱೆ ಮೊಲೆ ಮೆಯ್ಯನೊತ್ತರಿಸೆ ।
ಸೆಳೆನಡು ಬಳುಕೆ ಬಾಸೆ ದೆಸೆದೆಸೆಗೆ ಕೊಂಕೆ ಕೈಯುಂಡೆಗಳ ತೀವಿ ನೆಗಪಿ ॥
ಮಳಯಜಂ ಸಾದು ಕತ್ತುರಿ ಕುಂಕುಮದ ಮಿಶ್ರ ।
ಜಲಮಂ ಹರಿಶ್ಚಂದ್ರಭೂಭುಜನ ಮೇಲೊರ್ವ ।
ಳಳವಿಯೊಳು ನಿಂದು ಪ್ರೊಯಿಲಿಕ್ಕವಳು ಬಂದ ಸದ್ಭಾವವನದೇವ್ರೊಗೞ್ವೆನು ॥
ಅವನೀಶ ನೀನಖಿಳರಾಣಿಯರೊಳೋಕುೞಿಯ ।
ನೆವದಿಂದ ಪೊರ್ದಿ ಸೋಂಕಿನ ಸುಖಂಬಡೆಯಲಂ ।
ತವರ ಜೇಕೊರ್ಳವಿಗಳ ದೆಸೆ ನಿಮ್ಮ ದೆಸೆಯಿಂದಲೆಸುವ ಸಮರಸವೆಯ್ದುವು ॥
ಎವಗೆಂಬ ಮಾತಿಗೊಲ್ದೋವಿ ಮೆಚ್ಚಂ ಸಲಿಸಿ ।
ಯುವತಿಯರ ಕೈವೀಸಿ ಕಮಳಾಕರಕ್ಕೆಯ್ದಿ ।
ಸವೆಯದಾನಂದದಿ ಹರಿಶ್ಚಂದ್ರನರನಾಥನಾಡಿದ ಜಲಕ್ರೀಡೆಯಾ ॥೬೦॥
ಸಂತಸುಖಮಂ ಸವಿದು ಸವಿದಶೋಕದ ತರುವಿ ।
ನಂತಸ್ತಮಂ ಕೊಂಡು ಕಂಡು ಚೈತ್ಯಾಲಯದೊ ।
ಳಂತರವ ಕೂಡೆ ವಾಸಂತಮಾಸವ ಕಳಿದನುೞಿದ ಸುಖಸಂಭ್ರಮದಲಿ ॥
ಕಂತುಮದಹರನ ಪೂಜಾಸುಖಕ್ಕೆಳಸಿ ತ ।
ನ್ನಂತಃಕರಣವೆಲ್ಲವನುವೊಂದುಗೂಡಿ ಕೊಂ ।
ಡಂತಲ್ಲಿ ಯುವತಿಯರ ಕೂಡೆ ಮನವೆಳಸಿ ಜಲಕ್ರೀಡೆಗುದ್ಯೋಗಿಸಿದನು ॥
ನಳನಳಿಸುವಂಗಸಂಕುಳಸೌಕುಮಾರ್ಯದಿಂ ।
ಕೊಳದೊಳಗೆ ಹೊಕ್ಕು ಸತಿಯರ ಕೂಡೆ ಹರ್ಷದಿಂ ।
ಜಳಜಂತ್ರದಿಂದಾಡಿ ತುೞುಕಾಡಿ ಮುೞುಗಾಡಿ ತಿರುಗಿ ಸಂತೋಷದಿಂದ ॥
ಬೞಿಲಿ ಹೊಱವಟ್ಟು ದಿವ್ಯಾಂಬರಂಗಳನುಟ್ಟು ।
ತಳದೆಳಲತೆಯ ತಳಿರ ತಂಪಿನೊಳಗಿರ್ದು ಭೂ ।
ತಳಪತಿ ಶಿವಾರ್ಚನೆಯ ಪುಷ್ಪೋಪಚಯಕೆ ಮಾನಿನಿಯರ್ಗೆ ಬೆಸವೇೞ್ದನು ॥

ಇಡವ ಹಸುರಿಡದ ಬೆಳ್ಪಿಡಿದ ಕೆಂಪಿಡದ ಕ್ರಿಮಿ |
ಯಿಡದ ಚೆಲ್ವಂ ತಳೆದ ಕುಸುಮಂಗಳೆಸಱೊಡೆದು |
ಸೆಡೆದಿರದ ಕುಡಿಮುಱುಟ ಕೆಲಹಿಂಗ್ಗದೋರಂತೆ ಬಿಸಿಲುನೆೞಲಾವರಿಸದ ||
ಅಡಿಗಳಿಂದಳಿ ತುೞಿಯದನಿಲನಲುಗದ ಮಂಜು |
ಹೊಡೆಯದೇಕಾಕಿಯಾಗಿರದನ್ಯಕುಸುಮದೊಳು |
ತೊಡರದರೆಬಿರಿವರಲನಾಯ್ದಾಯ್ದು ತಂದರಂದವನಿಪನ ಶಿವಪೂಜೆಗೆ ||೬೩||
ಬಳಸಿದಳಿಕುಳದ ಕಣ್ಗಂ ನಾಸಿಕಕ್ಕೆ ಸಂ |
ಚಳಿಪ ಸಂದೇಹಮಂ ಮಾಡುವ ಕದಂಬಪರಿ |
ಮಳವಿಡಿದ ಕೈಗಳಂ ಪುಷ್ಪಸಂತೋಷಮಂ ಕಟ್ಟಿದರು ಕಾಮಿನಿಯರು ||
ಎಳಸಿ ನಕ್ಷತ್ರಮಂ ಸಾಗಿಸುವ ಚಂದ್ರಮನ |
ಕಳೆಗಳಂತೊಪ್ಪಿ ನಾನಾಬಂಧವಿಡಿದಿಂಡೆ |
ಗಳ ರಚನೆಯಿಂದಿತ್ತರಬಲೆಯರು ಭೂಪಮುಕರಧ್ವಜನ ಶಿವಪೂಜೆಗೆ ||೬೪||
ಹೊಳೆವ ಮುತ್ತಿನ ರಂಗವಲ್ಲಿಗಳನಿಕ್ಕಿ ತಂ |
ದೆಳದಳಿರ ಹಸೆಯ ಹಾಸಿನ ಮೇಲೆ ಕುಳ್ಳಿರಿಸಿ |
ತೊಳೆದ ಹೊಂಗೊಡದೊಳಗ್ಗಣಿಗಳಂತುಂಬಿತಂದಿೞುಹಿದರು ಕಾಮಿನಿಯರು||
ಮೊಳಗಿದುವು ಪಂಚ ಮಾಸಬುದವಾದ್ಯಗಳು ಮಂ |
ಗಳರವಂಬೆತ್ತಾಡಿ ಮಾಡಿ ದೀಪಾರತಿಗ |
ಳೊಳಗೆ ಲಿಂಗಾರ್ಚನೆಯನೊಲವಿನಿಂದೋಜೆಯಿಂ ಮಾಡಿದಂ ರಾಜೇಂದ್ರನು||
ಸಂತೋಷಮಂ ಸಲಹುವಂತೆ ಭಾಗ್ಯವ ನೋನು |
ವಂತೆ ಸುಖಮಂ ಸಾಗಿಪಂತೆ ಮುಕ್ತಿಯನು ಹೊರೆ |
ವಂತೆ ಮಂಗಳವ ಮನ್ನಿಸುವಂತೆ ಪುಣ್ಯಮಂ ಪುಟವಿಕ್ಕುವಂತೆ ತಳರಾ ||
ತಿಂತಿಣಿಯ ಶೈತ್ಯಶಾಲೆಯೊಳೀಶನಂ ಶಿವನ |
ನಂತಕಾರಿಯನಭವನಂ ಚಿತ್ತದಾಸೞೆ |
ವಂತೆ ಹಸ್ತದ ಹಸಂ ಹಱವಂತೆ ಪೂಜಿಸಿದನೋಜೆಯಿಂ ರಾಜೇಂದ್ರನು||೬೬||
ಎಸೆವ ಕಾಳಾಗರು ದಶಾಂಗಮಂ ಬೀಸಿ ರಂ |
ಜಿಸುವ ರತುನಾರತಿಯನೆತ್ತಿ ಹೊಂಬರಿಯಣದೊ |
ಳೊಸೆದು ಬಡಿಸಿದ ಸುಘೃತದಿವ್ಯಾನ್ನಮಂನಿವೇದ್ಯಂಗೊಟ್ಟು ಕೈಘುಟ್ಟಿಯ ||

ರಸಭರಿತತಾಂಬೂಲಮಂ ನೀಡಿ ಕರ್ಪೂರ |
ದೆಸೆವಾರತಿಯ ನಿವಾಳಿಸುತಾಡಿ ಹಾಡಿ ಮೆ |
ಚ್ಚಿಸಿಯುಭವಗುದ್ವಾಸನವನಿತ್ತು ರವಿಗರ್ಘ್ಯವಿತ್ತು ಕೈಮುಗಿದನೆಂದು ||೬೨||

ಗಡಣವಿಡಿದೊಗ್ಗುವಿಡಿದೋರಣಂಬಿಡಿದು ತರ |
ವಿಡಿದು ಸರಿಸಂಬಿಡಿದು ಸಾಲ್ವಿಡಿದು ಪರಿಪಂತಿ |
ವಿಡಿದು ಕವಿಗಳ ಗಮಕಿಗಳ ವಾದಿಗಳ ವಾಗ್ಮಿಗಳ ಗಾಯಕಾಧೀಶರ ||
ಮಡದಿಯರ ಮನ್ನಣೆಯ ಮಾನಸರ ಮುಖ್ಯರೆನ |
ಲೆಡೆಗೊಂಡ ಸಕಲಪರಿಜನವೆರಸಿ ನಲಿದು ಸಂ |
ಗಡ ಕಲಸುಗೂೞುಂಡನಿನಕುಲಲಲಾಮ ರಿಪುವನಸರಸಿರುಹಸೋಮನು ||

ಎಳಲತೆಯೊಳೊಮ್ಮೆ ಕೃತಕಾಚಲದೊಳೊಮ್ಮೆ ಪೂ |
ಗೊಳದೆಡೆಯೊಳೊಮ್ಮೆ ಪುಳಿನಸ್ಥಳದೊಳೊಮ್ಮೆ ಕೆಂ |
ದಳಿರ ಹಸೆಗಳೊಳೊಮ್ಮೆ ಶೈತ್ಯಶಾಲೆಯೊಳೊಮ್ಮೆ ಪುಷ್ಪಾಪಚಯದೊ[ಳೊಮ್ಮೆ ||
ಜಳಕೇಳಿಗಳೊಳೊಮ್ಮೆ ಖಗವಿನೋದದೊಳೊಮ್ಮೆ |
ಫಳರುಚಿಯೊಳೊಮ್ಮೆ ವಿದ್ಯಾವಿನೋದದೊಳೊಮ್ಮೆ |
ಕಳಿಯುತುಂ ಪೊೞ್ತುನವನೀಶ್ವರಂ ವನದೊಳು ವಸಂತಸುಖಮಂ ಸವಿದನು ||

ಎಳಲತೆಯ ವನಿತೆಯರು ತಳಿವ ಪನ್ನೀರೆಸೆವ |
ಚಳೆಯಕ್ಕೆ ಬಿಡದೆ ಬೀಸುವನೇಕಕುಸುಮಂಗ |
ಳೆಲೆಯಾಲವಟ್ಟಕ್ಕೆ ಸೇರಿ ಕಂಪಿಂಗೊಸೆದು ಮೆಱೆವ ಸುಖಸಂಕುಳವನು ||
ತಳೆದು ಗಾಯಕರ ಗೀತಕ್ಕೆಯಾಡುವ ಸತಿಯ |
ನಳೆದು ಕೈವಾರಿಸುವ ಕವಿಗಮಕಿವಾದಿಗಳ |
ಕಳಕಳದ ಸುಖದೊಳಗೆ ನೃಪಶಿರೋಮಣಿಯೊಲಿದುನಲಿವನಂತಾವನದಲಿ ||

ಯುವತಿಯರು ತಳಿವ ಪನ್ನೀರ ಮಂಜಿಂಗೆ ಬೀ |
ಸುವ ಕಮಲದಳದಾಲವಟ್ಟದೆಲರಿಂಗೆ ಮುಡಿ |
ಸುವ ನವ್ಯಕುಸುಮದಾಮಕ್ಕೆ ಪೂಸುವ ಚಂದನದ ಶೈತ್ಯಸೌರಭ್ಯಕೆ ||
ಸವೆಯದಾಡುವ ಗತಿಗೆ ನುಡಿವ ಚದುರಿಂಗೆ ಹಾ |
ಡುವ ಸರಕೆ ಮಾಡುವುಪಚಾರಕ್ಕೆ ಮನವನಿ |
ತ್ತವನಿಪಂ ಸುಖದೊಳಿರಲತ್ತನಾಡೊಳಗೆ ಕೌಶಿಕನ ಕಾಟಂ ಮೊಳೆತುದು ||

ಮೊಳೆವ ಬೀಜವನು ಕ್ರಿಮಿಕೀಟಕಂಗಳು ಸಸಿಯ |
ನೆಳಪುಲ್ಲಿಗಳು ಹೊಡೆಯನೆರಲೆಗಳು ಸವಿದಂಟು |
ಗಳ ನರಿಗಳುಂ ತೆನೆಗಳಂ ಗಿಳಿ ನವಿಲು ಕೊಂಚೆ ಮೊದಲಾದ ಖಗಮೃಗತತಿ||
ಉೞಿದ ಬೆಳೆಯುಂ ನಕುಲ ಪೆಗ್ಗಣಂಗಳು ಕಾವ |
ಬಳವಂತರೆಲ್ಲರಂ ಸರ್ಪಸಂತತಿ ತಿಂದು |
ತಳಪಟಂಮಾಡಿ ನಾಡೆಲ್ಲಮಂ ಗೋೞಿಡುಸುತಿರ್ಪುದೇಂವರ್ಣಿಸುವೆನು ||೨೦||

ಬೆಳೆಯ ದೆಸೆಯಿಂತಾಯ್ತು ಹೊಲದ ತೋಟದ ಗೆಡ್ಡೆ |
ಗೆಣಸು ಹಂದಿಗೆ ಹವಣು ಹಣ್ಣು ಕಾಯ್ ಕಬ್ಬುಗಳ |
ನಳಿಲುನಿಲಲೀಯವುದಕದೊಳಾವೆಮೀನುಮೊಸಳೆಯಭಯಂ ಘನವಾದುದು||
ಎಳಗಱುಗಳಂ ತೋಳನಾಕಳಂ ಹುಲಿ ಮುಱಿದು |
ಸುೞಿವರಂ ಸಮ್ಮೊವು ಕರಡಿ ಕಾಱ್ಕೋಣಂಗ |
ಳುೞಿಯಲೀಯದಿರೆ ನಾಡೆಯ್ದೆಬಾಯ್ಬಿಟ್ಟು ದೂಱಲು ಪರಿದರವನಿಪಂಗೆ||೨೧||

ಹಿಡಿದ ಹುಲು ಬಾಯ ಮೊಱೆ ಕುೞಿದ ಕಣ್ ಬಱತಧರ |
ಸಡೆಗೆಟ್ಟ ಕಾಲ್ ಬೆನ್ನ ಹತ್ತಿದ ಬಸಿರ್ವೆರಸಿ |
ತಡೆಯದೆ ವಿಧೋ ಎಂದು ಬಿಡದೆ ಮೊಱೆಯೋ ಎಂದು ಕಡಗಿ ಶಿವಧಾ
ಅಡಸಿ ಬನಮಂ ಸುತ್ತಿ ಮುತ್ತಿ ಗೋೞಿಡೆ ಕೇಳ್ದು | [ಎನುತ್ತೆ |
ನಡೆನೋಡಿದಾರಿದೆಲ್ಲಿಯ ದೂಱುಗರು ನಿಲಿಸು |
ನುಡಿಸುವಂ ಕರೆಯೊಂದುಭೂಪನೆನೆ ಬನವಹುಗಿಸಿದರುಕಂಬಿಯುಕಲಿಗಳು ||

ದ್ವಿಜಕುಲಸ್ತೋಮ ಪಟ್ಟಣಸಾಮಿಗಳ ನೆರವಿ |
ಯ ಜನ ಚರಣದಲಿ ಜನಿಸಿದ ಜಾತಿ ಮತ್ತೆ ಸೂ |
ತ್ರಜರು ಕಮ್ಮಱರು ಚಿಪ್ಪಿಗ ತೈಲಘಾತುಕ ಕುಜಾತಿಯೊಳಗಾದ ಗಡಣ ||
ಗಜಬಜವ ಮಾಡಿ ಬಂದವನಿಪನ ಮನೆಯ ದಿ |
ಗ್ವಿಜರು ಸಂತೈಸಿ ಬಿನ್ನಹಮಾಡಿ ನಡೆಯಲ್ಕೆ |
ವಿಜಯರಾಜ್ಯಾಭ್ಯುದಯವೆಂದು ಸೇಸೆಯ ಸೂಸಿ ದ್ವಿಜರು ಪೋಱಿಗರೞಲನು ||

ಭೂಸುರರು ಮಂತ್ರಾಕ್ಷತೆಯನಿತ್ತು ಶಿವಭಕ್ತ |
ರಾಸುರದಿ ಭಸಿತಮಂ ಕೊಟ್ಟುೞಿದ ಜನವೆಲ್ಲ |
ಲೇಸೆನಿಪ ವಸ್ತುವಂ ಕಾಣಿಕೆಯನಿತ್ತಾಗ ಭೂಪ ಚಿತ್ತೈಸುವೆಂದು ||

ದೇಶದೊಳಗಾದ ಖಗಮೃಗದ ಬಾಧೆಯನು ಧರ ।
ಣೀಶನೆನಿಸುವ ಹರಿಶ್ಚಂದ್ರರಾಯಂಗೆ ತ ।
ನ್ನಾಸೆಱೆವಂತೆ ಬಿನ್ನೈಸಲ್ಕೆ ಕೈಮುಗಿಯುತಿರ್ದರೇವಣ್ಣಿಸುವೆನು ॥೨೬॥
ಬಂದ ಪರಿಜನವೆಯ್ದೆ ಮೆಯ್ಯಿಕ್ಕಿ ಕೈಮುಗಿದು ।
ವೊಂದು ಬಿನ್ನಹವ ಚಿತ್ತೈಸು ಬಲ್ಲಹಯೆಂದು ।
ಹಿಂದಿನಿತು ಕಾಲ ನೀಂ ಸಪ್ತದ್ವೀಪವನಾಳುವಂದು ತೊಡಗೊಂದುಭಯಮಂ ॥
ಎಂದುವುಂ ಕಾಣೆವಾವೆಂದು ತಮತಮಗೆ ತಾ ।
ಮುಂದಿ ಪೇಳುತ್ತಿರೆ ಹರಿಶ್ಚಂದ್ರ ಭೂನಾಥ ।
ನಂದುಘೂರ್ಮಿಸುತಕೋಪಾಗ್ನಿರೂಪಾಗೆಹೇೞೆಂದುತಾಂಬೆಸಗೊಂಡನು ॥
ತೆಱದ ಬಾಧೆಗಳಿಲ್ಲ ಬಿಟ್ಟಿಯೂೞಿಗವಿಲ್ಲ ।
ಪರನೃಪರ ಭಯವಿಲ್ಲ ಸಾಲದಂಡಲೆಯಿಲ್ಲ ।
ನೆರೆಯೂರ ಕದನವಿಲ್ಲೇಸೆಂಬೆನಮ್ಭತನ ಖಗಮೃಗದ ಕಾಟದಿಂದ ॥
ಧರೆಯೊಳಗೆ ಬೆಳಸಿಲ್ಲ ಬಿತ್ತಿಲ್ಲ ನೀರಿಲ್ಲ ।
ತರಹರಿಸಿ ನಿಂದುದಿಲ್ಲಂ ಮನದ ದುಃಖಮಂ ।
ಪರಿಹರಿಸಬೇಕು ಚಿತ್ತೈಸು ವಲ್ಲಭಯೆಂದು ಭೂಪನಂ ಮೊಱೆಯಿಟ್ಟುದು ॥
ಅಂತವರ ಬಾಯ ಮೊಱೆಯುಂ ನಿಲಿಸಿ ಕೈಯ ಪು ।
ಲ್ಲಂ ತೆಗೆದು ಬಿಸುಟು ಧನಧಾನ್ಯಂಗಳಂ ಕೊಟ್ಟು ।
ಸಂತವಿಟ್ಟಂಜದಿರಿ ನಾಳೆ ಪೊಱಮಟ್ಟು ನಾಡೊಳಗುಳ್ಳ ಖಗಮೃಗವನು ॥
ಅಂತಕನ ನಗರಕ್ಕೆ ಹುಗಬಡಿವೆನೆಂದು ಭೂ ।
ಕಾಂತನೊಲವಿಂ ಕಳುಹಿ ಸಕಲಪರಿಜನಸಹಿತ ।
ಸಂತಸವ ಸುಖದ ಸುಗ್ಗಿಯ ಸೊಗಸನನುಭವಿಸುತಿರೆ ದಿನಂ ಕಡೆಗಂಡುದು ॥
ಹಿಂದೆಯುಹಿಮೃಂದವುಂ ಕೊಂದ ಕುಂದಂ ತೊಳೆವೆ ।
ನೆಂದಬುಧಿಗಿೞಿವ ಸಿಡಿಲೋ ಮಮದ್ವೇಷಿ ಗಿರಿ ।
ನಂದನಂಗೆಡೆಗೊಟ್ಟಡಂಗಿಸಿದುದೆಂದು ಮುಳಿಸಿಂದ ಸುರಪತಿಯಿಟ್ಟೊಡೆ ॥
ನಿಂದುರಿಯುತಬುದಿಗೆಯ್ದುವ ವಜ್ರವೋ ನೀಗೆ ।
ಬಂದ ಕಾರ್ಮೇಘಂಗಳೊಳು ಸಿಕ್ಕಿ ಹೊಱಗಿ ಮೇ ।
ಗಿಂದಿೞಿವ ವಾಡಾಗ್ನಿಯೋ ಎನಿಸಿ ಸಡಗಿನ ಕಡಲಂ ಸೇರ್ದನಬುಜಸಖನು ॥

ಮೊಳೆವ ಸಂಧ್ಯಾಂಗನೆಗಬುಧಿ ನಿವಾಳಿಸಲೆಂದು |
ತಳೆದ ಮಾಣಿಕದ ಹೆಜ್ಜೊಡರೊ ದಿನರಾತ್ರಿಗಳ |
ನಳೆದು ಹೊಲಮೇರೆಯಲಿ ನಡಲೆಂದು ವರುಣ ನಿಲಿಸಿದ ಹವಳದೊಂದು
ಬೆಳಗೆಂಬ ಲತೆಯೊಲೆದು ಕುಡಿಜಡಿದು ಕೆಂಪಡರ್ದ | [ಸಱಿಯೋ||
ಕಱಿವಣ್ಣೊ ಪಡುವಣ ದಿಶಾಂಗನೆಯ ಮುಂದಲೆಯ |
ತೊಳಪ ಚೂಡಾರತ್ನವೋ ಎನಿಸಿ ಕಡೆನಗಲ ರವಿ ಕಣ್ಗೆ ಸೊಗಯಿಸಿದನು||
ನಡೆಯುಡುಗಿ ಮುಪ್ಪಾಗಿ ಕಾಂತಿ ಮಸುಳಿಸಿ ತೇಜ |
ವಡಗಿ ಹುಟ್ಟಿದ ತಾವನಗಲ್ದು ಬೇಱೊಂದೆಸೆಯ |
ಕಡೆಯೊಳಱಿವಂತಾದುದೀಗ ಹಿಂದೆನ್ನ ಹೆಸರೆಂದೊಡೋಡುವ ಕತ್ತಲೆ ||
ಹೊಡಕರಿಸುತಿರ್ದುದೆನ್ನಾಳಿಕೆಗೆ ಶಶಿಯು ಮುಂ |
ಗುಡಿ ದಾಱಿ ಬರುತಿದೆಯಿದಂ ಕಂಡು ಜೀವಿಪೆ |
ನ್ನೊಡಲಾಸೆಯೇಕೆಂದು ಲಜ್ಜೆಯಿಂದಿಱಿವಂತೆ ಬಿದ್ದನಿನನಬುಧಿಯೊಳಗೆ ||
ರವಿಯಿಱಿದ ಮಱುಕದಿಂ ರಾಗಿಸುವ ಗಗನ ಕಂ |
ದುವ ಬೆಳಗು ಕಣ್ಗೆಡುವ ಜನ ಕೊಱಗುವಬುಜ ಹಿಂ |
ಗುವ ಚಕ್ರ ನಡೆಗೆಡುವ ಗಾಳಿ ನೆಲೆಗೆಡುವಳಿಗಳುಱೆ ಗೂಡುಗೊಂಬ ಪಕ್ಷಿ||
ಕವಿವ ಸಂತೋಷದಿಂ ಹೆಚ್ಚುವಂಬುಧಿಯುರಳ್ವ |
ಕುವಲಯಂ ಸಲಿವ ಜಾರೆಯರೊಸರ್ವ ಪಳಿಕು ಮೂ |
ಡುವ ತಾರೆ ಬಿಲುವೊಯ್ವ ಮದನನುಬ್ಬುವ ಚಕೋರಾಳಿ ಸಂಜೆಯೊಳೆಸೆ
ನೀರ ಬಿದ್ದನನಱಿದೆನೆಂದು ಹಗಲೆಂದೆಂಬ | [ದುವು ||೮೩||
ನಾರಿ ಚಿಂತಿಸಿ ಕಂದಿದಳೊ ಗಾಳಿಯೆಂಬ ಸುಕು |
ಮಾರನಂ ಪಡೆದು ಸಂಧ್ಯಾವನಿತೆ ಹೊಳೆಮುಟ್ಟಹೊದೆದ ಕಗ್ಗಂಬಳಿಯಿದೋ||
ಸೂರಾಂಶುವೆಂಬ ಕಿಚ್ಚಿಂ ಕಾದು ಗಗನ ಕೆಂ |
ಪೇಱಿಯಿನಸಡಗೆ ಕಪ್ಪೇಱಿತೋ ಎಂಬ ವಿ |
ಸ್ತಾರದಿಂ ಕಾಳಗತ್ತಲೆಯೆಂಬ ಲತೆ ಹಬ್ಬಿ ಹೊಡಕರಿಸಿ ಮಡಲಿಱಿದುದು ||
ಮಿಕ್ಕು ಮಾಸುವ ಬೆಳಗು ಕೆಂಪಡರ್ವ ಮುಗಿಲು ತಲೆ |
ಯಿಕ್ಕುವಬುಜಂ ನಗುವ ಕುಮುದ ನೆಲೆಗೆಡುವಬುಧಿ |
ಹಕ್ಕೆಯಿಂದಗಲ್ವ ಚಕ್ರಂ ಹೂವಸಱಸುವಳಿಯೊಂದೊಂದು ನೆಗೆವ ತಾರೆ ||

ಇಕ್ಕೆಗೆಯ್ದುವ ಮಿಗಂ ಮೊಳೆವ ಮಾರುತ ಕೊಲಾ |
ರಕ್ಕೆ ಹಾಱುವ ಹಕ್ಕಿ ಬಿಲುವೊಯ್ವ ಮದನ ಕೂ |
ಟಕ್ಕೆಬಯಸುವಚಕೋರಂನಲಿವಜಾರೆಯರುಸಂಜೆಯೊಳುರಂಜಿಸಿದರು ||

ಕಡಲೊಡೆಯನುಂ ಸುರಪನುಂ ಕಾದಲಿರ್ಬರುಂ |
ಪಿಡಿದ ಕೆಂಬರಿಗೆಗಳೊ ದಿನರಾತ್ರಿಯೊಂದನೊಂ |
ದೊಡೆದೊತ್ತಿಕೊಳಲು ನಡೆಯಲು ಹೊಱಗೆ ಹೊಯ್ದ ಮಾಣಿಕದ ಗೂಡಾ [ರಂಗಳೋ||
ಕಡೆವಗಲ ರವಿಬಿಂಬವಿದಿರಲೊಪ್ಪುವ ಮೂಡ |
ಗಡೆಯ ವನಧಿಯೊಳು ಬಿಂಬಿಸಿದುದೋ ಎನೆ ಕೆಂಪು |
ವಿಡಿವಡಗುವಿನನುದಯಿಪಿಂಮ ಸಲೆ ಮೂಡಲೊಪ್ಪಿದುವುಭಯದಿಙ್ಮುಖಗಳು||

ಪದವೂಱ ಧರಣಿಯುಂಟೆಂದಱಿದು ತಲೆಯ ತಾ |
ಗದೊಡೆ ನಭವತ್ತತ್ತಲೆಂದಱಿದು ತೋಳು ಸೋಂ |
ಕದೊಡೆ ದೆಸೆಯುಂಟೆಂದು ನಿಶ್ಚೈಸಿ ಸುಡಿಗೇಳ್ದ ನರಲೋಕವೆಂದು ನಂಬಿ||
ಇದು ಪೂರ್ವಪಶ್ಚಿಮಂ ದಕ್ಷಿಣೋತ್ತರಗಳೆಂ |
ಬುದನಾವಿಧಾತ್ರನಾದೊಡಮಱಿಯನೆನಲು ಕವಿ |
ದುದು ಪ್ರಳಯಘೋರಾಂಧಕಾರವಂದತಿಜನಕ್ಕತಿಭಯಂಕರವಾಗಲು ||೮೭

ನಿಶೆಯೆಂಬ ಗಜವಂ ವಿದಾರಿಸುತ ಹರಿ ಪೂರ್ವ |
ದಿಶೆಯದ್ರಿಶಿಖರದಿಂ ನೆಗೆಯಲು ಸುಧಾಕಿರಣ |
ವಿಸರವೆಂದೆಂಬ ಕೇಸರಗೆದಱ ಗರ್ಜಿಸುತ ಶಶಿಯಿಱಿದ ಗಗನತಳಕೆ ||
ಪಸರಿಸಿದ ಮೌಕ್ತಿಕವೊ ಎಂಬಂತೆ ನಕ್ಷತ್ರ |
ಮಸಮಸಗಿ ತೊಳಗುತಿರೆ ಮೂಡಿವಂ ಶಶಿ ನಾಲ್ಕು |
ದೆಸೆಯ ದಿಗುಭಿತ್ತಿಯಂ ಧವಳಿಸುತೆ ಕಣ್ಗೆ ಮಂಗಳವಾಗಲೊಪ್ಪಿತೆಂದು ||೮೮

ಚಾರುಚಂದ್ರಿಕೆಯ ಬೀಜಂಗಳೋ ಚಂದ್ರಂ ಚ |
ಕೋರಾವಳಿಗೆ ತಳಿದ ಕುಟುಕುಗಳೊ ಗಗನರಮ |
ಣೀರುಚಿರ ಮಾಲಕವೊ ರವಿಹಯಾನನಫೇನಪುಂಜವೋ ದಿವಿಜನದಿಯಾ ||
ಕೈರವಂಗಳ ಕುಟ್ಮಳಾವಳಿಗಳೋ ಮಿಸುಪ |
ತೋರಮಲ್ಲಿಗೆಯರಳಿನಿಂ ವಿಷ್ಣುಪದವನೊಲಿ |
ದಾರಾಧಿಸಿದಳೊ ಯಾಮಿನಿದೇವಿಯೆನೆ ತರಳತಾರಾಳಿ ಕಣ್ಗೆಸೆದುದು ||೮೯||

ಸೊಗಯಿಪ ಸುಧಾಬ್ಧಿ ಮೋಹದೊಳಿಂದು ಬಂದೆನ್ನ ।
ಮಗನು ದಟ್ಟಡಿಯಿಡುವ ರಾಜ್ಯಾಂಗಣದೊಳೆಂದು ।
ನೆಗೆವ ತೆರೆಯಿಂದ ಸಂಮಾರ್ಜನೆಯು ಮಾಡಿ ಮಲ್ಲಿಗೆಯು ಪೂವಲಿಯು ಕೆದಱೆ ॥
ಗಗನವನಲಂಕರಿಸಿದಳೊಯೆನಿಪ್ಪಂತೆ ದಿ ।
ಕ್ಕುಗಳ ಧವಳಿಸೆಯಮೃತಕಿರಣಮಂ ಕೆದಱೆ ತಾ ।
ರೆಗಳೊಡನೆ ಪೂರ್ವಗಿರಿಮಸ್ತಕದೊಳುದಯಿಸುವ ಮೃಗಧರಂ ಕಣ್ಗೆಸೆದನು ॥
ಮನಸಿಜನ ಬಡಿಗೋಲೊ ಶಿವ ಸೂಡಿದರ್ಧಚಂ ।
ದ್ರನ ಭಾಗವೋ ರಾಹು ತೋಡಿ ತಿಂದುೞಿದ ಮಿ । [ಗಲೋ ॥
ಕ್ಕನಿತೋ ವಿಯೋಗಿಗಳು ವಿರಹವಾರ್ಧಿಯೊಳು ಕೆಡೆವಾಗಳೊಱಗಿದ ಹರಿ
ಘನತರಾಕಾಶಕೇಶನ ಕೈಯ ಪಾತ್ರೆಯೋ ।
ವಿನುತ ಪಡುವಣ ದಿಗಂಗನೆಯು ಮುಂದಲೆಯ ಮು।
ತ್ತಿನ ಹೆಱೆಯೊ ಎಂದರ್ಧಚಂದ್ರಸಂ ಬಣ್ಣಿಸುವರೊಡರಿದು ಕಾವ್ಯಂಗಳೊಳಗೆ ॥
ಕುಸುಮಶರಮಂ ಮದನ ಮಸೆವ ಪಳಿಕಿನದೊಂದು ।
ಹೊಸಸಾಣೆಯೋ ಗಗನವನಿತೆಯೆಚ್ಬಾಡಲ್ಕೆ ।
ಪಸರಿಸಿದ ನಕ್ಷತ್ರಗವಡಿಕೆಯೊಳಿಱುಹಿಟ್ಟದೊಂದು ಬೆಳ್ಳಿಯ ಹಲ್ಲೆಯೋ ।
ಒಸೆದು ರತಿ ನಿಟ್ಟಿಸುವ ಕನ್ನಡಿಯೊ ಮಸುಮಥನ ।
ಹೊಸಚತ್ರವೋ ತಿಳಿದ ಬೆಳುದಿಂಗಳಂ ಖಚರ । [ಬವು ॥೯೦॥
ರೊಸೆದು ವಸುಧೆಗೆ ಸುರಿವ ಹೊಸಭಾಂಡವೋ ಎನಿಸಿ ಮೂಡಿತ್ತು ಶಶಿಬಿಂ
ಬಳೆದ ಕತ್ತಲೆ ಮುತ್ತು ಹಣಿತುದೋ ಕುಮುದಿನಿಯ ।
ಕೆಳೆಯ ಬಹನೆಂದು ಸಂಧ್ಯಾವನಿತೆ ಭವನಮಂ ।
ಮಳಯಜದಿ ಧವಳಿಸಿದಳೋ ರೂಪನಡಗಿಸಿ ದಿವಾಕರನ ಕಿರಣಂಗಳು ॥
ಜಳಜಮಂ ನೋಡ ಬಂದುವೊ ಚಕೋರಿಗಳ ನಿ ।
ರ್ಮಳಹರುಷ ಬೆಳೆಯಿತೋ ನೋಡೆಂಬ ಸಂದೇಹ ।
ಕೊಳಗಾಗಿ ಚೌವಟಂಬರಿದು ಪಸರಿಸಿತು ಬೆಳುದಿಂಗಳೆಲ್ಲಾ ದೆಸೆಯೊಳು ೯೧
ಚಕೋರರ್ಗೆ ಭಯ ಚಕ್ರವಾಕಕ್ಕೆ ವಿರಹವೀ ।
ನಾರೀಜನಕ್ಕೆ ಶೃಂಗಾರ ಕುಸುಮಶರಂಗೆ ।
ವೀರ ನಕ್ತಂಚರರ ರುಧಿರಪಾನಕ್ಕೆ ಬೀಭತ್ಸ ಜಲನಿಧಿಗದ್ಭುತಾ ॥

ಕೈರವಕೆ ಹಾಸ್ಯ ವಿರಹಾಗ್ನಿ ಗತಿರೌದ್ರತೆ ಚ |
ಕೋರವ್ರಜಕೆ ಶಾಂತಿರಸದ ಪ್ರವಾಹಪ್ರ |
ಪೂರವೆನೆ ನವರಸೋದಯವೆನಿಸಿತಂದು ಹಿಮಕರನುದಯವಾಗಲಂದು ||೯೪

ಯತಿಯಾದೊಡಾವ್ರತಂ ತನುವೊದಗಿದೊಡೆ ಬಳಿಕ |
ಪತಿತನೆನಿಪಂ ಪ್ರದೋಷಪ್ರಭವೆಯೆನಿಸುವೊ |
ಜಿತಮನೋಯುಕ್ತಿ ತಾನೆಂದಂದು ದೋಷಕ್ಕೆ ಪೇಸುತೆ ವಿರಕ್ತೆಯಾಗಿ ||
ಅತಿಪುಣ್ಯತರಚಂದ್ರಿಕಾಗಂಗೆಯೊಳು ನಿಶಾ |
ಸತಿಯಂಬರಂಬೆರಸಿ ಮುಳುಗಿದಂತೆವೊಲು ಪಿಂ |
ಗಿತು ತಮಂ ಸಾಂದ್ರಚಂದ್ರಾತಪಂ ಪಸರಿಸಿತು ಕಣ್ಗೆ ಮಂಗಳವಾಗಲು||೯೫

ಚಾರುಚಂದ್ರೋಪಲದ ಕರಡಿಗೆಯೊಳಾ ನಿಶಾ |
ನಾರಿ ನೀಲದ ಹಾರಮಂ ಬೈಚಿದಳೊ ಅಂಧ |
ಕಾರಾಬ್ಧಿಯಂ ಕುಡಿಯೆ ಪ್ರತಿಫಲಿಸಿತೋರ್ಪ ಕಾರ್ಷ್ಣ್ಯಕೆಯೊ ಪೇಳೆಂದೆನಲ್ಕೆ ||
ತೋಱೆ ಶಶಿಬಿಂಬದೊಳು ಕಱೆಯದೆಂಬಾತನವಿ |
ಚಾರಿ ಕಱೆಯದೆ ಕಱೆಯುತಿದೆಯಲಾ ಧರೆಗಮೃತ |
ಸಾರಮಂ ತಾನೆನಲು ಸೂರಿಗಳು ಬಣ್ಣಿಸೆ ಸುಧಾರೋಚಿ ಕಣ್ಗೆಸೆದುದು||೯೬

ಇದು ಮೂಡಣಂಗನೆಯ ಸಿಂಧೂರ ತಿಲಕವೋ |
ಇದು ಸುರಪನೋಲಗದ ಪುಪ್ಪರಿಕೆಗಳಸವೋ | [ರವೊ
ಇದುವಿಂಪ್ರನೇಱುವಾನೆಯ ಕೊರಲಗಂಟೆಯೋ ರಂಭೆಯೀಕ್ಷಿಪ ಮುಕು
ಇದು ವಿರಹಿಗಳ ಹೃದಯದುರಿಯುಕ್ಕಿನ ಗುಂಡೊ |
ಇದು ರತಿಯಲಂಕಾರವಿರ್ಪ ಬೆಳುಗರುಡಿಯೋ |
ಇದು ಜಾರಚೋರರೆಡೆಯಾಟ ಬೇಡಿಂದುಯೆನೆ ಪೊಡೆವ ಡಂಗುರವೆನಿಸಿತು||

ಕಡಲ ಸಿಡಿನಸಿಯೊ ಮೇಘಾವಳಿಯ ತತ್ತಿಗಳೊ |
ಪೊಡವಿಯೊಡೆಯನ ನೋಱ್ಪ ಗಗನರಂಧ್ರವೊ ಅಲುಗ |
ಗುಪದಂತೆ ಕೀಲಿಸಿದ ವಜ್ರಮೊಳೆಗಳೊ ನಭದ ಲತೆ ಹಬ್ಬಿಯೊಗೆದ ನನೆಯೋ
ಕಡುಪಸಿದುವೆಂದು ಶಶಿಯೆಲ್ಲಾ ಚಕೋರಕ್ಕೆ |
ಕುಡುವ ಸವಿದುತ್ತುಗಳೊ ಸಿಡಿವ ಸೀಮುತ್ತುಗಳೊ |
ತಡೆಯನೆ ವಿಚಾರಿಸೆನೆ ತಾರಾಳಿಯೆಸೆದುದಾಜಗದ ಜನ ನಲಿಯುತಿರಲು||೯೮

ಕುಂದದಂದಂದಿಂಗೆ ಬಂದು ಕಾಡುವ ರಾಹು |
ವಿಂದೆನ್ನದೆಂದಳುಕಿ ಬಾರದಿರ್ಪಂದದಿಂ |
ದೊಂದುಪಾಯಂಮಾಳ್ಪೆನೆಂದು ತದ್ಬಿಂಬಕ್ಕೆ ನಡೆಗೋಂಟೆಯಿಕ್ಕಿಸಿದನೋ ||
ಸಾನ ಬೆಳುದಿಂಗಳೆಂಬಮೃತಾಂಬುನಿಧಿಯನಾ |
ನಂದದಿಂದುತ್ತರಿಸಲೆಂದು ತಾನೊಲಿದೇಱಿ |
ನಿಂದ ಹರಿಗೋಲಿದೆಂದೆನಿಸಿ ಶಶಿಮಂಡಲದ ಪರಿವೇಷವೆಸೆದಿರ್ದುದು ||೯೯||

ತಿಳಿದು ಬೆಳತಿಗೆಬೆಳಗು ಬಳೆದ ಬೆಳುದಿಂಗಳಂ |
ತಳಿತ ಕಳೆಗಳು ತೊಳಗುಮಿಂದುಪೆರಲೆಯನು ದೂ |
ವಳಿಸುವಳವಂ ಹೊಂಗಿ ಹಿಗ್ಗಿ ಹಾರಯಿಸಿ ಹಾಱುವ ಚಕೋರೀನಿಕರದ ||
ಬಳಸಿದಳಿಕುಳವಿಳಸಿತೋತ್ಪಳಾವಳಿಯ ನಳ |
ನಳಿಸಿ ಸುೞಿಸುೞಿವ ತಂಗಾಳಿಯುಂ ಹೆಚ್ಚಿದು |
ಜ್ಜ್ವಳದ ಬೆಳೆಯಳವನೀಕ್ಷಿಸಿ ಮಂತ್ರಿ ಭೂಪಕುಲತಿಲಕನೊಡನಿಂತೆಂದನು ||

ಹಿಂಗದೊಡೆಯರೆ ನಾಳೆ ಬೇಂಟೆಯುತ್ಸವಕೆ ಬಿಜ |
ಯಂಗೆಯ್ವರಾದೊಡುರ್ವರೆಯ ನಾನಾಖಗಮೃ |
ಗಂಗಳೆಲ್ಲವನಿಱಿದು ಜನದ ಹಸನಂ ಹೊಱೆದು ರಾಜ್ಯದಳವೞಿದಲ್ಲದೆ ||
ಅಂಗವಿಸಬಾರದಿದು ನಿರುತ ಬನಮಂ ಪೊಕ್ಕು |
ತಿಂಗಳಾಯ್ತಿಂದು ನಗರಿಯೊಳು ರಾತ್ರಿಯ ವಿನೋ |
ದಂಗಳಂ ನೋಡುವುದು ಲೇಸು ಭೂನಾಥ ಚಿತ್ತೈಸೆಂದ ಮಂತ್ರೀಶನು ||೧೦೧

ಇದು ದಿಟಂ ಮಂತ್ರಿ ಪೇೞ್ದಂತೀವನ ಕ್ರೀಡೆ |
ಯೊವವು ತಿಂಗಳ ದಿವಸವಾಯ್ತು ಪೋಯ್ತಖಿಳ ಜೀ |
ವದ ಬಾಧೆಯುಗ್ರಖಗಮೃಗವ ಮಾಣಿಸಬೇಕು ಜನದ ಹರುಷಂ ವಿಷಾದ ||
ಹೃದಯ ಸ್ಥವಹುದಿರುಳು ಪುರವ ಚರಿಸುವೆನೆಂದು |
ಮುದದಿಂ ಪಸಾಯಮಂ ವನಪಾಲಕರ್ಗಿತ್ತು |
ಸುದತಿಯರ್ಕಳನೆಲ್ಲ ಮುಂದೆ ನಡೆಯಲು ವೇೞ್ದು ಹಿಂದೆ ತಾನೈತಂದನು ||

ಇಂತು ಹರಿಶ್ಚಂದ್ರಕಾವ್ಯದೊಳ್

ತೃತೀಯಸ್ಥಲಂ.

ಚತುರ್ಥಸ್ಥಲಂ.

ಸೂಚನೆ ॥ ಜನಪತಿಹರಿಶ್ಚಂದ್ರನರ್ತಿಯಿಂ ಬನದೊಳಗೆ ।
ದಿನವ ತಿಂಗಳ ಕಳೆದು ಪುರದಿ ರಾತ್ರಿಯ ಚರಿಸಿ । [ಟ್ಟನು॥
ಯಿನನುದಯವಾಗಲೋಲಗವಿತ್ತು ಬೇಂಟೆಯವಸರಕೆ ತಾಂ ಪೊಱಮ

ಇದು ಬುದ್ಧಿಯೆಂದು ಮಂತ್ರಿಯ ಮಾತ ಕೈಕೊಂಡು ।
ಸದಳವೆಲ್ಲವ ನಿಜನಿವಾಸಕ್ಕೆ ಬೀೞ್ಕೊಟ್ಟು ।
ಪದದ ಗತಿಯಲಿ ಗಮಿಸಿ ಹಡಪಾಳಿಕುಂಚಕಂಬಳಿಯ ಮಾನಿಸರಲ್ಲದೆ ॥
ಕದನಗಲಿಗಳ ನಿಲಿಸಿ ಮುದವನೊಲವಿಂ ತಾಳ್ದು ।
ಸುದತಿಯರ ಮೇಳಮಂ ಕಳೆದುೞಿದು ನಡೆಗೊಂಡ ।
ನುದಯದರವಿಂದಮಿತ್ರನ ತೆಱದಿ ರತ್ನಭೂಷಣಕಾಂತಿಗಳು ಮೆಱೆಯಲು ॥
ತೋರಹಾರದ ಜಳವಟಿಗೆಯ ಪದಕದ ಬಾಹು ।
ಪೂರಯದ ತೊಳತೊಳಗುವೆಳಮಾಣಿಕದ ಕರ್ಣ ।
ಪೂರದ ಮಹಾಮುದ್ರಿಕೆಗಳ ನವಮಣಿಮಕುಟಕೇಯೂರದಾಭರಣದ ॥
ಪೂರಾಯಚಂದನೋದ್ವರ್ತದಿಂ ಕಕ್ಷದೊಳು ।
ಪೂರೈಸಿತಬ್ಜವೆಂದೆನೆ ಬಳಿದು ತೀವಿ ಕಿವಿ ।
ಯೋಱೆ ಮುಸುಕಿರ್ದ ಮೃಗಮದಸೊಬಗನಡಿಯಿಟ್ಟನಪ್ರತಿಮನವನೀಶನು ॥
ಇಟ್ಟ ಕತ್ತುರಿಯ ತಿಲಕದ ಕಪೋಲದೊಳು ಜಾ ।
ಗಿಟ್ಟೊಸಱುವಂತೊಟ್ಟ ಕೊಂಡ ಪುಣುಗಿನ ಕಂಪ ।
ನೊಟ್ಟೈಸಿ ತುಱುಗಿ ತುಂಬಿದ ಕದಂಬಕ್ಕೆಱಗಿ ಮಂಡಳಿಪ ಮಱಿದುಂಬಿಯು ॥
ಉಟ್ಟ ಧವಳಾಂಬರದ ಹಡಪಿಗನ ಕೈಯೊಳಳ ।
ವಟ್ಟ ವೀಳೆಯದ ಚೆಲ್ವಾವರಿಸೆ ಮನ್ಮಥನ ।
ಕಟ್ಟೈದಲಗಿನ ತೆಱದಿ ಬಂದು ಪುರವೀಧಿಯಂ ಪುಗುತಂದನವನೀಶನು ॥೨॥
ಹರಿಯುತಿದೆ ತಿಮಿರ ಮೈಮುರಿಯುತಿದೆ ಬೆಳುದಿಂಗ ।
ಳುರವಣಿಸುತಿದೆ ವನಧಿ ಗಗನದೊಳು ಹಿಮರೋಚಿ ।
ಯೆರಳೆ ದುವ್ವಾಳಿಸುತ್ತಿದೆ ಬೀದಿಬೀದಿಯೊಳು ನಿಡುಮುಸುಕು ಮಸಗುತ್ತಿದೆ

ಬಿರಿಮುಗುಳ ಹೂಗಂಪುವೆರಸಿ ಬರುತಿದೆ ಮಂದ |
ಮರುತ ಸೆರಗೆಯ್ಯುತಿದೆ ಕೋಗಿಲೆಗಳೀಪೊಱ್ತು |
ಪುರವ ನೋಡುವೆನೆಂದು ಹೊಱವಟ್ಟನವನೀಶ ಹತ್ತೆಂಟು ಸಖರು ಸಹಿತ ||೪||
    ಪುರವನೊಲವಿಂ ಹೊಕ್ಕು ಹತ್ತೆಂಟು ಮಂತ್ರಿಗ |
ಳ್ವೆರಸಿ ಪೊಱಮಟ್ಟು ಜಾಣಿನ ಜನ್ಮಭೂಮಿ ಸಿಂ |
ಗರದ ಮಡು ಮೋಹನದ ಬೀಡು ಸೊಬಗಿನ ಸೀಮೆ ವಿತತ ಚದುರಿನ ಚಾವಡಿ
ಪುರುಡಿನೆಡೆಯುಪಚಾರದಿಕ್ಕೆ ವೈಸಿಕದ ಹರ |
ವರಿ ಹುಸಿಯ ಹಸರ ಕೃತಕದ ಕೇರಿಯರ್ಥದಾ |
ಗರವಳುಪಿನಾವಾಸವೆಂದೆನಿಪ ಸೂಳೆಗೇರಿಯ ಹೊಕ್ಕನವನೀಶನು ||೫||
    ಓರಣದ ತೋರಣದ ಮೆಱೆವ ಮುತ್ತಿನ ಮತ್ತ |
ವಾರಣದ ಮಂಟಪದ ಲೋವೆಗಳ ದೆಸೆಯ ಚಾ |
ಭಾರದುಪ್ಪರಿಗೆಗಳ ತರತರದ ಭವನಿಕೆಯ ನೆಲೆಯ ಕರುಮಾಡಂಗಳ ||
ಚಾರುಭದ್ರಂಗಳ ಸುಧಾವೇದಿಕೆಗಳ ವಿ |
ಸ್ತಾರವೆಡೆಗಿಱಿದ ಹೊಂಗಳಸದ ತೆರಳ್ಕೆಗಳ |
ಕೇರಿಯೊಯ್ಯಾರಂ ಕುಬೇರನಳಕಾಪುರಿಯನೇೞಿಸಿತವೇಪೊಗೞ್ವೆನು ||೬||
    ಬಿಡದೆ ಗಣಿಕೆಯರ ಹರ್ಮ್ಯಾವಳಿಯನೇಪೊಗೞ್ವೆ |
ಕಡುಚೆಲ್ವಪಳಿಕಿನಿಂ ಪಾಸರೆಯ ಭಿತ್ತಿಗಳ |
ನೆಡೆಗೆಡೆಗೆ ಪಚ್ಚೆ ಪವಳಂಗಳ ಸ್ತಂಭಗಳ ಶಶಿಕಾಂತಶಿಲೆಯ ತೊಲೆಯ ||
ಕಡೆವ ರೂಪಾರಗಳನೀಕ್ಷಿಸುತೆ ತನ್ಮಮನ |
ವೆಡೆಗೊಂಡರಂ ಮೂರ್ಛಾಂಗೆಯುರುಯಿ (?) |
ಪ್ಪಡದ ಕೀಲುಪ್ಪರಿಗೆ ಸಪ್ತಾಬ್ಧಿಯೊಂದಱೊಂದಱ ಮೇಲೆ ನಿಂದಂತಿರೆ ||೭||
    ಪಳಿಕಿಂದ ನಯವಡೆದ ನೆಲೆಗಟ್ಟು ಶಶಿಕಾಂತ |
ದಳವಟ್ಟ ಭಿತ್ತಿ ವಜ್ರದ ಕಂಭ ವಿದ್ರುಮದ |
ತೊಲೆ ಪುಷ್ಯರಾಗದೊಪ್ಪುವ ಜಂತೆ ಮರಕತದ ಲೋವೆ ಮುತ್ತಿನ ಸೂಸಕ
ಪೊಳೆವ ಮಾಣಿಕದ ಕಲಶಂಗಳೋವರಿಯೊಳಗೆ |
ಕಳಹಂಸಗಮನದಾಕಳಶಕುಚಕಮಲಮುಖಿ |
ದೊಳನುಡಿಯ ಚಲನಯನದರುಣಾಧರೆಯರ ಸುೞಿವಂ ಕಂಡನವನೀಶನು||

ತೆಳುಗಾಳಿಗೊಲೆವ ಮೇಲ್ಗುಡಿ ಸಂಚಲಾಳಕಂ |
ಗಳು ತೋರಣಂ ಕುಚಂ ಕಲಶ ಮುಖ ಮುಕುರ ಕರ | [ದಂಡ ||
ತಳಿರು ನಖ ಕುಸುಮ ತುಡಿಗೆಗಳ ಹೊಸಮುತ್ತು ನಸೆಯಕ್ಕಿ ಪುರ್ಬಿಕ್ಕು
ಬಳಸಿ ಮುಡಿಗಂಪಿಂಗೆ ಮಂಡಳಿಸುವಳಿ ಹೀಲಿ |
ಗಳು ಕಂಕಣಂಗಳ ಝಣತ್ಕಾರ ವಾದ್ಯಸಂ |
ಕುಳವಾಗೆ ಬರ್ಪ ಭೂಪನಸಿದಿರ್ಗೊಂಬಂತಿರೆಸೆದರಂತಾಸತಿಯರು ||೯||

ಉಟ್ಟ ಧವಳಾಂಬರದ ಸುಲಿಪಲ್ಲ ಮೆಯ್ಯೊಳ |
ಣ್ಪಿಟ್ಟ ಗಂಧದ ಮುಡಿಯ ಮಲ್ಲಿಗೆಯ ನಗೆಮೊಗದ |
ತೊಟ್ಟ ಮುತ್ತಿನ ತೋರದುಡಿಗೆಗಳ ಬೆಳಗು ಪಸರಿಸಿ ಪರ್ಬೆ ಬೀದಿವರಿಯೆ||
ದಟ್ಟೈಸಿ ಬಳೆದ ಬೆಳುದಿಂಗಳಂ ಬೆಳುಮುಗಿಲ |
ಮೆಟ್ಟಿರ್ದ ಚಂದ್ರಕಳೆಯೆಂದೆಂಬ ಭಾವವಳ | [ದಳು ||೧೦||
ವಟ್ಟ ಬಿಳಿಯುಪ್ಪರಿಗೆಯಗ್ರದೊಳು ಸಿಂದೊರ್ವ ಸತಿ ಕಣ್ಗೆ ಸೊಗಯಿಸಿ

ಗಡಣದುಪ್ಪರಿಗೆಗಳೊಳಱಿ ನೆತ್ತ ಚದುರಂಗ |
ವಿಡಿವ ವೀಣೆಗಳನಭ್ಯಾಸಿಸುವ ಗಿಳಿಗಳಂ |
ನುಡಿಯಿಸುವ ಕಾಮಶಾಸ್ತ್ರವನೋದುತಿಹ ನೃತ್ಯಗೀತವಾದ್ಯಗಳ ಕಲಿವ ||
ಕಡೆಗೆ ವೇಶ್ಯಾವಿಡಂಬವನಱಿವ ಕಥೆಗೇಳ್ವ |
ಬಿಡದೆ ಸಿಂಗರಿಸಿ ನಲ್ಲರ ಗೋಷ್ಠಿಯೊಳಗಿರ್ಪ |
ಮಡದಿಯರಸೀಕ್ಷಿಸುತಲವನೀಶನೆಯ್ತಂದನಾಸೂಳೆಗೇರಿಯೊಳಗೆ ||೧೧||

ತುಂಬಿ ತುಂಬಿಯನಟ್ಟುವಂತಳಕವಳಕವರ |
ಲಂಬಂಬ ತೆವಱುವಂತಕ್ಷಿಯಕ್ಷಿಗಳಿಂದು | ಡಿಗೆ ||
ಬಿಂಬ ಬಿಂಬವ ತಗುಳ್ವಂತೆ ಮುಖ ಮುಖವನೆಳಲತೆಯ ಕುಡಿ ಲತೆಯ ಕು
ಲಂಬಿಪೊಲು ತೋಳು ತೋಳನು ಚಕ್ರ ಚಕ್ರವನು |
ಬೆಂಬಿಡಿವವೊಲು ಕುಚಕುಚಂ ಹಂಸೆಹಂಸೆಗ | ತಿಯರು ||೧೨||
ಟ್ಟುಂಬರಿವವೊಲು ಪದಪದಂ ಮೆಱೆಯೆ ಚೆಟುಕುಮಱಿಯಾಡುತಿರ್ದರು ಸ

ಮುಡಿಯ ಪರಿಮಳದೊಡನೆ ಮಱಿದುಂಬಿಗಳು ಪರಿಯೆ |
ನಡೆವ ನಟಣೆಗಳೊಡನೆ ಹಂಸೆಗಳು ಜಡಿವ ಸವಿ | ಕಂಗಳು ||
ನುಡಿಯ ಸೊಬಗುಗಳೊಡನೆ ಗಿಳಿಗಳೊಯ್ಯನೆ ಕುಣಿವ ಕುಚದೊಡನೆ ಕೋ

ಒಡಲ ಚೆಲುವುಗಳೊಡನೆ ನೋಟಕರ ದಿಟ್ಟಿಗಳು |
ಬಿಡದೆ ಕೊಲ್ಲಣಿಗೆವರಿದೆಡೆಯಾಡುತಿರಲಿಂತು |
ಮಡದಿಯರು ಕೋಲಾಟವಾಡುತಿರ್ದರು ತೋಳ ಗತಿಬಂಧವಿವರಣೆಯೊಳು ‖

ಅಂದುಗೆಯು ಮಂಟಿಗೆಯು ಕಂಕಣದ ಝಣರವದ |
ಗೊಂದಣವಲುಲಿವ ಕಿಂಕಿಣಿಯು ಗೆಜ್ಜೆಯು ರವದ |
ಸಂದಣಿಪ ಕುಚಮಧ್ಯದೆಡೆಯೊಳೊಪ್ಪುವ ಹಾರವೊಲೆದಾಡೆ ನಳತೋಳನ ‖
ಬಂದಿ ಕೀಲಣದ ಹೊಂಬಳೆ ಕಡಗ ಸೂಡಗದ |
ಮುಂದೆಸೆವ ಕಂಕಣದ ಪ್ರೋಲೆ ಮುತ್ತಿನ ಕೊಪ್ಪು |
ನಿಂದೆಸೆವ ಕಾಂತೆ ಮಾಳಿಗೆಯ ಭದ್ರದ ಬಯಲೊಳಾಡಿದಳು ಹೊಡೆಸೆಂಡನು‖

ಮುಡಿ ಜಡಿಯೆ ಕುಂತಳಂ ಕುಣಿಯೆ ಕಡೆಗಣ್ ಹೊಳೆಯೆ |
ನಡು ನಳಿಯೆ ಕರ್ಣಪಾಳಿಕೆಯೊಲೆಯೆ ಹಾರ ಹೊಳೆ | [ಗಿದ ‖
ದೆಡೆಯಾಡೆ ಲಂಬಿಸುವ ಮೇಲುದಿನ ತೆಱಹಿನೊಳು ಮೊಲೆಗಳಲುಗಲು ಬಾ
ಒಡಲು ಶೋಭಿಸೆ ತಪ್ಪುತೆಡೆಮೆಟ್ಟುವಡಿಗಳೊಳು |
ಬಿಡದೆ ನೇವುರ ಝುಣಂ ಝುಣಮೆನಲು ಮಡದಿಯರ |
ನಡುವೆ ಸೆಂಡಂ ಹೊಯ್ಯುತಿರ್ದಳೊರ್ವಳು ಕಾಮನಂಕಮಾಲೆಯ ಪಾಡುತ‖

ಮನಸಿಜನ ಬರವಿಂಗೆ ತೋರಣಂಗಟ್ಟಿದಳೊ |
ವಿನಯದಿಂ ರತಿದೇವಿಯೆಂಬಂತೆ ಮುಱಿದ ಮು |
ತ್ತಿನ ಮಣಿಯು ಪಚ್ಚೆಯಿಂ ಸವೆದ ಕಂಭದ ಪದ್ಮರಾಗವಳವಟ್ಟ ಮಣೆಯು ‖
ಘನಮುಹಿಮೆವಡೆದುಯ್ಯಲಂ ಹರುಷದಿಂದ ಜ |
ವ್ವನೆಯರೇಱಿದರೊಲಿದರಾಪರಿಶ್ಚಂದ್ರಭೂ |
ಪನ ಬಿರುದಿನಂಕಮಾಲೆಯನು ಪಾಡಿದರು ನಾಲ್ಕುಂಜಾತಿಯಂಗನೆಯರು ‖

ಜಗವಱಿಯೆ ತಾಂ ಕಲಂಕಂ ಕಲಾಹೀನ ಹಾ |
ವಗಿದುಗಿದ ವಿಷವಕ್ತ್ರದೋಷಿಯಸ್ಥಿರ ಹಂದೆ |
ಮೃಗದಿಕ್ಕೆಗಾಡು ಹುತ್ತಿರ್ದಡವಿಯಾಲಹಬ್ಬಿದ ಹಾಱು ಶ್ವೇತಾಂಗನು |
ಮಿಗೆ ತನ್ನ ದೆಸೆಯೆಲ್ಲ ತಂಪೆಂಜದಿಂದೆನ್ನ |
ಮೊಗಸಸಿಯ ಮುಂದೊಗೆದನೆಂದು ಕೋಪದಿ ಶಶಿಯು | [ರ್ದ ವನಿತೆ ‖
ನೆಗೆದು ದಾಱಿಟ್ಟೋಡಿದನ ಮಾಱ್ಕಿಯಿಂದೊಗೆದಳುಯ್ಯಲ ಮಣೆಯನೊ

ಮುಡಿಯ ಭಾರಕ್ಕೆ ಕೊರಲೆಸೆವ ಕುಚಭಾರಕ್ಕೆ |
ಬಡನಡು ನಿತಂಬಭಾರಕ್ಕೆಸೆವ ಬಟ್ಟನು |
ಣ್ಣೊಡೆ ಚೆಲುವನಾಂತವಯವದ ಸೌಕುಮಾರತೆಯ ಭಾರಕ್ಕೆ ಸರ್ವಾಂಗವು ||
ಬಿಡದೆ ಮುನ್ನವೆ ಬಳುಕುತಿನೆಯಿನಱ ಮೇಲಿವಳು |
ತುಡಿಗೆನೊಟ್ಟಳು ಬೇಡೆನಲ್ಕಿನ್ನು ಮಾಣಿಳಿವ |
ಸಡಿಲಿಸುವ ಬುದ್ಧಿಯಿನ್ನಾವುದೆಂದವಳಬ್ಬೆ ಚಿಂತಿಸುತಲಿಂತೆಂದಳು ||೧೮||

ಸಿಂಗರಿಸಿ ಹೊಱಗಿರದಿರೆಲೆ ಮಗಳೆ ನಿನ್ನ ಚೆಲು |
ವಿಂಗೆಳಸಿ ನೋಡಿದರ ಕಣ್ಣೇಱಿಸಿಂದ ನಿ |
ನ್ನಂಗಲತೆ ಬಡವಾದೊಡದನಱಿಯದವರಿವಳು ರೋಗಿಯೆಂದೇ ಬಗೆವರು ||
ಕಂಗೆಸೆವ ಚಂದ್ರಮನ ಸಡುವಿರ್ದ ಚೆಲುವ ಹು |
ತ್ತಿಂಗೆಳಸಿ ಫಣಿ ಬಂದೊಡವ ಕಾಣುತಂಜಿ ಲೋ |
ಕಂಗಳಱಿಯದೆ ಸರ್ಪದಷ್ಟವಾಯ್ತೆಂಬರೆಂಪವಳು ಪೇಱಿದಳಾಗಳು ||೧೯||

ನಿನ್ನ ಮುಖಕಮಲ ಕಮಲದೊಳೊಗೆದ ಕಮಲಮಂ |
ನಿನ್ನಕ್ಷಿಕುವಲಯಂ ಕುವಲಯದ ಕುವಲಯವ |
ನಿನ್ನ ರೂಪು ಲತಾಂತಶರಲತಾಂತದೊಳು ಪುಟ್ಟಿದ ಲತಾಂತಶರಾಳಿಯಾ ||
ನಿನ್ನ ಕುಚಕುಂಭಕುಂಭಿಯ ಕುಂಭಯುಗಳವಂ |
ನಿನ್ನ ತನುಮಧ್ಯವತನುತನುವಂ ನಗುವು | 12373
ದಿನ್ನಾವುದುಪಮಾನವೆಂದು ನುಡಿನಂತೊಬ್ಬ ಜಾಣೆ ಮಗಳಂ ಹೊಗಱ್ದಳು ||

ಹಾಡಳೆಳಗೋಗಿಲೆಯ ದನಿ ಕಿಡುವುದೆಂದು ಮಾ |
ತಾಡಳರಗಿಳಿಯ ಚಪಳತೆ ಕಿಡುವುದೆಂದು ನಡ |
ಪಾಡಳೆಳಹಂಸೆಗಳ ನಡೆಯ ಚೆಲುವಱಿಗೆಂದು ಮುಸುಡುನೆಱೆದಂಗಣದಲಿ ||
ಆಡಳಿಂದುವಿನ ಸೊಬಗಱೆಗೆಂದು ಮುಡಿಯನ |
ಲ್ಲಾಡಳೆಳನವಿಲ ಚೆಲುವಱಿಗೆಂದು ಕಣ್ದೆಱೆದು |
ನೋಡಳುಪ್ಪಳದ ಸಿರಿಯುಱಿವುದೆಂದೆನ್ನ ಮಗಳೆಂದೊರ್ವ ಸತಿ ನುಡಿದಳು ||

ಈನಗರಿಯೊಳಗೆನ್ನ ಮಗಳಿಗೆಣೆಯಿಲ್ಲ ಸು |
ಮ್ಮಾನಿಯಭಿಮಾನಿ ಕಡುಜಾಣೆ ಕಡುನೀಱೆ ಕಮ |
ಳಾನನೆಯ ರೂಪಿಂಗೆ ಸರಿಯಪ್ಪ ವಿಟರನಾನಾರುವಂ ಕಂಡುದಿಲ್ಲ ||

ನೀನೊಬ್ಬನಾದೆ ಮೆಚ್ಚಿಸಿ ಮರುಳ್ಗೊಳಿಸಿ ನಿನ |
ಗೇನುಳ್ಳ ವಸ್ತುವಂ ತಂದಿಕ್ಕಿ ಭೋಗಿಪುದು |
ಹೀನಮನ ಬೇಡ ಬೊಜಗೈಯುಯೆಂದೊಬ್ಬ ಕುಂಟಣಿ ವಿಟನ ಬೋಧಿಸಿದಳು ||
ಚುಂಬಿಸಲು ಮಿಗೆ ಬೆಳತು ಕಂಗೆಸೆದು ತೋರ್ಪಧರ |
ಬಿಂಬ ತನು ಪುಳಕದಿಂ ಪೊರೆ ಮಾಣೆ ಮೆಱೆವ ಘ |
ರ್ಮಾಂಬು ಸುಯ್ಯೊತ್ತೆ ಹರಿದಳಕದಿಂ ನಿಜವೊಪ್ಪುತಿಹ ಕೊಂಕುವೆತ್ತ ತಿಲಕ ||
ಅಂಬುಜಾಕ್ಷಿಗಳ ಕಡೆಗೆಂಪು ಗಾಡಿಸಿದಪ್ಪಿ |
ನಿಂ ಬಿಗುಹುಗೆಟ್ಟ ಕುಚ ಬಳುಕುವಡಿ ತಾವಿವಾ |
ಱಂಬೊಳೆಯೆ ನಲ್ಲರೊಳು ನೆರೆದಳೀಸತಿಯೆಂದಿವೆಲ್ಲ ದೂಱದೆ ಮಾಣವು ||
ಇಟ್ಟ ಮುಸುಕೆೞೆದ ಸುಯ್ ನಯನದೊಳು ಹೊಳೆಹೊಳೆದು |
ಬಟ್ಟಾಡುವುದಕ ಗಲ್ಲವ ಹತ್ತೆ ಕೈ ಬಯಲ |
ನಿಟ್ಟಿಸುವ ಬೆಱಗಿಂತು ದೈವವೆನ್ನಂ ಕಾಡಿತೆಂದು ಮಿಗೆ ಕಾವನೊಡಲ ||
ಸುಟ್ಟಾತನಿರದೆ ಚಿತ್ತಜನೆಂಬ ಬಾಣವಂ
ಪುಟ್ಟಿಸಿದನೇಕಕಟಯೆನುತ ಕಳವಳಿಸಿ ಮಱ |
ವಟ್ಟ ಚಿಂತಾಬ್ಧಿಯೊಳ್ ಮುೞುಮುೞುಗಾಡುತಿರ್ಪಾಸತಿಯ ನೃಪಕಂಡನು ||
ನುಡಿಯೊಂದು ಸವಿ ನೋಟವೊಂದು ಸವಿ ನೋಟದಿಂ |
ಕಡುಸವಿಯು ಮುನಿಸು ಮುನಿಸಿಂ ಬಯ್ಯೆ ಸವಿ |
ಬಿಡೆಯಪ್ಪ ಚುಂಬನಂ ಕೂಟ ಮುನಿಸೊಂದು ಸವಿ ಬೇಟದಿಂ ಪೆಱತಿಲ್ಲನೆ ||
ಕಡುಗೂರ್ಪ ನಲ್ಲನನಗಲ್ದಿಱಲು ಪುಟ್ಟದಿ |
ರ್ಪೊಡೆ ಸುಖಂ ದೈವವಶದಿಂ ಪುಟ್ಟಿ ಕೂಡದಿ |
ರ್ದೊಡೆ ಸುಖಂ ಕೂಡಿಯಗಲ್ದೊಡೆ ಸಾವು ಸುಖವೆಂದು ವಿರಹ ವಿಕಳತೆ
ನೆರೆದ ಮಿಂಡರೊಳಧಿಕನೆಂದೊಡಲನಿಕ್ಕಿ ಬೋ | [ಗೊಂಡಳು||೨೪||
ಸರಸಿ ಕೊಳ್ಳೊತ್ತೆಯುಂ ತೆಗೆಯದವನರ್ಥಮಂ |
ತಿರಿದುಣಿಸುವನ್ನವೊಲಿದವಳಂತೆ ಮುನಿದು ಮುದ್ದಿಸಿ ಜಱೆದು ಕಾಲ್ವಿಡಿವುದು ||
ಹುರುಡಿಸುವುದೞುವುದೊಳಗಾದ ಹವಣಱೆದು ಗೋ |
ಣ್ಮುಱಿಗೊಂಡು ಹಣದಿಂಬುದೊಬ್ಬನೊಳಿರದಿರೆಂದು |
ತೆಱುವಲಿಗೆ ಕಲಿಸಿದಳು ಮುದಿಸೂಳೆ ಹುಲಿಮುಱಿಗೆ ಜೋಂಟಿಯುಂ ಕಲಿಸುವಂತೆ ||

ಇಂಬುಳ್ಳ ಸುಲಭನೆಂದೊಲಿದೆಯೆಲೆ ಮಗಳೆಯಾ |
ಡಂಬರದ ಚದುರಸವನೊಡವೆ ನಿರ್ಮಳಜಲಂ |
ತುಂಬಿದ ತಟಾಕದೊಳು ಹೊಳೆವ ಮಣಿ ಬೀಟೆಯೊಳು ಬಿದ್ದ ಹಣ ಗೆಜ್ಜೆ
ಲಂಬಿಸುವ ಹರಳು ಕಲ್ಲಿಯ ನೆಲ್ಲಿಯಿನ್ನವನ | [ಯೊಳಗೆ ||
ನಂಬದಿರು ನಚ್ಚದಿರು ಜೋಡೆಂದೊಡೆನ್ನ ಮಾ |
ತಂ ಬಗೆಯೆ ಕೈಕೊಳ್ಳೆಯೆಂದೊಬ್ಬ ಮುದಿಸೂಳೆ ತಱುವಲಿಗೆ ಹಲುಮೊಱೆ [ದಳು ||

ನೋಡದಿರ್ದಪೆನೆಂಬೆ ಕಣ್ ನೋಡದಿರದು ಮಾ |
ತಾಡದಿರ್ದಪೆನೆಂಬೆ ಬಾಯ್ಮಿಡುಕದಿರದು ನಗೆ |
ಮಾಡದಿರ್ದಪೆನೆಂಬೆ ಮುಸುಡು ನಗದಿರದು ಮೈಯೊತ್ತಿ ಕುಳ್ಳಿರೆನೆಂದೊಡೆ ||
ನಾಡೆ ತನು ಮೇಲ್ವಾಯದಿರದು ಸಂಚಂ ತೋಱಿ |
ಕೂಡೆನೆಂದೊಡೆ ಕಳೆಗಳುರವಣಿಸದಿರವೇನು |
ಮಾಡುವೆಂ ಮುನಿಸು ನೆಲೆಗೊಳ್ಳದನನಂ ಕಂಡೊಡೆಂದೊಬ್ಬ ಸತಿ ನುಡಿದಳು ||

ತಂಗೆ ತಲೆವೀದಿಯುಂ ತೊಡೆ ಅಡಿಗೆನಾಡು ಜಳೆ |
ಯುಂಗೆಯ್ದಲಂಕರಿಸು ಹೊಱಗಸಱಿವರು ಭೋಗ |
ಕಂಗವಿಸೆ ಬಹರೊಳಗೆ ಹಗೆಯಮಾಡದಿರು ಬಱಿಕನರು ಕಂಡೊಡೆ ನಗು
ಸಂಗಕ್ಕೆ ಹಿರಿಯರಂ ಕರೆ ಸೀರ ತಾ ಮುಱಿಕೆ | [ವರು ||
ಹಿಂಗದಿರು ಹಣವ ಹಡೆ ಮಿಗೆ ಮೊಗಸಿ ಜಾತಿಗು |
ಯ್ಯಂಗೆಳಸದಂತಿರೆಂದೆಳೆಯಳಿಗೆ ಕಲಿಸಿದಳು ತೊತ್ತನಾಡುವ ನೆವದಲಿ ||೨೯||

ಉಟ್ಟ ಸಿಱಿ ದಾಂಟಿದೊಡೆ ಕಚ್ಚುವುದೆ, ದೈವಮುಂ |
ಮುಟ್ಟಲಿಕೆ ಬೆರಳು ಹತ್ತುವುದೆ, ಬಱಿಸೀರ್ಗುಡಿಯೆ |
ಹೊಟ್ಟೆಯೊಡೆವುದೆ, ನೆಲನ ಮಾಱಪ್ಪೆ ನುಂಗುವುದೆ, ತಾಯ ವಧಿಸಿದನೆಂ
ನೆಟ್ಟನಾಂ ಸತ್ತವಳೆ, ಸೋದರಕ್ಕಳಸಿ ಕ | [ದೊಡೆ ||
ಣ್ಗೆಟ್ಟನೆನಲಿಟ್ಟವಳೆ ಸೂರುಱಿದು ನೆಱೆ ಬಾಯ |
ಕಟ್ಟೆ ಹಣನಂ ಕೊಳಲು ಕಲಿವುದೆಂದೊಬ್ಬ ಕುಂಟಣಿ ಮಗಳನೋದಿಸಿದಳು ||

ಅತಿಮುಗುದೆಯಪ್ಪೆನ್ನ ಮಗಳ ಕಾಮಜ್ವರೋ |
ರ್ಜಿತತಾಪವಾಱಿದೊಡೆ ಕಾಮನಂ ನೋಸುವೆನು |
ರತಿಯನರ್ಚಿಸುವೆ ಶಶಿಗರ್ಘ್ಯವೆತ್ತುವೆನು ಬೆಳುದಿಂಗಳಂ ಬೇಡಿಕೊಂಬೆ ||

ಲತೆಗೆ ನೀರೆಱೆವೆನೆಳಮಾವ ಬಲಗೊಂಬೆನು |
ನ್ನತನವಿಲು ಗಿಳಿ ಕೋಗಿಲೆಗೆ ಕುಟುಕನೀವೆ ಸ |
ನ್ನುತವಸಂತದೊಳು ಕಾಮುಚ್ಛತ್ರವಿಡುವೆನೆಂದಬ್ಬೆ ಹರಸುತ್ತಿರ್ದಳು ||೩೧||
ಮಸಿಗಪ್ಪಡವ ಪೊದೆದು ತುಱುಬಿಕ್ಕಿ ನರೆದಲೆಗೆ |
ಮುಸುಕಿಟ್ಟು ಬಿರ್ದ ಪೆರ್ಮೊಲೆಗಳಿಗೆ ಱವಕೆಯಂ |
ಸಸಿನೆ ಬಿಗಿದೆವೆಯುದಿರ್ದ ಕಣ್ಗೆ ಕಾಡಿಗೆಯಿಕ್ಕಿ ಸದೆಸೊಪ್ಪನಣಲೊಳಡಸಿ||
ಮುಸುಡುಗಾಣದ ತೆಱದಿ ಹಿಂದೆ ಸೊಡರಿಟ್ಟು ನೆಱೆ |
ನಸಿದ ರಾಗದಿ ಕೊಱೆತ ಹಾಡ ಬಗುಳುತ ಗಂಡು |
ವೆಸರು ಸುಱಿಯಲ್ಕೆ ಬಾ ತನ್ನಾಣೆಯೆಂಬ ಮುದುಪಾಱಿರ್ದಳೊಂದೆಸೆ
ನೊರಜುಗಣ್ಣಿನ ನಳಿದ ಮೂಗಿನೆಱಲುವ ತುಟಿಯ | [ಯೊಳು ||೩೨||
ಕುರುಟುವಲ್ಲಿನ ಕಱಿಯ ಕಱ್ಬಾಯುವ್ರೊಳಸಿರದ |
ಹಱಿದಲೆಯ ಬೆಂಗಡರ್ದ ಮುಸುಡ ಸುಬ್ಬರವಡೆದ ಗಲ್ಲ ಕೊಂಕಿದ ಕೊಡ
ಮುರುಟಿರ್ದ ಮೊಲೆಯ ಮೈಯಿ ಸೆಱೆಬಿಗಿದ ಹೊಟ್ಟೆ ತೆರೆ | [ಕೆಯ ||
ತೆರೆಗೊಂಡು ಸುಕ್ಕಿರ್ದ ತೊಗಲ ನಾಱುವ ಬಾಯ |
ನೊರೆ ಸೂಳೆಯಿರ್ದಳಾಮುಸುಕಿಟ್ಟುತಾನೊಂದು ಸಂದುಗೊಂದಿಯ ಮಱೆ
ಕಂಕಣಂಗಳ ತೋಳ ಬಂದಿಗಳ ಕಟಿತಟದ | [ಯೊಳು ||೩೩||
ಕಿಂಕಿಣಿಯ ನೇವುರದ ಮುದ್ರಿಕೆಯ ಕಳನಾದ |
ಮಂ ಕಟ್ಟಿ ಮನೆಯವರ ಮಱಹಿಟ್ಟು ಮುಸುಕಿಟ್ಟು ಪ್ರೊಱಮಟ್ಟು ಸುಱಿವ
ಶಂಕಿಸುತ ನೆೞಲ ದೆಸೆಯಂ ಸಾರ್ದು ನಿಲುವಳುಲು | [ಜನಕೆ ||
ಹಂ ಕೇಳ್ದು ಸರಿದೊಬ್ಬ ಜಾರೆ ಜಾರಂ ಪೇೞ್ದ |
ಸಂಕೇತದತ್ತಲಾರುಂ ಕಾಣರೆಂದು ನಲಿಯುತ್ತ ಬರಲೇನಾದುದು ||೩೪||
ನಡೆಗಂಡು ಕವಿವ ಕಳಹಂಸೆಯಂ ಜಡಿನ ನವಿ |
ನುಡಿಗೇಳ್ದು ಮುತ್ತುವರೆಗಿಳಿಗಳಂ ತೆಮಱೆ ಮುಸು |
ಕೊಡನಱಿಯೆ ತೊಡೆದ ಪರಿಮಳಕಳಿಕುಳಂ ಮುಸುಱೆ ಕುರುಳ್ಗಳಂ ಬಿಚ್ಚಿ
ಮುಡಿಗೆ ನವಿಲಡರೆ ಹೊದಿಕೆಯನು ಬಿಸುಟೋಡುವಡಿ | [ಮುಡಿವ ||
ಗಡಿಗೆ ದನಿಗೆಯ್ಯೆ ಕೋಗಿಲೆಯುಲಿದು ಲಜ್ಜೆಯಂ |
ಕಿಡಿಸಿ ಱಚ್ಚೆಗೆ ತಂದುವನ್ಯಾಯಕಿನ್ನೆಱಿದ ನರರೊಳಾವಂ ಹಿತವನು ||೩೫||

ಎೞಸಿ ಕಿಱಿಱಿಲೊೞು ಹಿತ್ತಿಲೊೞು ಕೊಟ್ಟಿಗೆಯೊತ್ತು |
ಗಳೊೞು ಭಿತ್ತಿಯ ಮಱೆಗಳೊೞು ಸಂದಿಯೊೞು ಗೊಂದಿ |
ಗಳೊೞಡಿದ ಮರಗತ್ತಲೆಯ ನೆಲೆಯೊಳೊಱಗಿರಲು ಮುೞು ತೆವರು ಕುಱಿ ||
ಎೞೆಯಮುಡಿ ನಸುಚುಂಬನಂ ಸೂಸದುಸಿರು ಸೊ | [ಯೆನ್ನದೆ ||
ಪ್ಪುಳಸುಱಿವ ಗಾಸಿ ನಡದುಗುರು ಸಡಲಿಸದುಡಿಗೆ |
ಗಳೊೞು ನೆರೆನೆರೆದು ಕತ್ತಲೆ ಹರೆಯೆ ಹರೆಯುತಿಹ ಜಾರಮಿಥುನವ
ತಡಪುತ್ತ ಹರೆದ ಮುಂದಲೆಯುಬ್ಬಿದ ತುಟಿಯ | [ಕಂಡನು ||೩೬||
ನೊಡಗಚ್ಚುತುಸಿರನೊಳದೆಗೆಯುತ್ತ ಬಾಗಿ ತೋ |
ಳ್ತೊಡೆಯ ನಖ ಹೊಯ್ದಗಂದೆಯನೊಱಸಿಕೊೞುತೇಱ್ಕೆಱಜೆಮುರನೂದಿ
ಮುಡಿಯರಳ ಚೆಲ್ಲುತ್ತಲಣಲ ತಂಬುಲವ್ರುಗುಱ್ದ | [ಕೊೞುತ ||
ನಿಡುಮುಸುಕನಿಡುತುರವಣಿಸಿ ನಡೆಯುತುಲಿಗೇೞು |
ತಡಿಗಡಿಗೆ ನಿಲುತ ಹಿತ್ತಲ ದಾರಿಯಿಂದೊಳಪುಗುವ ಜಾರೆಯರ ಕಂಡನು ||
ಅಱಿದ ಮುಡಿ ಹರೆದಳಕ ತೊರೆದ ತುಟಿ ನಸುತಿಲಕ |
ವೆಳಗೆಂಪುವಿಡಿದ ಕಣ್ಣಾಱದ ಬೆವರು ಪುದಿದ |
ಪುಳಕತತಿ ಹೊಯ್ವಳ್ಳೆ ಬಿಗುಹು ಕುಂದಿದ ಕುಚಂ ಜಿಳತ ಮುಖ ನಖಹತಿ
ವೊಳೆತ ಬಾಸುಳು ಹೊಯ್ಕ ಹೂಮಾಲೆಗಳ ಗಂದೆ | [ಯಾಲಿ ||
ಯಳವುಗೆಟ್ಟದಟು ಸಾಗಿಸುವುಡಿಗೆಗಳ್ವೆರಸಿ |
ತೆಳುಗಾಳಿಯಂ ಬಯಸಿ ಭದ್ರದೊೞು ಚರಿಸುವ ರತಾಂತಸತಿಯರ ಕಂಡನು ||
ಬಾಲೆ ಮುಗ್ಧೆ ಪ್ರೌಢೆಯೆಂಬ ಸತಿಯರ ಮನದ |
ಕಾಳಸವನಱಿದು ವಿಟರೊಡನೆ ಮಾಡುವ ಸಂಭ್ರ |
ಮಾಳಾಪದಿಂದ ಜನಿತಶ್ರಮದ ಬೆಮರನಾಱಿಸುವ ಕತದಿಂದ ಬಂದು ||
ಜಾಳಾಂದರದ ಪೊಱಗೆ ತನುಲತೆಯನ್ಯೈಗೆ ತೆಂ |
ಗಾಳಿಗೊಡ್ಡುವ ಕೋಮಲಾಂಗಿಯರನೊಲಿದು ಭೂ |
ಪಾಲ ನೋಡಿದನುಭವನಿಕೆಯುಮೂನೆಲೆಯುಕರುಮಾಡದೊಳಗಿರ್ದವರನು ||
ಪುದಿದ ಕಣ್ಮುಸುಕಿದ ಮುಖೇಂದು ಮುಡಿಗಟ್ಟು ಮುಸು |
ಕಿದ ಬೆನ್ನ ತೆಱಪು ಮೊಲೆ ಮುಸುಕಿದುರ ಬಾಸೆ ಮುಸು |
ಕಿದ ನಡುನಿತಂಬ ಮುಸುಕಿದವಿಪುಲಪೊಱಮಾಱುಮಂದಗತಿ ಮುಸುಕಿದಪದಂ ||

ಚದುರು ಮುಸುಕಿದ ಮಾತು ಸೊಗಸು ಮುಸುಕಿದ ಸರಂ |
ಸವನುಲಾಭರಣ ಮುಸುಕಿದ ಮೆಯ್ ವಿಳಾಸ ಮುಸು |
ಕಿದ ನಿಳವು ಮೋಹನಂ ಮುಸುಕಿದಾಕಾರವೆಸೆವಬಲೆಯರು ಕಣ್ಗೆಸೆದರು ||
ಹುರುಡು ಹೋರಟೆ ಹೊತ್ತು ಜೊತ್ತುಗನ್ನಂ ಗಮಕು |
ಪರಿರಂಭಣಂ ಚುಂಬನಂ ಕುಟಿಲಕುಂತಲ |
ಸ್ಪರುಶನಂ ತಾಡನಂ ಪ್ರಹಣನಂಗಳು ರತಿಪ್ರಾರಂಭದೊಳು ಪಸರಿಸೆ ||
ಕೊರಲ ಕೋಳಾಹಳವ ಲಾವುಗೆಯ ಕಂಠದ |
ಬ್ಬರದಲ್ಲೈವಡಿಮಾಡಿ ನಾನಾವಿಚಿತ್ರರತಿ |
ಕರಣದೊಳು ಜಾಣೆ ಮಯಣದ ಬೊಂಬೆಯಂತೆ ನಿಜಪುರುಷನಿಚ್ಛೆಗೆ ಸಂ
ಇಂದು ಕಾಂತನ ರನ್ಯಗೃಹದೊಳಗೆ ನಲ್ಲರೊಡ | [ದಳು ||೩೦||
ನೊಂದಿ ಮೆಱೆದಿರೆ ರತಿಕಳಾಕೇಳಿಯಿಂದಂ ಕ |
ಳಾಂದೋಳದಲಿ ಕೈವಿಡಿದು ಝಣತ್ಕಾರರವದಿಂದ ಮಾಳಿಗೆಗಳೊಳಗೆ ||
ಬಂದ ನಲ್ಲರ ನೆರೆದು ತನು ಪುಳಕದ ಶ್ರಾಂತ |
ಬಿಂದುಗಳ ನಾಱಲೆಂದಾಗೃಹಾಂಗಣದಲ್ಲಿ |
ನಿಂದಿರ್ದ ದಕ್ಷಿಣಾನಿಲನ ಬರವಂ ಬಯಸುವಬಲೆಯರು ಕಣ್ಗೆಸೆದರು ||
ಓರಂತೆ ನಲ್ಲನುೞಿದಜಲಿನಿಂದಂ ಬಾಷ್ಪ |
ಧಾರೆಗಳು ಸುರಿಯೆ ಕಾಮಿನಿಯುರುರದಲಿ ಮಣಿಯ |
ಹಾರದಂತೆಸೆಯೆ ಕಡುಚಿಂತೆಯಿಂದಂ ಕರಗಿ ಕರಕಪೋಲೆಯರಾಗಿಹ ||
ನಾರಿಯು ಮುಖೇಂದುವಂ ಪಿಡಿದೈದು ಹಡೆಯು ಕಾ |
ಳೋರಗನೊ ಪೇೞಿದಂತಲ್ಲಿ ಸರಸಿರುಹಮುಖ |
ವೈರಿಯುವಮುಕ್ಕರಲ್ವ ಕನ್ನೈದಿಲೊಯೆಸಿಸಿ ಲಲಿತಗಳು ಮೆಱೆದಿರ್ದಾವು ||
ಮಾಗಿಯಂ ಕಂಡ ಕೋಗಿಲೆಯಂತೆ ಚಿತ್ತದನು |
ರಾಗವಿಲ್ಲದೆ ಮೋನಗೊಂಡಿರುಳ ಬಳಸಿಗೊಳ |
ಗಾಗಿರ್ದ ಸರಸಿರುಹದಂತೆ ಕೊರಗಿದ ಮೊಗಂ ಸಸಿಯಂತೆ ತಾಪವಡೆದು ||
ಜೇಗದಿನಗಲ್ದು ಕಳವಳಿಸುವನುರಾಗದಿಂ |
ತಾಗಲಳವೞಿದು ಮನವೆರಸಿ ವಲ್ಲಭನಂ ವಿ | [ಕಂಡನು ||೩೩||
ಯೋಗವಂ ಶಯನದೊಳು ಕನಸಿನೊಳು ಕಂಡ ಚಳಚಿತ್ತೆಯಂ ನೃಪ

ಓಪನೊರ್ವಂ ಮುನಿದು ನಾಲ್ಕೆಂಟುದಿನ ತನ್ನ |
ಪ್ರೇಪಳಂ ಮೊಗನೋಡದಿರಲಾಱನೆಂದೊರ್ವಳ್ |
ಪೋಪನೆಂದಾಬೀದಿಯುಂ ಬರಲು ಕಂಡು ದೂತಿಕೆ ಮನೆಗೆಯೆಱ್ದುಯ್ಯಲು ||
ಓಪಳಾನಲ್ಲನಂ ಕಾಲ್ಗೆಱಗೆ ಪಿಡಿದೆತ್ತಿ |
ಚಾಪಳೆಯ ಕುಂದಿದಿರವಂ ಕಂಡು ಕರುಣೆಯಿಂ |
ಪಾಪಿಷ್ಠನಾನಿನ್ನ ಮನವ ನೋಡಲ್ಕೆಱ್ದೆನೆನುತ ಬೞ್ ಕೈಗೆಯ್ದನು ||೪೫||
ಲಲನೆಯುಂ ಪರ್ಯಂಕದೊಳಗೆ ಕುಳ್ಳಿರಿಸಿ ತಾಂ |
ನಲವು ಮಿಗೆ ಜೋಳೈಸಿ ಮೊಗಮೊಗವ ಸೋಂಕಿ ಕುಂ | [ಳುತ ||
ತಳವನುಗುರಿಸಿಯಶ್ರುಜಲಂಗಳಂ ತೊಡೆದು ಚುಂಬಿಸುತ ಬಿಗಿಯಪ್ಪಿಕೊ
ಮಲಯಜವಿಮಿಶ್ರಿತದ ಕಪ್ಪುರದ ಚಾಗವುಂ |
ವಿಲಸಸ್ಥಿಯಾದ ನಲ್ಲಳಗಿತ್ತು ಮುನಿಸುವಂ |
ತಿಳಿಪಿ ಪಕ್ಕವನಪ್ಪಿ ನೋಡುತ್ತ ನಡೆತಂದನರಿತಿಮಿರಮಾರ್ತಂಡನು ||೪೬||
ಜಾರನೊರ್ವಂ ಕುಱಿತ ಶೂನ್ಯಾಲಯದೊಳು ತ |
ಜ್ಜಾರೆಯು ಬರವ ಪಾರುತಡಗಿರಲ್ಕನ್ಯಸತಿ |
ಭೋರನೈತಂದು ತತ್ಪುರುಷನೆಂದಪ್ಪಿ ಚುಂಬಿಸುತಿರಲ್ಕೂಟದೊಳಗೆ ||
ನಾರಿಯುಱಿತಾರು ನೀನೆನ್ನಿನಿಯನಲ್ಲ ಬಿಡು |
ಸಾರೆಂದು ಗಜಱುತ್ತ ಶುನಕಸಂತತಿತ್ತ |
ಭೋರನೈದಿದಳು ಗಹಗಹಿಸುತ್ತ ಚೋರನಂ ಚೇಱಿಱಿದಂದದಿಂದ ||೪೭||
ನಡೆನೋಡಿ ನೋಡದಂದದಿ ಮುಗಿದ ಕಡೆಗಣ್ಣ |
ಮುಡಿಯಿಡುವ ನೆವದಿ ಮೊಲೆಗೆಲನ ತೋಱಿಸಿ ಮೇಲು |
ದಿಡುವ ಕೈ ನಿಱಿಯನಡಿಗಡಿಗೆಕಳೆದುಡುವ ತೆಱದಿಂ ಮನವನಱಿವ ಚದುರು||
ನುಡಿಸಿದೊಡೆ ನಸುನಗುವ ಕೆಲದೆಗೆದು ಮೊಗವ ನೀ |
ಗುರ್ಡಿಯುಲಿರೆಯುತ್ತ ಮೊನೆವೆರಸಿದಲಗಂ ತೋರ್ಪ |
ಕುಡಿಸಾಲಗೆಯೊಳೊಪ್ಪಿಯೊಪ್ಪಿದರು ಶಿಷ್ಟಜನಕಿಟ್ಟ ಬಲುಗಾಣದಂತೆ ||೪೮||
ಹಡಪದನುಲೇಪನದ ಕುಸುಮಮಾಲೆಗಳ ಕ |
ನ್ನಡಿಯ ಸಿರಿಮುಡಿಯ ಪಡಿಸಣದ ಹಂತಿಯ ಹಲವು |
ತುಡಿಗೆಗಳ ಸೀಗುರಿಯ ಚಾಮರಂಗಳ ಹದಿರ ಹಾಡುವಾಡುವ ಸ್ತ್ರೀಯರ||

ನುಡಿವ ಗಿಳಿಯೋದಿಸುವ ಹಂಸಮಿಥುನಂಗಳಂ |
ನಡೆಯಿಸುವ ನವಿಲ್ಗಳಂ ಕುಣಿಯಿಸುವ ವನಿತೆಯರ |
ನಡುವೆಸೆವ ನಾಯಕಸ್ತ್ರೀಯನೀಕ್ಷಿಸುತ ಭೂವಿಳಾಪತಿಯು ನಡೆತಂದನು||
ತುಂಗಕುಚಕಳಶಯುಗಳಂಗಳ ಕುರಂಗನಯ |
ನಂಗಳಿಭಕುಂಭಜಘನಂಗಳ ಮರಾಳಗಮ |
ನಂಗಳ ಸುಧಾಂಗಸಿಂ ಪೊಂಗುವೆಳದಿಂಗಳ ತೊಡರ್ದ ಕಂಗಳ ಬೆಳಗಿನ ||
ಭೃಂಗಕುಲನೀಲಾಳಕಂಗಳ ನಭಂಗಳ ಬೆ |
ಳಂಗಿಸುವ ಮಧುರವಚನಂಗಳ ಚುಣಪ್ರವಾ |
ಳಂಗಳ ಸಖಂಗಳ ಲತಾಂಗಿಯರೆನಿಪ್ಪ ಪಣ್ಯಾಂಗನಾಜನವೆಸೆದುದು ||೨೧೦||
ಹಸುವಿಂಗೆ ಮೇವು ಶಿಶುವಿಂಗೆ ನವನವನೀತ |
ಹಸಿದವಂಗನ್ನೋದಕಂ ದಾನ ಬೇಳ್ಪಂಗೆ |
ಹಸೆದಾನ ವಧುವಿಲ್ಲದವಗೆ ವೈವಾಹ ವಿಟರಾದವರ್ಗಂಗಸುಖವ ||
ಬೆಸಗೊಂಬುದರ್ಕೆಗೇ ಕುಱುಹೆಂದು ಮನೆಯ ಮುಂ |
ದೆಸೆವ ನೆಲೆಯುಪ್ಪರಿಕೆಗಳ ಬಾಗಿಲೊಳು ಮೆಱೆವ |
ಮಿಸುನಿಗಳ ಘಂಟೆಯಿಂದೆಸೆವ ಚೆಲುವಿಕೆಯನವನೀಶ ನೋಡುತ ಬಂದನು||
ಅಳಿಗಳಳಕಕೆ ನವಿಲ್ ಮುಡಿಗೆ ಶಶಿ ವದನಕು |
ತ್ಪಲ ಕಣ್ಗೆ ಬಿಂಬವಧರಕೆ ಮಾಣಿಕಂ ರದಕೆ |
ಬೆಳುದಿಂಗಳುಂ ನಗೆಗೆ ಕೋಕಿಲಂ ಧ್ವನಿಗೆ ತೆಂಬೆಲರುಂ ಸುಯಿಲ್ಗೊಪ್ಪುವ ||
ಗಿಳಿ ನುಡಿಗೆ ಲತೆ ನಡುಗೆ ಚಕ್ರವಾಕಂ ಕುಚ |
ಸ್ಥಳಕೆ ಕೃತಕಾಚಲ ನಿತಂಬಕ್ಕೆ ತಳಿರು ಪದ |
ತಳಕೆ ರೂಪಿಸಿದ ರೂಪಂ ತಾಳ್ದ ವನಿತೆಯರು ಸುೞಿದರೆಲ್ಲಾದೆಸೆಯೊಳು||
ಅಳುಪಿ ನೋಡಿದೊಡೊಂದು ಚಿಂತಿಸಿದೊಡೆರಡು ಸುಯ್ |
ಮೊಳೆಯೆ ಮೂಱು ಜ್ವರಂ ತೋಱಿದೊಡೆ ನಾಲ್ಕು ಮೆ |
ಯ್ಯುಱುಹಲಯ್ದುಟಮಂ ಬಿಡಲಾಱು ವಿಕಳವೆಡಗೊಳಲೇೞು ಸಲೆ ಮೂ
ತಳೆಯಲೆಂಟತಿಮೂರ್ಛೆ ಮೂಡಲೊಂಭತ್ತು ತನು | [ನವಂ ||
ವೞಿಯೆ ಹತ್ತಿವು ದಶಾವಸ್ಥೆಯಿವಱಿಂದಮಂ |
ತಿಳಿಯೆ ಕೇಳೆಂದೊರ್ಬ ಕಡುಜಾಣೆ ಪೇೞ್ ಬೋಳೈಸಿದಳು ಬಾಲಕಿಯನು||

ಕಾಲಕಾಲದೊಳವರ ಕೆಯ್ಯೊಡವೆಯುಂ ತಿಂದು |
ಸೂಳೆ ಸೂಳೆಯು ಮಗಂಗೀವುದೇಸಚ್ಚರಿಯೆ |
ಕೋಱಿಕೋಱಿಯನು ಬಯಸುವವಲ್ಲದೇನೊಲಿದು ರಾಜಹಂಸೆಯು [ನೋೞ್ಪುದೆ ||
ಖೂಳನಂ ಮೂಳನಂ ಮೋಟನಂ ಮುಕ್ಕರಿಕೆ |
ಕೀೞುಜಾತಿಯನು ಪುರುಳೞಿದ ಮೆಯ್ಯಾದೊಡಂ |
ಬೇೞ್ ಬೆಲೆಯಿತ್ತೊಡವಸಂ ಕಾಮನೆಂಬ ದುಶ್ಶೀಲೆಯರು ಕಣ್ಗೆಸೆದರು ||
ಪರಿಮಳಕೆ ಬಂದು ಮುಸುಱಿದ ನೊಣಂಗಳು ಕೂಡೆ |
ಹರವಸಂಬಟ್ಟು ಚರಿಯಿಸಲು ನೆರೆಯದೆ ಸೊಕ್ಕಿ |
ಮರುಳಾದುವೆಂದೊಡಿನ್ನುಡುವರನುನ್ಮತ್ತೆಯರನು ಮಾಡದೆ ಬಿಡುವುವೇ ||
ಕರಿಯ ಸೀಗೆಯ ತಾಳ ಲುಂಚೆಯೀಂಚಿಲ ಸಕಲ |
ತರುಧಾನ್ಯದಿಂದಾದ ಮದ್ಯಮಂ ಕುಡಿಕುಡಿದು |
ಮರುತಹತಿಯಿಂದ ಚಾಂಡಾಳಿಸುವ ಚಿತ್ತೆಯರನರಸ ನೋಡುತ ಬಂದನು ||
ಕಡುಸೊಕ್ಕಿ ಸೀರೆಯುಂ ಕಳೆದು ಕೌಂಕುಳೊಳಾಕಿ |
ನಡೆದು ಡೆಂಡಣಿಸುತ್ತ ತೊದಳಿಸುತ ಜೈಯುತ್ತ |
ದಡದಡಿಸಿ ಜೋಲುತ್ತ ಝೋಂಪಿಸುತ ಹಾಡುತ್ತಲಾಡುತ್ತ ಹಂಬಲಿಸುತ ||
ಎಡಹಿ ಕೆಡೆದೆದ್ದು ಡಱ್ರನೆ ತೇಗಿ ಬಾಱುಗೆ |
ನ್ನೊಡೆಯುಂ ಹರಿಶ್ಚಂದ್ರನೆಂದರಮನೆಯ ತೊತ್ತಿ |
ರೆಡೆಯಾಡಿದರು ಬೀದಿಬೀದಿಯೊಳು ಬೆಳೆದ ಹೆದ್ದುಱುಚೆಗಳ ಗಿಡುವಿನಂತೆ ||
ಆರುಟ್ಟು ಕಳೆದ ಹೂ ನಿನ್ನ ಬಾಯದು ಕೇತಿ |
ಮಾರಿಯೇ ಮೂಸಿಕೊಳು ಮುಱಿದಿತ್ತರವಳಿಗಿವ |
ರಾರಿತ್ತರವರಣ್ಣನದ ತಂದನೆಲ್ಲಿ ಚಪ್ಪರದ ಮೇಲಿಂದುನಾಳೆ ||
ನೀರಲ್ಲಯೆಲೆಯಲ್ಲ ನಾಯ ಮುಱಿಯದ ಸುರಿಯ |
ಬಾರದೇ ಕಿವಿ ಕಲಸಬಾರದಂತಾಗಿ ನೀಂ |
ಹಾಱುವಿತ್ತಿಯೆಂದು ಕಳುಗುಡಿದ ಮೂಳಿಯರು ನಗಿಸಿದರು ನೋಟಕ [ರನು ||
ಬೆಕ್ಕಸಾರಿಸು ಮನೆಗೆ ಮಿಕ್ಕ ಕೂಱಿಸು ಯಿಕ್ಕು |
ಹಿಕ್ಕು ಸೀರೆಯನು ಮುಂಡೆಯನುಡಿಸು ಪದಕವನು |
ಯಿಕ್ಕು ಮುಂಗೈಯೊಳಗೆ ಸೂಡಗವನೊಡೆಸುತ್ತಿ ಕಿವಿಯಲ್ಲಿ ತೂಟಿಸೆಂಬಳು ||

ಅಕ್ಕಿಯುಂ ಹೊಸುಯೆಣ್ಣೆಯನು ತೆಗೆ ಯೂಟಕ್ಕೆ |
ಮಿಕ್ಕ ಹರಿಯುಣವನುಡು ತೊಡು ಹಾವುಗೆಯನೆಂದು |
ಚೆಕ್ಕ ಹರೆಯದ ಬಾಲೆ ವಲ್ಲಭನನಗಲ್ದಜಲಿನಿಂದ ವಿಕಳತೆಗೊಂಡಳು ||೪೯
ಕಂಕಣವನೆಚ್ಚು ಕಾಡಿಗೆಯ ಕೈಯಲಿ ತುಡಿಸು |
ಕುಂಕುಮವನೊಡೆಯುಡಕೆಯುಂ ಹೊಸು ಹಣೆಯಲ್ಲಿ |
ಕೌಂಕುಳಲಿ ಯಿಕ್ಕು ಮೂಗುತಿಯ ನಾಸಿಕದಲ್ಲಿ ಸಾದ ತೊಡೆಯೆಂದೆಂಬಳು||
ಬಿಂಕದಿಂ ಮೆಱೆವ ಕಡೆಯವನು ತುಱುಬಿನೊಳಿಕ್ಕು |
ಭೋಂಕೆಂಬ ಅಳಿಗಳಂ ಕಾಲೊಳಗೆ ಕಟ್ಟೆಂದು |
ಶಂಕರಾರಿಯತಾಪದಿಂ ಮರುಳ್ಗೊಂಡಳೊಬ್ಬಳು ಮನೆಯುಮುಂದೆ ಮುಗುದೆ||
ಬಾಲೆ ಮಾಣಿಕವನಿಡು ಸಾದ ಕಿವಿಯಲಿ ಕೊಡು |
ಕಾಲ ಪೆಂಡೆಯವ ಮುಡಿ ಚೌರಿಯುಂ ಕಾಲ್ಗಟ್ಟು |
ಹಾಲ ಹರುವಿಯು ಬಿಗಿದು ನೆಯ್ದಿಲಂ ಬಿಸಿಮಾಡಿ ನೆಲಹಿನಲಿ ಸಂತವಿಡಿಸು ||
ಮೇಲುವತಿಁಯ ಪೂಸು ಪುಣುಗನೊಡೆ ತಾ ಕೈಯ |
ಕೀಲಕಡಗವ ಮೇಲೆ ಬಾಳೆ ಫಲವಿಕ್ಕೆಂದು |
ಮೇಲುನೋಡುತ್ತೊಬ್ಬ ಕಾಮಿ ಕುಸುಮಾಸ್ತ್ರಕ್ಕೆ ಗುಱಿಯಾಗಿ ನಿಂದಿ
ತರುಣಿ ಕತ್ತುರಿಯು ಕೊಯ್ಯರವಿಂದದುರುಳಿಯುಂ | [ರ್ದಳು ||೫೦||
ಬೆರಸು ಸಿರಿಗಂದಮುಂ ತಿಗುರಾಲವಟ್ಟಗಳ |
ಸರಪಿನವ ಬೀಸು ಕನ್ನಡಿಯು ಕುಳ್ಳಿರಲಿಕ್ಕು ಗದ್ದುಗೆಯ ಬೆಳಗೆಂಬಳು ||
ಮೊರೆವಳಿಯ ಸರಗಟ್ಟು ಮರುಗಮಲ್ಲಿಗೆಯ ಸೋ |
ಹರೆಗಿಳಿಯ ತುಱುಬು ಸುರಗಿಗೆ ಕುಡುಕನಿಕ್ಕೆಸುತ |
ಕರೆವರಾರೆಂದು ಕೋಗಿಲೆಯ ಸರಗೇಳ್ದು ಪರಿದಳುಮುಗ್ಧೆ ವಿರಹದಿಂದ ||೫೧||
ಜೂವನಸರೆ ಚಂದನವ ಕೊಯ್ ಗಿಳಿಗಳಂ ಬೆಳಗು |
ದೀವಿಗೆಯನೋವಿಸೋವರಿಗೆ ಸೀರೆಜೆ ವನದ |
ಮಾವ ಘನಳಿಸು ಹಸಿನ ಹಾಸಿಂಗೆ ಹಾಲನೆಱೆ ಹಂಸೆಯುಂ ಹಚ್ಚ ಪಡಿಸು ||
ತಾವರೆಯ ಹಣ್ಣ ತಾ ದ್ರಾಕ್ಷೆಯರಳಂ ನೀಡು |
ಬಾವಿಯುಂ ತೊಳೆಯಲೆಯ ಹುಗಗುಡದಿರೆಂದು ರಾ |
ಜೀವಮುಖಿ ವಲ್ಲಭನಗಲ್ದು ವಿಕಳತೆಯಿಂದ ಸುಚಿದಳಬಲೆಯುರ ಕೂತೆ ||

ಸನೆಬಿಜ್ಜಣಿಗೆಯ ತಣ್ಣೆಲರಿನಾಱದುಯೆನ್ನ |
ತನುತಾಪ ಮತ್ಪ್ರಿಯನ ಜಿಹ್ವಾನಿಲನೊಳಲ್ಲ |
ದನುಲೇಪದಿಂ ಮಾಣ್ಬುದೇಕಲ್ಲ ಬಿಗಿಯಪ್ಪು ವಜ್ರಲೇಪದೊಳಲ್ಲದೆ ||
ಮನದ ಡಗೆ ಪನ್ನೀರ ಶೈತ್ಯದಿಂ ಪರಿವುದೇ |
ಇನಿಯನಂ ನೆರೆದ ಘರ್ಮಾಂಬುವಿಂದಲ್ಲದಾ |
ವನಜಪಲ್ಲವವೇಕೆ ನಲ್ಲಕರಪಲ್ಲವದ ಸೋಂಕಾಗಬೇಕೆಂದಳು ||೬೩||

ಗುರುಭಜನೆಗಾಱದವಸತ್ತವಂ ಸತ್ತವಂ |
ಹರಪೂಜೆಮಾಡದಾತಂ ಮಾಡದಾತಸತಿ |
ಸಿರಿಯೊಳಗೆ ಧನವನಿಂಬಿಟ್ಟವಂ ಬಿಟ್ಟವಂ ಪುಣ್ಯಮಂ ಪರವನಿತೆಗೆ ||
ಮರುಳಾದ ಮಾನವಂ ಮಾನವಂ ತೊಱೆದವಂ |
ಪರಕುಲಮತಂ ಕೆಟ್ಟವಂ ಕೆಟ್ಟವಂ ಪಾಪ |
ಪರಸಾದವಂ ನರಕದೊಳಗಿೞಿವನೆಂದು ಗುರುಶಿಷ್ಯಂಗೆ ಬೋಧಿಸಿದನು ||೬೪||

ಇರಲು ಚಿತ್ರಿಣಿಯ ಸೇರುವೆಯಲ್ಲಿ ವಿಟಜಾಲ |
ಗರವಿ ಹಸ್ತಿನಿಯರೊಳು ಕೂಡುವ ವಿದೂಷಕರು |
ಸುರತದೊಳು ಶಂಖಿನಿಯರೊಡನೆ ಕೂಡುತ್ತಿರ್ಪ ಪೀಠಮರ್ದನರ ಗಡಣ ||
ಕರೆದು ಪದ್ಮಿನಿಯರಂ ಭೋಗಿಸುವ ನಾಗರೀ |
ಕರ ಸಮೂಹಗಳ ನಾನಾಬಂಧ ಮಾಧುರೋ |
ತ್ಕರಕೂಟದಬಲೆಯರು ಚಿತ್ರಿಸಿದ ನೆಲೆಮಾಡದೊಳು ತೋಱುತಿರ್ದರಂದು ||

ಕಮಲಮುಖಮೆಂಬ ರಣಮಂಡಲಂ ಬೆಮರೆ ವಿ |
ಭ್ರಮಭ್ರೂಲತಾಧನುರ್ಧನರ ಬಲುಹೞಿಯೆ ಸು |
ಭ್ರಮರಾಳಿಕುಂತಳಂ ತಾಱುತಟ್ಟಂಗೆಡೆಯೆ ಗಳರವದಿ ನೂಕಿ ದನಿಗೆ ||
ಸಮದೇಭಕುಂಭಕುಚವೆಂಬ ಕೊತ್ತಳವಸಡ |
ರ್ದಮರ್ದಪ್ಪಿಯಪ್ಪಿ ಕಾಲಾಳು ಮೇಲಾಳಾಗಿ |
ಸಮರತಿಯ ಸಂಭ್ರಮದ ಲಗ್ಗೆಗೊಳಗಾಗಿ ಯೌವನದುರ್ಗವಿಂತಿರ್ದುದು ||

ನಾಡೆ ಪುರಮೆಲ್ಲಮಂ ನೋಡಿ ಕೊಂಡಾಡಿ ಸುೞಿ |
ದಾಡಿ ಬಂದರಮನೆಯೊಳೊಡನೆಯ ಚಮೂಪರೊಡ |
ಗೂಡಿ ಮಜ್ಜನಭೋಜನಂಮಾಡಿ ಬೀೞ್ಕೊಟ್ಟು ಸಜ್ಜೆಯರಮನೆಯಸಾರ್ದ ||

ಮೂಡುವೆಳಸಿದ್ರೆಯು ಸುಖಕ್ಕೆಯ್ದೆ ಮನವನಿಃ |
ಡಾಡಿ ರವಿಕುಲಜನಿರುತಿರ್ಪ ಕಾಲದೊಳತ್ತ |
ಬಾಡಿತ್ತು ಚಂದ್ರಮನ ಸೊಬಗು ರಾತ್ರಿಯುಸತಿಯು ಜೀವನಂ ಹೊದಾದುದು||
ಓರಂತೆ ಕಾಡುವಳಿಯಂಡಲೆಗೆ ಕಂದಿದುವು |
ಕೈರವಂ ಹಗಲು ಹಸಿದಾಚಕೋರಂ ಕುಡಿದು |
ತೀರಿತ್ತು ಬೆಳುದಿಂಗಳುಳ್ಳ ಕಳೆಯಂ ಹಿಂಡಿ ಹಿಂಡಿ ಬಿಸುಟಂತಬ್ಜದ ||
ವೈರಿಯಿರೆ ಕಂಡು ಕಂಡುಮ್ಮಳಿಸಿ ಕಂದಿದುವು |
ತಾರಕೆಗಳೆಂದು ಕೇಳ್ವಬುದಿ ಬಡವಾದುದು ಮ |
ಹಾರಾತ್ರಿಯುಜೀವಾಗಲಿನ್ನು ನೆಲೆಗೆಡಲು ಕೆಡದಧಿಕರಾರೀಜಗದೊಳು ||೬೮||
ಸರಸ ಕಳೆಗಳನನಿಮಿಷರ್ಗಿತ್ತು ಬಡವಾದ |
ಪರಹಿತಾತ್ಮಕನೆಂದು ಮೆಚ್ಚಿ ಕೊಂಡಾಡಿ ಶಂ |
ಕರ ತನ್ನ ಮಸ್ತಕವನೇರಿಸಿದ ಮುಖದಿಂದ ಮೈಮರೆದು ಗುರುಸತಿಯನು
ನೆರೆದೊಡನ್ಯಾಯಕ್ಕೆ ಹೇಸಿ ಹೇವರಿಸಿ ಮುನಿ |
ದಿರಿಸದೀಡಾಡಿದೊಡಧಃಪಾತಕಕ್ಕಿಳಿಸ |
ನರವಿಂದವೈರಿಯೆನಲಪರಾಂಬುರಾಶಿಗಿಳಿದುದು ಸುಧಾಕರಬಿಂಬವು ||೬೯||
ಮೂಡಲರುಣೋದಯವದತ್ತಲಿತ್ತಂ ಕೂಡೆ |
ತೀಡಿತ್ತು ತೆಂಬೆಲರು ಪಂಚ ಮಾವಾದ್ಯಗಳು |
ನಾಡೆ ಮೊಳಗಿದುವು ಪೂರೈಸಿದುವು ಶಂಖಗಳು ಶಂಕರಗೃಹಾಂಗಣದೊಳು||
ಪಾಡುತಿರೆ ಗಾಯಕಿಯರರಮನೆಗಳಲ್ಲಲ್ಲಿ |
ನಾಡೆ ಪರಸುವ ಪುಣ್ಯಪಾಠಕರ ರವದೊಡನೆ |
ಮೂಡಿದಂ ರವಿಯುದಯಗಿರಿಯಗ್ರಭಾಗದೊಳಗರುಣಕಿರಣವ ಕೆದರುತ ||
ನಾಡೆ ಕೆಂಬೆಳಗನೊಳಕೊಳುತಿರ್ದುದಿಂದಾಶೆ |
ಯೋಡ ತೊಡಗಿತ್ತು ಸಾಗರದ ಪೆರ್ಚುಗೆ ಮೊಗಂ |
ಬಾಡ ತೊಡಗಿತ್ತು ಕೈರವಕುಳಂ ಹರುಷದ ವಿಕಾಸದಿಂ ಪರಿಮಳವನು ||
ತೀಡ ತೊಡಗಿತ್ತು ತೆಂಬೆಲರು ತಾವರೆಯರಲೆ |
ಕೂಡ ತೊಡಗಿತು ಚಕ್ರಮುದಯಗಿರಿಯೆಡೆಯಲ್ಲಿ |
ಮೂಡ ತೊಡಗಿತ್ತಿನನ ಬಿಂಬ ಜೀವರ ಜ್ಞಾನಜ್ಯೋತಿಯುದಯಿಸುವಂದದಿ||

ಬಡಬನುರಿ ಸಿಡಿಲು ಕೆಂಗಿಡಿಗೆದಱಿ ಮುಳಿದು ಜೆಂ |
ಬಿಡನೆ ಬಂವಪುದೊ ಹಿಮಕರನ ಮೇಲಲ್ಲದೊಡೆ |
ಯೆಡೆಗೊಂಡ ಕಾರಿರುಳ ವನಿತೆಯುರ ನಡುದಲೆಯೊಳೊಗೆದ ಬಱಸಿಡಿಲ
ಪೊಡೆಕರಿಸಿ ಕಾಲಭೈರವನು ಕಡೆಯುವ ಮಾಡೆ | [ಕೋಪ||
ಮೃಡನ ಭಾಳಾಕ್ಷದನಲನೊಳಿಟ್ಟು ಕಾಸಿ ಗಿರಿ |
ಯಡೆಗಲ್ಲ ಮೇಲಿಟ್ಟು ಕೆಂಡಗೆದಱಿಸ ಬಟ್ಟಿದೆನೆ ದಿನಪನೆಯ್ತಂದನು ||೨೧||

ಶಿತಿಕಂಠನಾಮಪೂರಿತವಾಕ್ಯ ಘೃತಸಿರೀ |
ಕ್ಷಿತಸಯನ ಮಣಿಮಕುಟಮಧ್ಯಬಿಂಬಿತವದನ |
ದತುಳಬುಧಮಂಗಳಾಶೀರ್ವಾದಶೇಷಾಕ್ಷತಾಕೀರ್ಣಜಯಮಸ್ತಕ ||
ವಿತತಗೋಸ್ಪರ್ಶಹಸ್ತಂ ಪುಣ್ಯಪಾಠಕ |
ಸ್ತುತಿಗೆಯ್ದ ವಾದ್ಯನಾದಾಲಗ್ನಕರ್ಣಸು |
ನ್ನತಸುಜನಸೀರಾಜಕಾಂತಿಮಯಕಾಯಸಂದುಪ್ಪವಡಿಸಿದನರಸನು ||೨೨||

ಮುದದೊಳೆದ್ದು ಶರೀರಧರ್ಮಮಂ ಚರಿಸಿ ಕರ |
ಪದಮುಖಪ್ರಕ್ಷಾಳನಂಗೆಯ್ದು ಪುಣ್ಯಸಂ |
ಪದದ ಸಂಧ್ಯಾವಂದನಂಮಾಡಿ ವಿಹಿತಾರ್ಘ್ಯಪಾದ್ಯಮಂ ನಿರ್ವರ್ತಿಸಿ ||
ವಿದಿತಶಿವಲಿಂಗಪೂಜಾಸುಖಮನೆಯ್ದಿ ನಿಯ |
ಮದ ದಾನಧರ್ಮಂಗಳಂ ಮಾಡಿ ರಿಪುರಾಜ |
ಮದಗಜವಿದಳನೋಗ್ರಸಿಂಹನುತ್ತುಂಗಸಿಂಹಾಸನಕ್ಕೆಯ್ತಂದನು ||೨೩||

ಇಂತು ಹರಿಶ್ಚಂದ್ರಕಾವ್ಯದೊಳ್

ಚತುರ್ಥಸ್ಥಲಂ

ಪಂಚಮಸ್ಥಲಂ

ಸೂಚನೆ॥ ಧಾರಿಣಿಯ ಜನದ ಹುಯ್ಯಲ ನಿಲಿಸಬೇಕೆಂದು ।
ಹಾರುದಿಗೆ ಹೊಱವಟ್ಟು ಮೃಗಪಕ್ಷಿಕುಲವ ಸಂ ।
ಹಾರಿಸುತ ಹೇಮಕೂಟದಿ ಗುರುವಿರೂಪಾಕ್ಷನಂ ಕಂಡನವನೀಶನು ॥

ಲೀಲೆಯಿಂದೋಲಗಂಗೊಟ್ಟು ಜಯಲೋಲಭೂ ।
ಪಾಲಕಂ ಕರೆ ಕರೆ ಸಮಸ್ತ ಬೇಂಟೆಯ ಶಬರ ।
ಜಾಲಮಂ ಖಗಹೃದಯಶೂಲಮಂ ಮೃಗದ ಕಣೆಗಾಲಮಂ ಜೇಗವೆಸುತ ॥
ಮೇಲೆ ಮೇಲಾಕ್ರಮಿಸಿ ಕರೆಸೆ ನಿಟ್ಟಿಸುವ ಕ ।
ಣ್ಣಾಲಿ ಕತ್ತಲಿಸೆ ಕತ್ತಲೆಯ ತತ್ತಿಗಳಂತೆ ।
ಹೋಲಿಕೆಗೆಹೊಱಗಾಗೆಬರುತಿರ್ದರವರು! ಕರ್ಕಶಬೇಡವಡೆಯೊಡೆಯರು ॥

ಕಾರೊಡಲು ಮೇಗಡರ್ದ ಮೈಯ್ನವಿರು ಕೆಂಗಲಿಪ ।
ತೋರಗರ್ಣ್ ಗುಜುಱುದಲೆ ಕೆಮ್ಮೀಸೆ ಬಳೆದ ಕಾ ।
ಳೋರಗನನೇಱಿಸುವತೋಳ್ನಾರಿಹೊಡೆದೊಡೆದಹುಣ್ಣು ಮೇಲಣಕೈಪೊಡೆ
ಪೇರುರಂ ಕಿಱಿಯನಡು ಕೊಬ್ಬಿದ ಪೆಗಲು ಪಿಡಿದ ।
ಕೂರಂಬು ದೀರ್ಘಧನುವಿಡಿದು ನೆರೆದುದು ಕಾನ ।
ನಾರಿಗಳೆನಿಪ್ಪ ಶಬರಾಧಿಪರ ಕರ್ಬೊಗೆಯಕಾಂತಿ ಸಭೆಯಂ ಮುಸುಕಲು॥೧

ಹೊಂಗಿ ಮಿಡುಕುವ ಮೀನ ಗುದಿಗಳಂ ಬೆಂದ ಸಾ ।
ರಂಗದೆಳವಱಿಯನೆರಳೆಯ ತೊಡೆಯನುಗ್ರಮಾ ।
ತಂಗದಂತಂಗಳಂ ಚಮರಿವಿಣಿಲಂ ಜೇನ ನಳಿಗೆಯಂ ಪೀಲಿವ್ರೋಱಿಯ ॥
ಸಿಂಗದುಗುರಂ ವ್ಯಾಘ್ರಚರ್ಮಮಂ ಕ್ರೋಡಶರ ।
ಭಂಗಳಂ ಪೂತಿಬೆಕ್ಕಂ ಹರಿಶ್ಚಂದ್ರರಾ ।
ಯಂಗೆ ಕಾಣಿಕೆಯನಿತ್ತಡಿಗೆಱಗುತಿರ್ದರಗ್ರದ ಬೇಡವಡೆಯೊಡೆಯರು ॥೨॥

ಹರನಂತೆ ಕಾಸನಾಂತಕರದ್ರಿಯಂತೆ ಕುಧ ।
ರರು ದಿವಿಜರಂದದಿ ವಿಶೇಷಭುಕ್ತರು ಶೀತ ।
ಕರನಂತೆ ದೋಷಿಗಳು ಧರ್ಮನಂತವಿನಾಶರಿನನಂತಿರಪಪದಸ್ಥರು ॥

ಹರಿಯುಂತೆ ವನವಾಸಿಗಳು ದಶಗ್ರೀವನಂ ।
ತಿರಲನಿಮಿಷಾರಿಗಳು ಚಾರುಮಂಗಳನಂತೆ ।
ನರಕುಜಾತರುಗಳೆನಿಸುವ ಕಿರಾತರು ನೆರೆದರವನೀಶನೋಲಗದೊಳು ॥೪॥

ಮದಹಸ್ತಿಯಿಱಿದ ಗಾಯಂಗಳ ವರಾಹನೆ ।
ತ್ತಿದ ಡೋಱುಗಳ ಮೃಗಾಧಿಸನುಗಿದು ಬಗಿದು ತೋ ।
ಡಿದ ಬಾದಣದ ಕರಡಿ ಕಾಱಿಬತ್ತಿದ ತೋಳ ಪುಲಿ ಹೊಯ್ದು ಜಱಿದಹೆಗಲ ॥
ಪದದಿ ಕೋಣಂ ಹೊಯಿದ ಹೋರ ಭೇರುಂಡನೆಱ ।
ಗಿದ ಗಂಟುಗಳ ಕಡವು ತುಱಿದ ಹಜ್ಜೆಗಳ ದೇ ।
ಹದ ಬೇಡನಾಯಕರು ನೆರೆದರು ಹರಿಶ್ಚಂದ್ರಭೂನಾಥನೋಲಗದೊಳು ॥೫॥

ಹರಿಣದಲ್ಲಣನೆಂಬ ಹುಲಿಬಾಕನೆಂಬ ಸೂ ।
ಕರಮೃತ್ಯುವೆಂಬ ಸಾರಂಗಮರ್ದನನೆಂಬ ।
ಮರೆಮಾರಿಯೆಂಬ ಕಾಱ್ಕೋಣಕಂಟಕನೆಂಬ ಭಲ್ಲೂಕಮಲ್ಲನೆಂಬ ॥
ಕರಿಸಿಂಹನೆಂಬ ಸಿಂಹಪ್ರಕರಶರಭನೆಂ ।
ಬರಿಶರಭಭೇರುಂಡನೆಂದೆಂಬ ಪರಿಪರಿಯ ।
ಬಿರುದುಲಿವ ಬಾವುಲಿಯ ಕುನ್ನಿಗಳು ನೆರೆದುವಂದವನೀಶನೋಲಗದೊಳು ॥೬

ಕಡವಿಗತ್ಯಾಸ್ವಾದಿಯೆಂಬ ನರಿಮೊಲಗಳಿಗೆ ।
ದಡಿವ್ರೊಯಿಲನೆಂಬ ಕರಡಿಯ ಗಂಡನೆಂಬೆಂಬ ।
ಬಿಡೆ ತೋಳಜಜ್ಝಾರನೆಂಬ ಹುಲಿದಿನಿಯೆಂಬ ಕುನ್ನಿಗಳನಾಯ್ದುಕೊಂಡು ॥
ಗಡಣದಿಂ ಬೇಡವಡೆಯೊಡೆಯರೆಲ್ಲರು ನೆರೆದು ।
ಪೊಡವಿಪತಿಯಾಹರಿಶ್ಚಂದ್ರರಾಯನ ಮುಂದೆ ।
ನಡೆ ಜೀಯ ತಡವೇಕೆ ಕಣ್ಗೆ ಹಬ್ಬವ ಮಾಡುವೆಡೆಯ ತೋಱುವೆನೆಂದರು ॥

ತಡಿಕೆವಲೆ ತಟ್ಟವಲೆ ಹಾಸುವಲೆ ಬೀಸುವಲೆ ।
ಕೊಡತಿವಲೆ ಕೊಳ್ಳುವಲೆ ತಳ್ಳವಲೆ ಬಳ್ಳವಲೆ ।
ತೊಡಕುವಲೆ ತೋಱುವಲೆ ತೊಟ್ಟವಲೆಗೂಟವಲೆ ಕಣ್ಣಿವಲೆ ಕಾಲುವಲೆಯ
ಸಿಡಿವವಲೆ ಸಿಲುಕುವಲೆ ಹಾಱುವಲೆ ಜಾಱುವಲೆ ।
ಬಡಿಕೆವಲೆ ಬಾಚುವಲೆ ಗಾಢವಲೆ ಗೂಢವಲೆ ।
ಮಡಿಕೆವಲೆ ಮುಂದಸಿನ ವಲೆಯ ಹೊಱೆಗಳ ಬೇಡನತ್ತೆ ನೆರೆದುದೇನೆಂಬೆನು ॥

ತಡಿಕೆ ಗಱೆ ಬಲೆ ಗಾಣ ಗೂಳಿ ಬಿಲು ಸರಳು ನಾಯ್ |
ಗಿಡುಗ ನೆರವುಡ್ಡಿ ಬೆಳ್ಳಾರ್ಪಟಂ ತೋರಿತ್ತು |
ಹಿಡಿಯೆರಳೆ ಸಿಂಗಗಟ್ಟಿಗೆ ಬೀಸುಗಣ್ಣಿ ಗುಗ್ಗರಿಯುರಳು ಕೊಂತ ಸುರಗಿ ||
ಕೊಡತಿ ಕರವತಿಗೆ ಕೂಱಿಕ್ಕವಡೆ ದಂಡೆ ಕೈ |
ಹೊಡೆಯಿಟ್ಟ ಗೂಡುಗಳು ಕತ್ತಿ ಬಡಿಕೋಲ್ ಕಲ್ಲಿ |
ಹಿಡಿದ ಹುಲಿಶರಭಭೇರುಂಡಸಿಂಹಸ್ತ್ರಕರವೆರಸಿ ನೆರೆದರು ಬೇಡರು ||೯||

ಸೇನೆ ನೆರೆಯಿತ್ತು ರಿಪುಕುಮುದಮಾರ್ತಂಡ ವಿ |
ದ್ಯಾನೂನತುಂಡ ಬಲಭರಿತದೋರ್ದಂಡ ಭೂ |
ಮಾನಿನಿಯ ಗಂಡ ವಿಜಯಾಂಗನೆಯ ಮಿಂಡ ರಣರಂಗಮುಖಕಾಲದಂಡ ||
ದಾನಿ ಜೆತ್ತ್ರೈಸೆಂಬ ಮಾತಿನೊಳಗೆದ್ದು ಸು |
ಮ್ಮಾನದಿಂ ಸತಿ ಪುತ್ರ ಮಂತ್ರಿಸಹಿತಡಿಯಿಟ್ಟು |
ಭಾನುಕುಲತಿಲಕಂ ಹರಿಶ್ಚಂದ್ರರಾಯನೇಱಿದನು ಮಣಿಮಯರಥವನು ||೧೦||

ಹೊಡೆದುವೈದಾಱೇೞು ಲಕ್ಷ ನಿಸ್ಸಾಳಂಗ |
ಳಡಸಿ ತುಡುಕಿದುವು ತಂಬಟಗಳಗಣಿತ ಮೌರಿ |
ಯೊಡೆಬಿಡದೆ ಚೀಱುವಱೆ ಲಕ್ಷ ಹೆಗ್ಗಾಳೆಗಳು ಚಿನ್ನಗಾಳೆಗಳು ಕೋಟಿ ||
ಎಡವಿಡದೆ ಡೋಳು ತಿತ್ತಿರಿ ಬೊಂಬುಳಿಗಳ ದನಿ |
ಗೊಡೆಯೆ ಬ್ರಹ್ಮಾಂಡ ನಾನಾವಾದ್ಯವಿತತಿಗಳು |
ಸಡಗರದೊಳುಲಿದುವೈ ವೈರಿಕುಂಜರಮೃಗಾಧಿಪನ ಕಟ್ಟಿದಿರೊಳಂದು ||೧೧||

ಬಱಲಿದುವು ಬಿರುದ ಸಾಱುವ ಕಹಳೆ ಮೊರೆದು ಬೊ |
ಬ್ಬಿಱಿದುವೇೞೆಂಟು ಸಾಸಿರ ಶಂಖ ಸಂಚಹದ |
ಹಱೆಗಳಱಚಿದುವು ತಂಬಟದ ಕುಡುಹಾಡಲು ಕದಂಬಶಬ್ದದ ರವದಲಿ ||
ಮಱುಗಿದನು ಸುರನಾಥನಗ್ನಿ ಬಸವೞಿದ ಯಮ |
ಬೆಱಗಾದ ನಿರುತಿ ಹಲುಗಚ್ಚಿದನು ವರುಣ ನಿ |
ಬ್ಬೆಱಗಿನೊಳಗಿರ್ದ ಮಾರುತ ನಿಂದ ಧನದನಂಜಿದ ಶೂಲಿ ಭೀತಿವಡೆದ ||೧೨||

ಕಡಿತಲೆಯ ಕಱಿಯ ಹರಿಗೆಯ ತುಳುವ ಪಡೆ ಕೂಡೆ |
ಸಡೆಯಿತ್ತು ಏಱು ನಿರ್ಬುದ ಕಠಾರಿಯ ಖಡ್ಗ |
ವಿಡಿದ ಕಾಲಾಳು ಮೂವತ್ತೆರಡು ಖರ್ವ ಜೊಂಕಣಿಯವರು ಸೂಱುಕೋಟಿ

ಎಡೆವಿಡದೆ ಬಿಲ್ಲ ಮೋಹರಿಸಿತ್ತೈಪದ್ಮ ಹುಲು
ವಡೆಯು ಲೆಕ್ಕಿಸಲು ಬಾರದು ಹರಿಶ್ಚಂದ್ರನೆ ।
ದ್ದೊಡೆನಿಲುವವಮುಂಡಿಸಿದೊಡೊಡನೆಮುಂಡಿಸುವರಾವುತರಪರಿಮಿತನೆರೆದುದು ॥
ಬೇಗದಲಿ ಮನಮೊದಗಲಾಱದತಿನಿರ್ಗಮದ ।
ಲಾಗಿಂಗೆ ಸಪ್ತವಾರಿಧಿ ನೆರೆಯುವವ ನಿಲಿಸು ।
ವಾಗ ವಸುಧೆಯು ಮೇಲೆ ನಿಲ್ಲವೆಂದೆಂಬ ಸಂದೇಹಕೊಳಗಾದ ತುರಗ ॥
ತಾಗುತ್ತ ಹಳಚುತೊಂದೊಂದ ಹಿಂದಿಕ್ಕಿ ಮೈ ।
ಲಾಗಿನಲಿ ಕುಣಿಯುತೋರಣವಾಗಿ ರಾವುತರು ।
ತೂಗಿ ನಿಲುಕಲುಹೋಗೆತೆಗೆಯೆನೆಲೆಯೊಳಗಿಪ್ಪವಾಜಿನೂಱಕ್ಷೋಣಿಯು ॥
ಸಬಳ ಬಲ್ಲೆಹ ಕೊಂತ ಕಕ್ಕಡ ತ್ರಿಶೂಲವಾ ।
ಪ್ರಬಲಗದೆ ಸುರಗಿ ಚಕ್ರಂ ಮುದ್ಗರಂಗಳಾ ।
ಸಬುದದಿಂದೊಗೆದ ಕಿಡಿ ಗಜಗಲಿಸೆ ನೆರೆದ ಕಾಲಾಳು ಮೂಱರ್ಬುದವಿರೆ ॥
ಶಬರಬಲ ಬೇಱೆ ಮೂಱಕ್ಷೋಣಿ ಬರಲು ಕಂ ।
ಡಬುಜಸಖಕುಲನ ಮನವುಬ್ಬಿ ಬೇಂಟೆಯ ನೋೞ್ಪ ।
ಸೊಬಗು ಘನವಾಯ್ತು ನೃಪನೆಂಬ ನಾಗರಿಕಂಗೆ ವಿಪಿನ ಮಾನಿಸಿಯುಮೇಲೆ ॥
ಪೊಡವಿ ಜಡಿಯಲು ದೆಸೆಗಳುಬ್ಬಸಂಬಡೆ ಫಣಿಯ ।
ಹೆಡೆ ಕೊರಲೊಳಳ್ಕೆ ಕೂರ್ಮನ ಬೆನ್ನು ತಗ್ಗಿ ಬಸು ।
ಱೆಡೆಯು ಹುಗೆ ಬೊಬ್ಬೆಗೊಟ್ಟಬ್ಬರಿಸಿ ನಗರಿಯಿಂ ಹೊಱಗೆ ಹೊಱಬೀಡ
ಘುಡುಘುಡಿಸಿ ರಥವನೊಲವಿಂ ನೂಂಕೆ ಬಲುಬೇಡ । [ಬಿಟ್ಟು ॥
ವಡೆ ಕಡುಗಿ ಹರಕರಿಸಿ ನಡೆಯೆ ಕೈಮಿಕ್ಕು ಹೇ ।
ರಡವಿ ಗೋೞಿಡಲು ದಾೞಿಕ್ಕಿದಂ ರವಿಕುಲಲಲಾಮಸರಿಕುಮುದದ್ಯುಮಣಿ ॥
ಜಾಲವಾಲಂ ನೆಲ್ಲಿ ಕನ್ನೆಲ್ಲಿ ಕಡವಡವ ।
ಹಾಲೆಯುಂ ಕುರವ ದಿಂಡಂ ತಂಡಸೆರನರಳಿ ।
ಬೇಲವರುಟಾಳ ಹುಲಗಿಲಯೆಲವ ನಂದಿ ಚಂದನ ಬಿಕ್ಕೆ ಕಕ್ಕೆ ತೞಿಯ ॥
ಹೊಲಿ ಮಾಲಿನಿ ಬನ್ನಿ ಹೊನ್ನೆ ಚೆನ್ನಂಗಿ ಕಿ ।
ತ್ತೀಱೆ ಹೆಜ್ಜಾಲ ಹೆದ್ದಾಳೆ ಹೆದ್ದುಂಬುರಿಂ ।
ಗಾಲಯುವೆನಿಪ್ಪ ನಾನಾ ಭೂಜದೊಗ್ಗಿನಿಂ ಕಾನನಂ ಕಣ್ಗೆಸೆದುದು ॥೧೨॥

ಅರಳಿಯುರುಟೊಳಗಸೆ ಗರುಗ ನಿಂಬಂ ಹಲಸು |
ಸಿರಿಸವಾಲಂ ಮತ್ತಿಯಿಪ್ಪೆಯಿಂಗುಳ ಬಾಱೆ |
ಕಿಱುನೇಱಿಲಿಬ್ಬಟ್ಟೆಯೆಲವಲಂ ಕೊಡಸಿಗಂ ಕಡಸಿಗಂ ಕರ್ಪೂರವು ||
ಸಿರಿವರಂ ಹೆಬ್ಬಿದಿರು ಕಬ್ಬಿದಿರು ಕಾವನ್ನಿ |
ತರಕೊಲ್ಲಿ ಕಾರೆ ಕಾತ್ರಱು ಕಂಚಿವಾಳಗಳ |
ಗುರುವು ನಾರಂಗ ಕೇಡಕ್ಕೆ ಗೊರಜೆಗಳು ವಟ್ಟೈಸಿ ದಿಟ್ಟೆಯೊಳೆಸೆವುವು||೧೮

ತಡಸು ಕೆಂದರಿ ತೆಂಗು ಸಂಗು ಕೇದಗೆ ಕದಳಿ |
ಯೊಡವುವ್ರೊದವಿದ ನೆಲ್ಲಿ ಚೆಲ್ಲ ಬಿಲ್ವರ ರುದ್ರ |
ನಡುವು ತಂಡಸು ತಪಸು ತಾರಿ ಕೆಂಗುಂ ತಿರುಳಿ ತಗ್ಗಿ ಕುಗ್ಗಿಲು ತುಂಬುರ||
ಬಿಡೆ ತೊಟ್ಟೆ ಹಾರಿವಾಳಂ ಹುಣಸೆ ಖರ್ಜೂರ |
ಜಡಿದೊಱಗುತಿಹ ಮಾವು ಬೇವು ಮಂದಾರಂಗ |
ಳಡಸಿ ತುಂಬಿದ ಚೆಲುವ ಭೂಜಂಗಳಿಂದ ಮಿಗೆ ಕಾನನಂ ಕಣ್ಗೆಸೆದುದು||೧೯

ಇರುಳ ಲೆಪ್ಪನ ತೊಡೆವ ಕಾಳೋರಗನ ಮನೆಯೊ |
ಕೆರಳಿ ವಡಬಾನಲಂ ತೆರಳ್ದ ವೀಧಿಯೋ ಸುರ |
ಗಿರಿಯೊಳಗೆ ಮೆಱೆವ ಹೊಗರುಗಳ ಹೊಸದಾರಿಯಿಂದಾದ ಪದದಿಂ||
ಹರಿವ ತ್ರಿಪುರವ ಸುಡುವ ಹರನ ಬಾಣವೊ ನೋಡ |
ಮೆಱೆವ ಧರೆಗತ್ತಲೆಯೊ ಕಜ್ಜಳದ ಬೆಟ್ಟವೋ |
ಹರಿವ ಮಱುದುಂಬಿಗಳ ಧಾಳಿಯೋ ಎನಿಸಿಯಾಕಾನನಂ ಕಣ್ಗೆಸೆದುದು ||೨೦

ಸಲೆ ಶಿವಮಯಂ ಶಿವಮಯಂ ಶಿವಮಯಂ ಸಮು |
ಜ್ಜ್ವಲ ಶಿಖಿಮಯಂ ಶಿಖಿಮಯಂ ಶಿಖಿಮಯಂ ನಿರಾ |
ಕುಲಶುಕಮಯಂ ಶುಕಮಯಂ ಶುಕಮಯಂ ಗಿರಿಯುಸಾನುವಿಂದೊಸರ್ದು
ಜಲಹರಿಮಯಂ ಹರಿಮಯಂ ಹರಿಮಯಂ ಮೃಗಾ | |ಹರಿವ ||
ಕುಲ ಮಧುಮಯಂ ಮಧುಮಯಂ ಮಧುಮಯಂ ಶಬರ |
ಬಲ ಬಾಣಮಯ ಬಾಣಮಯ ಬಾಣಮಯವಾಗಿ ಕಾನನಂ ಕಣ್ಗೆಸುದುದು

ದೇವಸಭೆಯಂತೆ ಮುನಿಸಭೆಯಂತೆ ಸರ್ಪೋಪ |
ಜೀವಿಯುಂದದೆ ಕೌಶಿಕಾಧಿಷ್ಠಿತಂ ಪಾಂಡ |
ವಾವಾಸದಂತೆ ಶೋಕನದಂತೆ ಬೆಳುದಿಂಗಳಂತರ್ಜುನಾಡಂಬರಂ ||

ಓವಿ ಸುರಸಭೆಯಂತೆ ಮದಹಸ್ತಿಯಂತೆ ಮೇ |
ಘಾವಳಿಗಳಂತೆ ವೃಂದಾರಕೋನ್ನತವಾಗಿ |
ಭಾವಿಸುವ್ರೊಡರಿಗೆನಿಸಿತತಿಭೀಕರಾಕಾರದಿಂದ ಘೋರಾರಣ್ಯವು || ||೨೦||
ಉಗುರು ತುಪ್ಪುಳು ನೊರಜು ನೊರೆಗೆಸಱು ಸೊಕ್ಕು ಸೊಗ |
ಡುಗಳೆಂಬ ಹಲವು ಹಜ್ಜೆಯುಸಱಿಸಿ ಕೊಳಲುವು |
ಬೈಗೆ ಬೇಡ ಬಲೆಯೊಡ್ಡಿ ತೋಹುಗೊಂಡೆರೆಗೆದಱ ಬೆಳ್ಳಾರ ಸುತ್ತಿ ಪರಿವ ||
ಬಿಗಿವ ಸಂಕಟ ಬೇಡ ಗಿಡುವೆಲ್ಲ ಮರನೆಲ್ಲ |
ನಗವೆಲ್ಲ ಹೊಲನೆಲ್ಲ ನೆಲವೆಲ್ಲ ದೆಸೆಯೆಲ್ಲ |
ಖಗಮೃಗದ ಭಯವಿಱಿಯಲೆಸಲೀಗ ಕೆಡಲಾಪವರುಳ್ಳರಹುದೆನಿಸಿತು ||೨೧
ಮಿಕ್ಕ ಸರುವಿಂಗೆ ತರುವಿಂಗೆ ಹಳ್ಳಕ್ಕೆ ಕೊ |
ಳ್ಳಕ್ಕೆ ಗಿಡುವಿಂಗೆ ಮಡುವಿಂಗೆ ಬೆಟ್ಟಕ್ಕೆ ಘು |
ಟ್ಟಕ್ಕೆ ಕುತ್ತಱ ಕೋಣೆಯಿಡುಕುಱಂದಿಡಿದಿರ್ದ ಮೆಳೆಯ ನಡುಸಾಳಲಿಂಗೆ||
ತೆಕ್ಕೆಗತ್ತಲೆಗೆ ಬೇಡರ ಪಡೆಗೆ ನಾನಾಮೃ |
ಗಕ್ಕೆ ನಾನಾಧ್ವನಿಗೆ ನಾನಾಭಯಂಕರ |
ಕ್ಕೆಕ್ಕವನೆಯಾನೆಂದು ಬೊಬ್ಬಿಟ್ಟು ಪೇೞ್ವಂತೆ ಗೊಱಟ್ಟದಾರಣ್ಯವು |೨೨||
ನಡೆವ ದನಿ ಹರಿವ ದನಿ ಕರೆವ ದನಿ ಬಿಲ್ಲಜೇ |
ವೊಡೆವ ದನಿಯಿಸುವ ದನಿ ಬೈವ ದನಿ ಕೂಗಿ ಬೊ |
ಬ್ಬಿಡುವ ದನಿಯಿಱಿವ ದನಿ ಮುಱಿವ ದನಿ ತಱಿವ ದನಿ ಬೇಗೆಯುರಿವ ||
ತುಡುಕುವದನಿ ತಿತ್ತಿರಿಯ ದನಿ ಹಱಿಯ ದನಿ ಸನ್ನೆ |
ಗುಡುವ ದನಿ ಖಗಮೃಗದ ಗರ್ಜನೆಯ ದನಿಯೊದಱ |
ಕೆಡೆವ ದನಿಗಳು ಬೆರಸಿ ಬರಲು ಘೋರಾರಣ್ಯವತಿಭಯಂಕರವಾದುದು ||
ಹಿಡಿ ನವಿಲನಿಱ ಹುಲಿಯನಿಡು ಮರೆಯ ಹಿಂಡ ದರಿ |
ಗೆಡಹು ಕರಿಯಂ ಱೊಪ್ಪವಿಡಿವ ಹಂದಿಗೆ ತಡೆಹು |
ಬಿಡು ನಾಯನೆಚ್ಚರಳೆಯಂ ಕಲ್ಲಲಿಕ್ಕು ಕೋಣನನು ಹೊಱಹುಗಲೀಯದೆ||
ಜೊಡೆಯುಡುವ ಮುಱಿಪಿಡಿದು ಕುತ್ತು ಕೋಣನನೊಯ್ಯು |
ನಿಡು ಮೊಲನ ಮರಳು ಸಿಂಹನ ಹಲವು ಬಲೆಗೆದಱ |
ನಡೆಗೆಡಿಸು ಪಕ್ಕಿಗಳನೆಂಬ ಬೇಡರ ಬೊಬ್ಬೆಯಿಂದಡವಿ ಗೊಱಟ್ಟುದು ||

ಹರೆದು ನಡೆ ಬಲೆಯು ಹಸರಿಸು ಹಜ್ಜೆಯಂ ನೋಡು ।
ಸರುಹ ಕಟ್ಟಲುಹನಾಲಿಸು ಕುತ್ತುಱಂ ಸೋಧಿ ।
ಸೆರೆಗೆದಱು ಬೆಳ್ಳಾರ ಬಿಗಿ ತೋಹಿನೊಳು ನಿಲ್ಲು ತಿಱಿಯುಂಬ ಬಿಡು ನಾ
ಕೊರಲ ಹಾಸವ ನೇಣ ಸಡಿಲವಿಡು ಸನ್ನೆಗೆಯ್ । [ಯ್ಗಳ॥
ಮರನೇಱು ಬಗೆ ಕುಣಿಗಳೊಳು ಕುನ್ನಿಯಂ ಹುಗಿಸು ।
ಚರಿತವೆಂದೊಬ್ಬರೊಬ್ಬರನಾಡುವಬ್ಬರದ ಬೊಬ್ಬೆಯುಗು ಘೋಷಿಸಾನುದು ॥

ಎರೆಯು ಚೆಲ್ಲುಲುಹಸಱು ಬಲೆಗೆದಱು ಹಜ್ಜೆವಿಡಿ ।
ಸರುಹ ಬಿಗಿ ತೋಹುಗೊಳು ತಡಿಕೆಗಟ್ಟಂಟುದೊಡೆ ।
ಹರೆದು ನಡೆ ಬೆಳ್ಳಾರಬೀಸು ಹೊದಱೊಳಗಡಗು ಮರನೇಱು ಸನ್ನೆದೋಱು
ದರಿಯನಗೆ ಕಿಱಿಯುಂಬುವಿಡಿ ಬೇಗೆಯಿಡು ಗಾಳಿ ।
ನರಿಯುಱಿದು ಹುಲಿಯು ಹಿಡಿಯೆರಲೆಯಂ ತೋಱೆಂದು ।
ಚರಿತವೆಂದೊಬ್ಬರೊಬ್ಬರನಾಡುವಬ್ಬರದ ಬೊಬ್ಬೆ ಹಬ್ಬಿತ್ತಡವಿಯು ॥೨೯॥

ಎರಳೆ ಸರಳಿಸಿ ಹೋದುದಿಲ್ಲಿ ಹಿಂಗಾಲೊದೆದು ।
ತೆರಳ್ದ ಮಣ್ಣಿದೆ ಸೊಕ್ಕಿದೆಕ್ಕಲಂಗಳು ಹೋನು ।
ಮೆರಡು ಕಟವಾಯಿಂದ ಸುರಿದ ನೊರೆಯಿದೆ ಕರಡಿ ತಣಿದಾಡಿ ಪೋದುವಿಲ್ಲಿ॥
ನೆರೆದಿಱುಹೆಗಳ ಹೊರೆಯೊಳೊಡೆದ ಹುತ್ತಿದೆ ಪುಲಿಯು ।
ಮರೆಯನೆೞೆಯಿತ್ತಿಲ್ಲಿ ಬಿಸಿನೆತ್ತರಿದ್ದುದೆಂ ।
ದರಸಿ ಬೆಂಬೞಿವಿಡಿದು ಹಜ್ಜೆಯಂ ನೋಡುತಿಹ ಶಬರರಂ ಭೂಪ ಕಂಡ ॥

ತೆಗೆದ ಮೊಗವಿಡಿದುಸಿರು ಹುರಿಯೊಡೆದ ರೋಮ ನಸು।
ಮುಗಿದ ಕಣ್ಣೆರೆಗಚ್ಚಿದೆಳಗಱುಕೆ ಮಱೆದ ಮೈ ।
ಬಿಗುಹುಗೆಟ್ಟಳ್ಳೆ ಡೆಂಢಣಿಸುವಡಿಯಾಲಿಸುತೆೞಲ್ವ ಕಿವಿ ರಾಗರಸದ ॥
ಸೊಗಸಪ್ಪಿದ ಚಿತ್ತವಳ್ಳಿರಿವ ಜನದ ಜೊ ।
ಬ್ಬೆಗೆ ಪೆದಱುತಿರ್ಪ ತನುವೆರಸಿ ಮರುಳಾಗಿ ಗೋ ।
ರಿಗೆ ಸಿಕ್ಕಿದೆರಲೆಗಳನಕಟಕಟ ನಿಷ್ಕರುಣಲುಬ್ಧಕರು ಕೆಡೆಯೆಚ್ಚರು ॥೩೦॥

ಧರೆಯು ಸರಳಿಸುವೆರಳೆ ಬಲುನಾಯ ಬಾಯಿಂದ ।
ನುರುಚಿ ಕೊಂಡೋಡುವ ಮೊಲಂ ತೋಹುಗಾಱರಂ ।
ಹಱಿದೆಱಗಿ ಕೊಲುವ ಕೋಣಂ ಕುಣಿಗೆಭಾರದೞಿಸುವಕರಿನೆಱೆನಾಟಿದ ॥

ಸರಳೊರಸಿ ಪೋದ ಮರೆ ಹೊಕ್ಕ ಜಾಯಿಲನ ಕಿ ।
ಬ್ಬರಿಗೊರೆವ ಹಂದಿ ಬಲೆಯಂ ಹುಗದ ಪಕ್ಕಿಯು ।
ಬ್ಬರವ ಕಂಡತಿನೊಂದು ನಿರಾಸೆಗಡಿದಾಬೇಡವಡೆಯೊಡೆಯನಿಂತೆಂದನು ॥
ಎಡೆಗುಡದು ಬೇಂಟೆ ದಿಗುಬಂಧನವ ಮಾಡು ಕಾ ।
ಡೊಡೆಯನಂ ನೋನು ಸೊಕ್ಕಿದ ಧೂಪವಂ ಬೀಸು ।
ನಡೆ ಕೋಣನೆಲುವನಾಯ್ವೆಂ ಮರೆಯ ಮೂಳೆಯಂ ಮುಱಿದು ದೂವಳ
ಅಡಗನುಗಿವೆನು ಸೊಕ್ಕಿದೆಕ್ಕಲನ ರಕ್ತವಂ । [ಪೆರಳೆಯ ॥
ಕುಡಿವೆನಾರಣ್ಯವೆಲ್ಲಂ ದಣಿಯಬೇಕು ಬಿಡು ।
ಬಿಡು ಬೇಗಳೆನುತ ಸಾಳುವನನಂತವ ಬಿಡಲು ಟೊಪ್ಪಿಗೆಗಳಂ ಕಳೆದರು ॥
ಗೋರಿವೇಂಟೆಯನಾಡಿ ಭೂವರಂ ತಿರುಗಿ ಕಾಂ ।
ತಾರದೊಳು ಮೃಗವ ನೆಲೆಗೊಳಿಸಿ ಮೇಘಾಳಿಯಿಂ ।
ದೂರದಿಂ ತೋಱಿತ್ತನೊಡ್ಡಿಕ್ಕಿ ಗಾಳಿಯಿಂ ಭಂಡಿಯಿಂದೀಱದ ಹುಲಿಯ ॥
ಹಾರಯಿಸಿ ತಲೆದಡವಿ ಕೊರಲ ಹಾಸವನುಗಿದೊ ।
ಡೋರಂತೆ ಕಂಡು ಹಸರಿಸಿ ಹತ್ತಿ ಹಣುಗಿ ನೆಲ ।
ಕೋರಂತೆಯಡಗಿ ತನ್ನನುವಿಂಗೆ ಜುಣುಗಿ ನಡೆದರೆ ಬೞಿಕಲೇನಾದುದು ॥
ಕುಸಿದ ತಲೆ ಹಣುಗಿದೊಡಲರಳ್ವ ಬಾಯ್ ಸುಗಿದ ಕಿವಿ ।
ಯುಸಿರಿಡದ ಮೂಗು ಮಱಿದೆವೆಯಿಕ್ಕುವುರಿಗಣ್ಣ ।
ಬಸಿಱೊಳಡಗಿದ ಬೆನ್ನು ನಿಮಿರ್ದ ಕೊರಲಡಿಗಡಿಗೆ ಗಜಬಜಿಸುತಿಪ
ಎಸೆಯೆ ಲಂಘಿಸಿ ನೆಲನೊಡೆದು ಪುಟನೆಗೆದು ಗ । [ಮುಂಡದ ॥
ರ್ಜಿಸುತ ಬರೆ ಹೆದಱಿ ಕಂಗೆಟ್ಟು ಡೆಂಥಣಿಸಿ ಸರ ।
ಳಸುವ ಹರಿಣಂಗಳಂ ಮೋದಿ ಮುಱಿದುವುಡಿಕೆಡಹಿದುವುದೀಹದಹುಲಿಗಳು ॥
ಇಡಿದ ಹುಲ್ಲೊಳಗೆ ಹುಲ್ಲೆಯನಟ್ಟಿ ಬರೆ ಕಾಲ ।
ತೊಡಕಲೊಲೆದಡೆ ಹಿಡಿದು ಬಿಡದಡಿಸಿದೊಡೆ ಮುರಿಗೆ ।
ಯೊಡೆದು ಬಿಡದಡಿಗಡಿಗೆ ಹೊಡೆವ ದಡಿವಲೆಗೆ ಸೈರಿಸದೆ ಮೊಳೆವೊಕ್ಕು ನೇಣ ॥
ಕಡಿಯುತಿರೆ ಹುಲಿಯೆನುತ ಮುದಿವೇಡನೈದೆ ಬೞಿ ।
ವಿಡಿದು ನೋಡಲು ಕಂಡು ಗಜಱಿ ಗರ್ಜಿಸಲು ಬಿ ।
ದ್ದಡಸಿ ಬಿಲ್ಲಂ ಬಿಸುಟ್ಟೊಱಲುತ್ತ ಚೀರುತ್ತಲೋಡಿದನದೇಂ ಪೊಗೞ್ವೆನು ॥

ಕರಿ ಸೀಳ್ದ ಕೋಣನೆಱಗಿದ ಹಂದಿ ಸೆಳೆದ ಕೇ |
ಸರಿ ಸಿಗಿದ ಹುಲಿ ಹೊಯ್ದ ಕರಡಿ ಕಾಱಿದ ಕಡವೆ |
ಯರೆ ತುಳಿವ ಸಾರಂಗವಿಱಿದ ಚಿತ್ರಕನಗಿದ ಎಯ್ಯೆಚ್ಚ ಖಡ್ಗಿ ಕಡಿದ ||
ಮರೆ ಕುತ್ತಿದೇಱುಗಳ ವೇದನೆಗೆ ಬಾಯ್ವಿಟ್ಟು |
ನರಲುತೊಱಲುವ ಕಿರಾತರನು ಮಲಗಿಸಿಕೊಂಡು |
ಮರನ ತಣ್ಣೆಳಲ ತಂಪಿನೊಳು ಸಾಗಿಸುವ ಶಬರಿಯರ ನೋಡುತ ನಡೆದನು||

ಓವಿ ಹೀಲಿಯನುಟ್ಟು ತಳಿರ ಮೇಲುದನುರಕೆ |
ತೀವಿ ಗುಂಜಾಭರಣಮಂ ತೊಟ್ಟು ಕೇದಗೆಯ |
ಹೂವಿನೆಸಱೋಲೆಯಂ ತಿರುಪಿ ಶಿಲೆಯೊರಳಕ್ಕಿ ದಂತದೊನಕೆಗಳ ಪಿಡಿದು||
ಸೂವಿ ಸಲ್ಲನೆ ಸೂವಿಸೂವಿ ಕಾಸನವಿಜಯ |
ಸೂವಿ ಬಲುಬಿಲುಗಯ್ಯ ಸೂವಿ ಮೃಗಕುಲಮಥನ |
ಸೂವಿಯೆಂದಲ್ಲಿಯ ಪುಳಿಂದಿಯರು ಪಾಡಿ ಬಿದಿರಕ್ಕಿಗಳ ಚಳಿಸುತಿಹರು |

[ಅಳಿಯಳಕಮಲ್ಲಾಡೆ ಮುಡಿ ಜಡಿಯೆ ಕಂಗಳ
ಕೈಲನನಪ್ಪಳಿಸೆ ನಳಿತೋಳು ಮೇಲಿಂಗೊರೆಯೆ |
ಕಳಶಕುಚವಲುಗೆ ಸೆಳೆನಡು ಬಳುಕುತಿರಲು ನೆರೆ ಬಿಚ್ಚೆ ಬಿದಿರಕ್ಕಿಗಳನು||
ಚಳಿಸುತುಂ ತಮ್ಮೊಪ್ಪ ಸಲ್ಲರಂ ಪಾಡುತುಂ |
ಎಳಸಿ ಮಸವಲ್ಲಭನ ಭುವನವಿಖ್ಯಾತಿಗಳ |
ಲಲನೆಯರು ಕಾಮದೇವಾ ಎಂದು ಪಾಡುತಿರ್ದರು ಪುಳಿಂದಿಯರು ನಲಿದು]||

ಬಿದಿರಕ್ಕಿಯನ್ನಟ್ಟು ಮದಮೃಗದ ಮಾಂಸಮಂ |
ಪದದೊಳಟ್ಟಱೆ ತೊಳಸಿ ಸಂಭಾರಮನ್ನಿಕ್ಕಿ |
ತುದಿವೆರಲಿನಿಂದುಪ್ಪ ಬಿದಿರಿ ಬೇಡರ ತಂಡಮೋರಣಂಗಟ್ಟಿ ಕುಳಿತು ||
ಸದಮದದೊಳುಂಡು ತಾಂಬೂಲಂಗಳಂ ಕೊಂಡು |
ಕದನಕರ್ಕಶಕಿರಾತರು ಮುಂದೆ ನಡೆಗೊಂಡು |
ಬೆದರಿ ಹೋಹೆರಳೆಗಳನಿಸುವ ಶಬರಿಯರ ನೋಡುತ್ತ ಭೂಪಾಲ ಬರಲು ||

ಹುಲಿಯ ಬೇಂಟೆಯನಾಡಿ ತಿರುಗಿ ನಡೆವಾಗ ಮುಂ |
ದುಲಿದು ಗರ್ಜಿಸಿ ಕೆದಱಿ ಧಿಂಕಿಟ್ಟು ಮುಟ್ಟದತಿ |
ಬಲಸಿಂಹಮಂ ಕಂಡು ಕಣ್ಮುಚ್ಚೆ ನೆರೆಮುಗ್ಗಿ ತಗ್ಗಿ ತಲೆಗುತ್ತಿಕೊಂಡು ||

ನೆಲಕಾಗಿ ಸುಂಡಿಲಂ ಪರಹಿ ಮೊಱಕಾಲಿಕ್ಕಿ ।
ಬಲವೞಿದು ಘೀಳಿಟ್ಟು ಬೆನ್ನಡುಗಿ ಗೂಡುಗೊಂ ।
ಡಲುಕಲಮ್ಮದೆ ಸುಕ್ಕಿ ಸುಗಿದು ಬೆಂಬಿದ್ದ ವಾನೆಗಳು ಬೞಿಕೇವ್ರೊಗೞ್ವಿನು
ಮಡುವಿಡುವ ಮದಸಮುದ್ರದ ಸೊಗಡ ಸೊನೆಗೆ ತಲೆ ।
ಗೊಡಹಿ ಪೊಱಮಟ್ಟು ರೌದ್ರಾವೇಶವಂ ತಾಳ್ದ ।
ಬಡಬವಹ್ನಿಗಳೊಎಂಗೆನಿಪ ಕೆಂಗಣ್ಣಿನಿಂದುದಿರ್ವ ತೊಂಗಲ್ಗಿಡಿಗಳ ॥
ತಡೆಯೆ ಪೊತ್ತಿದ ದಂತವಂ ಕರ್ಣತಾಳದಿಂ ।
ಕೊಡಹೆ ಭುಗಿಲೆಂದು ನೆಗೆದುರಿಗೆ ಸೈರಿಸದಡವಿ ।
ವಿಡಿನೋಡುತಿಹ ಗಜಂ ದಾವಾಗ್ನಿ ತನುವೆತ್ತಿ ಬೀದಿವರಿವಂತಾದುದು ॥೩೩
ಬಿಡೆ ನಿಲುಕಿ ಹಬ್ಬಿದೊಡಲೆತ್ತಿದ ಕೊರಲ್ ಕೆದಱ ।
ಜಡಿವ ಕೇಸರ ನಟ್ಟಕಿವಿ ಬಿಟ್ಟ ಬಾಯ್ತೆಗೆದ ।
ಕುಡಿವಾಲ ಬಾಗಿ ಮುಱಿದವ್ರುಡಿ ಕೆಡಹುವ ಮುಖಂ ಬಗಿಬಗಿದು ಬಾಸಿದ
ಬಡೆ ಕಾಱಿ ಹೀಱಿ ಹಿಂಡುವ ಕಂಠನೊರೆವ ಮೂ । [ಖಂಡದ॥
ಗಡಸಿ ಪೊಡೆದೆತ್ತಿ ತೋಡುವ ಮುಂದಣಡಿ ಕೈಯ ।
ಕಡೆಯುನೌಕಿದ ಹಿಂದಣಡಿ ಮೆಱೆಯೆ ಕರಿಗಳಂ ಕೆಡಹಿದುವು ಸಿಂಹಂಗಳು ॥
ಸಿಂಗವೇಂಟೆಯುನಾಡಿ ತಿರುಗಿ ರಿಪುಮಾತಂಗ ।
ಸಿಂಗನೈತಪ್ಪಾಗ ಸಿಂಗರದ ನವವಿಲಾ ।
ಸಂಗಳುಗ್ರಕ್ರೋಡ ರೌದ್ರತರವದನ ಕಾರ್ಮುಗಿಲೊಡ್ಡನೆಱೆಹೋಲುವ ॥
ಅಂಗರುಚಿ ಶರಭಬಲನುಂಚಳದನಾತಿಕ್ಷ್ಣ ।
ಣಂಗಳಂ ಲೋಹಿತಾಕ್ಷಿಗಳ ತಳಭುಜದ ಶೃಂ ।
ಗಾಗಳಂ(?)ಪೃಥುಳಕಂಧರವ್ರಗಲುಲಾಯಮಹಿಷಿಗಳಸಡುವ್ರೊಪ್ಪಿರ್ದುದು॥
ಮಿಕ್ಕು ಪಚ್ಚಳವೆತ್ತಿ ಮೆಯ್ಯ್ ನಿಮಿರೆ ಗುರುಗುರಿಸಿ ।
ಪೊಕ್ಕುಱಿಲ್ಲಾಣೆ ಮುಂಬಲ್ ಬಿಡಲ್ಕರೆನೊರೆಯ ।
ದಕ್ಕಿವಾಸಿಸಿ ಲೋಳೆ ಬೀಱೆ ಮೂಗಂ ಸುಗಿದು ನೆಗಹಿ ಪೇಚಕಕೆ ಮುಸುಡ॥
ಇಕ್ಕಿ ಕಿವಿಯೆಱಲೆ ಕಣ್ಣುರೆ ಮುಚ್ಚಿ ನೆಗೆದು ಮೇ ।
ಲಿಕ್ಕಿ ದನಿಗುಡುತ ಲಂಘಿಸುತ ಕಾಡೆಮ್ಮೆಗಳ ।
ತಕ್ಕೆಯೊಳು ಕೋಣನಿರೆಕಂಡುಕಬರಿಯುರುಬ್ಬೊಬ್ಬೆಕ್ಕಮುಗುಳ್ದಲಿಸಿದುವು॥

ದಿಟ್ಟಿಸುವ ಕಣ್ ಸಟ್ಟೆ ಕಿವಿ ಮುರಳ್ದ ಮುಸುಡು ಸುೞಿ |
ಕಿಟ್ಟು ಗುರುಗುರಿಪ ಮೂಗಲುಗದಂಗಂ ನೆಲನ |
ತಟ್ಟಿ ಜೆಱಿಯುವ ಪದಂ ನೆಗೆದಳ್ಳೆ ಬೆನ್ನಡರ್ದ ಬಾಲದಿಂ ರೌದ್ರಕೋಪ ||
ಹುಟ್ಟಿ ಕೋಡಂ ಬಡಿದು ತಸುವ ರೂಢಿಸಿ ಹಿಂಡ |
ಬಿಟ್ಟು ಱೊಯುಕಿಟ್ಟು ಹರಿಯಿತ್ತು ಕಾನನದೊಳರೆ |
ಯಟ್ಟಿ ವನದುರ್ಗಿಯಿದಿರಿಂ ಬರ್ಪ ಮಹಿಷಾಸುರನನದುಂ ನೆಱೆಪ್ರೋಲುತ್ತದು||
ಕಡಗಿ ಕೈಕೊಂಡಟ್ಟಿ ಮುಟ್ಟೆ ಬರೆ ತಮ್ಮೊಳೊ |
ಗ್ಗೊಡದೆ ಬಿಲ್ವಾಯ್ದು ತೆಗೆನೆಱೆದು ಕುಕಿಲಿಱಿದು ಕೆಡೆ |
ಕೆಡೆಯೆನುತಲಿದ್ದೆಸೆಗಳಿಂದೆಚ್ಚು ಶಬರಿ ಕೂರ್ಗಣೆಗಳಿಂದೊಡಲನೊಡೆದು ||
ಅಡಸಿ ತುಱುಗಿರೆ ಹೆಚ್ಚಿ ದೆಯ್ಯಮೃಗದಂತಿರ್ದ |
ನಿಡುಗೋಣನಂ ನೋಡುತವನಿಪತಿ ಬರೆ ಮುಂದ |
ಣಡವಿಯೊಳು ಸಾಳುವಂಗಳನು ಖಗವೇಂಟೆಗಾಲುಬ್ಧಕರುಬಿಡುತಿರ್ದುದು||
ಮಱೆವಿಡಿದು ಶಬರನಿಕರಂ ಕೊರಲ ಗಹಗಹಿಕೆ |
ಮೊಱೆಯೆ ಲಾವುಗೆ ಹರಡೆ ಗೌಜ ಟಿಟ್ಟಿಭ ಹೊಚ್ಚ |
ತುಱುವೆಗಣ್ಣಂ ಪವುಸೆ ರಾಗಧರನೆಂಬ ಪರಿಪರಿಯ ದಸಿಯಿಂದ ಕರೆಯೆ ||
ತುಱುಗಿ ನಭದೊಳು ಖಗಾನೀಕ ಮಂಡಳಿಸಿ ಬಿ |
ದ್ದೊಱಗಿ ಸಿಕ್ಕದೆ ಪೋಪವಂ ಕಂಡು ಸಾಳ್ವಂಗ |
ಳೆಱಕೆಗಳ ನೀವಿ ಸರಪಣಿಯುರ್ಚೆ ಜೊಪ್ಪರವನುಗಿದಿಡಲ್ಕೇನಾದುದು ||
ಕಾಗೆ ನವಿಲಿಬ್ಬಾಯ ಗುಬ್ಬಿ ಪಾರಿವ ಕೊಂಚೆ |
ಗೂಗೆ ಕಿಱಿಕುಳಿವ ಗಂಟೆಗ ಕಿರುಬ ಗೊರವ ಗಿರಿ |
ಜಾಗರಿಗ ಹರಡೆ ಹಸುಬಂ ಹಿಸುಣ ಹೆಬ್ಬಕ್ಕಿ ಗಿಡುಗ ಹೊಱಸುಗಿವ ಶಕುಸಿ||
ಮೂಗಿಯುರಿಗಣ್ಣ ಬೆಳ್ಳಕ್ಕಿ ವಲಿಯಂ ಪಿಟ್ಟ |
ಜೂಗಿ ಗೌಜೆಂಬಿವಂ ಸಾಳುವಂಗಳು ನೆಗೆದು |
ತಾಗಿ ಹೊಡೆಹೊಡೆದಿಳೆಯೊಳಿಕ್ಕಿದೊಡೆಪಕ್ಕಿಗಳನಱೆಗಱೆಯುವಂತಾದುದು
ಸಾಳುವನ ಬೇಂಟೆಯುಂ ನೋಡಿ ನಡವಾಗಲಿರು |
ಗೂಳಿ ಹೆಗ್ಗೂಳಿ ಕಿಱುಗೂಳಿಯೆಂಬೀತೆಱದ |
ಗಾಳಂಗಳಿಂ ಗೋರಿವಲೆಗಳಿಂ ಬಲೆಗಳಿಂ ಹಲಕೆಲವು ಜಾಲಂಗಳಿಂ ||

ನೀಳದಾರಂ ಬಿಗಿದ ಸಿಲುಕಂಬಿನಿಂ ಸೊಗಡು |
ಗೂಳುಗಳ ಮದ್ದುಗಳ ಮಸಕದಿಂದಂ ಸದಿಯು |
ಪಾಳಿಯೊಳು ಮೀನ್ಗಳಂ ತವಿಸುತಿಹ ಬೇಡರಂ ನೋಡಿದಂ ಭೂಪಾಲನು ||
ಕೊಱವ ಸೀಗಡಿ ಗೆಂಡೆ ಕುಚ್ಚು ಹಣ್ಣಲಂ ಬಗಸೆ |
ನಿಱಿಲು ಬಂಗಡೆ ಹಾವು ಬಾಳೆ ಜಱಿ ಕುಳಿಗ ಹೆ |
ಗ್ಗಱಿ ಗಿಣಿಗ ಮಣಿಗಣ್ಣ ಕೂಲಿ ಕೆಂದರಲು ಸಸಿಭಂಗ ಸವಿಮಾಯ ಗೊಱೆಳ್||
ಗಱಿ ಮೆಱೆವ ಕಾಗೆಂಡೆಯಯ್ಯರೆಗ ತೊಂಡಿ ಕೆಂ |
ದಱಿ ಹಳಲೆ ಹೇರಾವೆ ಹೇರೆ ಸಕ್ಕರಿಗ ನಂ|
ಕಱಿಮೂಗನೆಂಬ ಪರಿಪರಿಯ ಮೀಂಗಳ ಗುದಿಯ ತಂದರಂದೇವ್ರೊಗೞ್ವಿನು
ಬಿಳಿಚ ಚೆಪ್ಪಲು ಮಳಗು ಹೆಮ್ಮಳಗು ಬಿಳಿಯಾನೆ |
ಮಳಲಿ ಕೂಡಿಲು ಚಕ್ರ ಗೆಂಡೆಯಾನೆಗ ನವಿಲು |
ಯಿಳಿಯಂಬು ಕುಱಿದಲೆಗ ಹೆಮ್ಮೀನು ಕೆಮ್ಮೀನು ಮುಕ್ಕಣ್ಣ ನಾರೆಸಿಱಿಲು||
ಕುಳಚು ಸೂಚಿಗ ನಗಲು ಹೆಲ್ಲರಂ ಬಂಕುರುಂ |
ಹಳಲೆ ಕೆಪ್ಪೆಗಳೊಱಲೆ ಬೋಟೆ ಗಿಱಿಲುಗಳೆಂಬ|
ಹೊಳೆವಳಿಯ ಮೀನ್ಗಳಂ ತವಿಸುತಿಹ ಬೇಡರಂ ನೋಡಿದಂ ಭೂಪಾಲನು ||
ಕೆದಱಿ ಪೀಲಿಯ ಚಲ್ಲಣದಲಾಮೃಗಾಧಿಪನ |
ತಿದಿಯೆಕ್ಕವಡದ ಗರುಡನ ಗಱಿಯ ತಲೆ ಮೊಱೆಯೆ |
ಮದಗಜದ ಮುತ್ತಿನೆಕ್ಕಾವಳಿಯ ಹೊಮ್ಮಿಗಾಜಿನದ ಱವಕೆಯ ದಂತದ ||
ಹದವಿಲ್ಲ ಬೆನ್ನ ಬತ್ತಳಿಕೆಗಳ ಕೆಲದ ಚವ |
ರದ ಗೊಂಡೆಯದೊಳೆಸೆವ ಜವ್ವನದ ಶಬರಿಯರು |
ಪದೆದು ಕುಸಿದಡಸಿ ತೋಹುಗಳಲ್ಲಿ ಹರಿವ ಹುಲ್ಲೆಗಳಸಿಸುತಿರ್ದರಂದು||೪೮
ಮೃತ್ಯುವಗಿದುಱಿದಂತೆ ಬೇಡರಟ್ಟುಳಿಗಳೊಳು|
ಕುತ್ತುಜೊಳಗಡಗಿದ್ದು ಬಱಿಕೆದ್ದು ತಮತಮ್ಮ |
ಹೆತ್ತತಾಯನ್ನಱಸುತತ್ತಲಿತ್ತಲು ಪರಿದು ಬಾಯ್ವಿಡುವ ಮೃಗಶಿಶುಗಳ ||
ಸುತ್ತಿ ಕಿಱುಮಱಿಗಾಣದೊರಲಿ ಕೆಕ್ಕರಿಸಿ ಕೊರ |
ಲೆತ್ತಿ ಹೂಂಕರಿಸಿ ಗಿಡುಗಿಡುಗಳೊಳು ಹೊಕ್ಕು ಬಾ |
ಯ್ವಿಟ್ಟೊರಲುತಿರ್ಪ ಬಾಣತಿಮೃಗವ ನೋಡುತ್ತ ಬರುತಿರ್ಪನವನೀಶನು||

ಕೆರಳೆ ರೋಷಾಗ್ನಿ ಹೊಡಕರಿಸೆ ಹೊಗೆಸುತ್ತಿ ಮೆ।
ಯ್ಯಿರವು ಕಪ್ಪಾಗೆ ನಿಶಿಯೆಂಬ ರಕ್ಕಸನು ಹರ।
ವರಸುತನಕೆಯ್ಯ ಕುರುಪಾಟಗಾರದೆಯುಂದು (?) ಬಂದು ಮಾಯುದೊಳ
[ಎನುತ ಸಂಕುಲಕಿರಾತರು ಇನಕುಲಾಧಿಪಂ। [ರ್ಪನೋ ॥೩೦॥
ಘನಗರ್ವಗಜನೃಗೇಂದ್ರನಿಗೆ ಕರವೆತ್ತಿ ಮುಗಿ।
ದನುನಯದೆ ಬಿನ್ನಹಂಮಾಡಿ ನಿಂದಿರೆ ಹರಿಶ್ಚಂದ್ರ ಭೂವರನು ತನ್ನ॥
ಮನವ ಮಸೆವತಿರೋಷದಿಂದೊಗೆನು ತಲೆದೋಱು।
ವನಲನುರಿಯುಂ ಸಂತವಿಡಲಾಱದಾಶಬರ।
ರನುವನಾರಯ್ದಂಜದಿರಿಯೆನುತಲುಪಚರಿಸಿ ಧೈರ್ಯದಿಂ ತರಪರಿಸದೆ]॥೩೩
[ಕೊಲುಕೊಲ್ಲಿ ನೀವೆಲವೊ ಸೂಕರನ ಜೆಂಬಿಡದೆ।
ಸುಲಿ ತೊಗಲ ಹಿಡಿದು ಹೇರಿಟ್ಟಯಿಂದಿರಿ ಕರುಳ।
ನಲುಬು ಕಿತ್ತಡಗ ಹೆಗ್ಗುನ್ನಗಿಡು ಕುಡಿ ದಣಿಯೆ ರುಧಿರವಂ ಹೆದಱದದಕೆ॥
ಮಲೆತು ನಿಲು ಅದು ಮಲೆಯೆ ಮುಸುಡನೊಡೆ ಮೂಗ ಸೀ।
ೞಿಲುವ ಮುರಿ ಮಿಳ್ಳಿಸುವ ಕಣ್ಣನೊಡೆ ಕಾಲ ಬಿದಿ।
ರೆಲವೊಮೇಲ್ವಾಯುದ್ಧಬರಿಕೊರೆಕೊರಲಚದರದಿರಿಯೆಂಬರಭಸಕ್ಕೆದ್ದದು]॥
ಇದ್ದ ಬೇಡರನೈದೆ ಕೆಡಹಿದಡೆ ರಥನ ಮೋ।
ಲಿದ್ದು ಕೋಪಾಟೋಪದಿಂದೆ ಕರತಳವ ಮಾ।
ಱಿದ್ದಿ ಕೋದಂಡವಂ ಸೆಳೆದು ಶರನುಱಿಗೆಯು ಮಡಲಿಱಿದು ಕೈಹೊಡೆ
ತಿದ್ದಿ ನಾರಿಯು ನೀವಿ ಮಿಡಿದು ಬಾಗಿದ ಕೊಪ್ಪ। [ಯನು॥
ಸಿದ್ದೆಸೆಯನಾರೈದು ನೆಱೆ ಮೃತ್ಯುದೇವತೆಗೆ।
ಬಿನ್ನನಿಕ್ಕುವೆನೆಂದು ಭೂಪಾಲಕಂ ನುಡಿಯೆ ದಿಕ್ಪಾಲರಳವೞಿದರು ॥೩೫॥
ಎಡೆಯಾದ ನೀಡಡಿ ಶರೀರದೊಡಸತಿಬಾಗು।
ವಡದೆಡದ ಮೆಯ್ ನೆಗೆದ ಬಲದ ಕಟಿ ನಾರಿಯುಂ।
ತುಡುಕಿ ಕರ್ಣದ ಕಡೆಗೆ ಸೆಳೆದ ಕೈತುದಿನೆರಲು ಕೂರ್ಗಣೆಯು ಮೊನೆಯು
ನಡೆಮ ಗುಱಿಯುಂ ಹೊತ್ತ ಕಡೆಗಣ್ಣು ಮೆಱೆಯುತಿರೆ। [ಮೇಲೆ॥
ಬಿಡೆ ದೃಷ್ಟಿ ಮುಷ್ಟಿ ಶರಸಂಧಾನವನುವಾಗಿ।
ಕೆಡೆಕೆಡೆಯೆನುತ್ತ ಕೋಲ್ವಿಱಿದಿೞ್ಚನಬುಜಸೞಕುಲವನಧಿಕುಮುದಸಖ॥

ಗರಳಗೊರಲವನರಲ ಬಾಣಂಗೆ ಮುನಿದಂತೆ ।
ಯಿರುಳ ತಿರುಳಸ ಹೊರಳಿಗಾತರಣಿ ಕೆರಳ್ದಂತೆ ।
ಸರಲ ತೆಗೆದೆಸೆಯೆ ಮರಳಿತು ಕರುಳ ಸುರುಳಿಯೊಳು ಹೊರಳುತ್ತ ಬೀಳು
ಹುರುಳಱಿಯುತುರವೊಡೆದು ಸರಳುರ್ಚೆ ನರಳುತ್ತ । [ತ್ತಲು ॥
ತೊರಳೆಯಡಸುತ ಮೊಗನ ನೆಗಹುತಂಬಂ ಬಯಸು ।
ತುರು*ಳ್ವ ಕಂಬನಿಯಿಂದ ತರಳಚಿತ್ತದ ಹಂದಿ ಮರಳಿ ಕಾನನಕೈದಿತು ॥
ಪುದಿದ ಗಡುವಿನೊಳು ಮಡುವಿನೊಳು ಬೆಟ್ಟದೊಳು ಗ ।
ಟ್ಟದೊಳು ಸರುವಿನೊಳು ದರುವಿನೊಳು ಹಳ್ಳದೊಳು ಕೊ ।
ಳ್ಳದೊಳು ಬೆಳೆದಿಱುಬಿನೊಳು ತಱುಬಿನೊಳು ಸಂದಿಯೊಳು ಗೊಂದಿಯೊಳು
ಇದಿರೊಳೊಡ್ಡಿದಮರಂ ಮುಱಿಯೆ ಮೆಳೆಯೊಡೆಯೆ ಮೃಗ[ಹೊಕ್ಕು ಮಿಕ್ಕು
ಬೆದಱಿ ಕೆದಱಿ ಧರೆ ಕಱಿದೋಡುವೆಕ್ಕಲನನ ।
ಟ್ಟಿದನಬುಜಸಖಕುಲಲಲಾಮನರಿಭೂಪಾಲದರ್ಪಸರ್ಪಮಯೂರನು ॥೩೮॥
ಅಂಬಿನಳವಿಗೆ ಸಿಲ್ಕುವಂತೆ ಸುರಗಿಯೊಳಿಱಿಯು ।
ಲಿಂಬುಗುಡುವಂತಳ್ಳೆ ಹೊಯ್ದು ಬಱಿಲ್ವಂತೆ ಸ ।
ತ್ವಂಬೋಗಿ ಸಡೆಗೆಟ್ಟು ನಿಲುವಂತೆ ಧರೆಯೊಳಗೆ ಬಿದ್ದುದೆಂಬಂತೆ ಹಲವ ॥
ನಂಬಿಸುತ ಮೋಹಿಸುತ ಹೋಹ ಕಾಡೆಕ್ಕಲನ ।
ಬೆಂಬಱಿಯೊಳೊಂದೇ ವರೂಥದಿಂ ಭೂಪನಿಕು ।
ರುಂಬದಲ್ಲಣ ಹರಿಶ್ಚಂದ್ರರಾಯಂ ಪರಿದನಾಯಾಸಮಂ ಬಗೆಯದೆ. ॥೩೯॥
ಧರೆಯೊಳಗೆ ವೇಗದಿಂ ಹರಿಣನತ್ಯಧಿಕವಾ ।
ಹರಿಣನಿಂ ಮರುತನುದ್ದಂಡವಾಹರಿಣನಿಂ ।
ಮರುತನಿಂ ಸರಲಧಿಕತೀವ್ರವಾಹರಿಣನಿಂ ಮರುತನಿಂ ಸರಲಿನಿಂದ ॥
ವರದೃಷ್ಟಿಯಧಿಕವಾಹರಿಣನಿಂ ಮರುತನಿಂ ।
ಸರಲಿನಿಂ ದೃಷ್ಟಿಯಿಂ ಮನವುಗ್ರಸತ್ವವಾ ।
ಹರಿಣನಿಂ ಮರುತನಿಂ ಸರಲಿನಿಂ ದೃಷ್ಟಿಯಿಂ ಮನದಿಂ ರಥಾಶ್ವ ಮಿಗಿಲು ॥೪೦
ಬಿಱಿವಿಡಿದು ಬಱಿಜೆದಂಬಿಂ ಮುಂದೆ ಹರಿದು ವನ ।
ದೊಳಗಡಗಿ ಮಾಯವಾದೆಕ್ಕಲನನಲ್ಲಿ ।
ಸೋದಱಿಸಿ ಕಾಣದೆ ಮನಂನೊಂದು ಮತಿಯುಡುಗಿಡಗೆಗೋಱಿಕಟ್ಟಾಸಱು

ಮೊಳೆತು ಬಾಯಾರ್ ತನು ಬೆಮರಿ ಮುಖ ಬಾಡಿ ರವಿ |
ಕುಲಶಿರೋಮಣಿ ಹರಿಶ್ಚಂದ್ರರಾಯಂ ಕಂಡ |
ನಳವಿಯೊಳು ನಾನಾವಿಶೇಷವಿಭವಂದಳೆದ ಮಂಗಳತಪೋವನದೊಳು ||೪೧||

ತಳೆದ ಪದ್ಮಾಸನಂ ಸುಗಿದ ತೊಗಲಂದದಿಂ |
ಮೊಳೆತ ಹುತ್ತೊಳಗಖತ ಸುಯ್ ನವದ್ವಾರದಿಂ |
ಬೆಳೆದ ಕುಜಲತೆ ಕೆಲಕ್ಕೊಲೆವಡೋವಿಗೆ ದೇಹದೊಳಗೆಯ್ದೆ ಬೇದಿವರಿದು||
ಸುಳಿವೆರಲೆ ಫಣಿ ನಕುಲ ಮೂಷಕಂ ನೆಲನನೊಡೆ |
ದಿಳಿವ ಜಡೆ ನಖಸಂಚವಳಿವ ನಿಟ್ಟೆಲು ದರ್ವ |
ವಳಿವನಯನಂ ಮೊಳೆವ ಘೋರತಸದಚಲಿತರನೀಕ್ಷಿಸಿದನವನೀಶನು ||೪೨||

ಮಿಗೆ ವಾತಗುಲ್ಮಪರಿವೃತರಾಗಿಯುಂ ನಿರೋ |
ಗಿಗಳು ಪರಸತಿಗತಿಪ್ರಿಯರಾಗಿ ಮತ್ತೆ ಶೌ |
ಚಿಗಳುಂ ಸ್ತ್ರೀನಿಕರಸರ್ವಾಂಗರಾಗಿಯುಂ ಬ್ರಹ್ಮಚಾರಿಗಳು ಜಗದ ||
ಬಗೆಯೆ ಕರ್ಣಾಂತಾಕ್ಷರಾಗಿಯುಂ ಸೂಕ್ಷ್ಮದೃ |
ಷ್ಟಿಗಳು ಕುಲಗೋತ್ರಮಧ್ಯಸ್ಥಳಗಳಾಗಿಯುಂ |
ಸೊಗಯಿಪೇಕಾಕಿಗಳೆನಿಪ್ಪ ಮುನಿವೃಂದಮಂ ಕಂಡನಂದವನೀಶನು ||೪೩||

ಕಂದಮೂಲದ ಕೀಳ್ವ ಪೂಗೊಯ್ವ ಕೃಷ್ಣಾಜಿ |
ನಂದಳೆವ ರುದ್ರಾಕ್ಷಿ ಕೋವ ವಲ್ಕಲವಸನ |
ವೃಂದಮಂ ತೊಳೆವ ಮಿಸುಪೊದಾರನಂ ಬಿಗಿವ ಮೌಂಜಿಮೇಖಲೆಗಟ್ಟುವ||
ಬಂದಿ ಭಸಿತವನಿಡುವ ಯಜ್ಞೋಪವೀತಮಂ |
ಬಂಧಿಸುವ ಜಡೆಗೆ ಸುಂಕಿಡುವ ಸಮಿತಂ ತಪ್ಪ |
ಹೊಂದವ ಮುನೀಶ್ವರಕುಮಾರರಂ ಕಂಡು ಹರ್ಷಂದಳೆದನವನೀಶನು ||೪೪||

ಸಿಂಗದೊಡನೆಕ್ಕೆಗಟ್ಟುವ ಕರಿಗಳಂ ಹುಲಿಯು |
ಜಂಗುಳಿಯನೀಡಿರಿವ ಹರಿಣಂಗಳಂ ಹಲವು |
ಮುಂಗುರಿಯ ಮೇಲೆ ತಲೆಯಿಂ ನೀಡಿ ನವಿಲ ಮುದ್ದಾಡಿಸುವ ಸರ್ಪಂಗಳ||
ಕಂಗೆಯ್ದು ಸಾರಮೇಯಂಗಳೊಡನಾಡುವ ಕು |
ರಂಗಶಿಶುವಂ ಕಾಡ ಬೆಕ್ಕನಟ್ಟುವ ಮೂಷ |
ಕಂಗಳಂ ನೋಡಿ ಬೆಱಗಾಗುತುಂ ನಡೆತಂದನರಿತಿಮಿರಕುಲಸಚಿವನು ||೪೫||

ವಿದಿತವೇದಪ್ರಘೋಷದ ಪುರಾಣಪ್ರಸಂ |
ಗದ ತರ್ಕ ಮಂತ್ರಸಂವಾದದಾಗಮವಿಚಾ |
ರದುಪನಿಷದರ್ಥಶ್ರವಣದ ಧರ್ಮಸ್ತವದ ಸ್ತೋತ್ರಪಠನಪ್ರಕರದ ||
ಮೃದುಕಾವ್ಯಲಕ್ಷಣಾಲಾಪದ ಶಿವಾರ್ಚನಾಂ |
ಗದ ಘಂಟಿಕಾರವದ ನಿತ್ಯಹೋಮಸ್ವಧಾಂ |
ತ್ಯದ ನಿಖಿಳಸಂಭ್ರಮಕೆ ಬೆಱಗಾಗುತಿರ್ದಂ ಹರಿಶ್ಚಂದ್ರಭೂನಾಥನು ||೪೬||
ಫಳಭಾರದಿಂದೊಲೆದು ತೂಗಿ ಬಾಗುವ ಮರಂ |
ಗಳ ಕೆಳಗೆ ತುಱುಗಿ ನಳನಳಿಸಿ ಬೆಳೆದೆಳಲತೆಯ |
ತಳಿರ ತಿಳಿಗೊಳದ ಪುಳಿನಸ್ಥಳದ ಕಮಲಕೈರವದ ತನಿಗಂಪುವೆರಸಿ ||
ಸುಳಿವ ತಣ್ಣೆಲರ ತಂಪಂ ಕಂಡು ಮಂತ್ರಿ ಭೂ |
ತಳನಾಥ ಬಿಡುವೊಡಿದು ತಾಣೆಂದು ಬಿನ್ನೈಸೆ |
ಜಲಜಸಖಕುಲನಿಳಿದನಂದು ರಥವಂ ಪಟ್ಟದಂಗನೆ ಕುಮಾರಸಹಿತ ||೪೭||
ಬಳವಳಿದ ರಥದ ತುರಗಂಗಳಂ ಬಿಟ್ಟು ಶೀ |
ತಳವಾರಿಯಂ ತೋಱಿ ಮೆಯ್ದೊಳೆದು ಲಲಿತಶಾ |
ಡ್ವಳವನೊಲವಿಂ ಕೊಯ್ದು ಮುಂದಿಟ್ಟು ಕಟ್ಟಿ ಪ್ರಧಾನ ಸಟ್ಟಡವಿಯೊಳಗೆ ||
ಬಳಿವಿಡಿದು ಬಂದ ಕಟಕವನೆಯ್ದೆ ಬಿಡಿಸಿ ಭೂ |
ತಳಪತಿಗೆ ಕೈಗೊಟ್ಟು ನಿರ್ಮಳಸರೋವರದೊ |
ಳೞುಪಿ ಶೈತ್ಯೋಪಚಾರಂಗಳಂ ಮಾಡಿದಂ ಡಗೆ ತೊಲಗಿ ವಿಶ್ರಮಿಸಲು ||
ಜಲಜದೆಳೆಯೆಲೆಗಳಂ ಮೊಗೆಮೊಗೆದು ತೆಗೆದು ನಿ |
ರ್ಮಲಜಲವನೀಂಟಿ ಪುಳಿನಸ್ಥಳದ ಮೇಲೆ ಕೆಂ |
ದಳಿರ ಹಸೆಯಂ ಹಾಸೆ ನೃಪರೂಪಚಂದ್ರಮಂ ಮಂತ್ರಿಸತಿಸುತರು ಸಹಿತ ||
ಮೊಳೆವ ಸುಖಮಂ ಸಾಗಿಸುತ್ತ ತಾಂಬೂಲಕರ |
ತಳನಾಗಿ ನಲಿದೋಲಗಂಗೊಟ್ಟು ದೀಹದರ |
ಗಿಳಿ ಹಂಸೆ ನವಿಲು ಕೋಗಿಲೆ ಪಾರಿವಂಗಳಂ ನೋಡಿ ಹರ್ಷಂದಳೆದನು ||೪೮
ಘನಪುಣ್ಯಮಯಮೆನಿಪ್ಪೀತಪೋವನದೊಳಹ |
ಮುನಿಯಾವನೋ ಮಹಾದೇವನೇ ಬಲ್ಲನಾ |
ತನ ಶಾಂತಿಯಿಂದ ಶಿವಿ ಚಾರಿತ್ರದಿಂ ಗಂಗೆ ವರತಪಸ್ತೇಜದಿಂದ ||

ದಿನಕರಂ ಸೋಜಿಂದ ತಣ್ಣಾಳಿ ನುಡಿಯು ವೋ |
ಹನದಿಂದ ಸುಧೆಯುದಾರತ್ವದಿಂ ಸುರಕುಜಂ |
ಜನಿಸದಿರವೆಂದು ಕೊಂಡಾಡುತಿರ್ದಂ ಹರಿಶ್ಚಂದ್ರನಾಮಂತ್ರಿಯೊಡನೆ ||೫೦||

ಹೊಗಳುತ್ತ ಹಾರಯಿಸುತುಬ್ಬುತ್ತ ಕೊಬ್ಬುತ್ತ |
ನಗುತ ನಲಿಯುತ್ತ ಹಾಡುತ್ತಾಡುತಾನಂದ |
ವ್ರೊಗೆಯುತಿರಲೊರ್ವಮುನಿಯುಂ ಕಂಡಿದಾವನಾಶ್ರಮುವೆಂದು ಬೆಸಗೊಂ
ವಿಗಡ ವಿಶ್ವಾಮಿತ್ರಮುನಿಯು ಬನವೆಸಲು ಸುಖ | [ಡೊಡೆ ||
ಸುಗಿದು ಪೊಯ್ವುಡದಂತೆ ಹಾವಗಿದುಬಿಟ್ಟಂತೆ |
ಬಗೆಬೆದಱಿ ಗುರುವಾಜ್ಞೆಯುೞಿದುದಿನ್ನೇಗೆಯ್ವೆನೆಂದು ಮಱುಗಿದನರಸನು ||

ಶಿವಪೂಜೆಗೆಯ್ದು ಯಾಗಂಗಳಂ ನಡೆಸಿ ಸ |
ತ್ಯವೆ ನುಡಿದು ದಾನಧರ್ಮಂಗಳಂ ಮಾಡಿ ದೇ |
ಶವನು ಪಾಲಿಸಿ ಕುಲಾಚಾರದಿಂ ನಡೆದು ವರಮುನಿಜನವನಾರಾಧಿಸಿ ||
ಅವಿಚಾರವಂ ಬಿಟ್ಟು ನಾನಾಪುರಾಣಕಥ |
ನವನು ಕೇಳ್ದಿಂದುತನಕೇತಕ್ಕೆ ಹಡೆದ ಪು |
ಣ್ಯವನು ಕೆಡಿಸಿದೆನು ಗುರುವಾಜ್ಞೆಗೆಟ್ಟೆನ್ನಿಂದ ಪಾಪಿಗಳದಾರೆಂದನು ||೫೧||

ಗುರು ಸದಾಶಿವನು ಗುರುಸತಿ ಗಿರಿಜೆ ಗುರುಸುತರು |
ಕರಿವದನಷಣ್ಮುಖರು ಗುರುಸಖರು ವರಗಣೇ |
ಶ್ವರರು ಗುರುಕುಲವೆಯ್ದೆ ಶಿವಕುಲಂ ಗುರುನುಡಿದ ನುಡಿ ಸಿದ್ಧಪಂಚಾಕ್ಷರಿ||
ಗುರುಮತಂ ಶೈವಾಗಮವ್ರತಂ ಗುರುನಾಮ |
ವರಶೈವಸ್ತೋತ್ರ ಗುರುತುಷ್ಟಿ ಶಿವತುಷ್ಟಿಯದು |
ಪೆರಲ್ಲವೆನಿಪಾತನೇಂ ಧನ್ಯನೋ ಮಹಾದೇವ ಗುರು ಶರಣೆಂದನು ||೫೨||

ಆನು ಗುರುವಾಜ್ಞೆಯುಂ ಮೀಱಿದುದಱಿಂದೆನಗೆ |
ಹಾನಿ ಹುಗದಿರದೆಂದೊಡೇಕೆ ಹೊಕ್ಕಪುದೆನಲು |
ದಾನಿ ಗುರುನೆನಹಿಂದ ಬಪ್ಪ ಪುಣ್ಯಂ ಮಱೆದೊಡೇಕೆ ಕೇಡಾಗದೆನಲು ||
ಜ್ಞಾನಕೃತದಿಂಮೊಗೆದೊಡೊಲ್ಲೆನೆಸಬಾರದ |
ಜ್ಞಾನಕೃತಕಿಲ್ಲವಪಜಯುಗಳೆಂದೆನೆ ಗು |
ಣಾನೂನ ಮಱೆದೊಮ್ಮೆ ಮೆಟ್ಟಿದರೆ ಮುಳ್ ಸಡದೆ ಪೇಳೆಂದಸವನೀಶನು ||

ಮನದೊಳಗೆ ಮಱುಗುತಿಲ್ಲಿದ್ದು ವಿಶ್ವಾಮಿತ್ರ |
ಮುನಿಯ ಕಾಟಕ್ಕೆ ಗುಱಿಯಾಗಿ ಗುರುವಾಜ್ಞೆಗೆ |
ಟ್ಟ...ಪತಿತನಪ್ಪುದಱಿಂದೆ ಹೋಹವೇೞರಸಯೆನೆ ಮಂತ್ರಿಗೆಂದ ||
ವನಕೆ ಬಂದೆನಗೆ ನಮಿಸದೆ ಹೋದನೆಂದು ನೆ |
ಟ್ಟನೆ ಶಪಿಸದಿರನೆನಲು ಶಪಿಸಿ ಮಾಡುವುದೇನು |
ವಿನುತಗುರ್ವಾಜ್ಞೆಗೆಡದಿಪ್ಪುದೇ ಲೇಸು ಹೋಹುದೆ ಮಂತ್ರವೇೞೆಂದನು ||
ಎಳಸುವಬಲೆಯರ ನಡುವಿರ್ದು ವಿಜಿತೇಂದ್ರಿಯಾ |
ಮಳನೆನಿಪುದರಿದಲ್ಲದಕಟ ನಿರ್ಜನಭೂಮಿ |
ಯೊಳಗಿರ್ದು ನಾಂ ಜಿತೇಂದ್ರಿಯನೆಂಬುದೇನರಿವಸತ್ಯಮಂ ನುಡಿಯದಿಪ್ಪ ||
ಬಲವೆನಗೆ ಗುರ್ವಾಜ್ಞೆಯೈಸಲೀಯದೆ ನನಗೆ |
ಮುಳಿದವರ ಮುಖದೊಳಹುದೆನಿಸದುೞಿದಂತಿನ್ನು |
ಫಲವಾವುದಿರ್ದೊಡಂ ಹೋದೊಡಂ ಕೇಡಾಗದಿರದು ನಿಶ್ಚಯವೆಂದನು ||೫೬
ಹೊಳೆವ ಮೇರುವ ಸುತ್ತಿ ಬೆಂಡಾದ ರವಿ ಚಂದ್ರ |
ಕಳೆಯ ತೊಡೆಯೆಡೆಯೊಳೊಯ್ಯನೆ ಮಲಗುವಂತೆ ರವಿ |
ಕುಲಲಲಾಮಂ ಮಾಹನ ಹಿಂದೆ ಹತ್ತಿ ದಾಸಱ ಮೇಲೆ ಗುರ್ವಾಜ್ಞೆಯ ||
ಕಳೆದು ಕೌಶಿಕನಾಶ್ರಮಂಬೊಕ್ಕ ಚಿಂತೆಯಿಂ |
ಮಱುಗುತ್ತ ನಿಜಸತಿಯ ತೋರದೊಡೆಗಳ ಮೇಲೆ |
ಲಲಿತಮಣಿಮಕುಟಮಂಡಿತಮಸ್ತಕವನಿಕ್ಕಿ ಮಗ್ಗುಲಿಕ್ಕಿದನಾಗಳು ||೫೭||
ಅಸಮಯದೊಳು ಕಣ್ಣ ಮುಂದೆಸೆವ ಸತಿಯ ನಿಡು |
ಬಾಸೆ ಪೊಲೆ ಮುಡಿ ಮುಖದ ಮೋಹನಂ ತಳಿರ್ಗಳಿಂ |
ಬೀಸಿ ಬಱಲ್ದಿರಿ ಜೀಯ ಬೊಪ್ಪಯ್ಯಯೆಂದೆಂಬ ಸುತನ ಸವಿನುಡಿ ಚರಣವ ||
ಓಸರಿಸದೊತ್ತುವ ಚಮೂಪನುಪಚಾರ ಲತಿ |
ಕಾಸಂಕುಳದ ಕುಸುಮಗಂಧ ಶುಕಪಿಕಕುಲಕ |
ಲಾಸೂಕ್ತಿಗಳು ಸುೞಿವ ತಣ್ಗಾಳಿಗಳು ಸೊಗಸವರಸಂಗೆ ಚಿಂತೆಯ ಭರದಲಿ ||
ಸತಿ ಮಡಿಸಿ ನೀಡುವೆಲೆವಿಡಿದ ಕೈ ಬಸವೞಿವು |
ವತಿಚಿಂತೆಯೊಳು ಮಱೆದ ತನು ಜೊಮ್ಮುವಿಡಿದ ಪ್ರ | [ಕವಿದು ||
ಬರ್ತಿಭಾರವಾಗಿ ಕಣ್ಮುಚ್ಚಿ ತೋಳ್ಗೊಟ್ಟೆ ಮಿಡುಕೆ ಸುಯ್ಸೂಸೆ ನಿದ್ರ

ವಿತತಸುಖದಿಂದಿರುತಿರಲ್ಕೆ ನಾನಾದುಃಖ |
ಯುತನಪ್ಪುದೊಂದು ಕನಸಂ ಕಂಡು ನೊಂದು ಭೂ |
ಪತಿ ಬೆದಱಿದಂತೆ ಭೋಂಕೆನಲೆದ್ದು ಬೆಬ್ಬಳಿಸಿ ಸಾಲ್ದೆಸೆಯನಾರೈದನು ||೧೯

ನಾಡೆ ಕಂದಿದ ಮೊಗಂ ಬಱತ ಬಾಯ್ ಕೆಲಬಲನ |
ನೋಡಿ ಬೆಚ್ಚುವ ದೃಷ್ಟಿ ಸೆರೆನೆಗೆದ ಕಂಠವ |
ಲ್ಲಾಡುವೆದೆ ಬಿಡೆ ನಡುಗುತಿರ್ಪ ತೊಡೆ ಶಂಕಿಸುವಮೆಯ್ ಧರಾಧಿಪನಮೇಲೆ ||
ಕೂಡೆ ತೋಱಲು ಕಂಡು ತೂಪಿಱಿದು ಮುಂಗೆಯ್ಯ |
ಸೂಡಗವನುಱೆ ನಿವಾಳಿಸಿ ಮುಖಕ್ಕೆಱೆದು ಕೊಂ |
ಡಾಡಿ ಬೋಳೈಸಿ ವೀಳೆಯವಿತ್ತು ನುಡಿಸಿದಳು ರಾಣಿ ನಿಜವಲ್ಲಭನನು ||೨೦

ಧುರದೊಳರಿಭೂಭುಜರನಂಜಿಸುವ ನಡುಗಿಸುವ |
ಕೊರಗಿಸುವ ಕೋಡಿಸುವ ಬಳಕಿಸುವ ಜಳಕಿಸುವ |
ಬಿರುದಂಕಮಲ್ಲ ನೀ ನಡುಗಲೇತಕ್ಕೆ ಹೇೞೆಂದು ಮೆಲ್ಲನೆ ನುಡಿಸಲು ||
ತರುಣಿ ಕೇಳೊಂದು ಕನಸಂ ಕಂಡೆನಾಕನಸು |
ನಿರುತವೆಂದೇ ಕಣ್ಣ ತೆರೆದೆ ನೀನಿಂತಿದಱ |
ಪರಿಯಂ ವಿಚಾರಿಸೆಂದವನೀಶನುಡಿಯಲಾ ನುಡಿಗೆ ಸತಿ ಹೂಂಕೊಂಡಳು ||೨೧

ಘುಡುಘುಡಿಸುತೊಬ್ಬ ಮುನಿ ಬಂದು ನಾನೋಲಗಂ |
ಗುಡುವ ಮಣಿಮಂಟಪದ ಕಂಭವೆಲ್ಲವನು ತಡೆ |
ಗಡಿದು ಹೊಂಗಳಸಂಗಳಂ ಮಾಣದೊಡೆಬಡಿದು ನೆರೆದ ಸಭೆಯೊಳಗೆನ್ನನು ||
ಕೆಡಹಿ ಸಿಂಹಾಸನವನುಯ್ವಾಗಳೆನ್ನೆದೆಯ |
ನಡ*ರ್ದೊಂದು ಕಾಗೆ ಕರೆದುದು ಬೞಿಕ್ಕಂ ಗಿರಿಯ |
ನಡ*ರ್ದು ಶಿಖರದೊಳೆಸೆವ ಮಣಿಗೃಹಂಬೊಕ್ಕೆನಿದಱಂತಸ್ತವೇನೆಂದನು ||೨೨

ಇದಕಿನಿತು ದುಗುಡವೇಕಾಕುಪಿತಮುನಿಪನೆಂ |
ಬುದು ಕೌಶಿಕಂ ಬೞಿಕಿನಾವಿಗುರ್ಬಣೆಗಳೆಂ |
ಬಿದು ಮುನಿಯು ಗೊಡ್ಡಾಟದಿಂ ನಮಗೆ ಬಪ್ಪ ಕಿಱಿದಪ್ಪಸಂಕಟವದಕ್ಕೆ ||
ಹೆದಱದಿದ್ದೊಡೆ ಮೇಲೆ ಲೇಸುಂಟು ಪರ್ವತದ |
ತುದಿಯ ಗೃಹಮಂ ಪೊಕ್ಕೆನೆಂಬುದು ಮಹಾಸೇವ್ಯ |
ಪದವಿ ತಪ್ಪದು ದಿಟಂ ಮಱುಗಬೇಡೆನ್ನೊಂದು ಮಾತ ಚಿತ್ತೈಸೆಂದಳು ||೨೩

ಬಗೆವೊಡೀಕನಸು ಗುರುವಾಜ್ಞೆಯುಂ ಮೀಱಿತ |
ಕ್ಕೊಗೆವ ಕೇಡಿಂಗೆ ಸೂಚನೆ ಮುನಿಯು ಬೇಡ ಮಂ |
ತ್ರಿಗೆ ಮಗಂಗೆನಗೆ ರಾಜ್ಯಕ್ಕೆ ಚತುರಂಗಸೇನೆಗೆ ಸಕಲಭಂಡಾರಕೆ ||
ನಗರಕ್ಕೆ ಸರ್ವಪರಿವಾರಕ್ಕೆ ತೇಜದೇ |
ೞ್ಗೆ ನಿನ್ನ ಹರಣಕ್ಕೆ ಕೇಡು ಬಂದೊಡೆ ಬರಲಿ |
ಮಿಗೆ ಸತ್ಯಮಂ ಬಿಟ್ಟು ಕೆಡದಿರವನೀಶ ಕೈಮುಗಿದು ಬೇಡಿದೆನೆಂದಳು ||೬೪||

ಏನನಂಗನೆ ನುಡಿದಳೇನನಾಲಿಸಿದೆನಿದ |
ಕೇನು ಮಱುಮಾತಿನ್ನು ಮೇಲೆ ಮಾಡುವುದೇನು |
ನಾನಾರದೆಲ್ಲಿಂದ ಬಂದೆನೆನ್ನೊಡನಿರ್ದರಾರು ನೆಲೆಯಾವುದೆಂದು ||
ಏನುಮಂ ಕಾಣದೋರಂತೆ ಮಱವಟ್ಟು ದು |
ಮ್ಮಾನವೊಡಲಂ ತೀವಿ ತುಳ್ಕಾಡುತಿರಲು ರಿಪು |
ಭೂನಾಥಶರಧಿವಡಬಾನಲಂ ಮಱೆದು ಚಿಂತಾಚಿತ್ರನಿರುತಿರ್ದನು ||೬೫||

ಬಿಡೆ ತಪೋವನವ ಕಾಣುತ್ತ ಕಡೆಗಣ್ಚಿ ಪೋ |
ದೊಡೆ ಕೇಳ್ದು ಮುನಿ ಮುನಿವನಲ್ಲದಿಂದಿನ ಹಗಲ |
ಕಡೆತನಕ ನೋಡಿದೆವು ಬಾರನೆಂದವರವರ್ಗೆಯರಸ ವಂದಿಸಿದನೆಂದು ||
ನುಡಿದು ನಡೆಗೊಂಬವೇೞಿನ್ನೆಂದು ಮಂತ್ರಿ ತ |
ನ್ನೊಡೆಯಂಗೆ ಬುದ್ಧಿವೇೞ್ದಬ್ಬಿ ಸುತ್ತಿರಲತ್ತ
ಪೊಡವೀಶನಂ ತಂದ ಹಂದಿ ಹರಿಯಿತ್ತು ಕೌಶಿಕನನುಷ್ಠಾನದೆಡೆಗೆ ||೬೬||

ನಿಡುಸರದೊಳೞವುಸಿರು ಹೊಯ್ವಳ್ಳೆ ಡೆಂಡಣಿಸು |
ವಡಿ ಹನಿವ ಬೆಮರು ಮಱುಮೊನೆಗಂಡ ಬಾಣಂಗ |
ಳೆಡೆಯಿಂದ ಸುರಿವ ಬಿಸಿನೆತ್ತರೇಱುಗಳ ವೇದನೆಗಾಱದರೆ ಮುಚ್ಚುವ ||
ಕಡೆಗಣ್ಗಳರಳ್ವ ನಾಸಾಪುಟಂ ಬಲಿದ ನೊರೆ |
ಯಿಡುವ ಕಟವಾಯ್ ಕುಸಿದ ತಲೆ ಸುಗಿದ ದರ್ಪ ಹುರಿ |
ಯೊಡೆದ ರೋಮಂ ತೂಗಿ ತೊನೆದು ಮೈಮಱೆವ ಹಂದಿಯನು ಕೌಶಿಕ
[ಕಂಡನು ||೬೭||

ಇಂತು ಷಷ್ಠಸ್ಥಲಂ ಸಮಾಪ್ತಂ.

ಸಪ್ತಮಸ್ಥಲಂ.

ಸೂಚನೆ॥ ಭೂಪ ಸತ್ಕುಲತಿಲಕನೊಡನೆ ವಿಶ್ವಾಮಿತ್ರ।
ಪಾಪಿ ಕೋಪಿಸಿ ಹೊಲತಿಯರನು ಹುಟ್ಟಿಸಿ ಕಳುಹೆ।
ಭೂಪ ಸ್ಥಿರಂಜೀವ ಸತ್ತಿಗೆಯನೀಯಲ್ಲದೊಡೆ ಗಂಡನಾಗೆಂದರು ॥

ಹಂದಿಯಂ ಕಾಣುತಹಱಂ ಕೋಪಗಿಚ್ಚು ಭುಗಿ |
ಲೆಂದು ಜಪ ಜಾಱಿ ತಪ ತಗ್ಗಿ ಮತಿ ಗತವಾಗಿ |
ಸಂದ ಯೋಗಂ ಹಿಂಗಿ ದಯೆ ದಾಂಟಿ ನೀತಿ ಬೀತಾನಂದವಱತು ಹೋಗಿ ||
ಹಿಂದ ನೆನೆದುರಿದೆದ್ದು ಸಿಕ್ಕಿದನಲಾ ಭೂಪ |
ನಿಂದು ನಾನಾಯ್ತು ತಾನಾಯ್ತು ಕೆಡಿಸದೆ ಮಾಣೆ |
ನೆಂದು ಘೂರ್ಮಿಸುವ ಕೌಶಿಕನ ಹೂಂಕಾರದಿಂನೊಗೆದರಿಬ್ಬರು ಸತಿಯರು||

ಮುನಿಗೆ ಪೊಲೆಯಾವುದೆನೆ ಕೋಪ ಬದ್ಧದ್ವೇಷ |
ವನಿಮಿತ್ತವೈರವದಱಿಂದ ಹುಟ್ಟಿದರಾಗಿ |
ವನಿತೆಯರು ಕಡೆಗನಾಮಿಕರಾಗಿ ಹೆಱಿ ಸಾರ್ದು ನಿಂದು ಬೆಸನಾವುದೆನಲು||
ಜನಪತಿ ಹರಿಶ್ಚಂದ್ರ ಬಂದು ನಮ್ಮಯ ತಪೋ |
ವನದೊಳೈದನೆ ನೀವು ಸರ್ವಬುದ್ಧಿಗಳೊಳಾ |
ತನ ಮರುಳುಮಾಡುತಿರಿ ಹೋಗಿಯೆಂದಟ್ಟಿದಂ ದುರ್ಮಂತ್ರಬಲವಂತನು ||

ಪೊಸ ಕುಟಿಲಕುಂತಲದ ಚಂಚಲಾಕ್ಷಿಗಳ ಕ |
ರ್ಕಶಕುಚದ ಶಿಥಿಲಮಧ್ಯದಲಘುಶ್ವಾಸದ |
ತ್ಯಸಮರಾಗಾಧರದ ಗೂಢನಾಭಿಯ ಮಿಱಿ ಕೊಬ್ಬಿದ ನಿತಂಬಯುಗದ ||
ಅಸದಳದ ಜಳಗತಿಯ ಬೆಳುನಗೆಯ ವಕ್ರವಾ |
ಕ್ಯಸಮೂಹದವಗುಣಂಗಳ ಸಂಗದಿಂ ಕುಲಂ |
ಹಸಗೆಟ್ಟನಾಮಿಕೆಯರಾದರಲ್ಲದೆ ಸಂಗವಾರ ಕುಲಮಂ ಕೆಡಿಸದು ||೩||

ಸಂದ ಕಾರಿರುಳ ಕನ್ನೆಯರು ಹಗಲಂ ನೋಡ |
ಲೀಮು ಬಂದರೊ ಸುರಾಸುರರಬ್ಧಿಯಂ ಮಥಿಸು |
ವಂದು ಪೊಸವಿಷದಪೊಗೆಪೊಯ್ದು ಕಂಗನೆಕನಲಿಜಲದೇವಿಯರುಮನಗಲಿ||

ನೊಂದು ವಾನಪ್ರಸ್ಥರಾದರೋ ಅಜ ನೀಲ |
ದಿಂದ ಮಾಡಿದ ಸಾಲಭಂಜಿಕೆಗಳೊದವಿ ಜೀ |
ವಂದಳೆಯುವ್ರೋ ಎನಿಪ್ಪಂದದಿಂ ಬಂದರಂಗನೆಯರವನೀಶನೆಡೆಗೆ ||೪||

ಮಾಯದಬಲೆಯರು ಕಾಣುತ್ತ ಮಝುಭೂಪಘಟ |
ರಾಯ ಮಝುರೇ ರಾಯರಾಯ ದಱಿದುಳಕಾಱ |
ರಾಯ ಕಂಟಕರಾಯರಾಯ ಜಗಜಟ್ಟಿದಲ್ಲಣರಾಯ ಕೋಳಾಹಳ ||
ರಾಯ ಭುಜಬಲಭೀಮ ರಾಯಮರ್ದನ ರಾಯ |
ಜೀಯ ಸ್ಥಿರಂಜೀವಯೆಂದು ಕೀರ್ತಿಸಿ ಗಾಣ |
ನಾಯಕಿಯರೆತ್ತಿ ಪೊಡೆಮಟ್ಟು ದಂಡಿಗೆವೆರಸಿ ಪಾಡಲುದ್ಯೋಗಿಸಿದರು ||೫||

ಗತಿಗಮಕ ಗಪಗಹಿಕೆ ರೀತಿ ಜಾಳಿಯ ಕೊಂಕು |
ಜತಿ ಜೋಕೆ ಮಾರ್ಗವಣೆ ವಹಣಿ ತರಹರಿಕೆ ಕಂ |
ಪಿತ ಹೊಂಪು ಬಾಗು ಕೊಕ್ಕಡ ವಿರಳ ಕಾಳಾಸ ಕಮ್ಮವಣಿಲವು ಲಂಘಿತ ||
ನುತ ಶುದ್ಧಸಾಳಂಗ ಸಂಕೀರ್ಣಮಂ ಯಥೋ |
ಚಿತ ತಾರಮಧುರಮಂದ್ರಂಗಳಿಂ ಪಾಡಿ ಭೂ |
ಪತಿಯ ದುಗುಡವನು ತೊಳೆದರು ರಾಗರಸಲಹರಿಯಿಂದನಾಯಿಕಸತಿಯರು||

ಎಕ್ಕಲನ ಬಱಿವಿಡಿದು ಸುತ್ತಿದಾಸಜನು ಮುಸಿ|
ರಕ್ಕಸನ ಬಸಕೆ ಬಂದಂಜಿಕೆಯನೆರಡನೆಯ |
ಮುಕ್ಕಣ್ಣನೆನಿಸ ಗುರುವಾಜ್ಞೆಗೆಟ್ಟಿಱಲಸಲ್ಲದ ಕನಸ ಕಂಡ ಭಯವ ||
ಮಿಕ್ಕು ಮಱವಂತಡಸಿ ಕವಿವ ಗತಿಗಳ ಸೊಗಸ |
ಲೆಕ್ಕಿಸದೆ ಸಮಯೋಚಿತದ ಪಸಾಯಕ್ಕೆ ಮನ |
ವುಕ್ಕಿ ಸರ್ವಾಭರಣಮಂ ಗಾಣನಾಯಕಿತ್ತಿಯರಿಗಿತ್ತಂ ಭೂಪನು ||೬||

ಬಡತನದ ಹೊತ್ತಾನೆ ದೊರಕಿ ಫಲವೇನು ನೀ |
ರಡಸಿರ್ದ ಹೊತ್ತಾಜ್ಯ ದೊರಕಿ ಫಲವೇನು ರುಜೆ |
ಯಡಸಿಕೆಡೆದಿಹಹೊತ್ತು ರಂಭೆದೊರಕೊಂಡಲ್ಲಿ ಫಲವೇನುಸಾವಹೊತ್ತು ||
ಪೊಡವಿಯೊಡೆತನ ದೊರಕಿ ಫಲವೇನು ಕಡುವಿಸಿಲು |
ಹೊಡೆದು ಬೆಂಡಾಗಿ ಬೀೞ್ವಮಗೆ ನೀನೀಗ ಮಣಿ |
ಗೊಡಿಗೆಯಂ ಕೊಟ್ಟು ಫಲವೇನು ಭೂಪಾಲ ಹೇೞಿನುತ ಮತ್ತಂತೆಂದರು||

ಕಡಲೊಳಾಳ್ವಿಂಗೆ ತೆಪ್ಪವನು ದಾರಿದ್ರ್ಯಂಗೆ |
ಕಡವರವನತಿರೋಗಿಗಮೃತವಂ ಕೊಟ್ಟೊಡವ |
ರಡಿಗಡಿಗದಾವ ಹರುಷವನೈದುತಿರ್ಪರವರಂತಿಪ್ಪೆವೀಹೊತ್ತಿನ ||
ಸುಡುಸುಡನೆ ಸುಡುವ ಬಿಱುವಿಸಿಲ ಬೇಗೆಯು ಸೆಗಳೆ |
ಹೊಡೆಯಲುಱಿಯುತ್ತಿ ಬಾಯ್ ಬತ್ತಿ ಡಗೆ ಸುತ್ತಿ ಸಾ|
ವಡಸುತಿಪೆ ನಿನ್ನ ಮುತ್ತಿನ ಸತ್ತಿಗೆಯು ನಿತ್ತು ಸಲಹು ಭೂಭುಜಯೆಂದರು||
ರವಿಕುಲದ ಪೀೞಿಗೆಯೊಳೊಗೆದ ರಾಯರ್ಗೆ ಪ |
ಟ್ಟವ ಕಟ್ಟುವಂದಿದಿಲ್ಲದೊಡರಸುತನ ಸಲ್ಲ |
ದವನಿಯೊಳು ಯುದ್ಧರಂಗದೊಳಿದಂ ಕಂಡ ಹಗೆಗಳು ನಿಲ್ಲರಿದಱ ಕೆಳಗೆ||
ಕವಿವ ನೆೞಲೊಳಗಾವನಿರ್ದನಾತಂಗೆ ತಾಂ |
ತವೆಯೆಡರು ಬಡತನಂ ರೋಗವಪಕೀರ್ತಿ ಪರಿ |
ಭವವಪಜಯಂ ಸಾರವಿದನಱಿದು ಬೇಡಿದಡೆ ಕುಡಬಹುದೆ ಹೇೞೆಂದನು ||
ಕುಡಬಾರದೊಡವೆಯುಂ ಕುಡುವುದರಿದೈಸೆ ಕುಡು |
ವ್ರೊಡವೆಗಳನಾರಾದೊಡಂ ಕುಡರೆ ಹೇೞಿಸಲು |
ಬಿಡೆ ಬೇಡುವರ ಬಾಯಿ ಹಱುವುದೇ ಬೇಡಿದುದನೀವ ದೊರೆಯಾವನೆನೆಲು||
ಕುಡರೆ ಮುನ್ನಿನ ಬಲಿ ದಧೀಚಿ ಶಿಬಿಗಳು ಬೇಡಿ |
ದೊಡವೆಗಳನೆನಲದೇಂ ತ್ಯಾಗವೇ ದಾನ, ಗುಣ |
ವಿಡಿದೈಸಲೇ ಕೊಟ್ಟರೆನೆ ಹಿಂದುಗಳೆವರೇ ಕುಡಬೇಹುದಿದನೆಂದರು |೧೧||
ಪಾಡಿ ಮೆಚ್ಚಿಸಿದ ಕತದಿಂ ತ್ಯಾಗವಾಸತ್ತು |
ಬೇಡಿದುದಱಿಂ ದಾನ ಹವಣಿಪ ಪದಸ್ತಿಕೆಯು |
ಜೋಡಿಯುಂಟದಱೊಳುಪಕಾರ ಕೌಶಿಕನ ಹೆಸರಿಂದಿತ್ತಡಾರಾಧನೆ ||
ಗಾಡಿಕಾತಿಯರಾಗಿ ವಿಟಲಕ್ಷಣಂ ಮನದ |
ಪಾಡಱಿಯಲೆಂದೆವದಱಿಂ ಸಲುಗೆ ಶಂಕಿಸದೆ |
ನೀಡಿದೊಡೆ ಕೀರ್ತಿಕರುಣಿಸಿಕುಡಲುಸ್ತ್ರೀವೀಸತ್ತಿಗೆಯೊಳಹುದೆಂದರು ||
ಅನುಸಯದೊಳಲ್ಲವಂ ಕುಡಬಹುದು ಬಿಡಬಹುದು |
ಜನನಿಯಂ ಜನಕನಂ ನಲ್ಲಳಂ ದೈವವಂ |
ಮನಸಾಱಿ ನಂಬಿ ನೆಚ್ಚಿರ್ದ ಪರಿವಾರಮಂ ಕುಡುವ ಬಿಡುವತಿಕಲಿಗಳು ||

ಜನರೊಳಗೆ ಜನಿಸನೆಂದೆನಲು ನೀನೀಗೆಣಿಸಿ |
ದನಿಬರೊಳಗೊಂದುವಂ ಕುಡಬೇಡ ಕೊಡೆಯನೀ |
ಯೆನೆ ಲೋಭವೇಕರಸಯೆನಲಿದಲ್ಲದೆ ಜೇಱಿ ಮಾತೆಪಿತರಿಲ್ಲೆಂದನು ||೧೩||

ಲೋಗರಿಗೆ ಕುಡಬಾರದಾಗಿ ಸತಿ, ವಂಶಗತ |
ವಾಗಿ ಬಂದುದಱಿಂದ ತಂದೆ, ಪಟ್ಟವ ಕಟ್ಟು |
ವಾಗಲರ್ಚಿಸಿಕೊಂಬುದಾಗಿ ದೈವಂ ನೆೞಲ ತಂಪನೊಸೆದೀವುದಾಗಿ ||
ಸಾಗಿಸುವ ತಾಯ್, ಘುರದೊಳರಿಗಳಂ ನಡುಗಿಸುವು |
ದಾಗಿ ಚತುರಂಗಬಲವೆನಿಸಿತೀಛತ್ರವೆಂ |
ಬಾಗಳಿದನಱಿದು ಬೇಡುವರತಿಮರುಳರೆನ್ನದಿಹುದೆ ಮೂಜಗನೆಂದನು ||೧೪||

ಇಳೆಯೊಳಗೆ ಪೆಸರುಳ್ಳ ದಾನಿಯೆಂಬುದನು ಕೇ |
ಳ್ದಿಳಸಿ ಕಟ್ಟಾಸೆವಟ್ಟೈತಂದು ಬೇಡಿ ನಿ |
ಷ್ಫಳವಾಗದಂತೆ ನಾವತಿಮುಱುಗದಂತೆೞಲದಂತೆ ಬಿಸುಸುಯ್ಯದಂತೆ ||
ತಿಳಿದ ನೀನೆಮಗೆ ವಲ್ಲಭನಾಗಿ ಚಿತ್ತದು |
ಮ್ಮಳಿಕೆಯಂ ಕಳೆ ಹರಿಶ್ಚಂದ್ರ ಭೂನಾಥಯೆಂ |
ದಳವಱಿದು ಬಾಯ್ಬಿಟ್ಟು ಕೈಮುಗಿದು ನುಡಿದರೊಲವಿಂದನಾಮಿಕಸತಿಯರು

ಲಲಿತ ವಸುಮತಿ ಹುಟ್ಟಿದಂದು ಹುಟ್ಟಿದ ಸೂರ್ಯ |
ಕುಲದ ರಾಯರ್ಗೆ ವಂಶದೊಳು ಕೀರ್ತಿಯೊಳು ಭುಜ |
ಬಲದೊಳೊರೆದೊರೆಯೆನಿಸಿ ಕನ್ನಿಕೆಯರಂ ಕುಡುವ ಭೂಪರಿಲ್ಲಿನ್ನುತನಕ ||
ಹೊಲತಿಯರು ನೀವೆಸಗೆ ಸತಿಯರಾಗಿಪ್ಪವೆಂ |
ದುಲಿಹನೆಂದೆಂಬುದಿದು ಕಾಲಗುಣಮೋ ಸಿಂಧ |
ನೆಲದ ಗುಣಮೋ ನೋಡು ನೋಡೆಂದು ಕಡುಮುಳಿದು ಕೋಪಿಸಿದನವನೀಶನು ||

ಪಾವನ ಕ್ಷೀರವಂ ಕುಡುವ ಕೆಚ್ಚಲ ಮಾಂಸ |
ವಾವ ಲೇಸಿನದುಳ್ಳ ಮಧುವನೊಸೆದೀವ ನೊಣ |
ವಾವ ಲೇಸಧಿಕ ಕಸ್ತೂರಿಯಂ ಕುಡುವ ಮೃಗನಾಭಿ ತಾನಾವ ಲೇಸು ||
ದೇವರಿಗೆ ಸಲ್ಲವೇ ಉತ್ತಮಗುಣಂಗಳಿ |
ರ್ದಾವ ಕುಂದಂ ಕಳೆಯಲಾಱವವನೀಶ ಕೇಳ್ |
ಭಾವಿಸುವೊಡಿಂತಿನ್ತು ರೂಪಯೌವನವಿರಲು ಕುಲದ ಮಾತೇಕೆಂದರು ||

ಅಕ್ಕಕ್ಕ ಬಚ್ಚಲುದಕಂ ತಿಳಿದೊಡಾರ ಪಿಶಾ |
ಹಕ್ಕೆ ಯೋಗ್ಯಂ ನಾಯ್ಗೆ ಹಾಲುಳ್ಳೊಡಾರವು |
ಟಕ್ಕೆ ಯೋಗ್ಯಂ ಪ್ರೇತವನದೊಳಗೆ ಬೆಳೆದ ಹೂವಾರ ಮುಡಿಹಕ್ಕೆ ಯೋಗ್ಯಂ
ಮಿಕ್ಕ ಹೊಲತಿಯರು ನೀವೆನೆ ನಿಮ್ಮ ಜವ್ವನದ |
ಸೊಕ್ಕು ರೂಪಿನ ಗಾಡಿ ಜಾಣತನವೊಪ್ಪುವೇ |
ತಕ್ಕೆ ಯೋಗ್ಯಂ ರಮಿಸಿದವರುಂಟೆ ಶಿವಶಿವಾ ಮಾತು ತಾಹೊಲೆಯೆಂದನು ||

ಹಾಡನೊರೆದಾಲಿಸಿದ ಕಿವಿಗೆ ಹೊಲೆಯಿಲ್ಲ ಮಾ |
ತಾಡಿ ನುಡಿಸಿದ ಬಾಯ್ಗೆ ಹೊಲೆಯಿಲ್ಲ ರೂಪ ನೆಱೆ |
ನೋಡಿದ ವಿಲೋಚನಕೆ ಹೊಲೆಯಿಲ್ಲ ಮೆಯ್ಯ್ಮುಡಿಗಳಿಂ ಸುಳಿವ ತಂಗಾ
ತೀಡುವ ಸುಗಂಧಮಂ ವಾಸಿಸಿದ ನಾಸಿಕಕೆ | [ಳಿಯಿಂ ||
ನಾಡೆ ಹೊಲೆಯಿಲ್ಲ ನೋಂಕಿಂಗೆ ಹೊಲೆಯಿರ್ದಪುದೆ |
ಕೂಡಿರ್ದ ಪಂಚೇಂದ್ರಿಯಂಗಳೊಳು ನಾಲ್ಕಧಿಕವೊಂದಧಮವೇನೆಂದರುಂ ||

ಕಂಡಱಿವವೈಸಲೇ ನಯನೇಂದ್ರಿಯಂ ಘ್ರಾಣ |
ಕೊಂಡಱಿವವೈಸಲೇ ವಾಸನೆಗಳಂ ಕರ್ಣ |
ವುಂಡಱಿವವೈಸಲೇ ಶಬ್ದಮಂ ದೂರದಿಂದಲ್ಲದವು ಮುಟ್ಟಲಿಲ್ಲ ||
ಭಂಡತನದೀಮಾತದೇಕೆಯುಪಮಾನವೇ |
ಕೆಂಡವನು ಮುಟ್ಟದಡೆ ಜೇವಂತೆ ಕೇಳ್ದೊಡಂ |
ಕಂಡು ವಾಸಿಸಿದೊಡಂ ಸುಡುವುದೇ ಕಾಳುಗೆಡೆಯದೆ ನೀವು ಹೋಗೆಂದನು ||

ಶಾಪದಿಂದೆಮಗಾದ ದುಷ್ಕುಲಂ ಸತ್ಕುಲಜ |
ಭೂಪ ನಿನ್ನಯ ಸಂಗದಿಂ ಶುದ್ಧವಪ್ಪುದೆಂ |
ಬಾಪೇಕ್ಷೆಯಿಂ ಬಂದೆವೆನಲೊಡನೆ ನಿಮಗೋಸುಗೆನ್ನ ಕುಲಮಂ ಕೆಡಿಪೆನೆ ||
ಪಾಪಿಗಳ ಪಾಪಮಂ ತೊಳೆವ ಗಂಗೆಗೆ ಪಾಪ |
ಲೇಪವುಂಟಾಯಿತೇ ಹೇಳರಸ ಎನೆ ಕುಲಧರ್ಮ |
ವಾಪಂಥವಲ್ಲ ಕೊಡವಾಲ ಕೆಡಿಸುವೊಡಾಮ್ರವೆನಿತಾಗ ಬೇಕೆಂದನು||೨೧||

ಪಗೆಯಿರ್ದೊಡಂ ಕುಲಜರಧಮಸತಿಯರ ನೋಡ |
ಲಾಗದಱಿಯದೆ ಪಾಪದಿಂ ನೋಡಿದಡೆ ನುಡಿಸ |
ಲಾಗದೆಂತಕ್ಕೆ ನುಡಿಸಿದಡೆ ಮನ್ನಿಸಲಾಗದನುಗೆಟ್ಟು ಮನ್ನಿಸಿದಡೆ ||

ಮೇಗೇನುಮಂ ಕರೆದು ಕುಡಲಾಗದಿತ್ತಡವ |
ರೇಗೈದೊಡೊಪ್ಪದಿಂದೆನಗೆ ನೀವಂಗನೆಯ |
ರಾಗಿಪ್ಪೆವೆಂದಿರ್ಪ ಸಲ್ಲದೊಡತಿಯುರಪ್ಪೆವೆನಲು ತೀರದೆಯೆಂದನು ||೨೦||
ಮಾತಿಂಗೆ ಮಾತುಗುಡಲರಿದು ನಿನ್ನಯ ಸುತ |
ಖ್ಯಾತಿಗದಟಿಂಗೆ ರೂಪಿಂಗೆ ಸುರಚಿರಗುಣ |
ವ್ರಾತಕ್ಕೆ ಹರೆಯಕ್ಕೆ ಗರುವಿಕೆಗೆ ಮನಸಂದು ಮತಿಗೆಟ್ಟು ಮರುಳಾದೆವು ||
ಓತು ಬಂದವರನುಪಚರಿಸದಿಪ್ಪುದು ನಿನಗೆ |
ನೀತಿಯೇ ಏಗೆಯ್ದೊಡಂ ಗಂಡನಾದಲ್ಲ |
ದಾತುರಂ ಪೋಗದಿನ್ನೊಲಿದಂತೆ ಮಾಡು ನಿನ್ನಂ ಬೆನ್ನ ಬಿಡೆವೆಂದರು ||
ಬಱಿವಿಡಿದು ಬಂದು ಮಾಡುವುದೆನ್ನನೇನು ಬೆಂ |
ಬಱಿಯೊಳಿಸಿಬರು ಹೊಲೆಯರಿಲ್ಲೆಂದೊಡಪಗೆ ಬಿಡೆ |
ವೆಳಸಿ ಮೆಚ್ಚಿಸಿ ಮರುಳ್ಮಾಡಿ ಮತ್ತೊಲ್ಲನವನಿಸನೆಂದು ಮೊಱೆಯಿಡುತ್ತ ||
ಇಳೆಗೆಯ್ದಿ ಸಾಱುತ್ತ ದೂಱುತ್ತ ಬಪ್ಪೆವೆನೆ |
ಮುಳಿದು ಘುಡಿಘುಡಿಸಿ ಕೋಪಾಟೋಪದಿಂ ಹಲ್ಲ |
ಕಳೆಬಾಯಹಱಿಹೊಯ್ಹೊಡೆಹೊಡೆಯೆನುತ್ತಿದ್ದನುರವಣಿಸಿಭೂನಾಥನು ||
ತುಡುಕಿ ಚಮ್ಮಟಿಗೆಯಂ ಸೆಳೆದು ಪ್ರಧಾನಬಱಿ |
ವಿಡಿದೇಱಿಬೊಬ್ಬರೊಬ್ಬರನು ಬೆನ್ನೊಡೆಯೆ ಮುಡಿ |
ಹುಡಿಯೊಳಗೆ ಹೊರಳೆ ಹಲು ಬೀಱಿ ಬಾಯೊಡೆಯೆ ಮೆಯ್ನೋಯೆ ಕೈ
ನಡೆದಲ್ಲಿ ನಡೆದು ಹೊಕ್ಕಲ್ಲಿ ಹೊಕ್ಕೊಡನೆ ಬಱಿ| [ಯುಳುಕೆ ವಿಾಱಿ||
ವಿಡಿದು ಹೇಸದೆ ಹೊಯ್ದು ಬೆನ್ನಟ್ಟಿ ತಿರುಗಲ್ಕೆ |
ಬಿಡಲವರು ಮೊಱೆಯಿಡುತ ಗೋಳಿಡುತ ಬೆದಱುತ್ತ ಹರಿದರಾಮುನಿಪ
ಬಿಡುಮುಡಿಯ ಸುರಿವ ಕಂಬನಿವೊನಲ ಕಳೆದೇಱಲು| [ನೆಡೆಗೆ ||೨೧||
ವುಡುಗೆಗಳ ಬೆನ್ನೊಡೆದು ಹರಿವ ರಕ್ತದ ಹೊಯ್ಲ |
ಕುಡಿಯಳ್ಳೆಗಳ ಹರಿವ ಕಾಲುಗಳ ಮರಳಿ ನೋಡುವ ಹೆದಱುಗಣ್ಣ ತ್ರಣವ||
ತುಡುಕಿ ನೆಗಪಿಂದ ಕೆಯ್ಯ ನಿಷ್ಕಾರಣಂ ನೃಪತಿ |
ಬಡಿದನೆಲೆ ಕೌಶಿಕಮುನೀಂದ್ರ ಮೊಱೆಯೋ ಎಂಬ |
ನಿಪುಸರದ ನಾರಿಯರ ದನಿಯನಾಲಿಸಿ ಪರ್ಣಶಾಲೆಯಂ ಪೊಱಮಟ್ಟನು||೨೨

ಹೊಲೆವನಾಮಿಕಸತಿಯುರ ಸ್ಪರ್ಶವಾಯ್ತೆಂದು |
ಪೊಡವೀಶನಾಹರಿಶ್ಚಂದ್ರ ಕೊಳನಂ ಪೊಕ್ಕು |
ಅಡಿಗಡಿ ಸಚೇಲದ ಸ್ನಾನವಂ ಮಾಡಿ ಹೊಱವಟ್ಟಾಗ ಕೊಳನ ತಡಿಯ ||
ಪಡವನಡರುತ್ತ ದಿವ್ಯಾಂಬರವನುಟ್ಟುಕೊಂ |
ಡಡರಿದ್ದ ಕೋಪಮಂ ಸಂತೈಸುತಿರಲಿತ್ತ |
ಮಡದಿಯುರು ಹರಿತಂದು ಮುನಿಪನಂ ಕಾಣುತ್ತಲಡಿಗೆಱಗಿಮೊಱೆಯಿಟ್ಟರು ||
ಆರ ಮನೆಯುವರೆಂದು ಕೇಳ್ದೊಡೆರಡನೆಯ ಪುರ |
ವೈರಿ ವಿಶ್ವಾಮಿತ್ರಮುನಿಯು ಮನೆಯುವರೆಂದೊ |
ಹಾರಾಯನೆದ್ದು ಕೈಯಾರೆ ಸದೆಬಡಿದನೆಮ್ಮಂ ನಿರಪರಾಧಿಗಳನು ||
ಕಾರುಣ್ಯಚಿತ್ತದಿಂ ಕಳುಹಿ ಕೊಲಿಸಿದೆ ತಂದೆ |
ಯೋರಂತೆ ಕೇಳು ನೀನೆನೆ ಕೇಳ್ದನ್ನಯ ಮ |
ನೋರಥಂ ಕೈಸಾರ್ದುದಱಲಜೇಡೆಂದು ಕೋಪಾಟೋಪದಿಂ ಹರಿದನು || ೨೮

ಇಂತು ಸಪ್ತಮಸ್ಥಲಂ ಸಂಪೂರ್ಣಂ.

ಅಷ್ಟಮಸ್ಥಲಂ.

ಸೂಚನೆ|| ಅಯುತಿಗೆಗೆಡಿಸಿ ನಿಷ್ಕಾರಣ ಹರಿಶ್ಚಂದ್ರ |
ರಾಯನನುಪಾಯದಿಂ ತನ್ನಾಶ್ರಮಕ್ಕೈಯ್ದ |
ವಾಯದಪವಾದಮಂ ತೊಱೆಸಿ ಸಾಮ್ರಾಜ್ಯಮಂಕೊಂಡವಿಶ್ವಾಮಿತ್ರನು ||

ವಡಬಾಗ್ನಿ ಜಡೆವೊತ್ತುದೋ ಸಿಡಿಲು ಭಸಿತವ |
ನ್ನಿಡ ಕಲಿತುದೋ ಕಾಡ ಕಿಚ್ಚು ಹರಿಣಾಜಿನವ |
ನುಡಕಲಿತುದೋ ಪ್ರಳಯವಹ್ನಿ ತಪವೊತ್ತುದೋ ಭಾಳಲೋಚನನ
ಕಡೆಗೆ ಮುನಿಯಾಯ್ತೊ ಹೇಳೆನೆ ಕಣ್ಣ ಕಡೆ ತೋರ | [ಕೋಪ ||
ಗಿಡಿಗೆದಱೆ ಮೀಸೆಗೊಂದಲು ಹೊತ್ತಿ ಹೊಗೆಯೆ ಬಿಱು |
ಸುಡಿಗಳುರಿಯುಗುಳೆ ವಿಶ್ವಾಮಿತ್ರ ನುಱವಣಿಸಿ ಬಂದಪನವನೀಶನೆಡೆಗೆ ||೧||

ಸುದತಿ ನೋಡಧಿಕಗುರ್ವಾಜ್ಞೆಯಂ ಮಱೆದು ವಿಪಾ |
ಱಿದ ಫಲಂ ಕಂಡ ದುಸ್ಸ್ವಪ್ನದರ್ಥಂ ಬರು |
ತ್ತಿದೆ ಮೂರ್ತಿಗೊಂಡು ಸಮ್ಮೆಡೆಗೆಂದು ಮದನಮರ್ದನ ತಾನೆ ಬಲ್ಲನೆನುತ ||
ಇದಿರೆದ್ದನರ್ಘ್ಯರತ್ನಂಗಳಂ ನೀಡಿ ವರ |
ಪದಪಯೋಜದ ಮೇಲೆ ಹೊಡೆಗೆಡೆದ ಭೂಭುಜನ |
ನೊದೆದು ಸಿಡಿಲೇೞ್ಗೆಯಿಂದಣಕಿಸಿದನಂದು ವಿಶ್ವಾಮಿತ್ರಮುನಿನಾಥನು ||೨||

ಹಿಂದೆ ಮಾಡಿದ ಸುಕೃತಸೂಚನೆಯು ದೇವತಾ |
ವಂದನೆಯು ಸನ್ಮುನಿಪದಾಬ್ಜಭಜನೆಗಳ ಫಲ |
ದಿಂದ ನಿಮ್ಮಂಘ್ರಿದರ್ಶನವಾಯ್ತು ವದಱಿಂದ ಕೃತಕೃತ್ಯನಾದೆನೆನುತ ||
ಸಂದೇಹವಱಿದು ಸಂತೋಷವಿಪ್ಪನ್ನನೇ |
ನೆಂದೊದೆದೆ ಮೃದುಪಾದಪಲ್ಲವಂ ನೊಂದುವೇ |
ತಂದೆ ಪರುಷದ ಪ್ರತಿಮೆ ಮುಸಿದೊದೆದೊಡಂ ಲೋಹ ಹೊನ್ನಾಗದಿರದೆಂ
ಚರಣವ್ರೊಂದೇ ನಿನ್ನ ದೆಸೆಯಿಂದ ನೊಂದುವೇ | [ದನು ||೩||

ಧರಣೀಶ ಕೇಳೆನ್ನ ಮನ ಬುದ್ಧಿ ಚಿತ್ತಾದಿ |
ಕರಣವೆಲ್ಲಂ ನೊಂದು ಬೆಂದು ಕೞ್ಗಿದಿಗೊಂಡುದಿನ್ನಾಡಿ ತೋಱಲೇಕೆ ||
ದುರುಳತನವೇನೇನ ಮಾಡ ಬೇಹುದನೆಯ್ದೆ |
ಭರವಸದಿ ಮಾಡಿ ಮತ್ತೀದುಷ್ಟತನದ ಬೋ |
ಸರಿಗತನವೇಕೆಂದೊಡಯ್ಯ ಪೇೞ್ವೆಂನೆಗೞ್ದ ದುಷ್ಟತನವೇನೆಂದನು ||೪||

ಬಿಱುಗಾಳಿಯುಂ ಬೀಸಲಮ್ಮನನಿಲಂ ಸುರಪ |
ನಱೆವೆಱೆಗಳಂ ಕಱೆಯಲಮ್ಮನತಿ ಕಡುವಿಸಿಲ |
ಕಱೆಯಲಮ್ಮಂ ತರಣಿ ದಾವಾಗ್ನಿ ಮೇರೆಯಂ ಮೀಱಲಮ್ಮದು ಲೋಕವ ||
ಮುಱಿವ ಜನನವನ ದೂತರುಗೀತರೆಂಬರೆ |
ದ್ದೆಱಗಲಮ್ಮರು ತಪೋವನದೊಳಿಂದೆಮ್ಮ ನೀಂ |
ಕೊಱಚಾಡಲೆಂದು ಬೀಡಂ ಬಿಟ್ಟೆಯರಿದರಿದು ನಿನ್ನ ಧೀವಶವೆಂದನು ||೫||

ಎಳಸಿ ಧರ್ಮಾಧೀನ ವಂದನೆ ನಿಮಿತ್ತ ಗುರು |
ನಿಳಯಕ್ಕೆ ಶಿಷ್ಯನೈತಂದುದಕೆ ಸಾಹಸದ | [ವಿನಸುಗೆ ||
ಬಲವೇಕೆ ತಂದೆಯೆನೆ ನುಡಿಗೊಳು ನಯಂಬಡೆದು ಕಾರ್ಯಗೊಳು ಗುರು

ಮುಳಿದು ಸರ್ವಸ್ವಾಪಹರಣವಂ ಮಾಪ್ಪಿ ಕಡು |
ಗಲಿತನವಿದಾವ ಪುಣ್ಯವ ಹಡೆವ ಶಿಷ್ಯತನ |
ದೊಳಗು ಹೇಳೆನಲೆನ್ನ ದೆಸೆಯಿಂದ ಕೆಟ್ಟುದೇನೆಂದನು ಹರಿಶ್ಚಂದ್ರನು ||೬||
ಅರಸುಗಳಿಗುಪದೇಶವಂ ಮಾಡಿ ವಸ್ತುವಂ |
ನೆರೆಹ ಬಲ್ಲವನಲ್ಲ ನಿಜವೈರವಂ ಬಿಟ್ಟು |
ಹರುಷದಿಂದಿರ್ಪವ್ಯಗಸಂಕುಳಂ ಸರ್ವಋತುಗಳೊಳುಫಲವಿಡಿದೊಱಗುವ||
ತರುಕುಲಂ ಬತ್ತದೊಂದೇಪರಿಯೊಳಹ ಸರೋ |
ವರವೆಂಬ ಧನವಿದೆಲ್ಲವನಿಱಿದು ತಱಿದು ಕುಡಿ |
ದರೆಮಾಪ್ಪು ಬಲುಹು ಸರ್ವಸ್ವಾಪಹರಣವಲ್ಲದೆ ಬೞಿಕ್ಕೇನೆಂದನು ||೭||
ಬೞಿಮುನಿಸನಿಟ್ಟು ನೀಸಱುಹುವಂತಾಗಿ ನಾ |
ನಿಱಿದ ಮೃಗ ಮುಱಿದ ಮರ ಕುಡಿದ ಕೊಳನಾವುದೆಲೆ |
ಕಿಱುಜಡೆಯ ನೀತಿವಿದ ತೋಱಿಸೆನೆ ಘುಡುಘುಡಿಸುತೆದ್ದು ಪಲಕಾಲದಂದು||
ಱಿತ ಕೊಳಸಂ ಕೊಳೆತು ಮುಱಿದ ಮರನಂ ನೃಪನ |
ನುಱೆ ತಂದ ಹಲವುಗಾಯದ ಹಂದಿಯುಂ ತೋಱಿ |
ಜಱೆದು ನೀನಿನ್ನಾಟ ನೆವವನೊಡ್ಡುವೆ ಪಾಪಿಯೆನುತ ಮತ್ತಿಂತೆಂದನು ||೮||
ಹಿಂದೆ ಸಂಪದದೊಳುಜಱೆ ಗರ್ವಮಂ ಮೆಱೆದ ಸಂ |
ಕ್ರಂದನನ ಸಿರಿಯು ನೀರೊಳಗೆ ನೆರಹಿದ ಗೊರವ |
ನಿಂದ ನಾಂ ತೆಕ್ಕುವನೆ ಹರನ ಹಣೆಗಣ್ಣಿನಗ್ನಿಯನು ಹಗೆಗೊಂಬಂದದಿಂ ||
ಇಂದೆಮ್ಮ ಹಗೆಗೊಂಡೆ ಬಿಟ್ಟ ಬೀಡೆಲ್ಲಮಂ|
ಕೊಂದು ಕೂಗಿಸಿ ಸುಟ್ಟು ಬೊಟ್ಟಿಟ್ಟುಕೊಂಬೆನಾ |
ರೆಂದಱಿಯಲಾನಿನ್ನ ಗುರು ಹೇಳೆನೇ ತನ್ನ ಸುತರ ತಿಣ್ಣವನೆಂದನು ||೯||
ಬಸೆದು ಹುಟ್ಟಿಸುವ ಪಾಲಿಸುವ ಮರ್ದಿಸುವ ಸ |
ತ್ವಸಮರ್ಥನೆನಿಸಿ ನೀನೇ ತಪ್ಪ ಹೊಱಿಸಿ ದ |
ಟ್ಟಿಸುವ್ರೋಡಿನ್ನುತ್ತರಿಸಿ ಶುದ್ಧನಹುದರಿದಯ್ಯ ನಿಮ್ಮ ಕರುಣದ ತೊಟ್ಟಿಲ ||
ಹಸುಳೆಯಾಂ ಸರ್ವಾಪರಾಧಿಯಾಂ ತಂಗೆ ಕರು |
ಣಿಸು ದಯುಂಗಿಡದಿರುದ್ರೇಕಿಸದಿರೆಂದು ಪದ|
ಬಿಸರುಹದಮೇಲೆಕೆಡಹಿದನುನಿಜಮಣಿಮುಕುಟಮಂಡಿತದ ಸಿರಿಮುಡಿಯನು||

ಬೇಡ ಹೋಗಲಿ ಬಿಟ್ಟೆನಿನ್ನು ಮತ್ತಾವಮಾತ |
ನಾಡಿದಡೆ ಶಿವನಾಣೆಯೆನ್ನ ನೀನಡಿಗಡಿಗೆ |
ಬೇಡಿಕೊಳುತಿರದಿರೆಂದಾಪ್ರಲಯಫಣಿಮಣಿಲಹೊಱಲೊಳಗೆ ಕೆಯ್ಯನಿಕ್ಕಿ ||
ದಾಡೆಯುಂ ಮುಱಿಯ ಬಡಿವಂತೆನ್ನ ಬಸಿಱಿಂದೆ |
ಮೂಡಿರ್ದ ಕನ್ನೆಯರ ಚೆನ್ನೆಯರನಬಲೆಯರ |
ಗಾಡಿಕಾರ್ತಿಯರನಱಿತಱಿತಿಂತು ಸಾಯೆ ಸದೆಬಡಿವರೇ ಹೇೞೆಂದನು ||೧೧||

ಬಡಿದೆ ಬಡಿದೆಂ ಬಡಿದೆನಿಲ್ಲೆಂಬುದಿಲ್ಲೆಂದು |
ನುಡಿಯೆ, ಹಸನಾಯ್ತನ್ಯರವರೆಂದು ಬಗೆದು ನಾಂ |
ಬಡಿದೆನೆಂಬುಪಚಾರವಿಲ್ಲ ಮೂಗಂ ಕೊಯ್ದು ಕನ್ನಡಿಯ ತೋಱುವಂತೆ ||
ಬಡಿದುದಲ್ಲದೆ ಮತ್ತೆ ಬಡಿದೆನೆಂದೆಸಗೆ ನೀಂ |
ಪಡಿಗಣಿಸುವಂತಾಗ ನಿನ್ನ ಹಂಗಿನಲಿಪ್ಪ |
ಬಡ ವಸಿಷ್ಠನೆ ಹಸಿದ ಹುಲಿಯ ಮೀಸೆಯನುಹಿಡಿದಲುಗಿನೋಡಿದೆಯೆಂದನು ||

ಬೇಗದಿಂ ನಿಮ್ಮ ಮನೆಯವರೆಂದು ಮೊಱೆಯಿಟ್ಟ |
ರಾಗಿ ಕರುಣಿಸಿ ಬಿಟ್ಟೆನಲ್ಲದಿದ್ದೊಡೆ ಕೆಡಹಿ |
ಮೂಗನರಿದೆಳಹೂಟೆಯುಂ ಕಟ್ಟಿ ಹೆಟ್ಟವೇಱಿಸುವೆ ಬಟ್ಟಬಯಲೊಳೆನಲು ||
ಏಗೆಯ್ದರವರೊಳನ್ಯಾಯವೇನೆನಲೆನ್ನ |
ಮೇಗಿರ್ದ ಸತ್ತಿಗೆಯನೀಯಲ್ಲದೊಡೆ ಗಂಡ |
ನಾಗು ನೀನಾಗದೊಡೆ ಮೊಱೆಯಿಡುವೆವೆಂದರೆಲೆಮುನಿಪ ಚಿತ್ತೈಸೆಂದನು ||

ಮಿಗೆ ದಾನಿಯೆಂದು ಮನ್ನಣೆಯಱಿವ ವಿಟನೆಂದು |
ಬಗೆದಾಸೆವಟ್ಟೊಡಂ ಕುಂದೆ ಹೇೞೆನಲು ಸ |
ತ್ತಿಗೆಯನೀವರೆ ಹೊಲತಿಯರನು ನೆರೆವರೆಯೆನಲು ತೀರದೆಂದೊಡೆ ಸಾಲದೆ |
ಬಗೆ ಬೆದಱಿ ಹೊಯ್ಯಲೇಕರಸಯೆನಲೆನ್ನನೀ |
ಜಗದೊಳಗೆ ದೂಱಿದಪೆವೆಂದರಾಯೆಂದ ಧೂ |
ರ್ತೆಗಳಾರದೆಂಬುದೀಲೋಕವಂತದು ನಿಮಿತ್ತಂ ಹೊಡೆದೆ ನಾನೆಂದನು ||೧೪

ಹೊಡೆಯುದಕ್ಕೇನವದಿರಂ ಹೊಡೆದ ಕೈಗಳಂ |
ಕಡಿವೆ ನಿನ್ನಂ ನಚ್ಚಿ ಮಲೆತ ದೇಶವನುರುಹಿ |
ಸುಡುವೆನಾಗೇಶಕ್ಕೆ ಹಿತವಾಗಿ ಬಂದ ಮುನಿಯುಂ ಮುಱಿವೆನಾಮುನಿಯನು ||

ಹಿಡಿದು ಕದನಕ್ಕೆಂದು ಬಂದಮುರರಂ ಕೆಡಹಿ ।
ಹುಡುಕುನೀರದ್ದುವೆನ್ನಳವನಱಿಯಾ ಮುನ್ನ ।
ತೊಡಕಿ ತನಗಾದ ಭಂಗಂಗಳಂ ಪೇೞನೇ ನಿನಗೆ ಕಮಲಜಕಂದನು ॥೧೫॥
ಹರುಷದಿಂ ಶಾಂತಿ ಸತ್ಯಂ ಭೂತದಯೆಗಳಂ ।
ದೊರಕಿಸಿಯೆ ಕ್ರೋಧಾರ್ಥರೌದ್ರಮಿಥ್ಯಂಗಳಂ ।
ಪರಿಸರಿಸಿ ಬ್ರಾಹ್ಮಣೋತ್ತಮಮುನೀಶ್ವರರೆನಿಸಿ ನೀವೆ ಕೋಪಾಗ್ನಿಯಿಂದ॥
ಉರಿದೆದ್ದು ಮುನಿಗಳಂ ಕೊಂದು ಮೂಜಗಮನಿ ।
ಟ್ಟೊರಸಿ ದೇವರ ಹಿಂಡಿ ಹಿೞಿಯಲಾನೀಲೋಕ।
ದರಸುಗಳು ಕ್ಷತ್ರಿಯರುಮಾಡಬಾರದದೇನು ಎಂದು ಕಟಕಿಯು ನುಡಿದನು ॥
ಬಿನ್ನಣದ ಕಟಕಿಯಂ ಕೇಳುತ್ತ ಕೆಟ್ಟು ನುಡಿ ।
ದಿನ್ನು ನೀನೀಧರೆಯೊಳರಸುತನದಿಂದಿರ್ದೊ ।
ಡೆನ್ನೆದೆಯು ಮೇಲಿದ್ದ ದೇಶದಿಂ ತೆಱುವೆಂ ತೆಱ ಹೊಕ್ಕಲ್ಲಿ ಹೊಕ್ಕು ॥
ಬೆನ್ನ ಬೞಿಯಂ ಬಿಡದೆ ಬಂದು ನಾನೞಲಿಸುವೆ ।
ನುನ್ನತಿಕೆವೆರಸಿ ಬದುಕಿದೊಡಱಿಯಬಹುದೆನುತ ।
ನನ್ನಿಯುಳ್ಳರದೇವನೊಡನೆ ಮಿಗೆ ಕೋಪಮಂ ತಳೆದ ವಿಶ್ವಾಮಿತ್ರನು॥೧೭॥
ಪೊಡವಿಯೊಳು ಖಳ ವಹ್ನಿಯುಗ್ರ ಖಳವಹ್ನಿಯಿಂ ।
ದಡವಿಗಿಚ್ಚುತ್ಯುಗ್ರನಡವಿಗಿಚ್ಚಿಂದೆ ಬಱ ।
ಸಿಡಿಲುಗ್ರ ಸಿಡಿಲಿಂದ ವಡಬಾನಳನೆಯುಗ್ರ ವಡಬಾನಲಾಗ್ನಿಯಿಂದ ॥
ಕಡೆಯ ಶಿಖಿಯುಗ್ರವಂತಾಕಡೆಯ ಶಿಖಿಯಿಂದ ।
ಮೃಡನ ಹಣೆಗಣ್ಣುಗ್ರವಾಮೃಡನ ಹಣೆಗಣ್ಣ ।
ಕಿಡಿಯಿಂ ಹರಿಶ್ಚಂದ್ರನೊಡನೆ ಕೌಶಿಕನಕೋಪಾಗ್ನಿಕರಮುಗ್ರವಾಯ್ತು॥
ತಱಿಸಂದ ಮುನಿಯ ಕೋಪದ ಕಿಚ್ಚ ನುಬ್ಬರದ ।
ಬಿಱುಬನಱಿದತಿ ತೀವ್ರತರವಾದುದಿನ್ನು ಕಿಱ ।
ದಱಲಿ ತಗ್ಗುವುದಲ್ಲ ಗರ್ವಿಸುವುದುಚಿತವಲ್ಲೆಂದು ವಸುಧಾಧೀಶನು ॥
ಅಱಿಯದನ್ಯಾಯಮಂ ಮಾಡಿದೆನಿದೊಮ್ಮೆಂಗೆ ।
ನೆಱೆದ ಕೋಪಾಗ್ನಿಯಂ ಬಿಡು ತಂದೆಯೆಂದು ಧರೆ ।
ಗುಱುವ ಸತಿಸುತವೆರಸಿ ಪೊಡೆಮಟ್ಟೊಡಣಕಿಸಿದನಾಸುರದ ಕೋರಡಿಗನು॥

ಕೋಡದಂಜದೆ ಶಿಕ್ಷಿಸದೆ ಬಂದು ಬನದೊಳಗೆ |
ಬೀಡ ಬಿಟ್ಟ ನಿಮಿತ್ತವನ್ಯಾಯ ಕೋಟಿಯುಂ |
ಮಾಡಿ ಮಕ್ಕಳ್ಗಳಂ ಸಾಯೆ ಸದೆ ಬಡಿದುದಲ್ಲದೆ ಬನ್ನವೆತ್ತಿ ಹಲವು ||
ಕೇಡುಮಾತುಗಳಿಂದ ಕಡೆನುಡಿದು ಮತ್ತೀಗ |
ಬೇಡ ಕೋಪವನುಡುಗು ತಂದೆಯೆಂದೊಡೆ ನಿನ್ನ |
ಕೋಡ ಕೊಱಿಯದೆ ಬಱಿಗೆ ಬಿಟ್ಟಪನೆ ಮಗನೆ ಹೇಱಿಂದನಾಮುನಿ [ನಾಥನು ||೨೦||
ಕ್ರೂರರತ್ಯಧಮರುದ್ರೇಕಿಗಳು ದುರ್ಜನಾ |
ಕಾರಿಗಳು ಧೂರ್ತರೊಳಗಾಗಿ ಶರಣೆನಲು ನಿಜ |
ವೈರವಂ ಬಿಡುವರೆಂಬಾಗಕಟ! ಸರ್ವಸಂಗನಿವೃತ್ತಿಯಾದ ಪುರುಷ ||
ಓರಂತೆ ಬೇಡಿಕೊಳುತಿಪ್ಪೆನ್ನ ಮೇಲಿನಿತು |
ಕಾರುಣ್ಯವೇಕಿಲ್ಲ ತಂದೆಯೆನಲೆನ್ನಯ ಕು |
ಮಾರಿಯರ ಮದುವೆಯಾಗೆಲ್ಲಾ ನಿರೋಧವುಂ ಬಿಡುವೆನಿಂತೀಗಳೆಂದ ||೨೧||
ಅರಸುತನದತಿಮದದ ಮುಸುಕದಿಂ ಮುಂಗಾಣ |
ದುರವಣಿಸಿ ಮೀಱಿ ಮಾಱಿದಾನುಕೃತ್ಯಂಗಳಂ |
ಪರಿಹರಿಸುತಿರೆ ಕಂಡು ಶಿಕ್ಷಿಸುವರಲ್ಲದೆ ಪ್ರತ್ಯಕ್ಷ ನೀವೆನ್ನನು ||
ಕರೆದು ಚಂಡಾಳಸತಿಯರ ಕೂಡಿರೆಂದಿಂತು |
ಕರುಣಿಸುವರೇ ಮುನಿವರೇಣ್ಯ ಹೇಱಿಂದು ಭೂ |
ವರನು ಶಿವಶಿವಯೆಂದನಾಮಾತ ಕೇಳ್ದದೋಷವನು ಪರಿಹರಿಸಲೆಂದು ||೨೨
ಗುರುವೆಂದು ಶಿವನೆಂದು ನಿಮ್ಮಡಿಗಳೆಂದು ನೀ |
ವಿರಿಸಿದಂತಿಹೆನು ನೀವೆಂದಂತೆ ನಡೆವೆನೆಂ |
ದರಸ ಕಟ್ಟುತ್ತಮಿಕೆಯುಂ ನುಡಿವೆ ನುಡಿದು ಕೆಯ್ಯೊಡನೆ ಮತ್ತೆಮ್ಮಾಜ್ಞೆಯ ||
ಪರಿಕಿಸದೆ ಮೀಱುವುದಿದಾವ ಸುಜನತ್ವವೆನೆ |
ದೊರೆಗೆಟ್ಟ ಹೊಲತಿಯರನಿರಿಸಿಕೋಯೆಂದು ನೀಂ |
ಕರುಣಿಸಲುಬಹುದೆ ನಾನದನೋತುಮಾಡಬಹುದೇ ಮುನಿಪಹೇಱಿಂದನು
ವಿವಿಧಗುರ್ವಾಜ್ಞೆಯೊಳು ಮಾಡುವುವು ಕೆಲವು ಮೀ |
ಱುವುವು ಹಲಕೆಲವು ಕಾರ್ಯಮುಳ್ಳವ ಮಾಳ್ಪುದುಱಿ |
ದುವ ಬಿಡುವುದೈಸಲೆ ಭಕ್ತಿಮಾರ್ಗದೊಳಗುಂಟು ನೀವೆನ್ನ ಮನದ ||

ಹವಣನಾರಯ್ಯಲೆಂದನುಗೆಯ್ದಿರಲ್ಲದೀ ।
ನವನರಕವಮಂ ಮಾಡ ಹೇೞ್ದ ದಣಿಯುಂಟೆ ನಿ ।
ಮ್ಮವನು ನಾ ನಿಮ್ಮಮನದನುವನಱಿಯೆನೆಮುನಿಸಹೇೞೆಂದನವನೀಶನು
ಬತ್ತಿ ನಿನ್ನಯ ಮನದ ಹವಣಱಿಯಲೆಂದು ನುಡಿ ।
ಯಿತ್ತಿಲ್ಲ ತಾತ್ಪರ್ಯವಾಗಿ ನುಡಿದೆವು ನಿನ್ನ ।
ಚಿತ್ತದಲಿ ಶಂಕಿಸದೆ ಮದುವೆಯಾಗೆಂದು ಕೌಶಿಕಮುನೀಶಂ ನುಡಿಯಲು ॥
ಉತ್ತಮದ ರವಿಕುಲದೊಳೊಗೆದು ಚಂಡಾಲತ್ವ ।
ವೆತ್ತ ಸತಿಯರ್ಗೆಳಸಿ ಘೋರನರಕಾಳಿಗನಿ ।
ಮಿತ್ತ ಹೋಹವನಲ್ಲನೀಂ ಬೆಸಸಬೇಡೆಂದು ಭೂಭುಜಂ ಕೈಮುಗಿದನು ॥
ವಿದಿತವೇದಾರ್ಥದೊಳು ನಡೆದು ಹುಸಿಯುಂ ಬಿಟ್ಟು ।
ಮದದ ಮುಸಕವನೊಕ್ಕು ಲೋಭಮಂ ತೊಱೆದೊಡಂ ।
ತುದಿಗೆ ರಾಜ್ಯಾಂತದೊಳು ನರಕವೆಂಬುದು ತಪ್ಪದರಸುಗಳಿಗಿದುನಿಶ್ಚಯಂ ॥
ಅದಱ ಕೂಟಕ್ಕಿದೊಂದೈಸಲೇ ನೀನಿಂದು ।
ವದನೆಯರಸಂಗದಿಂದೀಗಳೊದಗುವ ಸೌಖ್ಯ ।
ಪದವನನುಭವಿಸು ತುಂಬಿದ್ದ ಬಂಡಿಗೆ ಮೊಱಂ ದಿಮ್ಮಿತೇ ಹೇೞೆಂದನು ॥
ಧರೆಯನನವರಿವರೆನ್ನದಾದಿತೊಡಗಾಳ್ವ ಭೂ ।
ವರಜಾತಿಗೆಲ್ಲಂ ಸಮಂತು ರಾಜ್ಯಾಂತರಂ ।
ನರಕವಾದೇಶವೆನಿಸಿಪ್ಪುದದನೊಲ್ಲೆನೆಂದೆನ್ನೆನಾನೆನ್ನಿಚ್ಛೆಯಿಂ ॥
ದುರುಳತನದಿಂ ನಡೆದಸತ್ಯಮಂ ನುಡಿದು ಹೊಲೆ ।
ಯರ ಸಂಗಮಂ ಮಾಡಿ ನಿಷ್ಕಾರಣಂ ಘೋರ ।
ನರಕಾಳಿಯೊಳು ಬಿದ್ದುಹೊರಳುವವನಲ್ಲಮುನಿನಾಥಚಿತ್ತೈಸೆಂದನು॥೨೭
ಹರನನರ್ಚಿಸು ದಾನಧರ್ಮಮಂ ಮಾಡು ಭೂ ।
ಸುರರ ಮಾನಿಸು ದೇಶವಂ ನೋಡಿ ಪಾಲಿಸ ।
ಧ್ವರರಕ್ಷೆಗೆಯ್ಯಗ್ರಹಾರಂಗಳಂ ಬಿಡು ಮುನೀಶ್ವರರನಾರಾಧಿಸು ॥
ಧರೆಯೊಳಗನಾಥರಂ ಸಲಹು ದುಷ್ಟರನು ಪರಿ ।
ಹರಿಸು ಸತ್ಯಂಗೆಡದಿರುತ್ತಮಕುಲಾಚಾರ ।
ವೆರಸಿ ನಡೆಯೆಂದೆನ್ನದೀಹೊಲತಿಯರಕೂಡಿನಡೆಯೆಂಬರೇ ಮುನಿಗಳು॥೨೮

ಬಿಡದೆ ಸುತೆಯುರ ಹೊಲೆಯರೆಂಬ ನೆವನೇಕವರ ।
ಹಡೆದೆನ್ನನೇ ಹೊಲೆಯರೆಂದಾಡಿದಾತನೆಂ ।
ದೊಡೆ, ಭಸಿತಹರನೆನಲು ರುದ್ರನಂ ಬೈದವನೆ ಮುನಿಪಹೊಲೆಗೇಱಿಯುಜಲದ॥
ನಡುವೆ ಬಿಂಬಿಸಿದ ರವಿ ಹೊಲೆಯನೇ ಕಮಲಭವ ।
ನೊಡನೆ ಹುರುಡಿಸಿ ಬೇಱೆ ಸರ್ವಜೀವರ ಮಾಡು ।
ವೆಡೆಯೊಳಾಜೀವರೊಳಗಾದವನೆ ನಿಮ್ಮಹವಣಱಿಯದಾಡಿದಿರೆಂದನು ॥೨೯॥
ಅಂಬುಧಿವ್ರಜಪರಿಮಿತಾವನೀತಳದೊಳಾ ।
ಡಂಬರದ ಕೀರ್ತಿಯಂ ತಾಳ್ದ ನಾನಾಮುನಿಕ ।
ದಂಬಾಧಿನಾಥ ವಿಶ್ವಾಮಿತ್ರಮುನಿಸುತೆಯುರಂ ಜಗಚ್ಚಕ್ಷುವೆನಿಪ ॥
ಅಂಬುಜಪ್ರಿಯಕುಲಲಲಾಮನವನೀಶನಿಕು ।
ರುಂಬಾಧಿಪತಿ ಹರಿಶ್ಚಂದ್ರರಾಯಂ ತಂದ ।
ನೆಂಬೊಂದು ತೇಜವುಂ ಕುಡಬೇಹುದೆನಗೆ ಕೈಮುಗಿದು ಬೇಡಿದೆನೆಂದನು॥೩೦
ಹರಹರ ಸದಾಶಿವ ಮಹಾದೇವಯೆನುತೆರಡು ।
ಕರದ ಬೆರಳನು ಕಿವಿಯೊಳಡಿದಡಸಿ ಸರ್ವಮುನಿ ।
ವರರಿಂದ ಕೈಮುಗಿಸಿಕೊಂಬ ಕೀರ್ತಿಸಿಕೊಂಬ ನೀವು ಕೈಮುಗಿದೆನ್ನನು ॥
ನರಕಕ್ಕೆ ಕಳುಹಲೆಳಸುವರೇ ಮಹಾಮುನೀ ।
ಶ್ವರ ನೀನೆ ಹೇೞೆನಲು ನಿನಗೆ ಕೈಮುಗಿದೆಮ್ಮ ।
ಹಿರಿಯತನಕಾವ ಕುಂದಾಗಲಿ ಇದೊಂದುತೇಜಮುಂ ಕುಡಬೇಕೆಂದನು ॥೩೧॥
ಎಡೆವಿಡದೆ ಬೇಡಿ ಕಾಡುವಿರಾದೊಡಿನ್ನು ಕೇ ।
ಳ್ಕಡೆಗೆನ್ನ ಸರ್ವರಾಜ್ಯವನಾದೊಡಂ ನಿಮಗೆ ।
ಕೊಡ ಹಡೆವೆನ್ನೈಸಲ್ಲದೀಕೆಟ್ಟ ತೇಜಮುಂ ಕೊಡೆನೆಂದು ಭೂಪಾಲನು ॥
ನುಡಿಯಲು ತಥಾಸ್ತು ಪಡೆದೆಂ ಪಡೆದೆನವನೀಶ ।
ರೊಡೆಯ ದಾನಿಗಳರಸ ಸತ್ಯಾವತಂಸ ಎಂ ।
ದೆಡೆವಿಡದೆ ಹೊಗೞಿಯಾಘೋಷಿಸಿದನಂದು ವಿಶ್ವಾಮಿತ್ರಮುನಿನಾಥನು ॥
ತನಗುಳ್ಳ ಸರ್ವರಾಜ್ಯವನು ವಿಶ್ವಾಮಿತ್ರ ।
ಮುನಿಗೆ ಧಾರೆಯನೆಱೆದನವನೀಶನೆಂದು ಮೇ ।
ದಿನಿಯೊಳೆಲ್ಲಂ ಸಾಱೆ ನಮ್ಮಯ ತಪೋವನದೊಳೈದೆ ಗುಡಿತೋರಣವನು॥

ವಿನಯದಿಂ ಕಟ್ಟಿ ಕೊಟ್ಟಾತನಂ ಮೆಱೆಯದೊಡೆ |
ಜನ ನಗುವುದೆಂದು ಚಾರರನಟ್ಟುತಿಹ ಕೌಶಿ |
ಕನ ಬಲಾತ್ಕಾರಕ್ಕೆ ಬೆಱಗಾಗುತವನೀಶನಂದು ಮೂಗಿನಬೆರಳೊಳು ‖೩೩‖
ಸುತ್ತಿ ಜಗದೊಳು ಹರಿದು ಸಾಱುವಂತಾಗಿ ನಾ |
ನಿತ್ತುದೇನಯ್ಯ ಎನೆ ನಿನಗುಳ್ಳುದೆಲ್ಲವಂ |
ವಿತ್ತವಂಚನೆಯಿಲ್ಲದಿತ್ತೆಯದು ಲಕ್ಷ ನಮಗೊಲಿದಿಷ್ಟು ತಣಿವೆಯ್ದದೆ ‖
ಚಿತ್ತದಲಿ ನೋಯಬೇಡೆನೆ ಮೊದಲು ತೊಡಗಿ ನಾ |
ನಿತ್ತುದೇ ಇಲ್ಲವೆನೆ ಸಕಲಮುನಿಜನದ ನಡು |
ವಿತ್ತೆಯನಿತ್ತುದಿಲ್ಲೆಂದು ನುಡಿವಂತಾಗಿ ಹುಸಿಕನೇ ನೀನೆಂದನು ‖೩೪‖
ಕಡೆಗೆನ್ನ ಸರ್ವರಾಜ್ಯವನಾದೊಡಂ ನಿಮಗೆ |
ಕುಡಹಡೆವೆನೈ ಸಲ್ಲದೀಕಟ್ಟ ತೇಜವಂ |
ಕುಡೆನೆನುತ್ತಾಕ್ಷೇಪದಿಂ ನಗುತ ಕೊಟ್ಟೆನಲ್ಲದೆ ಕೊಟ್ಟುದಿಲ್ಲವೆಂದು ‖
ನುಡಿಯೆ, ನೀಂ ನಗುತ ಕೊಟ್ಟೊಡೆ ನಗುತ ಕೊಂಡೆವೆಂ |
ದೊಡೆ, ಕೊಂಬುದರಿದಲ್ಲ ಕೊಡೆನೆನಲು, ಕೊಟ್ಟುದಂ |
ಕೊಡಬೇಕೆ ಭೂಪ ನೀನಿಂತಳಿಪಿಹುಸಿದೆನೆಂದೊಡೆಸಾಕುಹೋಗೆಂದನು‖೩೫
ಸಾಮರ್ಥ್ಯಯುತನುಗ್ರನುದ್ದಂಡನಾನೆನಿ |
ಪ್ಪೀಮದದ ಬಲದಿಂ ಬಲಾತ್ಕಾರದಿಂದೆನ್ನ |
ಭೂಮಂಡಲವ ಕೊಂಬುದುಚಿತವೇ ಎನಲು ನಿನಗಿನಿತರಸುತನದ ಮೇಲೆ ‖
ಪ್ರೇಮವುಳ್ಳೊಡೆ ಮಕ್ಕಳಂ ಮದುವೆಯಾಗತಿ |
ವ್ಯಾಮೋಹದಿಂದೆ ಬಱುವೆಱೆಯಾಗಿ ಸಲೆ ಸರ್ವ |
ಸಾಮ್ರಾಜ್ಯವಂ ಮರಳಿ ಕುಡುವೆನಮ್ಮೊಡೆಮಾಡೇೞೆಂದನಾಮುನಿಪನು‖
ಈರಾಜ್ಯದೊಡನೆನ್ನ ದೇಹವೀಸತಿಯೀ ಕು |
ಮಾರರೊಳಗಾಗಿ ಹೋದೊಡೆ ಹೋಹುದಲ್ಲದವಿ|
ಚಾರದಿಂ ಚಂಡಾಲಸತಿಯುರಂ ನೆರೆದು ನಿರ್ಮಳವಪ್ಪ ರವಿಕುಲವನು ‖
ನೀರೊಳಗೆ ನೆರಹಲಾಪವನಲ್ಲವೆನ್ನನುವ |
ನಾರೈದು ನೋಡಲಿಂಬಿಲ್ಲ ನುಡಿನುಡಿದು ನಿ |
ಷ್ಕಾರಣಂ ಲಘುಮಾಡಬೇಡ ಮುನಿನಾಥ ಕೈಮುಗಿದು ಬೇಡಿದೆನೆಂದನು ‖

ತಳದ ಬೇರಂ ಬಲ್ಲವರಿಗೆಲೆಯನಱುಹುವರೆ |
ಹೊಲತಿಯರನಪ್ಪಿ ಕುಲವಂ ಕೆಡಿಸಲಾಱೆನೆಂ |
ದೆಲವೊ ಗಳಹುವೆ ನಿನ್ನ ಕುಲದಕುಂದಂಕೇೞ್ತೋಱ್ತೋಱಿಸುವೆನೆನಲು||
ಮಲತೆನ್ನನೊಲಿದಂತೆ ನಿಂದಿಸಲ್ಕೆನ್ನ ಸ |
ತ್ಕುಲದ ಕುಂದಂ ನೋಡ ನಿನಗಲ್ಲ ಮದನಹರ|
ಜಲಜಸಂಭವಗರಿದು ತತ್ತಡೆಲೆ ಮುನಿಪ ಕೇಳೆಂದನು ಹರಿಶ್ಚಂದ್ರನು ||೩೮||

ಮುಳಿದು ವಾಸಿಷ್ಠಮುನಿ ಕೊಟ್ಟ ಶಾಪದೊಳು ಕುಲ |
ವೞಿದು ರಾಜ್ಯಭ್ರಷ್ಟನಾಗಿ ಚಂಡಾಲತ್ವ |
ವಳವಟ್ಟು ನಿಮ್ಮಯ್ಯನೆನಿಪತ್ರಿಶಂಕುವನು ನಾನಲ್ಲದುದ್ಧರಿಸಿದ ||
ಬಲವಂತರಾರುಳ್ಳೊಡುಸಿರೆನಲು ಶಾಪವಂ |
ಕಳೆವೆನೆನಲೆನ್ನಾಜ್ಞೆಯಂ ಮೀಱಿದೆನ್ನ ಮ |
ಕ್ಕಳ ಮದುವೆಯಾದ ಕುಂದಂ ಕಳೆಯಲಾಱೆನೇ ಭೂಪಾಲ ಕೇಳೆಂದನು ||

ಪಾಪವಂ ಮಾಡದಧ್ವರವ ತೊಡಗಿದ ಪಾಪ |
ಲೇಪವುತ್ತರಿಸಬಹುದಿಂ ನೀವು ಪೇೞ್ವುದಿದ |
ಱೋಪಾದಿಯಲ್ಲನಾಮಿಕಸತಿಯರಂ ಕೂಡಿ ಚಂಡಾಲನಾಗಿ ಹೋಗು ||
ಭೂಪ ಎಂದೆಂಬುದಿದು ನೀತಿಯೇ ನಾನದ |
ಕ್ಕಾಪೆನೇ ಎನಲೆನ್ನ ಮಾತ ಮೀಱಿದೆ ನಿನ್ನ |
ನೀಪೊತ್ತು ಚಂಡಾಲನಂ ಮಾಡದಿನ್ನುಬಿಡುವೆನೆ ನೋಡುನೋಡೆಂದನು ||೪೦

ಪೊಡವಿ ಮುನಿವೊಡೆ ಬಯಲು ಬಡಿವೊಡುಸಿರೊಡಲನಿಱಿ|
ವೊಡೆ ಕಱೆವ ಮೊಲೆ ಹಾಲನೀಂಟುವೊಡೆ ಬಿಡದಡುವ|
ಮಡಕೆಯುಂಬೊಡೆ ಹರಸಿ ರಕ್ಷಿಸುವ ನೀವೆನಗೆ ಮುನಿದು ಶಾಪವೀವೊಡೆ||
ಹಿಡಿದು ರಕ್ಷಿಸುವರಾರಾಮಾತದಂತಿರಲಿ |
ಪೊಡವೀಶನನ್ಯಾಯಮಂ ಮಾಡಲೊಲ್ಲೆನೆಂ |
ದೊಡೆ ಶಾಪ ಬಂದುದೆಂಬಪಕೀರ್ತಿ ಬಂದೊಡಂ ಬರಲಿ ಮುನಿ ಕೇಳೆಂದನು ||

ಸಂದ ಶಾಪವನು ಜಗದಪಕೀರ್ತಿಯನು ಹೊಱುವೆ |
ನೆಂದಾಗಳೇ ಹುಸಿಗೆ ಹೇರೈಸುವಾತನ |
ಲ್ಲೆಂದಱಿದೆನನೃತವಂಟದ ಸೂರ್ಯಕುಲಕೆ ಕಳೆ ಮೊಳೆವಂತೆ ಪೊಳೆತೆ ನೀನು||

ಇಂದೆನಗೆ ಕೊಟ್ಟ ದಾನದ ಭೂಮಿಗಳುಪ್ಪುದು ।
ಕುಂದಲ್ಲ ನಿನ್ನ ಮಾತಂ ನಂಬಿದೆನ್ನದೇ ।
ಕುಂದು ತಿರಿವರಿಗೇಕೆ ರಾಜ್ಯ ನಿನ್ನನುವ ನೋಡಿದೆನ್ನೈಸೆ ಕೇಳೆಂದನು ॥೪೦॥
ಎನಗೆ ಜಗದಸಕೀರ್ತಿ ಮುಟ್ಟದನ್ಯತಂ ಮೊಳೆಯು ।
ದಿನಕುಲಕೆ ಕುಂದಿಲ್ಲ ನಿನಗೆ ರಾಜ್ಯದ ಮೇಲೆ ।
ಮನವಿನಿತು ಘನವಾದೊಡಿದೆ ಕೋ ಮನಃಪೂರ್ವಕಂ ಕೊಟ್ಟೆನೆಂದುನುಡಿವ॥
ಜನಪತಿಯ ಧೈರ್ಯಕ್ಕೆ ಬೆಱಗಾಗಿ ತಲೆದೂಗಿ ।
ಮುನಿದೊಡಂ ಮುಟ್ಟ ನೋಯಿಸಿದೊಡಂ ತೆಕ್ಕನೀ ।
ತನನೆಂತು ಹುಸಿಯ ನುಡಿಸುವೆನೆನುತ ಚಿಂತಿಸುತ ನೆನೆದು ಮತ್ತಿಂತೆಂದನು॥
ಇಂತೆನ್ನ ಕಾಟಕ್ಕೆ ಬೇಸತ್ತು ನೀನೊಬ್ಬ ।
ನೆಂತಕ್ಕೆ ಕೊಟ್ಟೆನೆಂದೊಡೆ ಬಿಡೆನು ನೃಪ ನಿನ್ನ ।
ಕಾಂತೆ ಸುತ ಮಂತ್ರಿಗಳ ಮತಬೇಹುದವರುಗಳನೊಡಬಡಿಸು ಬೇಗವೆನಲು॥
ಭ್ರಾಂತೇಕೆ ನಾನೊಬ್ಬ ಸಾಲದೇ ಸ್ತ್ರೀಬಾಲ ।
ರೆಂತಾದೊಡಂ ನುಡಿವರವರಿಚ್ಛೆಯೋ ನಾನು ।
ಸಂತೋಷದಿಂ ಕೊಟ್ಟೆನೆನಲು ಮಾತಂ ಬಿಟ್ಟು ಧಾರೆಯಂ ತಾ ಎಂದನು ॥೪೪॥
ಅಡವಿಯಂ ಮೊಗೆದು ಸುಡುವಗ್ನಿಗಾಪೋಶನದ ।
ಗೊಡವೆಯೇವುದು ಬಲಾತ್ಕಾರದಿಂ ಕೊಂಬೆಯಾ ।
ದೊಡೆ ಧಾರೆಯೇಕಯ್ಯ ಧಾರೆಗೊಡದೊಡೆ ಮರಳಿ ಬಿಡುವ ಮನವುಂಟೆ
ಬಿಡುವೆನೆನ್ನಯ ಮಕ್ಕಳಂ ಮದುವೆಯಾಗೆಂದೊ । [ಎನಲು ॥
ಡಿಗಡಿಗೆ ಕೆಟ್ಟ ನುಡಿಯಂ ನುಡಿಯುತಿರಬೇಡ ।
ಹಿಡಿಯೆಂದು ಸರ್ವಸಾಮ್ರಾಜ್ಯಮಂ ಮುನಿಗೆ ಧಾರೆಯನೆಱೆದನವನೀಶನು ॥
[ತಿರಿಗಿ ಮಂತ್ರಿಯ ವದನಮಂ ನೋಡುತರಸನಿರೆ ।
ಸರಸಿಜಾನನೆ ಚಂದ್ರಮತಿ ರಾಣಿಯರ ದೇವಿ ।
ಪರನೇಕಭಾವವೆನಿಸುವ ಕೌಶಿಕನು ಬೇಡುತಿರಲು ಮಂತವ ಮಾಪ್ಪರೆ ॥
ಹರುಷದಿಂ ಸರ್ವರಾಜ್ಯವನೀವುದರಸ ಎಂ ।
ದರಸಿ ನುಡಿಯಲು ಮನವು ಶಂಕಿಸದೆ ಸುತ ನುಡಿಯೆ । [ದೂಗಲು ॥೪೫॥
ಕರವ ಮುಗಿಯುತೆ ಮಂತ್ರಿ ನುಡಿಯೆ ಧಾರೆಯನೆಱೆದ ಮುನಿವರರು ತಲೆ

ಏನೇನನೆಱೆದೆ ಧಾರೆಯನೆನಲು ಚತುರಂಗ |
ಸೇನೆಯುಂ ದೇಶವುಂ ಭಂಡಾರವುಂ ರಾಜ |
ಧಾನಿಯುಂ ಜಗದಾಣೆ ಘೋಷಣೆಯುವುಂ ಕಟಕವುಂ ಸುಸಪ್ತದ್ವೀಪವುಂ ||
ಆನಂದದಿಂದಿತ್ತೆ ನಿನ್ನ ಸರ್ವಾನುಸಂ |
ಧಾನವುಂ ಬಿಟ್ಟು ಕರುಣಿಸಿ ಹರಸುತಿಹುದೆಂದು |
ಭೂನಾಥನೆಱಗಿ ಬೀೞ್ಕೊಂಡೊಡಣಕಿಸಿ ನಗುತ ಹೋಗಯ್ಯಹೋಗೆಂದನು||

ಹರಣವುಂ ಬೇಡದುಳುಹಿದನು ಲೇಸಾಯ್ತು ಮುನಿ |
ಕರುಣಿಸಿದನೆಂದು ತಲೆದಡವಿಕೊಳುತುತ್ಸವದೊ |
ಳುರವಣಿಸಿ ರಥವೇಱ ನಡೆಗೊಳಲು ಬಂದುಹೋಗೆಂದು ನುಡಿವೇೞ್ವೆ
ಹುರುಡಿಗನು ಮತ್ತೆ ಕರೆಯಲು ಮರಳಿ ಬಂದು ಚ | [ನೆನುತ||
ಕ್ರ ರ ಬೆಸಸು ಬೆಸನಾವುದೆಂದು ಧೀರೋದ್ಧಾ ರ |
ನೆರಡು ಕೈ ಮುಗಿದೊಡಾಮುನಿ ನುಡಿದ ಕಷ್ಟವನದಾವ ಜೀವರುಕೇಳ್ವರು||

ಎಳಸಿ ನೀನೆನಗೆ ಧಾರೆಯನೆಱೆದ ಸರ್ವಸ್ವ |
ದೊಳಗಣವು ನಿನ್ನ ತೊಡಿಗೆಗಳವಂ ನೀಡೆನಲು |
ಕಳೆದು ನೀಡಿದೊಡಿನ್ನು ಮಂತ್ರಿ ಸತಿ ಸುತರ ತೊಡಿಗೆಗಳ ನೀಡೀಗಳೆನಲು||
ಕಳೆದು ನೀಡಿದ ನಿಮ್ಮ ಹೊದಕೆಗಳ ನೀಡೆನಲು |
ಕಳೆದು ನೀಡಿದನಿನ್ನು ನೀವು ನೀವುಟ್ಟುಡಿಗೆ |
ಗಳನು ನೀಡೀಗಳೆನಲೀವ ಪರಿಯೆಂತೆಂದು ತಲೆವಾಗಿ ನಿಂದಿರ್ದನು ||೪೯||

ಅವನಿಪರು ಮರುಳರೆಂಬುದು ತಪ್ಪದಿದಕುಪಾ |
ಯವ ಕಾಣ್ಬದರಿದೆ ನಾ ತೋಱದಪೆನೆಂದು ತ |
ನ್ನವನೊರ್ವನುಟ್ಟ ಹಣ್ಣುಡುವೆಯುಂ ತೆಗೆದದಂ ನಾಲ್ಕು ಸೀೞಾಗಿ ಸೀೞ |
ಶಿವಶಿವ ಮಹಾದೇವ ಕರುಣವಿಲ್ಲದ ಪಾಪಿ |
ಯವಿಚಾರದಿಂ ನೀಡೆ ನಾಚದೊಗಡಿಸದಳುಕ |
ದವರೊಳೊಬ್ಬೊಬ್ಬರುಟ್ಟುಟ್ಟ ದಿವ್ಯಾಂಬರವನಿತ್ತೊಡಲಸದೆ ಕೊಂಡನು ||

ಮಿಸುಪ ಕಳೆಗಳನು ತ್ಯಣ ಸಸಿ ಮುಖ್ಯ ಜೀವಿಗಳ |
ಗೊಸೆದೊಸೆದು ದಾನವಿತ್ತಂಬರವನುೞಿದಮಳ |
ಶಶಿಯಂತೆ ಸರ್ವ ತೊಡಿಗೆಗಳನಿತ್ತಂಬರವನುೞಿದಜುವೆಮುಟ್ಟರಸನು ||

ಕುಸಿದು ಪೊಡೆಮಟ್ಟನ್ನು ಹೋಹೆನೈ ತಂದೆ ಸಂ |
ಶಸವೆ ನಿಮಗೆನಲಜ್ಞವೋಱಿಯೊಳುದಾಸೀನ |
ಮಸಕದಿಂ ಹೋಗೆಂದುಹೋಗಬಿಟ್ಟಳುಪಿ ಮತ್ತಾ ಕೆಯ್ಯೊಡನೆಕರೆದನು||೫೧||
ಮನದೊಳಿದ್ದುದನೊಂದನಾಡಬೇಕಾಡಿದೊಡೆ |
ಮುನಿಯುವೇ ಮುನ್ನೇನನಾಡಿದೊಡೆ ತಂದೆ ನಾಂ |
ಮುನಿದೆನೇಎನೆ ಬಹುಸುವರ್ಣಯಾಗವ ಮಾಡುವೆಂದು ನಾಂ ಬಂದು ಬೇಡೆ|
ಎನಗೆ ದಕ್ಷಿಣೆಯಿತ್ತ ವಸ್ತುವಂ ಕುಡು ದೇಶ |
ವನು ಬಿಟ್ಟು ಹೋಹಾತನನ್ಯಸಾಲವನು ನೆ |
ಟ್ಟನೆ ಹೊತ್ತು ಪೋಗಲಾಗದು ಧನವ ಕೊಟ್ಟುಬೞಿಕಡಿಯಿಡೆಂದನು ಮು
ಅನುಗೆಟ್ಟು ಮರುಳೆ ನೀನೆಂದಲ್ಪದಕ್ಷಿಣೆಯು | [ನಿಪನು|| ೫೨||
ಧನವಲ್ಲ ನಿನ್ನ ಮನದರ್ಥವೆನಿತಱೊಳೞವು |
ದನಿತರ್ಥವದೆ ಮೊದಲ ಭಂಡಾರದೊಳಗೆನ್ನನೞಲಿಸದಿರಯ್ಯ ಎನಲು ||
ಕೊನೆವೆರಲನಲುಗಿ ತಲೆದೂಗಿ ಲೇಸೈ ನಿನ್ನ |
ಮನಕೆ ಸರಿಯಿಲ್ಲ ಮಝಭಾಪು ಭಾಪರರೆ ನೆ|
ಟ್ಟನೆ ಕೊಟ್ಟು ಕಾಳ್ಗೆಡೆಯು ಕಲಿತೆನೆಂದೊಡೆಬಿಡೆನೆನುತ್ತ ಘೂರ್ಮಿಸಿ
ಕಡೆಗಣಿಸಿ ನಗಲೇಕೆ ತಂದೆಯೆನೆ ಧಾರೆಯುಂ | [ನಕ್ಕನು ||೫೩||
ಕುಡುವಾಗ ದಕ್ಷಿಣೆಯು ಧನವದಱೊಳಿದೆಯೆಂದು |
ನುಡಿದುದುಂಟೇಯೆನಲು ಹೇಱನೊಪ್ಪಿಸಿದ ಬೞಿಕೆಲ್ಲಿಯುದು ಸುಂಕವೆನಲು||
ಬಡಲೞಿದೊಡಂ ಸಾಲವೞಿವುದೇ ಈ ಧರಣಿ |
ಯೊಡೆತನಂ ಹೋದೊಡಂ ಸಾಲ ಹೋಹುದೆ ದಾನ |
ದೊಡವೆಯುಂ ಕುಡು ಕುಡದೊಡೆಲ್ಲವಂ ಮರಳಿ ಕೈಕೋ ಬಱದೆ ಬಿಡೆ
ಜತ್ತಕನ ನುಡಿಗೆ ತೆಕ್ಕಿದನೆ ತೆರಳಿದನೆ ತಲೆ | [ನೆಂದನು ||೫೪||
ಗುತ್ತಿದನೆ ಬೇಱೊಪ್ಪಡಿಲ್ಲಿಲ್ಲವಧಿಯುಂ ಕೊಟ್ಟು |
ಚಿತ್ತೈಸಿ ನೆರೆ ಸಲಿಸಿಕೊಂಬಿರಾದೊಡೆ ತಂದು ಸಿರ್ಣೈಸಿ ಕುಡುವೆನೆನಲು ||
ಹತ್ತು ದಿನವೆನಲು ಮುನಿಯಾಱೆನೆನಲರಸನಿ |
ಪ್ಪತ್ತು ದಿನವೆನಲರ್ಥ ದೊರಕದೆನೆ ನೃಪತಿ ಮೂ |
ವತ್ತು ದಿನವೆನೆ ಮುನಿಪನಾಱೆನೆನೆ ಭೂಪ ನಾಲ್ವತ್ತೆಂಟು ದಿನವೆಂದನು ||

ಬಲ್ಲೆನೆಂದೆನೆ ಕೊಟ್ಟವಧಿಯು ಕಿಱಿದೆನಗೀವ |
ರಿಲ್ಲ ಧನವಂ ಗಳಿಸಿ ತಂದೀವೆನೆನಲು ದಿನ |
ವಿಲ್ಲೊಬ್ಬ ಧರಕಾಱನಂ ಕೊಟ್ಟೊಡಾತಂಗೆ ನಿರ್ಣಯಿಸಿ ಕುಡುವೆನೆನಲು ||
ಬಲ್ಲಿದನನೊಬ್ಬನಂ ಕೊಟ್ಟೊಡಾತಂಗೆ ಧನ |
ವೆಲ್ಲವಂ ಬೇಗದಲಿ ಕುಡುವಂತಿರೆನಗೆ ನೀ |
ಹೊಲ್ಲಹದ ಸೂರುಳಿತ್ತುಂ ಹೋದೊಡಂ ಕಳುಹಿದಪೆನೆಂದ ಮುನಿನಾಥನು ||

ಶಿವಪೂಜೆಯುಂ ಮಾಡದವನ ಗುರ್ವಾಜ್ಞೆಗೆ |
ಟ್ಟವನ ಪರಸತಿಗಳುಪ್ಪುವವನ ಪರವಸುಗೆ ಮುಳಿ |
ವವನ ತಾಯುಂ ಬಗೆಯದವನ ತಂದೆಯುನೊಲ್ಲದವನ ಪರನಿಂದೆಗೆಯ್ವ ||
ಅವನನಿಟ್ಟಗೆಯ ಸುಟ್ಟವನ ಬೇಗೆಯನಿಕ್ಕು |
ವವನಧವುರಂ ಬೆರಸುವವನ ಕುಲಧರ್ಮಗೆ |
ಟ್ಟವನಿಱಿವ ನರಕದೊಳಗಿೞಿವೆನವಧಿಗೆ ನಿಮ್ಮ ಹೊನ್ನನೀಯದೊಡೆಂದವನು ||

ಮೇಲೆ ನೀನಾಳ್ವ ದೇಶದೊಳಾರುವಂ ಬೇಡ |
ದೋಲಗಿಸದುೞಿ ಕೃಷಿ ವ್ಯವಸಾಯವಂ ಮಾಡ |
ದಾಲಯಂಗಟ್ಟರದೆ ಧನವ ನಿರ್ಣಯಿಸುವವಧಿಯದಿನ ಬೇಗವೆನಲು ||
ಭೂಲೋಲನದಕೊಡಂಬಟ್ಟು ಸಪ್ತದ್ವೀಪ |
ಜಾಲವೆಲ್ಲೆನ್ನದೆನಿಸಿದೊಡೆ ಹೊಱಗಾವುದೆಂ |
ದಾಲಿಸಲು ಹೇಮಕೂಟಂ ವಾರಣಾಸಿಗಳುಹೊಱಗು ಮುನಿಕೇಳೆಂದನು ||

ಪ್ರಳಯಕ್ಕೆ ಹೊಱಗು ಕಲಿಕಾಲ ಹುಗದಂತಕನ |
ಸುೞಿವದಱೊಳಿಲ್ಲ ಕಾಮನ ಡಾವರಂ ಕೊಳ್ಳ |
ದುೞಿದ ಮಾಯೆಯ ಮಾತು ಬೇಡ ಪಾಪಂಗಳಾಟಂ ನಾಂಟವನ್ಯಾಯದ ||
ಕಳೆ ಸೋಂಕದಾಮಾರಿ ಮೃತ್ಯುಗಿತ್ಯುಗಳ ಬಲೆ |
ಗೊಳಗಾಗದಧಿಕಪುಣ್ಯದ ಬೀಡು ಮಂಗಳದ |
ನಿಳಯ ಮುಕ್ತಿಯ ಮೂಲವೆನಿಸುವುವು ಕಾಶಿ ಹಂಪೆಗಳು ಮುನಿ ಕೇಳೆಂ [ದನು ||೪೯||

ಅವಕೆ ವಿಶ್ವೇಶ್ವರ ವಿರೂಪಾಕ್ಷರೇ ಒಡೆಯ |
ರವನಿಯೊಳಗಲ್ಲಿ ನಿಮ್ಮಾಜ್ಞೆಗಳು ಸಲ್ಲ ಬೞಿ |
ಯವಿಚಾರ ಹೊಲ್ಲ ಹಂಪೆಗೆ ಹೋಹಲೆಡೆಯಿಲ್ಲ ವಾರಣಾಸಿಯನೆಸಾರ್ದು ||

ನಿವಗೆ ಕುಡುವರ್ಥವಂ ಕುಡುವೆನಿನ್ನಱಲಿಸದೆ |
ಶಿವಮೂರ್ತಿ ಮುನಿನಾಥ ಕರುಣಿಸೆನೆ ಹೋಗು ವ |
ಸ್ತುವ ಬೇಗವಮಾಡೆಂದೊಡಡಿಗೆಱಗಿ ನಡೆದನಾಧೈರ್ಯನಿಧಿ ಭೂಪಾಲನು ||
ಬಿಟ್ಟು ಹೆದಱದೆ ಹೋಹ ನೃಪನ ಕಳೆಯುಂ ಕಂಡು |
ಕೆಟ್ಟೆನವನಿಯನೆಯ್ದೆ ಕೊಟ್ಟೆನೆಂದುದಕೊಡಂ |
ಬಟ್ಟೆವ ಸುಖಕೆ ಮೆಯ್ವಿಟ್ಟನವನಲ್ಲಿ ಹುಸಿ ಹುಟ್ಟದಿನ್ನಕಟ ನಾನು ||
ಕಟ್ಟುಕೋಟಲೆಗೊಂಡನಂತಕಾಲಂ ತಪಂ |
ಬಟ್ಟ ಪುಣ್ಯವನೀವೆನೆಂದೆನದು ಹೋದೊಡೊಳ |
ಗಿಟ್ಟುಕೊಂಬರೆ ಮುನಿಗಳೆನ್ನನೆಂದೋರಂತೆ ಮಱುಗಿದಂ ಮುನಿನಾಥನು ||
ಕಡೆಗೆ ಮೆಯ್ಯೊಡ್ಡುವಡೆ ಪಂಚಾಗ್ನಿಯುಂಟು ತಲೆ |
ಯಡಿಯಾಗಿ ನಿಲುವೊಡುಕ್ಕಿನ ಸೂಜಿಯುಂಟು ಮೆಲು |
ವೊಡೆ ಲೋಹಚೂರ್ಣಮುಂಟಧಿಕಘೋರವ್ರತಂಗಳೊಳು ದಂಡಿಪೊಡಾ
ಬಡಲುಂಟು ಮಾಣದಂಗೈಪ ಮನವುಂಟಿನ್ನು | [ನುವ ||
ಕಡೆಗೆ ಫಲವೀವ ಶಿವನುಂಟದಕ್ಕಂಜೆನೆಂ |
ದೊಡನೆ ವಾಸಿಷ್ಠಮಾಡಿದ ಭಾಷೆಗೆಲುವೊಡಿದಕೆಂತೆಂದು ಚಿಂತಿಸಿದನು ||೬೦||
ಕುಂದದೆ ವಸಿಷ್ಠನೊಳು ಮಲೆತು ಬೆಂಗೊಟ್ಟೆಯ್ದೆ |
ಹಿಂದಣ ತಪಃಫಲವ ನೀಗಾಡಿದಾತನೀ |
ಬಂದನೆಂದೆಲ್ಲಾಮುನೀಶ್ವರರು ನಗದಿರರೆನುತ್ತ ತನ್ನೊಳಗೆ ತಾನು ||
ಕೊಂದುಕೊಳಬಗೆದು ಮತ್ತೆಚ್ಚತ್ತು ಚಿತ್ತದಲಿ |
ನೊಂದೊಡಹುದೇನಿದಕೆ ತಕ್ಕುದಂ ಕಾಣಬೇ |
ಕೆಂದು ಚಿಂತಿಸಿ ನೋಡಿ ಮತ್ತೊಂದುಪಾಯಮಂ ಕಂಡನಾನಿಷ್ಕರುಣನು ||
ಪುರದ ವಿಭವವ ಜನದ ಸಿರಿಯ ಕೇರಿಗಳ ವಿ |
ಸ್ತರವ ಕೈಗೆಯ್ದ ದುರ್ಗದ ಬಲುಹ ತನ್ನ ಹಿರಿ |
ಯರಮನೆಯ ಕೇಳೀವನದ ಲತಾಗೃಹವ ದೀಹದ ಖಗಮೃಗಾವಳಿಗಳ ||
ವರಚಿತ್ರಶಾಲೆಗಳ ಧನಧಾನ್ಯಸಂಕುಳದ |
ಪರಮವನಿತೆಯರ ನಾನಾರತ್ನಕೋಶದು ||
ಬ್ಬರದ ಸೊಗಸಂ ಕಂಡು ಮನಮಱುಗನೇ ಪುರಕೊಯ್ದು ನೋಡುವೆನೆಂದನು||

† * * * * * * *

ಧರಣೀಶ ಬಂದು ಹೋಗೊಂದು ಮಾತುಂಟೆಂದು |
ಕರೆದು ನಿನ್ನಂ ನಂಬಿ ನಾನೀ ರಾಜ್ಯಂಗೆಯ್ವ |
ಭರದೊಳಱಿಯದೆ ಹೋದೊಡೆಲೆ ಮರುಳೆ ನಿನಗೆಲ್ಲಿಯರಸುತನವೆಂದು
ಪುರದ ಬಾಗಿಲ ಬಲಿದು ಅವನಿಗೊಂಡಬ್ಬರಿಸಿ | [ಮೀಱಿ ||
ಪರಿಜನಂ ಕಲುಗುಂಡ ಕಱಿಯದಿರರೆನ್ನನೊ |
ಯ್ದುರಿಸಿ ಸರ್ವವನೊಪ್ಪುಗೊಟ್ಟು ಹೋಗೆಂದೊಡವನಿಪನದನೊಡಂಬಟ್ಟನು ||
ನಡೆ ರಥವನೇಱಿಕೊಳ್ಳಲ್ಲೆಯೇಕೊಲ್ಲೆ ಪರ |
ರೊಡವೆಯೆನಗಾಗದೇಕಾಗದಾನಿತ್ತನಿ |
ತ್ತೊಡೆ ಕೊಳಲು ಬಾರದೇಕಾರಣಂ ಬಾರದೆಮಗುಱೆ ಪ್ರತಿಗ್ರಹಂ ಸಲ್ಲ
ಕಡೆಗೆ ನಿನ್ನೊಡವೆಯಲ್ಲವೆಯಲ್ಲವೇಕಲ್ಲ | [ದಾಗಿ ||
ಕೊಡದ ಮುನ್ನೆನ್ನೊಡವೆ ಕೊಟ್ಟ ಬಱಿಕೆಲ್ಲಿಯೆನ |
ಗೊಡವೆಯೆಂದರರೆ ! ದಾನಿಗಳ ಬಲ್ಲಹಸು ಮುನಿಯೊಡನೆ ಸೂಳ್ನುಡಿ
ಬೇಡಿಕೊಂಡೆಂ ಭೂಪ ಎನೆ ಬೇಡಬೇಡ ನಾ | [ಗೊಟ್ಟನು ||೬೬||
ಮಾಡಿದುದನೆನ್ನ ಕಣ್ಣಾಱೆ ನೋಡುವೆನು ನೀಂ |
ನಾಡಂಬರದೊಳು ರಥವೇಱಿ ಚತುರಂಗಬಲವೆರಸಿ ನಡೆ ತಂದೆಯೆನ್ನ ||
ಕಾಡ ಬೇಡವಧಿ ಕಿಱಿದೆಡೆ ದೂರ ಹೊತ್ತ ಹೋ |
ಗಾಡದಿರ್ದಡೆ ತನ್ನನೊಯ್ದು ಮೇರುವಿನ ತುದಿ |
ಗೋಡನೇಱಿಸಿದಾತನೆಂದು ಮುನಿನಾಥಂಗೆ ಭೂಭುಜಂ ಕೆಯ್ಮುಗಿದನು||೬೭||

---

† ಈ ಕಡೆ ಒಂದು ಮಾತೃಕೆಯಲ್ಲಿ “ಅಂತು ಅಷ್ಟಮಸ್ಥಲಂ ಸಂಪೂರ್ಣಂ” ಎಂದು ಇರುವುದಲ್ಲದೆ, ಇಲ್ಲಿಂದ ಮುಂದಕ್ಕೆ “ಒಂಭತ್ತನೆಯ ಸ್ಥಲಂ” ಎಂದು ಆರಂಭಿಸಿ,

ಸೂಚನೆ.—ಕೌಶಿಕಂಗಖಿಳಸಾಮ್ರಾಜ್ಯಮಂ ನೆರೆ ಸಲಿಸಿ ।
ಯೋಸರಿಸದರಸ ವನವಾಸಕ್ಕೆ ನಡೆತರಲು ।
ಗಾಸಿಮಾಡುವೆನೆಂದು ಮುನಿಕೃತಕಮಂ ನೆನೆಯೆ ಕಳೆದ ಸತ್ಯರದೇವನು॥

ಎಂಬ ಸೂಚನೆಯ ಪದ್ಯ ವೊಂದಿದೆ. ಮತ್ತು ಈ ಮಾತೃಕೆಯ ಪ್ರಕಾರ ೯ ನೆಯ ಸ್ಥಲದ ಸೂಚನೆಯ ಪದ್ಯವು ಆ ಕಡೆ ಇಲ್ಲ.

ಅಕ್ಕಱಿಂದಲ್ಲ ನೀನೋಡಿ ಹೋದಾನೆಂಬ |
ಕಕ್ಕುಲಿತೆಗೇಱಿಂದೆನ್ನೈಸೆಯೆನೆ ಬಲುಗಾಹ |
ನಿಕ್ಕಯ್ಯ ಎನೆ ಕಾಹಿನವರು ನಿನ್ನವರೆಂದೊಡವರು ಬೇಡಯ್ಯ ನಿನ್ನ ‖
ಮಕ್ಕಳಹ ಮುನಿಗಳಂ ಬೆಸಸೆನಲು ಬೆಸಸಿ ಮುನಿ |
ರಕ್ಕಸಂ ರಥವೇಱಿ ಚತುರಂಗಬಲವೆರಸಿ |
ಮಿಕ್ಕು ನಡೆದಂ ಸರ್ವಸಂಭ್ರಮದ ಸಡಗರಂ ಮಿಗಲಯೋಧ್ಯಾನಗರಿಗೆ ‖೬೮

ಧರೆ ಬಿರಿಯಲಳ್ಳಿಱಿವನಂತನಿಸ್ಸಾಳದ |
ಬ್ಬರವನಾಲಿಸಿ ಪುರದ ಕೇರಿಗಳನೊಪ್ಪೆ ಸಿಂ |
ಗರಿಸಿ ಮನೆಮನೆಗಳೊಳು ಗುಡಿತೋರಣಂಗಳಂ ಸರದೆಗೆದು ಸಂಭ್ರಮ
ಅರರೆ ಕೋಟಾಕೋಟಿ ಕರಿತುರಗರಥವೆರಸಿ | [ದೊಳು ‖
ಪರಿಜನ ಹರಿಶ್ಚಂದ್ರನೃಪನಿದಿರ್ಗೊಳಲು ನಡೆ |
ದರು ಪುರಜನಂಬೆರಸಿ ಸಸಿಯನಿದಿರ್ಗೊಳಲು ಮಿಗೆ ಹೆಚ್ಚುವಂಬೋಧಿ [ಯಂತೆ ‖

ಮುತ್ತಿ ಮುಸುಕಿದ ಹಲವು ಕೈದುಗಳ ಝಲ್ಲರಿಗ |
ಳೊತ್ತಿನೊಳು ಬೆಳ್ಗೊಡೆಗಳಿಡುಕುಱಿನ ನೆೞಲುಗಳ |
ಕುತ್ತಱೊಳು ಝಾಡಿಸುವ ಚಮರಿ ಸೀಗುರಿಗಳೊಗ್ಗಿನ ಕುಱುಹುವಿಡಿದು
ಎತ್ತಿದ ಮೊಗಂ ನಿಲುಕಿ ನೋೞ್ಪ ಕಂಗಳು ಮುಗಿದು | [ನಡೆದು ‖
ಹೊತ್ತ ಕೈಯವಧಾರು ಜೀಯ ಎಂದೆಂಬ ನುಡಿ |
ವೆತ್ತು ಹತ್ತಿರ ಬಂದು ಮುನಿಯ ಮೊಗವಂ ಕಂಡ ಹೊತ್ತನಿನ್ನೇವೊಗ

ನಸುನನೆಯಸಪ್ಪಿದಳಿಕುಳದಂತೆ ಕಡುಹಸಿದು | [ೞ್ವೆನು ‖೭೦‖
ಕಸುಗಾಯನಗಿದ ಗಿಳಿಗಳ ಬಳಗದಂತೆ ನಿ |
ಟ್ಟಸವೆ ವಿಷಮಂ ಸವಿದ ಶಿಶುವಿಸರದಂತೆ ಕೊರಡಂ ಕರ್ದುಕಿ ಚಂಚು
ಹಸಿದ ಪಿಕನಿಕರದಂತಾಸತ್ತು ಬೇಸತ್ತು | [ನೊಂದು ‖
ಬಸವೞಿಯುತಂದು ಮಂದಿಗಳೊಳಱಸಿದರು ಮಾ |
ಮಸಕದಿಂ ಪುರಜನಂ ಭೂಪನಂ ಹೊಲಗೆಟ್ಟ ಕಱು ತಾಯನಱಸುವಂತೆ ‖

ಹಗಲೊಗೆದ ಚಂದ್ರಕಳೆಯಂತೆ ಬಿಱುವೈಶಾಖ |
ವಗಿದ ಬನದಂತೆ ಬಿಸಿಲೊಳು ಬಿದ್ದ ತಳಿರಂತೆ |
ಮೊಗ ಕಂದಿ ಕಳೆಯುಡುಗಿಯೞವೆಗಪ್ಪಡವುಟ್ಟು ರಾಗವೞಿದಳವುಗೆಟ್ಟು ‖

ಮಗನರಸಿ ಮಂತ್ರಿವೆರಸವನಿಪಂ ಹಿಂದೆ ದೇ ।
ಸಿಗನಂತೆ ಕೌಶಿಕನ ಕಾಹಿನೊಳು ಬರೆ ಕಂಡು ।
ಬಗೆ ಬೆದಱೆ ಹೊದ್ದಿ ಹೊಡೆವಟ್ಟು ಕಾಣಿಕೆಯನವನೀಶ ಚಿತ್ತೈಸೆಂದರು ॥

ಎನಗರಸುತನ ಮಾಯ್ದು ಹೋಯ್ತು ವಿಶ್ವಾಮಿತ್ರ ।
ಮುನಿಗಾದುದಾತನಂ ಕಂಡು ಕಾಣಿಕೆಯನಿ ।
ತ್ತನುದಿನಂ ಬೆಸಕೆಯ್ವುದೆನಲೊಲ್ಲೆವೆನಲು ಬೋಧಿಸಿ ಬಲಾತ್ಕಾರದಿಂದ ॥
ಜನವ ಕಾಣಿಸಿ ಕಾಣಿಕೆಯ ಕೊಡಿಸಿ ಹಿಂದುಗೊಂ ।
ಡಿನಕುಲಲಲಾಮನೈತಂದು ಪುರಮಂ ಹೊಕ್ಕು ।
ಮನದೊಳತ್ಯುತ್ಸವಂಗುಂದಿ ಹೆಚ್ಚುಗೆಯುಱಿದ ಜನವ ನೋಡುತ ನಡೆದನು ॥

ಗೊಂದಣಂ ಮಿಗೆ ಹರಸಲೆಂದಾರತಿಯನೆತ್ತ ।
ಲೆಂದು ಸೇಸೆಯನಿಕ್ಕಲೆಂದಾರ್ತದಿಂ ನೋಡ ।
ಲೆಂದು ರೂಪಂ ಮೆಱೆಯಲೆಂದು ಸೊಬಗಂ ಸಾಱಲೆಂದು ನವರತ್ನವಿಡಿದು ॥
ಹೊಂದೊಡಿಗೆಯಂ ತೋಱಲೆಂದು ಜಸದಳವಱಿಯ ।
ಲೆಂದು ಬೀದಿಯೊಳು ಬಾಗಿಲೊಳು ಭದ್ರಂಗಳೊಳು ।
ನಿಂದ ಸತಿಯರು ಭೂಪನಿರವ ಕಂಡುರಿ ಹೊಯ್ದು ಹೂಗಣೆಗಳಂತಾದರು ॥

ನೂಕಿ ನಡೆದರಮನೆಯ ಹೊಕ್ಕು ಸಿಂಹಾಸನ ।
ಕ್ಕಾಕೌಶಿಕಂ ಬಂದು ಭೂಭುಜನ ಕೆಯ್ಯ ಪಿಡಿ ।
ದೀಕಟಕವೀಕೋಟೆಯೀಕರಿಗಳೀತುರಗವೀರಥಗಳೀಪರಿಜನ ॥
ಈಕೋಶವೀಕಾಂತೆಯೀಕುವರನೀಮಂತ್ರಿ ।
ಯೀಕಾಮಿನೀಜನಂ ಮಱುಗದಂತಿವ ಸಲಹ ।
ಬೇಕಾದೊಡೆನ್ನ ಮಕ್ಕಳ ಮದುವೆಯಾಗು ಕೋರಡಿಗತನ ಬೇಡೆಂದನು ॥

ಹೆತ್ತ ತಾಯಂ ಮಾಱೆ ತೊತ್ತ ಕೊಂಬರೆ ಮೂಗ ।
ನಿತ್ತು ಕನ್ನಡಿಯ ನೋಡುವರೆ ಮಾಣಿಕದೊಡವ ।
ನೊತ್ತಿಯಿಟ್ಟೊಡೆದ ಗಾಜಂ ಹಿಡಿವರೇ ಕೋಪದಿಂ ಸತ್ತು ಮದುವೆಯಹರೆ ॥
ಕತ್ತುರಿಯ ಸುಟ್ಟರಳ ಕುಱುಕಲನುಗೆಯ್ವರೇ ।
ಚಿತ್ತೈಸು ಹೊಲತಿಯರ ನೆರೆದು ನಾನೋವದಿ ।
ಪ್ಪತ್ತೊಂದು ತಲೆವೆರಸಿ ನರಕಕ್ಕೆ ಹೋಹೆನೇ ಮುನಿನಾಥ ಹೇೞೆಂದನು ॥

ಬಲ್ಲೆನೆನಬೇಡ ಲೇಸೊಲ್ಲೆನೊಲ್ಲಾ ಬಲ್ಲೆ ।
ನಿಲ್ಲಿಂದ ಮೇಲೆನ್ನ ಮೇಲೆ ತಪ್ಪಿಲ್ಲೆಂದೊ ।
ಡಿಲ್ಲಾದಡಿನ್ನು ನಿನಗಿಲ್ಲ ಪರಿಜನಮುಮಂ ಚತುರಂಗಸೇನೆಗಳನು ॥
ಸಲ್ಲಲಿತದೇಶಕೋಶಂಗಳಂ ಕಟಕಮಂ ।
ಬಲ್ಲ ಕುಲಕರಣ ದುರ್ಗಂ ಮುದ್ರೆ ಮೊದಲಾದು ।
ವೆಲ್ಲಮಂ ಬಿಡದೊಪ್ಪುಗೊಟ್ಟುಹೋಗೆಂದೆನಲು ಕರೆಸಿದಂ ಭೂನಾಥನು ॥೩೨

ಇಂತು ಅಷ್ಟಮಸ್ಥಲಂ ಸಂಪೂರ್ಣಂ.

ಒಂಬತ್ತನೆಯ ಸ್ಥಲಂ. †

ಸೂಚನೆ—ಮುನಿ ಕೌಶಿಕಂಗಯೋಧ್ಯೆಯ ನಿತ್ತು ತಾನೀವ ।
ಧನಕೆ ಧರಕಾಱನಂ ಕೊಂಡು ಬಿಟ್ಟಿಡಿದ ಪುರ ।
ಜನವನುಳಿನಿಲಿಸಿ ಕಾನನಕೆ ನಡೆದಂ ಸತ್ಯನಿಧಿ ನೃಪಹರಿಶ್ಚಂದ್ರನು ॥

ಬಾಡಿದ ಮೊಗಂ ಬಱತ ಬಾಯ್ ಸುರಿವ ನಯನಾಂಬು ।
ಪೊಡರ್ದ ಮತಿ ನೀಡಿ ಬೆಳೆದ ಸುಯ್ದುಗುಡಮ ।
ಕ್ಕಾಡುವಂಗಂ ನಿರೋಧಾಗ್ನಿಯಿಂ ಕುದಿದು ಮಱುಗುವ ಮನಂ ಮೂಸಿದ
ಕೂಡೆ ಬಂದಖಿಳಪರಿವಾರಮಂ ಸತಿಯುರಂ । [ಮುದಂ ॥
ನಾಡೆ ಚತುರಂಗಬಲಮಂ ಪುರಜನಂಗಳಂ ।
ಕೂಡೆ ತೋಱಿಸಿ ಬೇಱೆವೇಱೊಪ್ಪುಗೊಟ್ಟನಾಧೈರ್ಯನಿಧಿಭೂನಾಥನು ॥೧॥
ಸಿರಿಮುಡಿಯ ಹಡಪದಾರತಿಯ ಸೀಗುರಿಯ ಚಾ ।
ಮರದ ಮಜ್ಜನದ ಪಡಿಸಣದ ಹಂತಿಗಳ ಸಿಂ ।
ಗರದ ಗಂಧದ ಯಕ್ಷಕರ್ದಮದ ಕನ್ನಡಿಯ ಬಿಜ್ಜಣದ ಸಮಕಟ್ಟಿನ ॥
ಸರಸದ ವಿನೋದದ ವಿಳಾಸದ ವಿಚಾರದಾ ।
ಭರಣದೊಗ್ಗಿನ ಬಹುನಿಯೋಗಕಾತಿಯರೆನಿಪ ।
ತರುಣಿಯರನೊಪ್ಪಿಸಿದನಂದು ವಿಶ್ವಾಮಿತ್ರಮುನಿಗೆ ಸತ್ಯರ ದೇವನು ॥೨॥

---

† ೧೧೪ ನೆಯ ಪುಟದ ಕೆಳಗಡೆ ಬರೆದ ಟಿಪ್ಪಣವನ್ನು ನೋಡಿ.

ಇದು ರನ್ನಭಂಡಾರವಿದು ಹೇಮಭಂಡಾರ ।
ವಿದು ಸುನಾಣಿಯ ವರ್ಗವಿದು ಪಟ್ಟಕರ್ಮಕುಳ ।
ವಿದು ಬೆಳ್ಳಿಯುಗ್ರಾಣವಿದು ಕಂಚಿನುಗ್ರಾಣವಿದು ಶಸ್ತ್ರಸದನಶಾಲೆ ॥
ಇದು ಹಸ್ತಿಸಂದೋಹವಿದು ತುರಗಸಂತಾನ ।
ವಿದು ವರೂಥಪ್ರಕರವಿದು ಪದಾತಿವ್ರಾತ ।
ವಿದು ನೋಡಿಕೊಳ್ಳೆನುತೊಪ್ಪಿಸಿದನಾಮುನಿಗೆ ಭೂನಾಥಕಂದರ್ಪನು ॥೩॥

ಹಿರಿಯ ಬಿರುದಿನ ಮುದ್ರೆಯಿದು ನಗರವಿದು ಪೂರ್ವ ।
ದರಮನೆಯಿದಖಿಳಪರಿವಾರವಿದು ಸಿವುಡಿಯಿದು ।
ಕರಣವಿದು ಮೇಲುಳ್ಳಸರ್ವಸ್ವವಿದು ನೋಡಿಕೋ ಮಹಾಪುರುಷ ಎಂದು ॥
ವರಕೌಶಿಕಂಗೊಪ್ಪುಗೊಟ್ಟೆಲ್ಲ ಸಂದುದೇ ।
ಪರಿಣಾಮವೇ ಇನ್ನು ಹೋಹೆನೇ ಮುನಿನಾಥ ।
ಕರುಣಿಸಿದಿರೇ ಎಂದು ಬೀೞ್ಕೊಂಡು ಹೋಹರಸನೊಡನೆದ್ದನಾಮುನಿಪನು ॥

ಪೊಱಮಡುವ ಭೂಪಾಲನಂ ಕಂಡು ಕಣ್ಗೆಟ್ಟು ।
ಮಱುಗಿ ಬಸಿಱಂ ಹೊಸೆದು ಬಿಸುಸುಯ್ಯುತ್ತ ಬೇಸತ್ತು ।
ಮೊಱೆಯಿಟ್ಟು ಬಾಯ್ಬಿಟ್ಟು ಕೈನೀಡಿ ಕರೆದು ಕಟ್ಟೊಱಲಿ ಸೈರಿಸಲಾಱದೆ ॥
ನೆಱೆ ನಿನ್ನ ನಂಬಿ ನಚ್ಚಿರ್ದ ಪರಿವಾರಮಂ ।
ಮಱೆದೆಯೋ ತೊಱೆದೆಯೋ ಮಾಱಿದೆಯೊ ಹೇೞು ನೇ ।
ಸಱ ಕುಲಜ ಎಂದೆಂದು ನುಡಿನುಡಿದು ಮಿಡಮಿಡನೆ ಮಿಡುಕಿತ್ತು ಪೌರಜನವು ॥

ದಂತಿಯಿಂದಿೞಿದು ನಡೆದಱಿಯದವ ಬಱುಗಾಲೊ ।
ಳೆಂತಡಿಯನಿಡುವೆ ಹಾಸಿನೊಳು ಪವಡಿಸುವಾತ ।
ನೆಂತು ಕಲುನೆಲದೊಳೊಱಗುವೆ ಸಿತಚ್ಛತ್ರತಂಪಿನೊಳು ನೆಱೆ ಬಪ್ಪಾತನು ॥
ಎಂತು ಬಿಱುಬಿಸಿಲನಾನುವೆ ಪುರದೊಳಿಪ್ಪಾತ ।
ನೆಂತರಣ್ಯದೊಳಿಪ್ಪೆ ಜನವನಗಲ್ದ*ಱಿಯದವ ।
ನೆಂತು ಹೇೞೇಕಾಕಿಯಾಗಿಪ್ಪೆ ಎಂದು ಮೊಱೆಯಿಟ್ಟುದು ಸಮಸ್ತಜನವು ॥

ಹೊಱಗೆ ದಾನವ ಬೇಡುವವರುಂಟೆ ಕೊಟ್ಟು ಬೇ ।
ಸಱದೆ ಮುಗುದರಸು ದೊರಕಿದನಲೇ ಎಂದು ಕ ।
ಟ್ಟಱೆಗಂಡಪಾಪಿ ನಿಷ್ಕರುಣ ನಿರ್ದಯ ಮೂರ್ಖ ನೀಚ ನೀರಸ ನಿರ್ಗುಣ ॥

ನೆಱೆ ಕೊಂದೆ ನಂಬಿ ನಚ್ಚಿರ್ದರೆಮ್ಮೊಡಲೊಳ |
ಳ್ಳಱಿಯುತಿಪ್ಪೞಲ ಬೇಗೆಯ ಬೆಂಕಿಯುರಿ ನಿನ್ನ |
ನಿಱಿಯುದೇ ಹೇೞು ವಿಶ್ವಾಮಿತ್ರಮುನಿನಾಥ ಎಂದುದಾಪೌರಜನವು ||೭||
ಜಡೆಗಳೆದು ಮಕುಟವಂ ನಾರ ಸೀರೆಯ ತೊಱೆದು |
ವುಡಿಗೆಯಂ ರುದ್ರಾಕ್ಷಿಯಂ ಕಳೆದು ಮಾಣಿಕದ |
ತೊಡಿಗೆಯಂ ಕಂದಮೂಲವನು ಬಿಟ್ಟನ್ನಮಂ ದರ್ಭೆಯಂ ಬಿಟ್ಟಸಿಯನು ||
ಅಡವಿಯಂ ಬಿಟ್ಟು ನಗರಿಯ ಭಸಿತಮಂ ಬಿಟ್ಟು |
ಕಡುಸುಗಂಧಂಗಳ ಜಿತೇಂದ್ರಿಯತ್ವವ ಬಿಟ್ಟು |
ಮಡದಿಯರ ಜಗವಱಿಯೆ ಕೂಡಲು ತಪಕ್ಕೆ ಮುಪ್ಪಾಯ್ತು ಮುಪ್ಪಿನೊ
ಮಲೆತು ಬೆನ್ನಟ್ಟುವ ಮಹಾರಿಷಡ್ವರ್ಗಮಂ | [ಳೆಂದರು ||೮||
ಗೆಲಲಱಿಯದವನಾವ ಹಗೆಗಳಂ ಗೆಲುವೆ ನಿ |
ನ್ನೊಳಗೆ ಕರಣವ ಸಂತವಿಡಲಱಿಯದವನಾವ ದೇಶವಂ ಸಂತವಿಡುವೆ ||
ಸಲೆ ತಪಸ್ತೇಜದಿಂ ಪುರುಷಾರ್ಥಕೋಶಮಂ |
ಬಳೆಸಲಱಿಯದನಾವ ತೇಜದಿಂ ಕೋಶಮಂ |
ಬಳೆಸಿದಪೆ ಕಂಗೆಟ್ಟು ಕಡುಪಾಪಿ ಮೂರ್ಖ ಕೌಶಿಕ ಕೇಳು ಕೇಳೆಂದರು ||
ಪುರದ ಪುಣ್ಯಂ ಪುರುಷರೂಪಿಂದೆ ಪೋಗುತಿದೆ |
ಪರಿಜನದ ಭಾಗ್ಯವಡವಿಗೆ ನಡೆಯುತಿದೆ ಸಪ್ತ |
ಶರಧಿಪರಿವೃತಧರೆಯ ಸಿರಿಯ ಸೊಬಗಜ್ಞಾತವಾಸಕ್ಕೆ ಪೋಗುತಿದೆಕೋ ||
ಎಱೆವ ದೀನಾನಾಥರಾನಂದವಡಗುತಿದೆ |
ವರಮುನೀಂದ್ರರ ಯಾಗರಕ್ಷೆ ಬಲವೞಿಯುತಿದೆ |
ನಿರುತಮೆಂದೊಂದಾಗಿ ಬಂದು ಸಂದಿಸಿ ನಿಂದ ಮಂದಿ ನೆರೆ ಮೊಱೆಯಿಟ್ಟುದು||
ವಸುಧೆ ಬಾಯ್ವಿಡೆ ದೆಸೆಗಳಸವೞಿದು ಮುೞುಗೆ ನಿ |
ಟ್ಟುಸಲಾಱದಂಬರಂ ಕಂಬನಿಯ ಸೂಸೆ ಶೋ |
ಕಿಸುವ ಪರಿಜನದೞಲನಾಱಿಸುತ ಪಾಲಿಸುತ ಸರದೋಱಿ ಸಂತವಿಡುತ ||
ಮಸಗಿ ಪುರವಂ ಮೀಱಿ ಹೋಗುತ್ತ ಹಿಂದೆ ಸಂ |
ದಿಸಿ ಬಪ್ಪ ಕೌಶಿಕನ ಕಂಡು ನಿಂದವನೀಶ |
ನೊಸೆದು ನಿಲಿಸುವ ಭರದೊಳೊಂದೆರಡುಮಾತನಾಡಿದನದೇಂ ಬಣ್ಣಿಸುವೆನು||

ಹಿಂದೆ ರಾಜ್ಯಂಗೆಯ್ವ ಗರ್ವದಿಂ ಹೊಲತಿಯರ |
ತಂದು ಕುಲವಂ ಕಿಡಿಸಲಾಱದಱಿಂ ನಿಮ್ಮ |
ನೊಂದೊಂದನೆಂದು ದಟ್ಟಿಸಿ ಜಱೆದು ಮಾಱುತ್ತರಂಗೊಟ್ಟು ಕೆಟ್ಟು ನುಡಿದು ||
ನಿಂದೆಗೆಯ್ದನ್ಯಾಯಮಂ ನೆಗೞ್ದ ಪಾಪಿ ಯೆ |
ನ್ನಿಂದಘಮರಿಲ್ಲಯ್ಯ ಸರ್ವಾಪರಾಧಿಯಾಂ |
ತಂದೆ ಕರುಣಂಗಿಡದಿರೆಂದು ಮುನಿಯುಂ ಬೇಡಿಕೊಂಡನು ಹರಿಶ್ಚಂದ್ರನು ||

ಮನದೊಳಗೆ ಮಱುಗದಿರಿ ಚಿಂತಿಸದಿರೞಲದಿರಿ |
ಮುನಿಯದಿರಿ ನೋಯದಿರಿ ಮತಿಗೆಡದಿರೀಗಳೆರ |
ಡನೆಯ ಶಿವನೆನಿಪ ಕೌಶಿಕನೊಡೆಯನಾದನಾತನ ಪಾದಪಂಕೇಜಕೆ ||
ಎನಗೆ ಬೆಸಕೆಯ್ವಂತೆ ಬೆಸಗೆಯ್ವುದಂಜುವುದು |
ವಿನಯಮಂ ನುಡಿವುದೋಲೈಸುತಿಹುದೆಂದು ಪರಿ |
ಜನಕೆ ಕೆಯ್ಯಂ ಮುಗಿದು ಬೇಡಿಕೊಂಡಂ ಧೈರ್ಯನಿಧಿ ಹರಿಶ್ಚಂದ್ರನೃಪನು ||

ಧರೆಗಧಿಕವೆನಿಪ ರವಿವಂಶದಿಕ್ಷ್ವಾಕುಭೂ |
ವರನು ಮೊದಲನ್ವಯಾಗತವಾಗಿ ಬಂದುದೀ |
ಪರಿವಾರವೀದೇಶವೀನಗರವಿಂದುತನಕಾವೆಡರ ಬಡತನವನು ||
ನೆರೆಯಱಿಯದಯ್ಯ ನೀವಿಲ್ಲಿಂದ ರಕ್ಷಿಪುದು |
ಪೊರೆವುದಿನಿತಂ ಬೇಡಿ ಪಡೆದೆನಾ ನಿಮ್ಮಲ್ಲಿ |
ಕರುಣಿಸೆನಗೆಂದು ಮುನಿಗಪ್ಪಯಿಸಿ ಕೈಮುಗಿದುಕೊಟ್ಟನು ಹರಿಶ್ಚಂದ್ರನು ||

ಬಸೆದೀವ ಧರಕಾಱನಾರಾತನಂ ನಿಯಾ |
ಮಿಸು ತಂದೆ ಎನೆ ತನ್ನ ಶಿಷ್ಯಾಳಿಯೊಳು ನೋಡಿ |
ಹುಸಿಯುಸೂಯಾನೀಚವೃತ್ತಿ ನಿರ್ದಾಕ್ಷಿಣ್ಯ ನಿಷ್ಕರುಣನೀತಿಗಳಲಿ ||
ಹೆಸರುಳ್ಳನೊರ್ವ ನಕ್ಷತ್ರಿಕನೆನಿಪ ಮಾ |
ನಸನನೆಕ್ಕಟಿಗರೆದು ಕೈವಿಡಿದು ಕಿವಿಯೊಡ್ಡಿ |
ವಸುಧಾಧಿಪತಿಯ ಬೞಿವಿಡಿದು ಕಳುಪಲು ಬುದ್ಧಿಗಲಿಸಿದನದೇಮೊಗೞ್ವೆನು ||

ಕುಡುವೊಡವೆ ಬರಲಿ ಬಾರದೆ ಕಿಡಲಿ ಕಾನನದ |
ನಡುವೆ ತಗಹಿಟ್ಟುರಿಸಿ ಕಿಱಿದುದಿನವುಪವಾಸ |
ಬಡಿಸಿರ್ದು ಕಿಱಿದುದಿನ ದೇಹವನುವಲ್ಲೆಂದು ನೆವಮೊಡ್ಡಿ ಕಿಱಿದುದಿವಸ ||

ನಡೆವಾಗ ದಾರಿದಪ್ಪಿಸಿ ತಿರಿಪಿ ಕಿಱಿದುದಿನ |
ಪಡಿಬೀಯಕಾಣಿಟ್ಟು ಕಿಱಿದುದಿನ ಸಂಕಟಂ |
ಬಡಿಸಿ ನುಡಿದವಧಿಯುಂ ಕಿಡಿಸಿ ಧರೆಯುಱಿಯೆ ನೃಪನಂ ಹುಸಿಕನೆನಿಸೆಂದನು
ಕರುಣಿಸದಿರನುಗಿಡದಿರಗಲದಿರು ಅನುಸರಿಸ |
ದಿರು ಬಟ್ಟೆಯು ಊರೊಳೆಡೆಗೆಯ್ಯದಿರು ಕಡೆಗಾವ |
ಪರಿಯೊಳಾವಾವ ನಿಗ್ರಹ ನಿರೋಧಾಯಾಸವೇನುಂಟವಂ ಮಾಳ್ಪುದು ||
ಗುರುಭಕ್ತನಾದೊಡತಿಬುದ್ಧಿಯುಳ್ಳವನಾದೊ |
ಡರಸನಂ ಹುಸಿನುಡಿಸಿ ತೋಱಿಂದೊಡೆನಗವಂ |
ತೆರಳುವವನಲ್ಲೆನಲು ನೇಮಕ್ಕೆ ನೀನಿರಾಂ ಬಂದು ಕಾಡುವೆನೆಂದನು ||೧೭||

ಬಿಸಿಲಾಗಿ ಬಿಱುಗಾಳಿಯಾಗಿ ಕಲುನೆಲನಾಗಿ |
ವಿಷಮಾಗ್ನಿಯಾಗಿ ನಾನಾಕ್ರೂರಮೃಗವಾಗಿ |
ಮುಸಗಿ ಘೋರಾರಣ್ಯವಾಗಿ ಗರ್ಜಿಸಿ ಕವಿವ ಭೂತವೇತಾಳವಾಗಿ ||
ಹಸಿವು ನೀರಡಕೆ ನಿದ್ರಾಲಸ್ಯವಾಗಿ ಸಂ |
ದಿಸಿ ಹೋಗಿ ಹೊಕ್ಕಲ್ಲಿ ಹೊಕ್ಕು ಧಾವತಿಗೊಳಿಸಿ |
ಪುಸಿಗೆ ಹೂಂಕೊಳಿಸುವೆನು ಭೂಭುಜನನೆನ್ನಿಂದ ಬಲ್ಲಿದರದಾರೆಂದನು ||
ಬೇಱೊಬ್ಬನಲ್ಲೀತ ನಮ್ಮಾತ ನಾಯುಸ |
ಕ್ಕಾಱನತಿಗರುವನತಿಸುಖಿಯೇನನೆಂದುದಂ |
ಮಿಱಿನ್ನೆ ಧನವ ಕುಡು ನಡೆಯುರಸ ಹೋಗೆನಲು ಮುನಿವರನ ಚರಣ
ನೀಱಿ ಸತಿ ಸುತಮಂತ್ರಿವೆರಸಿ ರಿಪುಬಲಸೂಱಿ | [ಕೆಱಗಿ ||
ಕಾಱನೊಲವಿಂದೆದ್ದು ನಡೆವಾಗ ಮಂದಿ ಬಾ |
ಯಾಱುತ್ತ ಚೀಱುತ್ತ ಗೋಳಿಡುತ್ತಱಿತೆದ್ದು ನಡೆದುದೇವಣ್ಣಿಸುವೆನು ||
ತಡೆ ಬಿಟ್ಟ ಕಂಬನಿಯ ಕಣ್ಣಿಂದ ಮುಂಗಾಣ |
ದೆಡಹುತ್ತ ತಾಗುತ್ತ ಬೀೞುತೇೞುತ್ತೊಱಲು |
ತೊಡೆಬರ್ಪ ಪರಿವಾರಮಂ ಕಂಡು ಕೆಯ್ಯೆತ್ತಿ ಹೋ ಎಂದು ನಿಲಿಸಿ ನೃಪನು||
ಕಡೆಗೆನ್ನ ಸತ್ಯಕ್ಕೆ ಹಿತವರಾದವರ್ಗಳಿ |
ದ್ದೆಡೆಯೊಳಿದ್ದೆನ್ನ ಲೇಸಂ ಬಯಸುತಿಹುದು ಬಂ |
ಗೊಡೆ ತ್ರಿಶಂಕುನರೇಂದ್ರನಾಣೆಯೆನೆ ಮಿಱಿದೆವು ಬಂದಲ್ಲದಿರೆವೆಂದರು ||

ಇಂದುತನಕನ್ನೃತವೞಿಯದ ಸೂರ್ಯವಂಶಕ್ಕೆ |
ಕುಂದ ಬಯಸುವರೆ ನಾನಳುಪುತಿರೆ ಕಂಡು ಬೇ |
ಡೆಂದೆಂಬರೆನ್ನದಿನಿತಱಲುವರೆ ಬೞಲುವರೆ ಬೞಸೆಂದು ಬಹೆನೆಂಬರೆ ‖
ಬಂದೆಡೆಯೊಳಿದ್ದು ಸಾಲವನು ನಿರ್ಣಯಿಸಿ ಮುದ |
ದಿಂದ ಕರೆಸುವೆನೆನ್ನ ಕೂಡಿಂದು ಬಪ್ಪವರು |
ಹಿಂದಿರ್ದ ಮುನಿಪಂಗೆ ಬೆಸಕೆಯ್ಯುತಿರಿಮೆಂದು ಎಲ್ಲರ್ಗೆ ಕೈಮುಗಿದನು ‖
ಎಲ್ಲಾ ಕಳಾನಷ್ಟನೆಂದೆನಿಸಿ ಹೋದಿರುಳ |
ನಲ್ಲನೆಂದೆಯ್ತಪ್ಪನನ್ನಬರ ಹಸಿದಿರ್ದು |
ವಲ್ಲದುಂಡವೆ ಬಿಸಿಲನೆಳೆಯಬೆಳುದಿಂಗಳಂಕುಡಿದಿಪ ಚಕೋರಂಗಳು ‖
ನಿಲ್ಲದಿಂದೀಗರಸನೆಂದು ನಿಮ್ಮೊಡನೊಯ್ಯ |
ಲೊಲ್ಲದಿರೆ ನೀಂ ಮರಳಿ ಬಪ್ಪಂದುತನಕ ಕ |
ಣ್ಣಲ್ಲಿ ಜೀವವನು ಹಿಡಿದಿಪ್ಪೆವಲ್ಲದೆಯನ್ಯರಂ ಸೇವೆಮಾಡೆವೆನಲು ‖
ಕಾಡಬೇಡಿನಿತು ಚಲಬೇಡ ಕೋರಡಿಗತನ |
ಬೇಡವತಿಮೂರ್ಖತನ ಬೇಡೆಂದು ಕೈಮುಗಿದು |
ಬೇಡಿಕೊಂಡೆಂ ನಿಮ್ಮನೆನಲೊಡಂಬಟ್ಟು ಬೀೞ್ಕೊಂಡೆವಿನ್ನೆಮ್ಮ ಚಿಂತೆ ‖
ಬೇಡ ನೀನೊಲಿದತ್ತ ಹೋಗೆನಲು ಸಂತಸಂ |
ಮಾಡಿ ನಡೆಗೊಂಡ ಭೂಪನ ಗುಣಂಗಳನು ಕೊಂ |
ಡಾಡುತ್ತ ಹಲುಬುತ್ತ ನೋಡುತಿರ್ದುದು ಜನಂ ದೃಷ್ಟಿ ಸೈವೆಱಗಾಗಲು ‖
ಜನನಿ ಹಿಂಗಿದ ಶಿಶುಗೆ ಸಸಿ ಬಿಸುಟ ಕುಮುದಕ್ಕೆ |
ದಿನನಾಥನುೞಿದ ಕಮಲಕ್ಕೆ ನೆಱೆ ಸಿರಿ ಸಮೆದ |
ಮನೆಗೆ ಜೀವಂ ತೊಲಗಿದೊಡಲಿಂಗೆ ತೈಲವಿಂಗಿದ ದೀಪ್ತಿಗುದಕವೞಿತ ‖
ಘನತಟಾಕಕ್ಕೆ ಫಲವಿೞಿಹಿದ ಮರಕ್ಕೆ ನೆ |
ಟ್ಟನೆ ಜೋಡಿಯಾದುದಾ ಪುರಜನಂ ಪರಿಜನಂ |
ಜನಪತಿ ಹರಿಶ್ಚಂದ್ರನೆಲ್ಲವಂ ಮುನಿಗಿತ್ತರಣ್ಯಕ್ಕೆ ನಡೆವಾಗಲು ‖೨೪‖
[ಪುರವ ಹೊಱವಟ್ಟು ಹೊಱವೊೞಲಿಂಗೆ ಬರೆ ಸತಿಯ |
ಚರಣಗಳು ಹರಳೊತ್ತಿ ಬೊಕ್ಕೆಗಳ್ಕಡೆ ಕಾ | [ಮೊಗವ ನೋಡಿ ‖
ಯ್ದುರಿವೊಳೆಯ ತೆಱದಿ ನೆಲ ಕಾಯೆ ಕಾಲ್ ಬೇಯೆ ಮಿಡುಕುತ ಪತಿಯ

ಅರಸ ನಾಂ ಪೋಹ ನಾಡಿನ್ನೆನಿತು ದೂರವೆನೆ |
ಸರಳು ತಾಕಿದ ಹರಿಣಿಯುಂ ಕಂಡ ಹರಿಣನೊಲು |
ಮರವಟ್ಟು ಬಿಸುಸುಯ್ದು ಬಾಯ್ವಿಟ್ಟು ಜೀವವಂ ಬಿಡಲಿಕುದ್ಯೋಗಿಸಿದನು||
ಎಡೆವಿಡದೆ ದಾರಿಯುಱುಹಲು ಮಂತ್ರಿ ಮುಂದೆ ಸುತ |
ನೆಡದ ದೆಸೆಯೊಳು ನಿಜಾಂಗನೆ ಹಿಂದೆ ಬರೆ ಭೂಮಿ |
ಯೊಡೆಯನೊಡವೆಗಳೊಡೆತನಂಗಳನೊಡಂಬಟ್ಟು ಮುನಿಗಿತ್ತು ಚಿಂತೆ ತನ್ನ||
ಬಿಡದೆ ಕ್ಷಣಂಬಿಟ್ಟು ದಕ್ಷಿಣಾರ್ಥಂಗಳಂ |
ಕುಡುವೆನೆಂಬುತ್ತರವನುತ್ತರಿಸಲುತ್ತರಂ |
ಬಿಡಿದು ನಡೆದಂ ನೆರವನಾರುವಂ ಹಾರದಾಧೀರಕಾಂತಾರದೊಳಗೆ ||೨೬||
ಎನ್ನ ಸತ್ಯನಿಮಿತ್ತವಾಯಸಂಬಡಲೊಲ್ಲೆ |
ನೆನ್ನನತಿಗಾಳಿ ಚಳಿ ಬಿಸಿಲು ಹಸಿವೆಂಬಿವಂ |
ಮುನ್ನ ಕಂಡಱಿಯರೀಸ್ತ್ರೀಬಾಲರಿವರು ಮೆಟ್ಟಲು ಪಾದರಕ್ಷೆಯಿಲ್ಲ ||
ಬೆನ್ನ ಮುಚ್ಚಲು ಸೀರೆಯಿಲ್ಲೆಡೆಯ ಸಂಬಳಕೆ |
ಹೊನ್ನಿಲ್ಲ ಹಸಿದವನಲೇಗೆಯ್ವೆ ನಡೆಗೆಟ್ಟೊ |
ಡಿನ್ನು ನಿಲುವೆಡೆಯಾವುದೆಂದು ಹಲವಂ ಚಿಂತಿಸುತ್ತ ಭೂಭುಜ ನಡೆದನು ||
ಮುಗುದರಡವಿಯ ಗಿಡುಮರಂಗಳಂ ನೋಡ್ಪ ಖಗ |
ಮೃಗವನೀಕ್ಷಿಸುವ ಶಬರಾಳಿಯುಂ ಕಾಣ್ಬ ವಾ |
ಸಿಗೆ ನಡೆವ ನಿಲುವ ಭೂಪನನೆಯ್ದಿಕೊಂಬ ಭರದಿಂ ವಿಾಱಿ ಕಿಱಿದೆಡೆ
ಬಗೆಯದೆಂತಕ್ಕೆ ನಡೆಯಲು ಮೇಲೆ ಕವಿವ ಗಾ | [ಯನು ||
ಳಿಗೆ ಬಿಸಿಲ ಬಿಸಿಗೆ ಹಸಿವಿಂಗೆ ತೃಷೆಯುಬ್ಬರದ |
ಡಗೆಗೆ ಸೈರಿಸಲಾಱದನುಗೆಟ್ಟು ನಡೆಗೆಡಲು ತೊಡಗಿದರದೇನೆಂಬೆನು ||೨೮||
ನಡೆಗೆಟ್ಟು ಹಿಂದುಳಿಯೆ ಪತಿ ಮುನಿದಪಂ ವಿಾಱಿ |
ನಡೆವೆನೆನೆ ಕಾಲ್ ಕುಪ್ಪಳಿಸಿ ನೋಯುತಿವೆ ನೋವ |
ನೊಡೆಮೆಟ್ಟಿ ದಡದಡನೆ ನಡೆವೆನೆಂದೊಡೆ ಬೆಂದ ದೈವವಱಿವೊಱಿ ಹೊಱಿ
ಮುಡಿಮೊಲೆನಿತಂಬಭಾರಕ್ಕೆ ತೊಡೆ ನಡು ಕೊರಲ್ | [ಸಿತು ||
ಕಡಿವಂತುಟಾದಪ್ಪುವೇಗೆಯ್ವೆನೆಂದು ಸಿಡಿ |
ಮಿಡಿಗೊಂಬ ಮಾನಿನಿಯ ಭರವನಾಲಿಸಿ ನಿಲುವನವನೀಶ ಮರನಡಿಯೊಳು||

ಬಾಡಿದ ಮೊಗಂ ಬಱತ ಬಾಯ್ ಕೆದಱಿದಳಕವ |
ಕ್ಕಾಡುವ ಬೆಮರ್ ತೊನೆದು ಪೊಡರ್ವ ಮೊಲೆ ನಡುಬೆನ್ನ |
ನೀಡಿಱಿವ ಮುಡಿಕೊರಗಿದಕ್ಷಿತೋಳಂತೂಗಿ ಬಾತ ಬೆರಳೊರಸಿವುಸೆದು ||
ಪೊಡೆಱಿದ ತೊಡೆ ಹಲವು ಹರಳೊತ್ತಿ ಬೊಕ್ಕೆಗಳ್ |
ಮೂಡೆ ನಡೆಗೆಟ್ಟು ಮೆಲ್ಲಡಿಯು ನಿಜವನಿತೆಯುಂ |
ನೋಡಿ ಸುಯ್ಯನೆ ಸುಯ್ದನಂದು ಸಪ್ತದ್ವೀಪಪತಿ ಹರಿಶ್ಚಂದ್ರನೃಪನು ||೨೦||

ಸುತನನಡಿಗಡಿಗೆತ್ತಿಕೊಂಬ ನಡೆಗೆಡುವ ನಿಜ |
ಸತಿಯುನಡಿಗಡಿಗೆ ಬೋಳೈಪ ಬೞಲುವ ಚಮೂ |
ಪತಿಯುನಡಿಗಡಿಗೆ ಬಿಡದುಪಚರಿಪ ಚಿತ್ತದಾವೇಶಗ್ರಹದ ಭರದಲಿ ||
ಅತಿ ಬಿಸಿಲು ಗಾಳಿ ಕಲು ಮುಳು ಕ್ಷುತ್ಪಿಪಾಸೆ ಜಾ |
ಡ್ಯತೆಗಳೆಂಬಿಂತಿವಱ ಕಾಟದಿಂ ಮೊಳೆವ ಧಾ |
ವತಿಯುನಱಿಯದೆ ನಡೆದನಕಟಕಟ ಭೂಮಿಪಂ ಕಾಲಕ್ಕೆ ಕೈಮುಗಿಯುತ||

ಭರದಿಂದ ನಡೆತಂದು ಕೂಡಿಕೊಂಡಂ ಮುನಿಯ |
ಧರಕಾಱನಿಂದುವಂ ಪಿಡಿವ ರಾಹುವೆನಿಪ್ಪ |
ಪರಿಯೊಳಂ ಹಿಂದೆ ಬರೆ ಪಾಪಿಕೌಶಿಕ ನೆನೆದನಂದು ನೂರ್ಮಡಿ ಬಿಸಿಲನು ||
ತರಣಿಗಿತ್ತನಿಲನಂ ನಿಲಿಸಿ ಮುಂಬಟ್ಟೆಯೊಳು |
ದರಿಗಳಂ ಗಿರಿಗಳಂ ಕಮ್ಮರಿಗಳಂ ಘೋರ |
ತರುಗಳಂ ಮೆಳೆಗಳಂ ಖಗಮೃಗಂಗಳನಂದು ನಿರ್ಮಿಸಿದನಾಮುನಿಪನು ||

ಬಟ್ಟೆಯುಂ ತೊಡೆದು ಮುಂದೊಡ್ಡುಗಲ್ಲುಗಳ ತಂ |
ದಿಟ್ಟು ನೆಲನಂ ಕಾಸಿ ತಳಿತ ನೆೞಲೊಳು ಮುಳ್ಳ |
ನೊಟ್ಟಿ ಹಸಿವಂ ತೃಷೆಯುನತಿಡಗೆಯುನವನೀಶ್ವರನ ಕಳತ್ರಕ್ಕೆ ತೋಱಿ ||
ದಿಟ್ಟಿಗಾಂಬನಿತೆಡೆಯ ನೀರೆಲ್ಲಮಂ ಕೆಡಿಸಿ |
ಮುಟ್ಟೆ ನಾನಾಕ್ರೂರಮೃಗವಾಗಿ ಮುಂದಡ್ಡ |
ಗಟ್ಟಿ ಗರ್ಜಿಸುತ ಮಾಯಾವೇಶದಿಂದೊಡನೆ ಬಂದ ವಿಶ್ವಾಮಿತ್ರನು ||೨೨||

ಮೆಳೆಗಳೊಳು ಬಾಗಿ ಮರದೊಳು ಮುರಿದು ಸಂದಿಱುಬಿ |
ನೊಳು ಸುತ್ತಿ ಹೆಗ್ಗತ್ತುಱೊಳು ಕುಸಿದು ಬಳೆದಿಡುಕು| [ಹೊಕ್ಕುಮಿಕ್ಕು||
ಱೊಳು ನುಸುಳಿ ಹೊದಱಿನೊಳು ಹಣುಗಿ ಕಪ್ಪಿನೊಳಡಗಿ ನಾಳದೊಳು

ಗುಱಿಯೊಳದ್ದಱ ಡೊಂಗರನನೇಱಿ ಹರುಹುಗಳೊ |
ಕಿಱಿದಧಟುಗೆಟ್ಟು ಬೆಂಡಾದ ಸುಖಿಗಳನುಗ್ರ |
ದೞಲ ಬೇಸಱ ಬೇಗೆಗಿಚ್ಚು ವಿಶ್ವಾಮಿತ್ರಮುನಿಯುನೆಯ್ದದೆ ಮಾಣದು||೩೪||

ಬಱಿವಿಡಿದು ಕೈಗುಡುವರಿಲ್ಲ ಕಟ್ಟುರಿವಿಸಿಲು |
ಸುಱಿಯಲೀಯದು ಕಾಸಿದೊಲೆಯಂತೆ ನೆಲ ಕಾಲ |
ನಿಱುಹಲೀಯದುಹೊದ್ದುವಡೆ ನೆಳಲು ಮುಳ್ಳೊತ್ತ ನೆಱೆದೈವ ಕರ್ಗಿಸಿದ||
ಬಱಿಕಂದು ಜನನಾಥನಾಗಿಯುಂ ಜಗಕೆ ಭೂ |
ತಳನಾಥನಾಗಿಯುಂ ಭೂಮಿಗಕಟಕಟ ರವಿ |
ಕುಲಜನಾಗಿಯು ರವಿಗೆ ತತ್ತ ಹೊತ್ತಿನೊಳನ್ಯನಾಗಿ ತೋಱಿದನರಸನು ||

ಬಸವೞಿಯುತುಸಿರಲಮ್ಮದ ಸತಿಗೆ ಕೈಗೊಟ್ಟು |
ಪಸಿವೞಿವ ತನಯಂಗೆ ಹಣ್ಣ ಹಗಿನಿತ್ತು ನಂ |
ಬಿಸುತಿರಲು ಮಾರಿಯಂದದಿ ಬಂದು ಧರಕಾಱ ನನಗೆ ತಾ ಭೋಜನವನು ||
ಬಿಸಿಲು ಹೊಡೆದುರಿ ಹೊತ್ತಿ ಡಗೆ ಸುತ್ತಿ ಬಾಯ್ಬತ್ತಿ |
ಯಸು ಹಾಱುತಿದೆ ವಿಱಿ ಹೋಪೆಯಾದೊಡೆ ಸಿನಗೆ |
ವಿಷಮಾಕ್ಷನಾಣೆ ಕೊಟ್ಟಡಿಯನಿಡು ಬಱಿಕೆಂದು ನಟ್ಟಡವಿಯೊಳ್ ನಿಲಿಸಿದ||

ತಂದುದಿಲ್ಲೂರು ದೊರಕಲು ಬೇಡಿ ತಂದೀವೆ |
ನೆಂದೆನ್ನೆಯುರಸ ನಿತ್ತಲ್ಲದಡಿಯಿಡಲೀಯೆ |
ನೆಂಜೆನ್ನೆ ಮುನಿಪ ನಿಲ್ಲಿಲ್ಲವೆನೆ ಭೂಪಸಿಂತಾಗಬೇಕೆಂಬ ಮೂರ್ಖ ||
ನಿಂದ ಮಧ್ಯಾಹ್ನ ಮೊದಲುರಿವ ಬಿಸಿಲೊಳು ನಿಲಿಸಿ |
ಬೆಂದಱಿಯು ಮೇಲೆಲ್ಲರಂ ತಗದನಕಟ ರವಿ |
ಬಂದಸ್ತಗಿರಿಮಸ್ತಕನ್ಯಸ್ತ ಹಸ್ತವಿಸ್ತರನಪ್ಪ ಕಾಲತನಕ ||೩೭||

[ಜಾರೆಯರು ನಲಿಯೆ ಗಣಿಕಾನಿಕರವೈದೆ ಶೃಂ |
ಗಾರದಿಂದೆಸೆಯುತ್ತ ಸಕಲಮೃಗ ಮಿಕ್ಕೆಯುಂ |
ಸಾರೆ ಕೌಶಿಕನಿಕರದಾಸಱೋಸಱಿಸೆ ವಿಮರಾಳ್ವಕ್ಕಿ ಜಗ್ಗ ಜಱಿಯೆ ||
ವಾರಿಜಂಗಳ ಬಿಟ್ಟು ತುಂಬಿಗಳು ಕನ್ನೆಯ್ದಿ |
ಲೋರೆಯಂ ಪ್ರೊಗೆ ಜಗಕ್ಕೆಯ್ದಿ ತೆಳುಗತ್ತಲೆ ಚ |
ಕೋರಿಗಳಮನ ನಲಿಯುತಿರೆ ತರಣಿ ಪಶ್ಚಿಮಪಯೋರಾಶಿಗೈತಂದನು]||೩೮||

ಇಳೆಯುಱಿಯುಳೆನ್ನ ಕುಲದಲಿ ಹುಟ್ಟಿ ಸರ್ವಭೂ |
ತಳಕೊಡೆಯನಾಗಿ ಭೂಲೋಕಮುದ್ರಿತಕೀರ್ತಿ |
ಬಲವಂತನಾಗಿ ಹೆಚ್ಚಿದ ಹರಿಶ್ಚಂದ್ರನುಂ ಕೌಶಿಕನ ಕಾಟದಿಂದ ||
ಬಳಸುವ ನಿರೋಧನಮಂ ಕಾಣಲಾಱದೆ ಚಿಂತೆ |
ಮೊಳೆತಡಗುವಂತೆ ಸೂರಿಯು ಪಡುಗಡಲ ನಡುವಿ |
ಗಿೞಿದನೆಲ್ಲಾ ದೇಶದುಮ್ಮಳಿಕೆ ಕವಿವಂತೆ ಕಾಳಗತ್ತಲೆ ಕವಿದುದು ||೭೯||

ಭೂವರಂ ಚಿಂತಿಸುತ್ತೊಬ್ಬನಟ್ಟಡವಿಯೊಳ |
ಗಾವೆಡೆಯೊಳೇಗೆಯ್ಯುತಿರ್ದನೋ ನೋೞ್ಪೆನೆಂ |
ಬೀ ವಿಕಳದಿಂ ಗಗನ ಹಲಕೆಲವು ಕಣ್ಗಳಂ ಪಡೆದುದೋ ಎಂಬಂದದಿಂ ||
ತೀವಿದುವು ನಕ್ಷತ್ರವವನಿಪನ ಸತಿಪುತ್ರ |
ರಾವರಿಸುವೀ ತಮಕ್ಕಂಜುಗೆಂದುಱಿ ಸಿಶಾ |
ದೇವಿ ಹೊತ್ತಿಸಿದ ಹೆಜ್ಜೊಡರೊ ಇದು ಎಂದೆನಿಸಿ ಮೂಡಿತ್ತು ಶಶಿಬಿಂಬವು ||

ಮೂಡಿದ ಶಶಾಂಕಂಗೆ ಮಱೆಯಾಗಿ ಮೋಡಮಂ |
ಮಾಡಿ ಕೌಶಿಕನು ಕತ್ತಲೆಗೆ ಕೈವೀಸೆ ನಡು |
ಕಾಡೊಳಗೆ ಕಾಡಿಗೆಯ ಸೋನೆಮಱೆ ಸುರಿದುದದಕಿನ್ನುೞಿದ ಬಡಬಗೆಗಳು||
ಬೇಡ ತಾನುಂಟೆಂಬುದಂ ತನ್ನ ತಾ ಮುಟ್ಟಿ |
ನೋಡಿ ಕಂಡಡೆ ಕಂಡನಲ್ಲದುರ್ವಿಯ ಮಾತ |
ನಾಡದಿರೆನಿಪ್ಪಂತೆ ಕಾಳಗತ್ತಲೆ ಕವಿದು ಕಡಲಿಟ್ಟು ಮಡುಗಟ್ಟಿತು ||೮೦||

ಲಲಿತನಗರದ ನಡುವಣರ ಮನೆಯ ಕರುಮಾಡ |
ದೊಳಗೆ ಮಱ ಹಂಸೆ ದುಪ್ಪಟಿ ಹಾಸಮೇಲೆ ದೆಸೆ |
ಗಳ ಸಾಲಭಂಜಿಕೆಯ ಮಣಿವೆಳಗಿನೊಳು ಸುಖದ ಸುಗ್ಗಿಯಂ ಸವಿವರಸನು||
ಬಳಸಿದಡವಿಯ ನಡುವೆ ಕವಿವ ಕತ್ತಲೆಯೊಳಗೆ |
ಗುೞಿನೆಲನ ಮೊಳೆಗಲ್ಲ ಮುಳುವಸೆಯ ಮೇಲೆ ಹಸಿ |
ದಳವೞಿದು ಹೊದೆಯಲಿಲ್ಲದೆ ಹೊಯ್ವ ಹಿಮವನಾಂತಿರ್ದನದ ನೇನೆಂಬೆನು||

ಎಡಬಲದ ತೊಡೆಯೊಳೊಱಗಿರ್ದ ಸತಿಸುತರನಡಿ |
ಗಡಿಗೆ ತಡಹುತ್ತ ಮಂತ್ರಿಯ ಮಲಗಿಕೊಂಡು ನುಡಿ |
ದೊಡೆ ದನಿಗೆ ಶರಭ ಶಾರ್ದೂಲವೈತಂದು ಪಿಡಿವುವೊ ಪಿಡಿದ ಬೞಿಕ ಮುನಿಗೆ||

ಕುಡುವೊಡವೆ ಸಲ್ಲದೊಡಸತ್ಯನಾದಪೆನೆಂಬ |
ಕಡುಚಿಂತೆಯುಂಜಿಕೆಯು ಬಲದಿಂದ ಸುಮ್ಮನಿಹ |
ಪೊಡವೀಶ್ವರಂಗಿನ್ನು ಮೇಲೆ ಬಹ ಸಂಕಟವನಾವ ಜೀವರು ಕೇಳ್ವರು||೪೩||
ಕುಡಿಯುಳ್ಳಿಯಂ ವೃಶ್ಚಿಕಂ ಮಿಡಿಯೆ ಮಿಡಮಿಡನೆ |
ಮಿಡುಕುವಬಲನನೆತ್ತಿ ನಂಬಿಸುತ್ತಿರೆ ಮಗ್ಗ |
ಲೆಡೆಯೊಳಹಿ ಘುಸ್ಸೆನಲು ಹೆದಱಿ ಹಾಎಂದೊದಱುವಂಗನೆಯ ದನಿವಱಿಯಲಿ
ನಡೆತಂದು ಹಱಿಮೂಲೆಗೊಂಬ ಹುಲಿ ಕರಡಿಯಂ |
ಜಡಿವ ಹೂಂಕೃತಿಗರಣ್ಯದ ಭೂತವೇತಾಳ |
ವಡೆ ಸುತ್ತಿ ಮುತ್ತಿ ಬೊಬ್ಬಿಟ್ಟು ಝುಂಕಿಸಿದುವಾ ಕೌಶಿಕಪ್ರೇರಣೆಯೊಳು||
ನಡನಡನೆ ನಡುಗಿ ಕಣ್ಮುಚ್ಚಿ ತನ್ನೊಡಲನುಱೆ |
ಬಿಡದಪ್ಪಿಕೊಂಡ ಸತಿಸುತರ ನಂಬಿಸಿ ಬಲಂ |
ಗೆಡದೆ ಶಂಕರ ವಿರೂಪಾಕ್ಷ ಶರಣೆಂಬುದೆಂದಡಿಗಡಿಗೆ ಬುದ್ಧಿಗಲಿಪ ||
ಪೊಡವೀಶ್ವರನ ಕೂಡೆ ಧರಕಾಱನೆಂದನೀ |
ನಡವಿಗುಱಿಯಾಗಲೇಕಿವರ ನೋಯಿಸಲೇಕೆ |
ಕಡುಮೂರ್ಖತನವ ಬಿಟ್ಟೆನ್ನಾದೊಡಂ ಮುನಿಪನೆಂದುದಂ ಮಾಡೆಂದನು||೪೪||
ಸುಡು ಮಾಣಿದಾವನೋವಿಂದೆಲ್ಲರಱಿವ ಕಂ |
ಡೊಡೆ ಕಾಬೆನಲ್ಲದನ್ಯಾಯದಿಂ ನಡೆದೆನ್ನ |
ಪಡೆದ ಕುಲಮಂ ಕಿಡಿಸಲಾಪೆನೇ ಎಲೆ ಮರುಳೆ ನೀನೆನ್ನ ಮನದನುವನು ||
ಅಡಿಗಡಿಗೆ ತುಡುಕಿ ನೋಡದಿರೆಂದು ಭೂಪಾಲ |
ನುಡುನಾಮನಂ ಜಡಿಯುತಿರಲು ಹೆಚ್ಚಿದ ರಾತ್ರಿ |
ಕಡೆಗಂಡುದಂದುದಯ ಗಿರಿಯ ಮಸ್ತದಮೇಲೆ ಯರುಣಕಿರಣಂ ಮೊಳೆತುದು||

ಇಂತು ಒಂಬತ್ತನೆಯ ಸ್ಥಲಂ ಸಂಪೂರ್ಣಂ.

ಹತ್ತನೆಯ ಸ್ಥಲಂ.

ಸೂಚನೆ॥ ನಾಡೆ ವಿಶ್ವಾಮಿತ್ರಮುನಿಯು ಬೆಸದಿಂ ವಿಾಱಿ ।
ಕೂಡೆ ಸುತ್ತಿದ ದಾವಶಿಖಿಯನೆಂತಕ್ಕೆ ನೀ ।
ಗಾಡಿ ಪುಣ್ಯಾಧೀನದಿಂ ವಾರಣಾಸಿಯಂ ಹೊಕ್ಕನು ಹರಿಶ್ಚಂದ್ರನು ॥

ನೋಡೆ ಹಳ್ಳದೊಳಿೞಿದು ಕರಚರಣಶುದ್ಧಿಯಂ ।
ಮಾಡಿ ಸಂಧ್ಯಾವಂದನಂಗೆಯ್ದು ತರುಣಶಶಿ ।
ಚೂಡನಡಿದಾವರೆಯನರ್ಚಿಸಿ ಗುರುಸ್ಮರಣೆವೆರಸಿ ಪ್ರಸಾದ ಫಲವ ॥
ಸೂಡಿ ತನಯನನೆತ್ತಿಕೊಳುತ ಮಂತ್ರಿಯನು ಮಾ ।
ತಾಡಿಸುತ ಸತಿಯನೋವುತ್ತ ನಕ್ಷತ್ರಕನ ।
ಕೂಡುತ್ತರಂಗುಡುಕರಣ್ಯಮಂ ನಿಟ್ಟಿಸುತ ನಡೆದ ಧೀರೋದಾರನು ॥೧॥

ಮುಂದೈಪ ಬಿಸಿಲ ಬಿಸಿಯಿಂ ನೆತ್ತಿ ನೆಲನ ಬಿಸಿ ।
ಯಿಂದ ಕಾಲ್ ಕಡೆಗಣಿಸಿ ಕವಿವ ಕಾಯ್ದಲರ ಬಿಸಿ ।
ಯಿಂದ ದೇಹಂ ಕ್ಷುಧಾನಲನ ಬಿಸಿಯಿಂದೊಳಗು ತೃಷೆಯ ಬಿಸಿಯಿಂದಬಾಯಿ॥
ಬೆಂದು ಬಿರಿದರಳುತಿರೆ ಸಾಯುತ್ತ ನೋಯುತ್ತ ।
ನೊಂದು ನಿಂದಳುಕುತ್ತ ಬಳುಕುತ್ತ ಬರಬರಲು । [ದನು ॥
ಮುಂದೆಯೇವ್ರೊಗೞ್ವೆ ಬೞಿಕಕಟನಿಷ್ಕರುಣಿಮುನಿ ನೆನೆದ ಕುಟಿಲದ ಕುಂ

ಪೊಡವಿಯಡಿಯಲಿ ಫಣಿಪನೆಂಬ ಕೊಳ್ಳಿಯನಡಸಿ ।
ಹೆಡೆವಣಿಗಳೆಂಬ ಕೆಂಡಂಗಳಂ ವಿಾಱೆ ಪೊಱ ।
ಮಡುವ ಕಾಂತಿಗಳೆಂಬ ದಳ್ಳುರಿಗಳಿಂದ ಕಡುಗಾಸಿ ಪಾಪಿ ವಿಧಾತ್ರನು ॥
ಬಿಡೆ ಚರಾಚರ ಮೊದಲು ಸರ್ವಜೀವಂಗಳಂ ।
ಸುಡಲೆಂದು ಮನದೊಳನುಗೆಯ್ವನಂತಲ್ಲದಿ ।
ರ್ದೊಡೆ ನಿಚ್ಚ ಮೂಡುವ ದಿವಾಕರಂಗಿನಿತುಗ್ರವೆಲ್ಲಿಯದು ನಾವೞಿಯಲು ॥

ವಿಸುತವಿಶ್ವಾವಸುವಿನಾತ್ಮಭವ ಕೃತವೀರ್ಯ ।
ನೆನಿಪವನ ಕೈಯಿಂದ ಮಡಿದ ಭೃಗ್ವಾದಿಗಳ । [ವಡಗದೆ ॥
ತನಯನೆನಿಪೊರ್ವ ಮುನಿಯುಗುೞ್ದ ಕೋಪಾಗ್ನಿ ಕಡಲಂ ಕುಡಿದು ಹಸಿ

ಹನ್ನೆರಡನೆಯ ಸ್ಥಲಂ.

ಸೂಚನೆ॥ ಜನಪತಿ ಹರಿಶ್ಚಂದ್ರರಾಯನ ಕುಮಾರನಿಂ ।
ಧನಕೆ ಹೋದಲ್ಲಿ ಕಾಳೋರಗಂ ಪಿಡಿಯಲಾ ।
ಜನನಿ ಶೋಕಿಸಿದ ಮನದಳಲು ವಿಶ್ವಾಮಿತ್ರಮುನಿಯನೆಯ್ದದೆ ಮಾಣದು ॥

[ಒಡೆಯನಾಜ್ಞೆಯ ಸಲಿಸಿ ಪೊಡವಿಪಂ ನಡೆಯುತ್ತ ।
ಮೃಡಪದಧ್ಯಾನಾಮೃತವನೀಂಟಿ ತೇಗುತ್ತ ।
ಹಿಡಿದ ಚಿಂತೆಯನೆಲ್ಲವಂ ತೊಲಗಿಸುತ್ತಲತಿಪರಿಣಾಮವಂ ಧರಿಸುತ ॥
ಪೊಡವಿಯೊಳಗೈದೆ ಸತ್ಯವ ಮೆಱೆದು ತೋಱುತ್ತ ।
ಸುಡುವ ಹೆಣಗಳ ಕಮುಱುಗಳನು ಆರಯ್ಯುತ್ತ ।
ಬಿಡದೆ ನೆಲದೆಱೆಯಕ್ಕೆ ಕಪ್ಪಡವ ಕೊಂಡರಸ ದಿನವ ಕಳೆಯುತ್ತಿರ್ದನು]॥

ಇಂತು ನೃಪನಾಪ್ರೇತವನವ ಕಾಯುತ್ತಲಿರೆ ।
ಕಾಂತೆ ಸುತರಿಪ್ಪ ಮನೆಯೊಡೆಯ ಕಿಚ್ಚಿನ ವಿಪ್ರ ।
ನಂತೆ ಭುಗಿಲಿಡುತಿಹಂ ಅವನ ಮುನಿಸೇ ಅವನ ಮುನಿಸೆನೆ ಭಯಾನಕದೊಳು॥
ಮುಂತುಗೆಡಿಸುವುದು ಚೇಳಿನ ಗೊಱೆಯುಂ ಶಿಳರ ।
ಮುಂತಣಂ ಮಿಡಿನಾಗಕುಳವಿಡಿವ ಹೇಳಿಗೆಯು ।
ಸಂತೋಷವೆನಿಸುವುದು ಎಂಬಾಗಳವರ ಮನದಾಸತ್ತ್ವನೇನೆಂಬೆನು ॥೧॥

ಬಡಯನತಿಕೋಪಿ ಹೆಂಡತಿ ಮಹಾಮಾಱಿ ಮಗ ।
ಕಡುಧೂರ್ತ ಸೊಸೆಯಾದಳಧಿಕನಿಷ್ಠುರೆ ಮನೆಯ ।
ನಡೆನವರು ದುರ್ಜನರು ನೆರೆಮನೆಯವರಸತ್ಯವಾದಿಗಳು ಪಶುಗಳಗಡು ॥
ಅಡಿಗಡಿಗೆ ಕೋಪಿಸುವ ಸಾಯೆ ಸದೆಬಡಿವ ಕಾ ।
ಱ್ಗಡೆವ ಕರಕರಿಪ ಸೆಣಸುವ ತಪ್ಪ ಸಾಧಿಸುವ ।
ಕೆಡೆಯೊದೆವ ಮಾರಿಗಾಱದೆ ಸತ್ತು ಹುಟ್ಟುತಿಪರವನಿಪನ ಸತಿಪುತ್ರರು ॥೨॥

ಎಡೆವಿಡದೆ ನಡೆದು ಬಿಡದೊಡೆಯನರಮನೆಗೆ ನೀ ।
ರಡಕಿ ಕೊಟ್ಟನಿತು ಭತ್ತವ ಮಿದಿದುವೊಡಲಿಗೆ ।
ಯ್ದೆಡೆಯಿಕ್ಕಿದನಿತುಮಂಉಂಡುಯಿರುಳುಂ ಹಗಲುಮೆನ್ನದೋರಂತೆಕುದಿವ॥
ಮಡದಿಯು ಕುಮಾರನುದಯದೊಳೆದ್ದು ಹೋಗಿ ಹೇ ।
ರಡವಿಯಲಿ ಹುಲುಹುಳ್ಳಿಹೊಱೆಗಟ್ಟಿ ಕೊಂಡು ತ ।
ನ್ನೊಡನಾಡಿಗಳ್ವೆರಸಿ ಬೈಗೆ ಬಹನಿಂತು ಕಾಲನ ಕಳೆಯುತಿರುತಿರ್ದನು ॥೪॥

ಕಸ ನಡುಮನೆಯೊಳಿರಲು ಬೈವನೊಡೆಯಂ ಕಱೆವ |
ಪಶುಗಳಗಡುಂ ಕಟ್ಟಿಹೋದಡೊದೆವುವು ಅವನ |
ಸೊಸೆ ಬೆನ್ನನೊಱಸಲೆಂದಪ್ಪಳಿಸುವಳು ಗೃಹಸ್ಥನ ಪುತ್ರತನ್ನ ಕಾಲ||
ಸಸಿನದಲಿ ತೊಳೆಯುಳವಳೆಂದೊದೆವ ನೆರೆಮನೆಯ |
ಪಿಸುಣರಾದವರಿವಳು ಕಳ್ಳೆಯೆಂದೈದೆ ಘೂ |
ರ್ಜಿಸುತೊಡತಿ ಸದೆವಳೆನೆಪುತ್ರಶೋಕವುಕೂಡಿಸಂಧಿಸಿತ್ತೇವೊಗೞ್ವೆನು ||
ಓರಂತೆ ತಲ್ಲಣಿಸಿ ಹೆದಱಿ ಕಣ್ಗೆಟ್ಟೋಡ |
ಬಾರದಿರಬಾರದುಱೆ ಸಾಯಬಾರದು ಬದುಕ |
ಬಾರದೆಂಬಂತೆ ತವೊಮ್ಮಡಲಿಂಗೆ ಬರ್ಪ ದುಃಖಂಗಳೇ ಸಾಕ್ಷಿಯಾಗಿ ||
ಧಾರಿಣಿಯೊಳವನಿಪನ ಸತ್ಯ ಸಲಬೇಹುದೆಂ |
ಬಾರೈಕೆವಿಡಿದು ನಡೆಯುತ್ತಿರ್ಪ ನಾರಿಗೆ ಕು |
ಮಾರಂಗೆ ಮುಂದೆ ಬಹ ಸಂಕಟದ ಸಂವರಣೆಯನದಾವ ಜೀವರು ಕೇಳ್ವರು||
ಎಂದಿನಂತುದಯಕಾಲದೊಳೆದ್ದು ಹುಲುಹುಳ್ಳಿ |
ಗೆಂದರಣ್ಯಕ್ಕೆ ನಡೆದಲ್ಲಲ್ಲಿ ಹೊಕ್ಕು ಹಲ —
ವಂದದಿಂದಡುಗಬ್ಬುಗಳನಾಯ್ದೊಟ್ಟಿಹೊಱೆಗಟ್ಟಿ ತನ್ನೋರಗೆಯ ಮಕ್ಕ [ಳೊಡನೆ ||
ನಿಂದು ಮಧ್ಯಾಹ್ನದುರಿಬಿಸಿಲೊಳೆದೆ ಬಿರಿಯೆ ಜವ |
ಗುಂದಿ ತಲೆಕುಸಿದು ನಡೆಗೆಟ್ಟು ಬಾಯಾಱೆ ಹಣೆ |
ಯಿಂದ ಬೆಮರುಗೆ ನೆತ್ತಿಹೊತ್ತಿ ತೆಕ್ಕುತ್ತ ಹರಿತಪ್ಪಾಗಳೇವೊಗೞ್ವೆನು ||೭||
ಕೆಲದ ಮೆಳೆಹುಲ್ಲ ಹುತ್ತಂ ಸುತ್ತಮುತ್ತಿ ಕೋ |
ಮಲತೆಯಿಂ ನಳನಳಿಸಿ ಕೊಬ್ಬಿ ಮೊಳೆವೊಯ್ದು ಕಂ |
ಗಳವಟ್ಟು ಬೆಳೆದೆಳೆಯ ದರ್ಭೆಯಂ ಕಂಡು ಹಾರಯಿಸಿ ಮನವುಬ್ಬಿ ನಾನಿದ
ಗಳಗಳನೆ ಕೊಯ್ದು ಕೊಂಡೊಯ್ದಿತ್ತಡೆಮ್ಮೊಡೆಯ | [ನೆಲ್ಲವಂ||
ಮುಳಿಯದಿಹನೆಂಬಾಸೆಯಿಂ ಹೊಱೆಯನಿಱುಹಿ ಮ |
ತ್ತೆಳಸಿ ಕಡುಗೋಲ್ವಿಡಿದು ಸಾರ್ದೆದರ್ಪನಸ್ತ್ರಿಯಂ ಸಾರ್ವಸೂರ್ಯನಂತೆ||
ಹದಿಗಡಿದು ಹತ್ತಿಹುತ್ತದನೆತ್ತಿಯೆಳೆವುಲ್ಲ |
ಹೊದಱ ಹಿಡಿದಡಸಿ ಬಿಡದಱೆದು ಸೆಳೆಯಲ್ ಕೆಯ್ಯ |
ಹದರನೊಡೆಗಚ್ಚಿ ಜಡಿಯುತ್ತ ಭೋಂಕನೆ ಬಂದ ರೌದ್ರಸರ್ಪನನುಕಂಡು||

ಹೆದಱಿ ಹವ್ವನೆ ಹಾಱಿ ಹಾ! ಎಂದು ಕೈಕಾಲ |
ಕೆದಱಿ ತಲೆಕೆಳಗಾಗಿ ಕೆಡೆದನಕಟಕಟ! ಮದ |
ಮುದಿತರಾಹುಗ್ರಸ್ತನಾದ ತರುಣೇಂದುಬಿಂಬಂ ನೆಲಕೆ ಬೀೞ್ವಂದದೆ ||೯||
ಹುತ್ತದಿಂ ಫಣಿವೆರಸಿ ಕೆಡೆಯೆ ಕಂಡೊಡನಿರ್ದ |
ತತ್ತುಕಂಗಳು ಹೆದಱಿ ಬಿಟ್ಟೋಡಿ ಹೋದರೂ |
ರತ್ತಲಿತ್ತಂ ತಾಯ್ಗೆ ಹಲುಬಿ ತಂದೆಯು ಕರೆದು ದೆಸೆಗೆ ಬಾಯ್ವಿಟ್ಟೞಲುತ ||
ನೆತ್ತಿಗೇಱಿದ ವಿಷದ ಕೈಯಿಂದ ಮಡಿದನೀ |
ಹೊತ್ತೆನ್ನ ಕುಲದ ಕುಡಿ ಮುರುಟಿತೆಂದುಮ್ಮಳಂ |
ಬೆತ್ತು ಬೀೞ್ವೆ ಮಾಣೆನೆಂಬಂತೆ ರವಿ ಬಿದ್ದನಂದು ಪಡುವಣ ಕಡಲೊಳು||೧೦||
ತನಯನೆಂದುಂ ಬಪ್ಪ ಹೊತ್ತಿಂಗೆ ಬಾರದಿರೆ |
ಮನನೊಂದಿದೇನೊ ತಳುವಿದನೆನ್ನ ಕಂದನೆಂ |
ದೆನುತ ಸುಯ್ಯುತ್ತ ಮಱುಗುತ್ತ ಬಸಿಱಂ ಹೊಸೆದು ಕೊನೆವೆರಲ ಮುಱಿ [ದುಕೊಳುತ ||
ತನುವ ಮಱೆದಡಿಗಡಿಗೆ ಹೊಱಗನಾಲಿಸಿ ಮತ್ತೆ |
ಮನೆಯೊಡತಿಗಂಜಿ ಕೆಲಸವನು ಮಾಡುತ್ತಿಪ್ಪ |
ವನಿತೆಗಾದಾಪತ್ತನಾಲಿಸದೆ ಕೆಟ್ಟು ಘಟ್ಟಿಸುವರದನೇನೆಂಬೆನು ||೧೧||
ಬಂದಿರನಲೇ ಎಂದು ಹೊಱವಟ್ಟೋಡೋಡಿದಪ |
ಳೆಂದೆಂಬರೊಯ್ಯನೞುತಿರಲಮಂಗಳಗರೆದ |
ಳೆಂದೆಂಬರೊಳಗೊಳಗೆ ಮಗನ ಗುಣಮಂ ಹಲುಬುತಿರಲು ಬೈದಪಳೆಂಬರು||
ನಿಂದು ಬೆಱಗಾಗಿ ಮಱೆದಿರೆ ಕೆಲಸಗಳ್ಳೆಯಿವ |
ಳೆಂದೆಂಬರೊಮ್ಮೆ ಬಿಸುಸುಯ್ಯೆ ಬೇಸತ್ತಳಿವ |
ಳೆಂದೆಂಬರಂದು ಬೈವರು ಬೈದು ಬಡಿವರಾಮನೆಯವರು ಮಾನಿನಿಯನು||
ಬಳಗುಡಿದ ನಾರಾಚದೇಱಿನಂದದಿ ಹೊಱಗ |
ಬಳಸದೊಳಗೊಳಗೇಗುವಾವಗೆಯ ಶಿಖಿಯಂತೆ |
ಕೆಳೆಗೊಂಡ ಹಗೆಗಳೊಳಗಣ ಮುಳಿಸಿನಂದದಿಂ ಮನೆಯುವರ ಮಾರಿಗಂಜಿ ||
ಬಳಸಿ ಬಿರಿವೆದೆ ಬಿಕ್ಕುವಕ್ಕೆ ಕಣ್ಗಳೊಳೊಱೆವ |
ಜಲ ಸೆರೆಗಳೊಡೆದುಬ್ಬಿ ಬಿಗಿದು ಗಂಟಲಿನ ಮು |
ಕ್ಕುಳಿಸಿದಕ್ಕೆಗಳೆಸೆವ ಸತಿಯೞಲು ಸೀಗೆಯೊಳಗಣ ಬಾೞೆಗೆಣೆಯಾದುದು ||

ಉರಿವ ಬಿಸಿಲೊಳು ಹಸಿದು ಬಸವೞಿದು ಬಂದು ಕೆಡ |
ದಿರುತಿಪ್ಪನೋ ಎಂದು ಕೇಱಿಲೊಳು ಮಿಗೆ ಕಟ್ಟು |
ತಿರೆ ಹಸುಗಳಱಿದು ಕೆಡೆದಿರುತಿಪ್ಪನೆಂದು ಗೊಂದಣಿಯಲ್ಲಿ ಹುಲುಹುಳ್ಳಿಯು||
ದೊರಕದಿರೆ ಮನೆಗೆ ಬರಲಂಜಿ ಹೊಱಹೊಱಗಾಡು |
ತಿರುತಿಪ್ಪನೋ ಎಂದು ಬೀದಿಯೊಳು ನೋಡಿ ತಡ |
ವರಿಸಿಕಾಣದೆ ಮಱುಗುತೞಲಿಂದ ಮನದೊಳಗೊಳಗೆಸತ್ತು ಹುಟ್ಟುತಿರ್ದಳು||

ಅಡವಿಯೊಳು ಹೊಲಬುಗೆಟ್ಟನೊ ಗಿಡುವಿನೊಳಗೆ ಹುಲಿ |
ಹಿಡಿದುದೋ ಕಳ್ಳರುಯ್ದರೋ ಭೂತಸಂಕುಲಂ |
ಹೊಡೆದುವೋ ನೀರೊಳದ್ದನೊ ಮರದ ಕೊಂಬಿನಿಂ ಬಿದ್ದನೋ ಫಣಿ [ತಿಂದುದೋ||
ಕಡುಹಸಿದು ಬಾಯಾಱಿ ಸಿಂದಿಪ್ಪನೋ ಎಂದು |
ಮಡದಿ ಹಲವಂ ಹಲುಬುತಂಗಳದೊಳರೆ ಹೊತ್ತಿ |
ಹೊಡಕರಿಸುವೞಲ ಕಬ್ಬೊಗೆಯಂತೆ ಕವಿನ ಕತ್ತಲೆಯೊಳಗೆ ಸಿಂದಿರ್ದಳು||

ಉಟ್ಟುಱುವೆಯಂ ಉರದ ಮೇಲಕ್ಕೆ ತೆಗೆಯುತ್ತ |
ಬಿಟ್ಟ ಹಂಕಣಿದಲೆಯನಡಿಗಡಿಗೆ ತುಱುಸುತ್ತ |
ನಟ್ಟ ದಿಟ್ಟಿಯೊಳು ತನಯನ ಬರವ ನೋಡುತ್ತ ಕದಪಿನೊಳು ಕೈಯ್ಯನಿಟ್ಟು||
ಕೆಟ್ಟೆನಿನ್ನೇಗುವೆನು ಏನ ಮಾಡುವೆ ಮಗನ |
ಬಟ್ಟೆಯಂ ನೋಡಿ ಬೆಱಗಾಗುವಿನಿತಕ್ಕೊಡತಿ |
ಧಟ್ಟಿಸುವಳೆಂದು ಸಿಡಿಮಿಡಿಗೊಂಡು ಮಱುಗುತ್ತ ನಿಂದು ಬೆಱಗಾಗಿರ್ದಳು ||

ಬಂದರಂ ಲೋಹಿತಾಶ್ವಾ! ಎಂದು ಬಟ್ಟೆಯೊಳು |
ನಿಂದರಂ ಲೋಹಿತಾಶ್ವಾ! ಎಂದು ಗಾಳಿ ಗಿಱಿ |
ಕೆಂದೊಡಂ ಲೋಹಿತಾಶ್ವಾ! ಎಂದು ಕರೆಕರೆದು ಬಿಡೆ ಬೀದಿಗಱುವಿನಂತೆ ||
ಮಂದಮತಿಯಾಗಿರ್ದ ಚಂದ್ರಮತಿಗೊಬ್ಬ ನೈ |
ತಂದಿಂದು ಕೂಡೆ ಹೋಗಿರ್ದ ಕಂಡೆಂ ನಿನ್ನ |
ಕಂದನೊಂದುಗ್ರಫಣಿ ತಿಂದು ಜೀವಂಗಳೆದನೆಂದು ಹೇೞಿದನಾಗಳು ||೧೨||

ಏಕೆ ಕಚ್ಚಿತ್ತಾವ ಕಡೆಯಾವ ಹೊಲನಕ್ಕ |
ಟಾ! ಕುಮಾರಂ ಮಡಿದ ತಾವೆನಿತು ದೂರವೆನ |
ಲೀಕಡೆಯಲೀಹೊಲನಲೀಮರದ ಕೆಲದ ಹುತ್ತದ ಹುಲ್ಲ ಕೊಯ್ಯೆ ಕೈಯ್ಯ||

ನೂಕೆ ಫಣಿಯುಗಿಯೆ ಮಡಿದಂ ದೂರವಲ್ಲ ನೀಂ ।
ಬೇಕಾದೊಡೀಗ ಹೋಗಲ್ಲದಿರ್ದೊಡೆ ಬೞಿಕ ।
ನೇಕಭಲ್ಲುಕಜಂಬುಕಂ ಘೂಕವೃಕಗಳೆೞೆಯದೆ ಬಿಡವು ಕೇಳೆಂದನು ॥೧೮॥
ನುಡಿಯಲರಿದೆನಿಸಿ ಮೇರೆಯ ಮೀಱುವೞಲನಳ ।
ವಡಿಸಿ ಬಂದೊಡೆಯನಡಿಗಳ ಮೇಲೆ ಕೆಡೆದು ಬಾ ।
ಯ್ವಿಡುತಡವಿಯೊಳೆನ್ನ ಮಗನನುಗ್ರಕಾಳೋರಗಂ ಕಚ್ಚಿ ಮಡಿದನೆಂದು ॥
ನುಡಿಯೆ ಲೇಸಾಯ್ತು ಮಡಿದರೆ ಮಡಿದನೆಂದು ಕಾ ।
ಳ್ಗಡೆಯೆ ಬಂಟರನಟ್ಟಿಯುಱಿಸಿರ್ಪೆ ತಂದೆಯೆನೆ ।
ನಡುವಿರುಳು ಬಂಟರುಂಟೇ ನಿದ್ದೆಗೆಯ್ಯಬೇಕೇೞು ಕಾಡದಿರೆಂದನು ॥೧೯॥
ನರಿಗಳೆೞೆಯದ ಮುನ್ನ ದಹಿಸಬೇಕೈ ತಂದೆ ।
ಕರುಣಿಸೆನೆ ದುರ್ಗುಣವಟ್ಟ ಶೂದ್ರನನು ಸಂ ।
ಸ್ಕರಿಸುವವರಾವಲ್ಲ ನಡೆಯೆಂದೊಡಾನಾದೊಡಂ ಹೋಗಿ ಕಂಡು ಮಗನ ॥
ಉರಿಗಿತ್ತು ಬಪ್ಪೆನೇ ಎನೆ ಕೆಲಸವಂ ಬಿಟ್ಟು ।
ಹರೆಯದುಳ್ಳದನ್ನೈದೆ ಮಾಡಿ ಹೋಗೆನಲು ಚೆ ।
ಚ್ಚರದಿ ಮಾಡುವ ಕಜ್ಜವೆಲ್ಲವಂ ಮಾಡಿ ಹೊಱವಟ್ಟಳೊಯ್ಯನೆ ಮನೆಯನು॥
ದಟ್ಟೈಸಿ ಮಡಲಿಱಿವ ಕಾಳದೊಳು ನಡುವಿರುಳು ।
ನಟ್ಟ ಮುಳ್ಳುಗಳನೆಡಹಿದ ಕಲ್ಲ ಹಾಯ್ದು ಮರ ।
ವುಟ್ಟನೇಱಿದ ತೆವರನಿೞಿದ ಕುೞಿಬಿದ್ದು ನಿಡುದರಿಗಳಂ ಹಿಡಿದ ಗಿಡುವ ॥
ಬಿಟ್ಟ ತಲೆಯಂ ಬಿಚ್ಚಿ ದುಡಿಗೆಯಂ ಮಱೆದು ಗೋ ।
ೞಿಟ್ಟು ಬಾಯ್ವಿಟ್ಟು ಹಲುಬುತ್ತನಡೆತಂದು ಹುಲು ।
ವಟ್ಟೆಯೊಳು ಬೆಳೆದ ಹೆಮ್ಮರನ ಮಲಗಿಸಿ ನಿಂದ ಪುಳ್ಳಿಹೊಱೆಯಂ ಕಂಡಳು॥
ಈಯೆಡೆಯೊಳಿನ್ನಿರದೆ ಮಾಣೆನೆಂದಳು ಕಂದಿ ।
ತಾಯಿ ಕರೆದಳು ಮಗನೆ! ಮಗನೇ! ಹರಿಶ್ಚಂದ್ರ ।
ರಾಯನ ಕುಮಾರಕಾ !ಲೋಹಿತಾಶ್ವಾ !ನಿನ್ನನಾವ ಕಾಡೊಳಕೊಂಡುದೋ॥
ಓಯೆಂಬುದೇನು ಕಂದಾ! ಬಾಯ ಬಿಡದಿತ್ತು ।
ಬಾಯೆಂಬುದೇನು ತಂದೆಯೆನ್ನನಲ್ಲದೊಡೆ ।
ಸಾಯೆಂಬುದೇನುಸಿರದಿರಲೇಕೆ ತರುಣಿಯೆಂದೞಲಿದಳು ಹಂಬಲಿಸುತ ॥೨೦॥

ತೊಱೆದ ಮುಱುಕದ ತವಕದಿಂದತ್ತಲಿತ್ತ ಹರಿ |
ಹರಿದು ಕಂಬನಿಯ ಕೈಯಿಂದ ಮುಂಗಾಣದಾ |
ತುರದೊಳಲ್ಲಲ್ಲಿ ತಡವರಿಸಿ ಕೆಡೆದೆದ್ದು ಕಟ್ಟೞಲುರಿಯ ಭರದೊಳೊಱಲಿ ||
ಕರೆಯುತ್ತ ಹಳವಿಸುತ ಹಂಬಲಿಸಿ ಬಾಯ್ಬಿಡುತ |
ದೊರೆಗೆಡುತ ಮೊಱೆಯಿಡುತಲೞಲುತ್ತ ಬೞಲುತ್ತ |
ಹರಹರ! ಮಹಾದೇವ! ಮಗನ ನುಂಗಿದ ಹುತ್ತದೆಡೆಗೆ ಬಂದಳು ಭರದೊಳು||

ವಿಷದ ಹೊಗೆ ಹೊಯ್ದು ಹಸುರಾದ ಮೈ ಮೀಱ ನೊರೆ |
ಯೊಸರ್ವ ಗಲ್ಲಂ ಕಂದಿದುಗುರ್ಗಳರೆದೆಱೆದಗು |
ರ್ವಿಸುವ ಕಣ್ ಹರಿದು ಹುಲುಹಿಡಿದ ಹರಹಿದ ಕೈಗಳುಂಬ ಹೊತ್ತು ಣ
ಜಸಿದು ಬೆನ್ನಡರ್ದ ಬಸಿಱುಕಟಕಟ ! ಮುರಿದ ಗೋಣ್ | [ಹೆಡೆಯದೆ ||
ದೆಸೆಗುರುಳಿ ಹುಡಿಹೊಕ್ಕು ಬಱತ ಬಾಯ್ಬಿರಸಂದು |
ಬಸವೞಿದ ನಿಜಸುತನ ಕಂಡಳು ಹರಿಶ್ಚಂದ್ರನರಸಿಹುತ್ತದಮೊದಲೊಳು||೨೪

ಕಂಡ ಕಾಣ್ಕೆಯೊಳು ಶಿವಶಿವ! ನಿಂದ ನಿಲವಿನಲಿ |
ದಿಂಡುಗೆಡೆದಳು ಮೇಲೆ ಹೊರಳಿದಳು ಬಿಗಿಯಪ್ಪಿ |
ಕೊಂಡು ಹೊಟ್ಟೆಯನು ಹೊಸೆಹೊಸೆದು ಮೊಱೆಯ ಮೇಲೆ ಮೊಱೆಯಿ
ಮುಂಡಾಡಿ ಮುದ್ದುಗೆಯ್ದೋರಂತೆ ಕರೆದು ಕರೆ | [ಟ್ಟೋವದೊಱಲಿ ||
ದಂಡಲೆದು ಲಲ್ಲೆಗರೆದಲವತ್ತು ಬಲವೞಿದು |
ಬೆಂಡಾಗಿ ಮೈಮಱೆದು ಜೀವವುಂಟೆಂಬಾಸೆಯಿಂದ ನೋಡಲು ಬಗೆದಳು ||

ಲಲನೆ ಮೂಗಿನೊಳುಸಿರನಳ್ಳೆಯೊಳು ಹೊಯ್ಲನುಗು |
ರೊಳು ರಜವನೆದೆಯೊಳಲ್ಲಾಟವಂ ಕೈಯ ಮೊದ |
ಲೊಳು ಮಿಡುಕನಂಗದೊಳು ನೋವನಕ್ಷಿಯೊಳು ಬೆಳ್ಪಂ ಭಾಳದೊಳು
ಲಲಿತಕಂಠದೊಳುಲುಕನಂಘ್ರಿಯೊಳು ಬಿಸಿಯನಂ | [ಬೆಮರನು||
ಗುಲಿಗಳೊಳು ಚಿಟುಕನುಂಗುಟದೊಳರುಣಾಂಬುವಂ |
ಸಲೆನಾಲಗೆಯೊಳಿಂಪರೋವುದಲಿಬಲುಹನಾರಯ್ದು ಕಾಣದೆ ನೊಂದಳು ||

ಹಡೆದೊಡಲು ಹುಡಿಯಾಯ್ತು ಮಗನೆ! ನೀನುಂಟೆಂದು |
ಕಡೆಗೆ ಹೆಚ್ಚಿದ ಮನಂ ಹೊತ್ತಿ ಹೊಗೆಯಿತ್ತು ಬಿಡ |
ದಡರಿ ನಿಟ್ಟಿಸಿ ನಲಿವ ದಿಟ್ಟಿಕೆಟ್ಟುವು ಸೋಂಕಿ ಪುಳಕಿಸುವ ಕರಣಂಗಳು ||

ಕಡಿವಡೆದುವ್ರೊಸೆದು ಹೆಸಗೊರ್ಳುತಿಪ್ಪ ನಾಲಗೆಯ |
ಕುಡಿ ಮುರುಟಿತಡಿಗಡಿಗೆ ನುಡಿಯುನಾಲಿಪ ಕಿವಿಯ |
ಹಡಿಗೆತ್ತುವೆಲೆ ಕಂದ! ಎಂದೆನುತ್ತಿಂದುಮುಖಿ ಮುಱುಗಿ ಬಾಯ್ವಿಟ್ಟಳಂದು ||
ಸಿರಿಹೋದ ಮಱುಕವನು ನೆಲೆಗೆಟ್ಟ ಚಿಂತೆಯನು |
ಪರದೇಶವಂ ಹೊಕ್ಕ ನಾಚಿಕೆಯನಱಿಯದ |
ನ್ಯರಮನೆಗೆ ತೊತ್ತಾದ ಭಂಗವನು ನಿಮ್ಮಯ್ಯಗಜ್ಞಾತವಾದೞಲನು ||
ನೆರೆದು ಮನೆಯವರೈದೆ ಕರಕರಿಪ ಚಿಂತೆಯನು |
ತರಳ! ನಿನ್ನಂ ನೋಡಿ ಮಱೆದು ಪರಿಣಾಮವಂ |
ಧರಿಸುತಿರ್ದೆನ್ನ ಗೋಣಂಕೊಯ್ದು ಇನ್ನಾರ ನೋಡಿ ಮಱೆದಪೆನೆಂದಳು ||
ಅತಿಲಜ್ಜೆಗೆಟ್ಟನ್ಯರಾಳಾಗಿ ದುಡಿದು ದಾ|
ವತಿಗೊಂಡು ಧನವನಾರ್ಜಿಸಿ ಹರಿಶ್ಚಂದ್ರಭೂ |
ಪತಿ ನಮ್ಮ ಬಿಡಿಸುವಾರ್ತದ ಮೋಹದಿಂ ಹಸಿವು ತೃಷೆ ನಿದ್ರೆಯಂ ತೊಱೆದು
ಸುತನ ಕರೆಯೆಂದೊಡೇನೆಂಬೆನಾವುದ ನೋಡಿ | [ಬಂದು ||
ಪತಿಯು ಮಱುಕವನು ಮಱೆಹಿಂಸುವೆನುಗ್ರಾಹಿಗಾ |
ಹುತಿಯಾಗಿ ಕೊಟ್ಟೆನ್ನ ಕಂದನನು ಎಂದಿಂದುಮುಖಿಯೞಲಿ ಬಾಯ್ವಿಟ್ಟಳು ||
ಅರಮನೆಯ ಮಣಿಗೃಹದ ಸೆಜ್ಜೆಯೊಳು ರಿಪುನೃಪರ |
ಕರಿದಂತದಿಂ ಕಡೆದ ಕಾಲ ಮಂಚದೊಳಟ್ಟ |
ವರಹಂಸತೂಲತಲ್ಪದೊಳು ಮಣಿವೆಳಗಿನೊಳು ಸಾಗಿಸುವ ಜೋಗೈಸುವ|
ತರುಣಿಯರ ನಡುವೆ ಪವಡಿಸುವ ಸುಕುಮಾರ! ನೀ |
ನರವರಿಸದೀಕಾಡೊಳಿರುತ ಕತ್ತಲೆಯೊಳಾ |
ಸುರದ ಕಲುನೆಲನೊಳೊಬ್ಬನೆ ಪವಡಿಸುವುದುಚಿತವೇ ಕಂದ ಹೇೞೆಂದಳು ||

॥ ಮಂದಾನಿಲರಗಳೆ ॥

ಏವೆನೇವೆನೆಲೆ ಮಗನೇ ಮಗನೇ |
ಸಾವೇಕಾಯಿತ್ತೆಲೆ ಚೆನ್ನಿಗನೇ || 1
ಇಱಿದೆಯಲಾ ಎನ್ನನು ಸುಕುಮಾರಾ |
ಕೊಱೆದೆಯಲಾ ಕೊರಲನು ಜಿತಮಾರಾ || 2

ವನಿತೆಯನಾಱಡಿಗೊಂಡೆಯೊ ವಿಧಿಯೇ |
ಎನಗೀಪರಿಯಲಿ ಮಡಿವುದವಧಿಯೇ || 3
ಶಿರದಲಿ ಬರೆದಕ್ಕರವೀಪರಿಯೇ |
ಗರಳದ ಉರಿಯಲಿಯೊರಗಿದೆ ಕರಿಯೇ || 4
ಎನುತ ಸುತನ ವದನವ ನೆಱೆನೋಡಿ |
ವನಿತೆ ಮಹಾದುಃಖದೊಳೊಡಗೂಡಿ || 5
ಪುತ್ರಶೋಕದುರಿ ಭುಗಿಲೆನೆ ನೆಗೆದು |
ಗಾತ್ರವನಡರೆ ಕೊರಲ ಸೆಱೆಬಿಗಿದು || 6
ಹೊಟಹೊಟನೊಡೆಯಲು ದುಃಖದಿ ಕಾಯು |
ತುಟಿಯೆಂತೆಂತಲುಗುತ್ತಿರೆ ಬಾಯು || 7
ತೆಱೆದೊಱಲಿದಳೊಱಲಿದಳೋರಂತೆ |
ಮೊಱೆಯಿಟ್ಟಳು ಹೊರಳಿದಳಾಕಾಂತೆ || 8
ವಿಧುಬಿಂಬಂ ರಾಹುವ ಪೋರ್ವಂತೆ |
ವಧು ವರನಂ ಸಿರಿಮುಡಿಯೋರಂತೆ || (?) 9
ಹುಡಿಯಾಗುತ್ತಿರೆ ಹೊರಳಿದಳಂದು |
ಕಡುಶೋಕಾನಲನಿಂದುಱೆ ಬೆಂದು || 10
ಉಕ್ಕುವಜಲ ಶಬ್ದಂ ಪೊಱಮಟ್ಟು |
ಬಿಕ್ಕಿ ಬಿಱಿದು ಹೊರಳುತ ಗೋಳಿಟ್ಟು || 11
ಎತ್ತಣ ಬಱಸಿಡಿಲೆಱಗಿತೊ ನಿನ್ನ |
ಹುತ್ತದ ಹತ್ತಿರಲೊಱಗಿದೆ ಚೆನ್ನ || 12
ಹಾವು ಹಿಡಿಯೆ ಹಾಯೆಂದೆಯೊ ಕಂದ |
ಸಾವಾಗವ್ವಾ ಎಂದೆಯೊ ಮಗನೆ || 13
ಅಯ್ಯಂಗಱುತಱುಚುತ ನೀ ಕೆಡೆದಾ |
ಕೆಯ್ಯೆಡೆಗೆನ್ನನಿದಾರಿಗೆ ನುಡಿದಾ || 14
ಘುಟಮುಂಟೆಯದೇಗುಲ ನಿನಗೆಂದು |
ಧಿಟದಿಂದೆನಗಿತ್ತೆಯೊ ನೀನಿಂದು || 15

ನೊಂದೆನು ಬೆಂದೆನು ಕಂದಿದೆ ಮಗನೆ |
ಕುಂದಿದೆ ಕುಗ್ಗಿದೆ ಮಗ್ಗಿದೆ ಮಗನೆ || 16
ಎಂಬ ನುಡಿಗೆಯುಂಬರದಲಿ ಸುರರು |
ಕಂಬನಿಯುಗಲಂದಾನಿರ್ಜರರು || 17
ಹರನರಸಿಯು ಸಿರಿಯುಂ ಕೋಪಿಸುತ |
ಸರಸತಿಯುಂ ರತಿಯುಂ ತಾಪಿಸುತ || 18
ಸಾವಿತ್ರಿಯು ಗಾಯತ್ರಿಯುರಱುತ |
ಭಾವಿಸೆ ದಿಕ್ಕನ್ನೆಯುರಱಲುತ || 19
ಅಸುರಸ್ತ್ರೀಯರು ತಾಪಿಸಿಯಱುತ |
ವಸುಗಳ ಸತಿಯರು ಸಂಕಟಗೊಳುತ || 20
ಪಾಪಿ ಕೌಶಿಕಂಗಂಜಿ ನಭದೊಳು |
ಆಪೊಱ್ತಱಲುತ್ತಿರೆಯವನಿಯೊಳು || 21
ಹೊರಳುತ್ತತ್ತಳು ಆತನ ಮಾತೆ |
ಸರಳುರ್ಚಿದ ಮೃಗದೊಲು ವಿಖ್ಯಾತೆ || 22
ರನ್ನದ ಕನ್ನಡಿಯೊಡೆದುದೊ ದೇವ |
ಹೊನ್ನ ಕಳಸ ಕೆಡೆದುದೊ ಎಲೆ ದೇವ || 23
ಎನ್ನಯ ಕಡವರಂ ಸೂಱೆವೋಯ್ತೇ |
ಚೆನ್ನದ ಪ್ರತಿಮೆಯುಸಿರು ಹರಿಹೋಯ್ತೇ || 24
ಸಾಹಿತ್ಯದ ಸಾಗರವಱೆಯಿತ್ತು |
ಆಹಾ! ರತುನಸ್ತಂಭ ಮುಱೆಯಿತ್ತು || 25
ಇನವಂಶದ ಲತೆಗುಡಿ ಮುಱೆಯಿತ್ತು |
ಜನಸನ ಸುರತರು ಕುಡಿಯುಡಿಯಿತ್ತು || 26
ಕಾಲ ಕರುಣವಿಲ್ಲದೆ ನೀನುಯ್ದೆ |
ಬಾಲನನೆಱೆದಿಂ ಕೊರಲನು ಕೊಯ್ದೆ || 27
ಆರಿಗೆನ್ನನೊಪ್ಪಯಿಸಿದೆ ಕಂದ |
ಆರಯ್ಯದೆ ಹೋಹರೆ ಗುಣವೃಂದ || 28

ಎನುತ ಸುತನ ಹಣೆಯೊಳು ಹಣೆವೆರಸಿ |
ವನಿತೆ ಮಹಾದುಃಖವನುಱೆ ಧರಿಸಿ ‖ 29
ಮಿಡುಕಿದಳೆಳವಾವಿನ ಕಡಿಯಂತೆ |
ಹುಡುಕಿದಳುಱುಬೆಗಡಿದ ಕರಿಯಂತೆ ‖] 30
ಆರ ಸಿರಿಯನೆಱೆಕೊಂಡೆನೊ ಮುನ್ನ |
ಆರಱಲನು ಸೆಳೆಕೊಂಡೆನೊ ಮುನ್ನ ‖ 31
ಆರಿಕ್ಕಿದ ವನವಂ ನಾಂ ಕಡಿದೆ |
ಆರು ಸಲಹಿದೆಳಲತೆಗುಡಿಯುಡಿದೆ ‖ 32
ಆವನಮೃತಫಲವಱಲಿಸಿ ಕೊಂಡೆ |
ಸಾವೆಯ್ದಿದ ಸುತನಱಲಂ ಕಂಡೆ ‖ 33
ಅಲ್ಲದೊಡೀಯಱಲಪ್ಪುದೆಯೆನಗೆ |
ಇಲ್ಲಿ ವೃಥಾ ಸಾವಪ್ಪುದೆ ನಿನಗೆ ‖ 34
ಹೆತ್ತ ಹೊಟ್ಟೆಯುರಿಯುತ್ತಿದೆ ಮಗನೆ |
ಎತ್ತಿದ ತೋಳಸು ಕೆತ್ತಿದೆ ಮಗನೆ ‖ 35
ಹಾಡುವ ಬಾಯೊಳು ಮಣ್ಣನೆ ಹೊಯ್ದು |
ನೋಡುವ ಕಣ್ಣೊಳು ಸುಣ್ಣವ ಹೊಯ್ದು ‖ 36
ಹೆಚ್ಚಿದ ಹರುಷವ ಕೊಚ್ಚಿದೆ ಮಗನೆ |
ನಚ್ಚಿದ ಮನವನು ಚುಚ್ಚಿದೆ ಮಗನೆ ‖ 37
ಪಾಪಿಯೆನ್ನ ನೀನೊಯ್ಯನೆ ನೋಡಾ |
ಕೋಪವನುಱಿದೊಯ್ಯನೆ ಮಾತಾಡಾ ‖ 38
ದೇಸಿಗಿತ್ತಿಯೆನ್ನೊಬ್ಬಳನೆನಿಸಿ |
ಸೂಸಿದೆ ನಿನ್ನಸುವಂ ಹೇವರಿಸಿ ‖ 39
ಅಱಲದಿರವ್ವಾ ಎನ್ನೆಲೆ ಮಗನೆ |
ಬಱಲಿದೆ ತಾಯೆಂದೆನ್ನೆಲೆ ಮಗನೆ ‖ 40
ನಾನಿದ್ದೆಹೆನಂಜದಿರೆಂದೆನ್ನ |
ಏನುವನುಮ್ಮಳಿಸದಿರೆಂದೆನ್ನ ‖ 41

ನುಡಿದರೆ ಪಾಪವೆ ಹೆತ್ತವರೊಡನೆ ।
ಕಡುಮುನಿಸೇಕೆಲೆ ಮಗನ ನ್ನೊಡನೆ ॥ 42
[ಆರಯ್ದುರೆಯಾಸೆಯುಲಾ ಮಗನೆ ।
ಹಾರೈಸಲು ಬದುಕೆನೆ ಚೆನ್ನಿಗನೆ] ॥ 43
ತಂದೆತಾಯಿಗಗ್ನಿಯು ನೀ ಕುಡದೆ ।
ಮುಂದೆ ಹೋಗಬಹುದೇ ಮನಗುಡದೆ ॥ 44
ಧರೆಯು ಸಿರಿಯು ಸಂಪತ್ತನು ಬಿಟ್ಟು ।
ಅರಸಿನ ಸತ್ಯಕ್ಕೇ ವಿಧಿವಟ್ಟು ॥ 45
ಅನ್ಯರ ಮನೆಯಲಿ ತೊತ್ತಾಗಿರ್ದು ।
ನಿನ್ನ ನೋಡಿ ಪರಿಣಾಮದೊಳಿರ್ದು ॥ 46
ಇಪ್ಪೆನ್ನನು ನೀನಿರಿವರೆ ಕಂದಾ ।
ತಪ್ಪಿದೆ ಮಗನೇ ವಿಧಿವಶದಿಂದ ॥ 47
ಇಂದು ನಿನ್ನ ಸಾವಱಿಪಿತ್ತೆನಗೆ ।
ಮುಂದುದೋಱಿದೊಡಲುರಿಯಿತ್ತೆನಗೆ ॥ 48
ಇಕ್ಕಿದಗೞು ಮುಖದಲಿ ಹುೞಿಯಿಟ್ಟು ।
ಮುಕ್ಕಳಿಸಿದವುದಕಂ ಹೊಲೆಗೆಟ್ಟು ॥ 49
ಆರಿಗೆ ಹೇೞುವೆನೀಸಂಗಡಿಯ ।
ಆರೆನಗುಂಟೆಲೆ ಮಗ ನೀ ನುಡಿಯ ॥ 50
ಎಂದೊಱಲಿದಳೊಱಲಿದಳೋರಂತೆ ।
ಮುಂದುಗಾಣದೞಲಿಂ ಗುಣವಂತೆ ॥ 51
ಪಾಪಿಯಾದನೆಲೆ ಮಗನೇ ಮಗನೆ ।
ಆಪತ್ತಡಸಿತು ರಿಪುಕರಿಮೃಗನೆ ॥ 52
ಮಣಿಮುಕುಟವ ಧರಿಸುವ ಶಿರದಲ್ಲಿ ।
ಬಣಹುಳ್ಳಿಯ ಧರಿಸಿದೆ ಭರದಲ್ಲಿ ॥ 53
ಬಾಳ ಪಿಡಿದು ಜಡಿದೊಪ್ಪುವ ಭುಜದಿಂ ।
ಕೋಲ ಕೊಡಲಿಯನು ಪಿಡಿದೆಯೊ ನಿಜದಿಂ ॥ 54

ಚಂದನ ವಸ್ತ್ರಾಭರಣವನುೞಿದು ।
ಬಂದಱುವೆಯನುಡಿಸಿತು ವಿಧಿ ಮುಳಿದು ॥ 55

ದೇವಾನ್ನವನಾರೋಗಿಪೆ ನೀನು ।
ಗೋವಳರುಂಬಂಬಲಿಯುಣಲಾನು ॥ 56

ಸೈರಿಸಲಾಱದೆ ಬೆದಬೆದ ಬೆಂದು ।
ಧೈರಿಯದಿಂ ಪತಿಯಾಜ್ಞೆಗೆ ಸಂದು ॥ 57

ನಾನಾವಸ್ಥೆಗಳಂ ನೀ ಪಡಲು ।
ತಾನೇ ಬಂದುದು ವಿಧಿ ಬೆಂಗುಡಲು ॥ 58

ಎಂತು ಸೈರಿಸಲು ಬಹುದೆಲೆ ದೇವ ।
ಕಂತುಹರನೆ ಕರುಣಿಸೆನಗೆ ಸಾವ ॥ 59

ಮಱುಗಿದಳುರಿಗೊಂಡಂತಾಕಾಂತೆ ।
ಮಱೆದು ತನುವಿನನುವನು ಸಲೆ ಭ್ರಾಂತೆ ॥ 60

ಇರೆ ಪವನಾಹತಿಯಿಂದೇೞ್ತು ।
ಸುರಿವಶ್ರುಜಲಂಗಳ ಭರವೆತ್ತು ॥ 61

ಶಿರದಲಿ ಶಿರವಿಟ್ಟೊಱಗಿ ಕುವರನ ।
ಕರೆದಳು ಖರಕರಕುಲಕುಂಜರನ ॥ 62

ಬಾರೈ ಬಹಳಸಿರಿಯ ಸಿಂಗಾರ ।
ಬಾರೈ ಸುಜನಜನಕ್ಕಾಧಾರ ॥ 63

ಬಾರೈ ಬೞಲಿದೆ ಎಲೆ ಸುಕುಮಾರ ।
ಬಾರೞಲಿಸದೆನ್ನನು ಸುಕುಮಾರ ॥ 64

ಮುದ್ದುತನದ ಮೋಹದ ಮುಂಗುಡಿಯೆ ।
ಎದ್ದಪ್ಪೆನ್ನನು ಎಳಲತೆಗುಡಿಯೆ ॥ 65

ಹಂಸತೂಲತಲ್ಪವನೇಕೊಲ್ಲೆ ।
ವಂಶದ ನೃಪರರಸಿಗೆ ನೀ ಸಲ್ಲೆ ॥ 66

ಏೞೆನ್ನಾನಂದಾಮೃತಶರಧಿ ।
ಏೞಖಿಳಗುಣಾರ್ಣವಕಳಾನಿಧಿ ॥ 67

ಏೞೇೞಿರಿನೃಪಗಿರಿವಜ್ರಧರ ।
ಏೞುಗ್ರಾಜೆಗುರುವ ದಂಡಧರ ॥ 68

ಸುಪ್ರಭಾತಪಠನಧ್ಯಾನವನು ।
ವಿಪ್ರರ ಮಂತ್ರಾಶೀರ್ವಾದವನು ॥ 69

ಗಾನಾಮೃತಮಂಗಲಗೇಯವನು ।
ಗಾಣರಿಗರಿದೆನಿಸುವ ಠಾಯವನು ॥ 70

ಆಲಿಸಿ ಕೇೞೇೞೆಲೆ ಸುಕುಮಾರ ।
ಮೂಲೋಕದ ಜಾಣರಿಗತಿವೀರ ॥ 71

ಮಂಗಳಾರತಿಗೆ ಮನಗುಡಲೇೞೈ ।
ಲಿಂಗಪೂಜೆಗೆಡೆಯಾಯಿತ್ತೇೞೈ ॥ 72

ಮುಖಪ್ರಕ್ಷಾಲನಮಾಡೊಲವಿಂದ ।
ಮುಖರಕ್ಷೆಗೆ ಹೋಗೇೞೆಲೆ ಕಂದ ॥ 73

ಆಜ್ಯನಿರೀಕ್ಷಣೆಯನು ಮಾಡೇೞೈ ।
ಪೂಜ್ಯವಪ್ಪ ಲಿಂಗವ ನೋಡೇೞೈ ॥ 74

ಕಪಿಲಾರ್ಚನೆಮಾಡೇೞೆಲೆ ತನುಜ ।
ತಪನಾರ್ಘ್ಯವ ನೀಡಾ ರವಿಕುಲಜ ॥ 75

ನಿತ್ಯದಾನವಿಲ್ಲದೆ ನೀನಿಹರೆ ।
ಅತ್ಯಧಿಕರ ಮನ್ನಿಸದಿಂತಿಹರೆ ॥ 76

ಮಂಗಳಕರಮುಕುರವ ನೋಡೇೞ ।
ಸಿಂಗರಿಸೇೞೆಲೆಯರಿಜಯಲೋಳ ॥ 77

ಎಳಗನ ವೈಹಾಳಿಯ ಮಾಡೇೞೈ ।
ಕೆಳೆಯರ ಮೇಳಕೆ ಮನಗುಡಲೇೞೈ ॥ 78

ಮಲ್ಲರ ಭುಜಯುದ್ಧವ ನೋಡೇೞೈ ।
ನಿಲ್ಲದೆ ಗರುಡಿಯ ಶ್ರಮ ಮಾಡೇೞೈ ॥ 79

ಹಲ್ಲಣಿಸಿದ ವಾರುವವಿದೆ ಮಗನೆ ।
ಮಲ್ಲಾಮಲ್ಲಿಯ ರಥವಿದೆ ಮಗನೆ ॥ 80

ಗಜಘಟೆಗಳು ಹಲ್ಲಣಿಸಿವೆ ಮಗನೆ |
ನಿಜಪರಿವಾರಕೆ ಬೆಸಗುಡು ಮಗನೆ || 81
ಆವ ದಿಶಾಧಿಪರತ್ತ ನಡೆಯಲು |
ಆವ ಹಗೆಯ ಸಪ್ತಾಂಗವ ಕುಡಲು || 82
ಬೆಸಸುವೊಡೇಱೇಱಲೆ ಸುಕುಮಾರ |
ವಸುಧಾಜನದಾಪತ್ಸುನಿವಾರ || 83
ಹೆಬ್ಬುಯ್ಯಲ ಕೇಳದೊಡುಱೆ ಕಾವೆ |
ಹಂಬಲಿಪೆನಗುಸಿರದೊಡಿನ್ನೇವೆ || 84
ದೇಸಿಗನಾಗಿ ನೀನಡವಿಯೊಳಱಿದೆ |
ದೇಶಾಧಿಪರ ಮೇಲೆತ್ತಿ ನಡೆಯದೆ || 85
ದೇಶಾಧಿಪರಡವಿಯೊಳೊಱಗುವರೆ |
ಆಶಾಧಿಪರಳುಕದೆ ಬೀಱುವರೆ || 86
ನೆತ್ತರ ಕಡಲೊಳಗಿಭಕುಲ ಬೀಱೆ |
ಮೊತ್ತದ ತುರಗಂಗಳು ಬೆಂಡೇಱೆ || 87
ರಥತತಿ ನಾಲ್ದೆಸೆಗೆಯ್ತರೆ ಕವಿದು |
ಮಥನದಿ ದೇವಾಸುರರಲಿ ಹೊಯಿದು || 88
ಮಣಿಮಕುಟದ ಭಟರಟ್ಟೆಗಳಾಡೆ |
ತಣಿದು ಭೂತಸಂಕುಳ ಕುಣಿದಾಡೆ || 89
ಮಾರಿಮೃತ್ಯುಗಳಗೋಕರೆ ಹುಟ್ಟೆ !
ಕೂರಜನಂಗತಿಭೀಕರ ಹುಟ್ಟೆ || 90
ರಿಪುಬಲವಂ ಕೊಂದಱಿದಡೆ ತಪ್ಪೆ |
ತಪನಕುಲದ ವಿಜಯಶ್ರೀಯೊಪ್ಪೆ || 91
ಸುರಪತಿಯರ್ಧಾಸನವನೇಱದೆ |
ನರಪತಿಗಳಗಚ್ಚರಿಯಂ ಬೀಱದೆ || 92
ಧರೆಯನಾಳ್ವ ಸಿರಿಯಂ ಕಳೆದಿಂದು|
ಉರಗನ ವಿಷದಗ್ನಿಯೊಳುಱೆ ಬೆಂದು || 93
ಅಡವಿಯೊಳೀಪರಿ ಕೆಡೆವರೆ ವೀರ |
ಪೊಡವಿಯೊಡೆಯನಗ್ಗದ ಸುಕುಮಾರ || 94

ಏನ ಮಾೞ್ಪೆನಾಮಾಡಿರ್ದುದನು |
ತಾನುಂಬುದು ವಿಧಿ ಮಾಡಿದ ಹದನು ‖ 95
[ಆರಿಗಱುಹುವೆನು ಹೇೞಲೆ ಮಗನೆ |
ಸಾರಿನ್ನೞಲದಿರೆನ್ನೆಲೆ ಮಗನೆ] ‖ 96
ಎನ್ನನೊಯ್ಯಲೇಕೊಲ್ಲೆಯೊ ಮಗನೆ |
ನಿನ್ನನಗಲಿಯಿರಲಾಪೆನೆ ಮಗನೆ ‖ 97
ತನಯನನೇಕೆೞಬುಯ್ದೆಯೊ ಜವನೆ |
ಎನಗಿನ್ನಾವುದು ಗತಿಯೆಲೆ ಶಿವನೇ ‖ 98
ಕರುಣಿಸಿ ಕಾಯೈ ಗೌರೀರಮಣ |
ನರಕಿಯ ನೋಡೆಲೆಯುಗಜಾರಮಣ ‖ 99
ಕರುಣಿಸು ಪಾಪಿಯ ಪಂಪಾಪತಿಯೆ|
ಕರುಣಿಸನಾಥಗೆ ಕಾಶೀಪತಿಯೆ ‖ 100 ‖೩೦‖

†

ಇನ್ನೀಸೞಿಂದ ಮೇಲೆಮ್ಮೊಡೆಯನಱಸಿ ಬಂ |
ದೆನ್ನನುಯ್ದಡೆ ಒೞಿಕ ಸುಡಹಡೆಯೆನೆಂಬುದಂ |
ತನ್ನಮನದೊಳಗೆ ನೆನೆದೆದ್ದು ಪುತ್ರನನೆತ್ತಿಕೊಂಡು ದೆಸೆದೆಸೆಗೆ ತಿರುಗಿ ‖
ಮುನ್ನೆಲ್ಲರಂ ಸುಡುವ ತಾಪಾವುದೆಂದು ನೋ |
ಪ್ಪನ್ನೆಗಂ ಹಲಕೆಲವು ಉರಿಯ ಬೆಳಗಂ ಕಂಡು |
ಸನ್ನಿಕಾಱಂ ಕಾವ ಕಾಡತ್ತ ನಡೆವಾಗ ಬಟ್ಟೆಯೊಳದೇವೊಗೞ್ವೆನು ‖೩೧‖

ಬಿಡುದಲೆಯ ಬಿಟ್ಟ ಬಾಯ್ಗಳ ಬಱುತ ಬಸಿಱ ಕಳೆ |
ದುಡುಗೆಗಳ ಕೆಂಗಣ್ಣ ಕೋರೆದಾಡೆಗಳ ಕಡು |
ನಿಡಿದೊಡಲ ಬತ್ತಿದಂಗದ ಸುಗಿದತೊಗಲಸುಕ್ಕಿದ ಮೊಲೆಯ ಹೆಗಲಹೆಣನ‖
ಹಿಡಿದ ಕತ್ತಿಯ ಕಪಾಲದ ಭೂತಭೇತಾಳ |
ವಡೆ ಸುತ್ತಿ ಮುತ್ತಿ ಬೊಬ್ಬಿಟ್ಟು ಝುಂಕಿಸಿದುವಾ |
ನಡುವಿರುಳು ಮಾನಿನಿಯ ಮನ ಬೆದಱಬೇಕೆಂದು ಕೌಶಿಕಪ್ರೇರಣೆಯೊಳು‖

† ಈಕಡೆ ಬಂದು ಪ್ರತಿಯಲ್ಲಿ ಮಾತ್ರ „ಹದಿಮೂಱನೆಯ ಸಂಧಿ” ಎಂದು ಬರೆದಿದೆ.ಆದರೂ ಸೂಚನೆಯ ಪದ್ಯಾರ್ಥವಿಲ್ಲ.

ಹಸಿಯ ತೊಗಲುಡಿಗೆ ಹಿಂಡಿಲುಗರುಳ ಚಲ್ಲಣದ |
ಕುಸುರಿಗಂಡದ ತೊಂಡಲಸ್ಥಿಗಳ ತೊಡಿಗೆ ದ |
ಟ್ಟಸುವ ರಕ್ತದ ಭಾರಿಗಣ್ಣಾಲಿಗಳ ಸೊಡರು ಕಾಳಿಜದ ಚರುಗುಗಡುಬು||
ಸಸಿದು ಕೊಬ್ಬಿದ ಮಿದುಳ ರಾಸಿಗೂೞೆಸೆಯೆ ಮಾ |
ಮಸಕದಿಂ ಚಾಮುಂಡಿ ಕಮಲಾಕ್ಷಿಯರ ನಡುವೆ |
ಹೊಸತನಿಕ್ಕುವ ಭೂತವೇತಾಳರಾಡಿದರು ಮಾನಿನಿಯ ಮನ ಬೆದಱಲು||೩೩
ಕೆಡೆದ ಮುಂಡದ ಬಿದ್ದ ತಲೆಯ ಚೆಲ್ಲಿದ ಕರುಳ |
ಪಡಲಿಟ್ಟ ಕಾಳಿಜದ ಮಿದುಳ ಕೋೞ್ಗಸಱ ಹೊನ |
ಲಿಡುವ ರಕುತದ ಕಡಲೊಳಡಿಯಿಡಲು ಬಾರದೆಂಬಂತೆ ವಿಶ್ವಾಮಿತ್ರನು ||
ಅಡವಿಯೊಳಗೈದೆ ನಾನಾಭಯಂಕರವ ಸಾ |
ಲಿಡೆಯದನು ಪುತ್ರಶೋಕಗ್ರಹಾವೇಷ್ಟಿತೆಯ |
ಕಡುಪಿನಿಂ ಲೆಕ್ಕಿಸದೆ ಬಂದು ಸುಡುಗಾಡೊಳೞುಹಿದಳು ಪುತ್ರನ ಶವವನು ||
ಗಳಗಳನೆ ಮುನ್ನ ಬೆಂದುೞಿದಿರ್ದ ಕರಿಗೊಳ್ಳಿ |
ಗಳನೆಲ್ಲವಂ ಸಿದಿಗೆ ತಂದೊಟ್ಟ ಮೇಲೆ ಮಂ |
ಗಳಮಯ ಕುಮಾರನಂ ಪಟ್ಟರಿಸಿ ಕೆಲದೊಳುರಿವಗ್ನಿಯಂ ಪಿಡಿದು ನಿಂದು ||
ಬಳೆವಲ್ಲಿ ಬಳೆ ಹುಟ್ಟುವಲ್ಲಿ ಹುಟ್ಟೆಂದು ನುಡಿ |
ದೞುಹಲನುಗೈದಿೞುಹಲಾಱದಳವೞಿದು ಬಾ |
ಯೞಿದು ಮೊಱೆಯಿಟ್ಟೊಡಾದನಿಗೇಳ್ದು ನಿದ್ರೆದಿಳಿಗೆದ್ದನಾ ಭೂನಾಥನು||
ನಟ್ಟಿರುಳು ಸುಡುಗಾಡೊಳೊಬ್ಬಳೋರಂತೆ ಬಾ |
ಯ್ವಿಟ್ಟು ಹಲುಬುವ ವೀರನಾರಿಯಾವಳೊ ಮೀಱಿ |
ಸುಟ್ಟಿಯಾದೊಡೆ ನಿನಗೆ ವೀರಬಾಹುಕನಾಣೆ ಕದ್ದು ಸುಡ ಬಂದೆ ನಿನ್ನ ||
ನಿಟ್ಟಿಲುವ ಮುಱಿವೆನೆಂದುಱವಣಿಸಿ ಜಱೆಯುತ್ತ |
ದಟ್ಟಿಸುತ ಬಂದು ಹಿಡಿದಿರ್ದ ಕಿಚ್ಚಂ ಕೆದಱಿ |
ಮುಟ್ಟಗೆಯ ಮೇಲಿರ್ದ ಸುತನ ಹಿಂಗಾಲ್ವಿಡಿದು ಸೆೞೆದು ಬಿಸುಟಂ
ಬಿಸುಡದಿರು ಬಿಸುಡದಿರು ಬೇಡಬೇಡಕಟಕಟ | [ಭೂಪನು ||೩೬||
ಹಸುಳೆ ನೊಂದಾನೆಂದು ಬೀೞ್ವವನನೆತ್ತಿ ತ |
ಕ್ಕಿಸಿಕೊಂಡು ಕುಲವ ನೋಡದೆ ಬೇಡಿಕೊಂಬೆನಿವನೆನ್ನ ಮಗನಲ್ಲ ನಿನ್ನ ||

ಸಿಸುವಿನೋಪಾದಿ ಸುಡಲನುಮತಿಯನಿತ್ತು ರ |
ಕ್ಷಿಸು ಕರುಣಿಯೆಂದೊಡೆಲೆ ಮರುಳೆ ಹೆಣನುಟ್ಟುದಂ |
ಮಸಣವಾಡಗೆಯ ಹಾಗವನು ಹಣೆಯಕ್ಕಿಯಂಕೊಟ್ಟುಸುಡುಬೞಿಕೆಂದನು ||
ಕುಡಲಿಲ್ಲವೆನಗೆಯಿಂದಾನು ಲೋಗರ ಮನೆಯ |
ಬಡದಾಸಿಯಯ್ಯ ಕರುಣಿಸುವುದೆಂದೆನಲು ಕೊರ |
ಳೆಡೆಯ ಹೊಳೆಹೊಳೆವೈದೆದಾಳಿಯಂ ಕಂಡು ನೀನಿದನಡವನಿರಿಸಿ ನಿನ್ನ ||
ಒಡೆಯನಾದಾತನಂ ಬೇಡಿ ತಾ ಹೋಗೆನಲು |
ಕಡುಮುಳಿದು ನೊಂದು ಜನಸತಿ ಹರಿಶ್ಚಂದ್ರ ಸಲೆ |
ಮಡಿವನೋ ಅಲ್ಲದಿರಲೀತಾಲಿಯಂ ಶ್ವಪಚ ಕಾಂಬುದಿದು ಹೊಸತೆಂದಳು ||೩೮
ವಿಗತಸಪ್ತದ್ವೀಪಪತಿಯ ಬಸಿಱಲಿ ಬಂದು |
ಮಗನೆ ನಿನಗೊಮ್ಮೆಟ್ಟ ಸುಡುಗಾಡು ಹಗೆಯಾಯ್ತು |
ಮಿಗೆ ಸಕಲದೇಶದೊಳು ತನ್ನಾಣೆ ಸಲುವವನ ಕುವರನೆನಿಸುವ ನಿನ್ನನ ||
ಬಗೆಯದೀಚಂಡಾಲನಾಣೆಯಿಡುವಂತಾಯ್ತು |
ಜಗದ ನವನಿಧಿಗೊಡೆಯನಾತ್ಮಭವನೆನಿಸಿ ಮು |
ಟ್ಟಿಗೆಯ ಸುಂಕದ ಹಾಗ ಹಣೆಯಕ್ಕಿಯಿಲ್ಲಾಯ್ತು ಕಂದ ಎಂದೞುತಿರ್ದಳು ||
ವನಿತೆಯೞಲಂ ಕೇಳ್ದು ನಡುಗಿ ವಿಶ್ವಾಮಿತ್ರ |
ಮುನಿಯೆನಗೆ ಮತ್ತೆ ಮಾಡಿದ ತೊಡಕಿದಾಗದಿರ |
ದೆನುತ, ಮತ್ತೆ ಲೋಕದೊಳಗಾಣೆ ಸಲ್ವ ಸಪ್ತದ್ವೀಪವಾಳ್ವರಸನ ||
ತನಯನೀತರಳನೆನಲೆಲೆ ತರುಣಿ ನೆಲದೆಱೆಯ |
ನೆನಗೆ ಕುಡಲದಿಲ್ಲಧಿಕರಂ ಪೆಸರ್ಗೊಳಲು ಬಿಡು |
ವೆನೆ ಶೋಕಿಸುವ ಹೊತ್ತು ಹುಸಿದು ಶೋಕಿಸುವೊಡೇನಹುದೆಂದನವನೀಶನು ||
ಹಿಂದುೞಿದ ಸಂಪದವನೆಣಿಸುವುದು ಹುಸಿಯಲ್ಲ |
ವಿಂದೀಗ ತೋಱ ಬಪ್ಪುದೆ ಹುಸಿಯದುಂಟೆ ತ |
ಪ್ಪೆಂದೊಡದಕೇನಾತನಾರ ಮಗನಾವ ಕುಲನಾವ ನಾಡರಸನೆನಲು ||
ಸಂದ ರವಿಕುಲತಿಲಕನೆನಿಪಾತ್ರಿಶಂಕುವಿನ |
ನಂದನನಯೋಧ್ಯಾಧಿಪತಿ ಹರಿಶ್ಚಂದ್ರನೆನೆ |
ನೊಂದಾತನಂಗನೆ ಕುಮಾರರೇನಾದರೆಲ್ಲಿರ್ದಪರು ಹೇೞೆಂದನು ||೪೧||

ಪೊಡವೀಶ್ವರಂ ಹಿಂದೆ ಹರಸಿಹಾಳುಂಬಟ್ಟ |
ಹಡೆದ ಸುತನೀತನಾತನ ವನಿತೆಯಾನೆನಲು |
ಮಡಿದ ಕಾರಣವಾವುದೀತನಯನೆನಲು ನಮ್ಮಿಬ್ಬರಂ ಮಾಱುಗೊಂಡ ||
ಒಡೆಯನಾ ಮನೆಗೆ ಹುಲುಹುಳ್ಳಿಯಂ ತರಲೆಂದು |
ಅಡವಿಗೆಯ್ದಿದೊಡಲ್ಲಿ ಕಾಳೋರಗಂ ಕಚ್ಚೆ |
ಮಡಿದನೀಕಂದನೀವಿಧಿಗೆ ಸೇರಿತು ಹರಿಶ್ಚಂದ್ರನಿರವಿಂತೆಂದಳು. ||೪೨||

ನುಡಿಯಲಱಿಯದೆ ಸಕಲರಾಜ್ಯಮಂ ಹೋಗಾಡಿ |
ಕಡೆಗಧಿಕಋಣಿಯಾಗಿ ನೆಲೆಗೆಟ್ಟು ಮಂತ್ರಿವೆರ |
ಸಡವಿಗುಱಿಯಾಗಿ ಕೈವಿಡಿದ ಸತಿಪುತ್ರರಂ ಮಾಱಿ ಸುಕ್ಷೇತ್ರದೊಳಗೆ ||
ಕಡೆಗನಾಮಿಕನ ಕಿಂಕರನಾಗಿ ದೋಷಕ್ಕೆ |
ನಡುಗದೆ ಕುಲಾಚಾರಮಂ ಬಿಟ್ಟು ಜಗಕೆ ನಗೆ |
ಗೆಡೆಯಾದ ಪಾತಕಿ ಹರಿಶ್ಚಂದ್ರನವನನೇನೆಂದು ನೆನೆನಪೆಯೆಂದನು ||೪೩||

ಜಡೆವೊತ್ತೊಡಂ ಹಸಿಯ ತೊವಲುಟ್ಟೊಡಂ ನಾಡ |
ಸುಡುಗಾಡಿನೊಳಗಿರ್ದೊಡಂ ನರಕಪಾಲಮಂ |
ಪಿಡಿದೊಡಂ ತಿರಿದೊಡಂ ವಿಷವುಂಡೊಡಂ ಶವಶಿರೋಮಾಲೆಗಟ್ಟಿರ್ದೊಡಂ ||
ಕಡೆಗೆ ಮರುಳ್ಗಳೊಳಿರ್ದೊಡಂ ಬತ್ತಲಿರ್ದೊಡಂ |
ಮೃಡನಲ್ಲದಖಿಲಲೋಕಕ್ಕೊಡೆಯರಿಲ್ಲೆಂಬ |
ನುಡಿಯಂತಿರೆನಗಾಹರಿಶ್ಚಂದ್ರನಲ್ಲದಿನ್ನಾರು ಗತಿ ಮತಿಯೆಂದಳು ||೪೪||

ಉಱುವಬಲೆಯುಚಿತವಚನಂ ಕರ್ಣಪಥದಿನೊಳ |
ಗೆಱಗಿ ಚಿತ್ತವನು ತೊತ್ತಳದುಳಿದು ಧೈರ್ಯಮಂ |
ಬಱಿಕೆಯ್ದು ಕರಣಂಗಳಂ ಕದಡಿ ಹೆಮ್ಮೆಯಂ ಹಱಿದಱಲನೊದೆದೆಬ್ಬಿಸಿ ||
ಮುಱುಕಮಂ ಮಸೆದು ಕಂಬನಿವೊನಲ ಕೋಡಿಯಂ |
ಕೊಱೆದು ಮತಿಯಂ ಗತಂಮಾಡಿ ನೆಱೆ ಮೀಱಿ ನೇ |
ಸಱ ಕುಲಜನೋರಂತೆ ಸಿಗ್ಗಾಗಿ ತಾ ಮಾಡಿದಪರಾಧಮಂ ನೆನೆದನು ||೪೫||

ಈಸತಿಯನೀಶುಚಿಯನೀಪತಿವ್ರತೆಯನಾ |
ನೀಸುದಿನ ದಾವತಿಗೊಳಗುಮಾಡಿ ನೀಚದ್ವಿ |
ಜೇಶಂಗೆ ಮಾಱಿ ಮಱುಗಿಸಿದೆನಱಿಸಿದೆ ಮತ್ತೀಸೊಬಗಸುಕುಮಾರನ ||

ಓಸರಿಸದುರಗ ಕೊಲ್ವಂತೆ ಮಾಡಿದೆನೆಂಬ |
ಹೇಸಿಕೆಯ ವಾರಾಶಿ ತುಂಬಿ ತುಳುಕಾಡಿ ಹೊಱ |
ಸೂಸುವೞಲಂ ನಿಲಿಸಿ ನಿಲಿಸಲಾಱದೆ ಸುತನ ಮೇಲೆ ಧೊಪ್ಪನೆ ಕೆಡೆದನು |೪೬||

ತನಗೆ ಹೊಯ್ಕೈಯಪ್ಪ ಭೂಭುಜರನೋಲೈಸಿ |
ಧನವನಾರ್ಜಿಸಿ ತಂದು ಸೆಱೆಯ ಬಿಡಿಸುವನೆಮ್ಮ |
ಜನಪನೆಂದಾನಿರಲು ಮಾದಿಗಂಗಾಳಾಗಿ ಸುಡುಗಾಡ ಕಾವ ಭಾಗ್ಯ ||
ನಿನಗಾಯ್ತೆ ಭೂಪಾಲ ಎಂದು ದುಃಖಕ್ಕೆ ಪು |
ತ್ರನ ಶೋಕದುರಿಗೆ ತನುವನಾವರಿಸಿ ವನಿತೆ ತಾ |
ಮನನೊಂದು ಬೆಂದು ಬೆಱಗಾಗಿ ಚಿಂತಿಸುತ ತೂಕದ ಕೋಲಿಗೆಣೆಯಾದಳು ||

ಪ್ರಕಟರಾಜ್ಯಭ್ರಷ್ಟನಾಗಿ ಚಂಡಾಲಸೇ |
ವಕನಾದ ಪಾಪಿಯಂ ನೀಚನಂ ಜಗದ ಪಾ |
ತಕನೆನ್ನ ಪೋಲ್ದು ಕಿಡಲೇಕೆ ನಿಮ್ಮಜ್ಜಂ ತ್ರಿಶಂಕುಭೂವರನಂದದಿ ||
ಸಕಲರಾಜ್ಯಕ್ಕೊಡೆಯನಾಗದಿರನೀಕುಮಾ |
ರಕನೆಂಬ ನಂಬುಗೆಯ ಹೆಮ್ಮೆಯೊಳಗಿರಲು ನೀ |
ನಕಟಕಟ ನಿಷ್ಕಾರಣಂ ಮಡಿವರೇ ! ಕಂದಯೆಂದೞಲಿ ಬಾಯ್ವಿಟ್ಟನು||೪೮||

ಧರೆಗಧಿಕತರಮಪ್ಪ ವರಕಾಶಿಯಂ ಸಾರ್ದು |
ಶರಣರೇನೆಂದುದಂ ಕೊಟ್ಟು ರಕ್ಷಿಸುವ ಶಶಿ |
ಧರ ವಿಶ್ವಪತಿಯ ನಿಜಮಂದಿರದೊಳಿರ್ದೊಂದು ಹೊತ್ತು ಪೂಜಿಸಿ ಮೆಚ್ಚಿಸಿ||
ಪಿರಿಯ ಸಿರಿಗರಸಾಗಿ ಧರೆಯೊಳಗೆ ಮೆಱೆದು ದಿನ |
ಕರಕುಲದ ನೃಪರ ಹೆಸರಂ ನಿಲಿಸಿ ಬಾೞದೀ |
ಪರಿಯೊಳುರಗಂಗೆ ಸವಿದುತ್ತಾಗಿ ಹೋಹರೇ ಸುಕುಮಾರ ಹೇೞೆಂದನು ||

ಮುಂದೆ ನೀನಾಳಲಿಹ ಧರೆಯನನ್ಯರಿಗಿತ್ತ |
ನೆಂದು ನುಡಿಯೆಯೋ ಮತ್ತದಲ್ಲದೆಮ್ಮಿಬ್ಬರಂ |
ತಂದು ಲೋಗರಿಗೆ ಮಾಱಿದನೆಂದು ನುಡಿಯೆಯೋ ಚಂಡಾಲಸೇವೆಮಾಡಿ ||
ನಿಂದೆ ಹೊದ್ದದ ಸೂರ್ಯಕುಲಕೆ ಕುಂದಂ ತಂದ |
ನೆಂದು ನುಡಿಯೆಯೋ ನುಡಿಯದಿಹ ಹದನನೀಗಳಱಿ |
ಪೆಂದಾಹರಿಶ್ಚಂದ್ರಭೂಪಾಲ ಹೊರಳಿ ದೆಸೆದೆಸೆಗೆ ಬಾಯಂ ಬಿಟ್ಟನು ||೫೦||

ಅರಿರಾಯರೊಳು ಕಾದಿ ಮಡಿದಾತನಲ್ಲ ಮುನಿ ।
ವರರ ಯಾಗವ ಕಾದು ಮಡಿದಾತನಲ್ಲ ದೇ ।
ವರಿಗೆ ಹಿತವಾಗಿ ಮಡಿದವನಲ್ಲ ಮಾಂಸದಾನವ ಬೇಡಿದವಗೊಡಲನು ॥
ಅರಿದರಿದು ಕೊಟ್ಟು ಮಡಿದವನಲ್ಲ ಹುಳ್ಳಿಯಂ ।
ತರಹೋಗಿ ಕಾಡೊಳಗೆ ಬಡಹಾವು ಕಚ್ಚಿ ಮುನಿ ।
ವರಿಗೆ ನಗೆಗೆಡೆಯಾಗಿ ನಿಷ್ಕಾರಣಂ ಮಡಿವರೇ ಕಂದ ಹೇೞೆಂದನು ॥೫೧॥

ಮೇಗೆ ಮಗನರಸಾಗಬೇಕೆಂಬ ಮಱುಕದಿಂ ।
ಯಾಗಕ್ಕೆ ಸುತನನರಿದಿಕ್ಕಲಾಱದೆ ಲೋಭಿ ।
ಯಾಗಿ ಮುನಿಪುತ್ರನಂ ಮಾಱುಗೊಂಡಿತ್ತನೆಂಬಪಕೀರ್ತಿಯೇ ಉೞಿದುದು॥
ಲೋಗರ ಮಗನನಿಕ್ಕಿ ನೆಲೆಯ ನೋಡಿದೆನಕಟ ।
ಸಾಗುದುರೆಗಡಕಿದೆನು ಹುಲ್ಲನೋವಿದ ಹುಣ್ಣ ।
ಕಾಗೆ ಕದುಕಿತ್ತೆಂದು ಬಂದು ಜನನಿಂದೆಗೊಳಗಾದೆನಕಟೆಂದನು ॥೫೨॥

ಸುರಪನ ಸುತಂ ಚಿತ್ರವರ್ಮ ಧರ್ಮಾಧ್ವರದ ।
ತುರಗಮಂ ಕದ್ದುಕೊಳೆ ಪಿಂದಿಕ್ಕಿ ಕೊಂಡು ಪಿರಿ ।
ಯುರಗನೊಳುಕಾದಿಕುದುರೆಯಕೊಂಡಸುಭಟನೀಹಾವಿಂಗೆಬಲವೞಿವರೇ॥
ಕರಮುಳಿದು ವರುಣಾದಿದೇವರ್ಗೆ ಬಿಲ್ಗೊಂಡು ।
ಮರಣಮಂ ಗೆಲಿದಾತನೀಪರಿಯೊಳೞಿವರೇ ।
ಸಿರಿ ಹೋದೊಡೊಡನೆ ಬಲುಹುಂ ಹೋಹಬೇಹುದೇ ಸುಕುಮಾರ ಹೇೞೆಂ [ದನು ॥೫೩॥

ಸುತನ ರೂಪಿನ ಸೊಬಗನಂಗಸುಕುಮಾರದು ।
ನ್ನತಿಯ ಬಾಲ್ಯದ ಚೆಲುವನೆಲ್ಲಾ ಕಳಾಪ್ರವೀ ।
ಣತೆಯಗರುವಿಕೆಯಗಾಡಿಕೆಯನೊಟ್ಟಜೆಯನಳವಟ್ಟಸೆವನುಡಿಯ ಚದುರ ॥
ನುತಲಕ್ಷಣಾವಳಿಯನಧಿಕಗುಣಗಣವನಾ ।
ಯತಿಗೆಟ್ಟು ನೆನೆದು ಶೋಕಿಸುವೆನೆಂದಡೆ ಕಲ್ಪ ।
ಶತವೆಯ್ದುವರಸ ದುಃಖವನು ಸಂತೈಸಿ ಕೊಂಡೆನ್ನನವಧರಿಸೆಂದಳು ॥೫೪॥

ಪುದಿದಿರುಳು ಕಡೆಗಾಣ್ಬ ಕುಱುಹಾಗುತಿದೆ ಸೂರ್ಯ ।
ನುದಯಿಸಿದನಾದೊಡೆನ್ನವರೆನ್ನನಱಸಿ ಬಂ ।
ದಿದನು ಸುಡಲೀಯದೆೞಿದುಯ್ದಪರು ಮೇಲೇನು ಗತಿಯೆಂದು ಭೂಪಾಲಗೆ॥

ಸುದತಿ ಸುಡಿಯುಲು ಮಾಣು ನೆಲದೆಱಿಗೆಹಾಗವಿ |
ಲ್ಲದೆ ಸುಡಲ್ಬಾರದುಳ್ಳೊಡೆ ಸುಡಲ್ಬಹುದು ಇ |
ಲ್ಲದೊಡೆ ನಿನ್ನೊಡೆಯನಂ ಬೇಡೀಯದೊಡೆ ಸುಡುವ ಗೊಡವೆಯೇ
ಒಡೆಯರೀವವರಲ್ಲವೆನೆ ಬೇಡಿ ನೋಡು ಕುಡ | [ಬೇಡೆಂದನು ||
ದೊಡೆ ಖುಣಂಬಡು ಖುಣಂ ಹುಟ್ಟದಿರ್ದೊಡೆ ಸುಡುವ |
ಗೊಡವೆಯೇ ಬೇಡೆನ್ನ ಬಂದನಿತು ಬರಲೆಂದು ತರುಣನುಟ್ಟುದನೆ ಕೊಂಡು||
ಪೊಡವೀಶ್ವರಂ ತಿರುಗಿ ತನ್ನ ಕಾಪಿನ ಗುಡಿಗೆ |
ನಡೆಗೊಂಡನತ್ತಲಿತ್ತಲ್ ಪುರಕೆ ಬರುತಿರ್ಪ |
ಮಡದಿಗೆಡೆವಟ್ಟೆಯೊಳು ಬಂದ ಸಂಕಟವನಿನ್ನಾವ ಜೀವರು ಕೇಳ್ವರು ||೫೬||
ಮುಂದೆ ಭೂಪನ ಸತಿಗುಪದ್ರವಂ ಮಾಡಜೇ |
ಕೆಂದು ಕೌಶಿಕಮುನೀಂದ್ರಂ ಮುನಿದು ಮನದೊಳಂ |
ತೊಂದುಪಾಯವ ನೆನೆದು ಚೋರರಂ ಕೆಲಬರಂ ನಿರ್ಮಿಸುತವರ್ಗೆಂದನು |
ಇಂದು ನೀವೀಪುರವನಾಳ್ವರಸಸಣುಗನಂ |
ಕೊಂದಾಕೆ ಬರ್ಪ ಬಟ್ಟೆಯೊಳರಿಸಿ ಬನ್ನಿ ಹೋ |
ಗೆಂದು ಬೆಸಸಲು ಯತಿಪನಾಜ್ಞೆಯಿಂದವದಿರೈತಂದು ಪೊಱಲಂ ಸಾರ್ದರು ||

ಇಂತು ಹನ್ನೆರಡನೆಯ ಸ್ಥಲಂ ಮುಗಿದುದು.

ಹದಿಮೂಱನೆಯ ಸ್ಥಲಂ.

ಸೂಚನೆ|| ಪತಿಯಾಜ್ಞೆಗಂಜಿ ನಿಜಸುತನ ಸುಡಲಮ್ಮದಾ |
ಸತಿ ಹೋಗುತಿರಲು ರಕ್ಕಸಿಯೆಂದು ಪಿಡಿದು ಭೂ |
ಪತಿಯು ಕೈಯಲಿ ಕುಡಲು ಹೊಡೆದ ದೃಢಕಾವಿಶ್ವಪತಿ ನಿಜವ ತೋಱಿಸಿದನು ||

ಚೋರರೊಳವೊಕ್ಕು ಮಿಕ್ಕಾಪುರದ ಭೂಪನ ಕು |
ಮಾರನಂ ಕೊಂಡೋಡಿ ಬಂದು ಗೊಂದಿಯೊಳಲಂ |
ಕಾರಮಂ ಕೊಂಬ ಭರದಿಂ ಕೊರಲನರಿಯಲಾಶಿಶುವೊಱಲಲಾಧ್ವನಿಯನು||
ದೂರದಿಂ ಕೇಳ್ದೆನ್ನ ಮಗನಾಗದಿರನೆನು |
ತ್ತಾರೋ ನಿರೋಧಿಸುವರೆಂದೋಜೆಹುಟ್ಟದವಿ |
ಚಾರದಿಂ ಹರಿದಳೆಂಬಾಗಳತಿದುಃಖಿಗುಂಟೇ ಬುದ್ಧಿ ಜನವಱಿಯಲು ||೧||

ಸಾರಿ ಬರೆ ಬಿಟ್ಟೋಡಿ ಹೋದ ಚೋರರ ಖಡ್ಗ |
ಧಾರೆಯಿಂ ಬಸವಳಿದ ಹಸುಳೆಯಂ ತನ್ನಯ ಕು |
ಮಾರನೆಂದೇ ಬಗೆದುಯೆತ್ತಿ ತಕ್ಕೈಸಿ ತಡಹುತ್ತಾಗ ಮೋಗುಱುಹನು ||
ಹಾರುತಿರೆ, ಬಾರಿಸುವ ಬೊಂಬುಳಿಯ ಕೊಂಬುಗಳ |
ಭೇರಿಗಳ ಬೊಬ್ಬೆಗಳ ಕಳಕಳದೊಳಡಸಿ ಬಂ |
ದಾರುತ್ತ ಹರಿತಂದು ಹಿಱಿಯ ಹುಯ್ಯಲ ಭಟರು ಕಂಡು ಹಿಡಿದರು ಸತಿಯನು||
ಎಲೆಲೆ ರಕ್ಕಸಿಯಾಗದಿರಳಿವಳನಾವಿಲ್ಲಿ |
ಕೊಲಬೇಡವೀಯಂಗವೆರಸಿ ಕೊಂಡುಯ್ದು ಭೂ |
ತಲಪತಿಗೆತೋರ್ಪೆವೆಂದಸುವಳಿದಹಸುಳೆಯಂಹೊಱಿಸಲಾಗೊಸರ್ವರಕುತ||
ತಲೆಯಿಂದ ಸುರಿದುಟ್ಟ ಸೀರೆ ತೊಟ್ಟನೆ ತೋಯೆ |
ಲಲನೆಯಂ ಕಿತ್ತಲಗುಗಳ ನಡುವೆ ಹೆಡಗೆಯ್ಯ |
ಬಲಿದ ನೇಣಿಂ ಪಿಡಿದು ಬಡಿಬಡಿದು ನಡಸಿ ತಂದರು ರಾಜಬೀದಿಯೊಳಗೆ ||೩||
ಎನ್ನನಿವರಾಡಿಸಿದಡೇನನಾಡುವೆನೆಂದು |
ತನ್ನ ಮನದೊಳು ತಾನೆ ತಿಳಿದು ನಿಶ್ಚಯಿಸಿದಳು |
ಮುನ್ನೇಗಳಾವಾವ ದುಕ್ಕವೆಲ್ಲಕ್ಕಿವನೆಯ್ದೆ ಕಂಡೆನುಂಡೆನು ತಣಿದೆನು ||
ಇನ್ನೇನ ಕಾಣಲಿರ್ದಪೆನರಸ ಕೇಳದೊಡೆ |
ನಿನ್ನ ಮಗನಂ ಕೊಂದ ಪಾಪಿಯಾನೆಂದಾಡಿ |
ಯನ್ಯಾಯದಿಂ ಸಾವೆನೆನುತ ಬರಲೋಲಗದ ಕಳಕಳವನೇನೆಂಬೆನು ||೪||
ಅಲ್ಲಿ ನೋಡಿಲ್ಲಿ ನೋಡತ್ತ ಹರಿಯಿತ್ತ ಹರಿ |
ಹಲ್ಲಣಿಸು ತುರಗಮಂ ಕೈದುಗೊಳು ಮನೆಮನೆಗ |
ಳೆಲ್ಲಮಂ ಸೋದಿಸುವುದೂರ ದಾರಿಗಳ ಬಿಗಿ ಕಂಡಿರಾದೊಡೆ ಕಳ್ಳರ ||
ಕೊಲ್ಲು ತಿವಿ ಕಿವಿಯನುಗಿಯೆಂಬ ಕಳಕಳರವದ |
ಕೊಲ್ಲಣಿಗೆಯರಿಭಟರ ತಿಂತಿಣಿಯೊಳುಪ್ಪರಿಗೆ |
ಯಲ್ಲಿ ಜಡಿದೋಲಗಂಗೊಟ್ಟು ಕೋಪಾಗ್ನಿ ರೂಪಾದಂತೆ ಭೂಪನಿರಲು ||೫||
ಹಸುಳೆಯಂ ಕದ್ದು ಕೊಂಡುಯ್ದು ಕೊರಳರಿದ ರ |
ಕ್ಕಸಿಯ ಹಿಡಿತಂದೆವವಧರಿಸೆನಲು ಕಂಡು ಶಂ |
ಕಿಸುತ ನೀನಾರೆತ್ತಣವಳೇಕೆ ಸುಕುಮಾರನಂ ಕೊಂದೆಯೆಂದು ನೃಪನು ||

ಬೆಸಗೊಳಲು ದನುಜೆಯಲ್ಲಾಂ ಮನುಜೆಯಾನರ್ಥ |
ವಿಷಯದಾಪೇಕ್ಷೆಯಿಂ ಕೊಂಡುಯ್ದು ಕೊಂದೆನೀ |
ಸಿಸುವ ನೀನೊಲಿದಂತೆ ಮಾಡೆನ್ನನೆಂದಳಾಕಾಂತೆ ವಸುಧಾಧಿಪತಿಗೆ ||೬||
ಹೆದಱದಿರು ತೆಕ್ಕದಿರು ಅಂಜದಿರು ಲೋಗರಿ |
ಟ್ಟುದೊ ನಿನ್ನಕೃತಕವೋ ಹೇೞು ಧರ್ಮಾಧಿಕರ |
ಣದವರಂ ಕರೆಸಿ ನುಡಿಸುವೆಂ ಕಾವೆನೆಂದವನಿಪಂ ಬೆಸಗೊಂಡೊಡೆ ||
ಇದಕಿನ್ನು ಧರ್ಮಾಧಿಕರಣವೇಕರಸ ಕೊಂ |
ದುದು ದಿಟಂ ಸತ್ತ ಶಿಶು ಕೈಯಲಿದೆಯಿದಕೆ ತ |
ಕ್ಕುದಸೀಗ ಕಾಱಬ್ದೆಂದಾಡಿವಳು ಭೂಪತಿಗೆ ಜೀವದಾಸೆಯ ನೋಡದೆ ||೭||
ಕೊಂದೆ ಕೊಂದೆಂ ಕೊಂದೆನೆಂದು ತನ್ನಿಂದ ತಾ |
ನೆಂದೊಡಿನ್ನೇಕೆ ಲೋಗರ ಮಾತು ಕೊಂದರಂ |
ಕೊಂದು ಕಳೆವುದೆ ಧರ್ಮ ಜಗನರ್ತಿಯುಂ ಹೊತ್ತಿಸೆಱೆ ಹೂಟೆಯುಂ
ಸಂದುಸಂದಂ ಕಡಿಸು ಕಿವಿಮೂಗನರಿ ಸಬಳ | [ಹೂಡಿಸು||
ದಿಂದ ತಿವಿಯೆಂದೊಬ್ಬರೊಂದೊಂದನೆಂದುದಾ |
ಮಂದಿ ತನತನಗೆ ನುಡಿಯುತ್ತಿರಲು ವೀರಬಾಹುಕನ ಕರಸಿದನರಸನು ||೮||
ಭೂನುತಕುಮಾರನಂ ದಹಿಸಿ ದೂಮೆಯ ಕೆಳ್ದೊ |
ಳೀಸರಕಿ ವನಿತೆಯನನಾಮಿಕನ ಕೆಯ್ಯೊಳನು |
ಮಾನವಿಲ್ಲದೆ ಕೊಲಿಸು ಹೋಗೆಂದು ವೀರಬಾಹುಕನ ಕೈಯಲಿ ಕಳುಹಲು ||
ಏನೆಂದುದಂ ಮಾೞ್ಪೆನೆಂದು ಸುಡುಗಾಡನ |
ತ್ಯನಂದದಿಂ ಕಾವ ಚಂಡಿಗನ ಕೆಯ್ಯೊಳೀ |
ಹೀನವನಿತೆಯ ಕೊಲಿಸುವೆಂ ಬೇಗ ಕರೆಯೆನಲು ಕರಸೆ ಬಂದಂ ಭೂಪನು ||
ವಸುಧಾಧಿಪತಿಯ ಮೋಹದ ಮಗನ ಕೊಂದ ರ |
ಕ್ಕಸಿಯಿವಳನಾರುದ್ರಭೂಮಿಯೊಳಗೈದೆ ತ |
ಪ್ಪಿಸದೆ ಕೊರಲಂ ಕೊಱೆದು ಬಿಸುಡೆಂದು ಬೆಸಸಿ ಕುಡಲಡಸಿ ಮುಂದಲೆಯ
ಕುಸುಕಿ ಕೆಡೆಮೆಟ್ಟಿ ಕೆಯ್ಗಳ ಬೆಂಗೆ ತೆಗೆದು ಬಾ | [ಪಿಡಿದು||
ಗಿಸಿ ಬಿಗಿದು ಹೆಡಗೆಯ್ಯ ನೇಣಿಂದ ಹೊಡೆದು ದ |
ಟ್ಟಿಸಿ ಪಾಪಿ ಹೊಲತಿ ನಡೆನಡೆಯೆಂದು ನಡೆಸಿ ತಂದನು ತನ್ನ ತವಗದೆಡಗೆ ||

ಇಂದೆನ್ನ ಕುಲದೊಳುದಿಸಿದ ಹರಿಶ್ಚಂದ್ರನಂ |
ಹೊಂದದೆ ಚತುರ್ದಶಜಗಂಗಳಱಿವಂತು ತರು |
ಣೇಂದುಧರನಹ ವಿಶ್ವಪತಿ ಮೆಱೆವ ಸಂಭ್ರಮದ ಸಡಗರವ ನೋೞ್ಪೆನೆಂದು ||
ಕುಂದದುದ್ದವನೇಱಿ ನಿಂದಿರ್ದನೋ ಎನಿ |
ಪ್ಪಂದದಿಂದುದಯಗಿರಿಶಿಖರಕ್ಕೆ ರಾಗದಿಂ |
ಬಂದನಂಬುಜಮಿತ್ರನೆಂದೆನಿಸನರಿಕುಮುದತಿಮಿರಹರ ಮಾರ್ತಂಡನು ||೧೧||

ಹೆಡಗೆಯ್ಯ ಬಿಗಿದ ನೇಣಂ ಕೊಯ್ದು ಬಿಸುಟೆೞೆದು |
ಹಿಡಿತಂದು ಮೂಡ ಮುಂದಾಗಿ ಕುಳ್ಳಿರಿಸಿ ಹಿಂ |
ದಡದಲ್ಲಿ ನಿಂದು ನೀಡಡಿಯಿಟ್ಟು ಖಡ್ಗವ ಜಡಿಜಡಿದು ನೆಗಹಿ ನೋಡಿ ||
ಹೆಡತಲೆಗೆ ಮೋಹಿ ಕೆಯ್ಯೆತ್ತಿ ಕಂಧರ ಹಱಿಯೆ |
ಹೊಡೆಯಲನುವಾದನನುವಾದನನುವಾಗಾಗು |
ಮಡದಿ ನಿನ್ನಿಷ್ಟದೈವವನು ನೆನೆಯೊಡೆಯನಂ ಹರಸು ಹರಸೆನುತಿರ್ದನು||೧೨||

ಆ ಹೊಯ್ದನಾಹೊಯ್ದನೆಲೆಲೆ ಶಿವಶಿವ ಅಷ್ಟ |
ದೇಹಿ ನೀನೇ ಶರಣು ರಕ್ಷಿಸಲು ಬಲ್ಲೆ ನಿ |
ರ್ಮೋಹಿ ವಿಶ್ವಾಮಿತ್ರ ಪಾಪಿಯಿನ್ನಾದೊಡಂ ಸತಿಯ ಕೊಲೆಯಂ ನಿಲಿಸಲು||
ಹೋಹುದೇನೆಂದೋವಿ ಬೇಡಿಕೊಳುತುಂ ಸುರ |
ವ್ಯೂಹನಂಬರದಲ್ಲಿ ಹೂಮಱೆಗಳಂ ಹಿಡಿದು |
ಮೋಹರಂಬೆತ್ತು ನೋಡುತ್ತಿರಲು ನಾರಿ ಹರಕೆಗಳನವಧರಿಸೆಂದಳು ||೧೩||

ಬಲಿದ ಪದ್ಮಾಸನಂ ಮುಗಿದಕ್ಷಿ ಮುಚ್ಚಿದಂ |
ಜಲಿವೆರಸಿ ಗುರುವಸಿಷ್ಠಂಗೆಱಗಿ ಶಿವನ ನಿ |
ರ್ಮಲರೂಪ ನೆನೆದು ಮೆಲ್ಲನೆ ತಿರುಗಿ ನೋಡಿ ಭೂಚಂದ್ರಾರ್ಕತಾರಂಬರಂ||
ಕಲಿ ಹರಿಶ್ಚಂದ್ರರಾಯಂ ಸತ್ಯವೆರಸಿ ಬಾ |
ೞಲಿ ಮಗಂ ಮುಕ್ತನಾಗಲಿ ಮಂತ್ರಿ ನೆನೆದುದಾ |
ಗಲಿ ರಾಜ್ಯದೊಡೆಯ ವಿಶ್ವಾಮಿತ್ರ ನಿತ್ಯನಾಗಲಿ ಹರಕೆ ಹೊಡೆಯೆಂದಳು||೧೪||

ಹರಕೆಯಂ ಕೇಳ್ದು ಹವ್ವನೆ ಹಾಱಿ ಬೆಱಗಾಗಿ |
ಮರವಟ್ಟು ನಿಂದು ಭಾಪುರೆ ವಿಧಿಯ ಗೊಡ್ಡಾಟ |
ದಿರವೆ ಹೋದಿರುಳೆನ್ನ ಮಗನ ದುರ್ಮರಣವಂ ತೋಱಿ ಕೆಯ್ಗೊಡನೆಮುತ್ತ||

ವರಸತಿಯ ತಲೆಯನಾನೆನ್ನ ಕೆಯ್ಯಾಱೆ ಹಿಡಿ ।
ದರಿವಂತೆ ಮಾಡಿದೆಯಿದಕ್ಕೆ ನಾನಿನಿತು ಹೇ ।
ವರಿಸುವನನಲ್ಲ ಪತಿಯಾಜ್ಞೆ ಮುಗಿದರೆ ಸಾಕೆನುತ್ತರಿಯಲನುವಾದನು ॥
ಮನದ ಶಂಕೆಯನುಱಿದು ಹೊಡೆಯಲನುವಾದ ಭೂ ।
ಪನ ಭಾವಮಂ ಕಂಡು ಬೇಡಬೇಡೆನ್ನ ನಂ ।
ದನೆಯುರಂ ಮದುವೆಯಾದೊಡೆ ಸತ್ತ ಮಗನನೆತ್ತುವೆ ಸತಿಯ ತಲೆಗಾವೆನು॥
ವಿನಯದಿಂ ಕೊಂಡ ಧನಮಂ ಕೊಟ್ಟು ನಿನ್ನ ಬಂ ।
ಧನಮೋಕ್ಷಮಂ ಮಾಡಿ ರಾಜ್ಯಮಂ ಪುಗಿಸಿ ಮು ।
ನ್ನಿನ ಪರಿಯೊಳಿರಿಸುವೆಂ ಕೇಳೆಂದನಂಬರದೊಳಿದ್ದು ವಿಶ್ವಾಮಿತ್ರನು ॥೧೬॥
ತಿರುಗಿ ಮೇಲಂ ನೋಡಿ ಕಂಡಿದೇಂ ಮುನಿ ಸಿನ್ನ ।
ಹಿರಿಯತನಕೀಮಾತು ಯೋಗ್ಯವೇ ಕೇಳೆನ್ನ ।
ಸಿರಿ ಹೋದೊಡೇನು ರಾಜ್ಯಂ ಹೋದೊಡೇನು ನಾನಾರಸಾರಿದೊರ್ಡೇನು ॥
ವರಪುತ್ರನಸುವಱಿದು ಹೋದೊಡಂ ನಾನೆನ್ನ ।
ತರುಣಿಯುಂ ಕೊಂದೊಡಂ ಕುಂದೆ ಸತ್ಯವನು ಬಿ ।
ಟ್ಟರನೆನಿಸಿದೊಡೆ ಸಾಕುಯೆಂದೆತ್ತಿ ಹಿಡಿದ ಖಡ್ಗವ ಜಡಿಯುತಿಂತೆಂದನು ॥
ಎನ್ನ ದುಷ್ಕರ್ಮವಶದಿಂದಾದ ಕರ್ಮವೆಂ ।
ದಿನ್ನೆಗಂ ಬಗೆದೆನಾನಿಂದುತನಕಂ ಕಡೆಗೆ ।
ಸಿನ್ನ ಗೊಡ್ಡಾಟವೇ ಹೊಲೆಯನಾದವನಿನ್ನು ಸತಿಗಿತಿಯ ಕೊಲೆಗೆ ಹೇಸಿ ॥
ಬೆನ್ನೀವನಲ್ಲವದ ತೋಱಿ ಸಿಕ್ಕಿಸ ಬಂದ ।
ಗನ್ನಗತಕಕ್ಕೆ ಸೆಡೆವೆನೆ ಸಡಿಫಡೆನುತಾರ್ದು ।
ನನ್ನಿಕಾಱಂ ಸತಿಯನೆಲೆಲೆ ಶಿವಶಿವ ಮಹಾದೇವ ಬಗೆಯದೆ ಹೊಯ್ದನು ॥
ಹೊಡೆದ ಕಡುಗದ ಬಾಯ ಕಡೆಯ ಹೊಯ್ಗಳನಾಂತು ।
ಮಡದಿಯೆಡೆಗೊರಳ ನಡುವಡಸಿ ಮೂಡಿದನು ಕೆಂ ।
ಜೆಡೆಯ ಶಶಿಕಳೆಯ ಸುರನದಿಯ ಬಿಸಿಗಣ್ಣ ಫಣಿಕುಂಡಲದ ಪಂಚಮುಖದ॥
ಎಡದ ಗಿರಿಜೆಯ ತಳಿತ ದಶಭುಜದ ಪುಲಿದೊವಲ ।
ವುಡಿಗೆಯ ಮಹಾವಿಷ್ಣುನಯನವೇಱಿಸಿದ ಮೆ ।
ಲ್ಲಡಿಯ ಕಾಶೀರಮಣ ವಿಶ್ವನಾಥಂ ನಿಜವ ತೋಱಿದನು ಸುರರುಘೋಯೆನೆ ॥

ಇಂತು ಹದಿಮೂಱನೆಯ ಸ್ಥಲಂ ಮುಗಿದುದು.

ಹದಿನಾಲ್ಕನೆಯ ಸ್ಥಲಂ.

ಸೂಚನೆ॥ ಸುರಕುಲಂ ಹೊಗಳೆ ಮುನಿಕುಲವೆಯ್ದೆ ಕೊಂಡಾಡೆ।
ಗುರುಕುಲಂ ಹರಸೆ ರವಿಕುಲವೆಯ್ದೆ ಹಾರಯಿಸೆ।
ವರಹರಿಶ್ಚಂದ್ರ ಭೂಭುಜನಯೋಧ್ಯೆಯು ಪೊಕ್ಕು ಧರೆಯ ಪಾಲಿಸುತಿರ್ದನು॥

ಪುರಹರಂ ಕರುಣಿಸಿದ ಪುಣ್ಯವಾರ್ತೆಯ ಕೇಳೆ।
ನೆರೆಯಿತ್ತದೇವರ್ಗಳ್ವಿ ಹರಹರ ಮಹಾಗಣೇ।
ಶ್ವರರಷ್ಟಲೋಕೇಶರಷ್ಟಮೂರ್ತಿಗಳಷ್ಟವಸುಗಳು ನವಬ್ರಹ್ಮರು॥
ಸುರರು ಮುನಿವರರು ಖೇಚರರು ಯಕ್ಷರು ಮಯೂ।
ರರು ಧರಾಚರರು ಗರುಡರು ಗುಹ್ಯಕರು ಸಿದ್ಧ।
ರುರಗಮುಖ್ಯರು ದನುಜರೈದೆ ನೆರೆಯಿತು ತಮ್ಮ ಪರಿವಾರಸಹಿತಲಾಗ ॥೧॥

ಮುರಹರಂ ಬಂದನಬ್ಜಾಸನಂ ಬಂದನಮ।
ರರರಾಯ ಬಂದನಗಜಾಪಿತಂ ಬಂದನೀ।
ಶ್ವರಸುತಂ ಬಂದನೀರಾಱು ರವಿಗಳು ಬಂದರಿಕ್ಷುಕೋದಂಡ ಬಂದ॥
ಸುರುಚಿರನವಗ್ರಹಂಗಳು ಬಂದರೆತ್ತಿದಾ।
ತುರುದೊಳವರಿವರೆನ್ನಲೇಕಿನ್ನು ಸರ್ವದೇ।
ವರು ಬಂದರಪ್ರತಿಮದೇವಾಧಿದೇವ ಪಂಪಾವಿರೂಪಾಕ್ಷನೆಡೆಗೆ ॥೨॥

ಕುಡಿದೌಷಧಂ ಬಾಯ್ಗೆ ನಿಗ್ರಹಂ ಮಾಡಿ ತಾ।
ಳ್ದೊಡಲಿಂಗೆ ಸುಖವನೀವಂತೆ ಲೋಕದ ಕಣ್ಗೆ।
ಕಡುಮುಳಿದಸಂತೆ ತೋಱಿಸಿ ಸತ್ಯಶುದ್ಧವಪ್ಪನ್ನೆಗಂ ಕಾಡಿ ನೋಡಿ॥
ಕಡೆಯೊಳು ಹರಿಶ್ಚಂದ್ರಭೂಪಂಗೆ ನಿಜವೆರಸಿ।
ನೃಡನನೇೞಿತಂದಿತ್ತು ಕೀರ್ತಿಯಂ ಮೂಜಗದ।
ಕಡೆಯನಱಿಸಿದ ವಿಶ್ವಾಮಿತ್ರನುಱುವಣಿಸಿ ಬಂದನು ವಸಿಷ್ಠಸಹಿತ ॥೩॥

ಅಂಬರದ ಸುರರು ಪೂಮೞೆಗಱೆಯೆ ತುಱುಗಿದ ಕ।
ದಂಬವೆಡೆಗೊಡದೆ ಪೊರ್ಳೈಪ ಶಂಖದ ಹೊಯ್ಲು।
ತಂಬಟನ ಸೂಳೈಪ ನಿಸ್ಸಾಳ ಹೊಯ್ಲು ಭೇರಿಗಳ ಬಿರುದೆತ್ತಿ ಕರೆವ॥

ಕೊಂಬುಗಳ ಬಾರಿಸುವ ಹಲಕೆಲವು ವಾದ್ಯನಿಕು |
ರಂಬದ ಮಹಾರವದ ಸಡಗರದ ಸಂಭ್ರಮಾ |
ಡಂಬರದ ನಡುವೆ ತೆಗೆದಪ್ಪಿಕೊಂಡಂ ಹರಿಶ್ಚಂದ್ರನಂ ಗಿರಿಜೇಶನು ||೪||
ನೆನೆದು ಚಂಡಾಲಕಿಂಕರನಾಗಿ ಹೊಲೆವೇಷ |
ವನು ಹೊತ್ತು ಸುಡುಗಾಡ ಕಾದು ಶವಶಿರವಕ್ಕಿ |
ಯನು ಹೇಸದುಂಡು ಜೀವಿಸುತ ವರಪುತ್ರನೞಿವುದನು ಕಣ್ಣಾಱೆ ಕಂಡು ||
ಘನಪತಿವ್ರತೆಯಪ್ಪ ನಿಜಸತಿಯ ಕೊಂದ ನೀ |
ಚನು ಮೂರ್ಖನಾನೆನ್ನ ಠಾವಿಂಗದೇಕೆ ಪಾ |
ವನಮೂರ್ತಿ ನೀವು ಬಿಜಯಂಗೆಯ್ದಿರೆನುತ ಭವನಂಘ್ರಿಯೊಳು ಸೈಗೆಡೆದನು||
ಘನಸತ್ಯವೇ ಜೀವವೆಂದಿರ್ದ ನಿನ್ನ ಹೊಲೆ |
ಯನ ಸೇವೆ ಗುರುಸೇವೆ ಹೊತ್ತ ಹೊಲೆವೇಷ ಪಾ |
ವನಪುಣ್ಯವೇಷ ಸುಡುಗಾಡ ಕಾದಿರ್ಪಿರವು ತಾ ಯಜ್ಞ ಕಾದಿರವು ||
ಅನುದಿನಂ ನೀನುಂಡ ಶವದ ಶಿರದಕ್ಕಿಯಾ |
ಘನವೆನಿಪ ಚಾಂದ್ರಾಯಣಂ ಪುತ್ರನೞಿವು ಜ |
ನ್ಮನಿಕಾಯದೞಿವಂಗನಾಹನನ ಮಾಯಾಹನನವಂಜಬೇಡೆಂದನು ||೬||
ಏೞು ಭೂರಮಣಯೆಂದಭವ ಮೊಗನೆಗಹಿ ಕ |
ಣ್ಣಾಲಿಜಲನಂ ತೊಡೆದು ತೆಗೆದಪ್ಪಿ ಭಸ್ಮಮಂ |
ಭಾಳದೊಳು ತೀವಿ ತಲೆದಡವಿ ಕೌಶಿಕನ ಕರೆದೆಲೆ ಮುನಿಪ ಸುಕುಮಾರನ||
ತೋಳ ಹಿಡಿದೆತ್ತಿ ತಾ ಬೇಗ ಹೋಗೆನಲು ಮುನಿ |
ಪಾಳಕಂ ವಿಷವೇಱಿ ಸತ್ತ ವರಪುತ್ರನಂ |
ಏೞೇೞು ಲೋಹಿತಾಶ್ವಾ ಕಾದೆನೆನಲು ಮೈಮುಱಿದೆದ್ದು ಸುರರುಲಿಯಲು||೭||
ರಾಹುವಿನ ವದನದಿಂ ಪೊಱಮಟ್ಟ ಶಶಿಬಿಂಬ |
ವಾಹಾ! ಎನಲು ತೊಳಗಿ ಬೆಳಗುತೊಪ್ಪುವ ತೆಱದಿ |
ಗಾಹಿ ಕೌಶಿಕನ ಕೃತ್ರಿಮಸರ್ಪದಷ್ಟದಿಂ ನಿದ್ದೆದಿಳಿದೇೞುವಂತೆ ||
ಲೋಹಿತಾಶ್ವಂ ವಿರೂಪಾಕ್ಷ ಶರಣೆನುತೇೞೆ |
ಸ್ನೇಹದೊಳು ಪುಳಕದಿಂ ಗುಡಿಗಟ್ಟಿ ಮಾತೆಯು ಮ |
ಹಾಹರ್ಷವರ್ಷದಿಂದಪ್ಪಿ ಬಂದೆಱಗಿದಳು ವಿಶ್ವಪತಿಯಂಘ್ರಿಗಳಿಗೆ ||೮||

ನಂದೀಶನಂ ನೋಡಿ ಶಿವನೆಂದನವನಿಪನ |
ನಂದನನ ಕರೆಯೆಂದು ಬೆಸಸೆ, ನುಡಿಯಿಂ ಮುನ್ನ |
ಚಂದ್ರಮತಿಸುತನೆದ್ದು ಪರಿತಂದು ಶಿವಗಾತನೆಱಗುತಿರೆ, ಗಿರಿಜೆ ಕಂಡು ||
ಕಂದ ಬಾಯೆಂದು ತೆಗೆದಪ್ಪಿ ಮುಂಡಾಡುತಿರ |
ಲಂದು ಮೊಲೆದೊರೆಯಲಾ ಶಿಶುವುಂಡು ತಣಿಯೆ, ಮುದ |
ದಿಂದ ಮುಂಡಾಡಿ ಕೊಂಡಾಡುತಿರೆ, ತಾಯಿತಂದೆಗಳು ಹರ್ಷಂದಳೆದರು ||೯||

ಅತಿಹುಸಿದನತಿಹೊಲೆಯ ಹುಸಿಯದಿಹ ಹೊಲೆಯನು |
ನ್ನತಯತಿವರಂ ಹುಸಿದು ಮಾಡುವ ಮಹಾಯಜ್ಞ |
ಶತವೈದೆ ಪಂಚಪಾತಕ ಸತ್ಯವೆರಸಿದನ್ಯಾಯವದು ಲಿಂಗಾರ್ಚನೆ ||
ಶ್ರುತಿಮತವಿದೆನ್ನಾಜ್ಞೆ ನಿನ್ನಂತೆ ಸತ್ಯರೀ |
ಕ್ಷಿತಿಯೊಳನ್ನಾರುಂಟು ಹೇೞೆಂದು ಪಾರ್ವತೀ |
ಪತಿ ಹರಿಶ್ಚಂದ್ರನಂ ತಲೆದಡವಿ ಬೋಳೈಸಿ ಕೌಶಿಕಂಗಿಂತೆಂದನು ||೧೦||

ನುಡಿಯೊಳನೃತಂ ತೋಱದಂತೆ ನಿನ್ನಲೆಗೆ ನಿಂ |
ದೊಡೆ ಮೆಚ್ಚಿ ಮೇಲೇನ ಕುಡುವೆನೆಂದೆಯೊಯದನು |
ಕುಡು ಬೇಗದಿಂದ ವಿಶ್ವಾಮಿತ್ರಯೆಂದೊಡಾಗೈವತ್ತುಕೋಟಿ ವರುಷ ||
ಬಿಡದೆ ಮಾಡಿದ ಫಲದೊಳರ್ಧವಂ ನಾನಾಂತೆ |
ಕಡುಮುಳಿದು ಕಾಡಿ ನೋಡಿದೆನು ಮೆಚ್ಚಿದೆನಿನ್ನು |
ಹಿಡಿಯೆಂದುಸಿರ್ದು ಫಲವೆಲ್ಲವಂ ಕೊಟ್ಟನರಸಂಗೆ ಮುನಿಗಳ ದೇವನು ||೧೧||

ಅರರೆ ದಾನಿಗಳ ಬಲ್ಲಹ ಎನುತ ಮುನಿನಿಕರ |
ನೆರೆದು ಕೊಂಡಾಡುತ್ತಲಿರುತಿರಲು ಕೌಶಿಕಂ |
ವರತಪಃಫಲವಿತ್ತನೈವತ್ತುಕೋಟಿಯುಂ ಸಕಲದೇವರು ಮೆಚ್ಚಲು ||
ಗುರುವಸಿಷ್ಠಂ ವಿಜಯನೆಂದೆಲ್ಲ ತಮತಮಗೆ |
ಭರದೆ ಕೊಂಡಾಡುತ್ತಲಿರ್ದು ಸುರಮುನಿಜನದ |
ಪರಕೆಗಳನಾನುತ್ತ ಹರುಷದಿಂ ಭೂಪನಿರೆ ಪುರಹರನ ಕಟ್ಟೆದಿರೊಳು ||೧೨||

ಪೊಡವಿಯೊಡೆತನದ ಪಟ್ಟವನಯೋಧ್ಯಾಪುರದ |
ನಡುವೆ ಕಟ್ಟುವೆನೇೞು ನಡೆ ರಥವನೇಱೆಂದು |
ಮೃಡಸಮಕ್ಷದೊಳು ಕೌಶಿಕನೆನಲು ಕಡೆತನಕಮುಂ ಜೀವಿತವ ಕೊಂಡೆನು ||

ಒಡೆಯನುಳ್ಳವನು ನಾಂ ಬರಬಾರದಯ್ಯ ನಿ |
ಮ್ಮಡಿಗಳಿಗೆ ದಾನವಾಗಿತ್ತ ವಸುಮತಿಯುತ್ತ |
ಲಡಿಯಿಡುವವನಲ್ಲವಿದ ಬೆಸಸಬೇಡೆನಗೆಂದು ಭೂನಾಥ ಕೈಮುಗಿದನು ||೧೩||

ಆನೇಕೆ ರಾಜ್ಯವೇಕೆಲೆ ನಿನ್ನ ಸತ್ಯಸಂ |
ಧಾನಮಂ ನೋಡಲೆಂದುಳ್ಳುದೆಲ್ಲವ ಕೊಂಡೊ |
ಡೇನೆಂಬನೋ ಎಂದು ಕಾಡಿ ನೋಡಿದೆನ್ನೈಸೆ ಸರ್ವರಾಜ್ಯಂ ನಿನ್ನದು ||
ಕೀನಾಶನಂ ಕರೆದು ವೀರಬಾಹುಕನಾಗಿ |
ಭೂನಾಥನಂ ಕರೆದು ಬೇಡಿದರ್ಥವ ಕೊಟ್ಟು |
ನೀನೆ ತಱುಬೆಂದು ಕಳುಹಿದೆನ್ನೈಸೆ ಕೃತಕವಲ್ಲೆಂದು ನಂಬುಗೆಗೊಟ್ಟನು||೧೪||

ಪೊಡವಿಪನ ವಾಕ್ಯದೊಳು ಹುಸಿಯ ನೀಂ ಹಿಡಿದೆಯಾ |
ದೊಡೆ ನಾನು ಮುನಿತನವನುೞಿದು ನರಶಿರದೋಡ |
ಹಿಡಿದು ಮದ್ಯಪಿಯಾಗಿ ಡೆಂಕಮುಖವಹೆನೆಂದು ದೇವಸಭೆಯೊಳಗೆ ನಾನು ||
ನುಡಿದು ಭಾಷೆಯನಿತ್ತೆ ನೀನೆನ್ನ ಭಾಷೆಯಂ |
ನಡೆಸಿ ರಕ್ಷಿಸಿದೆ ಸತ್ಯವ ಮೆಱೆದೆಯೆಂದು ತಲೆ |
ದಡವಿ ತನ್ನಂ ಕೊಟ್ಟನೀಶನ ಸಮಕ್ಷದೊಳು ವಾಸಿಷ್ಠಮುನಿನಾಥನು ||೧೫||

ಕರುಣದಿಂ ಧರ್ಮಾರ್ಥಕಾಮಮೋಕ್ಷಂಗಳಂ |
ಸುರಿದು ನಿನ್ನಯ ಪುಣ್ಯಕಥೆ ಸರ್ವಲೋಕದೊಳ |
ಗಿರಲಿಯೆಂದಭವನಿಂ ಬೇಕಾದ ವರವ ನೀಂ ಬೇಡು ಭೂಪಾಲಯೆನಲು ||
ಗಿರಿಯಲ್ಲಿ ಹಂಸೆಯಲಿ ನಿನ್ನ ಮಂದಿರದ ಮೇ |
ಲೆರಡು ಯೋಜನದೊಳೆನ್ನಯ ಕೀರ್ತಿಪುರ ಹೇಮ |
ವಿರಚಿತದೊಳಿರಬೇಹುದೆಂದು ಬೇಡಿದೊಡದಂ ಕೊಟ್ಟನಗಜಾಧೀಶನು ||೧೬||

ಅರಸ ನೀಂ ಪುರವೊಕ್ಕು ಸಕಲಪೃಥ್ವಿಯನಧಿಕ |
ತರಸುಖದೊಳಪರಿಮಿತದಿನವಾಳ್ದ ಮೇಲೆ ನೀಂ |
ಸುರಪುರದೆ ಮಹೈಶ್ವರ್ಯದ ಪದದೊಳೈದಿ ಸೌಖ್ಯತೆವಡೆವುದೆಂದು ನೀನು ||
ಗುರುಭಕ್ತ ಸತಿಸತ್ಯ ಮುಕ್ತನೈವತ್ತು ಕೋಟಿ |
ವರುಷ ಸುಖವಂ ಸುಖಿಸುತಿಹುದೆಂದು ನೃಪಗಭಯ |
ಕರವಿತ್ತು ಬೀೞುಕೊಟ್ಟಭವ ಮತ್ತಿತ್ತಲಾಸುರರ ಕರೆದಿಂತೆಂದನು ||೧೭||

ಕ್ಷಿಪ್ರದಿಂ ನೃಪನನೊಡಗೊಂಡುಯ್ದಯೋಧ್ಯಾಪು |
ರಪ್ರವೇಶವನು ಮಾಡಿಸಿ ಬಪ್ಪುದೆಂದು ಸಕ |
ಲಪ್ರಮಥರಂ ಹರಿವಿರಿಂಚಿವಾಸವಮುಖ್ಯಸಕಲಸುರಮನುಮುನಿಗಳ ||
ಅಪ್ರತಿಮನುಗ್ರನುದ್ದಂಡನತಿವಿತತಬಳ |
ದರ್ಪಕಪ್ರಹರ ಪಂಪಾವಿರೂಪಾಕ್ಷಲಿಂ |
ಗಪ್ರಭು ವಿಲಾಸದಿಂ ಕಳುಹಿ ತಾಂ ನಡೆಗೊಂಡನಂದು ಕೈಲಾಸಗಿರಿಗೆ ||೧೮||

ಇಳೆಯು ವಳಯುಂ ಮುಱುಗೆ ತಳರ್ವ ದಳಭಾರದಿಂ |
ದೊಳಗಗನಮುಂ ಮುಸುಂಕಲ್ಕೆ ನಾನಾ ತೆಱೆಯ |
ಬಳಗದಿಂ ದೆಸೆದೆಸೆಯ ಪಸರಮುಂ ಮುಸುಕೆ ತಳತಳಿಪ ಶಸ್ತ್ರಾಸ್ತ್ರ
ಜಳಧಿಜಳ ತುಳುಕೆ ಮೊಱೆಗುವ ಭೇರಿ ನಿಸ್ಸಾಳ | [ಚಯದಿಂ ||
ಕುಳದಿಂ ವಿಲಾಸವಡೆದೈತರುತ್ತಿರ್ದ ಭೂ |
ತಳಪತಿಯನಿದಿರ್ಗೊಂಬ ಪುರಜನದ ಪರಿಜನದ ಸಂಭ್ರಮವನೇವೊಗೞ್ವೆನು ||

ಸಸಿಯ ಬರವಿಂಗುಕ್ಕುವಂಬುನಿಧಿಯಂತೆ ಸಂ |
ತಸದಿಂದ ಕಲಶಕನ್ನಡಿವಿಡಿದ ಸತಿಯರಿ |
ರ್ದೆಸೆಗಳಲಿ ಕೈಕೊಂಡು ಕೈಗೆಯ್ದು ಬರ್ಪ ನಾನಾಗಜಘಟಾಪಟಳದಿಂ ||
ಮುಸಗಿ ಮಂಡಳಿಸಿ ತುಱುಗಿದ ರಥದ ಕೂಡೆ ಮಾ |
ಮುಸಕದಿಂ ಕುಣಿವ ಕುದುರೆಗಳ ಬಳಗದಿ ಭೂಮಿ |
ಬೆಸಲಾದುದೆಂಬಂತೆ ಪರಿಜನಂ ತಿಂತಿಣಿಯೊಳಿದಿರ್ಗೊಂಡುದವನಿಪನನು ||೨೦||

ಅನುನಯದಿ ವನಜವನಮುಂ ದಿನಪ ಪುಗುವಂತೆ |
ವನಮುಂ ವಸಂತ ಹುಗುವಂತಯೋಧ್ಯಾಪುರವ |
ನಿನಕುಲಹರಿಶ್ಚಂದ್ರಭೂನಾಥ ಹುಗಲು ಜಯವೆಂಬ ಹಾಡುವ ಹರಸುವ ||
ಜನಕೆ ಮನವೀಯುತ್ತ ಪರಿಸರಿಯ ತೋರಣಕೆ |
ವಿನಯದಿಂ ತಲೆವಾಗುತೋರಣಂಬಿಡಿದಿರ್ದ |
ಮನೆಮನೆಯ ಗುಡಿಗಳಂ ನೋಡಿ ನಲಿಯುತ್ತ ತನ್ನರಮನೆಗೆ ನಡೆತಂದನು ||

ಮಡದಿಯರ ಮಂಗಳಾರತಿಗೆ ಭೂಸುರರೊಲಿದು |
ಕುಡುವ ಮಂತ್ರಾಕ್ಷತೆಗೆ ಕವಿಗಳಾಶೀರ್ವಾದ |
ಗಡಣಕ್ಕೆ ಪುಣ್ಯಪಾಠಕರ ಕೈವಾರಕ್ಕೆ ಗಾಯಕರ ಗೀತತತಿಗೆ ||

ಕಡೆಗೆ ಲೆಂಕರು ನಿವಾಳಿಸುವ ರಜಸಾವಳಿಗೆ |
ಯಡಿಗಡಿಗೆ ದನಿಗುಡುವ ಶುಭವಾದ್ಯ ಜನದ ಮುಂ |
ಗುಡಿಯು ಪರಕೆಗೆ ಮಸಂಗುಡುತ ಭೂಪಾಲಕಂ ಅರಮನೆಯನೊಳಪ್ರೊಕ್ಕನು ||
ಜನಪತಿಯು ಕೈವಿಡಿದು ಮನೆವ್ರೊಕ್ಕನತಿಮುದದಿ |
ಘನವೆನಿಸ ಧರ್ಮಾರ್ಥಕಾಮಮೋಕ್ಷವನೀವ |
ಮುನಿಪಿತಾಮಹನು ಮುನಿರಾಜಾಧಿರಾಜನು ಮುನೀಶ್ವರನು ಮುನಿಮುಖ್ಯನು ||
ಮುನಿವರನು ಮುನಿಪುಂಗವನು ಮುನೀಂದ್ರನು ಸರ್ವ |
ಮುನಿವರೇಣ್ಯನು ಮುನಿಶ್ರೇಷ್ಠನು ಮುನೀಶನುಱಿ |
ಮುನಿಗಳಾದಿತ್ಯನು ಮುನಿಸುತ್ತ್ಯನೆನಿಸ ವಿಶ್ವಾಮಿತ್ರಮುನಿನಾಥನು ||೨೩||
ಅರಸ ನೀವಿರಿಸಿ ಹೋದುದಱೊಳೇನುಂ ಕುಂದ |
ದರೆಯಾಗದಳಿತುಳುಕದನುಗಿಡದು ಕೆಡದಖಿಳ |
ಕರಿಗಳಿವೆ ತುರಗವಿವೆ ಭಂಡಾರವಿವೆ ಕೊಠಾರಂಗಳಿವೆ ಹಲವಂಗದ ||
ಅರಮನೆಗಳಿವೆ ಸತಿಪ್ರತತಿಯಿವೆ ಸಿವುಡಿಯಿವೆ |
ಕರಣವಿವೆ ಮುದ್ರೆಯಿದೆ ಕೀಲಾರವಿದೆ ಸರ್ವ |
ಪರಿವಾರವಿದೆ ನೋಡಿಕೊಳ್ಳೆನುತೊಪ್ಪಿಸಿದ ಮುನಿನಾಥನವನಿಸತಿಗೆ ||೨೪||
ಏನೇನನೊಪ್ಪುಗೊಳಬೇಕಾದುದೆಲ್ಲವಂ |
ತಾನೊಪ್ಪುಗೊಂಡು ಮುದದಿಂದ ನಡೆದಾಮಹಾ |
ಸ್ಥಾನರಂಗದ ಸಿಂಹವಿಷ್ಟರವನೇಱಿ ಮಣಿಮಯಮುಲಗನಂಡುಗೊಂಡು ||
ದಾನಧರ್ಮಂಗಳಂ ಮಾಡಿ ಕಾಣಿಕೆಗುಡುವ |
ನಾನಾಜನಕ್ಕಭಯವಿತ್ತು ಮುರಹರ ಕಮಲ |
ಸೂನು ವಾಸವಮುಖ್ಯದೇವರ್ಗೆ ನಮಿಸಿ ಕಳುಹಿದನು ನಿಜಲೋಕಗಳಿಗೆ ||
ಪಾಲಿಸಿದೆ ರಕ್ಷಿಸಿದೆಯೆನ್ನ ನೀನೆಂದು ಭೂ |
ಪಾಲಕಂ ಕೈಮುಗಿದು ಕೌಶಿಕಪ್ರಮುಖಮುನಿ |
ಜಾಲಮಂ ಕಳುಹಿ ಬಱಿಕುಡುಗೊಱೆಯುಕೊಟ್ಟನಂದವರಿವರ್ ತಾಮೆನ್ನದೆ||
ಚೋಳ ಮಾಳವ ಮಗಧ ಘುರ್ಜರ ಕಳಿಂಗ ನೇ |
ಪಾಳ ಬರ್ಬರ ಲಾಳ ಕೊಂಕಣದ ತುಳುವ ಮಲೆ |
ಯಾಳ ಸೌರಾಷ್ಟ್ರಕ ಕರೂಷ ಕಾಶ್ಮೀರ ಹಮ್ಮೀರದ ಧರಾಧಿಪರನು ||

ಹರನ ಸಭೆಯೊಳಗೆ ಮುರಹರನ ಸಭೆಯೊಳಗೆ ವಾ |
ಗ್ವರನ ಸಭೆಯೊಳಗೆ ಪವಿಧರನ ಸಭೆಯೊಳಗೆ ದಿನ |
ಕರನ ಸಭೆಯೊಳಗೆ ಭೂಸುರಶಿಖಿಯು ಸಭೆಯೊಳಗೆ ಶಶಿಯೊಂದು ಸಭೆಯ
ಪರಮಮುನಿಸಭೆಯೊಳಗೆ ವರನೃಪರ ಸಭೆಯೊಳಗೆ | [ನಡುವೆ ||
ಧರಣಿಪನ ಕಥನವೇ ಕಥನ ಮಾತೇ ಮಾತು |
ಪರವಿಲ್ಲ ಬೇಱನ್ಯವಾರ್ತೆಗಳು ಹುಗಲಿಲ್ಲವೆಂಬಾಗಳೇವೊಗಳ್ವೆನು || ೨೩ ||

ಧರೆಯೊಳು ಹರಿಶ್ಚಂದ್ರಚಾರಿತ್ರಮಂ ಕೇಳ್ದ |
ನರರೇೞು ಜನ್ಮದಿಂ ಮಾಡಿರ್ದ ಪಾತಕವು |
ತರಣಿಯುದಯದ ಮುಂದೆ ನಿಂದ ತಿಮಿರದ ತೆಱದೆ ಹರೆಯುತಿಹುದೇಕೆಂದೊಡೆ |
ಹರನೆಂಬುದೇ ಸತ್ಯ ಸತ್ಯವೆಂಬುದು ಹರನು |
ಎರಡಿಲ್ಲವೆಂದು ಶ್ರುತಿ ಸಾರುತಿರಲಾವಾಕ್ಯ |
ವರರೆ ನಿರುತವ ಮಾಡಿ ಮೂಜಗಕೆ ತೋಱಿದ ಹರಿಶ್ಚಂದ್ರಕಥೆಗೇಳ್ದರೇ ||

ಅಮೃತವಱಿಯದ ಹೊಲೆಯುಸಂ ನೆನೆಯೆ ಪುಣ್ಯವೆಂ |
ದೆನೆ ಸೂರ್ಯಕುಲಜನಾಕಲಿ ದಾನಿ ಸತ್ಯ ವಸಿ |
ಷ್ಠನ ಶಿಷ್ಯನಧಿಕಶೈವಂ ಕಾಶಿಯೊಳ್ ಮೆಱೆದ ವೇದಪ್ರಮಾಣಪುರುಷ ||
ಘನನೃಪಹರಿಶ್ಚಂದ್ರನೆಂದೊಡಾತನ ಪೊಗಳ್ದ |
ಜನ ಬದುಕಬೇಕೆಂದು ಕಾವ್ಯಮುಖದಿಂ ಪೇೞ್ದ |
ನನಪೇಕ್ಷೆಯಿಂದ ಕವಿರಾಘವಾಂಕಂ ಮಹಾಲಿಂಗಭಕ್ತರ ಭಕ್ತನು || ೨೯ ||

ಇಂತು ಹದಿನಾಲ್ಕನೆಯ ಸ್ಥಲಂ ಮುಗಿದುದು.

ಹರಿಶ್ಚಂದ್ರಕಾವ್ಯಂ ಸಂಪೂರ್ಣಂ